ಕನ್ನಡ ಅಧ್ಯಯನ

ಚಿಟ್ಟಿ ಸಂಚಿಕೆ



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೇಖಕರಿಗೆ ಸೂಚನೆ

೧. ಲೇಖನಗಳು ಕರ್ನಾಟಕ ಅಧ್ಯಯನಗಳಿಗೆ ಸಂಬಂಧಿಸಿರಬೇಕು ಅಥವಾ ಕರ್ನಾಟಕ ಅಧ್ಯಯನಗಳಿಗೆ ಹೊಸ ಆಯಾಮ ನೀಡಬಲ್ಲ ತಾತ್ವಿಕ ಚಿಂತನೆಗಳನ್ನು ಒಳಗೊಂಡಿರಬೇಕು.

೨. ಅನುವಾದಿತ ಲೇಖನವಾಗಿದ್ದಲ್ಲಿ ಸಂಬಂಧಪಟ್ಟವರ ಅನುಮತಿಯನ್ನು ಪಡೆದಿರಬೇಕು.

೩. ಲೇಖನಗಳು ಒಳಗಿನ ಅಭಿಪ್ರಾಯಗಳು ಆಯಾ ಲೇಖಕರವು. ವಿಶ್ವವಿದ್ಯಾಲಯದವಲ್ಲ.

೪. ಲೇಖನಗಳನ್ನು ಪತ್ರಿಕೆಯ ಆಶಯಕ್ಕೆ ಅನುಗುಣವಾಗಿ ಆಯ್ದು ಪ್ರಕಟಿಸಲಾಗುವುದು. ಅಪ್ರಕಟಿತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ. ಆದ್ದರಿಂದ ಲೇಖಕರು ಲೇಖನದ ನಕಲನ್ನು ಇಟ್ಟುಕೊಳ್ಳುವುದು.

೫. ಲೇಖನ ಕಳಿಸುವ ವಿಳಾಸ :

ಸಂಪಾದಕ
'ಕನ್ನಡ ಅಧ್ಯಯನ' ಪತ್ರಿಕೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದಾ ವಿವರ	:	ಬಿಡಿ ಪ್ರತಿ ಬೆಲೆ: ರೂ. ೨೫.೦೦ ವಾರ್ಷಿಕ ಚಂದಾ: ರೂ. ೧೦೦.೦೦ ಐದು ವರ್ಷಗಳಿಗೆ: ರೂ ೪೦೦.೦೦
ಚಂದಾ ಕಳಿಸುವ ವಿಳಾಸ	:	ವಿತ್ತಾಧಿಕಾರಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ - ೫೮೩ ೨೭೬

ಡಿ.ಡಿ. ಕಳಿಸುವವರು ಮೇಲಿನ ವಿಳಾಸಕ್ಕೆ ಹೊಸಪೇಟೆಯ ಯಾವುದೇ ರಾಷ್ಟ್ರೀಕೃತ ಬ್ಯಾಂಕಿಗೆ ಪಾವತಿಯಾಗುವಂತೆ ಕಳಿಸಿ.

ಕನ್ನಡ ಅಧ್ಯಯನ

ಚಳಿ ಸಂಚಿಕೆ

ಸಂಪಾದಕ
ರಹಮತ್ ತರೀಕೆರೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

KANNADA ADHYAYANA (Quarterly) Vol. IX-2
Edited by
Dr. Rahamath Tarikere
Published by
Publication Division, Prasaranga,
Kannada University, Hampi
Vidyaranya - 583 276
Pages : xx + 172
First Impression : 2003
www.kavihampi.org
ತ್ರೈಮಾಸಿಕ ಪತ್ರಿಕೆ, ಸಂಪುಟ ೯, ಸಂಚಿಕೆ ೨
(ಅಕ್ಟೋಬರ್, ನವಂಬರ್, ಡಿಸೆಂಬರ್-೨೦೦೨)

ಸಲಹಾ ಸಂಪಾದಕರು	:	ಡಾ. ಎಚ್ ಜೆ ಲಕ್ಕಪ್ಪಗೌಡ
ಬಿಡಿ ಪ್ರತಿ ಬೆಲೆ	:	ರೂ. ೨೫.೦೦
ವಾರ್ಷಿಕ ಚಂದಾ	:	ರೂ. ೧೦೦.೦೦
ಪಂಚ ವಾರ್ಷಿಕ ಚಂದಾ	:	ರೂ. ೪೦೦.೦೦
ಮುಖಪುಟ	:	ಕೆ ಕೆ ಮಕಾಳಿ

ಪ್ರಕಾಶನ
ಪ್ರಕಟಣ ವಿಭಾಗ, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅಕ್ಷರ ಸಂಯೋಜನೆ
ವಿದ್ಯಾರಣ್ಯ ಗಣಕ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮುದ್ರಣ

ಪರಿವಿಡಿ

ಸೊಲ್ಲು

ಕನ್ನಡ/ಕರ್ನಾಟಕ ಸಂಸ್ಕೃತಿಗಳ ಪ್ರಜಾಪ್ರಭುತ್ವೀಕರಣ

•ಸಂಪಾದಕ

I

೨೦ನೇ ಶತಮಾನದ ಕನ್ನಡ ಚಿಂತನೆಯಲ್ಲಿ ವ್ಯಾಪಕವಾಗಿ ಬಳಕೆಯಾದ ಪರಿಕಲ್ಪನೆಗಳಲ್ಲಿ 'ಕನ್ನಡ ಸಂಸ್ಕೃತಿ' 'ಕರ್ನಾಟಕ ಸಂಸ್ಕೃತಿ' ಎಂಬ ಪರಿಕಲ್ಪನೆಗಳೂ ಸೇರಿವೆ. ಸದ್ಯದ ಪ್ರಪಂಚೀಕರಣದ ಸಂದರ್ಭದಲ್ಲಿ ಇವು 'ನಮ್ಮ ದೇಶಿ ಸಂಸ್ಕೃತಿ ರಕ್ಷಣೆ' ಹೆಸರಲ್ಲಿ ಮತ್ತೆ ಚಾಲ್ತಿ ಪಡೆಯುತ್ತಿವೆ. ಕನ್ನಡದಲ್ಲಿ ಈ ಪರಿಕಲ್ಪನೆಗಳು ಯಾವಾಗ ಹುಟ್ಟಿದವು, ಯಾವ್ಯಾವ ಕಾಲಘಟ್ಟಗಳಲ್ಲಿ ಭಿನ್ನ ಅರ್ಥಗಳಲ್ಲಿ ಬಳಕೆಯಾದವು? ಈಗ ಇವಕ್ಕೆ ಯಾವ ಸ್ವರೂಪ ದಕ್ಕುತ್ತಿದೆ? ಯಾವಾಗ ಇವು ಎಲ್ಲ ಭಾಷಿಕ/ಧಾರ್ಮಿಕ ಸಮುದಾಯಗಳನ್ನು ಒಳಗೊಳ್ಳುವ ವಿಶಾಲ ಪರಿಭಾಷೆಯಾಗುತ್ತವೆ? ಯಾವಾಗ ಇವು ನಿರ್ದಿಷ್ಟ ಸಮುದಾಯವನ್ನು ಹೊರಗಿಡುವ/ವಿಭಜಿಸುವ, ಮೂಲಭೂತವಾದಿ ಪರಿಭಾಷೆಯಾಗಿ ಪರಿವರ್ತನೆಗೊಳ್ಳುತ್ತವೆ? ಇದರ ಬಗ್ಗೆ ಚಿಂತಿಸುತ್ತ ಈ ಟಿಪ್ಪಣಿ.

'ಕನ್ನಡ ಸಂಸ್ಕೃತಿ' 'ಕರ್ನಾಟಕ ಸಂಸ್ಕೃತಿ'. ಇವುಗಳಲ್ಲಿ ಮೊದಲನೆಯದು ಭಾಷಾ ವಾಚಕವಾಗಿದ್ದು ಸಂಸ್ಕೃತಿಯನ್ನು ನುಡಿಯ ಹೆಸರಲ್ಲಿ ಗುರುತಿಸುತ್ತದೆ. ಎರಡನೆಯದು ದೇಶವಾಚಕವಾಗಿದ್ದು, ಸಂಸ್ಕೃತಿಯನ್ನು ನಾಡಿನ ಹೆಸರಲ್ಲಿ ಗುರುತಿಸುತ್ತದೆ. ಈ ಎರಡು ಪರಿಕಲ್ಪನೆಗಳು ಒಂದು ಇನ್ನೊಂದರ ಅರ್ಥದಲ್ಲಿ ಬಳಕೆಯಾಗುತ್ತಲೂ ಬಂದಿವೆ. ಉದಾಹರಣೆ-ಕುಮಾರವ್ಯಾಸನು ತನ್ನ ಕೃತಿಗೆ 'ಕರ್ಣಾಟ ಭಾರತ ಕಥಾಮಂಜರಿ' ಎನ್ನುವಾಗ 'ಕರ್ಣಾಟ' ಎಂಬುದನ್ನು 'ಕನ್ನಡ' ಎಂಬ ಭಾಷಾವಾಚಕವಾಗಿ ಬಳಸುತ್ತಾನೆ; ಹಾಗೆಯೇ 'ಕವಿರಾಜ ಮಾರ್ಗ'ವು 'ಕಾವೇರಿಯಿಂದಂ ಆ ಗೋದಾವರಿವರಂ ಇರ್ದ ನಾಡದಾ ಕನ್ನಡ ದೋಳ್' ಎಂದು ಕರ್ನಾಟಕದ ಗಡಿಗಳನ್ನು ಗುರುತಿಸುವಾಗ, ಕನ್ನಡವನ್ನು ಪ್ರದೇಶವಾಚಕವಾಗಿ ಬಳಸುವುದು. ಕರ್ಣಾಟ ಮತ್ತು ಕನ್ನಡ ಎಂಬ ಎರಡೂ ಪದಗಳ ಅರ್ಥ ಮೂಲತಃ ಒಂದೇ ಎಂದು ಶಂಬಾ ಕೂಡ ಹೇಳುತ್ತಾರೆ. ಅವರು ತಮ್ಮ ಕೃತಿಗಳಲ್ಲಿ ಕನ್ನಡ ಭಾಷೆಯ ಪ್ರಾಚೀನತೆಯ ಮೂಲಕವೆ ಕನ್ನಡ ಜನಾಂಗದ ಚರ್ಚೆಯನ್ನು ಆರಂಭಿಸುತ್ತಾರೆ. 'ಕನ್ನಡ ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನು ಬಳಸುತ್ತಾರೆ. ಆದರೂ ಅವರ ಚರ್ಚೆ ಮುನ್ನಡೆದು ಕನ್ನಡಿಗರ ವೃತ್ತಿ/

ಮತಗಳನ್ನು ಒಳಗೊಳ್ಳುವ 'ಕರ್ನಾಟ ಸಂಸ್ಕೃತಿ'ಯ ವಿಶಾಲ ನೆಲೆ ಪಡೆದುಕೊಳ್ಳುತ್ತದೆ. ಕನ್ನಡ ಮಾತಾಡುವವರನ್ನು ಮಾತ್ರ 'ಕನ್ನಡಿಗರು' ಎಂದು ಶಂಬಾ ಭಾವಿಸಿದ್ದರೂ, ಅವರ ಚಿಂತನೆ ಭಾಷಾ ಅಥವಾ ಮತೀಯ ಮೂಲಭೂತವಾದದ ನೆಲೆಗೆ ಹೋಗುವುದಿಲ್ಲ.

ಆದರೆ 'ಕನ್ನಡ/ಕರ್ನಾಟಕ ಸಂಸ್ಕೃತಿ'ಎಂಬ ಪರಿಕಲ್ಪನೆ ಭಾಷಾಮೂಲಭೂತವಾದಿ ದನಿ ಪಡೆವಂತಹ ಅನೇಕ ಸಂದರ್ಭಗಳು ಉಂಟಾದವು. 'ಕನ್ನಡ ಸಂಸ್ಕೃತಿ'ಯನ್ನು 'ಕನ್ನಡ ಮನೆ ಮಾತುಳ್ಳ ಜನರಿಗೆ ಮಾತ್ರ ಸಂಬಂಧಿಸಿದ್ದು' ಎಂಬ ಜನಪ್ರಿಯ ಅರ್ಥದಿಂದ ಪೂರ್ತಿ ಬಿಡುಗಡೆ ಗೊಳಿಸಲು ಇನ್ನೂ ಸಾಧ್ಯವಾಗಿಲ್ಲ. ಈಗಲೂ ಕನ್ನಡ ರಾಜ್ಯೋತ್ಸವ ಕಾರ್ಯ ಕ್ರಮಗಳಲ್ಲಿ 'ಡಿವಿಜಿ, ಕೈಲಾಸಂ, ನಿಸಾರ್ ಅಹಮದ್ ಇವರು ಕನ್ನಡಿಗರಲ್ಲವಾದರೂ ಕನ್ನಡ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ' ಎಂಬ ಧಾಟಿಯ ಮೆಚ್ಚುಮಾತುಗಳನ್ನು ಕೇಳಿಸಿಕೊಳ್ಳ ಬಹುದು. 'ಕನ್ನಡಿಗ' 'ಕನ್ನಡ ಸಂಸ್ಕೃತಿ' ಎಂಬುವನ್ನು ಕೇವಲ ಕನ್ನಡ ಮನೆಮಾತಿನವರ ಬದುಕಿಗೆ ಸಂಬಂಧಿಸಿದ ಭಾಷಾವಾಚಿಕಗಳಾಗಿ ನೋಡುವುದರಿಂದ ಹುಟ್ಟುವ ಗ್ರಹಿಕೆಗಳಿವು; ಈ ಪರಿಕಲ್ಪನೆಗಳು ಕರ್ನಾಟಕದ ಜನಭಾಷೆಗಳಾದ ಉರ್ದು ತಮಿಳು ತೆಲುಗು ಮರಾಠಿ ಕೊಂಕಣಿ ಬ್ಯಾರಿ ಇತ್ಯಾದಿಗಳಿರಲಿ, ಕನ್ನಡ ಭಾಷಾ ಕುಟುಂಬಕ್ಕೆ ಸೇರಿದ ಕೊಡವ ತುಳು ಭಾಷಿಕ ಸಮುದಾಯಗಳನ್ನು ಒಳಗೊಳ್ಳುವುದಕ್ಕೂ ಸಾಧ್ಯವಾಗದಷ್ಟು ಸಂಕುಚಿತ ಆಗುವುದುಂಟು. ರಾಜಕೀಯ ಸಾಮಾಜಿಕ ಬೆಳವಣಿಗೆಗಳು ಜನಪರ ಪರಿಕಲ್ಪನೆಗಳನ್ನು ವಿಭಿನ್ನ ಅರ್ಥಗಳಿಗೆ ದೂಡಿಬಿಡುವ ಪರಿಯಿದು. ಎಂತಲೇ 'ಕನ್ನಡಿಗರು' 'ಕನ್ನಡ ಸಂಸ್ಕೃತಿ' 'ಕರ್ನಾಟಕ ಸಂಸ್ಕೃತಿ' ಮುಂತಾದ ಪರಿಕಲ್ಪನೆಗಳನ್ನು ಸೀಮಿತ ಅರ್ಥದಿಂದ ದಾಟಿಸಿ, ಇವು ಕರ್ನಾಟಕದಲ್ಲಿ ವಾಸಮಾಡುವ ಸಮಸ್ತ ಧರ್ಮ ಭಾಷೆಗಳಿಗೆ ಸೇರಿದ ಎಲ್ಲ ಜನರ ಬದುಕಿಗೆ ಸೇರಿದವು ಎಂಬ ವಿಶಾಲಾರ್ಥದಲ್ಲಿ ಬಹುತ್ವೀಕರಿಸುವ ಮತ್ತು ಪ್ರಜಾಪ್ರಭುತ್ವೀಕರಿಸುವ ಜರೂರು ಬೀಳುತ್ತಲೇ ಇದೆ.

ನಿರ್ದಿಷ್ಟ ಧಾರ್ಮಿಕ ಸಮುದಾಯಗಳನ್ನು, ದಲಿತರು ಮಹಿಳೆಯರು ಬುಡಕಟ್ಟುಗಳು ದುಡಿಯುವ ಸಮುದಾಯಗಳನ್ನು ಹೊರಗಿಟ್ಟು ಅಥವಾ ನಾಮಮಾತ್ರಕ್ಕೆ ಉಲ್ಲೇಖಿಸಿ, ಆಳುವ ವರ್ಗಗಳ ಪ್ರತಿಷ್ಠಿತ ಧರ್ಮಗಳ ಮೂಗಿನನೇರಕ್ಕೆ ಕರ್ನಾಟಕ ಚರಿತ್ರೆಯನ್ನು ಕಟ್ಟುವಂತಹ ರೂಢಿ ಬಹಳ ದೊಡ್ಡದು. ಆದರೆ ಈ ಪ್ರವೃತ್ತಿಗೆ ವಿರುದ್ಧವಾಗಿ, ಚರಿತ್ರೆಯನ್ನು ಜನಸಮುದಾಯಗಳ ನಿರ್ಲಕ್ಷಿತ ಲೋಕದ ಪ್ರತಿಕ್ರಿಯೆಗಳ ಮೂಲಕ ರಚಿಸುವ ಯತ್ನಗಳೂ ನಿರಂತರ ನಡೆಯುತ್ತ ಬಂದಿವೆ. ಹಾಗೆಂದು ಕನ್ನಡ ಅಥವಾ ಕರ್ನಾಟಕದ ಸಂಸ್ಕೃತಿ ಪರಿಕಲ್ಪನೆಗಳಿಗೆ ದಕ್ಕುವ ಸಂಕುಚಿತ ಇಲ್ಲವೆ ವಿಶಾಲ ಆಯಾಮಕ್ಕೆ, ಚರಿತ್ರೆಯ ತಪ್ಪು ತಿಳಿವಳಿಕೆಗಳೆ ಕಾರಣ ವಲ್ಲ. ೨೦ನೇ ಶತಮಾನದಲ್ಲಿ ಕರ್ನಾಟಕ, ಭಾರತ, ಅಷ್ಟೇಕೆ ಜಗತ್ತಿನಲ್ಲಿಯೇ ನಡೆದ ಕೆಲವು ಚಾರಿತ್ರಿಕ ವಿದ್ಯಮಾನಗಳು ಸಹ, ಕನ್ನಡ/ಕರ್ನಾಟಕ ಸಂಸ್ಕೃತಿ ಎಂಬ ಪರಿಕಲ್ಪನೆಗಳ ಸಂಕುಚಿತೀಕರಣಕ್ಕೆ ಅಥವಾ ವಿಶಾಲೀಕರಣ ಕಾರಣವಾಗುತ್ತಿವೆ. ಮೂಲತ: ಈ ಅರ್ಥವ್ಯತ್ಯಾಸದ ಆಟವು ಸೈದ್ಧಾಂತಿಕವಾಗಿದ್ದು, ಇದಕ್ಕೆ ನಮ್ಮ ಜ್ಞಾನ ಮೀಮಾಂಸೆಯಲ್ಲಿ ಮಾತ್ರವಲ್ಲ, ರಾಜಕೀಯ ಸಾಮಾಜಿಕ ಚಲನೆಗಳಲ್ಲಿ ಉತ್ತರವಿದೆ.

ಭಾಷೆ ಪ್ರದೇಶ ಧರ್ಮ ಸಮುದಾಯಗಳ ಆಧಾರದಲ್ಲಿ ಹುಟ್ಟುವ ಯಾವತ್ತೂ ಪರಿಕಲ್ಪನೆಗಳು, ಮೂಲಭೂತವಾದಿತನದ ರೂಪಾಂತರ ಪಡೆವ ಸಾಧ್ಯತೆ ಹೆಚ್ಚಿರುತ್ತದೆ. ಆದರೆ ಹಾಗೆ ರೂಪಾಂತರ ಪಡೆವುದು ಅನಿವಾರ್ಯವೇನಲ್ಲ. ಒಂದೊಮ್ಮೆ ಅವು ಮೂಲ ಭೂತವಾದಿ ರೂಪ ಪಡೆದರೆ, ಅದಕ್ಕೆ ಕೋಮುವಾದಿ ರಾಷ್ಟ್ರೀಯತಾ ಚಿಂತನೆಗಳ ಸೋಂಕು ಒಂದು ಕಾರಣ. ಕೋಮುವಾದಿ ರಾಷ್ಟ್ರೀಯತೆಯು ವ್ಯಕ್ತಿಯನ್ನು ನಿರ್ದಿಷ್ಟ ಧರ್ಮದಲ್ಲಿ ಹುಟ್ಟಿದ ಅಥವಾ ನಿರ್ದಿಷ್ಟ ಭಾಷೆಯನ್ನಾಡುವ ನೆಲೆಯಲ್ಲಿ ಅಳೆಯಲು ಒತ್ತಾಯಿಸುತ್ತದೆ. ಭಾಷೆ ಧರ್ಮಗಳ ಹೆಸರಲ್ಲಿ 'ನಾವು' 'ಅವರು' ಎಂಬ ವಿಭಜಕ ಪರಿಭಾಷೆಯನ್ನು ಬಳಸಿ ಜನರನ್ನು ವಿಂಗಡಿಸುತ್ತದೆ. ಜನರ ಧಾರ್ಮಿಕ ಭಾಷಿಕ ಸಾಂಸ್ಕೃತಿಕ ವಿಶಿಷ್ಟತೆಗಳನ್ನು, ಬೆಸೆಯಲಾಗದ ಭಿನ್ನತೆಗಳೆಂದು ಹೇಳಿ ವಿಮನಸ್ಸು ಹುಟ್ಟುಹಾಕುತ್ತದೆ. ಶತಮಾನಗಳಿಂದ ಒಂದೇ ಪ್ರದೇಶದಲ್ಲಿ ಬದುಕುತ್ತಿದ್ದರೂ, ನಿರ್ದಿಷ್ಟ ಭಾಷಿಕ ಧಾರ್ಮಿಕ ಸಮುದಾಯಗಳ ಭಾಷೆ ಬದುಕು ಧರ್ಮ ಸಂಸ್ಕೃತಿಗಳನ್ನು 'ಅನ್ಯ' ಎಂದೂ ಎದುರಾಳಿಗಳು ಎಂದೂ ಕಂದರ ನಿರ್ಮಿಸುತ್ತದೆ. 'ಕನ್ನಡ' 'ಕನ್ನಡಿಗರು' 'ಕನ್ನಡ ಸಂಸ್ಕೃತಿ' ಇತ್ಯಾದಿ ಪರಿಕಲ್ಪನೆಗಳು ೨೦ನೇ ಶತಮಾನದ ಕರ್ನಾಟಕದಲ್ಲಿ ಈ ಬಗೆಯ ವೇಷವನ್ನು ಅನೇಕ ಸಲ ತೊಟ್ಟಿವೆ, ಅನೇಕ ಸಲ ಕಳಚಿವೆ.

ಪರಿಕಲ್ಪನೆಗಳಿಗೆ ಉಂಟಾಗುವ ಅರ್ಥಸಂಕೋಚವು ಕೇವಲ ತಿಳಿವಳಿಕೆಗೆ ಸಂಬಂಧಿಸಿದ ಸಂಗತಿಯಾಗಿ ಮಾತ್ರ ಉಳಿವುದಾಗಿದ್ದರೆ, ಆತಂಕ ಪಡಬೇಕಾಗಿರಲಿಲ್ಲ. ಆದರೆ ಇದು ನಾಡಿನ ಸಾಮಾಜಿಕ ಬದುಕಿನ ಮೇಲೆ ಘಾತಕ ಪರಿಣಾಮ ಬೀರುವ ಸಂಗತಿಯಾಗಿದೆ. ಕರ್ನಾಟಕ/ ಕನ್ನಡಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು, ಮನೆಮಾತು ಕನ್ನಡವಾಗಿರದ ಕನ್ನಡಿಗರ ಬದುಕುವ ಹಕ್ಕನ್ನೆ ಪ್ರಶ್ನಿಸುವ ಮೂಲಭೂತವಾದವಾಗಿ ಪರಿಣಮಿಸುತ್ತವೆ. ಕನ್ನಡ ಚಳುವಳಿಗಳು, ಕನ್ನಡಕ್ಕೆ ನಿಜವಾಗಿಯೂ ಸವಾಲಾಗಿರುವ ಹಿಂದಿ ಇಂಗ್ಲಿಷುಗಳನ್ನು ಕೈಬಿಟ್ಟು, ಕರ್ನಾಟಕದ ಜನಭಾಷೆಗಳ ವಿರುದ್ಧ ಯಾಕೆ ತಿರುಗಿಕೊಳ್ಳುತ್ತವೆ ಎಂಬ ಪ್ರಶ್ನೆ ಕೇಳಿಕೊಳ್ಳಬೇಕು. ಗೋಕಾಕ ಚಳುವಳಿಯನ್ನು ಗಮನಿಸಿ. ಹೈಸ್ಕೂಲಿನಲ್ಲಿ ಮಾತೃಭಾಷೆಗಳ ಪಟ್ಟಿಯಲ್ಲಿ ಸಂಸ್ಕೃತದಂತಹ ಮಾತೃಭಾಷೆಯಲ್ಲದ ಭಾಷೆ ಕುಳಿತು, ಕನ್ನಡ ಆಯ್ಕೆಗೆ ಅಡ್ಡಿಯಾಗಿರುವ ಸಮಸ್ಯೆಯನ್ನು ಪರಿಹರಿಸಲು ಗೋಕಾಕ ಆಯೋಗ ನೇಮಕವಾಗಿತ್ತು. ಅದರ ವರದಿಯ ಪರಿಣಾಮವಾಗಿ ಕನ್ನಡ ಚಳುವಳಿ ಭುಗಿಲೆದ್ದಿತು. ಆದರದು ತನ್ನ ಕೊನೆಯ ಹಂತದಲ್ಲಿ ಸಂಸ್ಕೃತದ ವಿಷಯವನ್ನು ಕೈಬಿಟ್ಟು, ಹೇಗೋ ಉರ್ದು ತಮಿಳು ಭಾಷೆಗಳ ವಿರುದ್ಧ ತಿರುಗಿಬಿಟ್ಟಿತು. ಇದೇ ರೀತಿ ಕನ್ನಡ ಕಾರ್ಯಕ್ರಮಗಳ ಹೊತ್ತಲ್ಲಿ ಉರ್ದು ವಾರ್ತೆ ಪ್ರಸಾರ ಮಾಡುವ ದೂರದರ್ಶನದ ನಿರ್ಧಾರವು, ಕೋಮುಗಲಭೆಗೆ ತಿರುಗಿ ಕೊಂಡು ಭೀಕರ ರಕ್ತಪಾತಕ್ಕೆ ಕಾರಣವಾಯಿತು. ಕಾವೇರಿ ನೀರಿನ ವಿವಾದವು ತಮಿಳು ಕನ್ನಡಗಳನ್ನು ಎದುರಾಳಿಯಾಗಿ ಮಾಡಿ, ಜನಾಂಗದ್ವೇಷಕ್ಕೂ ರಕ್ತಪಾತಕ್ಕೂ ನಾಂದಿಹಾಡಿತು. ಈ ವಿದ್ಯಮಾನಗಳಿಗೂ ಕನ್ನಡ/ ಕರ್ನಾಟಕ ಸಂಸ್ಕೃತಿ ಪರಿಕಲ್ಪನೆಗಳನ್ನು ಕನ್ನಡ ಮನೆಮಾತಿನ/ ಹಿಂದೂ ಸಮುದಾಯದ ನೇರಕ್ಕೆ ವ್ಯಾಖ್ಯಾನಿಸಿದ್ದಕ್ಕೂ ಅಪರೋಕ್ಷ ಸಂಬಂಧವಿದೆ. 'ಭಾರತೀಯ ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನು ಧರ್ಮಾತೀತವಾಗಿ ಭಾಷಾತೀತವಾಗಿ, ನಿರ್ದಿಷ್ಟ ಭೌಗೋಳಿಕ

ಎಲ್ಲೆಯಲ್ಲಿ ಹುಟ್ಟಿಬೆಳೆದ ಸಮಸ್ತ ಸಂಗತಿಗಳಿಗೆ ಅನ್ವಯಿಸುವಂತೆ ವ್ಯಾಖ್ಯಾನಿಸುವ ತುರ್ತು ದೇಶದಲ್ಲಿ ಈಗ ಉಂಟಾಗಿದೆ; ಅದರಂತೆ ಕರ್ನಾಟಕದಲ್ಲೂ 'ಕರ್ನಾಟಕ/ಕನ್ನಡ ಸಂಸ್ಕೃತಿ' ಗಳನ್ನೂ ಜನಪರವಾದ ವಿಶಾಲ ನೆಲೆಯಲ್ಲಿ ವ್ಯಾಖ್ಯಾನಿಸುವ ತಾತ್ವಿಕ ಅಗತ್ಯ ಇದೆ.

ನಿರ್ದಿಷ್ಟ ಭಾಷೆ, ಭೂಪ್ರದೇಶ, ಜಾತಿ ಅಥವಾ ಧಾರ್ಮಿಕ ಸಮುದಾಯವನ್ನು ಆಧಾರವಾಗಿ ಇಟ್ಟುಕೊಂಡು ಹುಟ್ಟುವ ಪರಿಕಲ್ಪನೆಗಳು ಮೂಲಭೂತವಾದಿ ಆಯಾಮ ಪಡೆವ ಸಾಧ್ಯತೆ ಹೆಚ್ಚಿರುತ್ತದೆ ನಿಜ. ಅಂದಮಾತ್ರಕ್ಕೆ ಅವನ್ನು ನಿಷೇಧಿಸಬೇಕೆ? ನಿಷೇಧಿಸಲು ಸಾಧ್ಯವೆ? ಭಾಷೆ, ಭೂಪ್ರದೇಶ ಅಥವಾ ಸಮುದಾಯವೆಂಬ ಘಟಕಗಳು ಸಮಾಜ ಅಥವಾ ರಾಷ್ಟ್ರವೊಂದರಲ್ಲಿ ಮೂಲಭೂತವಾಗಿ ಇರುವ ಸಂಗತಿಗಳು. ಇವು ಮೂಲಭೂತವಾದಿ ಆಗದಂತೆ ನಿರಂತರ ಎಚ್ಚರ ವಹಿಸುತ್ತಿರಬೇಕು ಅಷ್ಟೆ. ಅದಕ್ಕೆಂದೇ ಕೆಲವು ಚಿಂತಕರು, ಕೋಮುವಾದಿ ಅಥವಾ ಭಾಷಾ ಮೂಲಭೂತವಾದಿ ನೆಲೆಯತ್ತ ಹೋಗುವ ಸಾಧ್ಯತೆ ಹೆಚ್ಚು ಎಂದು ಭಾವಿಸಿ, 'ಕನ್ನಡ ಸಂಸ್ಕೃತಿ' ಪರಿಕಲ್ಪನೆಯನ್ನು ಬಳಸಲು ಹಿಂಜರಿಯುತ್ತಾರೆ. ಅದಕ್ಕೆ ಬದಲಾಗಿ 'ಕರ್ನಾಟಕ ಸಂಸ್ಕೃತಿ' ಎಂಬ ವಿಶಾಲ ಪ್ರದೇಶ ವಾಚಕವನ್ನು ಬಳಸುವುದು ಉಚಿತವೆಂದು ಭಾವಿಸುತ್ತಾರೆ.

II

ಕನ್ನಡ ಅಥವಾ ಕನ್ನಡತ್ವ, ಕರ್ನಾಟಕತ್ವ ಅಥವಾ ಕರ್ನಾಟಕ ಸಂಸ್ಕೃತಿ ಪರಿಕಲ್ಪನೆಗಳಿಗೆ ಬರುವ ಮೂಲಭೂತವಾದಿತನ ಕಳೆವ ಕೆಲಸದಲ್ಲಿ ಎದುರಿಸಬೇಕಾದ ದೊಡ್ಡ ಸವಾಲೆಂದರೆ, ಅವುಗಳ ಚಾರಿತ್ರಿಕ ನೆನಪುಗಳದ್ದು. ಇವುಗಳ ಹುಟ್ಟೇ ಮತೀಯ ರಾಷ್ಟ್ರೀಯತೆಯ ಎಳೆ ಯೊಂದಿಗೆ ಶುರುವಾಯಿತು. ಕರ್ನಾಟಕದ ಭಾಷೆ ಸಾಹಿತ್ಯ ಚರಿತ್ರೆ ಸಮಾಜ ಧರ್ಮಗಳಿಗೆ ಸಂಬಂಧಿಸಿದ ವಿವರಗಳನ್ನು ಹಾಕಿ, ಕರ್ನಾಟಕತ್ವದ ಚರ್ಚೆಮಾಡುವ ಕೆಲಸವನ್ನು ಮೊದಲು ಶುರು ಮಾಡಿದವರು ಆಲೂರು ವೆಂಕಟರಾವ್. 'ಕರ್ನಾಟಕದ ಗತವೈಭವ' (೧೯೧೭) 'ಕರ್ನಾಟಕದ ವೀರರತ್ನಗಳು' (೧೯೩೦) 'ಕರ್ನಾಟಕತ್ವದ ಸೂತ್ರಗಳು' (೧೯೫೦)' ಕರ್ನಾಟಕತ್ವದ ವಿಕಾಸ' (೧೯೫೭) ಮುಂತಾದ ಕೃತಿಗಳಲ್ಲಿ ಈ ಯತ್ನವಿದೆ. ಈ ಕೆಲಸವನ್ನು ಖಚಿತ ಸಾಂಸ್ಕೃತಿಕ ಪರಿಭಾಷೆಯಲ್ಲಿ ಮಂಡನೆ ಮಾಡಿದ್ದು ಮಾಸ್ತಿ ('ಕರ್ನಾಟಕದ ಜನತೆಯ ಸಂಸ್ಕೃತಿ' ೧೯೩೧) ಹಾಗೂ ದೇವುಡು ('ಕರ್ಣಾಟಕ ಸಂಸ್ಕೃತಿ' ೧೯೩೫); ನಂತರದ ಘಟ್ಟದಲ್ಲಿ ಎಚ್ ತಿಪ್ಪೇರುದ್ರಸ್ವಾಮಿ ('ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ೧೯೬೬) ಎಂ ಚಿದಾನಂದಮೂರ್ತಿ ('ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ' ೧೯೮೭; 'ಕರ್ನಾಟಕ ಸಂಸ್ಕೃತಿ' ೧೯೯೩) ಇದನ್ನು ಬೇರೆ ಆಯಾಮದಲ್ಲಿ ಮುಂದುವರೆಸಿದರು.

ಈ ಚಿಂತಕರು ಕನ್ನಡ ಭಾಷೆ, ಸಾಹಿತ್ಯದ ಬಗೆಗೆ ಮಾಡಿರುವ ಕೆಲಸಗಳು, ನಾಡನ್ನು ಕಟ್ಟಲು ಪಟ್ಟಿರುವ ಕಷ್ಟಗಳು ಆದರಣೀಯವಾಗಿವೆ. ಅವರ ಕನಸು ಹಂಬಲಗಳು ಪ್ರಾಮಾಣಿಕವಾಗಿವೆ. ಇವ ತಮ್ಮ ಚಾರಿತ್ರಿಕ ಸಂದರ್ಭದಲ್ಲಿ ಬೇಕಾದಷ್ಟು ಇತ್ಯಾತ್ಮಕ ಪಾತ್ರವನ್ನೂ ನಿರ್ವಹಿಸಿರಬಹುದು. ಆದರೆ ಈಹೊತ್ತು ಅವರ ಬದ್ಧತೆ ಚಿಂತನೆ ಹಂಬಲಗಳ ಸ್ವರೂಪಗಳು ಸಮಸ್ಯಾತ್ಮಕವಾಗಿವೆ. ಯಾಕೆಂದರೆ ಅವು ಕೋಮುವಾದಿ ರಾಷ್ಟ್ರೀಯತೆ,

ಊಳಿಗಮಾನ್ಯ ಮೌಲ್ಯಗಳು, ದಮನಿತ ಸಮುದಾಯಗಳ ಜೀವನವಿವರಗಳನ್ನು ಹೊರಗಿಡುವಿಕೆ, ನೈತಿಕ ಮೌಲ್ಯ ಕೇಂದ್ರಿತ ಸಂಸ್ಕೃತಿ ಗ್ರಹಿಕೆ ಮುಂತಾದ ಮಿತಿಗಳಿಂದ ಕೂಡಿರುವುದು. ಜನಪ್ರಿಯವಾಗಿರುವ ಇವರ ಚಿಂತನೆಗಳನ್ನು ಹೊಸ ಕಾಲದ ಸಂಸ್ಕತಿ ಪರಿಕಲ್ಪನೆಗಳನ್ನು ಮಂಡಿಸುವ ಯಾರೂ, ವಿಮರ್ಶಿಸದೆ ಮುಂದೆ ಹೋಗುವಂತಿಲ್ಲ. ಈ ಕೆಲಸವನ್ನು ತಮ್ಮ ಪ್ರತಿಕಲ್ಪನೆಗಳನ್ನು ಮಂಡಿಸುವ ಮೂಲಕ ಶಂಬಾ ಜೋಶಿ ಅವರು ಶುರುಮಾಡಿದರು. ಕೆ ವಿ ಸುಬ್ಬಣ್ಣ, ಜಿ ರಾಜಶೇಖರ, ಹಿ ಶಿ ರಾಮಚಂದ್ರೇ ಗೌಡ, ಬಸವರಾಜ ಕಲ್ಗುಡಿ, ಡಿ ಆರ್ ನಾಗರಾಜ, ಬರಗೂರು ರಾಮಚಂದ್ರಪ್ಪ, ಎಸ್ ಎಸ್ ಹಿರೇಮಠ ಮುಂತಾದ ಆಧುನಿಕ ಕಾಲದ ಚಿಂತಕರು ಮುಂದುವರೆಸಿದರು. ಇದನ್ನು 'ಕನ್ನಡ/ಕರ್ನಾಟಕ ಸಂಸ್ಕೃತಿ'ಯ ಕಲ್ಪನೆಯನ್ನು ಜಾತ್ಯತೀತಗೊಳಿಸುವ ಮತ್ತು ಬಹುಮುಖಿಗೊಳಿಸುವ ಕೆಲಸ ಎನ್ನಬಹುದು.

III

ಕನ್ನಡದಲ್ಲಿ 'ಕನ್ನಡ /ಕರ್ನಾಟಕ ಸಂಸ್ಕೃತಿ' ಎಂಬ ಪರಿಕಲ್ಪನೆಗಳು ಮೂಲಭೂತವಾದಿ ಅಥವಾ ಡೆಮಾಕ್ರಟಿಕ್ ಸ್ವರೂಪ ಪಡೆಯುವುದಕ್ಕೆ ಎರಡು ಕಾರಣಗಳಿವೆ. ಒಂದು- ಸಂಸ್ಕೃತಿ ಬಗೆಗಿನ ಯಾವ ವ್ಯಾಖ್ಯೆಯನ್ನು ಚಿಂತಕರು ಅನುಸರಿಸುತ್ತಾರೆ ಎನ್ನುವುದು. ಎರಡು- ಈ ಬಗೆಯ ವ್ಯಾಖ್ಯಾನಗಳನ್ನು ಯಾವ ಚಾರಿತ್ರಿಕ ಒತ್ತಡಗಳಲ್ಲಿ ಮೈತಳೆಯುತ್ತವೆ ಎನ್ನುವುದು. ಮೊದಲಿಗೆ ಸಂಸ್ಕೃತಿ ಬಗ್ಗೆ ಕನ್ನಡದಲ್ಲಿರುವ ಗ್ರಹಿಕೆಗಳು ಕನ್ನಡ/ಕರ್ನಾಟಕ ಸಂಸ್ಕೃತಿಗಳ ವ್ಯಾಖ್ಯಾನಗಳ ನಿರ್ವಚಿಸುವುದಕ್ಕೆ ಹಿನ್ನೆಲೆಯಾಗಿ ಹೇಗೆ ನಿಂತಿವೆ ಎನ್ನುವುದನ್ನು ಗಮನಿಸ ಬಹುದು.

(i) ಉಚ್ಚವರ್ಗದ 'ಸಭ್ಯ' 'ಶಿಷ್ಟ' 'ನೈತಿಕ' ಮೌಲ್ಯಗಳನ್ನು ಸಂಸ್ಕೃತಿ ಎಂದು ಭಾವಿಸುವ ಗ್ರಹಿಕೆ. ಇದು ನಾಡಿನ ಎಲ್ಲ ಸಮುದಾಯಗಳ ಬದುಕಿನ ವಿವರಗಳನ್ನು ಒಳಗೊಳ್ಳುವುದಕ್ಕೆ ಬದಲಾಗಿ, ಪ್ರತಿಷ್ಠಿತ ವರ್ಗದ ಬದುಕಿನಿಂದ ಶ್ರೇಷ್ಠವೆನ್ನಲಾದ ಸಂಗತಿ ಗಳನ್ನು ಆರಿಸಿ ಕಟ್ಟಿ, ಅದನ್ನೆ ಸಂಸ್ಕತಿ ಎನ್ನುತ್ತದೆ. ಈ ಮಾದರಿಯ ಲಕ್ಷಣವೆಂದರೆ - ನಮ್ಮ ಸಮಾಜ ಅಥವಾ ಧರ್ಮಗಳಲ್ಲಿರುವ ಜಾತಿಪದ್ಧತಿ ಅಸ್ಪೃಶ್ಯತೆಯಂತಹ ಕೇಡುಗಳನ್ನು ಸಂಸ್ಕೃತಿಯ ಕಕ್ಷೆಗೆ ತಾರದಿರುವುದು, ಆಳದಲ್ಲಿ ಇವನ್ನು ಸಮ್ಮತಿಸುವುದು, ಚಾರಿತ್ರಿಕ ಸಂಘರ್ಷಗಳನ್ನು ಜಾರಿಸುವುದು. ಇದಕ್ಕೆ ಒಳ್ಳೆ ನಿದರ್ಶನವೆಂದರೆ ಮಾಸ್ತಿಯವರ 'ಕರ್ನಾಟಕದ ಜನತೆಯ ಸಂಸ್ಕೃತಿ'. ಕರ್ನಾಟಕದ ಜನತೆಯ ಸಂಸ್ಕೃತಿಯ ಚರ್ಚೆಯಲ್ಲಿ ಶರಣರನ್ನು ಉಲ್ಲೇಖಿಸುವ ಮಾಸ್ತಿ, ಅವರ ವೈದಿಕ ಮತದ ವಿಮರ್ಶೆಯುಳ್ಳ ಹಾಗೂ ದಲಿತ ಶಿವಭಕ್ತರ ಸಮಾನತೆ ಸಾರುವ ವಚನಗಳನ್ನು ಕೈಬಿಡುತ್ತಾರೆ. ಶರಣರ ಆತ್ಮನಿವೇದನೆಯ ನೈತಿಕ ಕಾಳಜಿಯ ವಚನಗಳನ್ನಷ್ಟೆ ಉಲ್ಲೇಖಿ ಸುತ್ತಾರೆ. ಸಂಸ್ಕೃತಿಯನ್ನು ಗುಣಗ್ರಾಹಿಯಾಗಿ ನೋಡುವ ಈ ಮಾದರಿ ಸಂಘರ್ಷಗಳನ್ನು ಆವಾಹಿಸುವುದಕ್ಕೆ ತಪ್ಪಿಸಿಕೊಳ್ಳುತ್ತದೆ. ರಕ್ಷಣಾತ್ಮಕವಾಗಿ ಸಂಸ್ಕೃತಿ ನಿರ್ವಚಿಸುವ ಈ ನಿಲುವು ಪಾಶ್ಚಾತ್ಯ ಸಂಸ್ಕೃತಿಯ ಯಜಮಾನಿಕೆಗೆ ಜವಾಬುಕೊಡುವ ಇಕ್ಕಟ್ಟಿನಲ್ಲಿ ಹುಟ್ಟಿದ್ದರಿಂದ ಈ ಹುಶಾರುತನ ಸಹಜವಾಗಿತ್ತು. ಜತೆಗೆ ಇದರಲ್ಲಿ ಉಚ್ಚಜಾತಿಗಳ

ಸಹಜ ಆತ್ಮರಕ್ಷಣೆಯ ಉಪಾಯಗಾರಿಕೆಯೂ ಇತ್ತು. ಸಮಾಜದ ಒಳಗಿನ ವೈರುಧ್ಯಗಳನ್ನು ಬಿಟ್ಟು ಕೊಟ್ಟು ಅದರ ಸಾಮರಸ್ಯದ ಮುಖವನ್ನೇ ಎತ್ತಿಹಿಡಿಯುವುದಕ್ಕೂ, ಊಳಿಗಮಾನ್ಯ ವ್ಯವಸ್ಥೆ ಜಾತಿಪದ್ಧತಿ ಇವನ್ನು ಒಪ್ಪಿಕೊಳ್ಳುವುದಕ್ಕೂ ಸಂಬಂಧವಿದೆ. ಕನ್ನಡ ಭಾಷೆಯಲ್ಲಿರುವ ಸೌಂದರ್ಯ ಪ್ರಜ್ಞೆಯನ್ನು ಧ್ವನಿ ಪೂರ್ಣತೆಯನ್ನು ಚರ್ಚಿಸುತ್ತ ಮಾಸ್ತಿಯವರು, 'ಮಲ್ಲಿಗೇನಹಳ್ಳಿ'ಎಂಬ ಹೆಸರನ್ನೋ ಅಥವಾ ಸತ್ತರು ಎನ್ನುವುದಕ್ಕೆ 'ಶಿವಪುರಿಗೆ ಹೋಗ್ಯಾರೆ' ಇತ್ಯಾದಿ ನುಡಿಗಟ್ಟುಗಳನ್ನೋ ಉಲ್ಲೇಖಿಸುತ್ತಾರೆ. ಮುಂದೆ 'ಗಂಡಸು ಕೂತುಕೆಟ್ಟ, ಹೆಂಗಸು ತಿರುಗಿ ಕೆಟ್ಟಳು, 'ಹೊಲೆಯನಿಗೆ ವಲ್ಲಿ ಕೊಟ್ಟರೆ ಕಲ್ಲುಕಟ್ಟಿ ಹರಿದ' ಮುಂತಾದ ಗಾದೆಗಳನ್ನು ಉಲ್ಲೇಖಿಸಿ, ಇವು 'ಸಾಮಾನ್ಯವಾಗಿ ಎಲ್ಲರೂ ನೆನೆದಿಗಬೇಕಾದ ವಿವೇಕ' ಎಂದುಬಿಡುತ್ತಾರೆ. ಆಗ ಕರ್ನಾಟಕ ಜನತೆಯ ಸಂಸ್ಕೃತಿಯ ವ್ಯಾಖ್ಯೆಯ ಒಳಗಿನ ಸಾಂಪ್ರದಾಯಿಕತೆ ಧುತ್ತನೆ ಚಿಮ್ಮಿ ಮುಖ ದೋರುತ್ತದೆ.

ಧರ್ಮಗಳನ್ನು ಧಾರ್ಮಿಕ ನೈತಿಕ ಮೌಲ್ಯಗಳನ್ನು ಸಂಸ್ಕೃತಿ ಚರ್ಚೆಯ ಮುಖ್ಯ ಆಕರಗಳನ್ನಾಗಿ ಬಳಸುತ್ತ ಕರ್ನಾಟಕ ಸಂಸ್ಕೃತಿಯ ಚರ್ಚಿಸುವುದು ಈ ಮಾದರಿಯ ಇನ್ನೊಂದು ಲಕ್ಷಣ. ಹೀಗಾಗಿ ಇಡೀ ಸಂಸ್ಕೃತಿ ಚಿಂತನೆಯು ಧರ್ಮಕೇಂದ್ರಿತ ನೈತಿಕ ಮೌಲ್ಯಗಳದ್ದಾಗುತ್ತದೆ. ಇಲ್ಲಿ ಧರ್ಮ ಎಂದರೆ ವೈದಿಕ ಹಿಂದುವೆ. ವಿಶೇಷ ಎಂದರೆ ವೈದಿಕ ಕೇಂದ್ರದಿಂದ ಕರ್ನಾಟಕ ಸಂಸ್ಕೃತಿಯನ್ನು ನಿರ್ವಚಿಸಿದರೂ ಗ್ರಾಮೀಣ ಜನಸಾಮಾನ್ಯರ ಬದುಕಿನ ವಿವರಗಳಿಗೆ ಹೋಗುವ ಜಾಣ್ಮೆಯನ್ನು ಮಾಸ್ತಿ ಹಾಗೂ ದೇವುಡು ತೋರಿಸುವುದು. ಅವರು ಸಂಸ್ಕೃತಿಯನ್ನು ಕನ್ನಡ ಅಥವಾ ಕರ್ನಾಟಕ ಎಂಬ ಹೆಸರಲ್ಲಿ ಕರೆಯದೆ, 'ಜನತೆಯ' ಹೆಸರಲ್ಲಿ ಗುರುತಿಸುವುದು ಗಮನಾರ್ಹ. ಅವರು ಹಳ್ಳಿಯ ಜನಪದ ಗಾದೆ ಪಡೆನುಡಿ ಊರಿನ ಹೆಸರು ಸಭ್ಯತೆ ಅಥಿತಿ ಸತ್ಕಾರದ ಗುಣ ಇವುಗಳನ್ನೆಲ್ಲ ಬಳಸುತ್ತ 'ಕರ್ನಾಟಕದ ಜನತೆಯ ಸಂಸ್ಕೃತಿ'ಯನ್ನು ಕಟ್ಟುತ್ತಾರೆ.

'ಕನ್ನಡ'/'ಕರ್ನಾಟಕ' ಸಂಸ್ಕೃತಿ ಬಹುಮುಖಿಯಾದುದು, ಇದರಲ್ಲಿ ಎಲ್ಲ ಧರ್ಮದವರು ಸೇರುತ್ತಾರೆ ಎಂದು ತಾತ್ವಿಕವಾಗಿ ಒಪ್ಪುವುದು ಇಲ್ಲಿನ ಉದಾರತೆಯಾಗಿದೆ. ಮಾಸ್ತಿಯವರು ಅನುಭವಾಮೃತ ದಾಸರು ಶರಣರು ಮಾಧ್ವ ಶಂಕರ ರಾಮಾನುಜ ಮುಂತಾದವರ ಪ್ರಸ್ತಾಪ ಪ್ರಸಿದ್ಧ ಮತಗಳ ಜತೆಜತೆಗೆ ಕ್ರೈಸ್ತ ಹಾಗೂ ಇಸ್ಲಾಂ ಮತಗಳ ಬಗ್ಗೆಯೂ ಕ್ವಚಿತ್ತಾಗಿ ಉಲ್ಲೇಖ ಮಾಡುತ್ತಾರೆ. ಆದರೂ ಕರ್ನಾಟಕ/ ಕನ್ನಡ ಸಂಸ್ಕೃತಿಯ ಪರಿಕಲ್ಪನೆಗಳಲ್ಲಿ ಕನ್ನಡ ಮಾತಾಡದ ಹಾಗೂ ಜೈನ ಬೌದ್ಧ ಕ್ರೈಸ್ತ ಇಸ್ಲಾಂ ದಲಿತ ಬುಡಕಟ್ಟು ಸಮುದಾಯಗಳ ಪ್ರಸ್ತಾಪ ಕಡಿಮೆ. ಕರ್ನಾಟಕ ಸಂಸ್ಕೃತಿಯು ಬಹುರೂಪಿಯಾದುದು ಬಹುಧರ್ಮೀಯವಾದುದು ಬಹುಭಾಷಿಕ ವಾದುದು ಎಂದು ತಾತ್ವಿಕವಾಗಿ ನುಡಿಯುವುದು, ತಮ್ಮ ವಿಶ್ಲೇಷಣೆಯಲ್ಲಿ ಉಚ್ಚವರ್ಗದ ಬದುಕಿನ ವಿವರಗಳನ್ನೆ ಹೆಚ್ಚಾಗಿ ಉಲ್ಲೇಖಿಸುವುದು- ಈ ದ್ವಂದ್ವವನ್ನು ಇಲ್ಲಿ ಕಾಣುತ್ತೇವೆ. ಕರ್ನಾಟಕ ಸಂಸ್ಕೃತಿಯನ್ನು ವೈದಿಕ ಹಿಂದೂ ರಾಷ್ಟ್ರೀಯವಾದಿ ನೆಲೆಯಲ್ಲಿ ಪುನಾರಚಿಸುವ ಎಲ್ಲರಲ್ಲೂ ಬೌದ್ಧ ಕ್ರೈಸ್ತ ಇಸ್ಲಾಂ ಧರ್ಮಗಳನ್ನು ಕುರಿತು ಒಂದು ಬಗೆಯ ಎದುರಾಳಿಯ ನಿಲುವಿನ ಎಳೆಯೊಂದು ಕಾಣುತ್ತದೆ. ಈ ಪ್ರವೃತ್ತಿ ಆಲೂರು, ದೇವುಡು, ತಿಪ್ಪೆರುದ್ರಸ್ವಾಮಿ, ಚಿದಾನಂದಮೂರ್ತಿ ಮುಂತಾದವರ ಚಿಂತನೆಗಳಲ್ಲಿ ಮುಂದುವರೆಯುತ್ತದೆ.

ಆದರೆ ಇದೇ ಕಾಲಘಟ್ಟದಲ್ಲಿ ಕನ್ನಡ ಮತ್ತು ಕರ್ನಾಟಕ ಸಂಸ್ಕೃತಿ ಚಿತ್ರಗಳನ್ನು ಶಂಬಾ ಹಾಗೂ ಕಪಟರಾಳರು ರಾಜಕೀಯ ಚರಿತ್ರೆಯಾಚೆ ಹೋಗಿ, ಕನ್ನಡ ಮಾತಾಡುವ ಸಮುದಾಯಗಳ ಆರ್ಥಿಕ ಚಟುವಟಿಕೆಗಳು ದೈವಗಳ ಮೂಲಕ ಕಟ್ಟುವ ಕೆಲಸವನ್ನು ಮಾಡಿದರು. ಇವರಲ್ಲಿ ಮತೀಯ ಸೋಂಕು ಇಲ್ಲ. ಹುಸಿ ವೈಭವೀಕರಣವೂ ಇಲ್ಲ. ಕರ್ನಾಟಕದಲ್ಲಿ ಧರ್ಮಗಳು ಸಹಬಾಳುವೆಯಿಂದ ಬಾಳಿದವು ಎಂಬ ಅರ್ಧ ಸತ್ಯದ ಚಿತ್ರಕ್ಕೆ ಬದಲಾಗಿ, ಅವು ಹೇಗೆ ಪರಸ್ಪರ ಸಂಘರ್ಷ ಮಾಡಿದವು ಎಂಬ ವಿಮರ್ಶಾತ್ಮಕ ಚಿತ್ರವನ್ನು ಇವರು ನೀಡುತ್ತಾರೆ. ಕಪಟರಾಳ ಕೃಷ್ಣರಾವ್ ಅವರ ಕೃತಿಯಲ್ಲಿ ('ಕರ್ನಾಟಕ ಸಂಸ್ಕೃತಿ ಸಂಶೋಧನೆ' ೧೯೭೦) ಇರುವುದು, ಪ್ರತಿಷ್ಠಿತ ಮತಗಳಿಗೆ ಪ್ರತಿಯಾಗಿ ಪರ್ಯಾಯವಾಗಿ ಬಂದ ಕರ್ನಾಟಕದ ಪಂಥಗಳ ಚರಿತ್ರೆಯಾಗಿದೆ. ಮೊದಲ ಹಂತದಲ್ಲಿ ಕರ್ನಾಟಕ ಸಂಸ್ಕೃತಿಯನ್ನು ಹೀಗೆ ತಳ ಬದುಕಿನ ನೆಲೆಯಿಂದ ನೋಡಿದ ಚಿಂತಕರ ಸಂಖ್ಯೆ ಕನ್ನಡದಲ್ಲಿ ತುಂಬ ಕಡಿಮೆ.

(ii) 'ಸಂಸ್ಕೃತಿ' ಎನ್ನುವುದು ಸಾಹಿತ್ಯ ಸಂಗೀತ ನೃತ್ಯ ಚಿತ್ರಕಲೆ ವಾಸ್ತು ಹಾಗೂ ಶಿಲ್ಪ ಮುಂತಾದ ಕಲೆಗಳ ಸೌಂದರ್ಯ ಉಪಾಸನೆಯ ಜಗತ್ತಿಗೆ ಸಂಬಂಧಿಸಿದುದು ಎಂಬ ಲಲಿತಕಲಾ ಕೇಂದ್ರಿತ ವ್ಯಾಖ್ಯೆ. ಇದರ ಹಿನ್ನೆಲೆಯಲ್ಲಿ ಹುಟ್ಟಿದ ಕನ್ನಡ/ಕರ್ನಾಟಕ ಸಂಸ್ಕೃತಿ ವ್ಯಾಖ್ಯೆಗಳು ತುಂಬ ಜನಪ್ರಿಯವಾದವು. ಈ ವ್ಯಾಖ್ಯೆಯನ್ನು ಕನ್ನಡದಲ್ಲಿ ಶಿವರಾಮ ಕಾರಂತರನ್ನೂ ಒಳಗೊಂಡಂತೆ ಬಹುತೇಕ ಲೇಖಕರು ಅನುಸರಿಸಿದರು. ಕರ್ನಾಟಕ ಸರಕಾರವು ತನ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ವ್ಯಾಖ್ಯೆಯ ಬುನಾದಿಯ ಮೇಲೇ ತನ್ನ ಕಾರ್ಯಕ್ರಮ ನಡೆಸಿಕೊಂಡು ಬಂದಿತು. ಈ ಇಲಾಖೆಯ ಪ್ರಣಾಳಿಕೆ ಎಂಬಂತಿರುವ 'ಸಾಹಿತ್ಯ ಮತ್ತು ಸಂಸ್ಕೃತಿ' ಎಂಬ ಲೇಖನವನ್ನು ಎ ಎನ್ ಮೂರ್ತಿರಾಯರು ಬರೆದರು. ಮೂರ್ತಿರಾಯರು ಈ ಇಲಾಖೆಗೆ ಮೊದಲ ಅಧ್ಯಕ್ಷರಾಗಿ (೧೯೫೬) ಬರೆದ ಲೇಖನವಿದು ಎಂಬುದು ಗಮನಾರ್ಹ. ಎಚ್. ತಿಪ್ಪೇರುದ್ರಸ್ವಾಮಿಯವರ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' (೧೯೬೮) ಎಂಬ ಕೃತಿ ಕೂಡ ಕಲಾಕೇಂದ್ರಿತ ಸಂಸ್ಕೃತಿ ಪರಿಕಲ್ಪನೆ ಅಡಿಯಲ್ಲೇ ರಚಿತವಾಯಿತು. ಇದರಲ್ಲಿ ಕರ್ನಾಟಕದ ರಾಜಕೀಯ ಸಾಮಾಜಿಕ ಧಾರ್ಮಿಕ ಚರಿತ್ರೆಗಳನ್ನು ಕುರಿತಂತೆ ಮೂರು ಅಧ್ಯಾಯಗಳಿವೆ. ಬಾಕಿ ಏಳು ಅಧ್ಯಾಯಗಳಲ್ಲಿ ಅವರು ಚರ್ಚಿಸುವುದು ಸಾಹಿತ್ಯ ಜಾನಪದ ವಾಸ್ತುಶಿಲ್ಪ, ಶಿಲ್ಪ, ಸಂಗೀತ, ನೃತ್ಯ, ಚಿತ್ರ ಕಲೆಗಳನ್ನು!

ಇಲ್ಲೂ ಅಪವಾದವಾಗಿ ಕಾಣುವುದು ಶಂಬಾ ಅವರೆ. ಅವರು ಕರ್ನಾಟಕ ಸಂಸ್ಕೃತಿಗೆ ರಾಜಕೀಯ ಚರಿತ್ರೆಯನ್ನಾಗಲಿ, ಕ್ಲಾಸಿಕಲ್ ಧರ್ಮಗಳನ್ನಾಗಲಿ, ಸಾಹಿತ್ಯ ಮುಂತಾದ ಕಲೆಗಳನ್ನಾಗಲೀ ಮುಖ್ಯ ಆಕರವಾಗಿಸಿಕೊಳ್ಳಲಿಲ್ಲ. ಬದಲಿಗೆ ಜನಸಮುದಾಯಗಳ ಕಸುಬು, ಭಾಷೆ, ದೈವಗಳನ್ನು ಆಧರಿಸಿದರು. ಆದರೆ ಅವರ ಈ ಮಾದರಿಯನ್ನು ಮುಂದುವರೆವಿಕೆಗಾಗಿ ೯೦ರ ದಶಕದವರೆಗೆ ಕಾಯಬೇಕಾಯಿತು. ಶಂಬಾ ಕಪಟರಾಳರ ಮಾದರಿಗೆ ಕನ್ನಡ ಚಿಂತನೆಯಲ್ಲಿ ವ್ಯಾಪಕ ಪ್ರಭಾವ ಬೀರಲು ಯಾಕೆ ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆಗೆ ಉತ್ತರವನ್ನು ಇನ್ನೂ ಕಂಡುಕೊಳ್ಳಬೇಕಿದೆ.

(iii) ಸಂಸ್ಕೃತಿಯು ನಮ್ಮ ಸಮಾಜದ ನಾಗರಿಕಗೊಳ್ಳದ ವಿಶಿಷ್ಟ ಜನಸಮುದಾಯಗಳ ಜೀವನ ವಿಧಾನ ಎಂಬ ಮಾನವಶಾಸ್ತ್ರೀಯ ವ್ಯಾಖ್ಯೆ. ಕರ್ನಾಟಕದ ಕೆಳಜಾತಿ ಬುಡಕಟ್ಟು ಹಾಗೂ ನಿರ್ಲಕ್ಷಿತ ಸಮುದಾಯಗಳ ಮೇಲೆ 'ಉಪಸಂಸ್ಕೃತಿ ಅಧ್ಯಯನ ಮಾಲೆ' ಎಂಬ ಹೆಸರಲ್ಲಿ ಬಂದ ಯೋಜನೆಯ ಹಿಂದೆ ಈ ವ್ಯಾಖ್ಯಾನ ಕೆಲಸ ಮಾಡಿತು. ಹೆಚ್ಚು ಕಡಿಮೆ ಜಾನಪದ ಮತ್ತು ಬುಡಕಟ್ಟು ಅಧ್ಯಯನಗಳು ಇದೇ ವ್ಯಾಖ್ಯೆಯಲ್ಲಿ ಕೆಲಸ ಮಾಡುತ್ತವೆ. ಕರ್ನಾಟಕದ ಬೇರೆಬೇರೆ ಸಮುದಾಯಗಳ ಅಧ್ಯಯನ ಗಳನ್ನು 'ಕರ್ನಾಟಕ ಸಂಸ್ಕೃತಿಯ ಅಧ್ಯಯನ' ಎಂದು ಭಾವಿಸುತ್ತವೆ. ಅದರಲ್ಲೂ ನಾಗರಿಕ ಸಮಾಜಕ್ಕೆ ದೂರವಾದ ಗ್ರಾಮೀಣ ಬುಡಕಟ್ಟು ಲೋಕದ ವಿಶಿಷ್ಟ ಹಬ್ಬ ಆಚರಣೆ ನಡಾವಳಿಗಳನ್ನು, ಜನರ ಸಂಸ್ಕೃತಿ ಎಂದು ಹುಡುಕಿ ಮಂಡಿಸುತ್ತವೆ. ಇವು 'ಕರ್ನಾಟಕ ಸಂಸ್ಕೃತಿ' ಎಂಬ ಪರಿಕಲ್ಪನೆ ಬಳಸದೆ ಇರಬಹುದು. ಆದರೆ 'ನಮ್ಮ ಸಂಸ್ಕೃತಿ ಪರಂಪರೆ' 'ಕರ್ನಾಟಕದ ಜನಜೀವನ' 'ಉಪಸಂಸ್ಕೃತಿ' ಮುಂತಾದ ಹೆಸರಿನಲ್ಲಿ ಕೊಡುವ ವಿವರಗಳೆಲ್ಲ ಜಾನಪದದಲಿತ ಬುಡಕಟ್ಟು ಲೋಕದವು. ಎಸ್ ಎಸ್ ಹಿರೇಮಠ ಅವರು ರಚಿಸಿದ 'ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ' ಇದಕ್ಕೆ ಒಳ್ಳೆಯ ಉದಾಹರಣೆ. ಕರ್ನಾಟಕ ಸಂಸ್ಕೃತಿಯ ನಿಜವಾದ ಬೇರುಗಳು ಇಲ್ಲಿನ ಮೂಲನಿವಾಸಿಗಳಾದ ದಲಿತರ ಜಾತ್ರೆ ಹಬ್ಬಗಳಲ್ಲಿವೆ, ಈ `ಸಂಸ್ಕೃತಿ'ಯು ದ್ರಾವಿಡ ಸಂಸ್ಕೃತಿಯ ಒಂದು ಭಾಗವಾಗಿದೆ ಎಂದು ಅವರು ಪ್ರತಿಪಾದಿಸುತ್ತಾರೆ. ಈ ದಿಸೆಯಲ್ಲಿ ಹಿ ಶಿ ರಾಮಚಂದ್ರೇಗೌಡ, ಪುರುಷೋತ್ತಮ ಬಿಳಿಮಲೆ, ಹಿ ಚಿ ಬೋರಲಿಂಗಯ್ಯ, ಅವರು ಬರೆಹ ಮಾಡಿದರು. ೯೦ರ ದಶಕದಲ್ಲಿ ಜನಪದ ಮಹಾಕಾವ್ಯಗಳು ಪ್ರಕಟಗೊಂಡು ಈ ನೆಲೆಯ ಚರ್ಚೆಯನ್ನು ವಿಶೇಷವಾಗಿ ಬೆಳೆಸಿದವು..

(iv) ಸಂಸ್ಕೃತಿಯನ್ನು ಜನರ ದುಡಿಮೆಗೆ ಸಂಬಂಧಿಸಿದ ಎಲ್ಲ ಮಾನಸಿಕ ಹಾಗೂ ಭೌತಿಕ ಚಟುವಟಿಕೆಯ ಭಾಗವಾಗಿ ನೋಡಬಯಸುವ ಗ್ರಹಿಕೆ. ಇದು ಕರ್ನಾಟಕ/ಕನ್ನಡ ಸಂಸ್ಕೃತಿ ಎಂದು ಮಂಡಿಸುವ ವಿವರಗಳಲ್ಲಿ ಮಾತ್ರವಲ್ಲ ವಿಧಾನಗಳಲ್ಲೂ ವಿಶೇಷತೆಯಿದೆ. ಇದು ದುಡಿಯುವ ಉತ್ಪಾದನೆಯ ಕೆಲಸಗಳ ಭಾಗವಾಗಿ ಹುಟ್ಟುವ ಫಿಲಾಸಫಿ ಸಾಹಿತ್ಯ ಆಚರಣೆ ಧರ್ಮಗಳನ್ನೂ ಗಮನಿಸಲು ಯತ್ನಿಸುತ್ತದೆ. ಇದು ಕಲೆಗಳಲ್ಲಿ ಮಾತ್ರ ಸಂಸ್ಕೃತಿ ಹುಡುಕುವುದನ್ನು ಒಪ್ಪುವುದಿಲ್ಲ. ವಿವಿಧ ಜ್ಞಾನಶಾಖೆಗಳನ್ನು ಸೇರಿಸಿಕೊಂಡಂತೆ, ಮಾನವ ಸಮಾಜದ ಎಲ್ಲ ಬಗೆಯ ಚಟುವಟಿಕೆಗಳನ್ನು ಚಾರಿತ್ರಿಕವಾಗಿ ವಿಶ್ಲೇಷಿಸುವ ಮೂಲಕ ಸಂಸ್ಕೃತಿಯ ಅರ್ಥವನ್ನು ಕಾಣಬಯಸುತ್ತದೆ. ಇಲ್ಲಿ ಉತ್ಪಾದನಾ ಸಂಬಂಧಗಳು ಹೇಗೆ ಬುದ್ಧಿ ಹಾಗೂ ಭಾವಗಳನ್ನು ರೂಪುಗೊಳಿಸುತ್ತವೆ ಎಂಬ ಅಂಶಕ್ಕೆ ಒತ್ತು ಇದೆ. ದೇವಿಪ್ರಸಾದ ಚಟ್ಟೋಪಾಧ್ಯಾಯ ಹಾಗೂ ಶಂಬಾ ಜೋಶಿಯವರ ಗಾಢ ಪ್ರಭಾವದಲ್ಲಿ ಬರೆಯುವ ಎಸ್ ಎಸ್ ಹಿರೇಮಠ ಅವರ ಕೆಲಸಗಳನ್ನು ಇಲ್ಲಿ ಉಲ್ಲೇಖಿಸಬೇಕು. ಬರಗೂರು ರಾಮಚಂದ್ರಪ್ಪ ಅವರ 'ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ' ಕೃತಿಯಲ್ಲಿರುವ ಚಿಂತನೆಗಳು ಇದೇ ಹಾದಿಯವು. ಇಂಗ್ಲಿಶಿನಲ್ಲಿ ಸಾಕಿ ಅವರು ಬರೆದ Making History ಕೃತಿ ಕೂಡ.

ಈ ಮೇಲಿನ ನಾಲ್ಕು ಮಾದರಿಗಳನ್ನು ಗಮನಿಸಿದರೆ, ಸಂಸ್ಕೃತಿ ಚಿಂತಕರು ತಮ್ಮ ಸಂಸ್ಕೃತಿ ಚಿಂತನೆಗೆ ಕನ್ನಡ ಎಂಬ ಭಾಷಾಸೂಚಕ ಹಚ್ಚುತ್ತಾರೋ ಅಥವಾ ಕರ್ನಾಟಕ ಎಂಬ ಪ್ರದೇಶ ವಾಚಿಕ ಹಚ್ಚುತ್ತಾರೋ ಎಂಬುದು ಅಷ್ಟು ಮುಖ್ಯವಲ್ಲ. ಅವರು ಸಂಸ್ಕೃತಿಯ ಯಾವ ತಾತ್ವಿಕತೆ ಯಲ್ಲಿ ಗ್ರಹಿಸುತ್ತಾರೆ ಎನ್ನುವುದೇ ಮುಖ್ಯ ಎಂದು ಗೊತ್ತಾಗುತ್ತದೆ. ಕಾರಣ, ಅವರ ಸಂಸ್ಕೃತಿ ಕುರಿತ ಗ್ರಹಿಕೆಯು ಉಳಿದ ಚಿಂತನೆಯನ್ನು ನಿಯಂತ್ರಿಸುವ ಸಂಗತಿ ಆಗಿರುವುದು. ಹೀಗಾಗಿ 'ಕನ್ನಡ' ಅಥವಾ 'ಕರ್ನಾಟಕ' ಸಂಸ್ಕೃತಿ ಎಂಬುವಕ್ಕೆ ಶಾಶ್ವತವಾದ ವ್ಯಾಖ್ಯೆಗಳಿಲ್ಲ. ಇವು ನಿರಂತರ ಪರಿವರ್ತನೆಯಾಗುತ್ತ ಬಂದಿವೆ.

IV

ಈ ಪರಿವರ್ತನೆಗೆ ಮೇಲೆ ಚರ್ಚಿಸಿದಂತೆ ಅವರು ನಂಬಿದ ಸಂಸ್ಕೃತಿ ಗ್ರಹಿಕೆ ಮೇಲು ಕಾರಣವಾದರೆ, ಈ ವ್ಯಾಖ್ಯೆಗಳ ಸೈದ್ಧಾಂತಿಕ ನಿಲುವುವನ್ನು ರೂಪಿಸಿದ ಆಯಾ ಕಾಲದ ಚಾರಿತ್ರಿಕ ಒತ್ತಡಗಳು ಮೂಲ ಕಾರಣ. ಆದ್ದರಿಂದ 'ಕನ್ನಡ/ ಕರ್ನಾಟಕ ಸಂಸ್ಕೃತಿ' ಪರಿಕಲ್ಪನೆಗಳಿಗೆ ಅರ್ಥ ತುಂಬಿದ ಚಾರಿತ್ರಿಕ ಘಟ್ಟಗಳನ್ನು ನೋಡುವ ಅಗತ್ಯವಿದೆ. ಈ ಚಾರಿತ್ರಿಕ ಘಟ್ಟಗಳನ್ನು - ವಸಾಹತು ಶಾಹಿ ಒತ್ತಡಗಳು; ಏಕೀಕರಣದ ಒತ್ತಡಗಳು; ಸ್ವತಂತ್ರ ಕರ್ನಾಟಕದ ಬೆಳವಣಿಗೆಗಳು; ಎಡ ಪಂಥೀಯ ಚಳುವಳಿ ಘಟ್ಟದ ಒತ್ತಡಗಳು ಎಂದು ಸರಳವಾಗಿ ವಿಭಜಿಸಿಕೊಂಡು ಪರಿಶೀಲಿಸಬಹುದು.

ಅ) ವಸಾಹತುಶಾಹಿ ಘಟ್ಟದ ಒತ್ತಡಗಳು

'ನಮ್ಮ ಸಂಸ್ಕೃತಿ ಯಾವುದು' ಎಂಬ ಹುಡುಕಾಟಕ್ಕೆ ಮೊದಲು ಹಚ್ಚಿದ್ದೆ ವಸಾಹತುಶಾಹಿ ಆಳ್ವಿಕೆ ಪರಿಸರ. ರಾಜಕೀಯವಾಗಿ ಆಳುತ್ತಿದ್ದ ಬ್ರಿಟಿಶರು, ಸಾಂಸ್ಕೃತಿಕವಾಗಿ ಹುಟ್ಟಿಸಿದ್ದ ಕೀಳರಿಮೆಯಿಂದ ಹೊರಬರಲು, ಇಂಗ್ಲಿಷ್ ಶಿಕ್ಷಣ ಪಡೆದ ಉಚ್ಚಜಾತಿಯ ಮಧ್ಯಮವರ್ಗವು ಮೊದಲ ಸಲಕ್ಕೆ 'ದೇಶೀ ಸಂಸ್ಕೃತಿ'ಯ ಹುಡುಕಾಟವನ್ನು ಶುರುಮಾಡಿತು. ವಾಸ್ತವದಲ್ಲಿ ಅದು ಗತದಲ್ಲಿ ಕಳೆದುಕೊಂಡದ್ದರ ಹುಡುಕಾಟವಾಗಿರಲಿಲ್ಲ. ಬದಲಿಗೆ ವಸಾಹತುಶಾಹಿ ಆಧುನಿಕತೆ ನಿರ್ಮಿಸಿದ್ದ ಆಕರ್ಷಣೆ ವಿಕರ್ಷಣೆಗಳ ಜಗ್ಗಾಟದಲ್ಲಿ ತನ್ನದೆಂಬ ಒಂದು ನಂಬಿಕೆಯ ಜಗತ್ತನ್ನು ಹೊಸದಾಗಿ ಕಟ್ಟಿಕೊಳ್ಳುವ ಪ್ರಜ್ಞಾಪೂರ್ವಕ ಕ್ರಿಯೆಯಾಗಿತ್ತು. ಈ ಕ್ರಿಯೆ ಆಳದಲ್ಲಿ ರಾಜಕೀಯ ವಾಗಿತ್ತು ಕೂಡ. ದೇಶವು ರಾಷ್ಟ್ರೀಯ ವಿಮೋಚನ ಹೋರಾಟ ಮಾಡುತ್ತಿದ್ದ ಕಾಲದಲ್ಲಿ, ಶತ್ರುವಿನ ವಿರುದ್ಧ ಆತ್ಮವಿಶ್ವಾಸ ಪಡೆಯುವ ಭಾಗವಾಗಿ, ಪ್ರಾಚೀನ ಹಾಗೂ ವರ್ತಮಾನದ ಬದುಕಿನಿಂದ ಅತ್ಯುತ್ತಮವಾದುದುನ್ನು ಆರಿಸಿ, 'ನಮ್ಮ ಸಂಸ್ಕೃತಿ ಪರಂಪರೆ' ಎಂಬ ಚಿತ್ರವನ್ನು ರಚಿಸಿಕೊಳ್ಳಬೇಕಾಯಿತು. ಕರ್ನಾಟಕದಲ್ಲೂ ಈ ಚಾರಿತ್ರಿಕ ಒತ್ತಡದಿಂದ ಗುಣಗ್ರಾಹಿ ಸಂಸ್ಕೃತಿಯ ಹುಡುಕಾಟ ಶುರುವಾಯಿತು.

ಇದರ ಉದ್ಘಾಟನೆ ಮಾಡಿದ ಮಾಸ್ತಿಯವರ 'ಕರ್ನಾಟಕದ ಜನತೆಯ ಸಂಸ್ಕೃತಿ' (೧೯೩೨)ಯು, ವಾಸ್ತವವಾಗಿ ಅವರು ಮದರಾಸು ವಿಶ್ವವಿದ್ಯಾಲಯದಲ್ಲಿ ದ್ರಾವಿಡ ಸಂಸ್ಕೃತಿ ಕುರಿತ ಕಾರ್ಯಕ್ರಮದಲ್ಲಿ ಕರ್ನಾಟಕದ ವತಿಯಿಂದ ಮಾಡಿದ ಉಪನ್ಯಾಸಗಳ ಕೃತಿ ರೂಪ.

ಈ ಉಪನ್ಯಾಸಗಳು ನಡೆದಾಗ ಬ್ರಿಟೀಶ್ ಸರಕಾರದಲ್ಲಿ ಸ್ವತ: ಮಾಸ್ತಿ ದೊಡ್ಡ ಅಧಿಕಾರಿಯಾಗಿದ್ದರು. ಮಾಸ್ತಿಯವರ ಉದ್ದೇಶ ಇಲ್ಲಿ ಸ್ಪಷ್ಟವಾಗಿದೆ. 'ನಮ್ಮ ಜನಜೀವನ ಹೊಸ ರೀತಿಯಲ್ಲಿ ಹಬ್ಬುತ್ತಿದೆ. ಈ ಹಬ್ಬುಗೆ ಶುಭಪ್ರದ ಆಗಬೇಕಾದರೆ, ಎರಡು ಅತಿಗಳನ್ನು ನಾವು ಬಿಡಬೇಕು. ಒಂದು - ಹೊರಗಿನವರು ನಮ್ಮ ಸಂಸ್ಕೃತಿಯಲ್ಲಿ ತೋರಿಸುತ್ತಿರುವ ದೋಷಗಳನ್ನೇ ನಾವು ನಂಬಿ ಬಿಡುವುದು. ಎರಡು - ನಮ್ಮ ಹಳೆಯದು ಎಂದು ಅದಕ್ಕೆ ತೀರಾ ಕಟ್ಟುಬೀಳುವುದು. ಪಾಶ್ಚಾತ್ಯ ಸಂಸ್ಕೃತಿಯ ಹೊಗಳಿಕೆಯನ್ನು ಕೇಳಿಕೇಳಿ ಆ ಜನದ ಏಳಿಗೆಯನ್ನು ನೋಡಿ ನೋಡಿ, ನಮ್ಮಲ್ಲಿ ಅನೇಕರು ನಮ್ಮ ಸಂಸ್ಕೃತಿಯ ವಿಷಯದಲ್ಲಿ ಬಹಳ ಅತೃಪ್ತರಾಗಿರುತ್ತಾರೆ. ಇಂಥವರಿಗೆ, ನಮ್ಮ ಜನಾಂಗದ ಜೀವನದಲ್ಲಿ ದೋಷಗಳಿರುವಂತೆಯೇ ಗುಣಗಳೂ ಇವೆ. ದೋಷಗಳಿಂದ ನಾವು ಕುಗ್ಗಬೇಕಾಗಿರುವಂತೆ, ಗುಣಗಳಿಂದ ನಾವು ಧೈರ್ಯಗೊಳ್ಳಬೇಕಾಗಿದೆ ಎಂಬುದನ್ನು ತೋರಿಸಬೇಕು. ನಮ್ಮ ಜನರು ಎಷ್ಟೇ ವಿನಯದಿಂದಲಾದರೂ ತಲೆಯೆತ್ತಿಕೊಂಡು ನಡೆಯುವಂತೆ ಮಾಡಬೇಕು. ಇದೆಲ್ಲ ಕಾರಣಗಳಿಂದ ನಾಡ ಸಂಸ್ಕೃತಿಯನ್ನು ಕುರಿತ ವಿಚಾರ ಅವಶ್ಯಕವಾಗಿದೆ.'

ಆ) ಏಕೀಕರಣದ ಒತ್ತಡಗಳು

ವಸಾಹತುಶಾಹಿ ಕಾಲದಲ್ಲಿ ನಡೆಯುತ್ತಿದ್ದ ವಿಮೋಚನ ಹೋರಾಟಗಳಿಗೆ ಬೇಕಾಗಿ, 'ನಾವೆಲ್ಲ ಒಂದು, ನಮ್ಮದೆಲ್ಲ ಚೆನ್ನ' ಎಂಬ ಭಾವಾನಾತ್ಮಕ ಏಕತೆಯೇನೋ ಹುಟ್ಟಿತು. ಆದರೆ ಏಕತೆಯ ಈ ಚೌಕಟ್ಟು ಪ್ರಾದೇಶಿಕ ಭಾಷೆ ಸಂಸ್ಕೃತಿ ಚರಿತ್ರೆಗಳನ್ನು ಅಮುಖ್ಯಗೊಳಿಸಿ, ವೈದಿಕ ಧರ್ಮ, ಸಂಸ್ಕೃತ ಅಥವಾ ಹಿಂದಿ ಸಾಹಿತ್ಯ ಇತ್ಯಾದಿ 'ಅಖಿಲ ಭಾರತೀಯ' ಆಕರಗಳ ಮೂಲಕ ಉದ್ಭವಿಸತೊಡಗಿತು. ಇಲ್ಲಿ ಕನ್ನಡ/ಕರ್ನಾಟಕಗಳ ಮೇಲೆ ಮಾತ್ರವಲ್ಲ, ಭಾರತದ ಸಂಸ್ಕೃತೇತರ ಭಾಷೆಗಳಿಗೆ ಅಥವಾ ಬೇರೆ ಬೇರೆ ಕೆಳಜಾತಿಯ ಸಮುದಾಯಗಳಿಗೆ ಅತ್ಯಂತ ಕಡಿಮೆ ಜಾಗವಿತ್ತು. ಇದಕ್ಕೆ ಕನ್ನಡಿಗರಾದ ಶ್ರೀಕಂಠಶಾಸ್ತ್ರಿ ಅವರು ಬರೆದ 'ಭಾರತೀಯ ಸಂಸ್ಕೃತಿ' ಎಂಬ ಕೃತಿ ಸಾಕ್ಷಿ. (ನಂತರ ಅನಕೃ ಸಂಪಾದಿಸಿದ 'ಭಾರತೀಯ ಸಂಸ್ಕೃತಿ ದರ್ಶನ' ಕೃತಿಯೂ ಹೇಗೆ ವೈದಿಕತೆಯ ಭಾರದಿಂದ ಕೂಡಿದ್ದು ಕರ್ನಾಟಕತನವು ಗೈರುಹಾಜರಾಗಿದೆ ಎಂಬುದಕ್ಕೆ ಸಾಕ್ಷಿ.) ತಿಪ್ಪೇರುದ್ರಸ್ವಾಮಿಯವರು 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಕೃತಿ ಬರೆದಾಗಲೂ ಮೊದಲ ಅಧ್ಯಾಯವು 'ಭಾರತೀಯ ಸಂಸ್ಕೃತಿ' ಎಂದೇ ಆರಂಭವಾಗುತ್ತದೆ. ಈ ಬಗೆಯ ಚೌಕಟ್ಟು ಪ್ರಾದೇಶಿಕ ಆಶೋತ್ತರಗಳಿಗಾಗಿ, ಅದರಲ್ಲೂ ಕರ್ನಾಟಕದ ಏಕೀಕರಣ ಚಳುವಳಿಗೆ ಸಹಾಯಕವಾಗಿರಲಿಲ್ಲ. ಹೀಗಾಗಿ ಪ್ರಾದೇಶಿಕ ಆಶೋತ್ತರಗಳನ್ನು ಈಡೇರಿಸುವ ಉಪಯುಕ್ತ ವಾದ ಸಂಸ್ಕೃತಿ ಚೌಕಟ್ಟನ್ನು ಕಟ್ಟಿಕೊಳ್ಳುವುದು ಅನಿವಾರ್ಯವಾಯಿತು. ವಸಾಹತುಶಾಹಿ ಆಳ್ವಿಕೆ ಹಾಗೂ ಅಖಿಲ ಭಾರತೀಯ ಸಂಸ್ಕೃತಿಯ ಚೌಕಟ್ಟು ಎರಡನ್ನೂ ಏಕಕಾಲಕ್ಕೆ ವಿರೋಧಿಸುತ್ತ, ಕನ್ನಡ ಭಾಷೆ, ಕೆಳಜಾತಿಗಳ ಚರಿತ್ರೆಗಳ ಮೂಲಕ ಕರ್ನಾಟಕವನ್ನು ಕಟ್ಟಿಕೊಳ್ಳುವ ಕೆಲಸ ಮಾಡಬೇಕಾಯಿತು. ಇದಕ್ಕೆ ತಕ್ಕಂತೆ 'ಕರ್ನಾಟಕ'/'ಕನ್ನಡ' ಸಂಸ್ಕೃತಿ ಪರಿಕಲ್ಪನೆಗಳು ಮರುರೂಪು ಪಡೆಯತೊಡಗಿದವು.

ಈ ಬಗೆಯ ಕೆಲಸವನ್ನು ಮೊದಲಿಗೆ ಶುರುಮಾಡಿದವರು ಆಲೂರು ವೆಂಕಟರಾಯರು. ಕರ್ನಾಟಕ ಏಕೀಕರಣದ ಪ್ರಮುಖ ಹೋರಾಟಗಾರರಾದ ಆಲೂರರು ವಸಾಹತುಶಾಹಿ ಆಳ್ವಿಕೆಗೆ ವಿರೋಧಿಯಾಗಿದ್ದರು. ಭಾರತೀಯ ಎಂಬ ಹೆಸರಿನಲ್ಲಿ ಹೇರಲ್ಪಡುತ್ತಿರುವ ಅಖಿಲ ಭಾರತೀಯ ಚಿಂತನೆಯ ಒತ್ತಡವನ್ನು ವಿರೋಧಿಸಿದ್ದರು. ಅವರಲ್ಲಿ ಭಾರತೀಯ ಎಂಬ ಕೇಂದ್ರೀಕೃತ ಚೌಕಟ್ಟಿನಿಂದ ತಪ್ಪಿಸಿಕೊಳ್ಳುವುದು 'ಕರ್ನಾಟಕ ಸಂಸ್ಕೃತಿ'ಯ ಹೊಸವ್ಯಾಖ್ಯಾನಕ್ಕೆ ಪ್ರೇರಿಸಿದ ಪ್ರಮುಖ ಸಂಗತಿಯಾಯಿತು. 'ಭಾರತಜನನಿಯ ತನುಜಾತೆಯ ಮಗಳಾಗಿ ಕನ್ನಡ ಮಗಳು ಇದ್ದಾಳೆ' ಎಂಬ ಸಂಯುಕ್ತ ಕಲ್ಪನೆಯಲ್ಲಿ ಕುವೆಂಪು ಪದ್ಯ ಬರೆದಿದ್ದರಷ್ಟೆ. ಆಲೂರು ವೆಂಕಟರಾಯರು ತಮ್ಮ 'ಕರ್ನಾಟಕದ ಗತವೈಭವ' (೧೯೧೭) 'ಕರ್ನಾಟಕತ್ವದ ವಿಕಾಸ' (೧೯೫೭) ಕೃತಿಗಳನ್ನು 'ಕರ್ನಾಟಕಾಂತರ್ಯಾಮಿಯಾದ ಭಾರತಿದೇವಿಗೆ' ಅರ್ಪಣೆ ಮಾಡುತ್ತಾರೆ. ಕುವೆಂಪು ಅವರಲ್ಲಿ ಭಾರತ ಜನನಿ ಮೊದಲು. ಇಲ್ಲಿ ಕರ್ನಾಟಕ ಮಾತೆ ಮೊದಲು, ನಂತರ ಭಾರತಿದೇವಿ. ಕುವೆಂಪು ಅವರಲ್ಲಿ ಇವರಿಬ್ಬರು ತಾಯಿ ಮಗಳಾದರೆ, ಇಲ್ಲಿ ಸ್ವತಂತ್ರ ದೇವಿಯರು. ಪ್ರಾದೇಶಿಕತೆ ಇಲ್ಲಿ ಪಡೆಯುತ್ತಿರುವ ಪ್ರಾಧ್ಯಾನಕ್ಕೂ 'ಕರ್ನಾಟಕತ್ವದ ವಿಕಾಸ'ವು ಏಕೀಕರಣ ಗೊಂಡ ನಂತರ ರಚನೆಯಾಗಿರುವುದಕ್ಕೂ ಸಂಬಂಧವಿದೆ. ಆಲೂರರು 'ಕರ್ನಾಟಕ ಸಂಸ್ಕೃತಿ' ಎಂಬುದಕ್ಕೆ ಬದಲಾಗಿ 'ಕರ್ನಾಟಕತ್ವ' ಎಂಬ ಪದ ಬಳಸುತ್ತಾರೆ. ಅದೊಂದು ತತ್ವ. ಈ ತತ್ವವು ವಿಶ್ವ ಅಥವಾ ಭಾರತೀಯ ಕೇಂದ್ರದ ಜತೆ ಸಂಬಂಧ ಸ್ಥಾಪಿಸಿಕೊಳ್ಳುತ್ತಲೇ, ತನ್ನ ಪ್ರತ್ಯೇಕ ವಿಶಿಷ್ಟತೆಯನ್ನು ಸ್ಥಾಪಿಸಿಕೊಳ್ಳಬೇಕು ಎಂದು ಪ್ರತಿಪಾದಿಸುತ್ತಾರೆ. ಇಷ್ಟೆಲ್ಲ ಆದರೂ ಆಲೂರರ 'ಕರ್ನಾಟಕತ್ವ'ದ ಪರಿಕಲ್ಪನೆಯು ಸತ್ವದಲ್ಲಿ 'ವೈದಿಕಹಿಂದೂ' ಕೇಂದ್ರದಿಂದ ಮತ್ತು ಗತಕಾಲದ ರಾಜಕೀಯ ಇತಿಹಾಸದ ವೈಭವೀಕರಣದಿಂದ ಬಿಡಿಸಿಕೊಳ್ಳಲಿಲ್ಲ.

ಆಲೂರರಿಗೆ ಆಗದ್ದು ಶಂಬಾ ಅವರಿಂದ ಸಾಧ್ಯವಾಯಿತು. ಅವರು ತಮ್ಮ 'ಕಣ್ಮರೆಯಾದ ಕನ್ನಡ' 'ಕನ್ನಡದ ನೆಲೆ' 'ಕಂನುಡಿಯ ಹುಟ್ಟು' 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ' 'ಕನ್ನಡದ ನೆಲೆ'-ಮುಂತಾದ ಕೃತಿಗಳಲ್ಲಿ, ಕನ್ನಡ ಭಾಷೆ, ಕನ್ನಡಿಗ ಸಮುದಾಯ ಹಾಗೂ ಕನ್ನಡ ದೈವಗಳ ಮೂಲವನ್ನು ಶೋಧಿಸುತ್ತ ಹೊರಟರು. ಅವು ಹೇಗೆ ಅಖಿಲ ಭಾರತೀಯವಾಗಿ ಹಬ್ಬಿದ್ದವು ಎಂಬುದನ್ನು ಹುಡುಕಲು ಶುರುಮಾಡಿದರು. ಇದು ಮಾಸ್ತಿ ದೇವುಡು ಅವರಿಗಿಂತ ಭಿನ್ನ ಹಾದಿ. ದೇವುಡು ರೈತರು ಕೈಕಾಲು ಮುಖತೊಳೆದು ಸೂರ್ಯನಿಗೆ ನಮಸ್ಕಾರ ಮಾಡುವುದರ ಮೂಲವನ್ನು ಗಾಯತ್ರಿ ಮಂತ್ರದಲ್ಲಿ ದೇವುಡು ಗುರುತಿಸುತ್ತಾರೆ. 'ಕರ್ನಾಟಕ ಸಂಸ್ಕೃತಿಯು ವೈದಿಕ ಸಂಸ್ಕೃತಿಯ ರೂಪಾಂತರ ಅಥವಾ ಪ್ರತಿಬಿಂಬ' ಎಂಬುದು ಅವರ ಖಚಿತ ನಂಬಿಕೆ. ಆದರೆ ಶಂಬಾ ಅವರು ಉದ್ದೇಶಪೂರ್ವಕವಾಗಿ ಬರೆದ 'ಮರಾಠಿ ಸಂಸ್ಕೃತಿ' (೧೯೭೭)ಕೃತಿಯಲ್ಲಿ, ಆರ್ಯ ಮರಾಠಿ ಸಂಸ್ಕೃತಿಯ ಸತ್ವಗಳನ್ನು ಕರ್ನಾಟಕ ಸಂಸ್ಕೃತಿ ರೂಪಿಸಿದೆ ಎಂದು ಪ್ರತಿಪಾದಿಸುತ್ತಾರೆ. ಅವರು ೧೯೩೬ರಲ್ಲಿ ಬರೆದ 'ಕರ್ನಾಟಕದ ವೀರಕ್ಷತ್ರಿಯರು' ಕೃತಿಗೆ ಎರಡನೇ ಮುದ್ರಣದಲ್ಲಿ 'ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ' ಭಾಗ-೨'(೧೯೬೬) ಎಂಬ ಹೆಸರನ್ನು ಕೊಡುವುದು ಮಾರ್ಮಿಕ ಸಂಗತಿಯಾಗಿದೆ.

೩) ಸ್ವತಂತ್ರ ಕರ್ನಾಟಕದ ಬೆಳವಣಿಗೆಗಳು

ಕರ್ನಾಟಕದ ಏಕೀಕರಣ (೧೯೫೬) ಆದ ಮೇಲೆ ಕೆಲವು ಪ್ರಮುಖ ಬೆಳವಣಿಗೆಗಳೂ ಆದವು. ಕನ್ನಡಕ್ಕೆ ಆಡಳಿತ ಹಾಗೂ ಶಿಕ್ಷಣದ ಭಾಷೆಯಾಗಿ ಮಾಡುವ ಯತ್ನಗಳು ಜೋರು ಹಿಡಿದವು. ಅದರಲ್ಲೂ ಮೈಸೂರು ವಿಶ್ವವಿದ್ಯಾಲಯವು ಕುವೆಂಪು ಉಪಕುಲಪತಿಗಳಾಗಿದ್ದ ಕಾಲದಲ್ಲಿ ಶುರುಮಾಡಿದ ಯತ್ನಗಳು ವ್ಯಾಪಕ ಪ್ರಭಾವ ಬೀರಿದವು. ಕರ್ನಾಟಕದ ಬೇರೆಬೇರೆ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷೆ ಸಾಹಿತ್ಯ ಜಾನಪದಗಳ ಚರಿತ್ರೆಗಳ ಅಧ್ಯಯನಗಳು ಶುರುವಾದವು. ಕರ್ನಾಟಕ ಸಂಸ್ಕೃತಿಯ ವ್ಯಾಖ್ಯೆಗೆ ಹೊಸಲೋಕದ ವಿವರಗಳು ದಕ್ಕತೊಡಗಿದವು.

ಆದರೂ ಕನ್ನಡ ಮತ್ತು ಕರ್ನಾಟಕದ ಅನೇಕ ಮೂಲಭೂತ ಸಮಸ್ಯೆಗಳು ಬಗೆಹರಿಯಲಿಲ್ಲ. ಬದಲಾಗಿ, ಹೊಸ ಸಮಸ್ಯೆಗಳು ಹುಟ್ಟಿಕೊಂಡವು. ಭಾಷಾವಾರು ರಾಜ್ಯಗಳ ಘಟನೆಯಾದ ಬಳಿಕವೂ ಆಯಾ ರಾಜ್ಯ ಭಾಷೆಗಳಿಗೆ ಆಡಳಿತದಲ್ಲಿ ಶಿಕ್ಷಣದಲ್ಲಿ ಸೂಕ್ತವಾದ ಸ್ಥಾನಗಳು ಸಿಗಲಿಲ್ಲ. ಕೇಂದ್ರ ಸರಕಾರವು ತನ್ನ ಸಂವಿಧಾನದತ್ತ ಅಧಿಕಾರ ಬಳಸಿ, ಜನಪ್ರಿಯ ಪ್ರಾದೇಶಿಕ ಸರಕಾರಗಳನ್ನು ನಿಯಂತ್ರಿಸುವ, ಕೆಲಸಗಳು ನಡೆದವು. ನೆರೆಯ ಚೀನಾ ಪಾಕಿಸ್ತಾನಗಳ ಜತೆ ಭಾರತ ನಡೆಸಿದ ಯುದ್ಧಗಳು ಕೂಡ ಭಾರತ ಭಾರತೀಯತೆ ರಾಷ್ಟ್ರಭಾಷೆ ರಾಷ್ಟ್ರಭಕ್ತಿ ಎಂಬ ಪರಿಕಲ್ಪನೆಗಳಿಗೆ ಪ್ರಾಮುಖ್ಯತೆ ಹೆಚ್ಚಿಸಿ, ಪ್ರಾದೇಶಿಕತೆಯನ್ನು ಒಂದು ದೇಶವಿರೋಧಿ ಕಲ್ಪನೆ ಎಂಬ ಭಾವ ಮೂಡಿಸಿದವು. 'ರಾಷ್ಟ್ರಭಾಷೆ' ಎಂದು ಹಿಂದಿಯನ್ನು ದಿಲ್ಲಿ ಸರಕಾರವು ವಿವಿಧ ಉಪಾಯಗಳಲ್ಲಿ ಹೇರತೊಡಗಿತು. 'ರಾಷ್ಟ್ರೀಯ' ಎಂಬ ಹೆಸರಿನಲ್ಲಿ ಹಿಂದಿ ಕಾರ್ಯಕ್ರಮಗಳು ರೇಡಿಯೊ ದೂರದರ್ಶನಗಳಲ್ಲಿ ಆಕ್ರಮಿಸಿ ಕೊಳ್ಳಲಾರಂಭಿಸಿದವು. ರಾಷ್ಟ್ರೀಯತೆಯು ೧೯೪೭ರ ಹಿಂದೆ ಬ್ರಿಟಿಶರ ವಿರುದ್ಧವಾಗಿದ್ದರೆ, ೧೯೪೭ನಂತರ ಭಾರತದಲ್ಲಿಯೇ ಕೆಲವು ಧಾರ್ಮಿಕ ಸಮುದಾಯಗಳ ವಿರುದ್ಧ, ಭಾರತದ ವಿಭಿನ್ನ ಪ್ರಾಂತೀಯ ಭಾಷೆ ಸಂಸ್ಕೃತಿಗಳು ಎತ್ತುತ್ತಿದ್ದ ಹಕ್ಕಿನ ಪ್ರಶ್ನೆಯನ್ನು ದಮನ ಮಾಡುವ ಕಾರಣಕ್ಕಾಗಿ ಬಳಕೆಯಾಗ ತೊಡಗಿತು. 'ರಾಷ್ಟ್ರೀಯ ಏಕತೆ'ಗಳ ಹೆಸರಿನಲ್ಲಿ ಒಂದು ಭಾಷೆಯನ್ನು 'ಭಾರತೀಯ ಸಂಸ್ಕೃತಿ' ಹೆಸರಲ್ಲಿ ಒಂದು ಸಂಸ್ಕೃತಿಯನ್ನು ಹೇರುವಂತೆ ಕಾಣತೊಡಗಿತು.

ಇತ್ತ ಬೆಂಗಳೂರನ್ನು ಒಳಗೊಂಡಂತೆ ಕರ್ನಾಟಕದ ದೊಡ್ಡ ಪಟ್ಟಣಗಳಲ್ಲಿ ಹೊರರಾಜ್ಯಗಳ ಬಂಡವಾಳಿಗರು ವಲಸೆ ಬಂದು, ಇಲ್ಲಿನ ವ್ಯಾಪಾರ ವಹಿವಾಟು ನಿರ್ವಹಿಸತೊಡಗಿದರು. ಕನ್ನಡಿಗರಿಗೇ ಉದ್ಯೋಗ ಕೊಡ ಬೇಕೆನ್ನುವ ಸರೋಜಿನಿ ಮಹಿಷಿ ಆಯೋಗ ನೇಮಕ ಮಾಡ ಬೇಕಾಯಿತು. ಕಾಸರಗೋಡು ಕರ್ನಾಟಕಕ್ಕೆ ಸಿಗಲಿಲ್ಲ. ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಗಡಿವಿವಾದದ ಹೆಸರಿನಲ್ಲಿ ಹುಟ್ಟಿಕೊಂಡ ಮಹಾರಾಷ್ಟ್ರ ಏಕೀಕರಣ ಸಮಿತಿಯು ಕರ್ನಾಟಕ ವಿಧಾನಸಭೆಗೆ ಸದಸ್ಯರನ್ನು ಆರಿಸಿಕಳಿಸುವುದು, ಅವರು 'ಜೈಮಹಾರಾಷ್ಟ್ರ' ಎಂದು ಘೋಷಣೆ ಕೂಗುವುದು ನಡೆದವು. ಮುಂಬೈನಲ್ಲಿ ಶಿವಸೇನೆ ಕನ್ನಡಿಗರ ಮೇಲೆ ಹಲ್ಲೆ ಮಾಡಿದ ಘಟನೆಗಳು ನಡೆದವು. ಇವೆಲ್ಲವೂ ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ವ್ಯಾಪಕವಾದ ಕನ್ನಡಪರ ಸಂಘಟನೆಗಳು ಹಾಗೂ 'ಕನ್ನಡ' 'ಕರ್ನಾಟಕ' ಎಂಬ ಹೆಸರಿನ ಪ್ರಾದೇಶಿಕ ಪಕ್ಷಗಳು ಹುಟ್ಟಲು

ಕಾರಣವಾದವು. ಇವು ಕನ್ನಡದ ನೆಲ ಜನ ಭಾಷೆಗಳ ಬಗ್ಗೆ ಆತಂಕದ ಚಿತ್ರವನ್ನು ಕಟ್ಟಿಕೊಂಡು ಕ್ರಿಯಾಶೀಲವಾದವು. ಕನ್ನಡದ ನ್ಯಾಯಬದ್ಧ ಸ್ಥಾನ ಮಾನಕ್ಕಾಗಿ ಗೋಕಾಕ ಚಳುವಳಿಯಂತಹ ಭಾಷಾಹೋರಾಟಗಳು ಹುಟ್ಟಿದವು. ಎರಡನೇ ಸಲ ಪ್ರಾದೇಶಿಕ ಭಾಷೆ ಹಾಗೂ ಪ್ರಾಂತ್ಯಗಳ ಹೆಸರಿನಲ್ಲಿ ಸಂಸ್ಕೃತಿ ಹುಡುಕಾಟಕ್ಕೆ ಶುರುವಾಯಿತು. ಚಿದಾನಂದಮೂರ್ತಿ ಅವರಂತಹ ಸಂಶೋಧಕರು, ಕನ್ನಡ ಚಳುವಳಿಗೆ ಇಳಿದರು. ಅವರು 'ಕನ್ನಡ ಸಂಸ್ಕೃತಿ:ನಮ್ಮ ಹೆಮ್ಮೆ' (೧೯೮೭) ಪುಸ್ತಕ ಬರೆದಿದ್ದನ್ನೂ, ಅದು ಜನಪ್ರಿಯವಾಗಿದ್ದನ್ನೂ ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಅವರ ಈ ಕೃತಿಯ ತುಂಬ ಆತಂಕ ಹಾಗೂ ಪ್ರತಿಕಾರದ ದನಿ ತುಂಬಿದೆ. ಅಮಾಯಕರಾದ ನಾವು ಹಲ್ಲೆಗೆ ಒಳಗಾಗಿದ್ದೇವೆ. ನಮಗೆ ವೈಭವದ ಗತ ಕಾಲವಿತ್ತು. ಅದನ್ನು ನೆನೆಯುವ ಮೂಲಕ ನಮ್ಮ ವರ್ತಮಾನದ ಎದುರಾಳಿಗಳನ್ನು ಮುಖಾಮುಖಿ ಮಾಡಬೇಕು ಎಂಬ ದನಿಯಿದೆ. ವಿಚಿತ್ರ ಎಂದರೆ, ಆಲೂರರು 'ಕರ್ನಾಟಕದ ಗತವೈಭವ'ದಲ್ಲಿ ಆರಂಭಿಸಿದ ಶೈಲಿ ಮತ್ತು ದೃಷ್ಟಿಕೋನವು, ಅವರ ಸಮಕಾಲೀನರಾದ ಮಾಸ್ತಿ ಹಾಗೂ ದೇವುಡು ಅವರಲ್ಲಿ ಮುಂದುವರೆಯಲಿಲ್ಲ. ಅರ್ಧ ಶತಮಾನದ ನಂತರ ಚಿದಾನಂದಮೂರ್ತಿ ಅವರಲ್ಲಿ ಕಾಣಿಸಿಕೊಂಡಿತು!

ವಾಸ್ತವದಲ್ಲಿ ಕರ್ನಾಟಕ ಅದರಲ್ಲೂ ಬೆಂಗಳೂರು ಕಂಡ ಈಮೇಲಿನ ಬೆಳವಣಿಗೆಗಳು ಆರ್ಥಿಕ ರಾಜಕೀಯ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಸಂಗತಿಗಳಾಗಿದ್ದವು. ಅಂದರೆ ಜಾಗತಿಕ ಬಂಡವಾಳದ ವಲಸೆ, ಇದಕ್ಕೆ ಪೂರಕವಾಗಿದ್ದ ರಾಜ್ಯ ಮತ್ತು ಕೇಂದ್ರ ಸರಕಾರದ ನೀತಿಗಳು, ಜಾಗತಿಕ ಆರ್ಥಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇದರ ವಿಶ್ಲೇಷಣೆ ನಡೆಯ ಬೇಕಿತ್ತು. ಅದರಲ್ಲೂ ಇಂಗ್ಲಿಷ್ ಮಾಧ್ಯಮ ಶಾಲೆಗಳ ಹೆಚ್ಚಳಕ್ಕೆ ಕಾರಣ ಕನ್ನಡಿಗರ ನಿರಭಿ ಮಾನವಾಗಿರದೆ, ಇಂಗ್ಲಿಷು ಜಾಗತಿಕ ಬಂಡವಾಳದ ಭಾಷೆಯಲ್ಲಿ ವ್ಯಾಪಕವಾಗುತ್ತಿದ್ದುದು ಕಾರಣವಾಗಿತ್ತು. ಆದರೆ ಇವನ್ನೆಲ್ಲ ಕನ್ನಡ ಭಾಷೆ ಸಂಸ್ಕೃತಿಗಳ ಮೇಲಿನ ಆಕ್ರಮಣ, ಕನ್ನಡಿಗರ ಅಭಿಮಾನ್ಯ ಶೂನ್ಯತೆ ಎಂಬ ಭಾವುಕ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲಾಯಿತು. ಇದು ಕನ್ನಡ/ಕರ್ನಾಟಕ ಸಂಸ್ಕೃತಿಯನ್ನು ಮೂಲಭೂತವಾದಿ ನೆಲೆಯಲ್ಲಿ ಕಟ್ಟಿಕೊಳ್ಳಲು ಪ್ರೇರಿಸಿತು. ಕನ್ನಡಕ್ಕೆ ಎದುರಾಳಿಯನ್ನಾಗಿ ತಮಿಳು/ತಮಿಳರನ್ನು ಉರ್ದು/ಮುಸ್ಲಿಮರನ್ನು ಕಟ್ಟಿಕೊಳ್ಳುವ ಯತ್ನಗಳು ಜನಪ್ರಿಯವಾದವು.

ಈ) ಎಡಪಂಥೀಯ ಚಳುವಳಿ ಹುಟ್ಟು

ಆದರೆ ಇದೇ ಸಂದರ್ಭದಲ್ಲಿ ಮೇಲಿನ ವಿದ್ಯಮಾನಗಳನ್ನು ಆರ್ಥಿಕ ರಾಜಕೀಯ ನೆಲೆಯಿಂದ ವಿಶ್ಲೇಷಿಸುವ ಚಿಂತನೆಗಳು ಹುಟ್ಟತೊಡಗಿದವು. ಅದರಲ್ಲೂ ದಲಿತ ಬಂಡಾಯ ಸಾಹಿತ್ಯ ಚಳುವಳಿ ಜತೆಯಲ್ಲೇ ಬಲವಾದ ಕನ್ನಡ/ ಕರ್ನಾಟಕಗಳ ಪರವಾದ ಚಿಂತನೆ ಹುಟ್ಟಿತು. ಆದರೆ ಇದು ಮಾಸ್ತಿ ಅಥವಾ ಆಲೂರರಲ್ಲಿ ಇದ್ದಂತೆ ವೈದಿಕವಾಗಿರದೆ, ದಲಿತ ಕೆಳಜಾತಿ ಮುಸ್ಲಿಂ ಮಹಿಳೆ ಬುಡಕಟ್ಟು, ಮುಂತಾದ ದಮನಿತ/ ನಿರ್ಲಕ್ಷಿತ ಸಮುದಾಯಗಳ ಜೀವನ ವಿವರಗಳನ್ನು ಒಳಗೊಳ್ಳುತ್ತ ಹೋಯಿತು. ಜಾನಪದದ ಆಕರಗಳಿಗೆ ಇದು ಹೋಯಿತು.

ಇದು ದೃಷ್ಟಿಕೋನದಲ್ಲಿ ಎಡಪಂಥೀಯವಾಗಿದ್ದು, ಆಳುವ ವರ್ಗದ ಪ್ರಧಾನ ಸಂಸ್ಕೃತಿಯಿಂದ ದುಡಿಯುವ ಸಮುದಾಯಗಳ ಬದುಕಿನತ್ತ ಚಲಿಸಲು ಯತ್ನಿಸಿತು. ಹೀಗಾಗಿ ವೈದಿಕ ಸಂಸ್ಕೃತಿ, ದಿಲ್ಲಿಯ ಕೇಂದ್ರೀಕರಣದ ನೀತಿಗಳನ್ನು ತನ್ನ ಎದುರಾಳಿಯನ್ನಾಗಿ ಭಾವಿಸಿತು. ಇದೇ ದಶಕಗಳಲ್ಲಿ ಜಾಗತಿಕವಾಗಿ ದೇಶಿಯವಾಗಿ ಹೊಸ ಬೆಳವಣಿಗೆ ಆದವು. ಸಾಮ್ರಾಜ್ಯಶಾಹಿ ದೇಶಗಳು ಜಾಗತೀಕರಣ ಎಂಬ ಹೆಸರಲ್ಲಿ ಹೊಸ ಆರ್ಥಿಕ ನೀತಿಯ ಪ್ರಕ್ರಿಯೆ ಶುರುಮಾಡಿದವು. ಇದರಿಂದ ಬಹುರಾಷ್ಟ್ರೀಯ ಕಂಪನಿಗಳು ಹೆಚ್ಚುಹೆಚ್ಚು ಆಗಮನವಾಗುವುದು, ಇಂಗ್ಲಿಷಿನ ಮತ್ತಷ್ಟು ಹೇರಿಕೆ, ಕನ್ನಡದಂತಹ ದೇಶೀ ಭಾಷೆಗಳ ಹಿಂಜರಿಕೆ, ಪ್ರಾದೇಶಿಕತೆಗೆ ಯಾವ ಅರ್ಥವೂ ಇಲ್ಲದ ಜಾಗತಿಕ ಹಳ್ಳಿಯ ಕಲ್ಪನೆಗಳು ಇವೆಲ್ಲ ಒಂದು ಬಗೆಯ ಆತಂಕವನ್ನು ಹುಟ್ಟಿಸಿದವು. ಇದರಿಂದ ಸರಕಾರದ ಮೇಲೆ ಪ್ರಾದೇಶಿಕ ಭಾಷೆ ಸಂಪತ್ತು ಸಂಸ್ಕೃತಿ ರಕ್ಷಣೆಗೆ ಬೇಕಾದ ನಿಲುವು ತಾಳಲು ಒತ್ತಡ ನಿರ್ಮಾಣವಾಯಿತು. ಗೋಕಾಕ ಚಳುವಳಿ ಹುಟ್ಟಿಸಿದ ಕನ್ನಡಪರ ಒತ್ತಡಗಳು ಕನ್ನಡದ ಗಡಿ ಸಮಸ್ಯೆಗೆ ಕಾವಲು ಸಮಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸಂಸ್ಕೃತಿ ಶೋಧಕ್ಕೆ ಕನ್ನಡ ವಿಶ್ವವಿದ್ಯಾಲಯ ಇವೆಲ್ಲ ಶುರುವಾಗಲು ಕಾರಣವಾದವು.

ಭಾರತದಲ್ಲಿ ಕೋಮುವಾದದ ಬೆಳವಣಿಗೆಯು ಕರ್ನಾಟಕ ಸಂಸ್ಕೃತಿಯನ್ನು ಅವೈದಿಕ ನೆಲೆಗೆ ಹೋಗಿ ಹುಡುಕುವುದಕ್ಕೆ ಪ್ರೇರಿಸಿತು. ಮತ್ತೊಮ್ಮೆ ಶಂಬಾ ಜೋಶಿಯವರ ಕರ್ನಾಟಕ ಸಂಸ್ಕೃತಿ ಹುಡುಕಾಟವು ಮಾದರಿಯಾಯಿತು. ಎಸ್ ಎಸ್ ಹಿರೇಮಠ ಅವರ 'ಕರ್ನಾಟಕ ಸಂಸ್ಕೃತಿ ಪರಂಪರೆ' ಪುಸ್ತಕವು ಶಂಬಾ ಅವರ ಚಿಂತನೆಯಿಂದ ಗಾಢವಾಗಿ ಪ್ರಭಾವಿತ ಆಗಿರುವುದನ್ನು ಗಮನಿಸಬೇಕು. ಕನ್ನಡ ಅಥವಾ ಕರ್ನಾಟಕ ಸಂಸ್ಕೃತಿಯ ಹೊಸ ವ್ಯಾಖ್ಯೆಗಳು ಅಂತಿಮವಾಗಿ ಕರ್ನಾಟಕದ ದುಡಿಯುವ ವರ್ಗದ ವಿಮೋಚನೆಯನ್ನು ಚಿಂತಿಸಿದವು. ಇದೇ ಹಂತದಲ್ಲಿ ಕರ್ನಾಟಕ ವಿಮೋಚನ ರಂಗವು ಈ ಹಂತದಲ್ಲಿ ಕನ್ನಡ ಮತ್ತು ಕರ್ನಾಟಕದ ಪರವಾದ ಚಟುವಟಿಕೆಗಳನ್ನು ಮಾಡಲೆಂದು ಹುಟ್ಟಿಕೊಂಡಿತು: ಇದರಿಂದ ವಿಶಾಲ ದುಡಿಯುವ ವರ್ಗದ ಜೀವನ ವಿವರಗಳನ್ನು ಕರ್ನಾಟಕ ಸಂಸ್ಕೃತಿಯು ಒಳಗೊಳ್ಳತೊಡಗಿತು. ಹಿಂದಿ ಇಂಗ್ಲಿಷ್ ವಿರುದ್ಧ ವಾಗಿ ಕನ್ನಡವನ್ನೂ ಕರ್ನಾಟಕದ ಜನಭಾಷೆಗಳನ್ನು ಅದು ಒಳಗೊಳ್ಳ ತೊಡಗಿತು. ಕನ್ನಡ/ಕರ್ನಾಟಕ ಸಂಸ್ಕೃತಿಯನ್ನು ಜಾಗತೀಕರಣ ಹಾಗೂ ಕೋಮುವಾದಗಳ ವಿರೋಧದ ನೆಲೆಯಲ್ಲಿ ಮಂಡಿಸ ತೊಡಗಿತು. ಟಿಪ್ಪುವನ್ನು ವಸಾಹತುಶಾಹಿ ಶಕ್ತಿಗಳ ವಿರುದ್ಧ ಹೋರಾಡಿದ ಕರ್ನಾಟಕವನ್ನು ಕಟ್ಟುವ ಕನಸುಗಾರ ಆಡಳಿತಗಾರನೆಂಬ ಹೊಸವ್ಯಾಖ್ಯಾನ ಬಂದವು. ಇವೆಲ್ಲ ಕರ್ನಾಟಕ ಸಂಸ್ಕೃತಿಯನ್ನು ಒಂದು ಸ್ವತಂತ್ರ ರಾಷ್ಟ್ರೀಯತೆಯ ಭಾವವನ್ನಾಗಿ ವ್ಯಾಖ್ಯಾನಿಸಲು ಪ್ರೇರಿಸಿದವು. ಇದನ್ನು ಹೊಸ ಜಾಗತಿಕ ವಿದ್ಯಮಾನದ ವಿರುದ್ಧ ಹೋರಾಡುವ ತತ್ವವನ್ನಾಗಿಯೂ ರೂಪಿಸಲು ಯತ್ನಿಸಿದವು. 'ಭಾರತೀಯ ಸಂಸ್ಕೃತಿ' ಎಂಬುದು ವಾಸ್ತವದಲ್ಲಿ ಇಲ್ಲ. ಅದು ಕರ್ನಾಟಕ ಸಂಸ್ಕೃತಿಯಂತಹ ಅನೇಕ ಪ್ರಾದೇಶಿಕ ಸಂಸ್ಕೃತಿಗಳ ಮೊತ್ತವೇ ಆಗಿದ್ದು, ಸ್ವತಂತ್ರವಾಗಿ ಅದಿಲ್ಲ ಎನ್ನುವ ವಾದಗಳು ಚಾಲ್ತಿಗೆ ಬಂದವು. ಈ ಸ್ವತಂತ್ರ ಎಂಬುದಕ್ಕೆ ಜನಪರ ರಾಜಕಾರಣದ ಆಯಾಮ ಕೊಡಲು ಸಹಜವಾಗಿ ಆಲೂರು

ವೆಂಕಟರಾಯರಿಗೆ ಸಾಧ್ಯವಾಗಿರಲಿಲ್ಲ. ಅದಕ್ಕೆ ಸಮಾಜವಾದಿ ಹಾಗೂ ಫೆಡರಲ್ ಆಯಾಮವನ್ನು ಕೊಡಲು ಈ ಘಟ್ಟದ ಚಿಂತನೆಗಳು ಯತ್ನಿಸಿದವು.

V

ಹೀಗೆ ಮಾಸ್ತಿಯವರ 'ಕರ್ನಾಟಕದ ಜನತೆಯ ಸಂಸ್ಕೃತಿ'ಯಿಂದ ಹಿಡಿದು ಇಲ್ಲಿವರೆಗೆ, ಕನ್ನಡ/ಕರ್ನಾಟಕ ಸಂಸ್ಕೃತಿಯ ವ್ಯಾಖ್ಯೆಗಳು ೨೦ನೇ ಶತಮಾನದಲ್ಲಿ ನಿರಂತರ ಬದಲಾಗುತ್ತ ಬಂದಿವೆ. ಕನ್ನಡ/ಕರ್ನಾಟಕ ಸಂಸ್ಕೃತಿ ಎಂಬ ಪರಿಕಲ್ಪನೆ ಬಳಸುವವರೆಲ್ಲ ಒಂದೇ ರೀತಿಯ ಚಿಂತನೆ ಉಳ್ಳವರಲ್ಲ. ಇದಕ್ಕೆ ಕಾರಣ ಅವರ ಅವರ ಸಂಸ್ಕೃತಿಯ ಗ್ರಹಿಕೆಗಳು, ಅವರ ತಾತ್ವಿಕ ನೆಲೆಗಳು, ಸಾಮಾಜಿಕ ಸ್ತರಗಳು, ಅವರು ಚಿಂತಿಸಿದ ಚಾರಿತ್ರಿಕ ಸಂದರ್ಭಗಳು ಬೇರೆಬೇರೆ ಆಗಿರುವುದು. ದೇವುಡು ತಮ್ಮ 'ಕರ್ನಾಟಕ ಸಂಸ್ಕೃತಿ' ಕೃತಿಯಲ್ಲಿ ವೈದಿಕ ಉಚ್ಚಜಾತಿಯ ಬದುಕಿನ ನಡಾವಳಿಗಳನ್ನೇ 'ಕರ್ನಾಟಕದ ಸಂಸ್ಕೃತಿ' ಎಂದೂ, ಅದು ಹೇಗೆ ಇಡೀ ಭಾರತದ ಚಿಂತನಾಕ್ರಮವನ್ನು ಪ್ರಭಾವಿಸಿದೆ ಎಂದು ಪ್ರತಿಪಾದಿಸಿದ್ದರು. ಆದರೆ ಶಂಬಾ ಇದಕ್ಕೆ ವಿರುದ್ಧ ದಿಸೆಯಿಂದ ಕರ್ನಾಟಕ ಸಂಸ್ಕೃತಿಯ ಶೋಧಕ್ಕೆ ಹೊರಡುತ್ತಾರೆ. ಇಂತಹದೇ ತಾತ್ವಿಕ ಮುಖಾಮುಖಿ ಅನಂತಮೂರ್ತಿ ಹಾಗೂ ತೇಜಸ್ವಿಯವರಲ್ಲಿ ಅಯಿತು. ಅನಂತಮೂರ್ತಿ ಅವರ 'ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಎಂಬ ಲೇಖನಕ್ಕೆ ಪ್ರತಿಕ್ರಿಯೆಯಾಗಿ ತೇಜಸ್ವಿ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' (೧೯೭೪) ಲೇಖನ ಬರೆದರು. ಅದರಲ್ಲಿ ಕರ್ನಾಟಕ ಸಂಸ್ಕೃತಿಯನ್ನು ವೈದಿಕ ವಿರೋಧಿ ನೆಲೆಯ ಚಿಂತನೆಯನ್ನಾಗಿ ಮಂಡಿಸಿದರು. ಹಾಗೂ ಜೀವ ಪರವಾದ ಶೂದ್ರನೆಲೆಯ ಮೇಲೆ ಭಾರತೀಯ ಬ್ರಾಹ್ಮಣ ವೈದಿಕ ಸಂಸ್ಕೃತಿ ಆಕ್ರಮಿಸಿ ಅದನ್ನು ವಿರೂಪಗೊಳಿಸುತ್ತದೆ ಎಂದು ಪ್ರತಿಪಾದಿಸಿದರು.

೧೯೮೦ರ ನಂತರ, ಕನ್ನಡ/ಕರ್ನಾಟಕ ಸಂಸ್ಕೃತಿಯನ್ನು ಜನಪರವಾದ, ಪ್ರಜಾಪ್ರಭುತ್ವ ವಾದಿಯಾದ, ಬಹುಮುಖಿಯಾದ, ದಮನಿತ ಸಮುದಾಯಗಳ ನೆಲೆಯಿಂದ ನೋಡುವ, ಅನ್ಯಧರ್ಮಗಳನ್ನು ಕನ್ನಡದ ಸಂಗಾತಿ ಭಾಷೆಗಳಿಗೆ ಸಂಬಂಧಿಸಿದ ಜನರನ್ನು ತಾಳ್ಮೆಯಿಂದ ಒಳಗೊಳ್ಳುವ ಕರ್ನಾಟಕ ಸಂಸ್ಕೃತಿಯ ವ್ಯಾಖ್ಯೆಗಳು ಮೂಡತೊಡಗಿದವು. ಹೀಗಾಗಿ ಕನ್ನಡ ಅಥವಾ ಕರ್ನಾಟಕ ಸಂಸ್ಕೃತಿ ಎಂಬುದು ತನಗೆ ತಾನೇ ಮೂಲ ಭೂತವಾದಿಯಲ್ಲ. ಅದನ್ನು ಬೇರೆ ಬೇರೆ ಚಾರಿತ್ರಿಕ ಒತ್ತಡಗಳಲ್ಲಿ ಯಾರು ಯಾವ ಸ್ವರೂಪ ದಲ್ಲಿ ಮಂಡಿಸಿದರು ಎನ್ನುವುದರ ಮೇಲೆ ಅವು ಜನಪರವೋ ಮೂಲಭೂತವಾದಿಯೋ ಆಗುತ್ತಾ ಬಂದಿವೆ. ಕೆಲವೊಮ್ಮೆ ಎರಡೂ ಬಗೆಯ ಒತ್ತಡಗಳು ಏಕಕಾಲದಲ್ಲಿ ಇರುತ್ತವೆ. ಏಕಕಾಲಕ್ಕೆ ಎರಡು ಬಗೆಯಲ್ಲಿ ವ್ಯಾಖ್ಯೆ ಮೂಡುವುದಕ್ಕೆ ಕಾರಣ, ವಾಸ್ತವವನ್ನು ಗ್ರಹಿಸುವ ಮತ್ತು ಪರಿಹಾರ ಕಾಣುವ ಸೈದ್ಧಾಂತಿಕ ಭಿನ್ನತೆಗಳೇ ಆಗಿವೆ. ಕನ್ನಡದಲ್ಲಿ ಕರ್ನಾಟಕ/ಕನ್ನಡ ಸಂಸ್ಕೃತಿ ಪರಿಕಲ್ಪನೆಗಳ ಪ್ರಜಾಪ್ರಭುತ್ವೀ ಕರಣ ಮತ್ತು ಜನಪರೀಕರಣ ತೀವ್ರವಾಗಿ ಶುರುವಾಗಿದೆ. ಇದಕ್ಕೆ ಕಾರಣ ಪ್ರಜಾಪ್ರಭುತ್ವಕ್ಕೆ ವ್ಯತಿರಿಕ್ತವಾದ ಸನ್ನಿವೇಶಗಳು ಭಾರತದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ ನಿರ್ಮಾಣವಾ

ಗಿರುವುದು. ಪ್ರತಿರೋಧಗಳಲ್ಲೇ ಹುಟ್ಟಿ ಬೆಳೆಯುವುದು ಬಲಿಯುವುದು ಎಲ್ಲ ಸಮಾಜವಾಗಿ ಚಿಂತನೆಗಳ ವಿಧಿಯೇ ಇರಬೇಕು. ಗಮನಾರ್ಹವೆಂದರೆ, ತಮ್ಮ ಸಮಕಾಲೀನರಲ್ಲಿ ಕಿಚ್ಚು ಹಚ್ಚಲು ಆಗದಿದ್ದ ಶಂಬಾ ಜೋಶಿಯವರ ಸಂಸ್ಕೃತಿ ಚಿಂತನೆಗಳು, ಕನ್ನಡದಲ್ಲಿ ತಮ್ಮ ವಾರಸುದಾರಿಕೆ ಯನ್ನು ಈ ಹೊತ್ತಲ್ಲಿ ಪಡೆದುಕೊಳ್ಳುತ್ತಿರುವುದು.

●

ಲೇಖನ

ಚರ್ಚುಗಳಲ್ಲಿ ಕನ್ನಡ ಬಳಕೆ : ಒಂದು ಜಿಜ್ಞಾಸೆ

•ಬಿ ಎಸ್ ತಲ್ವಾಡಿ

ಪೀಠಿಕೆ

ಸುಮಾರು ನಾಲ್ಕೈದು ದಶಕಗಳಿಂದೀಚೆಗೆ, ಚರ್ಚಿನಲ್ಲಿ ಕನ್ನಡ ಭಾಷೆಯ ಬಳಕೆಗೆ ತೀವ್ರವಾದ ಆಂದೋಳನ ಕರ್ನಾಟಕದ ಕ್ರೈಸ್ತ ಸಮುದಾಯದಲ್ಲಿ ನಡೆಯುತ್ತಿರುವುದು ಕಂಡು ಬರುತ್ತಿದೆ. ಚರ್ಚಿನ ಹಬ್ಬ-ಜಾತ್ರೆಗಳ ಸಂದರ್ಭಗಳಲ್ಲಿ ಕನ್ನಡ ಕೂಗು ಕೇಳಿ ಬರುತ್ತದೆ. ಧರಣಿ, ಸತ್ಯಾಗ್ರಹ ಗಳು ಕಾಣಿಸುತ್ತವೆ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕ್ರೈಸ್ತರು ಗಣನೀಯ ಸೇವೆ ಸಲ್ಲಿಸಿದ್ದರೂ ಚರ್ಚಿನ ಒಳಗೆ ಕನ್ನಡ ಇಣುಕು ಹಾಕದ ವಿಪರ್ಯಾಸ ಪರಿಸ್ಥಿತಿ ಹೇಗೆ ಉಂಟಾಯಿತು? ಕನ್ನಡ ಕ್ರೈಸ್ತರ ಆರಾಧನೆಯ ಭಾಷೆ ಯಾಕೆ ಕನ್ನಡವಾಗಲಿಲ್ಲ? ವಾಸ್ತವಾಂಶ ವೇನೆಂದು ಹೆಚ್ಚಿನವರಿಗೆ ಇಂದಿಗೂ ತಿಳಿದಿಲ್ಲ. 'ಕನ್ನಡ'ವೆಂಬ ಶಬ್ದ ಕಿವಿಗೆ ಬೀಳುತ್ತಿದ್ದಂತೇ ಭಾವಾವೇಶಗೊಳ್ಳುವ ಜನರಿಗೆ ವಾಸ್ತವ ಸಂಗತಿ ಬೇಕಾಗಿಯೂ ಇಲ್ಲ.

ಕರ್ನಾಟಕದ ರಾಜಧಾನಿಯಲ್ಲಿ ಕನ್ನಡ ಇಂದು ಒಂದು ಕಡೆ ಭಾವಾವೇಶಕ್ಕೆ ಒಳಗಾಗಿದ್ದರೆ, ಮತ್ತೊಂದು ಕಡೆ ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ಸಿಕ್ಕಿ ಸೊರಗಿದೆ. ಇದೇ ಸ್ಥಿತಿ ಬೆಂಗಳೂರಿನ ಚರ್ಚುಗಳ ಒಳಗೂ ಉಂಟಾಗಿದೆ. ಕರ್ನಾಟಕದ ಚರ್ಚುಗಳಲ್ಲಿ ಕನ್ನಡ ಬಳಕೆಗಾಗಿ ಕಾದಾಟ ನಿರಂತರವಾಗಿ ನಡೆಯಬೇಕೆ? ಅದಕ್ಕೆ ಪರಿಹಾರೋಪಾಯ ಸಾಧ್ಯವಿಲ್ಲವೇ? ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಧರ್ಮ ಪ್ರಸಾರಕ್ಕಾಗಿ ಕನ್ನಡ ನಾಡಿಗೆ ಬಂದ ಕ್ರೈಸ್ತ ಮಿಷನರಿಗಳು, ಕನ್ನಡವನ್ನು ಕಲಿತು ತಾಳೆಗರಿಗಳಲ್ಲಿದ್ದ ಪ್ರಾಚೀನ ಗ್ರಂಥಗಳನ್ನು ಅಧ್ಯಯನ ಮಾಡಿ ಅಭ್ಯಾಸ ಪೂರ್ವಕ ಪರಿಶ್ರಮ ದಿಂದ ಅವನ್ನು ಸಂಪಾದಿಸಿ ಮುದ್ರಿಸಿದರು. ಕ್ರೈಸ್ತ ಮಿಷನರಿಗಳಲ್ಲದೆ ವಿದೇಶಿ ಅಧಿಕಾರಿಗಳೂ ಸಾಹಿತ್ಯಿಕವಾಗಿ ಶೈಕ್ಷಣಿಕವಾಗಿ, ಕನ್ನಡ ನಾಡು ನುಡಿಗೆ ಅಪಾರ ಸೇವೆ ಮಾಡಿದ್ದಾರೆ.

ಮುದ್ರಣ ಯಂತ್ರವನ್ನು ಕನ್ನಡ ನಾಡಿಗೆ ತಂದು, ಜಾನ್ ಮ್ಯಾಕರಲ್ ಬರೆದ 'A Grammer of the Carnataka Language' (೧೮೨೦) ಎಂಬ ೨೧೧ ಪುಟಗಳ ಬೃಹತ್ ಗ್ರಂಥವನ್ನು ಮೊದಲಿಗೆ ಅಚ್ಚು ಮಾಡಿ ಪ್ರಕಟಿಸಿದರು. ಇದರ ಪ್ರತಿ ಈಗ ನ್ಯೂಯಾರ್ಕಿನ ಗ್ರಂಥಾಲಯದಲ್ಲಿ ಮಾತ್ರ ಲಭ್ಯವಿದೆ. ಅನಂತರ ಕ್ರಮವಾಗಿ ಕನ್ನಡದ ರೆ. ವಿಲಿಯಂ ರೀವ್‌ನ 'ಇಂಗ್ಲೀಷ್

ಮತ್ತು ಕರ್ನಾಟಕ ಶಬ್ದಕೋಶ', ರೆ. ಜಾನ್ ಹ್ಯಾಂಡ್ಸ್‌ನ 'ಕನ್ನಡ ವ್ಯಾಕರಣ', ಸಂತ ಲೂಕನ ಶುಭ ಸಂದೇಶಗಳು ಮುದ್ರಿತವಾದವು. ಜಿ. ಪ್ಲೆಬ್‌ಸ್ತ ಎಂಬ ಜರ್ಮನ್ ಮಿಷನರಿ ೧೮೫೨ರಲ್ಲಿ ಮಂಗಳೂರಿನಲ್ಲೇ ಕನ್ನಡ ಅಕ್ಷರಗಳ ಮೊಳೆಗಳನ್ನು ತಯಾರಿಸಲು ಪ್ರಾರಂಭಿಸಿದನು. ೧೮೫೩ರ ಹೊತ್ತಿಗೆ ಛಾಪಖಾನೆಯ ಮುದ್ರಣ ಯಂತ್ರ ಕರ್ನಾಟಕದಲ್ಲಿ ಆರಂಭವಾಯಿತು. ಅನಂತರ ಕನ್ನಡ ಭಾಷೆ, ಸಾಹಿತ್ಯ, ಚರಿತ್ರೆಗಳನ್ನು ಸಂಪಾದಿಸಿ, ಬರೆದು, ಮುದ್ರಿಸಿದ ಬಹು ದೊಡ್ಡ ವಿದೇಶಿ ಪಂಡಿತ ಪಡೆ ಕಾಣಿಸಿಕೊಳ್ಳುತ್ತದೆ. ಕನ್ನಡ ಪತ್ರಿಕಾ ವ್ಯವಸಾಯವೂ ಅವರಿಂದಲೇ ಆರಂಭವಾಯಿತು. ವಿದೇಶಿ ಕ್ರೈಸ್ತ ಮಿಷನರಿ ಹಾಗೂ ಅಧಿಕಾರಿ ಶ್ರೀ ಸಾಮಾನ್ಯರು ಕನ್ನಡ ನಾಡು ನುಡಿಗೆ ಸಲ್ಲಿಸಿದ ಸೇವೆ ಅವಿಸ್ಮರಣೀಯ.

ಕ್ರೈಸ್ತ ಧರ್ಮ

ಕ್ರಿಸ್ತನ ಜನನ, ಮರಣ ಮತ್ತು ಪುನರುತ್ಥಾನವನ್ನು ವಸ್ತುವನ್ನಾಗಿಸಿಕೊಂಡು, ಆತನ ಉಪದೇಶಕ್ಕನುಗುಣವಾಗಿ ನಡೆಯುವ ಒಂದು ಮತ ಸಿದ್ಧಾಂತವನ್ನು 'ಕ್ರೈಸ್ತ ಧರ್ಮ' ಎನ್ನಲಾಗಿದೆ. ಕ್ರಿಸ್ತ ಸಾಕ್ಷಾತ್ ದೇವಪುತ್ರ. ಆತ ಮಾನವನ ರಕ್ಷಣೆಗಾಗಿ ಭೂಲೋಕಕ್ಕೆ ಜನಿಸಿ ಬಂದ ಎಂಬ ನಂಬಿಕೆ ಕ್ರಿಸ್ತನನ್ನು ದೇವ ಮಾನವನನ್ನಾಗಿ ಮಾಡಿದೆ. ಆತ ಬದುಕಿದ್ದಾಗ ೧೨ ಜನ ಆಪ್ತ ಶಿಷ್ಯರನ್ನು ಮಾಡಿಕೊಂಡಿದ್ದನೆಂದೂ, ಆತನ ಮರಣಾನಂತರ, ಪುನರುತ್ಥಾನವಾದ ಮೇಲೆ ಆತನ ಬೋಧನೆಗಳನ್ನು ಜಗತ್ತಿನ ಮೂಲೆ ಮೂಲೆಗೂ ಆ ಶಿಷ್ಯರು ಬಿತ್ತಿದರೆಂದೂ; ಕ್ರೈಸ್ತ ವಿಶ್ವಾಸಿಗಳ ಪರಿಶ್ರಮದ ಫಲವಾಗಿ ಕ್ರೈಸ್ತ ಧರ್ಮ ಅತ್ಯಲ್ಪ ಕಾಲದಲ್ಲಿಯೇ ಪ್ರಸಿದ್ಧಿ ಪಡೆಯಿತೆಂದೂ ಇತಿಹಾಸಗಾರರು ಅಭಿಪ್ರಾಯ ಪಡುತ್ತಾರೆ.

ಭಾರತಕ್ಕೆ ಕ್ರೈಸ್ತ ಧರ್ಮ

ಯೇಸು ಕ್ರಿಸ್ತನ ಆಪ್ತ ಶಿಷ್ಯರಲ್ಲೊಬ್ಬನಾದ ಸಂತ ತೋಮಸ್ ಕ್ರಿ.ಶ. ಮೊದಲನೆಯ ಶತಮಾನದಲ್ಲಿಯೇ ಭಾರತಕ್ಕೆ ಬಂದು ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡಿದನೆಂದು ಮಲಬಾರಿನ ಸಂಪ್ರದಾಯಬದ್ಧ ಸಿರಿಯನ್ ಹಾಗೂ ನೆಸ್ಟೋರಿಯನ್ ಕ್ರೈಸ್ತ ಪಂಗಡಗಳ ನಂಬಿಕೆ. ಸಂತ ತೋಮಸ್ ಮಲಬಾರು (ಕೇರಳ) ಮತ್ತು ಮದರಾಸು (ಚೆನ್ನೈ)ಗಳಲ್ಲಿ ಉಪದೇಶ ಮಾಡಿದನೆಂದಾದರೆ ಆತ ಕರ್ನಾಟಕಕ್ಕೂ ಬಂದಿರಬೇಕೆಂದೂ, ಮೈಸೂರಿನ ರಾಜ ಗುಡ್ನಫರ್ ಮೈಸೂರಿಗೆ ಆತನನ್ನು ಬರಮಾಡಿಕೊಂಡಿದ್ದನೆಂದೂ ಕೆಲವು ಪ್ರಮುಖ ಹೇಳಿಕೆಗಳಿವೆ (ಪೆರುಮಾಳಿಲ್ ಎ.ಸಿ. ೧೯೭೨:೧೯೮).

ಕರ್ನಾಟಕದಲ್ಲಿ ಕ್ರೈಸ್ತ ಧರ್ಮ

ಕ್ರಿ.ಶ. ಆರನೆಯ ಶತಮಾನದ ಹೊತ್ತಿಗೆ ಕ್ರೈಸ್ತ ಧರ್ಮ ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತದೆಯಾದರೂ ೧೩ನೆಯ ಶತಮಾನದ ಹೊತ್ತಿಗೆ ಅದು ಕರ್ನಾಟಕದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ಚರಿತ್ರಕಾರರ ಅಭಿಪ್ರಾಯ (ಸಿಲ್ವ.ಎಸ್. ೧೯೫೭:೧೯೫). ಬೆಂಗಳೂರು ಬಳಿಯ ಆನೆಕಲ್ಲಿನಲ್ಲಿ ಕ್ರಿ.ಶ. ೧೪೦೦ಕ್ಕೂ ಹಿಂದೆ ಕ್ರೈಸ್ತರಿದ್ದರೆಂದು ತಿಳಿದು ಬರುತ್ತದೆ (ಅಂತಪ್ಪ ೧೯೮೮:೧೬). ೧೬೭೭ರಲ್ಲಿ ಪೂಜ್ಯ ದೋಂ ಮ್ಯಾಥ್ಯೂ ದೆ ಕಾಸ್ತ್ರೊ ಎಂಬ ಧರ್ಮಾಧ್ಯಕ್ಷ

(ಬಿಶಪ್) ಬೆಂಗಳೂರನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು; ಕನ್ನಡದಲ್ಲಿ ಚರ್ಚಿನ ಆಡಳಿತ ನಡೆಸಿದನೆಂಬುದಾಗಿ ತಿಳಿದು ಬರುತ್ತದೆ (ತಲ್ವಾಡಿ ೧೯೮೯:೧೩). ೧೭೦೩ರಲ್ಲಿ ಫಾದರ್ ಮ್ಯಾನ್ ಹ್ಯೂಟ್ ಎಂಬ ಮಿಷನರಿ ಬೆಂಗಳೂರು ಮತ್ತು ಚಿಕ್ಕ ಬಳ್ಳಾಪುರಗಳಲ್ಲಿ ಚರ್ಚುಗಳನ್ನು ಕಟ್ಟಿ ಕನ್ನಡದಲ್ಲಿ ಆಡಳಿತ ನಡೆಸಿದನೆಂಬ ವಿಚಾರವನ್ನು ತಳ್ಳಿ ಹಾಕುವಂತಿಲ್ಲ (ತಲ್ವಾಡಿ ೧೯೮೯:೫೧).

ಪ್ರಮುಖ ಕ್ರೈಸ್ತ ಪಂಗಡಗಳು

ಕ್ರೈಸ್ತರಲ್ಲಿ ಮುಖ್ಯವಾಗಿ ಕಥೋಲಿಕರು ಮತ್ತು ಪ್ರೊಟೆಸ್ಟಂಟ್‌ರು ಎಂಬ ಎರಡು ಪಂಗಡ ಗಳಿವೆ. ಇವುಗಳೊಳಗೇ ಅನೇಕ ಉಪ ಪಂಗಡಗಳೂ ಇವೆ. ಇವರ ಮಧ್ಯೆ ತಾತ್ವಿಕವಾದ ಕೆಲವು ಭಿನ್ನ ಭೇದಗಳೂ ಇವೆ. ಕರ್ನಾಟಕಕ್ಕೆ ಮೊದಲು ಕಥೋಲಿಕರೂ ಆಮೇಲೆ ಪ್ರೊಟೆ ಸ್ಟಂಟರೂ ಬಂದು ಮತ ಪ್ರಚಾರ ಮಾಡಿದರು. ಇಂದು ಚರ್ಚುಗಳಲ್ಲಿ ಕನ್ನಡ ಬಳಕೆಯ ಬಗ್ಗೆ ತೀವ್ರವಾಗಿ ಚಳುವಳಿ ಮಾಡಿರುವರು. ಕಥೋಲಿಕರು, ಪ್ರೊಟೆಸ್ಟಂಟರಲ್ಲೂ ಒಳಗೊಳಗೆ ತಿಕ್ಕಾಟಗಳು ನಡೆದೇ ಇವೆಯಾದರೂ, ಅವರು ಕಥೋಲಿಕರಂತೆ ಬೀದಿಗೆ ಇಳಿದಿಲ್ಲ. ಆದ್ದರಿಂದ ಕಥೋಲಿಕ ಚರ್ಚುಗಳಲ್ಲಿ ಕನ್ನಡ ಬಳಕೆಯ ಬಗ್ಗೆಯೇ ಈ ಲೇಖನ ಬೆಳಕು ಚೆಲ್ಲುತ್ತದೆ.

ಕಥೋಲಿಕರ ಮಹಾಧರ್ಮ ಕ್ಷೇತ್ರ

ಬೆಂಗಳೂರಿನ ಕಥೋಲಿಕರ ಮಹಾಧರ್ಮಕ್ಷೇತ್ರಕ್ಕೇ ಸೀಮಿತವೆಂಬಷ್ಟು ಮಟ್ಟಿಗೆ ಕ್ರೈಸ್ತರ ಕನ್ನಡ ಚಳುವಳಿ ನಡೆಯುತ್ತಿರುವುದರಿಂದ ಮಹಾಧರ್ಮಕ್ಷೇತ್ರದ ಕಿರುಪರಿಚಯ ಅನಿವಾರ್ಯ.

ಕರ್ನಾಟಕದಲ್ಲಿ ಇಂದು ಸು. ೯, ೩೩,೦೮೭(೨೦೦೧ರ ಜನಗಣತಿ ಪ್ರಕಾರ) ಜನ ಕಥೋಲಿಕ ಕ್ರೈಸ್ತರಿದ್ದಾರೆ. ಆಡಳಿತಾತ್ಮಕ ದೃಷ್ಟಿಯಿಂದ ಕರ್ನಾಟಕದ ಕಥೋಲಿಕ ಧರ್ಮಸಭೆ (Church) ಯನ್ನು ಎಂಟು ಧರ್ಮಕ್ಷೇತ್ರ(Diocese)ಗಳನ್ನಾಗಿ ಮಾಡಲಾಗಿದೆ. ಅವು ಕ್ರಮವಾಗಿ ಮೈಸೂರು, ಮಂಗಳೂರು, ಶಿವಮೊಗ್ಗ, ಬಳ್ಳಾರಿ, ಬೆಳಗಾಂವ್, ಕಾರವಾರ, ಚಿಕ್ಕಮಗಳೂರು ಮತ್ತು ಬೆಂಗಳೂರು. ಈ ಎಂಟು ಧರ್ಮ ಕ್ಷೇತ್ರಗಳಲ್ಲಿ ಬೆಂಗಳೂರು ಮಹಾಧರ್ಮಕ್ಷೇತ್ರ (Arch-Diocese)ವೆಂಬ ಸ್ಥಾನವನ್ನು ಪಡೆದಿದೆ. ಇದನ್ನು ಕ್ರಮವಾಗಿ ಅತಿ.ವಂ.ಡಾ. ತೋಮಸ್ ಪೊತಕಮುರಿ (೧೯೫೩-೧೯೬೮), ಅತಿ.ವಂ.ಡಾ. ಲೂರ್ದುಸಾಮಿ (೧೯೬೮-೧೯೭೨), ಅತಿ.ವಂ.ಡಾ. ಪಾಕ್ಯಂ ಆರೋಗ್ಯಸಾಮಿ (೧೯೭೨-೧೯೮೬), ಅತಿ.ವಂ.ಡಾ. ಅಲ್ಫೋನ್ಸ್ ಮಥಿಯಾಸ್ (೧೯೮೬-೧೯೯೯) ಅವರು ಆಡಳಿತ ನಡೆಸಿದರು. ಪ್ರಸಕ್ತ ಅತಿ.ವಂ.ಡಾ. ಇಗ್ನೇಷಿಯಸ್ ಪಿಂಟೊ (೧೯೯೯) ಅವರು ಮಹಾಧರ್ಮಾಧ್ಯಕ್ಷರಾಗಿದ್ದಾರೆ.

ಚರ್ಚಿನ ಭಾಷೆಯಾಗಿ ಲ್ಯಾಟಿನ್ ಇದ್ದಾಗ

೧೯೫೩ರಲ್ಲಿ ಸ್ಥಾಪನೆಯಾದ ಬೆಂಗಳೂರು ಮಹಾಧರ್ಮ ಪ್ರಾಂತ್ಯದ ಪೀಠವನ್ನು ಆಂಧ್ರ ಮೂಲದ ತೆಲುಗು ಮಾತೃ ಭಾಷೆಯ ಪೊತಕ ಮೂರಿ ಅವರು ಅಲಂಕರಿಸಿದರು. ಅವರ ಕಾಲಕ್ಕೆ ಕ್ರೈಸ್ತರಲ್ಲಿ ಅಷ್ಟಾಗಿ ವಿದ್ಯಾವಂತರಿರಲಿಲ್ಲ. ಜನ ಭಯ ಭಕ್ತಿಯಿಂದ ನಡೆದು

ಕೊಳ್ಳುತ್ತಿದ್ದರು. ಅಂದು ಚರ್ಚಿನ ಪ್ರಮುಖ ಆರಾಧನೆಯ ಭಾಷೆ ಲ್ಯಾಟಿನ್ ಆಗಿತ್ತು. ಆದ್ದರಿಂದ ಅಂದು ಭಾಷೆಯ ಪ್ರಶ್ನೆಯೇ ಉದ್ಭವಿಸಲಿಲ್ಲ. ಮಹಾಧರ್ಮಾಧ್ಯಕ್ಷರು ನಿರಾತಂಕವಾಗಿ ಆಡಳಿತ ನಡೆಸಿ ಕ್ರೈಸ್ತರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದರು. ಬೆಂಗಳೂರು ಮಹಾಧರ್ಮ ಪ್ರಾಂತ್ಯದ ಇತಿಹಾಸದಲ್ಲಿ ಇದೊಂದು ಸುವರ್ಣ ಘಟ್ಟ.

ಕನ್ನಡದ ಕೂಗು

ಆಲೂರು ವೆಂಕಟರಾಯರು, ಅ.ನ. ಕೃಷ್ಣರಾಯರು ಮುಂತಾದವರು ಕನ್ನಡದ ಕಹಳೆಯನ್ನೂದಿ, ಕನ್ನಡದ ಬಗ್ಗೆ ಅಭಿಮಾನ ಹುಟ್ಟುವ ಕೆಲಸವನ್ನು ಮಾಡಿದರು. ೧೯೫೬ರಲ್ಲಿ ಕರ್ನಾಟಕದ ಏಕೀಕರಣವೂ ೧೯೭೩ರಲ್ಲಿ ಕರ್ನಾಟಕ ಎಂಬ ಮರುನಾಮಕರಣವೂ ಆಯಿತು. ೧೯೭೮ರಲ್ಲಿ ಕನ್ನಡವು ರಾಜ್ಯದ ಅಧಿಕೃತ ಭಾಷೆ ಎಂದು ಸರ್ಕಾರ ಘೋಷಿಸಿತು. ಕರ್ನಾಟಕ ದಾದ್ಯಂತ ಕನ್ನಡ ಆಂದೋಲನ ಆರಂಭವಾಯಿತು. ವಿಶೇಷವಾಗಿ ಬೆಂಗಳೂರು ನಗರದಲ್ಲಿ ಒಂದು ಕನ್ನಡ ಪಡೆಯೇ ಹುಟ್ಟಿಕೊಂಡಿತು. ಈ ಆಂದೋಲನಕ್ಕೆ ಅನೇಕ ಕ್ರೈಸ್ತ ಯುವಕರೂ ಧುಮುಕಿದರು. ಆಗಾಗ ಕನ್ನಡದ ಕಾರಣಕ್ಕೆ ಬೆಂಗಳೂರಿನಾದ್ಯಂತ ಚಳುವಳಿ ನಡೆಯುತ್ತಿತ್ತು. ಇದರಿಂದ ಪ್ರೇರಿತವಾದ ಕೆಲವು ಕ್ರೈಸ್ತ ಉತ್ಸಾಹಿಗಳು ಧರ್ಮದಾರಿ ತಪ್ಪಬಾರದು, ಭಾಷೆ ಬಡವಾಗಬಾರದು ಎಂಬ ದ್ವಿಸೂತ್ರಕ್ಕೆ ಮಣಿದು; ಚರ್ಚ್ ಆಡಳಿತದಲ್ಲಿ ಕನ್ನಡ ಅನಿವಾರ್ಯ ಅಗತ್ಯವೆಂಬುದನ್ನು ಮನಗಂಡರು. ಸರಿಸುಮಾರು ಇದೇ ಕಾಲದಲ್ಲಿ ರೋಮಿನ ವ್ಯಾಟಿಕನ್ ನಗರದಲ್ಲಿ ಎರಡನೇ ವ್ಯಾಟಿಕನ್ ಮಹಾಸಮ್ಮೇಳನ ನಡೆಯಿತು(೧೯೬೨-೬೫). ಕಥೋಲಿಕ ಧರ್ಮಸಭೆಗೆ ಹೊಸ ಚೈತನ್ಯ ತುಂಬಿಸಿ ನವೀಕರಿಸುವ ಸಲುವಾಗಿ ಆರನೇ ಪೌಲ್ ವಿಶ್ವಗುರು (ಪೋಪ್‌ಪಾಲ್VI)ವಿನ ಅಧ್ಯಕ್ಷತೆಯಲ್ಲಿ ನಡೆದ ಈ ಮಹಾಸಮ್ಮೇಳನದಲ್ಲಿ ವಿಶ್ವದ ಸುಮಾರು ೨೨೦೦ ಜನ ಧರ್ಮಾಧ್ಯಕ್ಷರುಗಳು ಸಕ್ರಿಯವಾಗಿ ಭಾಗವಹಿಸಿದ್ದರು. ಕಥೋಲಿಕ ಚರ್ಚಿನ ಆರಾಧನಾ ವಿಧಿವಿಧಾನಗಳಲ್ಲಿ ಅನೇಕ ಬದಲಾವಣೆಯನ್ನು ಆ ಮಹಾಸಭೆಯ ಮುಂದೆ ಪ್ರಸ್ತಾಪಿಸಿ, ಜಾರಿಗೆ ತರಲು ಅನುಮೋದನೆ ಪಡೆಯಲಾಯಿತು. ಚರ್ಚಿನ ಸಂವಿಧಾನಾತ್ಮಕ ಚೌಕಟ್ಟಿನೊಳಗೆ ಕಾಲಧರ್ಮಕ್ಕನುಗುಣವಾಗಿ ಆಮೂಲಾಗ್ರ ಬದಲಾವಣೆಯನ್ನು ತಂದಿತು. ಚರ್ಚಿನ ಭಾಷೆ ವಿಶ್ವಾಸಿಗಳಿಗೆ ಅಪರಿಚಿತವಾಗಿರಬಾರದು. ಆದ್ದರಿಂದ ಲ್ಯಾಟಿನ್ ಭಾಷೆಗೆ ಬದಲು ಆಯಾ ಪ್ರಾಂತ್ಯದ ಅಧಿಕೃತ ಭಾಷೆಯನ್ನು ಚರ್ಚಿನ ವಿಧಿಗಳಲ್ಲಿ ಬಳಸಬಹುದೆಂಬ ಚರಿತ್ರಾರ್ಹ ತೀರ್ಮಾನವನ್ನು ಆ ಸಭೆ ಪ್ರಕಟಿಸಿತು. ವಿಶ್ವ ಗುರುವಿನ ಅಧಿಕೃತ ಆದೇಶದನ್ವಯ ಪ್ರಪಂಚದಾದ್ಯಂತ ಚರ್ಚಿನ ಆರಾಧನಾ ವಿಧಿಗಳಲ್ಲಿ ಬದಲಾವಣೆಗಳಾಗತೊಡಗಿದವು. ಆಯಾ ರಾಷ್ಟ್ರಗಳ, ರಾಜ್ಯಗಳ ದೇಶೀಯ ಭಾಷೆಗಳನ್ನು ಚರ್ಚಿನ ಭಾಷೆಗಳನ್ನಾಗಿ ಪರಿವರ್ತಿಸಲು ಸ್ಥಳೀಯ ಚರ್ಚುಗಳು ಪ್ರಯತ್ನಿಸಿದವು. ಭಾರತದ ವಿವಿಧ ರಾಜ್ಯಗಳಲ್ಲಿ ಸ್ಥಳೀಯ ಭಾಷೆ ಜಾರಿಗೆ ಬಂದಿತು. ನಮ್ಮ ನೆರೆ ರಾಜ್ಯಗಳಾದ ತಮಿಳುನಾಡಿನಲ್ಲಿ ತಮಿಳು, ಕೇರಳದಲ್ಲಿ ಮಲಯಾಳಂ, ಆಂಧ್ರದಲ್ಲಿ ತೆಲುಗು, ಮಹಾರಾಷ್ಟ್ರದಲ್ಲಿ ಮರಾಠಿಯೂ ಚರ್ಚಿನ ಭಾಷೆಗಳಾದವು. ಆದರೆ ಕರ್ನಾಟಕದಲ್ಲಿ ಚರ್ಚಿನ ಅಧಿಕೃತ ಭಾಷೆ ಕನ್ನಡವಾಗಲಿಲ್ಲ.

ಕರ್ನಾಟಕದ ಧರ್ಮಾಧ್ಯಕ್ಷರಿಗೆ ತಮ್ಮ ತಮ್ಮ ಧರ್ಮ ಪ್ರಾಂತ್ಯಗಳಲ್ಲಿ ಕನ್ನಡವನ್ನು ಚರ್ಚುಗಳಲ್ಲಿ ಬಳಸುವ ಅಧಿಕಾರವಿತ್ತು. ಮೈಸೂರು, ಚಿಕ್ಕಮಗಳೂರು ಮತ್ತು ಬಳ್ಳಾರಿ ಧರ್ಮ ಪ್ರಾಂತ್ಯಗಳಲ್ಲಿ ಕನ್ನಡ ಹೇಗೂ ಇದ್ದೇ ಇದ್ದಿತು. ಅದರಿಂದ ಅವುಗಳಲ್ಲಿ ಬೆಂಗಳೂರಿನಷ್ಟು ಸಮಸ್ಯೆ ಉಂಟಾಗಲಿಲ್ಲ. ಕೊಂಕಣಿ ಮಾತೃಭಾಷೆಯ ಜನರೇ ಅಧಿಕ ಸಂಖ್ಯೆಯಲ್ಲಿರುವ ಮಂಗಳೂರು ಮತ್ತು ಕಾರವಾರ ಧರ್ಮ ಪ್ರಾಂತ್ಯಗಳಲ್ಲಿ ಕನ್ನಡದ ಪ್ರಶ್ನೆಯೇ ಉದ್ಭವಿಸಲಿಲ್ಲ. ಬೆಳಗಾಂವ್ ಮತ್ತು ಶಿವಮೊಗ್ಗಗಳಲ್ಲೂ ಅಷ್ಟಾಗಿ ಈ ಸಮಸ್ಯೆ ಉಂಟಾಗಲಿಲ್ಲ. ಚರ್ಚಿನಲ್ಲಿ ಕನ್ನಡ ಬಳಸುವ ಸಮಸ್ಯೆ ಬೆಂಗಳೂರಿಗೇ ವಿಶೇಷವಾಗಿ ವಿಸ್ತರಿಸಿ ಉಲ್ಬಣಗೊಂಡಿತು.

ಸಮಸ್ಯೆಯ ಸುಳಿ

ಬೆಂಗಳೂರು ಮಹಾಧರ್ಮ ಪ್ರಾಂತ್ಯದಲ್ಲಿ ಸು. ೧೦೬ ಧರ್ಮಕೇಂದ್ರ(Parish)ಗಳಿವೆ. ೧೦೩ ಸಾಮಾನ್ಯ ಗುರುಗಳೂ (Dicoceseian) ೩೭೫ ಧಾರ್ಮಿಕ ಗುರುಗಳೂ (Religious Priests) ೧೫೪೬ ಜನ ಕನ್ಯಾ ಸ್ತ್ರೀಯರಿದ್ದಾರೆ (Nums). ೩,೩೩,೦೦೦ ಕಥೋಲಿಕರಿದ್ದು, ಇವರಲ್ಲಿ ಕನ್ನಡಿಗರು ಶೇಕಡ ೨೦ ಮಂದಿ ಇದ್ದಾರೆ. ಆದ್ದರಿಂದ ಬೆಂಗಳೂರು ಮಹಾಧರ್ಮ ಪ್ರಾಂತ್ಯದಲ್ಲಿ ಕನ್ನಡ ಕ್ರೈಸ್ತರು ಅಂದಿಗೂ ಅಲ್ಪ ಸಂಖ್ಯಾತರಾಗಿದ್ದರು, ಇಂದಿಗೂ ಅಲ್ಪ ಸಂಖ್ಯಾತರಾಗಿದ್ದಾರೆ. ಬೆಂಗಳೂರಿನ ಚರ್ಚಿನಲ್ಲಿ ತಮಿಳರು ಶೇಕಡ ೭೭ ಮಂದಿ ಇರುವುದರಿಂದ, ತಮಿಳು ಭಾಷೆಯೇ ಇಲ್ಲಿನ ಚರ್ಚಿನ ಭಾಷೆಯಾಗಿರಬೇಕೆಂದು ತಮಿಳು ಮೂಲದ ಮಹಾಧರ್ಮಾಧ್ಯಕ್ಷ ಲೂರ್ದುಸಾಮಿ ಅವರ ಅಭಿಮತವಾಗಿತ್ತು. ಅಲ್ಪಸಂಖ್ಯಾತ ಕನ್ನಡ ಕ್ರೈಸ್ತರು ಅವರ ವಾದವನ್ನು ಒಪ್ಪಲಿಲ್ಲ. ಕರ್ನಾಟಕದ ರಾಜಧಾನಿಯಲ್ಲಿ ಕನ್ನಡ ಕ್ರೈಸ್ತರು ಅಲ್ಪಸಂಖ್ಯಾತರಿರಲಿ ಬಿಡಲಿ, ಇಲ್ಲಿ ಚರ್ಚಿನ ಭಾಷೆ ಕನ್ನಡವೇ ಆಗಬೇಕು ಎಂದರು. ಅಲ್ಲದೆ ಎರಡನೆ ವ್ಯಾಟಿಕನ್ ಮಹಾಸಭೆಯ 'ಲಿಂಗ್ವಾ ವರ್ನಾಕುಲ' (Lingua Vernacula) ಎಂಬ ಪದವನ್ನು ಮುಂದೊಡ್ಡಿ, ಅದಕ್ಕೆ ಸ್ಥಳೀಯ ಅಥವಾ ಪ್ರಾಂತೀಯ ಭಾಷೆ ಎಂಬ ಅರ್ಥವನ್ನು ಆರೋಪಿಸಿ, ತಮ್ಮ ನಿಲುವನ್ನು ಸಮರ್ಥಿಸಿಕೊಂಡರು. ಚರ್ಚಿನ ಭಾಷೆ ಪ್ರಾಂತೀಯ ಭಾಷೆಯಾಗಿರಬೇಕು ಎಂದು ಚಳುವಳಿಯನ್ನೇ ನಡೆಸತೊಡಗಿದರು. ಆದರೆ ಅಂದಿನ ಮಹಾಧರ್ಮಾಧ್ಯಕ್ಷರು 'ಲಿಂಗ್ವಾ ವರ್ನಾಕುಲ' ಎಂದರೆ 'ಮಾತೃಭಾಷೆ' ಎಂಬ ಅರ್ಥವೆಂದೂ, ಬೆಂಗಳೂರಿನ ಬಹು ಸಂಖ್ಯಾತ ಕ್ರೈಸ್ತರ ಮಾತೃಭಾಷೆ ತಮಿಳಾದ್ದರಿಂದ ಅದೇ ಚರ್ಚಿನ ಭಾಷೆಯಾಗಬೇಕೆಂದೂ ಪ್ರತ್ಯಕ್ಷವಾಗಿ ಚರ್ಚಿನಲ್ಲಿ ತಮಿಳನ್ನು ಹೇರಲು ಪ್ರಯತ್ನಿಸ ತೊಡಗಿದರು. ಇದು ಸಮಸ್ಯೆಗೆ ಕಾರಣವಾಯಿತು. ಕುಪಿತಗೊಂಡ ಕನ್ನಡ ಪರ ಕ್ರೈಸ್ತರೆಲ್ಲ ಒಂದೆಡೆ ಸೇರಿ ನಿರಂತರ ಹೋರಾಟ ನಡೆಸುವುದಕ್ಕಾಗಿ 'ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘ'ವನ್ನು ೧೯೭೭ರಲ್ಲಿ ಹುಟ್ಟು ಹಾಕಿದರು. ಈ ಸಂಘದ ಅಧ್ಯಕ್ಷರಿಂದ ಹಿಡಿದು ಪದಾಧಿಕಾರಿಗಳ ಮಾತೃಭಾಷೆ ಕನ್ನಡವಾಗಿರಲಿಲ್ಲ. ಇಂದಿಗೂ ಇದೇ ಸ್ಥಿತಿಯಿದೆ ಎಂಬುದನ್ನು ಗಮನಿಸಬೇಕು. ಕರ್ನಾಟಕದಲ್ಲಿ ಕನ್ನಡ ಚರ್ಚಿನ ಭಾಷೆಯಾಗಬೇಕೆಂದು ಈ ಸಂಘ ನಿರಂತರವಾಗಿ ಚಳವಳಿ ನಡೆಸುತ್ತಿರಲು, ಅತ್ತ ಕನ್ನಡಪರ ನಿಲುವನ್ನು ತಳೆದ ಕೆಲವು ಗುರುಗಳು ಒಂದಾಗಿ, 'ಕರ್ನಾಟಕ ಕನ್ನಡ ಯೋಜಕರ ಬಳಗ' ಎಂಬ ಸಂಘವನ್ನು

ಆರಂಭಿಸಿದರು. ಈ ಸಂಘದ ಹನ್ನೆರಡು ಜನ ಗುರುಗಳಲ್ಲಿ ಹೆಚ್ಚಿನವರ ಮಾತೃಭಾಷೆ ಕನ್ನಡವಲ್ಲ. ಇದು ವಿಪರ್ಯಾಸ. ಒಟ್ಟಿನಲ್ಲಿ ಮೇಲಿನ ಎರಡೂ ಸಂಘಗಳು ಚರ್ಚಿನಲ್ಲಿ ಕನ್ನಡ ತರಲು ಸದಾ ಚಳವಳಿ ನಡೆಸುತ್ತಿವೆ. ಬೆಂಗಳೂರಿನ ಇತರ ಕನ್ನಡ ಸಂಘ ಸಂಸ್ಥೆಗಳು, ಸಾಹಿತಿ ಕಲಾವಿದರು ಈ ಚಳುವಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿದ್ದಾರೆ.

ನರಿಕೂಗು ಗಿರಿ ಮುಟ್ಟಲಿಲ್ಲ

ಬೆಂಗಳೂರು ಮಹಾಧರ್ಮಕ್ಷೇತ್ರದಲ್ಲಿ ಭಾಷೆಯ ಸಮಸ್ಯೆಯನ್ನು ಹುಟ್ಟು ಹಾಕಿದ ಧರ್ಮಾಧ್ಯಕ್ಷ ಲೂರ್ದುಸಾಮಿ, ಕಾರ್ಡಿನಲ್ ಆಗಿ ರೋಮಿಗೆ ಹೊರಟು ಹೋದರು. ಅವರು ಹೋಗುವ ಮೊದಲು ಕೊಯಮತ್ತೂರಿನ ಕುಂಬೇ ಕಾಡು ಎಂಬ ಗ್ರಾಮದ ಪಾಕ್ಯಂ ಆರೋಕ್ಯಸಾಮಿ ಅವರನ್ನು ಈ ಸಮಸ್ಯೆಯ ದಳ್ಳುರಿಗೆ ತಳ್ಳಿ ಹೋದರು. ಅಷ್ಟು ಚಾಣಾಕ್ಷರಾಗಿರದ ಆರೋಕ್ಯಸಾಮಿಯವರ ಅಧಿಕಾರಾವಧಿಯಲ್ಲಿ ಈ ಸಮಸ್ಯೆ ಉಲ್ಬಣಗೊಂಡಿತು. ಶಾಂತವಾಗಿ ಆರಂಭಗೊಂಡ ಚಳವಳಿ ವಿಕೋಪಕ್ಕೆ ತಿರುಗಿತು. ಹಿಂಸೆ ಗಲಭೆಗಳು ಹುಟ್ಟಿಕೊಂಡವು. ಚಳವಳಿ ಗಾರರು ತಮ್ಮ ಅಹವಾಲನ್ನು ಪೋಪ್ ವಿಶ್ವ ಗುರುವಿನವರೆಗೂ ಕೊಂಡೊಯ್ದರು. ನರಿಕೂಗು ಗರಿ ಮುಟ್ಟೀತೆ? ಎಂಬ ಮಾತಿದೆ. ಹಾಗೇ ಆಯಿತು.

ಬೆಂಗಳೂರು ಮಹಾಧರ್ಮ ಪ್ರಾಂತ್ಯದ ಭಾಷಾ ಸಮಸ್ಯೆಯ ಬಗ್ಗೆ ಸಿಬಿಸಿ ಐ (ಕಥೋಲಿಕ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ) ಗಮನ ಹರಿಸಿತು. ಸಿಬಿಸಿಐ ಯ ಅಧ್ಯಕ್ಷರಾಗಿದ್ದ ಅತಿ.ವಂ.ಡಾ. ಅಲ್ಫೊನ್ಸ್ ಮಥಿಯಾಸ್ ಅವರು ಮೂವರು ಧರ್ಮಾಧ್ಯಕ್ಷರುಗಳ ನ್ನೊಳಗೊಂಡ ಒಂದು ಆಯೋಗವನ್ನು ರಚಿಸಿದರು.[೧] ಈ ಆಯೋಗವನ್ನು ಪೋಪ್ ವಿಶ್ವಗುರುಗಳೇ ರಚಿಸಿದರೆಂಬ ಭ್ರಮೆ ಇಂದಿಗೂ ಕನ್ನಡಪರ ಹೋರಾಟಗಾರರಿಗಿದೆ. ಈ ಆಯೋಗ ಬೆಂಗಳೂರಿಗೆ ಬಂದು ಹಲವರ ಅಭಿಪ್ರಾಯ ಸಂಗ್ರಹಿಸಿ, "ಇಲ್ಲಿನ ಧರ್ಮ ಪ್ರಾಂತ್ಯದ ಭಾಷೆ ಕನ್ನಡವೇ ಆಗಿರಬೇಕು. ಉಳಿದ ಭಾಷೆಗಳಲ್ಲಿ ಪ್ರಾರ್ಥನೆ ನಡೆಸಲು ಅಡ್ಡಿಯಿಲ್ಲ"ವೆಂದು ತೀರ್ಪು ನೀಡಿತು (೧೯೮೨).[೨]

ಸಿಬಿಸಿಐ ಆಯೋಗದ ವರದಿ ಆಧಾರದ ಮೇಲೆ ಅಂದಿನ ಮಹಾಧರ್ಮಾಧ್ಯಕ್ಷ ಆರೋಕ್ಯಸಾಮಿ ಸುತ್ತೋಲೆಯೊಂದನ್ನು ಹೊರಡಿಸಿದರು (೧೯೮೩). ಅದರ ಪ್ರಕಾರ ಐದು ವರ್ಷಗಳಲ್ಲಿ ಸಾಧ್ಯವಾದರೆ ಅದಕ್ಕೂ ಮೊದಲು, ಚರ್ಚಿನ ಪ್ರಾರ್ಥನಾ ವಿಧಿಗಳಲ್ಲಿ ಕನ್ನಡವನ್ನು ಪ್ರಧಾನ ಭಾಷೆಯನ್ನಾಗಿ ಮಾಡಬೇಕಿತ್ತು. ಆದರೆ ಆ ಮಾತು ಕಾಗದದ ಮೇಲಷ್ಟೇ ಉಳಿಯಿತು. ಇದರಿಂದ ಚಳವಳಿ ಉಗ್ರ ರೂಪತಾಳಿತು. ಕನ್ನಡದ ಹಿರಿಯ ಕಿರಿಯ ಸಾಹಿತಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಚಳವಳಿಗೆ ನೈತಿಕ ಬೆಂಬಲ ವ್ಯಕ್ತಪಡಿಸಿದರು. ಪ್ರಯೋಜನ ವಾಗಲಿಲ್ಲ. ೧೯೮೮ರಲ್ಲಿ "ಚರ್ಚುಗಳಲ್ಲಿ ಕನ್ನಡ ಭಾಷೆಗೆ ಆದ್ಯತೆ ಸಿಗಬೇಕು ಎಂದು ಒತ್ತಾಯಿಸಿ ಎರಡು ಸಾವಿರಕ್ಕೂ ಹೆಚ್ಚು ಜನ ಪ್ರದರ್ಶನ ನಡೆಸಿದ್ದರಿಂದ ಬೆಂಗಳೂರಿನ ಆರ್ಚಬಿಷಪ್ ಪಿ. ಆರೋಕ್ಯಸಾಮಿ ಅವರು ರಜೆಯಲ್ಲಿ ತೆರಳಿದರು"; ಅವರು ಮತ್ತೆ ಬೆಂಗಳೂರಿಗೆ ಬರಲೇ ಇಲ್ಲ.

ಪಿಲಾತನಂತೆ ಕೈತೊಳೆದುಕೊಂಡವರು

೧೯೮೬ರಲ್ಲಿ ಬೆಂಗಳೂರು ಮಹಾಧರ್ಮ ಪ್ರಾಂತ್ಯದ ಮಹಾಧರ್ಮಾಧ್ಯಕ್ಷರಾಗಿ ಅತಿ.ವಂ.ಡಾ. ಅಲ್ಫೋನ್ಸ್ ಮಥಿಮಾಸ್ ಅವರು ನೇಮಕವಾದರು. ಹಿಂದೆ ಚಿಕ್ಕಮಗಳೂರು ಧರ್ಮ ಪ್ರಾಂತ್ಯದ ಧರ್ಮಾಧ್ಯಕ್ಷರಾಗಿ ಅವರು ಕನ್ನಡವನ್ನು ಅಲ್ಲಿ ಎತ್ತಿ ಹಿಡಿದಿದ್ದರು. ಅವರು ಬೆಂಗಳೂರಿನ ಚರ್ಚುಗಳಲ್ಲಿ ಕನ್ನಡವನ್ನು ತಂದೇ ತರುವರೆಂಬ ನಿರೀಕ್ಷೆಯನ್ನು ಕೊನೆಗೂ ಹುಸಿ ಮಾಡಿದರು. ೧೯೮೩ರ ಸುತ್ತೋಲೆಯ ಅನುಷ್ಠಾನಕ್ಕೆ ಕನ್ನಡಿಗರೇ ಇಲ್ಲದ ಸಮಿತಿಯೊಂದನ್ನು ನೇಮಿಸಿ, ರಹಸ್ಯವಾಗಿ ಆ ಸಮಿತಿಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ, ಒಂದು ಹೊಸ ಸುತ್ತೋಲೆಯನ್ನು ಹೊರಡಿಸಿದರು. ೧೯೮೮ರ ಈ ಸುತ್ತೋಲೆಯ ಪ್ರಕಾರ, ಬೆಂಗಳೂರಿನ ಚರ್ಚುಗಳಲ್ಲಿ ಯಾವುದೇ ಭಾಷೆಯನ್ನು ಬಳಸಬಹುದು ಎಂದು ಕನ್ನಡ ಚಳವಳಿಗಾರರು ಅಭಿಪ್ರಾಯ ಪಡುತ್ತಾರೆ. ಆದರೆ ಮಥಿಯಾಸರು ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರ ನಮಗಿಲ್ಲ. ತ್ರಿಭಾಷಾ ಸೂತ್ರವನ್ನು ಅಧ್ಯಯನ ಪರಿಶೀಲನೆಯಿಂದ ಜಾರಿಗೆ ತಂದಿರುವೆ ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು. "ಕನ್ನಡಕ್ಕೆ ಧರ್ಮ ಭಾಷೆಯ ಸ್ಥಾನಮಾನ ನೀಡುವ ಅಧಿಕಾರ ನನಗೆ ಸಂಬಂಧಪಟ್ಟದ್ದಲ್ಲ. ಅದು ಭಕ್ತರ ಸಮುದಾಯಕ್ಕೆ ಸಂಬಂಧಪಟ್ಟ ವಿಚಾರ"ವೆಂದು ಪಿಲಾತನಂತೆ ಕೈತೊಳೆದುಕೊಂಡು ಬಿಟ್ಟರು. ಅಷ್ಟೇಅಲ್ಲ ಚರ್ಚ್ ಆಡಳಿತದಲ್ಲಿ ನಿಷ್ಕ್ರಿಯರಾಗಿಬಿಟ್ಟರು. ಕೊನೆಗೆ ಕಡ್ಡಾಯವಾಗಿ ನಿವೃತ್ತಿಯನ್ನೂ ಪಡೆದುಕೊಂಡರು (೧೯೯೯).

ಇಂದಿಗೂ ಹಾಗೇ ಇದೆ

ಪ್ರಸಕ್ತ ಬೆಂಗಳೂರು ಮಹಾಧರ್ಮ ಪ್ರಾಂತ್ಯದಲ್ಲಿ ಅತಿ.ವಂ.ಡಾ. ಇಗ್ನೇಷಿಯಸ್ ಪಿಂಟೊ ಅವರು ಮಹಾಧರ್ಮಾಧ್ಯಕ್ಷರಾಗಿದ್ದಾರೆ. ಇಂದಿಗೂ ಚರ್ಚಿನ ಭಾಷೆ ಬೆಂಗಳೂರಿನಲ್ಲಿ ಕನ್ನಡವಾಗಿಲ್ಲ. ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಇಂದಿಗೂ ಹೋರಾಟಗಾರರು ಪ್ರದರ್ಶನ ಚಳವಳಿಗಳನ್ನು ಮಾಡುತ್ತಿದ್ದಾರೆ. ತಮ್ಮ ಹೋರಾಟಕ್ಕೆ ನಿಧಾನವಾಗಿಯಾದರೂ ಪ್ರತಿಫಲ ದೊರೆಯುವುದೆಂಬ ಆತ್ಮವಿಶ್ವಾಸ ಎರಡೂ ಕಡೆಯವರದು.

ಅನ್ಯ ಧರ್ಮಿಯರು ಧಾರ್ಮಿಕ ವಿಚಾರದಲ್ಲಿ ಪ್ರವೇಶ ಮಾಡುವುದು ಸರಿಯಲ್ಲವೆಂದು ಹಿರಿಯ ಕ್ರೈಸ್ತರನೇಕರು, ಕೇವಲ ಮೂಕವಿಸ್ಮಿತರಾಗಿ ಕೈಕಟ್ಟಿ ಕುಳಿತು ಬಿಟ್ಟಿದ್ದಾರೆ. ಧರ್ಮ ದಾರಿ ತಪ್ಪುತ್ತಿದೆ, ಮತ ಮೌಢ್ಯವಾಗಿ ನೈಜ ಪರಿಸ್ಥಿತಿ ಶ್ರೀ ಸಾಮಾನ್ಯ ವಿಶ್ವಾಸಿಗಳಿಗೆ ಅಲಭ್ಯವಾಗಿದೆ.

ಇಂದು ಚಳವಳಿಗಾರರಿಗೆ ಚರ್ಚಿನಲ್ಲಿ ಕನ್ನಡ ಬಳಕೆ ವಿಚಾರ ಹಾಗೇ ಉಳಿದಿಲ್ಲ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇದನ್ನು ಜ್ವಲಂತ ಉಳಿಸಿಕೊಂಡು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿದ್ದಾರೆ. ಕೇವಲ ಚರ್ಚಿನ ಒಳಗೆ ಮಾತ್ರವಲ್ಲ ಹೊರಗೂ ಇದೇ ಸ್ಥಿತಿಯಿದೆ.

ಚರ್ಚ್ ವಲಯಗಳಲ್ಲಿ ತೀರ್ಮಾನವಾಗಬೇಕಿದ್ದ ಈ ವಿಷಯ, ವಾದ ವಿವಾದ ಆರೋಪ ಪ್ರತ್ಯಾರೋಪಗಳ ಫಲವಾಗಿ, ನಾಲ್ಕು ದಶಕಗಳಿಗೂ ಮೀರಿ ಬೆಳೆದು ಬೀದಿಗಿಳಿದು ಕೋರ್ಟ್ ಮೆಟ್ಟಿಲನ್ನೂ, ವಿಧಾನಸೌಧ ಪ್ರವೇಶವನ್ನೂ ಪಡೆದು, ಮೆರವಣಿಗೆ-ಪ್ರತಿಭಟನೆ-ಕರಪತ್ರಗಳ

ಸಮರ-ಗೋಡೆ ಬರೆಹ ರೂಪಗಳಲ್ಲಿ ಕಾಣಿಸಿಕೊಂಡು, ಪತ್ರಿಕೆಗಳಲ್ಲಿ ಸುದ್ದಿ ಮಾಡಿತು. ಜನರ ಗಮನವನ್ನು ನಿರಂತರವಾಗಿ ಸೆಳೆದು ಜೀವಂತವಾಗಿರುವ ಈ ಚಳವಳಿ ಹೊಸಹೊಸ ಆಯಾಮಗಳನ್ನು ಈಗ ಪಡೆದುಕೊಳ್ಳುತ್ತಿದೆ. ಚರ್ಚಿನಲ್ಲಿ ಆರ್ಥಿಕ ಅಸಮಾನತೆಯೇ ಭಾಷೆಯ ವೇಷವನ್ನು ತಳೆದದ್ದೊಂದು ದುರಂತ.

ಕ್ರೈಸ್ತರ ಈ ಭಾಷಾ ಚಳವಳಿ ಇಂದು ಶಿಥಿಲವಾಗುತ್ತಿದೆ. 'ಕೊಂಕಣಿ ಮಾತೃಭಾಷೆಯ ಜನ ಕನ್ನಡಿಗರಲ್ಲ' ಎಂಬ ಕೂಗು ಕೇಳುತ್ತಿದೆ. ಕೊಂಕಣಿಯವರು ಕನ್ನಡಿಗರಲ್ಲವೆಂದ ಮೇಲೆ ಭಾಷಾ ಚಳವಳಿಯನ್ನು ಹುಟ್ಟುಹಾಕಿ ಜೀವಂತವಾಗಿರಿಸಿಕೊಂಡಿರುವ ತೆಲುಗು ಕ್ರೈಸ್ತರು ಹೇಗೆ ಕನ್ನಡಿಗರಾದಾರು? ಎಂಬ ಪ್ರಶ್ನೆಯೂ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವಸ್ತು ಸ್ಥಿತಿ ಹೀಗಿರುವಾಗ ಚರ್ಚಿನಲ್ಲಿ ಕನ್ನಡದ ಸಮಸ್ಯೆ ಹೇಗೆ ಪರಿಹಾರ ಕಂಡೀತೊ ಕಾದು ನೋಡಬೇಕಾಗಿದೆ.

ಪ್ರೊಟೆಸ್ಟಂಟರ ಸ್ಥಿತಿ

ಬೆಂಗಳೂರಿನ ಪ್ರೊಟೆಸ್ಟಂಟ್ ಪಂಗಡಗಳ ಸ್ಥಿತಿ ಕಥೋಲಿಕರಿಗಿಂತ ಭಿನ್ನವಾಗೇನಿಲ್ಲ. ಅವರೂ ಸಹ ಅನ್ಯ ಭಾಷಿಗರ-ವಿಶೇಷವಾಗಿ ತಮಿಳರ-ಮಧ್ಯೆ ಸಿಕ್ಕಿ ನರಳುತ್ತಿದ್ದಾರೆ. "...ಕಳೆದ ೩೦ ವರ್ಷಗಳಿಂದ ಕನ್ನಡಿಗರಾದ ನಾವು ತಮಿಳರ ಆಡಳಿತಕ್ಕೆ ಸಿಕ್ಕಿ ಪಡಬಾರದು ಕಷ್ಟಗಳನ್ನು ಅನುಭವಿಸಿ ನರಳುತ್ತಿದ್ದೇವೆ" ಎಂದು ನೊಂದು ನಡಿಯುತ್ತಾರೆ. "ಕನ್ನಡ ಕ್ರೈಸ್ತರಲ್ಲಿ ಜಾಗೃತಿ ಉಂಟಾಗಬೇಕು. ನಮ್ಮ ಸಹೋದರರಾದ ಕನ್ನಡ ಕ್ಯಾಥೋಲೀಕರು ತಮ್ಮ ಹಿತರಕ್ಷಣೆಗಾಗಿ ಯಾವ ರೀತಿ ದಿಟ್ಟತನದಿಂದ ಒಗ್ಗಟ್ಟಾಗಿ ಹೋರಾಡುತ್ತಿರುವರೋ, ಅದೇ ರೀತಿ ಪ್ರಾಟೆಸ್ಟೆಂಟ್ ಕ್ರೈಸ್ತರಾದ ನಾವೂ ಸಹ ಹೋರಾಟದ ಕಣಕ್ಕೆ ಇಳಿಯಬೇಕು" ಎಂಬ ನಿರ್ಧಾರಕ್ಕೆ ಅವರು ಬಂದಿದ್ದಾರೆ.

ಪರಿಹಾರೋಪಾಯ

ಒಂದು ಸಂಸ್ಕೃತಿಯ ಅಸ್ತಿತ್ವ, ರಕ್ಷಣೆ ಹಾಗೂ ಅಭಿವೃದ್ಧಿಯಲ್ಲಿ ಭಾಷೆಯ ಪಾತ್ರ ಅತ್ಯಂತ ಮಹತ್ತ್ವದ್ದು. ಏಕೆಂದರೆ ಒಂದು ತಲೆಮಾರಿಯಿಂದ ಮತ್ತೊಂದು ತಲೆಮಾರಿಗೆ, ಸಂಸ್ಕೃತಿಯ ವಾಹಕವಾಗಿ ಭಾಷೆ ಸಾಧಿತವಾಗುತ್ತದೆ. ಆದ್ದರಿಂದ ಕನ್ನಡ ಭಾಷೆಯನ್ನು ಕರ್ನಾಟಕದ ಚರ್ಚುಗಳಲ್ಲಿ ಬಳಸುವುದರಿಂದ ಇಲ್ಲಿನ ಇಡೀ ಸಮಾಜದಲ್ಲಿ ಕನ್ನಡ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿದಂತಾಗುತ್ತದೆ ಎಂಬ ಅರಿವು, ಧರ್ಮಪೀಠದ ಅಧಿಕಾರವನ್ನು ಹಿಡಿದವರಿಗೆ ಬರಬೇಕು. ಭೌಗೋಳಿಕ ಅಡೆ ತಡೆಗಳಿಂದಾಗಿ, ಪ್ರಾದೇಶಿಕ ಭಿನ್ನತೆಗಳಿಂದಾಗಿ ಬೆಂಗಳೂರಿನಂಥ ಮಹಾನಗರಗಳ ಚರ್ಚುಗಳಲ್ಲಿ ಭಾಷೆಯ ಸಮಸ್ಯೆ ಸಹಜವಾಗಿ ಉದ್ಭವಿಸುತ್ತದೆ. ಭಾರತದ ಇತರ ಮಹಾನಗರಗಳು ಇಂಥ ಸಮಸ್ಯೆಯನ್ನು ಹೇಗೆ ನಿವಾರಿಸಿಕೊಂಡಿವೆ ಎಂಬುದನ್ನು ಅಧ್ಯಯನ ಮಾಡಿ, ಸರಿಯಾದ ಮಾರ್ಗೋಪಾಯಗಳನ್ನು ಕಂಡುಕೊಳ್ಳದೆ ಬೆಂಗಳೂರು ಮಹಾಧರ್ಮ ಪ್ರಾಂತ್ಯ ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಳ್ಳಬಾರದು. ಹಾಗೆಯೇ ಚರ್ಚುಗಳಲ್ಲಿ ಕನ್ನಡ ಬಳಕೆಯಾಗಬೇಕೆಂದು ಹೋರಾಡುತ್ತಿರುವವರು ಸ್ವಾರ್ಥ ಸಾಧನೆಯನ್ನು ದ್ವೇಷಾಸೂಯೆಯನ್ನು ಮರೆತು ಕನ್ನಡಕ್ಕಾಗಿ ತಮ್ಮತನವನ್ನು ಬಿಟ್ಟು ಕೊಡಬೇಕು. ಜನ

ಮಾನಸದಲ್ಲಿ ಸುಪ್ತವಾಗಿರುವ ನಾಡು ನುಡಿಯ ಪ್ರೀತಿಯನ್ನು ಕನ್ನಡ ಪರ ಸಂಘಟನೆ ಜಾಗೃತಗೊಳಿಸುತ್ತದೆ. ಜನ ಶಕ್ತಿಯ ಕ್ರೋಢೀಕರಣ ಇಂಥ ಸಂಘಟನೆಯಿಂದ ಸಾಧ್ಯವೆಂಬುದನ್ನು ಚರ್ಚಿನ ಅಧಿಕಾರದ ಚುಕ್ಕಾಣಿ ಹಿಡಿದವರು ತಿಳಿಯಬೇಕು. ಕ್ರೈಸ್ತರ ಭಾಷಾ ಚಳವಳಿ ಭಾಷಾಂಧತೆಗೆ ಮುಟ್ಟುವ ಮೊದಲು ಚರ್ಚಿನಲ್ಲಿ ಕನ್ನಡವನ್ನು ಬಳಸಲು ಮಹಾಧರ್ಮಾಧ್ಯಕ್ಷರು ಮುಂದಾಗಬೇಕು. ಭಾಷಾ ಕೇಂದ್ರಿತವಾಗಿದ್ದ ಕನ್ನಡ ಕ್ರೈಸ್ತರ ಚಳವಳಿ ಇಂದು ಕನ್ನಡ ಕ್ರೈಸ್ತರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮುಂತಾದ ಸಮಸ್ತ ಸಮಸ್ಯೆಗಳಿಗೆ ಸ್ಪಂದಿಸುವಂತಾಗಬೇಕು. ಮಾನವೀಯ ಮೌಲ್ಯಗಳಾದ ಪ್ರೀತಿ, ವಿಶ್ವಾಸ, ಹೃದಯವಂತಿಕೆಗಳಿಂದ ಚಳವಳಿ ನಡೆಸಿದ್ದೇ ಆದರೆ, ಕನ್ನಡಿಗರೆಲ್ಲರ ಸಹಕಾರವನ್ನು ಕನ್ನಡ ಕ್ರೈಸ್ತ ಚಳವಳಿಗಾರರು ನಿರಾಯಾಸವಾಗಿ ಪಡೆಯುವುದರ ಜೊತೆಗೆ ಧರ್ಮಪೀಠದ ನೆರವನ್ನೂ ಪಡೆಯಬಹುದು. ಹೀಗೆ ಪರಸ್ಪರ ವಿಶ್ವಾಸದಿಂದ ಒಬ್ಬರಿಗೊಬ್ಬರು ಬಿಟ್ಟು ಕೊಡುವುದಾದರೆ, ಚರ್ಚುಗಳಲ್ಲಿ ಕನ್ನಡ ಬಳಕೆಯ ಸಮಸ್ಯೆಗೆ ಒಂದು ಪರಿಹಾರ ದೊರಕುತ್ತದೆ.

ಅಂಥ ಕಾಲ ಬೇಗನೆ ಕೂಡಿ ಬರಲಿ.

ಟಿಪ್ಪಣಿಗಳು

೧. ಭುವನೇಶ್ವರದ ಧರ್ಮಾಧ್ಯಕ್ಷ ಅತಿ.ವಂ.ಡಾ. ಹೆನ್ರಿ ಡಿಸೋಜ, ಜೆಂಷೆಡ್‌ಪುರದ ಧರ್ಮಾಧ್ಯಕ್ಷ ಅತಿ.ವಂ.ಡಾ. ಯೂಜಿನ್ ಡಿಸೋಜ ಮತ್ತು ಭೂಪಾಲ್‌ನ ಧರ್ಮಾಧ್ಯಕ್ಷ ಅತಿ.ವಂ.ಡಾ. ಜೋಸೆಫ್ ರೊಡ್ರಿಕ್ಸ್.

೨. ಭಾಷಾ ಆಯೋಗದ ಸಮಗ್ರ ವರದಿಗೆ ನೋಡಿ : ತಲ್ವಾಡಿ. ಬಿ.ಎಸ್. ಅವರ **ನಡೆದು ಬಂದ ದಾರಿ** (೧೯೮೯) ಪು. ೬೧-೬೭ (ಅನುಬಂಧ ೧)

ಗ್ರಂಥಋಣ

ಅ. ಕನ್ನಡ ಕೃತಿಗಳು

೧. ಅಂತಪ್ಪ ಐ, ೧೯೯೩. **ಆನೇಕಲ್ಲು ತಾಲ್ಲೂಕಿನಲ್ಲಿ ಮತ್ತು ಸುತ್ತಮುತ್ತಲಲ್ಲಿ ಕ್ರೈಸ್ತ ಧರ್ಮದ ಉಗಮ** ಬೆಂಗಳೂರು : ಕಥೋಲಿಕ ಕ್ರೈಸ್ತರ ಕನ್ನಡ ಸಾಹಿತ್ಯ ಸಂಘ.

೨. ತಲ್ವಾಡಿ ಬಿ.ಎಸ್. ೧೯೮೯. **ಕರ್ನಾಟಕ ಕ್ರೈಸ್ತರ ಇತಿಹಾಸ** ಬೆಂಗಳೂರು : ಕನ್ನಡ ಕಥೋಲಿಕರ ಸಂಘ.

೩. ತಲ್ವಾಡಿ ಬಿ.ಎಸ್. ೧೯೮೯. **ನಡೆದು ಬಂದು ದಾರಿ** ಬೆಂಗಳೂರು : ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘ.

೪. ನೊರೋನ ಎಡ್ವರ್ಡ್. ೧೯೯೬. **ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ** ಮೈಸೂರು : ಭಾಗ್ಯವಾನ್ ಪ್ರಕಾಶನ.

೫. ಹಾವನೂರ, ಶ್ರೀನಿವಾಸ. ೧೯೭೪. **ಹೊಸಗನ್ನಡದ ಅರುಣೋದಯ** ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ.

ಆ. ಇಂಗ್ಲಿಷ್ ಕೃತಿಗಳು

೧. Perumalil, A.C. and E.R. Hambye. 1972.**Christianity in India**. Alleppey:Prakasam Publications.

೨. Silva, Severine. 1957. **History of Christianity in Canara**. Vol I. Kumta : author.

ಇ. ಕನ್ನಡ ಲೇಖನಗಳು

೧. ತಲ್ವಾಡಿ ಬಿ.ಎಸ್. **'ಕ್ರೈಸ್ತರ ಕನ್ನಡ ಚಳುವಳಿಯ ದಿಕ್ಕು-ದಿಸೆಗಳು'** ಕನ್ನಡ ಪ್ರಭ. ನವೆಂಬರ್ ೨೦, ೧೯೮೮.

೨. ತಲ್ವಾಡಿ ಬಿ.ಎಸ್. **'ಕನ್ನಡ ಕ್ರೈಸ್ತರ ಚಳವಳಿಗೆ ಕೊನೆ ಎಂದು?'** ಸಂಜೆವಾಣಿ ಮಾರ್ಚ್ ೨೯, ೧೯೮೯.

೩. ನಾ. ಡಿಸೋಜ. **'ಕನ್ನಡದಲ್ಲಿ ಕರೆದರೆ ಓ ಎನ್ನನೆ ಕ್ರಿಸ್ತ'** ಪ್ರಜಾವಾಣಿ ಮಾರ್ಚ್ ೧೬, ೧೯೮೮.

೪. ಶರತ್ ಕಲ್ಕೋಡ್. **'ಕನ್ನಡ ಚರ್ಚುಗಳಿಗೇಕೆ ಬೇಡ? 'ಸುಧಾ'** ಜುಲೈ ೨೯, ೧೯೯೦.

೫. ದಯಾನಂದ ಪ್ರಭು. ಫಾ. **'ಕನ್ನಡ ಕ್ರೈಸ್ತರ ಹೋರಾಟ ಒಗ್ಗಟ್ಟು ಶಾಂತಿಯುತ ಕ್ರಿಯಾಶೀಲವಾಗಲಿ'** ಜನವಾಹಿನಿ. ನವೆಂಬರ್ ೨೩, ೧೯೯೮.

ಈ. ಇಂಗ್ಲೀಷ್ ಲೇಖನಗಳು

೧. Ravi Sharma. **'Kannada and The Chureh unholy Conflict'** Blossom city. June, 1990.

ಆಧುನಿಕತೆಯ ಭಾಷಾಂತರ : ಸಂಪ್ರದಾಯ, ಬ್ರಾಹ್ಮಣತ್ವ ಹಾಗೂ ಕೈಲಾಸಂ

•ವಿಜಯಕುಮಾರ್, ಎಂ ಬೋರಟ್ಟಿ

I

ವಸಾಹತುಶಾಹಿ ಕಾಲದ ಕನ್ನಡ ಸಾಹಿತ್ಯವು ಸಂಪೂರ್ಣವಾಗಿ ಸಮಾಜವನ್ನು ಬಿಂಬಿಸುವ, ಸಾರ್ವಕಾಲಿಕ (universal) ಮೌಲ್ಯಗಳನ್ನು ಪ್ರತಿಪಾದಿಸುವ ಅಥವಾ ಸಂಸ್ಕೃತಿಯನ್ನು ಪ್ರಭಾವಿಸುವ ಬರೀಯ ಸೃಜನಶೀಲ ಮಾದರಿಯಾಗಿರಲಿಲ್ಲ. ಬದಲಿಗೆ ಅದು ಸಾಮುದಾಯಿಕ (Community) ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬದಲಾವಣೆಗಳಿಗೆ ಮೈ ಬಗ್ಗಿಸಿಕೊಂಡು ಅನೇಕ ಸಾಮಾಜಿಕ ವಿದ್ಯಮಾನಗಳ ಜೊತೆಗೆ ಸಂಧಾನ/ಸಂವಾದ ನಡೆಸುತ್ತಿದ್ದ ಸಾಹಿತ್ಯ ಮೀಮಾಂಸೆಯ ಚಟುವಟಿಕೆಯೆಂದೂ ವಿಶ್ಲೇಷಿಸಲು ಸಾಧ್ಯವಿದೆ. ಸಾಹಿತ್ಯವು ಸಾರ್ವಕಾಲಿಕವಾಗಿ ವಸಾಹತುಶಾಹಿ ವಿರೋಧಿಯಾಗಿರದೆ, ವಸಾಹತುಶಾಹಿ ಆಧುನಿಕತೆಯು ಪ್ರಭಾವಿಸಿದ ಸಾಮಾಜಿಕ-ರಾಜಕೀಯ, ಧಾರ್ಮಿಕ ಪಲ್ಲಟಗಳ ಜೊತೆಗೆ ಸಂವಾದಿಸುತ್ತಾ-ತನ್ನನ್ನು ತಾನು ಅಧಿಕೃತಗೊಳಿಸುವ ಪ್ರಕ್ರಿಯೆಯ ಸೂಚಕವೂ ಆಗಿದೆ. ಈ ಪ್ರಕ್ರಿಯೆಯು ಲೇಖಕನ ಸಮುದಾಯವು ಇತರ ಸಮುದಾಯಗಳ ಮೇಲೆ ಸಾಂಸ್ಕೃತಿಕ ಪ್ರಭುತ್ವವನ್ನು ಸ್ಥಾಪಿಸುವ ರೀತಿಯನ್ನು ಪ್ರತಿಬಿಂಬಿಸುವ ಸಾಧ್ಯತೆಗಳನ್ನು ತೋರಿಸುತ್ತದೆ. ಆದರೆ ಭಾರತದ ಇಂದಿನ ವಸಾಹತೋತ್ತರ ಮತ್ತು ಆಧುನಿಕೋತ್ತರ ಸಂದರ್ಭಗಳಲ್ಲಿ ಸಾಹಿತ್ಯ ಕೃತಿಗಳ ಮುಖಾಂತರ ಅಭಿವ್ಯಕ್ತಿಗೊಂಡ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಬಗೆಗಿನ ಚಿಂತನೆಗಳ ಗ್ರಹಿಕೆಯಿದೆ. ಇವನ್ನು ವಸಾಹತುಶಾಹಿ ಯಜಮಾನ್ಯ ವನ್ನು ಪ್ರಶ್ನಿಸಲು ಅಥವಾ ವಿರೋಧಿಸಲು ಉದ್ಭವವಾದ ಸಾಂಸ್ಕೃತಿಕ ಹಾಗೂ ರಾಜಕೀಯ ಪರಿಕರಗಳೆಂದು ಪರಿಭಾವಿಸಲಾಗಿದೆ.

ಇತ್ತೀಚಿನ ಬೌದ್ಧಿಕ ವಲಯಗಳಲ್ಲಿ ರಾಷ್ಟ್ರೀಯತೆಯ ಮೂಲ, ಸ್ವರೂಪ ಹಾಗೂ ಅದರ ರಾಜಕೀಯವನ್ನು ಅಧ್ಯಯನಕ್ಕೊಳಪಡಿಸಿದಾಗ ಗೊತ್ತಾಗುವುದಿದು: ವಸಾಹತುಶಾಹಿ ಸಂದರ್ಭದಲ್ಲಿ ಬ್ರಾಹ್ಮಣ ಮಧ್ಯಮ ವರ್ಗದ ಸಾಮುದಾಯಿಕ ಸಮಾಜ ಸುಧಾರಣೆ; ರಾಷ್ಟ್ರದ ಬಗೆಗಿನ ಪರಿಕಲ್ಪನೆಗಳು ಮತ್ತು ಇದರ ಪರಿಣಾಮವಾಗಿ ಉಂಟಾದ ಹಿಂದೂ ಧರ್ಮದ

ಪುನರುತ್ಥಾನವಾದ, ಇತ್ಯಾದಿಗಳನ್ನು 'ರಾಷ್ಟ್ರೀಯತೆ'ಯ ಸೂಚಕಗಳೆಂದೇ ಭಾವಿಸಿರುವುದು. ಈ ಬಗೆಯ ವಿಚಾರಧಾರೆ ಏಕಮುಖವುಳ್ಳದ್ದಾಗಿದೆ. ಅಂದರೆ ಇದನ್ನು ವಸಾಹತುಶಾಹಿ ವಿರೋಧದ ಜೊತೆಗೇ ಒಂದು ಮೂಲದಿಂದ ಹುಟ್ಟಿದ ಮತ್ತು ಸ್ವಕೀಯರ ಮೇಲೆ ಯಜಮಾನಿಕೆಯನ್ನು ಸಾಧಿಸಲು ಅಭಿವ್ಯಕ್ತಗೊಂಡ ಐಡಿಯಾಲಜಿ ಮತ್ತು ವ್ಯಾವಹಾರಿಕ ವಿಚಾರಧಾರೆಯೆಂದು ತಿಳಿಯುವ ಪ್ರಯತ್ನಗಳು ಕಡಿಮೆ. ೨೦ನೇ ಶತಮಾನದ ಆದಿಯಲ್ಲಿ ಬ್ರಾಹ್ಮಣ ಸಮುದಾಯವು 'ರಾಷ್ಟ್ರೀಯತೆ'ಯನ್ನು ವಸಾಹತುಶಾಹಿ ಆಧುನಿಕತೆಗೆ ಸಂವಾದಿಯಾಗಿ/ವಿರೋಧವಾಗಿ ಅನುವಾದಿಸಿಕೊಂಡು ಕರ್ನಾಟಕದ ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ವಲಯಗಳಲ್ಲಿ ಯಜಮಾನಿಕೆಯನ್ನು ಪುನರ್‌ಸ್ಥಾಪಿಸಲು ಯತ್ನಿಸಿತು. ಈ ಪ್ರಕ್ರಿಯೆಯನ್ನು ಪ್ರಸ್ತುತ ಲೇಖನವು ಚರ್ಚಿಸುತ್ತದೆ. ಇದಕ್ಕಾಗಿ ಕನ್ನಡ ಸಾಹಿತ್ಯದ ಪ್ರಸಿದ್ಧ ನಾಟಕಕಾರರಾದ ಹಾಸ್ಯ ಪ್ರಪಿತಾಮಹ ಟಿ.ಪಿ. ಕೈಲಾಸಂ ಅವರ ಕನ್ನಡ ಹಾಗೂ ಇಂಗ್ಲೀಷ್ ನಾಟಕಗಳನ್ನು, ಇತರ ಕೆಲವು ಲೇಖನಗಳನ್ನು ಪ್ರಾತಿನಿಧಿಕವಾಗಿ ಅಧ್ಯಯನ ಮಾಡಲಾಗಿದೆ.

ಲೇಖನವು ಆರು ಭಾಗಗಳನ್ನಾಗಿ ವಿಭಾಗಿಸಲಾಗಿದೆ. ಲೇಖನದ ಮೊದಲ ಭಾಗವು ಬ್ರಾಹ್ಮಣ ಸಮಾಜದಲ್ಲಿನ ಎರಡು ವರ್ಗಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಭಾಗದ ಉದ್ದೇಶ ಕೈಲಾಸಂರಂತಹ 'ಪ್ರಗತಿ ಪರ' ಲೇಖಕರ ಹಾಗೂ 'ಸಂಪ್ರದಾಯ' ನಿಷ್ಠ ಬ್ರಾಹ್ಮಣದ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ. ಎರಡನೇ ಭಾಗವು ಸೈದ್ಧಾಂತಿಕ ಚರ್ಚೆಯನ್ನು ಮಂಡಿಸುತ್ತದೆ. ಮೂರನೇ ಭಾಗವು ಕನ್ನಡ ಸಾಹಿತ್ಯ ಮತ್ತು ಬ್ರಾಹ್ಮಣ ಸಮಾಜಕ್ಕಿರುವ ಸಂಬಂಧಗಳನ್ನು ಸಂಕ್ಷಿಪ್ತವಾಗಿ ಚರ್ಚಿಸುತ್ತದೆ. ನಾಲ್ಕನೇ ಭಾಗ ಕೈಲಾಸಂರ ಜೀವನ ಚರಿತ್ರೆಯನ್ನು ಅವರ ಕೃತಿ ವಿಶ್ಲೇಷಿಸುವ ಸಲುವಾಗಿ ಹಿನ್ನೆಲೆಯನ್ನಾಗಿ ಚರ್ಚಿಸುತ್ತದೆ. ಐದನೇ ಭಾಗ ಕೈಲಾಸಂ ಬರಹಗಳನ್ನು ವಿಶ್ಲೇಷಿಸುತ್ತದೆ. ಲೇಖನದ ಕೊನೆಯ ಆರನೇ ಭಾಗವು ಕೈಲಾಸಂ ತಮ್ಮ 'ಜಾತ್ಯಾತೀತ' ಸ್ವಅನ್ನು ಕಟ್ಟುವ ಪರಿಯನ್ನು ಚರ್ಚಿಸುತ್ತದೆ.

ಕೈಲಾಸಂ ಹಾಗೂ ಅವರ ನಾಟಕಗಳ ಬಗ್ಗೆ ಸಾಹಿತ್ಯ ವಲಯಗಳಲ್ಲಿ ಸಾಮಾನ್ಯವಾಗಿ ಇರುವ ಅರಿವು, ಅವರನ್ನು ಒಬ್ಬ ಶ್ರೇಷ್ಠ ನಾಟಕಕಾರನನ್ನಾಗಿಯೋ ಹಾಗೂ ಜನಕರನ್ನಾಗಿಯೋ ಅಥವಾ ಸಾಮಾಜಿಕ ಚಿಕಿತ್ಸಕನ್ನಾಗಿಯೋ 'ಹವ್ಯಾಸಿ' ನಾಟಕ ಪರಂಪರೆಯ ಹರಿಕಾರನೆಂದೂ ಪರಿಭಾವಿಸಿದೆ. ಅಂದಿನ ಮಧ್ಯಮ ವರ್ಗದ, ವಿದ್ಯಾವಂತರ ಅಂತರಂಗ ಹಾಗೂ ಬಹಿರಂಗಗಳ ನಡುವಿನ ಅಂತರವನ್ನು, ಡಾಂಭಿಕತೆಯನ್ನು ಮಾರ್ಮಿಕವಾಗಿ ವಿಡಂಬಿಸಿದ ಪ್ರಥಮ ಆಧುನಿಕ ನಾಟಕಕಾರನೆಂದು ಅವರನ್ನು ಭಾವಿಸಲಾಗಿದೆ.[೧] ಆದರೆ ಈ ಬಗೆಯ 'ಸಾಮಾನ್ಯ ಅರಿವು' ಕೈಲಾಸಂ ಲೇಖಿಸಿದ ಹಾಸ್ಯ, ಚಿತ್ರಿಕರಿಸಿದ ಸಾಮಾಜಿಕ ಸಮಸ್ಯೆಗಳು ವ್ಯಕ್ತಪಡಿಸಿದ ಸಾಮಾಜಿಕ "ಕ್ರಾಂತಿಕಾರಕ" ತನ, ಪ್ರತಿಪಾದಿಸಿದ ನಂತರ ಪ್ರಕಾರದ ಮೀಮಾಂಸೆಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಸಾಹಿತ್ಯಕ ಚರ್ಚೆಗಳು, ಕೈಲಾಸಂ ಯಾವ ಮಧ್ಯವರ್ಗದ ಬಗ್ಗೆ, ಹೇಗೆ ಮತ್ತು ಯಾಕೆ ನಾಟಕಗಳನ್ನು ಬರೆದರೆಂಬ ಅಂಶಗಳಿಗೆ ಹೆಚ್ಚು ಒತ್ತು ಕೊಟ್ಟಿಲ್ಲ. ಅಂದರೆ ಕೈಲಾಸಂ ಕನ್ನಡ ನಾಟಕಗಳ ಸಾಮಾಜಿಕ ಕಾಳಜಿಗಳು ಹಾಗೂ ಇಂಗ್ಲೀಷ್ ನಾಟಕಗಳ 'ಮಿಥಿಕ'

ಪಾತ್ರಗಳನ್ನು ಸಾಮಾಜಿಕ ಹಾಗೂ ರಾಜಕೀಯ ಸಂದರ್ಭಗಳಲ್ಲಿ ಇಟ್ಟು ವಿಶ್ಲೇಷಿಸಿದಾಗ ಅವು ಹೊರಡಿಸುವ ಅರ್ಥಗಳು, ಸಾರ್ವಕಾಲಿಕತ್ವವನ್ನು ಹೊಂದುವುದಿಲ್ಲ. ಬದಲಿಗೆ ಬ್ರಾಹ್ಮಣ ಸಮುದಾಯವು ಕರ್ನಾಟಕದ ಸಾಂಸ್ಕೃತಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ತನ್ನನ್ನು ತಾನು ಹೇಗೆ ಅನುವಾದಿಸಿಕೊಂಡಿತು ಎಂಬುದನ್ನು ತಿಳಿಯುವ ರೂಪಕಗಳಾಗಿ ಹೊರಹೊಮ್ಮುತ್ತವೆ. ಕೈಲಾಸಂ ನಾಟಕಗಳು ಬರೀಯ ಹವ್ಯಾಸಿ ನಾಟಕ ಪರಂಪರೆಯನ್ನು ಹುಟ್ಟು ಹಾಕುವ ಪರಿಕರಗಳಾಗಿರದೆ, 'ಪ್ರಗತಿಪರ' (progressive) ಬ್ರಾಹ್ಮಣತ್ವವು ಆಂತರಿಕ ಸಾಮುದಾಯಿಕ ಸಾಮಾಜಿಕ ಸಮಸ್ಯೆಗಳನ್ನು, ಧಾರ್ಮಿಕ ಮೂಲಭೂತವಾದವನ್ನು ಖಂಡಿಸುವುದರ ಮೂಲಕ ಕೇವಲ ಸಾಮಾಜಿಕ ಸುಧಾರಣಾವಾದಿಯಾಗಿರದೆ, 'ಹೊರಗಿನಿಂದ' ಬರುತ್ತಿದ್ದ ಅನೇಕ ರೀತಿಯ ಸಾಮಾಜಿಕ ಹಾಗೂ ರಾಜಕೀಯ ಸವಾಲುಗಳಿಗೆ ಜವಾಬನ್ನು ಹುಡುಕುವ ತವಕವನ್ನು ಕಾಣಿಸುತ್ತವೆ. ಅಂದರೆ ಕೈಲಾಸಂರಂತಹ ನಾಟಕಕಾರರು ಬ್ರಾಹ್ಮಣ ಸಮುದಾಯದ ಧಾರ್ಮಿಕ ಡಾಂಬಿಕತೆಯನ್ನು ಟೀಕಿಸುವುದರ ಮೂಲಕ ಆ ಸಮುದಾಯದ ಸಾಮಾಜಿಕ ಸುಧಾರಣೆಯನ್ನು ಒಂದು ಕಡೆ ಪ್ರತಿಪಾದಿಸಿದರೆ, ಮತ್ತೊಂದು ಕಡೆ 'ಹೊರಗಿನ' ಸವಾಲುಗಳಿಗೆ ತಮ್ಮದೇ ಆದ 'ಉದಾರವಾದಿ' ಮನೋಭಾವನೆಯ ಮೂಲಕ ಉತ್ತರವನ್ನು ಹುಡುಕುತ್ತಿದ್ದರು. ಇಂತಹ 'ದ್ವಿಮುಖ' ಮನೋಭಾವವು ಹಿಂದೂ ಪುನರುತ್ಥನವಾದಿಯಾಗಿಯೂ ಮಾರ್ಪಾಡಾಗಿತ್ತು.

ಕೈಲಾಸಂರಂತಹ 'ದ್ವಿಮುಖ' ಲೇಖಕರ 'ಪ್ರಗತಿಪರ' ಬ್ರಾಹ್ಮಣತ್ವವನ್ನು ಬ್ರಾಹ್ಮಣ ಸಮುದಾಯದಲ್ಲೇ ಇದ್ದ ಮೂಲಭೂತವಾದಿ ಪಂಗಡದ ಜೊತೆಗೆ ಹೋಲಿಸಿ ನೋಡಬೇಕು. ಅಂದರೆ ಬ್ರಾಹ್ಮಣ ಸಮುದಾಯದಲ್ಲಿ ಎರಡು ರೀತಿಯ ಪಂಗಡಗಳನ್ನು ನೋಡಬಹುದು. ಒಂದು-ಮೂಲಭೂತವಾದಿ, "ಸಂಪ್ರದಾಯ" ನಿಷ್ಠ ಬ್ರಾಹ್ಮಣ ವಿದ್ಯಾವಂತ ವರ್ಗ; ಎರಡು-ಪ್ರಗತಿಪರ, ಜಾತ್ಯಾತೀತ 'ಬ್ರಾಹ್ಮಣ ವಿದ್ಯಾವಂತ'; ಇದರರ್ಥ ಎರಡೂ ಸಂಪೂರ್ಣ ಭಿನ್ನ ಭಿನ್ನವಾದವು ಎಂದರ್ಥವಲ್ಲ. ಒಂದರ ಅಸ್ತಿತ್ವಕ್ಕೆ ಮತ್ತೊಂದರ 'ಇರುವಿಕೆ' ಅತ್ಯವಶ್ಯಕ. ಏಕೆಂದರೆ ಎರಡೂ ಪರಿಕಲ್ಪನೆಗಳು ಕಲ್ಪಿಸಲ್ಪಟ್ಟಂತಹವು. ಅಲ್ಪಸಂಖ್ಯಾತ ಪ್ರಗತಿಪರ ವಿದ್ಯಾವಂತ ಬ್ರಾಹ್ಮಣ ವರ್ಗ ಬಯಸುತ್ತಿದ್ದ ಸುಧಾರಣೆಗಳನ್ನು ಬಹುಸಂಖ್ಯಾತ "ಸಂಪ್ರದಾಯ ನಿಷ್ಠ" ವಿದ್ಯಾವಂತ ಬ್ರಾಹ್ಮಣ ವರ್ಗ ವಿರೋಧಿಸುತ್ತಿತ್ತು. ಇದು ಕರ್ನಾಟಕದಲ್ಲಿ ಮಾತ್ರವಲ್ಲ, ವಸಾಹತು ಭಾರತದ ಇತರ ಸ್ಥಳಗಳಲ್ಲೂ ಇದು ಸರ್ವೇಸಾಮಾನ್ಯವಾಗಿದ್ದಿತು. ಆದ್ದರಿಂದ ವಸಾಹತುಶಾಹಿ ಭಾರತದಲ್ಲಿ ಪಶ್ಚಿಮದಿಂದ "ತರಲ್ಪಟ್ಟವು" ಎಂದುಕೊಂಡಿರುವ ಪ್ರಜಾಪ್ರಭುತ್ವ, ಜಾತ್ಯಾತೀತತೆ, ವ್ಯಕ್ತಿತ್ವ, ಪೌರತ್ವ ಇವು ಎರಡು ಪಂಗಡಗಳ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಘರ್ಷಗಳ ಪರಿಣಾಮವಾಗಿ ರೂಪುಗೊಂಡಿರುವಂತಹವು. ಇದರರ್ಥ ಈ 'ಪಾಶ್ಚಿಮಾತ್ಯ' ಪರಿಕರಗಳು ಬ್ರಾಹ್ಮಣ ಸಮುದಾಯದ ನಡುವಿನ ಸಂಘರ್ಷಗಳ ಮಂಥನದಿಂದ ಮಾತ್ರ ಉದಯಿಸಿದವು ಎಂದಲ್ಲ. ಬ್ರಾಹ್ಮಣ ಸಮುದಾಯವು ಇತರ ಸಮುದಾಯಗಳ ಜೊತೆ ಸಾಂಸ್ಕೃತಿಕವಾಗಿ ಪೈಪೋಟಿ ಹಾಗೂ ಸಂವಾದಕ್ಕೆ ಇಳಿದುದರ ಪರಿಣಾಮವಾಗಿ ಸಹ, ಈ ಪಾಶ್ಚಿಮಾತ್ಯ ಪರಿಕರಗಳ ಸ್ವೀಕರಣ/ಮಾರ್ಪಾಟಿನ ಕ್ರಮ ಜರುಗಿತು. ಬ್ರಾಹ್ಮಣೇತರ

ಸಮುದಾಯಗಳು ವಸಾಹತುಶಾಹಿ ಸಮಯದಲ್ಲಿ ಆಧುನಿಕತೆಯನ್ನು ರೂಪಿಸಿ ಮತ್ತು ಸಂಪಾದಿಸಿಕೊಂಡಿದ್ದರಿಂದಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರುಪೇರುಗಳು, ಬ್ರಾಹ್ಮಣ ಸಮುದಾಯವು ತನ್ನನ್ನು ತಾನು ಜಾಗೃತಗೊಳಿಸಿಕೊಳ್ಳಲು ಹಾಗೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಮುಂದುವರೆಸಿಕೊಂಡು ಹೋಗಲು ಪ್ರೇರಕಗಳಾದವು. ಇದರ ಪರಿಣಾಮವಾಗಿ ಬ್ರಾಹ್ಮಣ ಸಮುದಾಯದಲ್ಲೇ ಎರಡು ಪಂಗಡಗಳ ಸಾಂಸ್ಕೃತಿಕ ಸ್ಮೃತಿಧಾರೆಯು ಭಿನ್ನಭಿನ್ನ ಆಕಾರಗಳನ್ನು ತಳೆಯಿತು. ಇದರರ್ಥ ಎರಡೂ ಧಾರೆಗಳು ಒಂದಕ್ಕೊಂದು ವಿರುದ್ಧವಾಗಿದ್ದವು ಎಂದರ್ಥವಲ್ಲ. ಅನೇಕ ಅರ್ಥಗಳಲ್ಲಿ ಎರಡೂ ಧಾರೆಗಳು ಒಂದಕ್ಕೊಂದು ಪೂರಕವಾಗಿದ್ದವು. ಎರಡು ಧಾರೆಗಳು ಮೇಲ್ಜಾತಿಯ ಯಜಮಾನಿಕೆ ಮೂಲದಿಂದ ಹೊರಟ ದೃಷ್ಟಿಕೋನಗಳು. ಆದರೆ ಕೆಲವು ಸಾಂಸ್ಕೃತಿಕ ಅಂಶಗಳನ್ನು ನೋಡಿದ್ದು, ಆರಿಸಿದ್ದು, ವ್ಯಾಖ್ಯಾನಿಸಿದ್ದು ಹಾಗೂ ಚಲಾವಣೆಗೆ ತರಲು ಪ್ರಯತ್ನಿಸಿದ್ದು, ಈ ಎರಡು ಪಂಗಡಗಳ ಭಿನ್ನಭಿನ್ನ ಮನೋದೃಷ್ಟಿಯಿಂದಲೇ. ಪರಿಣಾಮವಾಗಿ ಇದು ಸಾಮಾಜಿಕ ಶ್ರೇಣಿಕರಣವನ್ನು ಬದಲಾಯಿಸದೇ Status quo ಉಳಿಸಿಕೊಳ್ಳಲು ಹಾಗೂ ಮುಂದುವರಿಸಿಕೊಂಡು ಹೋಗಲು ಮಾಡಿದ ಪ್ರಯತ್ನಗಳಾಗಿ ಕಾಣಿಸುತ್ತದೆ. ಮತ್ತೊಂದರ್ಥದಲ್ಲಿ 'ಹಿಂದೂ ಸಂಸ್ಕೃತಿ'ಯಲ್ಲಿ ಆಯ್ಕೆಗೊಂಡ ಸಾಂಸ್ಕೃತಿಕ ಅಂಶಗಳನ್ನು ಉಪಯೋಗಿಸಿಕೊಂಡ ರೀತಿಗಳು ಬೇರೆಬೇರೆ ಅಷ್ಟೆ. ಈ ಭಿನ್ನ ದೃಷ್ಟಿಕೋನಗಳು ಬ್ರಾಹ್ಮಣ ಸಮುದಾಯದ ಯಜಮಾನಿಕೆಯನ್ನು ಸ್ಥಾಪಿಸುವ ಜೊತೆಗೆ, ತಾವು ಪ್ರಸರಿಸುತ್ತಿದ್ದ ವಿಚಾರಧಾರೆಗಳನ್ನು ನಾಗರಿಕತೆ, ಧರ್ಮ, ಇತಿಹಾಸ, ಶಿಕ್ಷಣ, ಕಲೆ, ಸಾಹಿತ್ಯಗಳಿಗೆ ಸಂಬಂಧಿಸಿದ 'ಅಧಿಕೃತ'ವೆಂದು ಸ್ಥಾಪಿಸಲು ಪ್ರಯತ್ನಿಸುತ್ತಿದ್ದವು. ವಿದ್ಯಾವಂತ ಪ್ರಗತಿಪರ ಬ್ರಾಹ್ಮಣ ವರ್ಗದ ಈ ಪ್ರಯತ್ನಗಳ ಪರಿಯನ್ನು ಅಧ್ಯಯನಕ್ಕೊಳ ಪಡಿಸಿರುವ ಸುಧೀರ್ ಚಂದ್ರರ 'The Oppresive Present: Literature and Social Consciousness in Colonial India' ಒಂದು ಗಮನಾರ್ಹ ಪ್ರಯತ್ನ.[3] ಮುಂದಿನ ಚರ್ಚೆಯಲ್ಲಿ ಸುಧೀರ್‌ಚಂದ್ರರ ವಿಚಾರಗಳು ವಸಾಹತುಶಾಹಿಯಲ್ಲಿ 'ಆಧುನಿಕತೆ' ಹಾಗೂ 'ಪರಂಪರೆ (Tradition)ಗಳು ಹೇಗೆ ಮತ್ತು ಯಾವ ಕಾರಣಗಳಿಗಾಗಿ ಮುಖ್ಯವಾಗುತ್ತವೆಎಂದು ನೋಡಬಹುದು.ಅವರು ಪರಿಭಾವಿಸುವ 'ರಾಷ್ಟ್ರೀಯ ವಿಶಾಲ ವಿಚಾರಧಾರೆ' ದಕ್ಷಿಣ ಭಾರತದ ಭಿನ್ನಭಿನ್ನ, ರಾಷ್ಟ್ರೀತೆಗಳನ್ನು ಅರ್ಥಮಾಡಿಕೊಳ್ಳಲು ಎಷ್ಟೊಂದು ಉಪಯುಕ್ತವಾದುದು, ಸಮಂಜಸವಾದುದು ಎಂಬುದನ್ನು ತಿಳಿಯಬಹುದು.

II

ಸುಧೀರ್ ಚಂದ್ರರ ಪ್ರಕಾರ, ವಸಾಹತುಶಾಹಿ ಭಾರತೀಯ ವಿದ್ಯಾವಂತ ಮಧ್ಯಮ ವರ್ಗವು ತನ್ನ ರಾಜಕೀಯ ಹಕ್ಕುಗಳಿಗಾಗಿ ಹಾಗೂ ಪಶ್ಚಿಮದ ಎದುರಿಗೆ ರಾಜಕೀಯ ಪ್ರತಿರೋಧದ ವಿಧಾನಗಳಿಗಾಗಿ ವಸಾಹತುಶಾಹಿ ಪ್ರಭುತ್ವದ ವಿಚಾರಧಾರೆ (ideology)ಗಳಿಂದಲೇ ಅನೇಕ ವಿಚಾರಗಳನ್ನು ಸ್ವೀಕರಿಸಿತು. ಸಮಾನತೆ, ನ್ಯಾಯಪರತೆ, ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ಇತ್ಯಾದಿ ಪರಿಕರಗಳನ್ನು ವಿದ್ಯಾವಂತ ವರ್ಗವು ತನ್ನ ಐಡಿಯಾಲಜಿಗೆ ಒಗ್ಗಿಸಿಕೊಂಡು

ವಸಾಹತುಶಾಹಿ ಪಶ್ಚಿಮದ 'ಸಾಂಸ್ಕೃತಿಕ ಶ್ರೇಷ್ಠತೆ'ಯನ್ನು ಬಗ್ಗು ಬಡಿದು 'ಸ್ವಂತಿಕೆಯನ್ನು' ಕಂಡುಕೊಳ್ಳಲು ಪ್ರಯತ್ನಿಸಿತು. ಪರಿಣಾಮವಾಗಿ ಸಂಪ್ರದಾಯದ ಶೋಧನೆಯಾಯಿತು. ಪಾಶ್ಚಿಮಾತ್ಯ ಸಾಂಸ್ಕೃತಿಕ ಶ್ರೇಷ್ಠತೆಯ ಮಾದರಿಯಲ್ಲೇ ಭಾರತೀಯ ಸಂಪ್ರದಾಯವು ಶ್ರೇಷ್ಠವಾದುದು ಎಂಬ ನಂಬಿಕೆಯನ್ನು ಇದು ಬಲವಾಗಿ ಬೇರೂರುವಂತೆ ಮಾಡಿತು. ಹೀಗೆ ಹತ್ತೊಂಬತ್ತನೆಯ ಶತಮಾನದಲ್ಲಿ ಬಲವಾಗಿ ಬೆಳೆದ ಇಂತಹ ನಂಬಿಕೆಯು, ಹೇಗೆ ಭಾರತದ ಎಲ್ಲಾ ವಿದ್ಯಾವಂತ ಮಧ್ಯಮ ವರ್ಗದ ಸಾಂಸ್ಕೃತಿಕ ಸ್ಮೃತಿ ಹಾಗೂ ಸಾಮಾಜಿಕ ಅರಿವಿನ (Socal Consciousness) ತಳಹದಿಯಾಯಿತು ಎಂಬುದನ್ನು ಚಂದ್ರ ತೋರಿಸಿದ್ದಾರೆ. ವಸಾಹತುಶಾಹಿ ಸ್ಥಳೀಯ ವಿದ್ಯಾವಂತ ವರ್ಗವು ಸಂಪ್ರದಾಯ ಹಾಗೂ ಭಾರತೀಯ ಕಲ್ಪನೆಗಳ ವಿಚಾರಧಾರೆಗಳು ಹೇಗೆ ಸ್ಥಳೀಯ ವಿಷಯಗಳಾದ ಜಾತೀಯತೆ, ಸಾಮಾಜಿಕ ಶೋಷಣೆ, ಪ್ರಾಂತೀಯತೆ ಹಾಗೂ ಸಾಮಾಜಿಕ ವಿರೋಧಗಳನ್ನು ತನ್ನ ಪರಿಧಿಯೊಳಗೆ ಒಳಗೊಳ್ಳಲಿಲ್ಲ ಎಂಬ ಬಗ್ಗೆ ಚಂದ್ರ ಸಂಕ್ಷಿಪ್ತವಾಗಿ ಚರ್ಚಿಸುತ್ತಾರೆ. ಚಂದ್ರರ ಗಮನ ರಾಷ್ಟ್ರೀಯ ವಿಶಾಲ ವಿಚಾರಧಾರೆಯ ಸ್ವರೂಪದ ಬಗ್ಗೆ ಇರುವುದರಿಂದ, ಸಾಮಾಜಿಕ ಸ್ತರಗಳ ಪರಸ್ಪರ ಕಾರ್ಯವಿಧಾನಗಳ ಹಾಗೂ ಜಾತೀಯ ಶೋಷಣೆಯ ಕಡೆಗೆ ಅವರು ಹೆಚ್ಚು ಗಮನಹರಿಸಿಲ್ಲ. ಆದರೆ 'ಸಂಪ್ರದಾಯ' ಹಾಗೂ 'ಆಧುನಿಕತೆ'ಯನ್ನು ಪರಸ್ಪರ ವಿರೋಧಿಯಾಗಿ (Binary Opposites)ಪರಿಭಾವಿಸುವ ರೀತಿಯನ್ನು ಸಮಸ್ಯಾತ್ಮಕವನ್ನಾಗಿ ತೋರಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅವರ ಪ್ರಕಾರ ಸಂಪ್ರದಾಯ-ಆಧುನಿಕತೆಗಳನ್ನು ಒಂದಕ್ಕೊಂದು ವಿರುದ್ಧ ಧ್ರುವಗಳು ಎಂದು ಭಾವಿಸಬೇಕಿಲ್ಲ. ಅವು ಒಂದಕ್ಕೊಂದು ಪೂರಕವಾದವು. ಇನ್ನೊಂದರ್ಥದಲ್ಲಿ ಸಂಪ್ರದಾಯವು ಆಧುನಿಕತೆಯ ಮತ್ತೊಂದು ರೂಪ ಎನ್ನಬಹುದು. ಈ ಆಧುನಿಕತೆ-ಸಂಪ್ರದಾಯದ ಕಲ್ಪನೆಗಳನ್ನು ಕಟ್ಟುವ ಪ್ರಕ್ರಿಯೆಯಲ್ಲಿ 'ಸಂಪ್ರದಾಯ ನಿಷ್ಠ' ಬ್ರಾಹ್ಮಣ ಹಾಗೂ ಪ್ರಗತಿಪರ ಬ್ರಾಹ್ಮಣ ವಿದ್ಯಾವಂತ ವರ್ಗದ ನಡುವೆ ನಡೆದ ಸಾಂಸ್ಕೃತಿಕ-ಸಾಮಾಜಿಕ ಸಂಘರ್ಷಗಳನ್ನು ಚಂದ್ರ ಅವರು ಸಂಕ್ಷಿಪ್ತವಾಗಿ ಚರ್ಚಿಸಿದರೂ ಈ ಚರ್ಚೆ ಗಮನಾರ್ಹ ವಾಗಿದೆ. ಅವರ ಇಡೀ ವಿಭಾಗ ಮಂಡನೆಯು 'ವಿಶಾಲ ಸಾಮಾಜಿಕ' ಅರಿವಿನ ವಿಚಾರಧಾರೆಯು ಹೇಗೆ ಇತರ ಭಾರತೀಯ ವಿದ್ಯಾವಂತ-ವರ್ಗಗಳ ಸಾಂಸ್ಕೃತಿಕ ಮನೋಭೂಮಿಕೆಯನ್ನು ತಯಾರಿಸಿತು ಎಂದು ಚರ್ಚಿಸುತ್ತದೆ. ಸಂಪ್ರದಾಯ ಮತ್ತು ಬ್ರಾಹ್ಮಣ ವಿದ್ಯಾವಂತ ವರ್ಗದ ಈ ರಾಷ್ಟ್ರೀಯ ವಿಚಾರಧಾರೆಯು, ಪಾಶ್ಚಾತ್ಯ ಶೋಷಣೆಯ ಹಾಗೂ ಸಾಂಸ್ಕೃತಿಕ ಪ್ರಭುತ್ವದ ವಿರುದ್ಧವಾಗಿ ರೂಪುಗೊಂಡಂತಹದ್ದು ಎಂಬುದು ಚಂದ್ರರ ನಂಬಿಕೆಯಾಗಿದೆ. ಈ ವಸಾಹತು ಶಾಹಿ ವಿದ್ಯಾವಂತ ಗಣ್ಯ (elite) ವರ್ಗದ 'ಪಾಶ್ಚಾತ್ಯ ದಬ್ಬಾಳಿಕೆ'ಯ ಅನುಭವವು 'ರಾಷ್ಟ್ರೀಯ' ವಿಚಾರಧಾರೆಯ ಹುಟ್ಟಿಗೆ ಹಾಗೂ ಸಂಪ್ರದಾಯ-ಆಧುನಿಕತೆಯ ದ್ವಿಮುಖ ಅಸ್ತಿತ್ವಕ್ಕೆ ಪ್ರಮುಖ ಕಾರಣವಾಗಿದೆ ಎಂದು ಗುರುತಿಸಲಾಗಿದೆ. ಚಂದ್ರರು 'ರಾಷ್ಟ್ರೀಯತೆ' ಈ ಬೆಳವಣಿಗೆಯನ್ನು ಭಿನ್ನಭಿನ್ನ ಪ್ರಾಂತ್ಯಗಳಿಗೆ ಹಾಗೂ ಭಿನ್ನ ಭಾಷಾ ಸಮೂಹಗಳಿಗೆ ಸೇರಿದ ಕೃಷ್ಣಚಂದ್ರ ಭಟ್ಟಾಚಾರ್ಯ, ರಾಧಾಕೃಷ್ಣದೇವ್, ಮಹಾದೇವ ಗೋವಿಂದ ರಾನಡೆ ಹಾಗೂ ಭರತೇಂದ್ರು

ಹರಿಶ್ಚಂದ್ರರ 'ರಾಷ್ಟ್ರೀಯ' ವಿಚಾರಧಾರೆಗಳನ್ನು ವಿಶ್ಲೇಷಿಸುವುದರ ಮೂಲಕ ತೋರಿಸಿ ಕೊಡುತ್ತಾರೆ. ಇಂತಹ 'ಪ್ರಗತಿಪರ' ಬ್ರಾಹ್ಮಣ ವಿದ್ಯಾವಂತ ಗಣ್ಯರ ಹಾಗೂ 'ಸಂಪ್ರದಾಯ ನಿಷ್ಠ' ಬ್ರಾಹ್ಮಣರ ನಡುವೆ ನಡೆದ ಸಾಮಾಜಿಕ-ಸಾಂಸ್ಕೃತಿಕ ಸಂಘರ್ಷಗಳ ಮೂಸೆಯಿಂದ ಉದ್ಭವಿಸಿದ ಕೆಲವೊಂದು ಮೌಲ್ಯಗಳು, ಪ್ರಗತಿಪರ ವಿಶಾಲ ರಾಷ್ಟ್ರೀಯ ವಿಚಾರಧಾರೆಯನ್ನು ಹೇಗೆ ಮತ್ತಷ್ಟು ಬಲವಾಗಿಸುವಂತೆ ಮಾಡಿದವು ಎಂದು ಚಂದ್ರ ತೋರಿಸಿದ್ದಾರೆ. ಈ 'ವಿಶಾಲ ರಾಷ್ಟ್ರೀಯಧಾರೆ'ಯು ಹಿಂದೂ ಮೌಲ್ಯಗಳನ್ನು ಪುಷ್ಟೀಕರಿಸಿದವು ಎಂದು ಪ್ರತ್ಯೇಕವಾಗಿ ಹೇಳುವ ಆವಶ್ಯಕತೆಯಿಲ್ಲ.

ಆದರೆ ಸುಧೀರ್ ಚಂದ್ರರ ವಿಚಾರಗಳು ಅನೇಕ ಪ್ರಶ್ನೆಗಳನ್ನು ಹುಟ್ಟಿಸುತ್ತವೆ. ಈ ಪ್ರಶ್ನೆಗಳು ಚಂದ್ರ ಅವರ ಇತಿ-ಮಿತಿಗಳನ್ನೂ ಸಹ ತೋರಿಸುತ್ತವೆ. ಅವೆಂದರೆ - ವಿಶಾಲ ರಾಷ್ಟ್ರೀಯ ವಿಚಾರಧಾರೆಯು ವಸಾಹತುಶಾಹಿ ವಿರೋಧಿಯಾದುದು ಎಂದರೆ, ಭಾರತದ ಇತರ ಪ್ರಾಂತ್ಯಗಳಲ್ಲಿ ಹಿಂದೂ ಧರ್ಮದ ಬಗ್ಗೆ, ನಾಗರಿಕತೆಯ ಬಗ್ಗೆ ಭಿನ್ನ ಭಿನ್ನ ಸಾಹಿತ್ಯ ಕೃತಿಗಳನ್ನು ರಚಿಸುವ ಅವಶ್ಯಕತೆ ಏನಿತ್ತು? ಇಂತಹ ಸಾಹಿತ್ಯ ಕೃತಿಗಳಲ್ಲಿ ಕಂಡು ಬರುವ ವಿವಿಧ ರೂಪಗಳು, ಸಾಮಾಜಿಕ ಕಾಳಜಿ, ಸಾಂಸ್ಕೃತಿಕ ಅಂಶಗಳನ್ನು ಹೇಗೆ ಅರ್ಥೈಸುಕೊಳ್ಳುವುದು? ಬ್ರಾಹ್ಮಣ ವಿದ್ಯಾವಂತ ವರ್ಗದಿಂದ ರಚಿಸಲ್ಪಟ್ಟ ಸಾಹಿತ್ಯ ಕೃತಿಗಳು ನಿಸ್ಸಂದೇಹವಾಗಿ ಸಮಾಜದಲ್ಲಿನ ಸಂಘರ್ಷಗಳನ್ನು, ಬದಲಾವಣೆಗಳನ್ನು, ಸಾಮಾಜಿಕ ಸಂಬಂಧಗಳಲ್ಲಿ ಆಗುತ್ತಿದ್ದ ಪಲ್ಲಟಗಳನ್ನು ಚಿತ್ರಿಸುತ್ತವೆ. ಹಾಗಾದಲ್ಲಿ ವಸಾಹತುಶಾಹಿಯೊಂದೇ ದಬ್ಬಾಳಿಕೆ ಖೋರನಾಗಿತ್ತೇ? ಅಥವಾ ವಸಾಹತು ಸಂದರ್ಭದ ದಬ್ಬಾಳಿಕೆಯ ಅನುಭವಕ್ಕೆ ಬೇರೆ ಕಾರಣಗಳು ಇರಬಹುದೆ? ವಸಾಹತುಶಾಹಿ ಭಾರತದಲ್ಲಿ ಪ್ರಾಂತೀಯ ವಸಾಹತುಶಾಹಿ ಅನುಭವಗಳು ಭಿನ್ನಭಿನ್ನವಾಗಿದ್ದವು ಎಂಬುದನ್ನು ಒಪ್ಪುವದಾದರೆ, 'ವಿಶಾಲ ಹಿಂದೂ ರಾಷ್ಟ್ರೀಯಧಾರೆ'ಯನ್ನು ಪ್ರಾಂತೀಯ ಬ್ರಾಹ್ಮಣ ವಿದ್ಯಾವಂತ ಗಣ್ಯರು ಚಿತ್ರೀಕರಿಸಿದುದರ ಹಿನ್ನೆಲೆ ಏನು? ರಾಷ್ಟ್ರೀಯ ವಿಚಾರಧಾರೆಯನ್ನು ವಿವಿಧ ಸಾಹಿತ್ಯ ವಲಯಗಳಲ್ಲಿ ಅರ್ಥೈಸಿಕೊಂಡಿದ್ದರ ಸ್ವರೂಪವೇನು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಅವಶ್ಯಕತೆ ಇದೆ. ರಹಮತ್ ತರೀಕೆರೆಯವರು ಇದೇ ವಿಷಯವಾಗಿ ಗಮನಾರ್ಹವಾದ ವಿಮರ್ಶೆಯನ್ನು ಮಂಡಿಸಿದ್ದಾರೆ. 'ಕನ್ನಡ ಸಾಹಿತ್ಯ ಮೀಮಾಂಸೆ' (೨೦೦೧)ಕ್ಕೆ ಪ್ರಸ್ತಾವನೆಯನ್ನು ಬರೆಯುತ್ತಾ ಅವರು ಹೀಗೆ ಹೇಳುತ್ತಾರೆ.

> ಲೇಖಕರಲ್ಲಿ ಯಾವುದೇ ಒಂದು ವಿಷಯದ ಮೇಲೆ ತಾತ್ವಿಕ ಭಿನ್ನಾಭಿಪ್ರಾಯ ಮೂಡಲು ಒಂದು ಕಾರಣ, ಅವರ ಕಾಲ ಮತ್ತು ಸಂದರ್ಭಗಳಲ್ಲಿ ಬದಲಾವಣೆ ಆಗಿರುವುದು. ಆದರೆ ಕಾಲ ಸಂದರ್ಭ ಒಂದೇ ಇದ್ದಾಗಲೂ, ಒಂದೇ ಪಂಥಕ್ಕೆ ಸೇರಿದ ಲೇಖಕರಲ್ಲೂ, ಭಿನ್ನದನಿಗಳು ಮೂಡಿವೆ. ಇದಕ್ಕೆ ಕಾರಣವನ್ನು, ಆಯಾ ಲೇಖಕರ ಸಾಮಾಜಿಕ ರಾಜಕೀಯ ಹಿನ್ನೆಲೆಗಳಲ್ಲಿ ಅರಸಬೇಕೋ ಏನೋ. ಅಂದರೆ ಸಾಹಿತ್ಯ ಮೀಮಾಂಸೆಯಲ್ಲಿ ಲೇಖಕರು ತಂತಮ್ಮ ವರ್ಗದ ಸಾಮಾಜಿಕ ರಾಜಕೀಯ ಹಿತಗಳನ್ನು ರಕ್ಷಿಸಿಕೊಳ್ಳುವ ಅಥವಾ ಇವುಗಳಿಂದ ಆಗುತ್ತಿರುವ ತಾರತಮ್ಯವನ್ನು ವಿರೋಧಿಸುವ ಒತ್ತಾಯಗಳು ಕೆಲಸ ಮಾಡುತ್ತವೆಯೆಂದು ಅರ್ಥವೇ? ನಿಜ, ವಿಭಿನ್ನ ಸಮುದಾಯಗಳು - ವರ್ಗಗಳು,

ಸಮಾಜದಲ್ಲಿ ಸಂಭವಿಸುವ ವಿದ್ಯಮಾನಗಳಿಗೆ, ತಮ್ಮ ಬರಹಗಾರರ ಮೂಲಕ ಪ್ರತಿಕ್ರಿಯಿಸಿದಂತೆಯೂ ಸಾಹಿತ್ಯ ಮೀಮಾಂಸೆ ತೋರತೊಡಗುತ್ತದೆ.

ತರೀಕೆರೆಯವರು ವ್ಯಕ್ತಪಡಿಸಿರುವ ಸಾಹಿತ್ಯ ಮೀಮಾಂಸೆಯ ವಿಮರ್ಶೆಯನ್ನು ಸಾಹಿತ್ಯ ಕೃತಿಗಳಿಗೂ ವಿಸ್ತರಿಸಬಹುದು. ಇಲ್ಲದಿದ್ದರೆ ಪ್ರಾಂತೀಯ ಸಾಹಿತ್ಯ/ಸಾಂಸ್ಕೃತಿಕ ವಿಚಾರಧಾರೆಗಳು 'ವಿಶಾಲ ರಾಷ್ಟ್ರೀಯಧಾರೆ'ಯ ಬರಿಯ ನೆರಳುಗಳಾಗಿ ಕಾಣುವ ಅಪಾಯವಿದೆ. ಪ್ರಾಂತೀಯ ವಿದ್ಯಾವಂತ ಗಣ್ಯರನ್ನೇ ಪ್ರಭಾವಿಸಿದ ಇತಿಹಾಸದ ಸಂದರ್ಭಗಳು ಸ್ಥಳೀಯ - ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಒತ್ತಡಗಳು, ಕಾಳಜಿಗಳು ವಿವಾದಾತೀತವಾಗಿ ಬೇರೆಬೇರೆಯಾಗಿದ್ದವು. ಪಾಶ್ಚಿಮಾತ್ಯದಿಂದ ಕಡವಾಗಿ ತಂದ ಆಧುನಿಕತೆಯನ್ನು ಅಥವಾ ವಿಶಾಲ ರಾಷ್ಟ್ರೀಯ ಧಾರೆಗಳನ್ನು ಯಾರೂ 'ಕುರುಡುತನ'ದಿಂದ ಅನುಕರಿಸಲಿಲ್ಲ. ಆಧುನಿಕ ಹಾಗೂ ಸಂಪ್ರದಾಯಗಳನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದರು, ಅರ್ಥೈಸಿದರು ಮತ್ತು ಅಧಿಕೃತಗೊಳಿಸಿಕೊಂಡರು. ಸ್ಥಳೀಯ ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳಿಗೆ, 'ವಿಶಾಲ ಹಿಂದೂ ರಾಷ್ಟ್ರೀಯ' ಚೌಕಟ್ಟಿನಲ್ಲಿ, ಭಿನ್ನಭಿನ್ನವಾಗಿ ಇವರ ಪ್ರತಿಕ್ರಿಯಿಸಿದರು. ಆದರೂ ಹಿಂದೂ ಸಂಸ್ಕೃತಿಯನ್ನು, ಸಾಮಾಜಿಕ ಸುಧಾರಣೆಗಳನ್ನು ಪರಿಭಾವಿಸಿದರೀತಿ ಸ್ಥಳೀಯ ಸಂದರ್ಭಗಳಿಂದ ಒತ್ತಡಗಳಿಂದ ತಳಮಳಗಳಿಂದ ಹಿತಾಸಕ್ತಿಗಳಿಂದ ಪ್ರಭಾವಿಸಲ್ಪಟ್ಟಿದ್ದಾಗಿತ್ತು. ಇಂತಹ ಪ್ರತಿಕ್ರಿಯೆಗಳು ಕೆಲವು ಸಾಮಾಜಿಕ ವಿಷಯಗಳ ಬಗ್ಗೆ 'ತಟಸ್ಥ' ಅಥವಾ 'ಮೌನ' ನಿಲುವುಗಳನ್ನು ತಳೆಯುವುದರ ಮೂಲಕ ಅಭಿವ್ಯಕ್ತಿಗೊಳ್ಳುತ್ತಿದ್ದವು. ಅಂತಹ ಒಂದು 'ಮೌನ' ವಸಾಹತುಶಾಹಿಯ ಸಂದರ್ಭದಲ್ಲಿ 'ಜಾತಿ ಶೋಷಣೆ' ವಿರುದ್ಧ ಬೆಳೆದ ಬ್ರಾಹ್ಮಣೇತರ ಚಳುವಳಿಯ ಬಗ್ಗೆಯೂ ಇತ್ತು. ವಸಾಹತುಶಾಹಿ ಮೈಸೂರು ಪ್ರಾಂತ್ಯದಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡ ಬಹುತೇಕ ಬ್ರಾಹ್ಮಣ ಸಾಹಿತಿಗಳಲ್ಲಿ ಈ ಮೌನ ಪ್ರಮೇಯವನ್ನು ಕಾಣಬಹುದು. ಶೋಷಣೆಯ ಬಗ್ಗೆ ಮಾತನಾಡಿ ಬರೆದರೂ, ಅದು 'ಸಾಮಾಜಿಕ ಶೋಷಣೆಯ' ವಿವಿಧ ರೂಪಗಳ ಬಗ್ಗೆ ಇರಲಿಲ್ಲ. ಬದಲಾಗಿ ಬಡವರು - ಶ್ರೀಮಂತರು ಎಂಬ ಎರಡು ಪರಿಕಲ್ಪನೆಗಳ ಮೂಲಕ ಉದಾರವಾದಿ ಮನೋದೃಷ್ಟಿಯುಳ್ಳದಾಗಿತ್ತು. ಇವು ಬಡವ-ಶ್ರೀಮಂತ ವಲಯಗಳು ಸಾಮಾಜಿಕ-ಆರ್ಥಿಕ ಹಾಗೂ ಜಾತಿಯ ಅಂಶಗಳು ರೂಪಿಸುತ್ತಿದ್ದುದರ ಬಗ್ಗೆ ಮೌನ ತಾಳಿದುದು ಗಮನಾರ್ಹ. ಈ ಒಂದು ಬೆಳವಣಿಗೆಯಲ್ಲಿ ಬ್ರಾಹ್ಮಣ, ಬ್ರಾಹ್ಮಣತ್ವ/ಹಿಂದುತ್ವವು ನಿರಂತರವಾಗಿ ಬದಲಾವಣೆಗಳನ್ನು ಕಂಡಿತು; ತನ್ನನ್ನು ತಾನು ಪರಿವರ್ತಿಸಿಕೊಂಡಿತು. ಇದಕ್ಕೆ Western Orientalist ಜ್ಞಾನಧಾರೆಯು ಮಾತ್ರವಾಗಿಲ್ಲ; ಬ್ರಾಹ್ಮಣೇತರರು ಬ್ರಾಹ್ಮಣ ಸಮುದಾಯ ವನ್ನು ಅರ್ಥೈಸಿ ಕೊಂಡಿದ್ದು, ಕಲ್ಪಿಸಿಕೊಂಡಿದ್ದು ಸಹ ಕಾರಣವಾಗಿವೆ. ಬ್ರಾಹ್ಮಣೇತರ ಪ್ರತಿಕ್ರಿಯೆಗಳಿಗೆ 'ಸಂಪ್ರದಾಯ ನಿಷ್ಠ' ಹಾಗೂ 'ಪ್ರಗತಿಪರ' ಬ್ರಾಹ್ಮಣ ವಿದ್ಯಾವಂತ-ವರ್ಗವು ಸಂವಾದಿಸಿದ್ದು ಒಂದು ಸಂಕೀರ್ಣ ಅಧ್ಯಾಯವನ್ನು ತೆರೆದಿಡುತ್ತದೆ. ಅನೇಕ ಹಂತಗಳಲ್ಲಿ ಬ್ರಾಹ್ಮಣ ಸಮುದಾಯದ ಈ ಎರಡೂ ವರ್ಗಗಳು ಪೂರಕವಾದ ಅಭಿಪ್ರಾಯಗಳನ್ನು ಹೊಂದಿದ್ದು ಕಂಡುಬರುತ್ತದೆ. ಆದ್ದರಿಂದ ದೇಶ,

ಸಂಸ್ಕೃತಿ, ಮುಂತಾದ ಸಮುದಾಯ ಕಲ್ಪನೆಗಳು ಬರಿಯ ವಸಾಹತುಶಾಹಿ ವಿರೋಧಿ ಯಾಗಿರದೇ ಸ್ಥಳೀಯ ಸಾಮಾಜಿಕ ಸಮುದಾಯಗಳ, ಸಂದರ್ಭಗಳ ಒತ್ತಡಕ್ಕೆ ಸಂಪಾದಿಸಿದ ಪ್ರಮೇಯಗಳೂ ಆಗಿದ್ದವು. ಹಿಂದೂ/ಬ್ರಾಹ್ಮಣ ವಿಶಾಲ ರಾಷ್ಟ್ರೀಯ ಧಾರೆಯು ವಸಾಹತುಶಾಹಿ ಯನ್ನು ವಿರೋಧಿಸಿದ ಹಾಗೂ ಬ್ರಾಹ್ಮಣೇತರ ವಿಚಾರ ಧಾರೆಗಳನ್ನು ಅರಗಿಸಿಕೊಂಡ ಸಂದರ್ಭವು - ಬ್ರಾಹ್ಮಣರ ಮೇಲೆ ಟೀಕೆ ವಿರೋಧಗಳು ಹೆಚ್ಚಾಗುತ್ತಿದ್ದ ಸಮಯ ವಾಗಿತ್ತು. ಕೈಲಾಸಂ ಇದನ್ನು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಉದಾಹರಣೆಯಾಗಿ ಅವರ ಒಂದು ಹಾಸ್ಯ ಚಟಾಕಿಯನ್ನು ಗಮನಿಸಿಬಹುದು.

'ಬ್ರ್ಯಾಮಿನ್ಸ್ ಬೇಕ್ರಿ'

ಕೈಲಾಸಂ: (ಈ ಬೋರ್ಡನ್ನು ನೋಡುತ್ತಲೇ) ಇದೇನಿದು, ನಗ್ಬೇಕೋ ಅಳ್ಬೇಕೋ ತಿಳೀತಿಲ್ವೆ. ಅಲ್ಲ ಈ ಕಾಲ್ದಲ್ಲಿ ಎಲ್ರೂ ಬ್ರಾಮೀನ್ಸ್ ಬೇಡ್ರೀ...ಬ್ರ್ಯಾಮಿನ್ಸ್ ಬೇಡ್ರಿ...ಅಂತ ಬಡ್ಕೋತಿರ್ಬೇಕಿದ್ರೆ ಈ ಬ್ರೆಡ್ ಅಂಗಡಿಯೋರು 'ಬ್ರಾಮಿನ್ಸ್ ಬೇಕ್ರಿ'ಅಂತ' ಬೋಲ್ಡಾಗಿ ಬೋರ್ಡ್ನೇ ಬರೆಸಿ ಹಾಕಿದಾರ್ನೋಡಿ! ಏನಾಶ್ಚರ್ಯ, ಏನೆದೆಗಾರ್ಕೆಂತೀನಿ! ('ನಂ.ಬ್ರಾಹ್ಮಣ್ಕೆ' ಪು.೯೪)

ಈ ಮೇಲಿನ ಹಾಸ್ಯದ ತುಣುಕಲ್ಲಿ ಹಾಸ್ಯವಿದ್ದರೂ ಬ್ರಾಹ್ಮಣರನ್ನು ಆಗಿನ ಕಾಲದಲ್ಲಿ ಬೇಡ ಅನ್ನುತ್ತಿದ್ದವರು ಯಾರು? ಯಾಕೆ? ಎಂಬ ಪ್ರಶ್ನೆಗಳು ಮುಖ್ಯ. ಕೈಲಾಸಂ ತಮ್ಮ ನಾಟಕಗಳನ್ನು ಬರೆದ ಸಂದರ್ಭವು, ಕರ್ನಾಟಕದ ಸಾಂಸ್ಕೃತಿಕ, ಸಾಮಾಜಿಕ ಇತಿಹಾಸದಲ್ಲಿ ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ಮುಖಾಮುಖಿಗಳ ಪರಿಣಾಮವಾಗಿ ನಡೆಯುತ್ತಿದ್ದ ಸಂವಾದ/ಸಂಘರ್ಷಗಳ 'ಸಂಕೀರ್ಣ ಚಿತ್ರಣ'ವನ್ನು ನೀಡುತ್ತದೆ. ಆದರೆ ಕೈಲಾಸಂ ಹಾಗೂ ಅವರ ಸಾಹಿತ್ಯ ಕೃತಿಗಳನ್ನು ಈ ಸಾಮಾಜಿಕ ಸಂದರ್ಭದಲ್ಲಿಟ್ಟು ಚರ್ಚಿಸಿದ ಪ್ರಯತ್ನಗಳು ಇಲ್ಲ. ಆಗಿನ ಅನೇಕ 'ಸೃಜನಶೀಲ' ಲೇಖಕರಂತೆ ಕೈಲಾಸಂ ಸಹ ಮಧ್ಯಮವರ್ಗ 'ರಾಷ್ಟ್ರೀಯತೆ' ಯನ್ನು ಬಲಗೊಳಿಸುವಲ್ಲಿ ಕಾಣಿಕೆ ಇತ್ತಿದ್ದಾರೆ. ಅವರ ಸಾಹಿತ್ಯ ಕೃತಿಗಳಲ್ಲಿ ವಸಾಹತುಶಾಹಿ ವಿರೋಧಿ ಭಾವನೆಯಾಗಲಿ ಅಥವಾ ಜಾತೀಯತೆಯ ಹಿಂದಿನ ಕಾರಣಗಳನ್ನು ವಿಶ್ಲೇಷಿಸುವ ಪ್ರಯತ್ನಗಳಾಗಲಿ ಕಾಣುವುದಿಲ್ಲ. ಆದರೆ ಮಧ್ಯಮವರ್ಗದ ಬ್ರಾಹ್ಮಣ ಸಮಾಜದ ಢಾಂಬಿಕತನ, ಪುರೋಗಾಮಿತನ, ಕೃತಕತೆಗಳ್ನೂ ಟೀಕಿಸಿ, ಪ್ರಗತಿಪರ ನಿಲುವನ್ನು ತೋರಿಸುವಲ್ಲಿ ಅವರು ಯಶಸ್ವಿಯಾಗಿದ್ದಾನೆ. ರಾಮಾಯಣ ಹಾಗೂ ಮಹಾಭಾರತದಲ್ಲಿ ಕಂಡು ಬರುವ ವ್ಯಕ್ತಿಚಿತ್ರಣ (ಅದೂ ಸಹ ಕೆಲವೊಂದು ಆಯ್ದ ವ್ಯಕ್ತಿಗಳ) ಭಾರತದ 'ಸಂಪ್ರದಾಯ'ವನ್ನು ಪ್ರತಿನಿಧಿಸುವ ಮಹಾಕಾವ್ಯದ್ದು. ಹೀಗಾಗಿ ಕೈಲಾಸಂಗೆ ಭಾರತದ ಸಂಪ್ರದಾಯ ಯಾವುದು, ಆಧುನಿಕತೆಯನ್ನು ಬ್ರಾಹ್ಮಣರು ಹೇಗೆ ಸ್ವೀಕರಿಸಬೇಕು-ಈ ಬಗ್ಗೆ ಯಾವುದೇ ಸಂಶಯ ಗಳಿರಲಿಲ್ಲ. ಹಿಂದೂ ಸಂಪ್ರದಾಯದ ವಿಷಯದಲ್ಲಿ, ಸಂಸ್ಕೃತ-ಭಾಷೆಯ ಶ್ರೇಷ್ಠತೆಯ ಹಾಗೂ ಹಿಂದೂ ಮಹಿಳೆಯ ಸ್ಥಾನಮಾನಗಳ ಬಗ್ಗೆ ಕೈಲಾಸಂಗೂ ಸಂಪ್ರದಾಯನಿಷ್ಠ ಬ್ರಾಹ್ಮಣ ವರ್ಗಕ್ಕೂ ವ್ಯತ್ಯಾಸಗಳು ಬಹಳ ಕಡಿಮೆ. ಕೈಲಾಸಂರ 'ವ್ಯಕ್ತಿತ್ವ' ಬ್ರಾಹ್ಮಣ 'ಸಾಮುದಾಯಿಕ'

ಸ್ಫೂರ್ತಿಯ ಮೂಲದಿಂದ ರೂಪುಗೊಂಡತಹದ್ದು. ಹಾಗಾಗಿ ತಮ್ಮ ನಾಟಕಗಳಿಗಾಗಿ ಮೂಲ ಸಾಮಾಗ್ರಿಯನ್ನು ಆಯ್ಕೆ ಮಾಡುವಲ್ಲಿ ಅವರು ಜಾಗ್ರತೆಯನ್ನು ವಹಿಸಿದ್ದಾರೆ. ಬ್ರಾಹ್ಮಣ ಸಂಸ್ಕೃತಿ ಹಾಗೂ ಸಾಹಿತ್ಯಕ ಪ್ರೇರಣೆಗಳಿಂದ ಕೈಲಾಸಂ ಬಹಳ ಪ್ರಭಾವಿತರಾಗಿದ್ದಾರೆ. ಪ್ರಸ್ತುತ ಲೇಖನದಲ್ಲಿ ಶಿಕ್ಷಣ, ಧರ್ಮ ಮತ್ತು ಬ್ರಾಹ್ಮಣ ಜಾತಿಯ ಬಗ್ಗೆ ಕೈಲಾಸಂರಿಗೆ ಇದ್ದ ಅಭಿಪ್ರಾಯಗಳು ಅವರ ನಾಟಕಗಳಲ್ಲಿಹೇಗೆ ಚಿತ್ರಿಣಗೊಂಡಿವೆ ಎಂದು ನೋಡಲಾಗಿದೆ. ಶಿಕ್ಷಣ - ಧರ್ಮ-ಬ್ರಾಹ್ಮಣ ಸಮಾಜದ ಮೇಲಿನ ಕೈಲಾಸಂ ಅಭಿಪ್ರಾಯಗಳು ಬ್ರಾಹ್ಮಣ ಸಮುದಾಯವನ್ನು ಆಧುನಿಕ ಗೊಳಿಸುವ ಪ್ರಕ್ರಿಯೆಯೇ ಆಗಿದ್ದವು.

ಮುಂದಿನ ಚರ್ಚೆಯಲ್ಲಿ ಕೈಲಾಸಂರು ತಮ್ಮ ನಾಟಕಗಳ ಮೂಲಕ ತಮ್ಮ ಸುತ್ತಮುತ್ತ ಆಗುತ್ತಿದ್ದ ಸಾಮಾಜಿಕ ಬದಲಾವಣೆಗಳಿಗೆ ಹೇಗೆ ಸಂಕೀರ್ಣವಾದ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾ ರೆಂಬುದನ್ನು ನೋಡಬಹುದು.

III

ಸಾಮಾನ್ಯವಾಗಿ ಕನ್ನಡ ಸಾಹಿತ್ಯದ ನವೋದಯ ಘಟ್ಟವನ್ನು ೧೮೮೦-೧೯೫೦ ರವರೆಗಿನ ದಶಕಗಳಲ್ಲಾದ ಸಾಹಿತ್ಯಕ ಕ್ರಿಯೆಗಳಿಂದ ವಿವರಿಸಲಾಗುತ್ತದೆ.[೫] ಹತ್ತೊಂಬತ್ತನೇ ಶತಮಾನದ ಕೊನೆಯ ವೇಳೆಗಾಗಲೇ ಕನ್ನಡ ಸಾಹಿತ್ಯವನ್ನು ಆಧುನೀಕರಿಸುವ ಪ್ರಯತ್ನಗಳು ನಡೆದಿದ್ದವು. ಸ್ಥಳೀಯ ಪ್ರಾದೇಶಿಕ ಭಾಷೆಗಳಲ್ಲಾದ ಸಾಹಿತ್ಯದ ಬೆಳವಣಿಗೆಗಳು ಹಾಗೂ ಬದಲಾವಣೆಗಳು ಆಗಲೇ ಬಲವಾಗಿ ಬೇರೂರಿದ್ದ ಹಿಂದೂ-ಬ್ರಾಹ್ಮಣ ರಾಷ್ಟ್ರೀಯತೆಯ ವಿಚಾರಧಾರೆಗಳಿಂದ ಪ್ರಭಾವಿತವಾಗಿದ್ದವು. ಕನ್ನಡ ಸಾಹಿತ್ಯವು ಇದಕ್ಕೇನೂ ಹೊರತಾಗಿರಲಿಲ್ಲ. ೨೦ನೇ ಶತಮಾನದ ಆರಂಭವು ಕನ್ನಡ ಸಾಹಿತ್ಯ ಮತ್ತು ಭಾಷೆಯನ್ನು ಆಧುನಿಕಗೊಳಿಸುವ ಅನೇಕ ಪ್ರಯತ್ನಗಳನ್ನು ಕಂಡಿತು. ಅಳಿದು ಹೋಗುತ್ತಿರುವ ಹಳೆಯ ನೆನಪುಗಳು, ಹೊಸ ಜಗತ್ತಿನ ಉದ್ಭವ, ಸಂಘರ್ಷದ ವಾತಾವರಣ, ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ದಾಖಲಿಸಲ್ಪಟ್ಟಿವೆ. ಈ ಎಲ್ಲವರ ನಡುವೆ ಹಳೆಯ ಮತ್ತು ಪರಂಪರೆಯ ಜೊತೆಗೆ ಅರ್ಥಪೂರ್ಣ ಸಂಬಂಧವನ್ನು ಹೊಂದುವ ಬಯಕೆಯನ್ನು ಕಾಣುತ್ತೇವೆ. ಈ ಕಾಲದ ಬಹುತೇಕ ಲೇಖಕರಲ್ಲಿ ಪರಂಪರೆಯ "ಉತ್ತಮಾಂಶ"ಗಳನ್ನು ಉಳಿಸಿಕೊಳ್ಳುವ, ಆಧುನಿಕ "ಅರ್ಥಹೀನ" ಜಗತ್ತನ್ನು ಒಳ್ಳೆಯ ದಾರಿಯಲ್ಲಿ ನಡೆಸುವ ಉತ್ಕಟ ಕಾತರವನ್ನು ಕಾಣಬಹುದು. ಪರಿಣಾಮವಾಗಿ ಹಳೆಯ ಕಾಲ ವನ್ನು ಕಲ್ಪಿಸಿಕೊಳ್ಳುವ ಹಾಗೂ ಸಮಾಜವನ್ನು ಸುಧಾರಿಸುವ ಪ್ರಯತ್ನಗಳನ್ನು ಆರಂಭದ ಕನ್ನಡ ಲೇಖಕರಲ್ಲಿ ಕಾಣಬಹುದು. ಅವರಿಗೆ ಸಾಹಿತ್ಯ ಕಥೆಗಳಿಗೆ ಅಥವಾ ಇನ್ನಿತರ ಮೂಲ ಸಾಮಗ್ರಿಗಳಿಗೆ ಸ್ಫೂರ್ತಿಯಾಗಿ ಪಾಶ್ಚಾತ್ಯ ಸಾಹಿತ್ಯದ ಮಾದರಿಗಳ ಜೊತೆಗೆ "ಭಾರತೀಯ" (ಪ್ರಮುಖವಾಗಿ ಮರಾಠಿ ಮತ್ತು ಬೆಂಗಾಳಿ) ಸಾಹಿತ್ಯದ ಮಾದರಿಗಳೂ ಸಹ ಲಭ್ಯವಿದ್ದವು.

ಆದರೆ ಕನ್ನಡದಲ್ಲಿ ಸಮಾಜ ಸುಧಾರಕ ಸಾಹಿತ್ಯದ ಪಠ್ಯಗಳನ್ನು ಅಧ್ಯಯನ ಮಾಡುವಾಗ ಸ್ವಲ್ಪ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಸಮಾಜ ಸುಧಾರಕ ಸಾಹಿತ್ಯವನ್ನು ಮೊದಲ ಹಂತ ಹಾಗೂ ನಂತರದ ಹಂತಗಳನ್ನಾಗಿ ವಿಭಾಗಿಸಿಕೊಳ್ಳಬೇಕಾಗುತ್ತದೆ. ಎಸ್. ಚಂದ್ರಶೇಖರ್

ಅವರು ಮೊದಲ ಹಂತದ ಸಮಾಜ ಸುಧಾರಕ ಲೇಖಕರನ್ನು ಗುರುತಿಸುವಾಗ ಅವರಲ್ಲಿದ್ದ ಕೆಲವು ದ್ವಂದ್ವಗಳನ್ನು ಪ್ರಸ್ತಾಪಿಸುತ್ತಾರೆ. ಅವರ ಪ್ರಕಾರ -

> ಕರ್ನಾಟಕದ ಲೇಖಕ ವರ್ಗವು ತಿಳಕವಾದಿಯಾಗಿತ್ತು. ಶಿವಾಜಿ, ಗಣೇಶ ಪೂಜೆ, ವೈದಿಕ ಧರ್ಮ ಮತ್ತು ಸಂಸ್ಕೃತಿಯನ್ನು ಪುನರ್‌ಸ್ಥಾಪಿಸುವಲ್ಲಿ ಅವರಿಗೆ ವಿಶೇಷ ಆಸಕ್ತಿ ಇತ್ತು. ಆದರೆ ತಮ್ಮ ಲೇಖನಗಳಲ್ಲಿ ಸಮಾಜ ಸುಧಾರಕ ಅಂಶಗಳನ್ನೂ ಸಹ ಅಭಿವ್ಯಕ್ತಿ ಸುತ್ತಿದ್ದರು. ಅವರಿಗೆ ಸಮಾಜ ಸುಧಾರಣೆಯು ಮುಖ್ಯವಾಗಿತ್ತು. ಆದರೆ ಈ ಸಮಾಜ ಸುಧಾರಕ ಅಂಶಗಳು ತಿಳಕವಾದಿ ಚೌಕಟ್ಟಿಗೆ ವ್ಯತಿರಿಕ್ತವಾಗಿದ್ದವು (ಪು.೪,೧೯೯೯).[೬]

ವೈದಿಕ ಸಂಸ್ಕೃತಿಯನ್ನು ಬಹುವಾಗಿ ನೆಚ್ಚಿಕೊಂಡಿದ್ದ ಗಳಗನಾಥ, ಗುಲ್ವಾಡಿ ವೆಂಕಟರಾವ್, ಕೆರೂರ್ ವಾಸುದೇವಾಚಾರ್ಯರು ಮೊದಲ ಹಂತದ ಸಮಾಜ ಸುಧಾರಕ ಲೇಖಕರಾದರೆ, ಕೈಲಾಸಂ, ಶ್ರೀರಂಗರಂತಹವರು ಎರಡನೇ ಹಂತದ ಗುಂಪಿಗೆ ಸೇರಿದವರು.ಎರಡನೇ ಹಂತದ ಸಮಾಜ ಸುಧಾರಣೆ ಅವರ ಸಾಹಿತ್ಯದಲ್ಲಿ ರಾಷ್ಟ್ರೀಯತೆಯ ತೀಕ್ಷ್ಣತೆ ಅಷ್ಟೊಂದು ಪ್ರಖರವಾಗಿ ರಲಿಲ್ಲ. ಅದು ಹಿಂದೂ ಸಂಸ್ಕೃತಿಯ ದೇವರು, ದೇವತೆಗಳನ್ನು ಆಚಾರ-ವಿಚಾರಗಳನ್ನು ತೀಕ್ಷ್ಣವಾಗಿ ಪ್ರತಿಪಾದಿಸುವ ಜಾಯಮಾನದ್ದಲ್ಲ. "ಧರ್ಮರಹಿತ", ಜಾತಿರಹಿತ, ಆಧ್ಯಾತ್ಮಿಕ ವಾದ ಹಾಗೂ ವೈಚಾರಿಕತೆಯಿಂದ ಕೂಡಿದ ಹಿಂದೂ ಜೀವನ ಶೈಲಿಯನ್ನು ಮರುವ್ಯಾಖ್ಯಾನಿಸುವ ರೀತಿಯದ್ದು. ಈ ಮನೋಭಾವ ಗಾಂಧೀವಾದದ ವಿಚಾರ ಧಾರೆಗಳಿಗೆ ಸಮೀಪವಾಗಿತ್ತು. ಎರಡನೇ ಹಂತದ ಸಮಾಜ ಸುಧಾರಕ ಕಾದಂಬರಿ ಹಾಗೂ ನಾಟಕಗಳು ಈ ಬಗೆಯ ಅಂಶ ಗಳನ್ನು ಒಳಗೊಂಡಿದ್ದವು. ಬ್ರಾಹ್ಮಣ ಸಮುದಾಯವು ಆಧುನಿಕತೆಗೆ ಸಂಧಾನ ನಡೆಸುವದ ರೊಂದಿಗೆ ಪರಂಪರೆಯನ್ನು ಮರುವ್ಯಾಖ್ಯಾನಿಸುವ ಬಗೆಯನ್ನು ಈ ಸಾಹಿತ್ಯದ ಪಠ್ಯಗಳು ದಾಖಲಿಸುತ್ತವೆ.

ಸುಧಾರಣೆ ಮತ್ತು ಆಧುನೀಕರಣ ಸಾಹಿತ್ಯಕ್ಕೆ ಮಾತ್ರ ಮೀಸಲಾಗಿರಲಿಲ್ಲ. ಇವು ಸಾಮಾಜಿಕ ಸಂಸ್ಥೆ, ನಂಬಿಕೆಗಳನ್ನು ಮತ್ತು ಸಮುದಾಯದ ಆಚರಣೆಗಳನ್ನು ಸುಧಾರಿಸುವ ಹಾಗೂ ಆಧುನಿಕ ಗೊಳಿಸುವ ಪ್ರಕ್ರಿಯೆಯನ್ನು ಸಹ ಒಳಗೊಂಡಿದ್ದವು. ಈ ಕಾಲದ ಸಾಹಿತ್ಯವನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ, ಈ ಸುಧಾರಣ ಹಾಗೂ ಆಧುನೀಕರಣ ಪ್ರಕ್ರಿಯೆಯು ಒಂದು ನಿರ್ದಿಷ್ಟ ಸಮುದಾಯ/ಜಾತಿಯ ಬಗೆಗೆ ಅಭಿವ್ಯಕ್ತಿಗೊಳ್ಳುತ್ತಿದ್ದ ಕಾಳಜಿಗಳೆಂದು ತಿಳಿದು ಬರುತ್ತದೆ. ಸಾಮಾಜಿಕ ರಾಜಕೀಯ ಶ್ರೇಣಿಯಲ್ಲಿ ಎತ್ತರದಲ್ಲಿದ್ದ ಸ್ಥಳೀಯ ಬ್ರಾಹ್ಮಣ ಜಾತಿಯ ಇಂಗ್ಲೀಷ್ ಕಲಿತ ವಿದ್ಯಾವಂತ-ವರ್ಗವು, ವಸಾಹತುಶಾಹಿಗೆ ಸ್ಥಳೀಯ ಪರಂಪರೆಯನ್ನು ಪರಿಚಯಿಸುವದರ ಜೊತೆಗೆ ಆಧುನಿಕತೆಗೆ ತನ್ನನ್ನು ತಾನು ಹೊಂದಿಕೊಳ್ಳುವ ಅವಕಾಶಗಳನ್ನು ನೀಡಿತು. ಅವರಿಗೆ "ವಸಾಹತುಶಾಹಿ ಆಧುನಿಕತೆಯನ್ನು ರಾಷ್ಟ್ರೀಯ ಆಧುನಿಕತೆಗೆ ಅನುವಾದಿಸಿ ಕೊಳ್ಳಲು" (ತಾರಕೇಶ್ವರ್,೧೯೯೮)[೭] ಸಾಧ್ಯವಾಯಿತು. ಈ ಇತಿಹಾಸದ ಸಂದರ್ಭದಲ್ಲಿ ಸಂಸ್ಕೃತಿ, ಸಮುದಾಯ ಮತ್ತು ಭಾಷೆಯ ನಿರ್ದಿಷ್ಟ ಅಂಶಗಳನ್ನು ಆಧುನಿಕ ವಿರುದ್ಧದ "ಸಂಪ್ರದಾಯ" ಎಂಬುದಾಗಿ ವರ್ಣಿಸಲ್ಪಟ್ಟುವು. ಪ್ರಾದೇಶಿಕ ಬ್ರಾಹ್ಮಣ ವಿದ್ಯಾವಂತ-ವರ್ಗವು ಏಕೀಕೃತ-

ಸಂಸ್ಕೃತಿ-ವಿಚಾರಧಾರೆಗಳನ್ನು ನಿರ್ಮಿಸುವಲ್ಲಿ ಹಾಗೂ ಪ್ರಚಲಿತಗೊಳಿಸುವಲ್ಲಿ ನಿರತವಾಯಿತು. ಇದರಿಂದಾಗಿ ಯಾವ ಬಗೆಯ ಆಧುನಿಕತೆ ಮತ್ತು ಪರಂಪರೆಗಳನ್ನು ರೂಢಿಸಿಕೊಳ್ಳಬೇಕೆಂಬ ವಿಚಾರಧಾರೆಗಳು ಪ್ರಮುಖವಾದವು. ಇಂಗ್ಲೀಷ್ ಭಾಷೆ ಹಾಗೂ ಸಾಹಿತ್ಯದ ಜ್ಞಾನ ಅವರಿಗೆ ಕನ್ನಡದಲ್ಲಿ ಹೊಸಹೊಸ ಪ್ರಯೋಗಗಳಲ್ಲಿ ತೊಡಗುವಂತೆ ಪ್ರೇರೇಪಿಸಿತು. ಅನುವಾದಗಳ ಮೂಲಕ ಸೃಜನಶೀಲ ಕೃತಿಗಳ ಮೂಲಕ ಸ್ಥಳೀಯ ಬ್ರಾಹ್ಮಣ ವಿದ್ಯಾವಂತ ವರ್ಗವು "ಪ್ರಾದೇಶಿಕ" ಹಾಗೂ "ರಾಷ್ಟ್ರೀಯ" ಸಂಸ್ಕೃತಿಗಳನ್ನು ಪ್ರತಿನಿಧಿಸಲು ಅವಕಾಶ ನೀಡಿತು.

ಸಮಾಜ ಸುಧಾರಣೆ ಮತ್ತು ರಾಷ್ಟ್ರೀಯ ಸಂಸ್ಕೃತಿಯ ಪರಿಕಲ್ಪನೆ ಬ್ರಾಹ್ಮಣ ಸಮುದಾಯದ ಗುರುತಿನ (identity) ಪ್ರಶ್ನೆಯೂ ಆಗಿದ್ದಿತು. ಆಧುನಿಕತೆಯ ಪರಿಣಾಮವಾಗಿ ತೀವ್ರಗತಿಯಲ್ಲಿ ಆಗುತ್ತಿದ್ದ ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಹಾಗೂ ರಾಜಕೀಯ ಬದಲಾವಣೆಗಳಿಗೆ ಬ್ರಾಹ್ಮಣ ಸಮುದಾಯವು ಹೊಂದಿಕೊಂಡು ಹೋಗಲೇಬೇಕಾಗಿತ್ತು. ಅಗತ್ಯಕ್ಕೆ ಅನುಗುಣವಾಗಿ ಮಾರ್ಪಾಡಾಗಬೇಕಾಗಿತ್ತು. "ವಸಾಹತುಶಾಹೀ ಆಡಳಿತದಿಂದಾಗಿ ಉಂಟಾದ ಆಧುನಿಕತೆಯು ಬ್ರಾಹ್ಮಣ ಸಮುದಾಯದ ಉಳಿವಿಕೆ ಹಾಗೂ ಅಸ್ತಿತ್ವಕ್ಕೆ ಸವಾಲೆಸೆಯಿತು. ಈ ಸವಾಲನ್ನು ಬ್ರಾಹ್ಮಣರು ತಮ್ಮನ್ನು ತಾವೇ ಆಧುನಿಕತೆಗೆ ಅನುವಾದಿಸಿಕೊಳ್ಳುವುದರ ಮೂಲಕ ಎದುರಿಸ ಬೇಕಾಯಿತು" (ವಿಜಯ್, ಪು.೫, ೧೯೯೭)[೮] ತಾರಕೇಶ್ವರರು ಹೇಳುವ ಪ್ರಕಾರ ಆಧುನಿಕತೆಯನ್ನು ಎದುರಿಸುವ/ತನ್ನದಾಗಿಸಿಕೊಳ್ಳುವ/ಬದಲಾಯಿಸುವ ಕ್ರಿಯೆಯಲ್ಲಿ ಬ್ರಾಹ್ಮಣ ಸಮುದಾಯವು ಹೊರ ಜಗತ್ತಿನ ಬದಲಾವಣೆಗಳಿಗೆ ಸ್ಪಂದಿಸಿತು/ಸಂಧಾನಿಸಿತು. ಜೊತೆಗೆ "ಆಧುನಿಕವಾದ ಸಾರ್ವತ್ರಿಕ ರೂಪುರೇಶೆಗಳ ಪ್ರಕಾರ ಸಾಂಸ್ಕೃತಿಕವಾಗಿ ವ್ಯಕ್ತಿತ್ವವನ್ನು ಮತ್ತು ಕುಟುಂಬವನ್ನು ಪುನರ್‌ರೂಪಿಸುವುದು ಮತ್ತು ಪುನರ್ ಮೌಲೀಕರಿಸುವುದೇ ಇಂಗ್ಲೀಷ್ ಕಲಿತ-ವಿದ್ಯಾವಂತ-ವರ್ಗಕ್ಕೆ ಪ್ರಗತಿಯ ಚಿಹ್ನೆಯಾಯಿತು. ಕೆಲವೊಂದು ಆಧುನಿಕತೆಯ ಅಂಶಗಳ ಮತ್ತು ಪರಂಪರೆಯ ಜೊತೆಗಿನ ಸಂವಾದದಿಂದ ಸಾಮುದಾಯಿಕ ಗುರುತನ್ನು (identity) ನಿರ್ಮಿಸುವ ಕಾರ್ಯದಲ್ಲಿಯೂ ಈ ಸಮುದಾಯವು ತೊಡಗಿತ್ತು" (ಪಡಿಕ್ಕಲ್, ಪು.೨ ೨೦೦೧)[೯] ಎಂಬುದನ್ನು ನೋಡಬಹುದಾಗಿದೆ. ಆದ್ದರಿಂದ ಕನ್ನಡ ಸಾಹಿತ್ಯದ ಹಿರಿಮೆ ಮತ್ತು ಸಾಧನೆಗಳು ಎಂದು ಯಾವುದನ್ನು ಕನ್ನಡ ಸಾಹಿತ್ಯದಲ್ಲಿ ಗುರುತಿಸುತ್ತೇವೆಯೋ, ಅವು ಬ್ರಾಹ್ಮಣರ 'ಆತ್ಮಕಥನ'ಗಳಾಗಿ (ಧಾರೇಶ್ವರ, ಪು.೧೧೬, ೧೯೯೪)[೧೦] ಗೋಚರಿಸುತ್ತವೆ. ಕನ್ನಡ ಮೊದಲ ಕಾದಂಬರಿಗಳು ದಕ್ಷಿಣ ಕನ್ನಡದ ಸಾರಸ್ವತ ಬ್ರಾಹ್ಮಣ ಸಮುದಾಯದಿಂದ ಉದ್ಭವಾದವು ಎಂಬ ಅಂಶ ಕನ್ನಡ ಸಾಹಿತ್ಯದ ಬಗ್ಗೆ ಸ್ಪಷ್ಟ ಚಿತ್ರಣ ನೀಡುತ್ತದೆ.

IV

ಕೈಲಾಸಂರ ಇಂಗ್ಲೀಷ್ ಮತ್ತು ಕನ್ನಡ ನಾಟಕಗಳು ಎರಡು ಭಿನ್ನ ಭಾಷೆಗಳಲ್ಲಿರುವದರಿಂದ ಅವು ಎರಡು ಭಿನ್ನ ದೃಷ್ಟಿಕೋನಗಳನ್ನು ಪ್ರತಿನಿಧಿಸುತ್ತವೆ ಎಂದು ಸಾಮಾನ್ಯವಾಗಿ ಸಾಹಿತ್ಯ ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಕನ್ನಡ ನಾಟಕಗಳು ಆಧುನಿಕ ಕಾಲದಲ್ಲಿನ ಬ್ರಾಹ್ಮಣ ಮಧ್ಯಮ ವರ್ಗದ ಸಮಸ್ಯೆಗಳನ್ನು ಚಿತ್ರಿಸುತ್ತವೆ ಮತ್ತು ಇಂಗ್ಲೀಷ್-ನಾಟಕಗಳು ಹಿಂದು

ಧರ್ಮದ ಪುರಾಣ ಪಾತ್ರಗಳನ್ನು ಆಧುನಿಕ ನಾಗರಿಕತೆಗೆ ಮಾದರಿಗಳೆಂಬಂತೆ-ಮರುಸೃಷ್ಟಿ ಮಾಡುತ್ತವೆ ಎಂಬರ್ಥದಲ್ಲಿ ಇವನ್ನು ಅಧ್ಯಯನ ಮಾಡಲಾಗಿದೆ.[೨೩] ಅಂದರೆ ಮೊದಲನೇ ಮಾದರಿಯ ಕನ್ನಡ ನಾಟಕಗಳು 'ಆಧುನಿಕ' ಜಗತ್ತಿಗೆ ಸೇರಿದವು; ಎರಡನೇ ಮಾದರಿಯ ಇಂಗ್ಲೀಷ್ ನಾಟಕಗಳು ಭಾರತೀಯ 'ಪರಂಪರೆ'ಗೆ ಸೇರಿದವು ಎಂಬ ವಿಂಗಡಣೆಯನ್ನೂ ಮಾಡಲಾಗಿದೆ. ಆದರೆ ಈ ಎರಡೂ ಮಾದರಿಯ ನಾಟಕಗಳು ಒಂದೇ ಚಿಂತನೆಯಿಂದ ಹರಳುಗಟ್ಟಿದ 'ರಾಷ್ಟ್ರೀಯತೆ'ಯೆಂದು; ಏಕೀಕೃತ-'ರಾಷ್ಟ್ರೀಯ ಸಂಸ್ಕೃತಿ'ಯನ್ನು ರೂಪಿಸುವ ಕ್ರಿಯೆಗೆ ಪೂರಕವಾದುದೆಂದು ವ್ಯಾಖ್ಯಾನಿಸುವ ಪ್ರಯತ್ನಗಳು ಬಹಳ ಕಡಿಮೆ. ಕನ್ನಡ ನಾಟಕಗಳಲ್ಲಿ ಆಧುನಿಕತೆಯು ತಂದ ಬದಲಾವಣೆ ಮತ್ತು ಅದರ ದುಷ್ಪರಿಣಾಮಗಳ ಬಗ್ಗೆ ಕಟು ಟೀಕೆ ಇದ್ದರೂ, ಅವುಗಳಿಗೆ ಪರ್ಯಾಯವಾಗಿ 'ಆದರ್ಶವಾದ', 'ನಿಜಸತ್ವ'ದ, 'ಭಾರತೀಯತೆ'ಯಿಂದ ಕೂಡಿದ ಮಾಧು, ಕಿಟ್ಟಿ, ಏಕಲವ್ಯ, ಕರ್ಣ, ಕೀಚಕ ಇವರುಗಳಲ್ಲಿ 'ಭಾರತೀಯ ಸಂಸ್ಕೃತಿ'ಯ ಅಂಶಗಳನ್ನು ಅರಸುವ ತವಕ ಕೈಲಾಸಂರಲ್ಲಿ ಕಾಣುತ್ತೇವೆ. ಪರಂಪರೆಯನ್ನು ಮರುವ್ಯಾಖ್ಯಾನಿಸುವ ಅಥವಾ ಮರುಸೃಷ್ಟಿಗೊಳಿಸುವ ಕ್ರಿಯೆ ಆಧುನಿಕವಾದುದೇ ಆಗಿದೆ. ಯಾಕೆಂದರೆ ವಸಾಹತುಶಾಹಿ ಆಧುನಿಕತೆಯು ಸಂಪ್ರದಾಯವನ್ನು ಮರುಶೋಧಿಸುವ ಹಾಗೂ ಆಧುನಿಕತೆಯನ್ನು ತಿರಸ್ಕರಿಸುವ/ಟೀಕಿಸುವ ಎರಡೂ-ಸಂಭಾವ್ಯಗಳನ್ನು ಹುಟ್ಟು ಹಾಕಿತು. ವಸಾಹತುಶಾಹಿ ಆಧುನಿಕತೆಯ ಸಂದರ್ಭದಲ್ಲಿ ಕೈಲಾಸಂ ನಾಟಕಗಳನ್ನು ಅಭ್ಯಸಿಸಿದಾಗ, ಅವರು ಒಂದು ಕಡೆಯಲ್ಲಿ 'ಸಂಪ್ರದಾಯ'ವನ್ನು, ಮತ್ತೊಂದು ಕಡೆಯಲ್ಲಿ ಆಧುನಿಕತೆಯನ್ನು ತಮ್ಮದೇ ಆದ ಶೈಲಿಯಲ್ಲಿ ಅನುವಾದಿಸುವ ಕ್ರಿಯೆಯಲ್ಲಿ ತೊಡಗಿರುವದನ್ನು ಕಾಣಬಹುದು. ಹೀಗೆ "ಸಂಪ್ರದಾಯ" ಮತ್ತು "ಆಧುನಿಕತೆ"ಗಳ ನಡುವೆ ತೂಗಾಡುವ ಕೈಲಾಸಂ ಅವರು, ಇದನ್ನು ಯಾವ ರೀತಿಯಲ್ಲಿ ಹೇಗೆ ನಿಭಾಯಿಸಿದರು ಎಂದು ವಿಶ್ಲೇಷಿಸುವ ಮೊದಲು, ಅವರ ಮನೋಭೂಮಿಕೆಯನ್ನು ನಿರ್ಮಿಸಿದ ಅಂಶಗಳಾವುವೆಂದು ತಿಳಿಯೋಣ.

'ಹಾಸ್ಯ ಪ್ರಪಿತಾಮಹ, ತಂಜಾವೂರು ಪರಮಶಿವಯ್ಯ ಕೈಲಾಸಂ ಸಂಪ್ರದಾಯಬದ್ಧ ಐಯ್ಯರ್ ಮಧ್ಯಮ ವರ್ಗದ ಕುಟುಂಬದಲ್ಲಿ ೧೮೮೪ರಲ್ಲಿ ಜನಿಸಿದರು. ಕೈಲಾಸಂ ಮತ್ತು ಅವರ ಅಣ್ಣ ಬಾಲ್ಯದಿಂದಲೇ 'ಮಹಾಭಾರತ' ಹಾಗೂ 'ರಾಮಾಯಾಣ'ದ ಕತೆಗಳನ್ನು ಕೇಳುತ್ತಾ ಬೆಳೆದರು. ಇದರ ಪ್ರಭಾವ ಕೈಲಾಸಂರ ಮೇಲೆ ಎಷ್ಟೊಂದು ತೀವ್ರವಾಗಿತ್ತೆಂದರೆ, ಕೈಲಾಸಂ ತಮ್ಮ ಇಂಗ್ಲಿಷ್ ನಾಟಕ 'ದಿ ಬ್ರಾಹ್ಮನ್ಸ್ ಕರ್ಸ್'ನ್ನು ಚಿಕ್ಕಪ್ಪನಿಗೆ ಅರ್ಪಿಸಿದ್ದಾರೆ. ಟಿ ರಾಘವ ಹಾಗೂ ತಿರುಮಲೈ ತಾತಾಚಾರ್ಯರ ಮೂಲಕ ಪಂಡಿತ ತಾರಾನಾಥರ ಪರಿಚಯವಾಯಿತು. ಕೈಲಾಸಂರು ತಾರಾನಾಥರ ಮೂಲಕ ತತ್ವದ ಬಗ್ಗೆ, ರಾಮಾಯಣ ಮತ್ತು ಹಾಗೂ ಮಹಾಭಾರತದ ಶ್ರೇಷ್ಠ ವಿಚಾರಗಳ ಬಗ್ಗೆ ಹಾಗೂ ಅಲ್ಲಿನ ವ್ಯಕ್ತಿಗಳ ಉದಾತ್ತತೆಯ ಬಗ್ಗೆ ಮತ್ತಷ್ಟು ವಿಷಯಗಳನ್ನು ತಿಳಿದುಕೊಂಡರು. ತಾರಾನಾಥರು 'ಹೋಂ ರೂಲ್' ಕನ್ನಡ ನಾಟಕಕ್ಕೆ ಹಾಗೂ 'ದಿ ಪರ್ಪಸ್' ಇಂಗ್ಲಿಷ್ ನಾಟಕಕ್ಕೆ ಮುನ್ನುಡಿಗಳನ್ನು ಬರೆದಿದ್ದಾರೆ. ಕೈಲಾಸಂಗೆ ಶಾಲಾ ದಿನಗಳಲ್ಲೆ ಇಂಗ್ಲಿಷ್ ಕಾದಂಬರಿಗಳನ್ನು ಒದುವ ಹವ್ಯಾಸವಿತ್ತು. ಪ್ರಾಥಮಿಕ ಓದು ಬೆಂಗಳೂರು, ಮೈಸೂರು

ಹಾಗೂ ಹಾಸನಗಳಲ್ಲಿ ನಡೆಯಿತು; ಮದ್ರಾಸ್‌ನಲ್ಲಿ ಬಿಎ ಪಾಸ್ ಮಾಡಿದರು. ಅಪ್ಪನ 'White House'ನಲ್ಲಿರದೆ ಹಿಂಬದಿಯಲ್ಲಿ ಸಣ್ಣ ಮನೆಯಲ್ಲಿ ಅವರು ವಾಸವಾಗಿದ್ದರು. ಫೆಲೋಷಿಪ್ಪನ್ನು ಪಡೆದ ನಂತರ ಪಿಎಚ್.ಡಿಗಾಗಿ ಲಂಡನ್‌ಗೆ ಹೋದರು.[೧೧] ಅಲ್ಲಿ ಅವರ ವ್ಯಾಸಂಗ ರಾಯಲ್ ಕಾಲೇಜ್ ಆಫ್‌ಸೈನ್ಸ್‌ಸಿನಲ್ಲಿ ಜರುಗಿತು.

೧೯೦೮ ರಿಂದ ೧೯೧೫ರವರೆಗೂ ಲಂಡನ್‌ನನಲ್ಲಿದ್ದ ಕೈಲಾಸಂ ಬರ್ನಾಡ್ ಶಾ, ಆಸ್ಕರ್ ವೈಲ್ಡ್, ಗಾಲ್ಸ್‌ವರ್ದಿ, ಇಬ್ಸನ್ ಮುಂತಾದ ನಾಟಕಕಾರರ ಪ್ರಭಾವಕ್ಕೆ ಒಳಗಾದರು. ಅಲ್ಲಿನ ಸಾಮಾಜಿಕ ನಾಟಕಗಳು ಅವರಿಗೆ ಪಾಶ್ಚಾತ್ಯ ರಂಗಭೂಮಿಯ ಪರಿಚಯವನ್ನುಂಟು ಮಾಡಿದವು. ಇಂಗ್ಲೆಂಡಿನಿಂದ ವಾಪಾಸು ಬಂದ ಮೇಲೆ ಮೈಸೂರು ಪ್ರಾಂತ್ಯದ ಜಿಯಾಲಜಿ ವಿಭಾಗದಲ್ಲಿ ಕೆಲಸಕ್ಕೆ ಸೇರಿದರು. ಆದರೆ ಸರ್ಕಾರಿ ಕೆಲಸ ಅವರಿಗೆ ಸರಿಬೀಳಲಿಲ್ಲ. ಆ ಹುದ್ದೆಗೆ ರಾಜಿನಾಮೆ ಇತ್ತರು. ಬಿ ಎಸ್ ಕೇಶವರಾವ್ ನೆನಪಿಸಿಕೊಳ್ಳುವ ಹಾಗೆ, ಕೈಲಾಸಂಗೆ ಕೊನೆಯ ದಿನಗಳಲ್ಲಿ ಬುದ್ಧಿ ಭ್ರಮಣೆಯಾಯಿತು. ಕೊನೆಗಾಲದಲ್ಲಿ ತನ್ನನ್ನು ನೋಡಿಕೊಳ್ಳಲು ಯಾರು ಇಲ್ಲದ್ದು ಹಾಗೂ ೧೯೪೬ರಲ್ಲಿ ಮುಂಬೈನಲ್ಲಿ ಕಣ್ಣಾರೆ ನೋಡಿದ ಮತೀಯ ಗಲಭೆಗಳು ಅವರ ಮನಸ್ಸಿಗೆ ಆಘಾತವನ್ನು ನೀಡಿದವು. ಕೈಲಾಸಂಗೆ ಅಂಗಸೌಷ್ಟವವನ್ನು ಕಾಪಾಡಿಕೊಳ್ಳುವಲ್ಲಿ ಹೆಚ್ಚಿನ ಆಸಕ್ತಿ ಇತ್ತು. 'ಸದೃಢ ದೇಹ' 'ಪೌರುಷದ' ಗುರುತು ಎಂಬ ಕೈಲಾಸಂರ ನಂಬುಗೆಯನ್ನು ಅವರ ಇಂಗ್ಲಿಷ್ ನಾಟಕ 'ಕೀಚಕ' ಸಾರುತ್ತದೆ. ಪುಟಬಾಲ್ ಆಟಗಾರರಾಗಿದ್ದ ಅವರಿಗೆ ಪಾಶ್ಚಾತ್ಯ ಸಂಗೀತ ಮತ್ತು ನಾಟಕಗಳ ಬಗ್ಗೆ ವಿಶೇಷ ವ್ಯಾಮೋಹವಿತ್ತು.

ಕೈಲಾಸಂರ ಜೀವನ ಶೈಲಿ 'ವಿಲಕ್ಷಣ'ವಾಗಿತ್ತು ಎಂದು ಕೆಲವರು ಭಾವಿಸಿದ್ದಾರೆ. ಕೈಲಾಸಂ ದಿನಚರಿಗಳ ಬಗ್ಗೆ ಮತ್ತು ಅವರ 'ವಿಚಿತ್ರ' ಆಚರಣೆಗಳಿಗೆ ಆಶ್ಚರ್ಯಪಟ್ಟಿದ್ದಾರೆ. ಹೆಂಡತಿ, ಅಪ್ಪನ ಜೊತೆಗೆ ಇರದೇ, ಒಬ್ಬಂಟಿಯಾಗಿ ಜೀವನ ನಡೆಸುತ್ತಿದ್ದು ಯಾಕೆ ಎನ್ನುವುದು ಅನೇಕರಿಗೆ ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಅವರ ಕೈಯಲ್ಲಿಯಾವಾಗಲೂ ಸಿಗರೇಟ್ ಇರುತ್ತಿತ್ತು. ಮಧ್ಯಾಹ್ನದವರೆಗೂ ನಿದ್ರಿಸುತ್ತಿದ್ದ ಕೈಲಾಸಂ ನಾಟಕವನ್ನು ಹೇಳಿ ಬರೆಸುತ್ತಿದ್ದರು. ಇ.ಆರ್. ಸೇತೂರಾಮ್ ಹೇಳುವಂತೆ;

> ಅನೇಕ ಬಾರಿ ಕೈಲಾಸಂ ಜೋರನ ಚಡ್ಡಿ ಧರಿಸಿ, ಮೇಲಿನ ಬನೀಸ್ ತೆಗೆದು ಬಾಯಿಂದ ಹೊಗೆ ಉಗುಳುತ್ತಾ ಮಂಡಿ ಜೋಡಿಸಿಕೊಂಡು ಕುಳಿತಿರುವರು. ಅವರ ದಪ್ಪಪುಷ್ಟವಾದ ಬೈಸಿಪ್ಸ್ ಮತ್ತು ವಿಶಾಲವಾದ ವಕ್ಷ ಸ್ಥಳಗಳನ್ನು ನೋಡಿದವರಿಗೆಲ್ಲಾ ಅಚ್ಚರಿ ... ಎಂತಹ ಸುಂದರವಾದ ಪುಷ್ಟವಾದ ಅಂಗ ಸೌಷ್ಠ ಹಾಗೂ ಕತ್ತಿನಿಂದ ತೂಗಾಡುವ ಒಂದು ದಪ್ಪನಾದ ಕಪ್ಪುಗಟ್ಟಿದ ಜನಿವಾರ ನೋಡಿ "ಏನ್ ಸಾರ್ ಈ ಜನಿವಾರ...ಹೊಸದು ತರೋಣ" ಎಂದರೆ, ಕೈಲಾಸಂ ಕಣ್ಣುಗಳನ್ನು ಮೇಲೆತ್ತಿ ಪ್ರವಾದಿಯಂತೆ ಉಸಿರೆಳೆದು ನಿಧಾನಗತಿಯಲ್ಲಿ ಗದ್ಯದ ಕಂಠದಲ್ಲಿ "ಜನ್ವಾರ್ ಕ್ಯಾ ದೇಖ್ತೇ, ಜಾನ್ವಾರ್ ದೇಖೋ" ಎಂದು ಜೋಕಾಯಿಸುವರು (ಪು.೫೬, ೨೦೦೦).[೧೨]

ಕೈಲಾಸಂರಿಗೆ ತಮಿಳು, ಕನ್ನಡ, ತೆಲುಗು ಹಾಗೂ ಅಲ್ಪ-ಸ್ವಲ್ಪ ಸಂಸ್ಕೃತ ಮತ್ತು ಮಲಯಾಳಂ ಗೊತ್ತಿತ್ತು. ಅವರ ಸಾಹಿತ್ಯ ಕೃಷಿ ೧೯೧೮ ರಿಂದ ೧೯೪೫ ರವರೆಗೆ ನಡೆಯಿತು. ಗಾಂಧಿಯವರ

ಜೀವನಶೈಲಿ, ತತ್ವಗಳಿಂದ ಪ್ರಭಾವಿತರಾಗಿದ್ದರು. ಭಾರತೀಯ ಸಂಪ್ರದಾಯ, ಹಿಂದೂ ಸಂಸ್ಕೃತಿಯ ಬಗೆಗೆ ಕೈಲಾಸಂ ಮತ್ತು ಗಾಂಧಿಯ ನಡುವೆ ಬಹಳಷ್ಟು ಸಾಮ್ಯಗಳಿದ್ದವು. ಒಮ್ಮೆ ಕೈಲಾಸಂರಿಗೆ 'ದಿ ಪರ್ಪಸ್' ನಾಟಕವನ್ನು ಗಾಂಧಿಯ ಎದುರಿಗೆ ಓದುವ ಅವಕಾಶ ದೊರಕಿತ್ತು. ಆದರೆ ಗಾಂಧಿಯ ಸರಳತೆ, ಅಗಾಧ ವ್ಯಕ್ತಿತ್ವಕ್ಕೆ ಬೆರಗುಗೊಂಡು, ನಾಚಿ ನಾಟಕ ವನ್ನು ಓದದೇ ವಾಪಾಸಾಗಿದ್ದರು. ಕೈಲಾಸಂರಿಗೆ ಹಿಂದೂ ಧರ್ಮದ ತತ್ವಗಳ ಮೇಲೆ ಅಪಾರ ವಾದ ನಂಬುಗೆ. ಹಿಂದೂ ಧರ್ಮಕ್ಕೂ ಹಾಗೂ ಹೆಣ್ಣಿಗೂ ಅವಿನಾಭಾವ ಸಂಬಂಧವನ್ನು ಹುಡುಕಿದ್ದರು. ಅವರು ರಾ.ಶಿವರಾಂ ಅವರಿಗೆ ಹೇಳುವ ಹಾಗೆ,

> ಹೆಣ್ಣಿನ ಶೀಲ ಮತ್ತು ಪಾತಿವ್ರತ್ಯವೇ ಹಿಂದೂ ಧರ್ಮದ ಸಾರಭೂತವಾದ ತಿರುಳು. ಅವಳ ಶೀಲ ಕುಟುಂಬದ ರಕ್ಷಾಕವಚ. ಅದು ಕುಟುಂಬದ ಸಮಗ್ರತೆ, ಋಜುತ್ವಗಳನ್ನು ಭದ್ರಪಡಿಸುತ್ತಿತ್ತು ಹಾಗೂ ಗಂಡ ಸುರಕ್ಷಿತ; ಇಂಥ ಕುಟುಂಬದಲ್ಲಿ ಜನಿಸಿದ ಮಕ್ಕಳಿಗೆ ಒಂದು ರೀತಿಯ ಸ್ಥಾಪಿತ ಭದ್ರತೆ ಇರುತ್ತಿತ್ತು. ಆದ್ದರಿಂದ ಅವರು ತೇಜಸ್ವೀ ಸ್ತ್ರೀ ಪುರುಷರಾಗಿ ಅರಳುತ್ತಿದ್ದರು. ಕುಟುಂಬ ಸದೃಢವಾಗಿ ಅನ್ಯೋನ್ಯವಾಗಿದ್ದಲ್ಲಿ ಸಮಾಜ ವೀರ್ಯವಂತಿಕೆಯಿಂದ ಕೂಡಿದ್ದು ಸುಭದ್ರವೂ ಸುಸಂಘಟಿತವೂ ಆಗಿರುತ್ತದೆ. ಇದನ್ನು ಅರಿತೇ ನಮ್ಮ ಪ್ರಾಚೀನ ಋಷಿಮುನಿಗಳು ಮತ್ತು ದಿವ್ಯಜ್ಞಾನಿಗಳು ಶೀಲ ಪಾತಿವ್ರತ್ಯವನ್ನು ಮೂಲಭೂತ ಗುಣವೆಂದು ಎತ್ತಿಹಿಡಿದರು. ನಮ್ಮ ಎಲ್ಲ ಪುರಾಣಗಳೂ ಈ ಸೌಶೀಲ್ಯ ಗುಣವನ್ನು ಕೊಂಡಾಡುತ್ತವೆ ಹಾಗೂ ಇದರಿಂದ ಸ್ತ್ರೀಯರಿಗೆ ಪರಮಾನಂದ ಸಿದ್ಧಿಯ ಶಕ್ತಿ ಲಭಿಸುತ್ತದೆ ಎಂದು ಹೇಳುತ್ತವೆ (ಪು. ೩೦,೨೦೦೦).[೧೩]

ಕೈಲಾಸಂ ಹದಿನೇಳು ಕನ್ನಡ ನಾಟಕಗಳನ್ನು ಬರೆದಿರುವರು. ಈ ಎಲ್ಲಾ ನಾಟಕಗಳು ಮಧ್ಯಮವರ್ಗ ಬ್ರಾಹ್ಮಣರ ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಕುರಿತಾದವು. 'ಟೊಳ್ಳು-ಗಟ್ಟಿ' ಹಾಗೂ 'ಪೋಲಿಕಿಟ್ಟಿ' ಪಾಶ್ಚಿಮಾತ್ಯ ಪ್ರಭಾವಕ್ಕೊಳಗಾದ ಭಾರತೀಯ ಸಂಸ್ಕೃತಿಯ ಅವನತಿಯನ್ನು ಚರ್ಚಿಸುತ್ತವೆ. 'ತಾಳಿಕಟ್ಟೋಕ್ಕೂಲೀನೇ' ಮತ್ತು 'ಬಹಿಷ್ಕಾರ' ಎರಡೂ ನಾಟಕಗಳಲ್ಲಿ ಹೆಣ್ಣು ಹೆತ್ತವರ ಸಂಕಟವನ್ನು ಚರ್ಚಿಸುತ್ತಾರೆ. 'ಸೂಳೆ' ಹೆಣ್ಣಿನ ಶೋಷಣೆಗೆ ಕನ್ನಡಿ ಹಿಡಿಯುತ್ತದೆ. ನವೀನ ಮಾದರಿಯ ಹೆಣ್ಣುಗಳ ಬಗ್ಗೆ 'ಹುತ್ತದಲ್ಲಿ ಹುತ್ತ' ಹಾಗೂ 'ಗಂಡಸ್ಕತ್ರಿ'ಯಲ್ಲಿ ಕಠಿಣ ನಿಲುವನ್ನು ತಾಳುತ್ತಾರೆ. ಆಧುನಿಕತೆಯ ಫಲವಾಗಿ ಗಂಡ-ಹೆಂಡಿರ ಸಂಬಂಧದಲ್ಲಾದ ಬದಲಾವಣೆಗಳನ್ನು 'ಅಮ್ಮಾವ್ರ ಗಂಡ' ಕಾಣಿಸುತ್ತದೆ. 'ನಮ್ ಕಂಪನಿ' ಅಂದಿನ ಕಂಪನಿ ನಾಟಕಗಳ 'Over melodramatic' 'Once more' ವಿಷಯಗಳನ್ನು ವಿಡಂಬಿಸುತ್ತದೆ. 'ಹೋಂರೂಲು' ಮಧ್ಯಮವರ್ಗದ ಕುಟುಂಬ ವ್ಯವಸ್ಥೆಯ ಸೂತ್ರಗಳು ಹೆಂಗಸರಿಗೆ ಹಸ್ತಾಂತರಗೊಂಡರೆ ಆಗುವ ಕೌಟುಂಬಿಕ ಸಮಸ್ಯೆಗಳನ್ನು ಚಿತ್ರಿಸುತ್ತದೆ. 'ಬಂಡ್ವಾಳಿಲ್ಲದ ಬಡಾಯಿ', 'ವೈದ್ಯನ ವ್ಯಾಧಿ' ಮಧ್ಯಮವರ್ಗದ ಪ್ರತಿಷ್ಠೆಯನ್ನು ವಿಡಂಬಿಸುತ್ತದೆ. 'ನಮ್‌ಕ್ಲಬ್ಬು' ಪುನಃ ಸಂಸಾರದ ಬಗೆಗೆ, ಹೆಂಡತಿ-ಮಕ್ಕಳ ಬಗ್ಗೆ ಮಧ್ಯಮವರ್ಗದ ಮದುವೆಯಾದ ಗಂಡನ ಪರಿಸ್ಥಿತಿಯ ಬಗ್ಗೆ ಚಿತ್ರಿಸುತ್ತದೆ. ಅವರ ಕನ್ನಡ ಮತ್ತು ಇಂಗ್ಲಿಷ್ ಪದ್ಯಗಳು 'ವ್ಯಕ್ತಿ' ಚಿತ್ರಣಗಳಾಗಿವೆ. 'ಗಂಡಸ್ಕತ್ರಿ'ಯಲ್ಲಿ ಬರುವ ರಂಗಣ್ಣನ ಪಾತ್ರವು ಕೈಲಾಸಂ

ಜೀವನ ಚಿತ್ರವನ್ನೇ ಹೋಲುತ್ತದೆ! ಕೈಲಾಸಂರ ಹಾಗೆಯೇ ರಂಗಣ್ಣನೂ ಸಹ ನಾಟಕ ಕಂಪನಿಗಳ ಉಸ್ತುವಾರಿ ವಹಿಸಿಕೊಂಡು, ಸಹನಟರಿಗೆ ಸಂಬಳ ಕೊಡಲಾಗದೆ ಬೆಂಗಳೂರಿಗೆ ವಾಪಾಸು ಬರುತ್ತಾನೆ. ರಂಗಣ್ಣನೂ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು, ನಾಟಕ ಬರೆಯುವ, ಆಡಿಸುವ ಹುಚ್ಚನ್ನು ಬೆಳೆಸಿಕೊಳ್ಳುತ್ತಾನೆ. ಕೈಲಾಸಂ ತಮ್ಮನ್ನೇ ರಂಗಣ್ಣನ ಮುಖಾಂತರ ಚಿತ್ರೀಕರಿಸಲು ಹೊರಟ್ಟಿದ್ದರೆ? ಈ ಪ್ರಶ್ನೆಯ ಉತ್ತರಕ್ಕೆ ಮತ್ತಷ್ಟು ಅಧ್ಯಯನ ಮಾಡಬೇಕಿದೆ.

ಕೈಲಾಸಂ ನಾಟಕಗಳಲ್ಲಿ ಬರುವ ಬ್ರಾಹ್ಮಣ ಪಾತ್ರಗಳು ಕೇವಲ 'ಐಯ್ಯರ್' ಹಿನ್ನೆಲೆಯನ್ನು ಹೊಂದಿದವಲ್ಲ. ಈ ಪಾತ್ರಗಳು ಬೆಂಗಳೂರು, ಮೈಸೂರು ಹಾಗೂ ಶಿವಮೊಗ್ಗಗಳಲ್ಲಿ ಸಾಮಾನ್ಯವಾಗಿ ಕಾಣಬರುವ ವ್ಯಕ್ತಿಗಳು. ಕೈಲಾಸಂ ಅವರನ್ನೇ ತಮ್ಮ 'ಸಿದ್ಧಾಂತದ' ವಕ್ತಾರರನ್ನಾಗಿ ಚಿತ್ರಿಸಿದ್ದಾರೆ. ವಿಶೇಷವೆಂದರೆ ಮೊದಲು ಸಾಮಾಜಿಕ ಸಾಹಿತ್ಯ ಕೃತಿಗಳು ವಿಶೇಷವಾಗಿ ನಾವೆಲ್‌ಗಳು, ಸಾಮುದಾಯಿಕ-ಕೇಂದ್ರಿತವಾಗಿದ್ದರೆ, ಕೈಲಾಸಂ ಸ್ಮಾರ್ತ, ವೈಷ್ಣವ ಹಾಗೂ ಮಾಧ್ವ ಬ್ರಾಹ್ಮಣರನ್ನು ಒಟ್ಟು 'ಬ್ರಾಹ್ಮಣ' ಸಮಾಜದ ಭಾಗಗಳನ್ನಾಗಿ ಕಲ್ಪಿಸಿಕೊಂಡಿರುವುದು; ಅವರ ನಾಟಕಗಳು ಬ್ರಾಹ್ಮಣ ಸಮಾಜದ ಕೇವಲ ಒಂದೇ ಜಾತಿಗೆ ಸೇರದೆ ಎಲ್ಲಾ ಬ್ರಾಹ್ಮಣರ ಸುಧಾರಣೆಯನ್ನು ಬಯಸುವ ಮನೋಭೂಮಿಕೆಯುಳ್ಳವು.

ಇಷ್ಟೆಲ್ಲಾ ನಾಟಕಗಳನ್ನು ಬರೆದಿದ್ದರೂ ಕೈಲಾಸಂರಿಗೆ ಕನ್ನಡ ಸಾಹಿತ್ಯದ ಇತಿಹಾಸದ ಬಗ್ಗೆ ಎಳ್ಳಷ್ಟೂ ಜ್ಞಾನವಿರಲಿಲ್ಲ. ಪುರಾತನ ಕನ್ನಡ ಲೇಖಕರ ಬಗ್ಗೆ ಅವರು ತಿಳಿದುಕೊಂಡಿರಲಿಲ್ಲ. ೧೯೪೬ರಲ್ಲಿ ಮದ್ರಾಸಿನ 'ಕನ್ನಡ ಸಾಹಿತ್ಯ ಸಮ್ಮೇಳ'ಕ್ಕೆ ಅಧ್ಯಕ್ಷರಾಗಿ ಅತ್ಯಂತ ಸಂಕ್ಷಿಪ್ತ 'ಅಧ್ಯಕ್ಷ' ಭಾಷಣವನ್ನು ಸ್ನೇಹಿತರಾದ ಶಿವರಾಮರಿಂದ ಬರೆಯಿಸಿಕೊಂಡಿದ್ದರು.

ಇಂಗ್ಲಿಷ್ ನಾಟಕಗಳಿಗೆ ಕಥಾವಸ್ತುಗಳನ್ನು ಕೈಲಾಸಂರು ಮಹಾಭಾರತದ ಅಷ್ಟೇನು "ಮುಖ್ಯ"ವಲ್ಲದ ಪಾತ್ರಗಳಿಂದ ಆರಿಸುತ್ತಿದ್ದರು. ಪ್ರಕಟವಾಗಿರುವ ಇಂಗ್ಲಿಷ್ ನಾಟಕಗಳು ಐದು. ದಿ ಬರ್ಡನ್ (೧೯೩೩). ಫುಲ್ ಫಿಲ್‌ಮೆಂಟ್ (೧೯೩೩), ದಿ ಪರ್ಪಸ್ (೧೯೪೪), ದಿ ಬ್ರಾಹ್ಮಿನ್ಸ್ ಕರ್ಸ್ (೧೯೪೬) ಮತ್ತು ಕೀಚಕ (೧೯೪೯); ಅವರು ಇನ್ನೂ ಅನೇಕ ನಾಟಕಗಳನ್ನು ಬರೆದಿದ್ದಾರೆಂದು, ಅವುಗಳು ಅಪ್ರಕಟವಾಗಿಯೇ ಉಳಿದಿದ್ದಾವೆಂದು ತಿಳಿದು ಬರುತ್ತದೆ. 'ದಿ ಪರ್ಪಸ್' ಉದಾತ್ತವಾದ ನಿಷಾಧವೆಂಬ ಬೇಡರ ಗುಂಪಿಗೆ ಸೇರಿದ ಏಕಲವ್ಯನ ಕಥೆ. ಏಕಲವ್ಯನಿಗೆ ತನ್ನ ಗುರು ದ್ರೋಣ ಬಗ್ಗೆ ಇದು ಅಪಾರವಾದ ಭಕ್ತಿಯನ್ನು ವರ್ಣಿಸುತ್ತದೆ. ದ್ರೋಣರ ಪ್ರತಿಮೆಯನ್ನು ಪೂಜಿಸುತ್ತಾ ಬಿಲ್ವಿದ್ಯೆಯನ್ನು ಕಲಿತ ಏಕಲವ್ಯನು, ದ್ರೋಣರು ಗುರುದಕ್ಷಿಣೆಯನ್ನು ಕೇಳಿದಾಗ ಹೆಬ್ಬೆರಳನ್ನೇ ಕತ್ತರಿಸಿಕೊಡುತ್ತಾನೆ. ಇದರಿಂದ ಜಿಂಕೆಗಳನ್ನು ತೋಳಗಳಿಂದ ರಕ್ಷಿಸುವ ಜವಾಬ್ದಾರಿಯನ್ನು ಕಳೆದುಕೊಂಡು ಪ್ರಲಾಪಿಸುತ್ತಾನೆ. 'ದಿ ಬ್ರಾಹ್ಮಿನ್ಸ್‌ಕರ್ಸ್'ನಲ್ಲಿ ಕರ್ಣನು ತನ್ನ ಸೂತ ಜಾತಿಯನ್ನು ಮರೆತು ತನ್ನ ಧೃತಿ, ಪರಾಕ್ರಮದಿಂದ ಜಾತಿ ಹೊರೆಯನ್ನು ಕಳಚಿ ಸತ್ಯ ಸಂಧತೆಯನ್ನು ಮೆರೆಯುವ ವೀರ. ಆದರೆ ಯುದ್ಧದಲ್ಲಿ ಸೂತ-ಜಾತಿಯ ಜ್ಞಾಪಕದಿಂದ ತನ್ನ ಪರಾಕ್ರಮವನ್ನು ಮರೆತು ಸಾವಿಗೀಡಾದ ದುರಂತ ನಾಯಕ 'ದಿ ಬರ್ಡನ್' ರಾಮಾಯಣದಿಂದ ಆಯ್ದ ಕಥೆ. ಇದರಲ್ಲಿ ಭರತ ಅಯೋಧ್ಯೆಗೆ ಹಿಂದಿರುಗುವ

ಸಂದರ್ಭದಿಂದ ಆರಂಭವಾಗುವ ಈ ಕಥೆ, ಭರತ ನಿಧಾನವಾಗಿ ತನ್ನ ಮೇಲಿನ ಹೊಣೆಯನ್ನರಿತುಕೊಳ್ಳುವುದನ್ನು ನಾಟ್ಯೀಕರಿಸುತ್ತದೆ. 'ಫುಲ್ ಫಿಲ್‌ಮೆಂಟ್' ಒಂದು ಸಣ್ಣ ನಾಟಕ. ಇದು ಏಕಲವ್ಯನ ಸಾವಿನ ವಿಷಯವನ್ನು ಕುರಿತಾದ್ದಾದರೂ ನಿಜವಾಗಿ ಕೃಷ್ಣನೇ ಇಲ್ಲಿನ ಮುಖ್ಯ ಪಾತ್ರ. ಕೃಷ್ಣನು ಒಂದು ರೀತಿಯಲ್ಲಿ 'ಖಳನಾಯಕ'ನಂತೆ ಚಿತ್ರಣಗೊಂಡಿದ್ದಾನೆ. 'ಕೀಚಕ' ಪ್ರೇಮದ ಮಹತ್ವವನ್ನು ತಿಳಿಸುವ ಕಥೆ-ಕೀಚಕ ಸೈರಂಧ್ರಿಯ ಮೇಲೆ ಆಸೆ ಪಟ್ಟು, ಭೀಮನ ಕೈಯಲ್ಲಿ ಹತನಾಗುವ ಮತ್ತೊಂದು ದುರಂತ ಕಥೆ.

V

ಕೈಲಾಸಂ ನಾಟಕಗಳಲ್ಲಿ ಸಮಾಜ ಸುಧಾರಣೆಯ ಮನೋಭಾವವೇ ಹೆಚ್ಚು ಬ್ರಾಹ್ಮಣ ಸಮಾಜದ ಸಂಪ್ರದಾಯನಿಷ್ಠ ಆಚರಣೆಗಳ ವಿಡಂಬನೆಯು, ಕೈಲಾಸಂರು ಆಧುನಿಕವಾಗುತ್ತಿದ್ದ ಬ್ರಾಹ್ಮಣ ಸಮಾಜಕ್ಕೆ ಕೊಟ್ಟ ಪ್ರತಿಕ್ರಿಯೆ. ಮಧ್ಯಮವರ್ಗ ಬ್ರಾಹ್ಮಣ ಸಮುದಾಯವನ್ನು, ಅದರ ಸಾಂಸಾರಿಕ ವಿಷಯಗಳನ್ನು, ವ್ಯಕ್ತಿಗಳನ್ನು ಅವರ ಸಣ್ಣತನಗಳಿಂದ ದೂರವಾಗಿಸಿ "ವಿಶಾಲ ಮನೋಭಾವ"ವುಳ್ಳ ಜೀವನ ಶೈಲಿಗೆ ಕೊಂಡೊಯ್ಯುವ ಅಭಿಲಾಷೆಯನ್ನು ಕೈಲಾಸಂ ಹೊಂದಿದ್ದರು. ಬ್ರಾಹ್ಮಣರ ಸಂಕುಚಿತತನ, ಪೌರೋಹಿತ್ಯದ ಕೃತಕತೆ , ಆಧುನಿಕ ವಿದ್ಯಾವಂತರ ಡಾಂಭಿಕತೆಗಳನ್ನು ಟೀಕಿಸುವುದರ ಜೊತೆಗೆ, ಅವುಗಳಿಗೆ ಪರ್ಯಾಯವಾಗಿ 'ನಿಜ'ವಾದ ಧರ್ಮ, ಜಾತಿಯ ತಿರುಳನ್ನು ತಿಳಿಸಿ ಹೇಳುವ ತವಕವನ್ನು ಅವರಲ್ಲಿ ಕಾಣಬಹುದು. ಹಾಗಾಗಿ ಕೈಲಾಸಂ ನಾಟಕಗಳಲ್ಲಿ ಹಳೆಯ ಮತ್ತು ನೂತನ ಆಧುನಿಕ ಮತ್ತು ಸಂಪ್ರದಾಯಗಳ ನಡುವಿನ ಘರ್ಷಣೆಯನ್ನು ವೀಕ್ಷಿಸುತ್ತೇವೆ. ಈ ಘರ್ಷಣೆಗಳಲ್ಲೇ ಕೈಲಾಸಂರ ಜೀವನ ತತ್ವಗಳನ್ನು ಕಾಣಬಹುದು. ಉದಾಹರಣೆಗೆ: ಕೈಲಾಸಂ 'ಟೊಳ್ಳು-ಗಟ್ಟಿ' (೧೯೧೯) ಒಂದು ಸಾಮಾಜಿಕ ವಿಡಂಬನ ನಾಟಕ. ನಾಟಕದುದ್ದಕ್ಕೂ ಪಾಶ್ಚಿಮಾತ್ಯ ಶಿಕ್ಷಣದಿಂದಾಗಿ ಹುಟ್ಟಿಕೊಂಡ, ಜೀವನದ ಉನ್ನತ-ಮೌಲ್ಯಗಳಿಗೆ ಬೆಲೆ ಕೊಡದೆ, ಶುಷ್ಕ ಪಾಂಡಿತ್ಯಕ್ಕೆ ಮತ್ತು ಪ್ಯಾಸುಪೇಲುಗಳ ಕೃತಕತೆಗಳಿಗೆ ಪ್ರಾಮುಖ್ಯತೆ ನೀಡುವ ಮಧ್ಯಮವರ್ಗದ ಅಪ್ಪ ಮಕ್ಕಳ ಬಗೆಗೆ ಕಟುಟೀಕೆ ಇದೆ. ಈ ನಾಟಕ ದಲ್ಲಿ ಪುಟ್ಟು-ಮಾಧು ನಾಗತ್ತೆ-ಪಾತು ಎರಡು ವೈರುಧ್ಯದ ಜೊತೆ ಪಾತ್ರಗಳು. ಪುಟ್ಟು ಸ್ವಾರ್ಥಿ, ಓದಿನ ಗೀಳಿನವ; ತಂದೆಗೆ ಅಚ್ಚು-ಮೆಚ್ಚಿನವ. ಮಾಧು ಪರೋಪಕಾರಿ, ತಾಯಿಗೆ ಅಚ್ಚು-ಮೆಚ್ಚು. ಓದಿನಲ್ಲಿ ಹಿಂದು. ಆದರೆ ಮನೆಗೆ ಬೆಂಕಿ ಬಿದ್ದಾಗ ತಾಯಿ-ತಂದೆಯರನ್ನು ರಕ್ಷಿಸಿದವನು ಮಾಧು ಪುಟ್ಟು ಪುಸ್ತಕವನ್ನು ತೆಗೆದುಕೊಂಡು ಓಡಿ ಹೋಗಿ, ಮಾಳಿಗೆಯ ಮೇಲೆ ಕುಳಿತು ಓದುತ್ತಿರುತ್ತಾನೆ.

ಆಧುನಿಕ ಶಿಕ್ಷಣದ ಟೀಕೆಯನ್ನು 'ಅಮ್ಮಾವ್ರ ಗಂಡ' ನಾಟಕದಲ್ಲೂ ನೋಡಬಹುದು. ಈ ನಾಟಕವು ಇಂಗ್ಲಿಷ್ ಕಲಿತ ವಿದ್ಯಾವಂತನು ತನ್ನ ಹೆಂಡತಿ (ನಾಟಕದಲ್ಲಿ ಅಮ್ಮಾವ್ರು) ಕೈಯಲ್ಲಿ ಕೈಗೊಂಬೆಯಾಗಿರುವ 'ದುಸ್ಥಿತಿ'ಯನ್ನು ಚಿತ್ರಿಸುತ್ತದೆ. ಅಮ್ಮಾವ್ರು ತನ್ನ ಗಂಡನ ಮೇಲೆ ನಡೆಸುವ ದಬ್ಬಾಳಿಕೆಯನ್ನು, ನಾಟಕದ ಮತ್ತೊಂದು ಹೆಣ್ಣು ಪಾತ್ರ ಕಮಲು ಎಂಬಾಕೆಯ ಮೂಲಕ ಟೀಕಿಸಲ್ಪಟ್ಟಿದೆ. ಕಮಲಾಳು ಅಮ್ಮಾವ್ರ 'ಗಂಡಸ್ತನ'ವನ್ನು 'ಸ್ತ್ರೀತ್ವ' (Feminsm)ನ್ನು

ಕಟುವಾಗಿ ಟೀಕಿಸಿ, ಅವಳನ್ನು ಸಹಾದಿಯಲ್ಲಿ ತರಲು ಪ್ರಯತ್ನಿಸುತ್ತಾಳೆ. ಗಂಡನನ್ನು ಹಾಗೂ ಮದುವೆಯನ್ನು ಕಡೆಗಣಿಸಬೇಡವೆಂದು, ಮನೆಯ ಕೆಲಸದಲ್ಲಿ ಸಹಕಾರಿಯಾಗಿರೆಂದು, ಮಹಿಳೆಯರ ಮೀಟಿಂಗ್‌ಗಳಿಗೋಸ್ಕರ ಹೆಚ್ಚು ಸಮಯ ವ್ಯಯ ಮಾಡಬೇಡವೆಂದು ಹೇಳುತ್ತಾಳೆ. 'ಟೊಳ್ಳು-ಗಟ್ಟಿ'ಯ ಗುಂಡೂರಾಯನಂತೆ ಕಮಲ ಸಹ ಆಧುನಿಕ, ಪಾಶ್ಚಾತ್ಯ ಶಿಕ್ಷಣದ ಕೃತಕತೆಯನ್ನು ಟೀಕಿಸುತ್ತಾಳೆ.

ಕಮಲು : ಸ್ವಲ್ಪಿರು..... quilbbling ಊ ಇಲ್ಲ. ಏನೂ ಇಲ್ಲ......educate ಅಂದ್ರೇನು? dictionary ಇದೆಯೇ? derivation ನೋಡೋಣ. ಹುಂ..... 'ಇಲ್ನೋಡು..... 'E' out.....'Duco', to lead to end out! ಪೂರ್ವಜನ್ಮದ ಪ್ರಭಾವದಿಂದ್ಲೋ ಗೋತ್ರದಿಂದಲ್ಲೋ.......ರಕ್ತದಿಂದ್ಲೋ......ಇಲ್ಲಾ ಅಮ್ಮಾ ಅಮ್ಮಾ ಅಂತ ಬಾಯ್ಬಿಟ್ಟಾಗ್ನಿಂದ ಸ್ಕೂಲಿಗ್ಬಂದ್ಸೇರೋವರ್ಗೂ, ನಾನ್ಹೇಳಿದಾಗೆ 'ಸುಳ್ಳು ಹೇಳಬಾರ್ದು''. "ಸುತ್ಮುತ್ಲೂ ಇರೋರ್ನ ಹಿಂಸಿಸಬಾರ್ದು"..... "ಎಲ್ಲರಿಗೂ ಉಪಯೋಗಿರಬೇಕು" ಅಂತ, ಹೀಗೆಲ್ಲ ತಾಯಿ ಆದವಳು ವಳಗಿಳಿಸಿರೋ ಗುಣಗಳನ್ನು, ಸ್ಕೂಲುಗ್ಳು, ಕಾಲೇಜುಗ್ಳು, ಹೊರಕ್ಕಿಳ್ಸ್ದ.... ಸ್ಕೂಲಿಗೆ ಬಂದ್ಮಕ್ಳು College ಬಿಟ್ಟು ಹೊರಗ್ಹೋರ್ಹೋವಾಗ, ಮನೇಗೂ, ಸಮಾಜಕ್ಕೂ, ದೇಶಕ್ಕೂ ಉಪಯೋಗಿಗ್ಳಾಗಿರೋ ಹಾಗೆ ಮಾಡೋದೇ educatin ಉ! Childhood ನಲ್ಲಿ neglect ಮಾಡಿ spoil ಮಾಡಿ.... bundles of Selfishness ಆದ ಮಕ್ಕಳನ್ನ, ಸ್ಕೂಲಿಗೆ ಕಳ್ಸಿದ್ರೆ......ಆ School soo ಎಂಥಾ Perfect Sytem of educa -tionಸ adopt ಮಾಡಿದ್ರೆ ತಾನೇ ಏನು?[೨೪]

ಹೀಗೆ ನಾಟಕವು 'ಉತ್ತಮ' ಮಹಿಳೆಯನ್ನು ರೂಪಿಸುವಲ್ಲಿ ಶಿಕ್ಷಣ ರೀತಿಯನ್ನು ಪ್ರತಿಪಾದಿಸುತ್ತದೆ. ಆಗಿನ ಸಮಯದಲ್ಲಿ ಪ್ರಚಲಿತದಲ್ಲಿದ್ದ ಸ್ತ್ರೀ- ಶಿಕ್ಷಣದ ವಿಚಾರಧಾರೆಗಳೂ ಸಹ ಮಹಿಳೆಯನ್ನು ವಿಧೇಯ ಹೆಂಡತಿಯನ್ನಾಗಿಯೂ, ವಾತ್ಸಲ್ಯಮೂರ್ತಿಯಾದ ತಾಯಿಯನ್ನಾಗಿಯೂ ರೂಪಿಸುವಲ್ಲಿ ಹೆಚ್ಚಿನ ಒತ್ತನ್ನು ನೀಡಿದವು.[೨೫] ಇಡೀ ನಾಟಕವು ಸ್ತ್ರೀಯರ ಬಗ್ಗೆ ಹಾಗೂ ಶಿಕ್ಷಣ ಬಗ್ಗೆ 'ಪ್ರತಿಗಾಮಿ' ಧೋರಣೆಯನ್ನು ತಾಳುತ್ತದೆ. ಆದರೆ ಈ ನಾಟಕ ಬರೆಯಲ್ಪಟ್ಟ ಸಂದರ್ಭದಲ್ಲಿ 'ಸಾಮಾನ್ಯ' ಜನರು ವಿಶೇಷವಾಗಿ ಬ್ರಾಹ್ಮಣೇತರರು, ಇಂಗ್ಲೀಷ್ ಶಿಕ್ಷಣದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು. ಬ್ರಾಹ್ಮಣ ವಿದ್ಯಾವಂತರಂತೆ, ಬ್ರಾಹ್ಮಣೇತರರಿಗೂ ಇಂಗ್ಲಿಷ್ ಶಿಕ್ಷಣ ಸರಕಾರಿ ಹುದ್ದೆಗಳಿಗೆ 'Pasport' ನಂತೆ ಇದ್ದುದರಿಂದ, ಇಂಗ್ಲಿಷ್ ಶಿಕ್ಷಣಕ್ಕೆ ಬಹಳ ಬೇಡಿಕೆ ಬಂದಿತು. ಆದರೆ ಕೈಲಾಸರಂತಹವರಿಗೆ ಇಂಗ್ಲಿಷ್ ಶಿಕ್ಷಣದ ಮೇಲೆ ಹೆಚ್ಚಿನ ವ್ಯಾಮೋಹವು 'ಭಾರತೀಯ' ಮೌಲ್ಯಗಳನ್ನು ಬೆಳೆಸಿಕೊಳ್ಳುವಲ್ಲಿ ಅಡ್ಡಿಯನ್ನುಂಟು ಮಾಡುತ್ತದೆ ಎಂದು ಭಾವನೆ ಇತ್ತು.

ಕೈಲಾಸಂ ನಾಟಕಗಳು 'ಪುರಾತನ' ಹಾಗೂ 'ನವೀನ', ಸಂಪ್ರದಾಯ ಹಾಗೂ ಆಧುನಿಕತೆಯನ್ನು ಕಲ್ಪಿಸಿಕೊಳ್ಳುವ ಬಗೆಯು ವಿಶಾಲ ಮನೋಭೂಮಿಕೆಯನ್ನು ಹೊಂದಿವೆ. ಬ್ರಾಹ್ಮಣ ಸಮಾಜದ ಕ್ಷೀಣತೆ ಮತ್ತು ಆಧುನಿಕತೆಯ ಪರಿಣಾಮವಾಗಿ ಉದ್ಭವಿಸಿದ 'ನೈತಿಕ ಅಧಃ

ಪತನ' ಅವರ ನಾಟಕಗಳಲ್ಲಿ ಪದೇಪದೇ ಚರ್ಚೆಗೊಳಗಾಗುತ್ತದೆ. ಬ್ರಾಹ್ಮಣರ 'ನೈತಿಕ ಅಧಃಪತನ'ಕ್ಕೆ 'Modern' (ಕಲಿಯುಗ) ಸಮಯವೇ ಪ್ರಮುಖ ಕಾರಣವಾಗಿರುವುದು ಹಣದಾಸೆ, ಸಿರಿತನ, ಹಾಗೂ Powerಗೆ ಹೆಚ್ಚಿನ ಆಸಕ್ತಿ ವಹಿಸಿರುವದರಿಂದಲೇ, ಬ್ರಾಹ್ಮಣ ವಿದ್ಯಾವಂತರೂ ಹಾಗೂ ಸಂಪ್ರದಾಯನಿಷ್ಠ ಬ್ರಾಹ್ಮಣರೂ ಸ್ವಾರ್ಥಿಗಳಾಗಿ, ಢಾಂಬಿಕತನದಿಂದ, ಕೃತಕತೆಯಿಂದ ಜೀವನ ಸಾಗಿಸುತ್ತಿದ್ದಾರೆಂದು ಅವರ ನಾಟಕಗಳು ಸಾರಿ ಹೇಳುತ್ತವೆ. 'ಪೋಲಿಕಿಟ್ಟಿ'ಯ ಕಿಟ್ಟಿ ಸಹ ಊರವರಿಗೆಲ್ಲಾ ಪೋಲಿಯಾಗಿ ಪ್ರಸಿದ್ಧನಾಗಿದ್ದರೂ, ಅಂತರಂಗದಲ್ಲಿ ಸಾತ್ವಿಕನಾಗಿದ್ದ ಮುಗ್ಧ ಬಾಲಕ. ಈ ನಾಟಕದಲ್ಲಿ ಕಲಿಯುಗದಲ್ಲಿ ಬ್ರಾಹ್ಮಣ ಸಮಾಜದಲ್ಲಾದ ಮಾರ್ಪಾಟುಗಳ ಬಗ್ಗೆ ಕಿಟ್ಟಿ ವ್ಯಕ್ತಪಡಿಸುವ ಅಭಿಪ್ರಾಯಗಳು, ಕೈಲಾಸಂ ಬ್ರಾಹ್ಮಣ ಸಮಾಜದಲ್ಲಿದ್ದ ಮೇಲು-ಕೀಳು ಭಾವನೆಗಳ ಬಗ್ಗೆ ವಿಡಂಬಿಸಿರುವದನ್ನು ಹೋಲುತ್ತವೆ. ಕಿಟ್ಟಿಯ ಪ್ರಕಾರ ಸಮಾಜದಲ್ಲಿನ ಅನೇಕ ಜಾತಿಗಳು ಹಿಂದೆ ದೇವರಿಂದ, ಸ್ವಾಮಿ ಹಾಗೂ ಮಠಾಧೀಶರಿಂದ ಮಾಡಲ್ಪಟ್ಟವು., ಆದರೆ ಈಗ ಆ ಸಾಮಾಜಿಕ ಶ್ರೇಣಿಗಳು ಕಣ್ಮರೆಯಾಗಿ ಎರಡೇ ಜಾತಿಗಳು ಉಳಿದಿವೆ. ಒಂದು ಬಡಜಾತಿ, ಎರಡನೆಯದು ಶ್ರೀಮಂತ ಜಾತಿ. ಕಿಟ್ಟಿಯ ಪ್ರಕಾರ ಅವನ ಅಣ್ಣ ರಾಮು ಎರಡನೇ ಜಾತಿಗೆ ಸೇರಿದವನು. ಏಕೆಂದರೆ ರಾಮು ಇತ್ತೀಚೆಗೆ ಹಣಕ್ಕೆ ಮತ್ತು ಬಲಕ್ಕೆ ಪ್ರಾಮುಖ್ಯತೆ ನೀಡಿ ಸ್ವಾರ್ಥಿಯಾಗಿದ್ದಾನೆ. ಅವನ ಬಂಧು-ಬಳಗದವರನ್ನೆಲ್ಲಾ ಮರೆತಿದ್ದಾನೆ. ಇದಕ್ಕೆಲ್ಲ ಕಾರಣ ಹಣದಾಸೆ, 'ಬಡತನ'ದಿಂದ (ಬಡವರು, ಸೌಮ್ಯರು ಹಾಗೂ ಮುಗ್ಧರು) ಶ್ರೀಮಂತತನಕ್ಕೆ (ಗರ್ವ, ಸ್ವಾರ್ಥತೆಗಳು ಇದರ ಲಕ್ಷಣ) ಆ Conversion 'ಜಾತಿ ಪದ್ಧತಿ'ಯನ್ನು 'ಖರಾಬು'ಗೊಳಿಸಿದೆ. 'ಟೊಳ್ಳು-ಗಟ್ಟಿ'ಯ ಮಾಧು, 'ಪೋಲಿಕಿಟ್ಟಿ'ಯ ಕಿಟ್ಟಿ 'ವ್ಯಕ್ತಿಯ ಅಂತರಂಗ ಸಾಮರ್ಥ್ಯ'ವನ್ನು ಹೊರಚೆಲ್ಲುವ ಗಟ್ಟಿ ಪಾತ್ರಗಳು. ಇವರು ಕೈಲಾಸಂಗೆ ಪುರಾತನ ಜಾತಿ ಪದ್ಧತಿಯ ಮೇಲೆ ಇದ್ದ ನಂಬಿಕೆಯನ್ನು ಹಾಗೂ ಈಗಿನ ಬ್ರಾಹ್ಮಣರ ಪ್ರಪಂಚಿಕ ಆಸಕ್ತಿಗಳನ್ನು ಟೀಕಿಸುವ ಪ್ರತಿನಿಧಿಗಳಾಗುತ್ತಾರೆ. ಹಾಗಾಗಿ ಬ್ರಾಹ್ಮಣರ ಪ್ರಗತಿಯು ಹಿಂದಿನ ಜಾತಿ ಪದ್ಧತಿ, ಅದರ ಚೌಕಟ್ಟಿನಲ್ಲಿಯೇ ಆಗುವಂತಹದ್ದು.

ಹಾಗಾದರೆ ಯಾವುದೀ 'ಹಿಂದಿನ ಜಾತಿ ಪದ್ಧತಿ'? ಕೈಲಾಸಂರ ಆದರ್ಶ ಸಾಮಾಜಿಕ ಶ್ರೇಣೀಕರಣವು ವರ್ಣಾಶ್ರಮ ಆಧಾರಿತವಾದುದು. ವರ್ಣಾಶ್ರಮ ಪದ್ಧತಿಯು ಹಿಂದೂ ಧರ್ಮದ ಮೂಲ ಆಧಾರ. ಕೈಲಾಸಂ ಜಾತಿ ಪದ್ಧತಿಯ ಬಗ್ಗೆ ತಮ್ಮದೇ ಆದ ಅಭಿಪ್ರಾಯವನ್ನು ಹೊಂದಿದ್ದರು. ಅವರಿದನ್ನು ಅನೇಕ ನಾಟಕಗಳಲ್ಲಿ ಮಂಡಿಸಿದ್ದಾರೆ. 'ಜಾತಿ ಪದ್ಧತಿ'ಯು ವರ್ಣಾಶ್ರಮದ ಮೂಲದಿಂದ ಬಂದದ್ದು ಎಂದು ಅವರು ನಂಬಿದ್ದರು. ಅವರಿಗೆ ವರ್ಣಾಶ್ರಮದಲ್ಲಿ ಅಚಲ ನಂಬಿಕೆ. ಸಮಕಾಲೀನ "ಅನಿಷ್ಟ" ಜಾತಿ ಪದ್ಧತಿಗೆ ಪರಿಹಾರವನ್ನು ಅವರು ವರ್ಣಾಶ್ರಮದಲ್ಲಿ ಕಂಡುಕೊಂಡಿದ್ದರು. ಉದಾಹರಣೆಗೆ: 'ನಮ್ ಬ್ರಾಹ್ಮಣ್ಕೆ' ನಾಟಕದಲ್ಲಿ ಬ್ರಾಹ್ಮಣ ಪೂಜಾರಿಯ ಸಮಯ ಸಾಧಕತನ ಹಾಗೂ ಧನಲೋಭವನ್ನು ಟೀಕಿಸುತ್ತಾ, ನಿಜವಾದ ಹಿಂದೂ ಧರ್ಮ ಮತ್ತು ಜಾತಿಯ ಆಚರಣೆಗಳು ಇಂತಹ ಪುರೋಹಿತರಿಂದಲೇ ಹಾಳಾಗಿವೆ ಎಂದು ಭಾವಿಸುತ್ತಾರೆ. ನಾಟಕದ ಸರೋಜ ಹೇಳುವ ಹಾಗೆ:

"ಇದು Lord Krishna Organize ಮಾಡ್ದ ancient Organiza-

tion of Caste ಊ !! ಈ ನಮ್ಮ Indiaಗೆ Peculiar Caste Systemoo...for generations.....is the Subtlity of Priest-hoodoo, which, turning into Priest-Craftoo, has dominated the 92 Percent of illiterate Indian soo, to the extent of giving the lie to Lord Krishna's Organization by making the small detail of Location of Birth in Society to determine one's caste, while THE LORD KRISHNA, HIMSELF A NON-BRAHMIN BY BIRTH, INSTITUTED FOR ALL TIME THE TRUE CRITERION OF REAL ESTATE: NOT THE INTEGRANT INDIVDUAL'S LOCATON OF BIRTH IN SOCIETY ! BUT HIS PARTICULAR VOCATION'S WORTH FOR SOCIETY! NOT ACCIDENTAL BIRTH, BUT INTRINSIC WORTH!!" .(ಪು. ೪೯೨, ೧೯೮೭).[೨೬]

ಮೇಲೆ ಇಂಗ್ಲಿಷ್ ನಾಟಕಗಳನ್ನು ಚರ್ಚಿಸುವಾಗ ಹೇಗೆ ಏಕಲವ್ಯ, ಹಾಗೂ ಕರ್ಣರು ಜಾತಿಯನ್ನು ಮೀರಿ ಸ್ವಸಾಮರ್ಥ್ಯಗಳಿಂದ ಮುಂದೆ ಬಂದರು ಎಂಬುದನ್ನು ನೋಡಿದೆವು. ಕೈಲಾಸಂಗೆ 'Worthness of man' ಅಪಾರ ನಂಬುಗೆ. ಮನುಷ್ಯನ ಸಾಮರ್ಥ್ಯ ಜಾತಿಯನ್ನು ಮೀರಿದುದು ಎಂದೂ ಮನುಷ್ಯನನ್ನು ಅಳೆಯಲು ಜಾತಿಯೊಂದೇ ಸಾಧನವಾಗಬಾರದೆಂದು ಅಭಿಪ್ರಾಯಪಟ್ಟಿದ್ದರು. ಕಾಕತಾಳೀಯವೆಂಬಂತೆ-ಇದೇ ಸಂದರ್ಭದಲ್ಲಿ ಎಂ. ವಿಶ್ವೇಶ್ವರಯ್ಯನವರು ಬ್ರಾಹ್ಮಣೇತರರಿಗೆ ಜಾತಿ ಆಧಾರಿತ ಮೀಸಲಾತಿಯನ್ನು ನೀಡಿದುದರ ವಿರುದ್ಧ ಮೈಸೂರು ಸಂಸ್ಥಾನದಲ್ಲಿ ದಿವಾನಗಿರಿಗೆ ರಾಜಿನಾಮೆ ಇತ್ತರು. ಇಲ್ಲಿ ನೋಡಬೇಕಾದುದೇನೆಂದರೆ, ಈ ಬ್ರಾಹ್ಮಣೇತರ ಚಳುವಳಿಯು ಕಾವೇರುತ್ತಿದ್ದ ಸಮಯದಲ್ಲಿ ಕೈಲಾಸಂ ಹಾಗೂ ವಿಶ್ವೇಶ್ವರಯ್ಯನಂತಹ ಸಾರ್ವಜನಿಗೆ ವ್ಯಕ್ತಿಗಳಿಗೆ ಶ್ರೇಷ್ಠತೆ ಹಾಗೂ ಯೋಗ್ಯತೆಗಳು ಬಹಳ ಮುಖ್ಯವೆನಿಸಿರುವುದು. ೧೯೪೪ರಲ್ಲಿ ನಡೆದ ಪ್ರಥಮ 'ಅಖಿಲ ಮೈಸೂರು ಬ್ರಾಹ್ಮಣ ಮಹಾಸಭೆ'ಯೂ ವ್ಯಕ್ತಿಯ ಯೋಗ್ಯತೆಯನ್ನು ಒತ್ತಿ ಪ್ರತಿಪಾದಿಸುತ್ತದೆ. ಮಹಾಸಭೆಯ ಪ್ರಕಾರ, ತಂದೆ-ತಾಯಿಯರು ತಮ್ಮ ಮಕ್ಕಳು ಮುಂದೆ ಓದಲು ಯೋಗ್ಯರೆ ಅಥವಾ ಇಲ್ಲವೇ ಎಂದು ತಿಳಿದುಕೊಳ್ಳಬೇಕು. ಯೋಗ್ಯರಲ್ಲದಿದ್ದರೆ ಎಸ್‌ಎಸ್‌ಎಲ್‌ಸಿಯ ನಂತರ ಉಚ್ಚ ಶಿಕ್ಷಣಕ್ಕೆ ಕಳುಹಿಸುವ ಬದಲು ಉದ್ಯೋಗಾಧಾರಿತ-ಶಿಕ್ಷಣಕ್ಕೆ ಕಳುಹಿಸಬೇಕು ಎಂದು ಅಭಿಪ್ರಾಯವನ್ನು ಮಂಡಿಸಿತು. ಇಲ್ಲಿ ಉಲ್ಲೇಖಿಗೊಂಡ ತಂದೆ-ತಾಯಿಗಳು ಬ್ರಾಹ್ಮಣೇತರರು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಮಹಾಸಭೆಯು ಯೋಗ್ಯತೆಯ ಆಧಾರದ ಮೇಲೆ ಮೀಸಲಾತಿ ನೀಡಬೇಕೆಂದು ಬಯಸುತ್ತದೆ.

ಸರೋಜಿನಿ ಕೃಷ್ಣನನ್ನು ಬ್ರಾಹ್ಮಣೇತರನಾಗಿದ್ದ ಹಾಗೂ ವರ್ಣಾಶ್ರಮ ಪದ್ಧತಿಯ ರೂವಾರಿ ಎಂದು ಹೇಳುವುದು ವಿಶೇಷ ಗಮನಕ್ಕೆ ಅರ್ಹವಾದುದು. ಮುಂದೆ ಅವರೇ ಹೇಳುವ ಹಾಗೆ.

CASTES.....SYSTEM ಅಲ್ಲ ! Divinely deliberated Organizationoo! Caste

ವಿರೋಧಿ ಚಳುವಳಿಯಿಂದ ತಾತ್ವಿಕ ಬೆಂಬಲವನ್ನು ಪಡೆದಿತ್ತು. ಬ್ರಾಹ್ಮಣೇತರ ಚಳುವಳಿಯ ಮೀಸಲಾತಿ ಬೇಡಿಕೆಗಳಿಗೆ ಮೈಸೂರು ಸರ್ಕಾರವು ಮಣಿಯಲೇ ಬೇಕಾಗಿತ್ತು. ಇದರಿಂದಾಗಿ ಶಿಕ್ಷಣ ಮತ್ತು ಸರ್ಕಾರಿ ನೌಕರಿಗಳಲ್ಲಿ ಜಾರಿಗೆ ಬಂದ ಮೀಸಲಾತಿಯು ಬ್ರಾಹ್ಮಣರನ್ನು ರೊಚ್ಚಿಗೆಬ್ಬಿಸಿತು. ಮಿಲ್ಲರ್ ಕಮಿಟಿಯು ಶಿಕ್ಷಣ ಹಾಗೂ ಸರ್ಕಾರಿ ಹುದ್ದೆಗಳಿಗೆ ಮಾಡಲಾದ ಮೀಸಲಾತಿ-ಶಿಫಾರಸುಗಳ ವಿರುದ್ಧ ಮೈಸೂರು ಹಾಗೂ ಮದ್ರಾಸ್ ಬ್ರಾಹ್ಮಣರೆಲ್ಲರೂ ಪ್ರತಿಭಟಿಸಿದರು. ಮಾಧ್ಯಮಿಕ ಶಾಲೆಗಳಲ್ಲಿ ಮೀಸಲಾತಿ ಮತ್ತು ಇಂಗ್ಲೀಷ್ ಶಿಕ್ಷಣದಲ್ಲಿ ಬ್ರಾಹ್ಮಣೇತರರಿಗೆ ಆದ್ಯತೆ ನೀಡಿದುದು ಬ್ರಾಹ್ಮಣರನ್ನು ಕೆರಳಿಸಿತು. ಸರ್ಕಾರದ ಈ ಕ್ರಮಗಳಿಂದ ಉನ್ನತ ಶಿಕ್ಷಣಕ್ಕೆ ಹೊಡೆತ ಬೀಳಬಹುದೆಂದು ಕೆಲವರು ತಳಮಳಿಸಿದರು. ಕೆಲವರು ಜೊತೆಗೆ ಉನ್ನತ ಶಿಕ್ಷಣದ ಏಳಿಗೆಗೆ ಹಾಗೂ ಅಭಿವೃದ್ಧಿಗೆ ಪ್ರಬಲವಾಗಿ ಒತ್ತಾಯಿಸಿದರು. ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ (Legislative Asembly) ಬ್ರಾಹ್ಮಣರಿಗೂ ಹಾಗೂ ಬ್ರಾಹ್ಮಣೇತರ ಪ್ರತಿನಿಧಿಗಳಿಗೂ ನಡೆದ ವಾಗ್ವಾದಗಳು, ಕೈಲಾಸಂ ನಾಟಕಗಳು 'ಬಡವ-ಶ್ರೀಮಂತ' ಪರಿಕಲ್ಪನೆಗಳನ್ನು ಚರ್ಚಿಸುವ ಸಂದರ್ಭಗಳನ್ನು ಜ್ಞಾಪಕ ತರುತ್ತವೆ. ೧೯೧೭ರ ಅಸೆಂಬ್ಲಿ ಚರ್ಚೆಗಳಲ್ಲಿ ಭಾಗವಹಿಸಿದ್ದ ಎಸ್.ಆರ್. ಬಾಲಕೃಷ್ಣರಾವ್ (ಶಿವಮೊಗ್ಗ) ಅವರು ಮೀಸಲಾತಿಯನ್ನು ಜಾತಿ ಆಧಾರಿತವಾಗಿಸದೆ ಆರ್ಥಿಕ ಆಧಾರವಾಗಿರಬೇಕೆಂದು ಬಲವಾಗಿವಾದಿಸಿದರು. ಬ್ರಾಹ್ಮಣರಲ್ಲಿ ಹವ್ಯಕರು ಹಾಗೂ ಶಿವಳ್ಳಿಯವರು ಬಡವರಾದ್ದರಿಂದ ಅವರಿಗೂ ಮೀಸಲಾತಿ ನೀಡಬೇಕೆಂದು ಅವರು ಒತ್ತಾಯಿಸಿದರು. ಹಿಂದುಳಿದ ವರ್ಗವನ್ನು ನಿರ್ಣಯಿಸುವ ಅಂಶಗಳನ್ನು ಕಟುವಾಗಿ ಖಂಡಿಸಿದರು. ಇವರೊಂದಿಗೆ ಶ್ರೀನಿವಾಸರಾವ್, ಅನಂತಯ್ಯ ಮುಂತಾದ ಬ್ರಾಹ್ಮಣ ಪ್ರತಿನಿಧಿಗಳು 'ಬ್ರಾಹ್ಮಣರಲ್ಲೂ' ಬಡವರಿದ್ದಾರೆ. ಅವರಿಗೂ ಮೀಸಲಾತಿಗಳು ಸಿಗಬೇಕೆಂದು ಒತ್ತಾಯಿಸಿದರು. ಆಗಿನ ಜನ ಸಾಮಾನ್ಯ ಹಾಗೂ ವಿದ್ಯಾವಂತ ವರ್ಗದವರನ್ನು ಮತ್ತೆ ಮತ್ತೆ ಕಾಡಿದ ಇಂತಹ ವಾಗ್ವಾದಗಳು ಕೈಲಾಸಂ ನಾಟಕಗಳಲ್ಲಿ 'ಬಡವ-ಶ್ರೀಮಂತ' ಎಂಬ ದ್ವೈತಪರಿಕಲ್ಪನೆಗಳಾಗಿ ಮೂಡುತ್ತವೆ. ಅವರ ಮತ್ತೊಂದು ನಾಟಕ 'ಬಹಿಷ್ಕಾರ' ಬಡ ಬ್ರಾಹ್ಮಣ ತಂದೆಯು ತನ್ನ ಮಗಳ ಮದುವೆ ಮಾಡಿಸಲು ಸಾಧ್ಯವಾಗದೆ ಪರಿತಾಪ ಪಡುವ 'ಹೃದಯ ವಿದ್ರಾವಕ' ಚಿತ್ರವನ್ನು ಓದುಗರ ಮುಂದಿಡುತ್ತದೆ. ರಂಗಣ್ಣನು (ನತದೃಷ್ಟ ತಂದೆ) ತನ್ನ ಸ್ಥಿತಿಗತಿಗೆ ಶ್ರೀಮಂತ ಬ್ರಾಹ್ಮಣರನ್ನು ಹಾಗೂ ಕಲಿಯುಗವನ್ನು ಹಳಿಯುತ್ತಾನೆ. ಈ ನಾಟಕದ ಮೂಲಕ ಕೈಲಾಸಂ, ಬ್ರಾಹ್ಮಣ ಸಮಾಜದಲ್ಲಿ 'ಸಂಪ್ರದಾಯದ' ಹೆಸರಿನಲ್ಲಾಗುತ್ತಿದ್ದ ಅನಾಚಾರಗಳನ್ನು ಚಿತ್ರಿಸಿದ್ದಾರೆ. ಈ ನಾಟಕವು ಎಷ್ಟೊಂದು ಪರಿಣಾಮಕಾರಿಯಗಿತ್ತೆಂದರೆ, ಸ್ವತಃ ಕೈಲಾಸಂ ಹಾಗೂ ಅವರ ಪತ್ನಿ ನಾಟಕದ ನಂತರ ಬಡ ಬ್ರಾಹ್ಮಣನ ದುಸ್ಥಿತಿಗೆ ಕಣ್ಣೀರಿಟ್ಟರಂತೆ! ಕೈಲಾಸಂರಿಗೆ ಬ್ರಾಹ್ಮಣ ಜಾತಿಯ ಬಗ್ಗೆ ಅರಿವಿದ್ದರೂ, ಅದರಾಚೆಗೆ ಅವರು ಹೋಗುವುದೇ ಇಲ್ಲ. ಆಗ ಬಿಸಿಯೇರಿದ್ದ ಬ್ರಾಹ್ಮಣೇತರ ಚಳುವಳಿಯ ಬಗ್ಗೆಯಾಗಲಿ ಅಥವಾ ದಲಿತರ ಮೇಲೆ ಆಗುತ್ತಿದ್ದ ಶೋಷಣೆಯ ಬಗ್ಗೆಯಾಗಲಿ ತಲೆಕೆಡಿಸಿಕೊಂಡ ಹಾಗೆ ಕಾಣುವುದಿಲ್ಲ.[೨೯]

VI

ಬ್ರಾಹ್ಮಣರು ಸಮಕಾಲೀನ ಜೀವನದಲ್ಲಿ ತೋರುವ ಸಣ್ಣತನಗಳು ಕೈಲಾಸಂ ಅವರಲ್ಲಿ ತಿರಸ್ಕಾರ ಭಾವನೆಯನ್ನು ಮೂಡಿಸಿದವು. ಬ್ರಾಹ್ಮಣರಲ್ಲಿ ಕಾಣದ ಸರಳತನ, ವಿಶಾಲ ಮನೋಭಾವವನ್ನು ಕೈಲಾಸಂ ಶೂದ್ರರಲ್ಲಿ ಕಂಡುಕೊಂಡರು. ಆದ್ದರಿಂದಲೇ ತಮ್ಮ ನಾಟಕಗಳಲ್ಲಿ ಬ್ರಾಹ್ಮಣೇತರರನ್ನು ಚಿತ್ರಿಸುವ ಪರಿರಮ್ಯ ರೀತಿಯದು. ಕೈಲಾಸಂರ 'ತಾವರೆ ಕೆರೆ' ಮತ್ತು 'ಕನ್ನಡ' ಕವನಗಳು ಹಳ್ಳಿಯ ಜೀವನದ ಮತ್ತು ವ್ಯಕ್ತಿಗಳ ಚಿತ್ರವನ್ನು ಸೆರೆಹಿಡಿಯುತ್ತವೆ. ಶೂದ್ರರೆ ಬಗೆಗಿನ ಮಮತೆ, ಪ್ರೀತಿ, ಗೌರವಗಳು ಕೈಲಾಸಂರ ಉದಾರವಾದಿ ಮತ್ತು ಆದರ್ಶ ವಾದಿ ಧೋರಣೆಯಿಂದ ಕೂಡಿದಂತಹವು. 'ನಮ್ ಬ್ರಾಹ್ಮಣ್ಕೆ'ಯ ಮುಸ್ಲಿನ ವಿಧೇಯತೆ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚುವ ಕೈಲಾಸಂಗೆ, ಮುಸ್ಲಿಮರು ಕರ್ನಾಟಕದ ಇತಿಹಾಸವನ್ನು ಬರೆಯಲು ಇರುವ ತೊಡರುಗಳು. ಕನ್ನಡ ಸಾಹಿತ್ಯ ಸಮ್ಮೇಳನದ (೧೯೪೫) ಭಾಷಣ ಮಾಡಿದ ಕೈಲಾಸಂರು ಮುಸ್ಲಿಮರನ್ನು ಬ್ರಿಟೀಷ್ ಮತ್ತು ಪೇಶ್ವೆಗಳಂತೆ ಪರಕೀಯರಿಗೆ ಹೋಲಿಸುತ್ತಾರೆ. ಈ ನಾಟಕದಲ್ಲಿ ಬ್ರಾಹ್ಮಣ ಮಧ್ಯಮವರ್ಗದ ಸಾಹೇಬರ 'ವಿಶಾಲ ಹೃದಯ'ವನ್ನು ಅನಾವರಣ ಗೊಳಿಸಲು ಮುಸ್ಲಿಂ ಪಾತ್ರವನ್ನು ತರಲಾಗಿದೆ. ಕೈಲಾಸಂರಿಗೆ ಸಮಾಜದಲ್ಲಿ ಏಕಲವ್ಯನಂತಹವರು ಬಹಳಷ್ಟು ಜನ ಇದ್ದಾರೆಂದು ಅಭಿಪ್ರಾಯ. ಆದರೆ ಏಕಲವ್ಯನ ಬಗೆಗೆ ಇಂಗ್ಲೀಷ್ ನಾಟಕದಲ್ಲಿ ಹೊರಹೊಮ್ಮುವ ಅಭಿಪ್ರಾಯಗಳೇ ಬೇರೆಯವು. ಕೈಲಾಸಂ ಏಕಲವ್ಯನನ್ನು ಕುವೆಂಪುರವರ 'ಬೆರಳ್‌ಗೆ ಕೊರಳ್' ನಾಟಕದ 'ಏಕಲವ್ಯ'ನ ಜೊತೆಗೆ ಹೋಲಿಸಿ ನೋಡಿದರೆ ಕೆಲವು ವಿಚಾರಗಳು ಸ್ಪಷ್ಟವಾಗಿ ತಿಳಿಯುತ್ತವೆ. ಕುವೆಂಪುರವರ ಏಕಲವ್ಯನು ಉಚ್ಚ ಜಾತಿಯ ರಾಜಕುಮಾರರಿಗೆ ಮೀಸಲಾಗಿದ್ದ ಬಿಲ್ವಿದ್ಯೆಯನ್ನು ಕಲಿತುದಕ್ಕಾಗಿ ದ್ರೋಣರು ಕೇಳಿದ ಗುರುದಕ್ಷಿಣೆಯಾದ ಬಲಗೈ ಬೆರಳನ್ನೇ ತ್ಯಾಗ ಮಾಡಬೇಕಾಯಿತು. ಆದರೆ ಕೈಲಾಸಂರಿಗೆ ಏಕಲವ್ಯನು ಬ್ರಾಹ್ಮಣನಾದ ದ್ರೋಣನಿಗೆ ತೋರಿಸುವ ಗುರು-ಭಕ್ತಿಯು ಉನ್ನತ ಮಟ್ಟದ್ದು ಎನಿಸುತ್ತದೆ. ಅವರ ಪ್ರಕಾರ

> ಅವರು (ಶೂದ್ರರು) ಎಷ್ಟು ದೊಡ್ಡ ಮನುಷ್ಯರು ಎಂಥ ಸಂಭಾವಿತರು.
> ನಮ್ಮ ಸುತ್ತ ಮುತ್ತ ನಾವು ಅನೇಕ ಮಂದಿ ಏಕಲವ್ಯರನ್ನು ಕಾಣುತ್ತೇವೆ.
> (ಪು.೮೮, ೨೦೦೦)[೨]

ಆದರೆ ಕೈಲಾಸಂರ ಈ ಎಲ್ಲಾ 'ಉತ್ತಮ' 'ಶ್ರೇಷ್ಠ' ಪಾತ್ರಗಳು ಜೀವನದಲ್ಲಿ ಕಷ್ಟಗಳನ್ನು ಅನುಭವಿಸಿದವು. ಮಾಧುಗೆ ಸುಟ್ಟಗಾಯಗಳಾದರೆ, ಏಕಲವ್ಯನು ಕೈಬೆರಳನ್ನೂ ಕಳೆದು ಕೊಳ್ಳುತ್ತಾನೆ; ಮುಸಲ್ಮಾನನು ತನ್ನ ದಣಿಗೆ ಸದಾ ವಿಧೇಯಕನಾಗಿರಬೇಕು ಮತ್ತು ಪ್ರಾಮಾಣಿಕನಾಗಿರಬೇಕು; ಕರ್ಣನು ತನ್ನ ಜಾತಿಯನ್ನು ಜ್ಞಾಪಿಸಿಕೊಂಡಿದುದರಿಂದ ಮರಣವನ್ನು ಅಪ್ಪಬೇಕಾಯಿತು; ಕೀಚಕನು ಸೈರಂಧ್ರಿಯ ಮೇಲಿನ 'ನಿರ್ಮಲ ಪ್ರೇಮ'ಕ್ಕೆ ಜೀವವನ್ನೇ ತೆರಬೇಕಾಯಿತು. ಕುಸಿಯುತ್ತಿರುವ ವೈದಿಕ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲು ಕೈಲಾಸಂ ಸೃಷ್ಟಿಸಿದ ಮಾದರಿಗಳು ಈ ಪಾತ್ರಗಳೇ? ಕೈಲಾಸಂ ಇಂತಹ ಪಾತ್ರಗಳ ಸೃಷ್ಟಿಗೆ ಶೂದ್ರರ ಬಗೆಗಿನ ವಾಸ್ತವತೆಯ ಸ್ಪಷ್ಟ ಅರಿವು ಇಲ್ಲದಿರುವುದೇ ಆಗಿದೆ.

ಪರಂಪರೆಯ ಜೊತೆಗಿನ ಸಂಧಾನ

ಹಳತು-ಹೊಸದರ,ಪರಂಪರೆ-ಆಧುನಿಕತೆಗಳ ವೈರುಧ್ಯಗಳು ಕೈಲಾಸಂ ಇಂಗ್ಲೀಷ್ ನಾಟಕಗಳಲ್ಲಿ ಕಣ್ಮರೆಯಾಗುತ್ತವೆ. ಇಂಗ್ಲೀಷ್ ನಾಟಕಗಳ ಸಂದರ್ಭದಲ್ಲಿ ಕೈಲಾಸಂಗೆ 'ಭಾರತೀಯ ಸಂಸ್ಕೃತಿ' ಯಾವುದು ಎನ್ನುವುದರ ಬಗ್ಗೆ ಯಾವುದೆ ಅನುಮಾನಗಳಿಲ್ಲ. ಮಹಾಭಾರತದ ಮತ್ತು ರಾಮಾಯಣಗಳಲ್ಲಿನ 'ಉನ್ನತ ಮೌಲ್ಯಗಳ ಬಗ್ಗೆ ಅತೀವ ಗೌರವ, ಭಕ್ತಿ ಮತ್ತು ವಿಶೇಷ ಆಕರ್ಷಣೆ. ಕನ್ನಡ ನಾಟಕಗಳಲ್ಲಿನ ಬ್ರಾಹ್ಮಣ ಜಗತ್ತು ಲೌಕಿಕದ ಸುತ್ತ-ಮುತ್ತಲಿನ ಅಂಶಗಳನ್ನೊಳಗೊಂಡರೆ, ಇಂಗ್ಲೀಷ್ ನಾಟಕಗಳು ಪಾರಮಾರ್ಥಿಕ ಮತ್ತು ಆಧ್ಯಾತ್ಮಿಕ ಅಂಶಗಳನ್ನು ಮನಗಾಣುವಂತೆ ಚಿತ್ರೀಕರಿಸುತ್ತವೆ. ಕರ್ಣ, ಏಕಲವ್ಯ, ಭರತ, ಕೀಚಕ ಇವರು ಪೌರುಷ, ಧೈರ್ಯ, ಸಾಮರ್ಥ್ಯ, ತ್ಯಾಗ, ಭಕ್ತಿ, ನಿರ್ಮಲ ಪ್ರೇಮಕ್ಕೆ ಸಂಕೇತವಾಗುತ್ತಾರೆ. 'ದಿ ಪರ್ಪಸ್' ನಾಟಕದಲ್ಲಿನ ಏಕಲವ್ಯನ ಗುರುಭಕ್ತಿಗೂ, 'ಟೊಳ್ಳು-ಗಟ್ಟಿಯ ಮಾಧುವಿಗೂ ಇಲ್ಲೇ ಸಂಬಂಧವಿರುವುದು. ಕೈಲಾಸಂ ಶಿಕ್ಷಣದ ಬಗೆಗಿನ ತಮ್ಮ ಅಭಿಪ್ರಾಯ ಗಳನ್ನು ಕಿಟ್ಟು, ಮಾಧು, ಏಲಕವ್ಯ ಹಾಗೂ ಕರ್ಣರ ಮೂಲಕ ತಿಳಿಯಪಡಿಸುತ್ತಾರೆ. ಈ ಪಾತ್ರಗಳ ನಡುವೆ ಒಂದು ಬಗೆಯ ಸಂಭಾಷಣೆ ನಡೆಯುತ್ತಿರುವ ಹಾಗೆ ತೋರುತ್ತದೆ. ಈ ಅಂಶವನ್ನು ಜಿ.ಎಸ್. ಆಮೂರರು ಗುರುತಿಸಿದ್ದಾರೆ.

> ಹೆಚ್ಚು ವ್ಯಾವಹಾರಿಕವಾದ ಕೈಲಾಸಂ ಆಸಕ್ತಿಗಳಲ್ಲಿ 'ಶಿಕ್ಷಣ'ವೂ ಒಂದು. ಹೆಚ್ಚು ಜನಪ್ರಿಯವಾಗಿರುವ ತಮ್ಮ 'ಟೊಳ್ಳು-ಗಟ್ಟಿ' ಮತ್ತು 'ಪೋಲಿಕಿಟ್ಟಿ' ಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳನ್ನು ಅವರು ಚಿತ್ರಿಸಿದ್ದಾರೆ. ಈ ವಿಷಯದಲ್ಲಿ ಅವರಿಗಿದ್ದ ನಿರಂತರ ಆಸಕ್ತಿಯನ್ನು ಅವರ ಇಂಗ್ಲೀಷ್ ನಾಟಕಗಳಲ್ಲೂ ಕಾಣಬಹುದು. The Purposeದಲ್ಲಿ ಶಿಕ್ಷಣ ಕ್ರಮದಲ್ಲಿ ಅಗತ್ಯವಾದ ಐದು ಸೂತ್ರಗಳನ್ನು ಕೈಲಾಸಂ ಕ್ರೋಢಿಕರಿಸಿದ್ದಾರೆ: ೧. ಏಕಾಗ್ರ ಚಿತ್ರ ೨. ಅಗಾಧವಾದ ಶ್ರದ್ಧಾನ್ವಿತವಾದ ಗುರುಭಕ್ತಿ ೩. ಶಿಷ್ಯನಿಗೆ ವಿದ್ಯಾದಾನ ಮಾಡಲು ಗುರುವಿನಲ್ಲಿ ಮನಃಪೂರ್ವಕವಾದ ಸಂಕಲ್ಪ ೪. ವಿದ್ಯೆಯ ಮೂಲತತ್ವಗಳ ಜ್ಞಾನ ವ್ಯಕ್ತಿತ್ವ ನಿರ್ಮಾಣದಲ್ಲಿ ತಾಯಿಯ ಸಂಸ್ಕಾರದ ಪ್ರಭಾವ ಹೇಗೆ ಮಹತ್ವದ್ದಾಗಬಲ್ಲದೆಂಬುದನ್ನು ಕೈಲಾಸಂ ಏಕಲವ್ಯ ಹಾಗೂ ಕರ್ಣರ ವಿಷಯದಲ್ಲಿ ತೋರಿಸಿದ್ದಾರೆ. (ಪು.೧೨೫, ೨೦೦)[೨೨]

ತಾಯಿಯ ಬಗ್ಗೆ ಕೈಲಾಸಂರಿಗೆ ಇರುವ ವಿಶೇಷ ಗೌರವವನ್ನು 'ಹೋಂರೂಲ್' ನಾಟಕದಲ್ಲಿಯೂ ಕಾಣಬಹುದು. ರಾಮಣ್ಣನು ತನ್ನ ತಾಯಿ ಸುಬ್ಬಮ್ಮ ಪರವಾಗಿ, ಹೆಂಡತಿ ವೆಂಕಮ್ಮನ ವಿರುದ್ಧವಾಗಿ ಕೆಲವು ಸಂದರ್ಭಗಳಲ್ಲಿ ಒಲವು ತೋರಿಸುವುದು ಇದಕ್ಕೆ ಸಾಕ್ಷಿ.

'ಟೊಳ್ಳು-ಗಟ್ಟಿ' ಮತ್ತು 'ಪೋಲಿಕಿಟ್ಟಿ' ನಾಟಕಗಳಲ್ಲಿ ಚಿತ್ರಿಸಿರುವ ಶೈಕ್ಷಣಿಕ ಸಮಸ್ಯೆಗಳಿಗೆ ಉತ್ತರವನ್ನು 'ಭಾರತೀಯ ಸಂಪ್ರದಾಯ'ದ ರೂಪವಾದ ಮಹಾಭಾರತದಲ್ಲಿ ಕೈಲಾಸಂರ ಕಂಡುಕೊಂಡಿದ್ದಾರೆ. ಅವರ ಪ್ರಕಾರ ಪುರಾಣದ ಈ ಪಾತ್ರಗಳು ಆದರ್ಶ ವ್ಯಕ್ತಿಗಳು. ಆಮೂರರು ಹೇಳುವ ಹಾಗೆ ಕೈಲಾಸಂ 'ಮಾನವ ಜಗತ್ತಿನಲ್ಲಿ ಅತ್ಯುನ್ನತವಾದುದನ್ನು ಜೀವನದುದ್ದಕ್ಕೂ ಅರಸುತ್ತಿದ್ದರು. ಅವರ ಅಭಿಲಾಷೆ ಆಂತರಿಕ ಸತ್ವವನ್ನು ಶೋಧಿಸುವಲ್ಲಿತ್ತು. ಭೀಷ್ಮ, ದ್ರೋಣ,

ಏಕಲವ್ಯ, ಕರ್ಣ ಇವರುಗಳಲ್ಲಿ ಆ ಸತ್ವವನ್ನು ಕಂಡುಕೊಂಡಿದ್ದರು (ಪು. ೭೫ ೨೦೦೦). ರಾಮಾಯಣವು ಸಾಮಾನ್ಯ ಮನುಷ್ಯನ ಮನೋಭೂಮಿಕೆಯನ್ನು ಮೀರಿದ ಉನ್ನತ ಆದರ್ಶಗಳನ್ನು ಒಳಗೊಂಡಿದೆ. ಅದರ ಸತ್ವವನ್ನು ಗ್ರಹಿಸಲು ಉನ್ನತ ಮಟ್ಟದ, ಶುದ್ಧ ಮನಸ್ಸಿನ ಹೃದಯದ ಅವಶ್ಯಕತೆ ಇದೆಯೆಂದೂ ಅವರು ಅಭಿಪ್ರಾಯ ಪಟ್ಟಿದ್ದರು.

ರಾಮಾಯಣ ಮತ್ತು ಮಹಾಭಾರತಗಳ ಪಾತ್ರಗಳನ್ನು ಚಿತ್ರಿಸಲು ಕೈಲಾಸಂಗೆ ಇಂಗ್ಲೀಷ್ ಭಾಷೆಯೇ ಸರಿಯಾಗಿ ಕಂಡಿತ್ತು. ಇಂಗ್ಲೀಷ್ ಭಾಷೆಯ ಬಗೆಗೆ ಅವರಿಗಿದ್ದ ವ್ಯಾಮೋಹವನ್ನು ಶೇಷಗಿರಿರಾಯರು ಗುರುತಿಸಿದ್ದಾರೆ. ಅವರು ಹೇಳುವ ಹಾಗೆ "ಅವನ ಕಾಲದ ಎಲ್ಲಾ ಬುದ್ಧಿವಂತ ಯುವಕರ ಹಾಗೆ ಕೈಲಾಸಂ ಸಹ ಇಂಗ್ಲೀಷ್ ಭಾಷೆಯ ಸೊಗಡಿಗೆ ಮಾರು ಹೋಗಿದ್ದ ಹಾಗೂ ಆ ಭಾಷೆಯ ಮೇಲೆ ಅಸಾಮಾನ್ಯವಾದ ಹಿಡಿತವಿತ್ತು" (ಪು.೭೫,೨೦೦೦).[೩೩] ಕೈಲಾಸಂ ಭಾವಿಸುವ ಹಾಗೆ "ಆದರ್ಶ ವ್ಯಕ್ತಿಗಳನ್ನು ಚಿತ್ರಿಸಬೇಕಾದರೆ, ನಮ್ಮೊಟ್ಟಿಗೆ ಇರದ ಭಾಷೆಯಲ್ಲೇ ಸಾಧ್ಯ". ಅವರು ತಮಗೆ ಇಂಗ್ಲೀಷ್ ಭಾಷೆಯಲ್ಲಿ ಬರೆದಷ್ಟು ಚೆನ್ನಾಗಿ ಕನ್ನಡ ಭಾಷೆಯಲ್ಲಿ ಬರೆಯಲು ಸಾಧ್ಯವಿಲ್ಲ ಎಂದು ನಂಬಿದ್ದರು. ಕೈಲಾಸಂ ಬ್ರಾಹ್ಮಣ ಮಧ್ಯಮ ವರ್ಗದ ಇಂಗ್ಲೀಷ್ ಭಾಷೆಯ ಬಗೆಗಿನ "ಪೊಳ್ಳು" ವ್ಯಾಮೋಹವನ್ನು ಅಣಕಿಸಿದರೂ, "ಆದರ್ಶ ಮೌಲ್ಯ"ಗಳನ್ನು ಚಿತ್ರಿಸಲು ಇಂಗ್ಲೀಷನ್ನೇ ಬಳಸಿಕೊಂಡರು. ಇಂಗ್ಲೀಷ್ ಶಿಕ್ಷಣವು ನಮ್ಮಲ್ಲಿನ "ಆಂತರಿಕ ಸತ್ವ"ವನ್ನು ಹೊರಹೊರಮ್ಮಿಸಲು ವಿಫಲವಾಗಿದೆ ಎಂದು ಭಾವಿಸಿದ್ದರು ('ಟೊಳ್ಳು-ಗಟ್ಟಿ'ಯಲ್ಲಿ ಗುಂಡೂರಾಯರು ಕೊನೆಯಲ್ಲಿ ಹೇಳುವ ಮಾತುಗಳು), ಬ್ರಾಹ್ಮಣ ಮಧ್ಯಮದ ವರ್ಗದಲ್ಲಿ ಎಲ್ಲರೂ ಸಣ್ಣವರಲ್ಲ. ಇಂಗ್ಲೀಷ್ ಕಲಿತ ಸಾಹೆಬ್ರು ಮತ್ತು ಸರೋಜ ('ನಮ್ ಬ್ರಾಹ್ಮಣ್ಕೆ' ಯಲ್ಲಿ) ಇಬ್ಬರೂ ಆದರ್ಶವಾದಿಗಳು ಮತ್ತು ಬೇರೆಯವರಿಗೆ ಮಾದರಿಯಾಗಿರುವಂತಹವರು.

ಕೈಲಾಸಂರ ಈ ರಾಷ್ಟ್ರೀಯತೆಯು ಬ್ರಿಟೀಷ್ ವಸಾಹತುಶಾಹಿಯ ವಿರುದ್ಧ ಇರದಿದ್ದುದು ಆಶ್ಚರ್ಯ. ಬ್ರಿಟೀಷರ ವಿರುದ್ಧ ಅವರ ಅಭಿಪ್ರಾಯಗಳು ಎಲ್ಲೂ ಕಾಣಸಿಗುವದಿಲ್ಲ. ಬದಲಾಗಿ ಬ್ರಿಟೀಷ್ ಶೈಲಿಯ ಜೀವನವು ಅನುಕರಣೀಯ ಎಂದು ತಿಳಿದಿದ್ದರು. ಜೊತೆಗೆ ಮೈಸೂರು ಮಹಾರಾಜರ ಬಗ್ಗೆ ಅವರಿಗೆ ವಿಶೇಷ ಗೌರವ. ರಾ. ಶಿವರಾಂ. ಈ ವಿಷಯದಲ್ಲಿ ಹೀಗೆ ಬರೆಯುತ್ತಾರೆ. "ಕೈಲಾಸಂರು ಹೇಳುತ್ತಿದ್ದರು. ನೋಡು ಶಿವರಾಂ, ಸಮಾಜದಲ್ಲಿ ಸರಿಯಾಗಿ ವರ್ತಿಸಲು, ಸಮಾಜವನ್ನು ಗೌರವಿಸಲು ನಾವು ಇಂಗ್ಲೀಷರಿಂದ ಕಲಿಯುವುದು ಸಾಕಷ್ಟು ಇದೆ. ಧ್ವಜವನ್ನು ಗೌರವಿಸಲು ಮೊದಲು ಕಲಿಯಬೇಕು. ಆಗಲೇ ನಾವು ಒಂದು ಬಲಿಷ್ಠ ರಾಷ್ಟ್ರವಾಗಲು ಸಾಧ್ಯ" (ಪು.೪೯,೨೦೦೦).[೩೪]

ಆದರೆ ಪಾಶ್ಚಾತ್ಯ ಸಂಸ್ಕೃತಿಯ ಅಂಧಅನುಕರಣೆಯ (ಇಂಗ್ಲೀಷ್ ಶಿಕ್ಷಣ ಪಡೆದ ಗಂಡು ಹಾಗೂ ಹೆಣ್ಣು ಪಾತ್ರಗಳ) ಬಗ್ಗೆ ಕೈಲಾಸಂರಿಗೆ ಸಿಡುಕು. ಗಂಡಸರ ಪರಿವರ್ತನೆಗೆ ಹೃದಯ ವೈಶಾಲ್ಯ, ವಿಸ್ತಾರವಾದ ಮನೋಭಾವನೆ ಮಾನವತೆ ಇತ್ಯಾದಿಗಳು ಅಗತ್ಯವಾದರೆ, ಹೆಂಗಸರ ಪರಿವರ್ತನೆ ಅಥವಾ ಒಳ್ಳೆಯ ನಡತೆಗೆ ಪಾತಿವ್ರತ್ಯದ ಅವಶ್ಯಕತೆಯನ್ನು ಅವರು ನಂಬಿದ್ದರು. ಪಾಶ್ಚಾತ್ಯ ಮಾದರಿಯ ಶಿಕ್ಷಣದಿಂದ ಮೂಡಿಬಂದ ಉದಾರವಾದಿ ಮಾನವತಾವಾದವನ್ನು

ಸಂಪೂರ್ಣವಾಗಿ ಅಲ್ಲಗಳೆಯದಿದ್ದರೂ, ಅದನ್ನು "ಭಾರತೀಯ ಸಂಸ್ಕೃತಿ"ಗೆ ಒಗ್ಗುವಂತೆ ಮಾರ್ಪಡಿಸಿಕೊಳ್ಳುವ ಪ್ರಯತ್ನವನ್ನು ಕೈಲಾಸಂರಲ್ಲಿ ಕಾಣಬಹುದು. 'ಭಾರತೀಯ ಸಂಸ್ಕೃತಿ' ಯನ್ನು "ಮೂಢನಂಬಿಕೆ"ಗಳಿಂದ ದೂರಮಾಡಿ ಅದಕ್ಕೆ ವೈಚಾರಿಕತೆ ಮತ್ತು ವೈಜ್ಞಾನಿಕತೆಯ ಅವಶ್ಯಕತೆಗಳನ್ನು ತಳಕು ಹಾಕುವುದನ್ನು ಗಮನಿಸಬಹುದು. ಪೌರ್ವಾತ್ಯವಾದವು (Orientalism)ಭಾರತೀಯರನ್ನು ನಿರ್ಬಲ ಬಾಲಿಶ ಎಂಬುದನ್ನು ವರ್ಣಿಸುವದಕ್ಕೆ ಪ್ರತಿಯಾಗಿ, ತಮ್ಮ ಸದೃಢ ಶರೀರ, ಕೀಚಕನ ಪಾತ್ರಗಳ ಮುಖಾಂತರ "ಭಾರತೀಯರ" ಗುಣಗಳನ್ನು ಅವರು ಚಿತ್ರಿಸಿದರು. ಇಂತಹ ಪ್ರತಿಕ್ರಿಯೆಗೆ ಆಯ್ದುಕೊಂಡ ಪಾತ್ರಗಳು ಆಗಲೇ ಬ್ರಾಹ್ಮಣ ಹಾಗೂ ಇನ್ನಿತರ ಮೇಲ್ಜಾತಿ ವರ್ಗಗಳಿಂದ ಅಧಿಕೃತವಾಗಿ ಅಂಗೀಕರಿಸಲ್ಪಟ್ಟ ರಾಮಾಯಣ ಮಹಾಭಾರತದ ಹಾಗೂ ಇನ್ನಿತರ ಪುರಾಣಗಳ ಮೂಲದಿಂದ ಹುಟ್ಟಿಕೊಂಡಂತಹವು.

ದೇಶಿಯ ಭಾಷೆ (ಖಾಸಗಿ) ಮತ್ತು ಇಂಗ್ಲೀಷ್ (ಸಾರ್ವಜನಿಕೆ)

ಕೈಲಾಸಂಗೆ ಜಾತೀಯ ದಬ್ಬಾಳಿಕೆಯ ಕಡೆಗೆ ಗಮನಹರಿಸಲು ಸಾಧ್ಯವಾಗಲಿಲ್ಲವೇಕೆ? ಜಾತಿ ದಬ್ಬಾಳಿಕೆ/ಶೋಷಣೆಯ ಬಗ್ಗೆ ಆಗ ನಡೆಯುತ್ತಿದ್ದ ಸಾಮಾಜಿಕ ಹಾಗೂ ರಾಜಕೀಯ ವಾಗ್ವಾದಗಳಲ್ಲಿ ತಲೆ ಹಾಕದೆ, ವರ್ಣಾಧಾರಿತ ಜಾತಿ ಪದ್ಧತಿಯನ್ನು ಅವರು ಸಮರ್ಥಿಸಿಕೊಂಡಿದ್ದೇಕೆ? ಶೂದ್ರರ ಬಗೆಗೆ ಉದಾರವಾದಿ ಮಾನವತವಾದಿ ನಿಲುವನ್ನು ಹೊಂದಿದ್ದೇಕೆ? ಈ ಪ್ರಶ್ನೆಗಳಿಗೆ ಕೈಲಾಸಂ ಬಳಸಿಕೊಂಡ ಭಾಷೆಯ ರಾಜಕೀಯ ಪ್ರಕ್ರಿಯೆಯಲ್ಲಿ ಉತ್ತರಗಳನ್ನು ಹುಡುಕಲು ಪ್ರಯತ್ನಿಸಬಹುದು. ಕೈಲಾಸಂರಲ್ಲಿ ಸತತವಾಗಿ ತಮ್ಮನ್ನು ತಾವು "ಜಾತ್ಯಾತೀತ-ಸ್ಥ"ವನ್ನಾಗಿ ಗುರುತಿಸಿಕೊಳ್ಳುವ ಉತ್ಕಟವಾದ ಕಾತುರತೆ ಮತ್ತು ಅಭಿಲಾಷೆಯಿತ್ತು.[೩೫] ಬ್ರಾಹ್ಮಣರ ಸಂಕುಚಿತತನವನ್ನು "ಟೀಕಿಸುವುದರ" ಮೂಲಕ ಮತ್ತು ಶೂದ್ರರ (ಶೂದ್ರರು ಯಾರು ಎನ್ನುವದನ್ನು ಕೈಲಾಸಂ ಎಲ್ಲಿಯೂ ಹೇಳಿಲ್ಲ), 'ಸರಳತನ', ವಿಧೇಯತೆ, ವಿಶಾಲ ಹೃದಯವನ್ನು ಹೊಗಳುವ ಮೂಲಕ ತಮ್ಮ ಈ ಅವರು ಅಭಿಲಾಷೆಯನ್ನು ಪೂರೈಸಿಕೊಂಡರು. ಕೈಲಾಸಂರ 'ಜಾತ್ಯಾತೀತ ಸ್ಥ' ಬ್ರಾಹ್ಮಣ ಸಮಾಜ ಕಥೆಯನ್ನು ಚಿತ್ರಿಸುವಾಗ ವಿವಿಧ ಚಾರಿತ್ರಿಕ ಸಾಮಾಜಿಕ ಸಾಮಗ್ರಿಗಳನ್ನು ಒಟ್ಟುಗೂಡಿಸಿ, ಬೇಡವಾದದ್ದನ್ನು ತ್ಯಜಿಸಿ, ಪುನಃ ರೂಪಿಸುವ ಕ್ರಿಯೆಯಲ್ಲಿ ತೊಡಗಿತು. ಇದಕ್ಕೆ ಉದಾಹರಣೆಯಾಗಿ ಯಾವಯಾವ ರೂಪಗಳಲ್ಲಿ 'ಜಾತಿ' ಎಂಬುದು ಅಭಿವ್ಯಕ್ತಿಗೊಳ್ಳುತ್ತದೆ ಅಥವಾ ಮುಚ್ಚಲ್ಪಡುತ್ತದೆ ಎಂಬುದನ್ನು ನೋಡಿದ್ದೇವೆ. ಬ್ರಾಹ್ಮಣ ಮಧ್ಯಮವರ್ಗದ ಸಾಂಪ್ರದಾಯಿಕ ಆಚರಣೆಗಳ ಬಗ್ಗೆ ಟೀಕೆ ಹಾಗೂ ಅವುಗಳನ್ನು ಸುಧಾರಿಸುವ ಮನೋಭಾವ ಕನ್ನಡ ಭಾಷೆಯಲ್ಲಿ ವ್ಯಕ್ತವಾದರೆ, "ಅಲೌಕಿಕ" "ಆಧ್ಯಾತ್ಮಿಕ" "ಪಾರಮಾರ್ಥಿಕ"ವಾದ ಪುರಾಣದ ಮೌಲ್ಯಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಅವರು ಚಿತ್ರಿಸಿದ್ದಾರೆ. ಅವರ ನಾಟಕಗಳು ಬ್ರಾಹ್ಮಣ ಮಧ್ಯಮ ವರ್ಗವು ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಿಂದು ಚಿತ್ರಿಸುತ್ತವೆಯೇ ಹೊರತು, ವಸಾಹತುಶಾಹಿ ಮತ್ತು ಸ್ಥಳೀಯವಾದ ಇತರ ಜಾತಿ/ಸಮುದಾಯಗಳು ತಂದೊಡ್ಡಿದ ಸವಾಲುಗಳಿಗೆ ತನ್ನನ್ನು ತಾನು ಮಾರ್ಪಡಿಸಿ/ಸಂವಾದಿಸಿ/ಸ್ಪಂದಿಸುವ ಕ್ರಿಯೆಯಲ್ಲಿ ನಿರತವಾಗಿರುವಂತೆ ಚಿತ್ರಿಸುವುದಿಲ್ಲ. ಕೈಲಾಸಂರ ಇಂಗ್ಲೀಷ್

ವಿದ್ಯಾಭ್ಯಾಸ, ಆ ಭಾಷೆಯ ಮೇಲಿನ ಹಿಡಿತ, ಪಾಶ್ಚಾತ್ಯ ಜೀವನ ಶೈಲಿ ಇತ್ಯಾದಿಗಳು, ವಸಾಹತುಶಾಹಿ ಆಧುನಿಕತೆಯನ್ನು ಕಾಲಕ್ಕೆ ತಕ್ಕಂತೆ ಮಾರ್ಪಾಡಿಸಿ ವಿಂಗಡಿಸುವ ಕ್ರಿಯೆಯಲ್ಲಿ ತೊಡಗುತ್ತವೆ; ಬ್ರಾಹ್ಮಣ ಜಾತಿ ಹಾಗೂ ಅದರ ಸಾಮಾಜಿಕ ಆಚರಣೆಗಳನ್ನು ಸುಧಾರಿಸುವ ಅನುವಾದ ಕ್ರಿಯೆಯಲ್ಲಿ ನಿರತವಾಗುತ್ತವೆ. ಈ ಅನುವಾದ ಕ್ರಿಯೆಯಲ್ಲಿ ವಸಾಹತುಶಾಹಿ ಆಧುನಿಕತೆಯ ತಾತ್ವಿಕ ಚೌಕಟ್ಟಿನಲ್ಲಿ ಬ್ರಾಹ್ಮಣರಂತೆ ಬ್ರಾಹ್ಮಣೇತರರೂ ಸಹ ತಮ್ಮ ಅಭಿಲಾಷೆ, ಬೇಡಿಕೆ, ಜೀವನ, ಒಟ್ಟು ಸಮಾಜವನ್ನು ಮಾರ್ಪಡಿಸಿಕೊಳ್ಳುವ ಬೆಳವಣಿಗೆಗಳನ್ನು ಮುಚ್ಚಿ ಹೋಗುತ್ತವೆ.[೬೯] ಈ ರೀತಿಯಲ್ಲಿ ಜಾತಿ/ವರ್ಗ/ಸ್ತ್ರೀ ಶೋಷಣೆಯು ಮರೆಯಾಗಿ, ಜಾತ್ಯಾತೀತ-ಸ್ವ'ವು ಒಂದು ರಾಷ್ಟ್ರೀಯ ಧಾರೆಯಾಗಿ ಬೆಳೆಯುತ್ತದೆ.

ತಮ್ಮ ನಾಟಕಗಳಲ್ಲಿ ಉಪಯೋಗಿಸಿರುವ ಕನ್ನಡ, ಇಂಗ್ಲೀಷ್, ತೆಲುಗು, ಉರ್ದು ಭಾಷೆಗಳು ವಾಸ್ತವಿಕತೆಯನ್ನು ಬಿಂಬಿಸುತ್ತವೆ ಎಂದು ಕೈಲಾಸಂ ನಂಬಿದ್ದರು. ಆದರೆ ಯಾವಯಾವ ಪಾತ್ರಗಳು ಯಾವ ಸಂದರ್ಭಗಳಲ್ಲಿ ಈ ಮೇಲಿನ ಭಾಷೆಗಳಲ್ಲಿ ಸಂಭಾಷಿಸುತ್ತವೆ ಎಂದು ನೋಡಿದಾಗ, ಕೈಲಾಸಂರ ವಾಸ್ತವಿಕತೆಯು ಭಾಷೆಯ ಸಾಮಾಜಿಕ ಅಸಮಾನತೆಗಳನ್ನು ಮುಚ್ಚಿಹಾಕುತ್ತದೆ. 'ನಮ್ ಬ್ರಾಹ್ಮಣ್ಕೆ'ಯಲ್ಲಿ ಮುಸ್ಲಿಂಮನು ಬೆಂಗಳೂರು ಶೈಲಿಯ ಉರ್ದುವಿನಲ್ಲಿ ಮಾತನಾಡಿದರೆ, ವೈಢೂರ್ಯಂ ಎಂಬ ಕ್ರಿಶ್ಚಿಯನ್ ಮಹಿಳೆ ತಮಿಳು ಮಿಶ್ರಿತ ಕನ್ನಡದಲ್ಲಿ ಮಾತನಾಡುತ್ತಾಳೆ. ಇಲ್ಲಿ ಹೇಳಬೇಕಾದ್ದು ಇಷ್ಟೆ. ಭಾಷೆ ಮತ್ತು ಸಮಾಜದಲ್ಲಿ ಕಾಣಿಸುವ ಅಸಮಾನತೆ, ಶೋಷಣೆಗಳ ಸಂಬಂಧಗಳು ಆಧುನಿಕತೆಯ ಕಾರಣವಾಗಿ ವಿವಿಧ ರೂಪಗಳನ್ನು ಧರಿಸುತ್ತಿದ್ದರೂ, ಭಾಷೆ ಮತ್ತು ಅದನ್ನಾಡುವ ಜನರ ನಡುವಿನ ಸಂಬಂಧಗಳು ಬದಲಾಗದ ಸ್ಥಿತಿಯಲ್ಲೇ ಉಳಿಯುತ್ತವೆ. ಆದ್ದರಿಂದ ಕೈಲಾಸಂರ ಭಾಷಾ ಪ್ರಯೋಗವನ್ನು ವಾಸ್ತವಿಕತೆಯ ದೃಷ್ಟಿಯಿಂದ ನೋಡಿದರೆ, ಅದರೊಳಗಿನ ರಾಜಕೀಯ ಸೂಕ್ಷ್ಮಗಳನ್ನು ಮರೆಮಾಚಿದಂತಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಕೈಲಾಸಂರಂತಹ ಸಾಹಿತಿಗಳಿಗೆ 'unhappy concious-nessನ್ನು ಉಂಟು ಮಾಡಿದ್ದು ಕೇವಲ ವಸಾಹತುಶಾಹಿ ಆಳ್ವಿಕೆಯಾಗಿರದೆ, ಸುತ್ತಮುತ್ತಲಿನ ಸಾಮಾಜಿಕ ಬದಲಾವಣೆಗಳು, ರಾಜಕೀಯ ಹಾಗೂ ಸಾಂಸ್ಕೃತಿಕ ಪಲ್ಲಟಗಳು ಸಹ ಕಾರಣೀಭೂತವಾಗಿವೆ. ಇದು ಕೈಲಾಸಂ ನಾಟಕಗಳ ಮೂಲಕ ತಿಳಿಯುತ್ತದೆ. ಹೀಗಾಗಿ ಕೈಲಾಸಂ ನಾಟಕಗಳು ಇತಿಹಾಸದ ಒಂದು ಭಾಗವನ್ನು ಮಾತ್ರ ತೆರೆದಿಡುತ್ತದೆ. ಆದರೆ ಇತಿಹಾಸಕ್ಕೆ ತಮ್ಮ ಸಮಕಾಲೀನ ರಾಜಕೀಯ-ಸಾಮಾಜಿಕ ಸಂಘರ್ಷಗಳಿಂದ ದೂರವಿರಲು ಉಪಯೋಗಿಸಿದ ಸಾಧನ-ಇಂಗ್ಲೀಷ್ ಭಾಷೆ; ಅವರ ನಾಟಕಗಳಲ್ಲಿ ನೋಡಿದ ಹಾಗೆ 'ಜಾತಿಪದ್ಧತಿ'ಯ ಚರ್ಚೆಯು ಖಾಸಗಿ ವಲಯಕ್ಕೆ ತಳ್ಳಲ್ಪಟ್ಟಿದೆ. ಟೀಕೆ-ವಿಮರ್ಶೆಯನ್ನು ಅಭಿವ್ಯಕ್ತಿಸಲು ದೇಶಿಭಾಷೆ ಕನ್ನಡವನ್ನು ಬಳಸಿಕೊಳ್ಳಲಾಗಿದೆ.

ಅಡಿ ಟಿಪ್ಪಣಿಗಳು ಮತ್ತು ಉಲ್ಲೇಖಿತ ಕೃತಿಗಳು

೧. ಈ ಪರಿಕಲ್ಪನೆಯನ್ನು ವಿವೇಕ್ ಧಾರೇಶ್ವರರ 'Cast and Secular self' ಎಂಬ

ಇಂಗ್ಲೀಷ್ ಲೇಖನದಿಂದ ತೆಗೆದುಕೊಳ್ಳಲಾಗಿದೆ. ಈ ಲೇಖನದಲ್ಲಿ ಧಾರೇಶ್ವರರು ಬೌದ್ಧಿಕ ರಾಷ್ಟ್ರೀಯ ವಿಚಾರಧಾರೆಯ ಬಹುತೇಕ ಭಾಗವು ಜಾತ್ಯಾತೀತ (ಮೇಲ್ಜಾತಿಯದು) 'ಸ್ವ' ದ ಆತ್ಮಚರಿತ್ರೆಗಳೇ ಆಗಿವೆ ಎಂದು ವಾದಿಸುತ್ತಾರೆ. (ಪು.೧೧೫). ಬೌದ್ಧಿಕ ವಿಚಾರ ಧಾರೆಯ ಮೂಲ, ಪರಂಪರೆಯ ಜೊತೆಗಿನ ಸಂಘರ್ಷಗಳು ಆಧುನಿಕಗೊಳ್ಳುವ ಪ್ರಕ್ರಿಯೆಗಳೇ ಆಗಿವೆಯೆಂದು (ಪು.೧೧೫) ಭಾವಿಸುತ್ತಾರೆ. ವಿವರಗಳಿಗೆ ನೋಡಿ: ಧಾರೇಶ್ವರ್, ವಿವೇಕ್, ೧೯೯೩ 'Cast and secular self', **Journal of Arts and Ideas,** ಪತ್ರಿಕೆ, ಸಂಖ್ಯೆ: ೨೫ ಮತ್ತು ೨೬.

೦೨. ಸುಧೀರ್ ಚಂದ್ರು ಇಂಗ್ಲೀಷ್ ಸಾಹಿತ್ಯದ ಪ್ರೊಫೆಸರ್ ಆಗಿರುವರು. ಅವರ Oppresive Present ಪುಸ್ತಕವು ವಸಾಹತೋತ್ತರ ವಿಚಾರಧಾರೆಗಳ ಅಧ್ಯಯನದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ.

೦೩. ಸುಧೀರ್ ಚಂದ್ರರಂತಹವರ ರಾಷ್ಟ್ರೀಯತೆ ಬಗೆಗಿನ ವಿಚಾರ ಮಂಡನೆಗಳನ್ನು ಇನ್ನೂ ಅನೇಕರು ಹೊಂದಿದ್ದಾರೆ. ಅದರಲ್ಲಿ ಪ್ರಮುಖವಾಗಿ ಡಿ.ಆರ್. ನಾಗರಾಜರ 'ಸಾಹಿತ್ಯ ಕಥನ' (೧೯೯೬), ಪಾರ್ಥಾಚಟರ್ಜಿಯವರ The Nation and Its Fragments (೧೯೯೪) ಹಾಗೂ Nationalist Thought and the Colonial World : A Derivative Discourse (೧೯೮೬) ಮತ್ತು ಆಶೀಶ್ ನಂದಿಯವರ ಕೃತಿಗಳು ರಾಷ್ಟ್ರೀಯತೆಯನ್ನು ವಸಾಹತುಶಾಹಿಯ ಮುಖಾಮುಖಿಯೊಂದಿಗೆ ಬೆಳೆದ ವಿಚಾರಧಾರೆಯೆಂದು ಭಾವಿಸಿದ್ದಾರೆ.

೦೪. ಕೈಲಾಸಂರ Jokು.... Sonಗ್ಸು.... ನಗೆಹನಿಗಳು, ೨೦೦೧, ಸಂ.ಬಿ.ಎಸ್. ಕೇಶವರಾವ್, ಅಂಕಿತ ಪುಸ್ತಕ, ಬೆಂಗಳೂರು.

೦೫. ಕನ್ನಡ ಸಾಹಿತ್ಯದ ಬಗ್ಗೆ ಸಂಕ್ಷಿಪ್ತವಾಗಿ ಮಾತ್ರ ವಿವರಿಸಲಾಗಿದೆ. ಕನ್ನಡ ಸಾಹಿತ್ಯವು ವಿಸ್ತಾರವಾದ ಸಾಗರದಂತೆ ಮತ್ತು ಅದನ್ನು ಅನೇಕ ಮಜಲುಗಳಿಂದ ವಿವರಿಸಬಹುದೆಂಬ ಅರಿವು ಇದೆ.

೦೬. ಚಂದ್ರಶೇಖರ್, ಎಸ್. ಚರಿತ್ರೆ ಮತ್ತು ಕನ್ನಡ ಸಾಹಿತ್ಯ. ಅಕ್ಷರ ಪ್ರಕಾಶನ ಹೆಗ್ಗೋಡು.

೦೭. ತಾರಕೇಶ್ವರ್, ವಿ.ಬಿ. ೧೦೦೮, 'ಇಂಗ್ಲೀಷ್, ದಲಿತರು.ಹಾಗೂ ಆಧುನಿಕತೆ : ಕೆಲವು ಟಿಪ್ಪಣಿಗಳು', ಕನ್ನಡ ಅಧ್ಯಯನ 'ಚಳಿಸಂಚಿಕೆ', ಸಂ. ರಹಮತ್ ತರೀಕೆರೆ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

೦೮. ಬೋರಟ್ಟಿ ವಿಜಯಕುಮಾರ ೧೯೯೭, "Brahmins and Modernity : Four Avataras of a Text", ಹೈದರಾಬಾದ್‌ನಲ್ಲಿ ನಡೆದ IACLALS ಕಾನ್‌ಫರೆನ್ಸ್‌ನಲ್ಲಿ ಮಂಡಿಸಿದ ಅಪ್ರಕಟಿತ ಲೇಖನ.

೦೯. ಪಡಿಕ್ಕಲ್. ಶಿವರಾಮ್ 'Colonial Mdoernity And the Social Reformst Novel : Reading Indira Bai'.

೧೦. ಧಾರೇಶ್ವರ್, ವಿವೇಕ್ ೧೯೯೩ 'Caste and Secular Felt, Journal of Arts and Ideas, ಸಂಖ್ಯೆ ೨೫ ಮತ್ತು ೨೬.

೧೧. ಬಿ.ಎನ್. ನಾಯ್ಡುರವರು ಭಾವಿಸಿದ ಹಾಗೆ, ಕೈಲಾಸಂರ ವ್ಯಾಸಂಗಕ್ಕೆ ಮೈಸೂರು ಮಹಾರಾಜರ ಅಭಯ ಹಸ್ತವಿತ್ತು. ಲಂಡನ್‌ನಲ್ಲಿ ವ್ಯಾಸಂಗ ಮಾಡುವದಕ್ಕಾಗಿ ಮಹಾರಾಜರು ದಾಮೋದರ್‌ದಾಸ್ ಸ್ಕಾಲರ್‌ಶಿಪ್ಪನ್ನು ಕೈಲಾಸಂರಿಗೆ ನೀಡಿದರು. ಬೆಂಗಳೂರಲ್ಲಿ ಜಡ್ಜ್ ಆಗಿದ್ದ

ಕೈಲಾಸಂರ ಅಪ್ಪ ಟಿ. ಪರಮಶಿವಯ್ಯರ್‌ರವರು ಕೈಲಾಸಂಗೆ ಲಂಡನ್‌ನಲ್ಲಿ ವ್ಯಾಸಂಗ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ಸ್ಕಾಲರ್‌ಶಿಪ್‌ನ ಮೊತ್ತವನ್ನು ಹೆಚ್ಚಿಸಲು ಮಹಾರಾಜರ ಮೊರೆ ಹೋಗಿದ್ದರು. ಲಂಡನ್‌ನಲ್ಲಿ ಕೈಲಾಸಂರ ವ್ಯಾಸಂಗ ಪ್ರಗತಿಯನ್ನು ಪರಿಶೀಲಿಸಿದ ಮೇಲೆ, ಸ್ಕಾಲರ್‌ಶಿಪ್ ಮೊತ್ತವನ್ನು ಮಹಾರಾಜರು ಹೆಚ್ಚಿಸಿದರು. ಇದಕ್ಕೆ ಸಂಬಂಧಿಸಿದಂತೆ ಮತ್ತಷ್ಟು ವಿವರಗಳಿಗಾಗಿ ನೋಡಿರಿ Prolegomena (೧೯೯೬) Intellectual History of Colonial India ದಿಂದ, ಜೈಪುರ್: ರಾವತ್.

೧೨. ಸೇತೂರಾಮ್ .ಇ.ಆರ್. ೨೦೦೦ 'ಕೂತ್ರೆ ಕಂಪ್ನಿ, ನಿಂತ್ರೆ ನಾಟ್ಕ', ನಮ್ಮ ಕೈಲಾಸಂ: ನೆನಪಿನ ಸಂಪುಟ, ಸಂ.ಚಿ.ಶ್ರೀನಿವಾಸರಾಜು, ಬೆಂಗಳೂರು, ಪ್ರಿಸಮ್ ಬುಕ್ ಹೌಸ್.

೧೩. ಶಿವರಾಂ, ಆರ್, ೨೦೦೦, ಕೈಲಾಸಂ ಮತ್ತು ನಾನು, ಭಾಷಾಂತರ: ರಘುನಾಥರಾವ್. ಜಿ.ಎಸ್, ಬೆಂಗಳೂರು , ಪ್ರಿಸಮ್ ಬುಕ್ ಹೌಸ್.

೧೪. ಕೈಲಾಸಂ, ಟಿ.ಪಿ. ೧೯೮೭ 'ಅಮ್ಮಾವ್ರ ಗಂಡ', ಕೈಲಾಸಂ ಕೃತಿಗಳು, ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ.

೧೫. ೧೯೦೭ ಹಾಗೂ ೧೯೧೩ರ 'ಶ್ರೀ ಕೃಷ್ಣಸೂಚಿ' ಎಂಬ ಪತ್ರಿಕೆಯಲ್ಲಿ ಪ್ರಕಟವಾದ 'ಸ್ತ್ರೀ ಶಿಕ್ಷಣ' ಎಂಬ ಲೇಖನ ಸಹ ಸ್ತ್ರೀಶಿಕ್ಷಣವು ಯಾವಯಾವ ಉದ್ದೇಶಗಳಿಗಾಗಿ ಇರಬೇಕೆಂದು ಸೂಚಿಸುತ್ತದೆ. ಅದರ ಪ್ರಕಾರ, ಸ್ತ್ರೀಯು ಅ. ಮನೆಗೆಲಸವನ್ನು ಮಾಡುವ ಸಲುವಾಗಿ, ಆ. ಗಂಡನಿಗೆ ವಿಧೇಯನಾಗಿರುವ ಸಲುವಾಗಿ, ಇ. ಗಂಡ, ಗಂಡನ ಮಾತೃ-ಪಿತೃಗಳಿಗೆ ಹಾಗೂ ತನ್ನ ಮಕ್ಕಳಿಗೆ ವಾತ್ಸಲ್ಯ ಮೂರ್ತಿಯಾಗಿ ಇರುವದಕ್ಕಾಗಿ, ಈ. ಮಿತವ್ಯಯಿಯಾಗಿ ರುವದಕ್ಕಾಗಿ, ಉ. ಸದ್ಗುಣಗಳನ್ನು ಬೆಳೆಸಿಕೊಳ್ಳುವದಕ್ಕಾಗಿ, ಶಿಕ್ಷಣವನ್ನು ಪಡೆಯ ಬೇಕೆಂದು ತಿಳಿಸುತ್ತದೆ. ಹೆಚ್ಚಿನ ವಿವರಗಳಿಗೆ ನೋಡಿರಿ ಸಂ.೧೧, ಸಂಚಿಕೆ ೧೦ ಹಾಗೂ ಸಂ. ೬, ಸಂ. ೧, ಸಂ. ಕೆರೋಡಿ ಸುಬ್ಬರಾವ್ ಹಾಗೂ ರಾಜಗೋಪಾಲ ಕೃಷ್ಣರಾವ್.

೧೬. ಕೈಲಾಸಂ, ಟಿ.ಪಿ. ೧೯೮೭ 'ನಮ್ ಬ್ರಾಹ್ಮಣ್ಕೆ' ಕೈಲಾಸಂರ ಕೃತಿಗಳು ದಿಂದ, ಮೈಸೂರು ಕನ್ನಡ ಅಧ್ಯಯನ ಸಂಸ್ಥೆ.

೧೭. ಅದೇ.

೧೮. ಮೈಸೂರು ಪ್ರಾಂತ್ಯದ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿಗಳ ಬಗ್ಗೆ ಹೆಚ್ಚಿನ ವಿವರಗಳಿಗೆ ನೋಡಿರಿ. ಚಂದ್ರಶೇಖರ, ಎಸ್. ೧೯೮೩ 'ಮೈಸೂರು ಸಂಸ್ಥಾನ : ಪ್ರಾಂತೀಯ ರಾಜಕೀಯ ಉದಯ' (೧೮೮೦-೧೯೪೦) ಪುಸ್ತಕದಿಂದ ಬೆಂಗಳೂರು : ಅಂಕಣ ಪ್ರಕಾಶನ ತಿಮ್ಮಯ್ಯ, ಜಿ ೧೯೯೩ 'Emergence of the Backward Class Movement in Karnataka', Power Politics and Social Justice ದಿಂದ ದೆಹಲಿ : ಸೇಜ್.

೧೯. ನಿರಂಜನ, ತೇಜಸ್ವಿನಿ, ೧೯೯೪ 'Whose Culture Is, it ? Contesting The Modern way of Living So As to Stay" ಸಂ. ಸುಧಾಕರ ಮರಾಠೆ, ಶೈಲಜಾ. ಪಿ., ಮೋಹನ್ ರಮಣನ್ ಮತ್ತು ಅಲ್ಲಾಡಿ ಉಮಾ, ಮದ್ರಾಸ್: ಟಿ.ಆರ್. ಪಬ್ಲಿಕೇಶನ್ಸ್.

೨೦. ಮೈಸೂರು ಅಸ್ಲೆಂಬ್ಲಿಯಲ್ಲಿ ಮೀಸಲಾತಿಯ ಪರ-ವಿರೋಧಗಳ ಚರ್ಚೆಗಳ ಹೆಚ್ಚಿನ ವಿವರಗಳಿಗಾಗಿ ನೋಡಿ 'The History of Karnataka Legisituce (Mysore Assembly), ಸಂ.I, (೧೯೦೮-೨೩).

೨೧. ಕೈಲಾಸಂರ 'ಬಡ-ಶ್ರೀಮಂತರ' ಪರಿಕಲ್ಪನೆಗಳು ಸಾಮಾಜಿಕ ಶ್ರೇಣೀಕರಣದ ಬಗ್ಗೆ ಯಾವುದೇ ಒಳನೋಟಗಳನ್ನು ನೀಡುವುದಿಲ್ಲ. ಉದಾಹರಣೆಗೆ, ೧೯೧೦ರ ಸುಮಾರಿನಲ್ಲಿ ಶೃಂಗೇರಿ ಶಾಲೆಯಲ್ಲಿ ಪಂಚಮರನ್ನು ಸೇರಿಸುತ್ತಿರಲಿಲ್ಲ. ಇದರ ವಿರುದ್ಧ ಮೈಸೂರು ಅಸೆಂಬ್ಲಿಯಲ್ಲಿ ವಾದ-ವಿವಾದಗಳು ಆದವು. ಮೈಸೂರು ಸರ್ಕಾರವು ಶಾಲೆಗೆ ಪಂಚಮರನ್ನು ಸೇರಿಸಿಕೊಳ್ಳಬೇಕೆಂಬ ಸುತ್ತೋಲೆಯನ್ನು ಹೊರಡಿಸಿದಾಗ, ಬ್ರಾಹ್ಮಣ ಪ್ರತಿನಿಧಿಗಳು ಸುತ್ತೋಲೆಯ ವಿರುದ್ಧ ತೀಕ್ಷ್ಣವಾಗಿ ಪ್ರತಿಭಟಿಸಿದರು. ಈ ಶಾಲೆಯಲ್ಲಿ 'ಬಡ' ಬ್ರಾಹ್ಮಣರಿಗೂ ಸೇರುವ ಅವಕಾಶಗಳಿದ್ದವು. ಆದರೆ 'ಬಡ' ಪಂಚಮರಿಗೆ ನಿಷೇಧವಿತ್ತು. ಕೈಲಾಸಂರು ಆರ್ಥಿಕ ಪರಿಸ್ಥಿತಿಯನ್ನು ಸಾಮಾಜಿಕ ಅಸಮಾನತೆಯನ್ನು 'ಜಾತಿ ಸಮಸ್ಯೆ'ಯನ್ನಾಗಿ ನೋಡದೆ, 'ವರ್ಗ' ಪರಿಕಲ್ಪನೆಯ ಮೂಲಕ ವಿಶ್ಲೇಷಿಸುವ ಪ್ರಯತ್ನ ಮಾಡಿದರು.

೨೨. ಶಿವರಾಮ, ರಾ. ೨೦೦೦ ಕೈಲಾಸಂ ಮತ್ತು ನಾನು, ಭಾಷಾಂತರ : ರಘುನಾಥ್‌ರಾವ್, ಪ್ರಿಸಮ್ ಬುಕ್ ಹೌಸ್, ಜಿ.ಎನ್., ಬೆಂಗಳೂರು.

೨೩. ಆಮೂರ, ಜಿ.ಎಸ್. ೨೦೦೦ 'ಕೈಲಾಸಂರ ಇಂಗ್ಲೀಷ್ ನಾಟಕಗಳು' ನಮ್ಮ ಕೈಲಾಸಂ ದಿಂದ ಸಂ. ಚಿ. ಶ್ರೀನಿವಾಸರಾಜು, ಬೆಂಗಳೂರು : ಪ್ರಿಸಮ್ ಬುಕ್ ಹೌಸ್.

೨೪. ಅದೇ.

೨೫. ಶಿವರಾಂ, ರಾ, ೨೦೦೦, ಕೈಲಾಸಂ ಮತ್ತು ನಾನು, ಭಾಷಾಂತರ : ರಘುನಾಥರಾವ್ ಜಿ.ಎನ್. ಬೆಂಗಳೂರು, ಪ್ರಿಸಮ್ ಬುಕ್ ಹೌಸ್.

೨೬. ಧಾರೇಶ್ವರ್, ವಿವೇಕ್ 'Caste and secular self', Journal of Arts and Ideas, ೧೯೯೩ ಪು.೨೫ ಮತ್ತು ೨೬.

●

'ವಿಕ್ರಮಾರ್ಜುನ ವಿಜಯ' - ಒಂದು ಸ್ತ್ರೀವಾದಿ ಓದು

• ಎಂ ಉಷಾ

ಭಾಗ-೧

'ವಿಕ್ರಮಾರ್ಜುನ ವಿಜಯ ಕಾವ್ಯದ ಸ್ತ್ರೀವಾದಿ ಓದಿಗೆ ಇಳಿಯುವ ಮೊದಲು, ಈ ಓದನ್ನು ಕುರಿತು ಸೂಕ್ತ ಟಿಪ್ಪಣಿಯೊಂದನ್ನು ಮಂಡಿಸುವುದು ಅಗತ್ಯ. ಸ್ತ್ರೀವಾದಿ ಓದು ಎನ್ನುವುದೇ ತನ್ನೊಳಗಿಂದ ಅದಕ್ಕಿಂತ ಭಿನ್ನವಾದ ಪುರುಷಾನುಭವಗಳಿಂದ ರೂಪಿತವಾದ ಓದೊಂದು ಸಾಹಿತ್ಯದಲ್ಲಿ ಇದೆ ಎಂಬುದನ್ನು ವ್ಯಕ್ತಪಡಿಸುವುದು. ಆ ಒಂದು ಓದು ಕೂಡ, ತನ್ನೊಳಗೆ ಹಲವಾರು ಓದುಗಳನ್ನು ವಿವಿಧ ವೈಚಾರಿಕ ಆಕೃತಿಗಳ, ಆಲೋಚನಾ ಕ್ರಮಗಳ, ಹಿತಾಸಕ್ತಿಗಳ ಹಿನ್ನೆಲೆಯಲ್ಲಿ ಹೊಂದಿದೆ. ಈ ಗ್ರಹಿಕೆಯಿಂದ ಸ್ತ್ರೀವಾದಿ ಓದಿಗೆ ಎರಡು ಬಗೆಯ ಎಚ್ಚರ ದೊರೆಯುತ್ತದೆ. ಒಂದು - ಈಗಾಗಲೇ ನಡೆದಿರುವ ಒಂದು ಅಥವಾ ಹಲವು ಓದುಗಳು ಕೃತಿಯೊಳಗೆ ಇರುತ್ತವೆಯೇ ಇಲ್ಲವೇ ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ನಡೆಸಬಹುದಾದ ಓದು. ಎರಡು- ಪ್ರಧಾನ ಓದಿನ ಸಂದರ್ಭದಲ್ಲಿ ಒಂದಾಗಿ ಕಾಣುವ ಸ್ತ್ರೀವಾದಿ ಓದೆಂಬುದೂ ವಾಸ್ತವದಲ್ಲಿ ತನ್ನೊಳಗೆ ಹಲವು ಓದುಗಳನ್ನು ಒಳಗೊಂಡಿರುತ್ತದೆ ಎಂಬ ಎಚ್ಚರವನ್ನು ಇಟ್ಟುಕೊಂಡು ಮಾಡಬಹುದಾದ ಓದು.

ಭಾರತೀಯ ಕಾವ್ಯಮೀಮಾಂಸೆಯು ನಾನಾ ಅರ್ಥಗಳನ್ನು ಅಂದರೆ ಹಲವು ಓದುಗಳನ್ನು ಸಾಧ್ಯವಾಗಿಸಿಕೊಳ್ಳುವ ಕೃತಿಯೇ ಶ್ರೇಷ್ಠವಾದದ್ದು ಎನ್ನುತ್ತದೆ. ಆ ನಾನಾ ಅರ್ಥಗಳು ಕೃತಿ ಮತ್ತು ಸಹೃದಯರಿಬ್ಬರ ಕಾರಣದಿಂದಲೂ ಉದ್ದೀಪನಗೊಳ್ಳುವುದೆಂದು ಅದು ನಂಬುತ್ತದೆ. ಆಧುನಿಕ ವಿಮರ್ಶೆಯಾದರೂ ಇದುವರೆಗೂ ಹೆಚ್ಚು ಕಡಿಮೆ ಈ ಮಾತನ್ನು ಒಪ್ಪಿದಂತೆಯೇ ತನ್ನ ಓದನ್ನು ಮಂಡಿಸುತ್ತಿರುವ ಹೊತ್ತಿನಲ್ಲಿ, ಪ್ರಧಾನ ನಿಲುವಿನತ್ತ ವಾಲುತ್ತಿದೆ. ತಾನು ಇದುವರೆಗೆ ನಡೆಸಿದ ಅರ್ಥೈಸುವಿಕೆಯ ವಿರುದ್ಧ ಮಾತನಾಡುತ್ತಿದೆ. ಇದುವರೆಗಿನ ಎಲ್ಲ ಅರ್ಥೈಸುವಿಕೆಯ ಅರ್ಥಗಳೂ ಕೃತಿಯ ಒಳಗಿನದೆ ಅಥವಾ ಬೇರೆ ಬೇರೆ ಸಾಂಸ್ಕೃತಿಕ ರಾಜಕಾರಣಕ್ಕಾಗಿ ರೂಪುಗೊಳಿಸಿ, ಕೃತಿಯ ಮೇಲೆ ಹೇರಿದ ಅರ್ಥಗಳೇ ಎಂಬ ಪ್ರಶ್ನೆಯನ್ನು ಕೈಗೆತ್ತಿಕೊಂಡು 'ಅರ್ಥೈಸುವಿಕೆಯ ವಿರುದ್ಧ' ಎಂಬ ವಾದವನ್ನು ಮುಂಚೂಣಿಗೆ ತರುತ್ತಿದೆ. ಹಾಗಾಗಿ ಇಂದು ಸ್ತ್ರೀವಾದಿ ವಿಮರ್ಶೆಯ ಮುಂದಿರುವ ಪ್ರಧಾನ ಪ್ರಶ್ನೆ ಈ 'ಅರ್ಥೈಸುವಿಕೆಯ

ವಿರುದ್ಧ'ದ ಅರ್ಥವನ್ನು ಅರ್ಥೈಸಿಕೊಳ್ಳುವುದು ಹೇಗೆ ಎಂಬುದು. ಈ ಪ್ರಶ್ನೆಗೆ ಉತ್ತರಿಸಿಕೊಳ್ಳುವ ಮೂಲಕ ಮಾತ್ರ ಈ ಹೊತ್ತಿನ ಸ್ತ್ರೀವಾದಿ ಅರ್ಥೈಸುವಿಕೆಗಳು, ತಮ್ಮನ್ನು ತಾವು ಖಚಿತವಾಗಿ ರೂಪಿಸಿಕೊಳ್ಳುವ, ಆತ್ಮವಿಶ್ವಾಸದಿಂದ ಮಂಡಿತವಾಗುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತವೆ. ಇಲ್ಲದಿದ್ದರೆ ಪ್ರಧಾನಧಾರೆ ರೂಪಿಸಿಕೊಂಡಿರುವ 'ಪ್ರಧಾನ' ಹಾಗೂ 'ಪರಿಧಿ' ಎಂಬ ದೂರ ಕೇಂದ್ರಿತ ಪರಿಕಲ್ಪನೆಗಳ ಈ ಘಟ್ಟದಲ್ಲಿಯೂ ಮತ್ತಷ್ಟು ಬಲಗೊಂಡು ಮುಂದುವರಿಯುವಂತಾ ಗುತ್ತದೆ. ಸೂಕ್ಷ್ಮವಾಗಿ ನೋಡುವುದಾದರೆ, ಸಾಹಿತ್ಯಿಕ ಚಿಂತನೆಗಳ ಶ್ರೇಷ್ಠತೆಯ ಚರ್ಚೆಯ ನಡುವಿರುವ ಚಾರಿತ್ರಿಕ ವ್ಯಂಗ್ಯ ಇದು.

ಕಳೆದ ಶತಮಾನದ ೭೦ರ ದಶಕದ ಕೊನೆಯವರೆಗೂ ಸಮಾಜದ ಕೆಲವು ವರ್ಗಗಳು ಅರ್ಥೈಸುವಿಕೆಯ ಕೆಲಸ ನಿರ್ವಹಿಸುತ್ತ, ಅದರ ಲಾಭವನ್ನು ಪಡೆದುಕೊಳ್ಳುತ್ತಿದ್ದವು. ಆದರೆ ೮೦ರ ದಶಕದ ಕೊನೆಯ ಹೊತ್ತಿಗೆ ಕನ್ನಡ ವಿಮರ್ಶಾ ರಾಜಕಾರಣವನ್ನು ಅದುವರೆಗೂ ಇಲ್ಲದಿದ್ದ ಕೆಲವು ಸಮುದಾಯಗಳು ಪ್ರವೇಶಿಸುವುದಕ್ಕೆ ಆರಂಭಿಸಿದವು. ಅವುಗಳಲ್ಲಿ ಮುಖ್ಯವಾದುದು ಸ್ತ್ರೀವಾದಿ ಸಮುದಾಯ. ಮೊದಲ ಹಂತದ ಕಾರ್ಯ ಚಟುವಟಿಕೆಯಾಗಿ ಸಾಹಿತ್ಯ ನಿರ್ಮಾಣದಲ್ಲಿ ತೊಡಗಿದ ಇವರು, ತಮ್ಮ ನಿರಂತರ ಶ್ರಮದ ನಂತರವೂ ತಮಗೆ ದೊರೆಯದ ಪ್ರಾತಿನಿಧ್ಯವನ್ನು ಪಡೆದುಕೊಳ್ಳುವ ಸಲುವಾಗಿ ಅರ್ಥೈಸುವಿಕೆಯ ವಲಯಗಳನ್ನು ಪ್ರವೇಶಿ ಸುವುದರತ್ತ ಗಮನ ಹರಿಸಿದರು. ತಮ್ಮ ಸಾಹಿತ್ಯ, ಸಂಸ್ಕೃತಿಗಳನ್ನು ಅರ್ಥೈಸಿಕೊಳ್ಳುವ ಮೂಲಕ ತಾವು ನಡೆಸಬಹುದಾದ ಸಾಂಸ್ಕೃತಿಕ ರಾಜಕಾರಣದ ಸಾಧ್ಯತೆಯ ಬಗ್ಗೆ ಆಸಕ್ತರಾದರು.

ಅಸಮರ್ಥ, ಅನುಪಯುಕ್ತ, ಅವೈಜ್ಞಾನಿಕ ಇತ್ಯಾದಿ ಋಣಾತ್ಮಕ ಅರ್ಥೈಸುವಿಕೆಗಳ ಭಾರದಲ್ಲಿ ಕುಗ್ಗುತ್ತಿರುವ ತಮ್ಮ ಸಾಂಸ್ಕೃತಿಕ ಬದುಕು ಹಾಗೂ ಪ್ರತಿಭೆ, ಶ್ರೇಷ್ಠತೆ - ಇತ್ಯಾದಿ ಮೌಲ್ಯಗಳಡಿ ನಿರ್ಲಕ್ಷ್ಯಕ್ಕೊಳಗಾಗಿರುವ ಸಾಹಿತ್ಯ ಪ್ರಕ್ರಿಯೆಗಳು ತಾವೇ ನಡೆಸಬೇಕಾದ ಪುನರ್ ಅರ್ಥೈಸುವಿಕೆಯಿಂದ ಮಾತ್ರ ಮೇಲಕ್ಕೇಳಲು ಸಾಧ್ಯ ಎಂಬುದನ್ನು ಗ್ರಹಿಸಿದರು. ಅದರ ಪರಿಣಾಮವಾಗಿ ಸ್ತ್ರೀವಾದಿ ಓದು ಪ್ರಧಾನ ಓದಿಗೆ ಮುಖಾಮುಖಿಯಾಗಿ ಪ್ರಶ್ನೆಗಳನ್ನು ಒಡ್ಡತೊಡಗಿತು.

ಆದರೆ ಈ ಓದುಗಳು ಪ್ರಧಾನ ವಿಮರ್ಶಾಧಾರೆಯೊಳಗೆ ಸೇರಲು ಅಥವಾ ಪ್ರಧಾನ ವಿಮರ್ಶೆಯನ್ನು ಮುಖಾಮುಖಿಯಾಗಲು ಹವಣಿಸುತ್ತಿವೆ. ಈ ಸಂದರ್ಭದಲ್ಲಿ ಪ್ರಧಾನ ಧಾರೆಯು ಸ್ತ್ರೀವಾದ ಓದನ್ನು ಮುಖಾಮುಖಿಯಾಗುವುದಕ್ಕೆ ಬದಲಾಗಿ ಅರ್ಥೈಸುವಿಕೆಯ ವಿರುದ್ಧ ಮಾತನಾಡತೊಡಗಿದೆ. ಅರ್ಥೈಸುವಿಕೆಗಳ ನೈತಿಕತೆಯನ್ನೇ ಪ್ರಶ್ನಿಸುವ ವಾದವನ್ನು ಮಂಡಿಸಿ ಅವುಗಳ ಆತ್ಮವಿಶ್ವಾಸವನ್ನು ಕುಗ್ಗಿಸುವ ಹವಣಿಕೆಯಲ್ಲಿದೆ. ತಾನೇ ತನ್ನ ಟಂಕಸಾಲೆ ಯಲ್ಲಿ ಟಂಕಿಸಿ ಚಲಾವಣೆಗೆ ಬಿಡುತ್ತಿದ್ದ ವಿಮರ್ಶಾ ನಾಣ್ಯವನ್ನು, ಸವಕಲು ನಾಣ್ಯವಾಗಿ ಪರಿವರ್ತಿಸಲು ಯತ್ನಿಸುತ್ತಿದೆ. ಇಂತಹ ಸಂದರ್ಭದಲ್ಲಿ ಸ್ತ್ರೀವಾದಿ ವಿಮರ್ಶೆಯು ಮೇಲಿನ ಸಂದಿಗ್ಧವನ್ನು ಅರ್ಥಮಾಡಿಕೊಳ್ಳದೆ, ಅದಕ್ಕೆ ಪ್ರತಿಕ್ರಿಯಿಸದೆ ತನ್ನಷ್ಟಕ್ಕೆ ತಾನೇ ತನ್ನ ಓದನ್ನು ನಿರೂಪಿಸುವುದು ಸಾಧ್ಯವಿಲ್ಲ. ಹಾಗೆ ಮಾಡಿದರೆ ಮತ್ತೊಮ್ಮೆ ಪ್ರಧಾನ ಹಾಗೂ ಪರಿಧಿ

ಎಂಬ ಪರಿಕಲ್ಪನೆಯು ಹಾಗೇ ಉಳಿಯುವ ಹಾಗೂ ಗಾಢಗೊಳ್ಳುವ ಸಾಧ್ಯತೆಯನ್ನು ಹೆಚ್ಚಿಸಿದಂತೆ ಆಗುತ್ತದೆ. ಈ ಗಾಢಗೊಳ್ಳುವಿಕೆಯು ಸ್ತ್ರೀವಾದಿ ಹಾಗೂ ಪ್ರಧಾನ ಓದಿನ ನಡುವಿನ ತಾರತಮ್ಯಗಳು ಸಹಜವಾದವು, ಅನಿವಾರ್ಯವಾದವು ಎಂಬ ಭಾವನೆಯನ್ನು ಬಲಗೊಳಿಸುವುದಾಗಿ ಬಿಡುತ್ತದೆ. ಆ ಮೂಲಕ ಸ್ತ್ರೀವಾದಿ ಓದು ಇನ್ನಷ್ಟು ಕಾಲ ಅನುಬಂಧ ದಲ್ಲಿಯೇ ಉಳಿಯುವ ಸಾಧ್ಯತೆ ಹೆಚ್ಚಾಗುತ್ತದೆ.

ಮೇಲೆ ಪ್ರಸ್ತಾಪಿಸಿದ ಇಕ್ಕಟ್ಟನ್ನು ಗಮನದಲ್ಲಿಟ್ಟುಕೊಂಡು, ಪ್ರಧಾನಧಾರೆಯು ಎತ್ತುತ್ತಿರುವ 'ಅರ್ಥೈಸುವಿಕೆಯ ವಿರುದ್ಧ'ದ ವಾದವನ್ನು ಸ್ತ್ರೀವಾದಿ ಚಿಂತನೆಯ ಅಗತ್ಯಕ್ಕೆ ತಕ್ಕಂತೆ ಬಳಸುತ್ತಲೇ ಇನ್ನೊಂದು ಸ್ತ್ರೀವಾದಿ ಅರ್ಥೈಸುವಿಕೆಯನ್ನು ಇಲ್ಲಿ ಮಂಡಿಸಲು ಪ್ರಯತ್ನಿಸಲಾಗಿದೆ. ಇದುವರೆಗೂ ಪ್ರಧಾನಧಾರೆಯು ಮಂಡಿಸುತ್ತ ಬಂದ ಕೆಲವು ಪ್ರಸಿದ್ಧ ಅರ್ಥೈಸುವಿಕೆಯನ್ನು ರೂಪಿಸಲು ಯತ್ನಿಸಲಾಗಿದೆ.

'ವಿಕ್ರಮಾರ್ಜುನ ವಿಜಯ'ವನ್ನು ಕುರಿತಂತೆ ಹಲವಾರು ಓದುಗಳು ಪ್ರಧಾನ ವಿಮರ್ಶಾಧಾರೆಯಲ್ಲಿ ಈಗಾಗಲೇ ನಡೆದಿವೆ. ಅದನ್ನೊಂದು ಭಾಷಾಂತರವಾಗಿ ಭಾವಿಸಿ ಮುಖ್ಯವಾಗಿ ಸಂಸ್ಕೃತದ ವ್ಯಾಸಭಾರತದೊಡನೆ ತೌಲನಿಕ ಚರ್ಚೆಗೆ ಒಳಪಡಿಸುವ, ಇತಿಹಾಸ ಕಾವ್ಯವಾಗಿ ೧೦ನೇ ಶತಮಾನದ ಕರ್ನಾಟಕದ ಸಾಂಸ್ಕೃತಿಕ ಬದುಕನ್ನು ಗ್ರಹಿಸುವ, ಭಾಷಾ ಶಾಸ್ತ್ರೀಯ ದೃಷ್ಟಿಯಿಂದ ಕನ್ನಡದ ಭಾಷಿಕ ಸ್ತರಗಳನ್ನು ಗುರುತಿಸುವ-ಇತ್ಯಾದಿ ಹಲವು ನೆಲೆಗಳಲ್ಲಿ ಓದಲಾಗಿದೆ. ಆದರೆ ಈ ಎಲ್ಲ ಭಿನ್ನ ಭಿನ್ನ ಓದುಗಳಲ್ಲಿರುವ ಒಂದು ಸಮಾನ ಅಂಶವೆಂದರೆ ಅವೆಲ್ಲವೂ ಏಕ ಪ್ರಕಾರವಾಗಿ ಪಂಪನನ್ನು ಕನ್ನಡದ 'ಆದಿಕವಿ' ಎಂಬ ಭಾಷಾಭಿಮಾನದ ಭಾವುಕ ನೆಲೆಯನ್ನು ಅನುಭವಿಸುತ್ತಲೇ ಓದುವುದಾಗಿದೆ. ಹಾಗಾಗಿ ಸ್ತ್ರೀವಾದಿ ಕನ್ನಡ ಸಾಹಿತ್ಯದ ಓದು, ಈ ಅಭಿಮಾನಕ್ಕೆ ಸ್ಪಂದಿಸಬೇಕಾದ ವಿಧಾನ ಯಾವುದು ಎಂಬ ಮಾರ್ಮಿಕ ಪ್ರಶ್ನೆಯೊಂದು ಎದುರಾಗುತ್ತದೆ. ಸ್ತ್ರೀವಾದಿ ಓದಿನ ಸಂದರ್ಭದಲ್ಲಿ ಈ ಅಭಿಮಾನಕ್ಕೆ ಮುಕ್ಕಾಗಬಹುದೇನೋ ಎಂಬ ಆತಂಕದಿಂದಾಗಿಯೇ ಸ್ತ್ರೀವಾದಕ್ಕೂ, ೧೦ನೆಯ ಶತಮಾನಕ್ಕೂ, ಪಂಪನ ಕಾವ್ಯಕ್ಕೂ ಗಂಟು ಹಾಕುವುದರ ಸಾಧ್ಯಾಸಾಧ್ಯತೆಗಳು, ಅರ್ಥಾನರ್ಥಗಳು ಅಗತ್ಯಕ್ಕಿಂತ ಮುಂಚಿತವಾಗಿಯೆ ಮುಂಚೂಣಿಗೆ ಬರತೊಡಗಿವೆ. ಏಕೆಂದರೆ 'ಪ್ರಾಚೀನ ಕನ್ನಡ ಸಾಹಿತ್ಯ ಬಹುಪಾಲು ಸೆಕ್ಸಿಸ್ಟ್ ಧೋರಣೆಯನ್ನೇ ಬಿಂಬಿಸುತ್ತದೆ. ನಮ್ಮ ಧಾರ್ಮಿಕ ಕಾವ್ಯಗಳು ಹೆಂಗಸನ್ನು ಆದಷ್ಟು ದೂರವಿರಿಸುವ ಆದರ್ಶವನ್ನು ಹೇಳುತ್ತಲೇ ಅವಳ ದೇಹದ ಸುತ್ತಗಿರಿಕಿ ಹೊಡೆಯುತ್ತವೆ. ಶೃಂಗಾರ ಪ್ರಧಾನವಾದ ಕಾವ್ಯ ಪರಂಪರೆಯಲ್ಲಿ ಹೆಂಗಸು ಏನಾಗಿದ್ದಾ ಳೆಂಬುದನ್ನು ಸ್ತ್ರೀವಾದಿ ಎಚ್ಚರದಿಂದ ನೋಡಿದಾಗಲೇ ಆ ಸಾಹಿತ್ಯ ಪರಂಪರೆಯ ದೃಷ್ಟಿಕೋನದ ಮಿತಿಗಳು ತಿಳಿಯುತ್ತವೆ.'[೨] ಈ ಮಾತು ಪಂಪನವರೆಗೂ ಹರಿದು ಬರುವುದಾದರೆ, ಅದು ಪ್ರಧಾನಧಾರೆಗೆ ನಿಜಕ್ಕೂ ಹಲವಾರು ಮುಜುಗರಗಳನ್ನು ಹುಟ್ಟು ಹಾಕುವುದೇ ಆಗುತ್ತದೆ. ಆಧುನಿಕ ಸೆಕ್ಯುಲರ್ ವಿಮರ್ಶಾ ಧಾಟಿಗೂ ಧಾರ್ಮಿಕ ಕಾವ್ಯದ ಸಂದರ್ಭದಲ್ಲಿ ಸ್ವೀಕರಿಸುವುದು ಮಾತುಗಳನ್ನು ಭಾಷಾಭಿಮಾನದ ಸಂದರ್ಭದಲ್ಲಿ ಸ್ವೀಕರಿಸುವುದು ತೊಡಕಿನದಾಗುತ್ತದೆ. ಹಾಗಾಗಿ

ಇದು ಆದಿಕವಿಯನ್ನು ಕುರಿತ ಕನ್ನಡದ ಅಭಿಮಾನಕ್ಕೆ, ಭಾವುಕತೆಗೆ ಪೂರಕವಾಗಿ ಒದಗಬಲ್ಲ ಸ್ತ್ರೀವಾದಿ ಓದಿನ ಸಾಧ್ಯತೆಯನ್ನು ಎದುರು ನೋಡುತ್ತಿರುತ್ತದೆ. ಅಂದರೆ 'ಮಾನವ ಕುಲಂ ತಾನೊಂದೇ ವಲಂ' ಎನ್ನುವ ಮೂಲಕ ಮಾನವತಾವಾದವನ್ನು ಗೆಲ್ಲಿಸಲಿಲ್ಲವೇ? ಹಾಗೆಯೇ 'ಭೂಪರೆಂಬರ ನಿಜದೊಳ ಅವಿವೇಕಿಗಳಪ್ಪರ್' ಎನ್ನುವ ಮೂಲಕ ಪ್ರಭುತ್ವಶಾಹಿಯನ್ನು ಧಿಕ್ಕರಿಸಲಿಲ್ಲವೇ. ಹಾಗೆ ಸ್ತ್ರೀವಾದವನ್ನು ಪ್ರತಿನಿಧಿಸಬಲ್ಲ ಒಂದೊಂದು ವಾಕ್ಯಕ್ಕಾಗಿ ಹಂಬಲಿಸುತ್ತದೆ. ಆದರೆ ಈ ತುಂಡು ವಾಕ್ಯಗಳನ್ನು, ಸನ್ನಿವೇಶಗಳನ್ನು ಸ್ತ್ರೀವಾದ ಹೇಗೆ ಬಳಸಿಕೊಳ್ಳಬೇಕೆಂಬ ಪ್ರಶ್ನೆ ಪ್ರಾಚೀನ ಕಾವ್ಯಾಧ್ಯಾಯನದ ಸಂದರ್ಭದಲ್ಲಿ ಸ್ತ್ರೀವಾದ ಎದುರಿಸುತ್ತಿದೆ. ಪಂಪನ 'ಮಾನವ ಕುಲ'ದ ಒಳಗೆ ತನ್ನನ್ನೂ ಗುರುತಿಸಿಕೊಂಡು, ಕನ್ನಡ ಕುಲದ ಅಭಿಮಾನವನ್ನು ನಿರ್ವಂಚನೆಯಿಂದ ಒಪ್ಪಿಕೊಂಡು ಮುಂದೆ ಸಾಗಬೇಕೆ, ಅಥವಾ ಅದು ವಿರುದ್ಧ ಭಿನ್ನಸ್ವರ ಎತ್ತಬೇಕೆ ಎಂಬುದೇ ಆ ಪ್ರಶ್ನೆ. ಈ ಸಂದೇಹವನ್ನು ಅರಿವಿನಲ್ಲಿಟ್ಟು ಕೊಂಡೇ ಈ ಓದು ನಡೆದಿದೆ.

ಹೆಣ್ಣು ಮತ್ತು ಭೂಮಿಯನ್ನು ಸಮೀಕರಿಸುವ ತಾತ್ವಿಕತೆಯನ್ನು ಭಕ್ತಿ ಹಾಗೂ ಕ್ಷಾತ್ರ ಪರಂಪರೆಗಳು ಭಿನ್ನವಾಗಿ ಗ್ರಹಿಸುತ್ತವೆ. ಭಕ್ತಿಯು ಭೂಮಿಯನ್ನು ತಾಯಿಯಾಗಿ ಗ್ರಹಿಸಿದರೆ, ಕ್ಷಾತ್ರವು ತಾನು ಮೆಟ್ಟುವ ಕ್ಷೇತ್ರವಾಗಿ ಭಾವಿಸುತ್ತದೆ. ಅಲ್ಲದೆ ಅವೆರಡರ ಸಮೀಕರಣದಲ್ಲಿ ಮದೋನ್ಮತ್ತ ಭೂಮಿಯನ್ನು ಜೈವಿಕವಾಗಿಸಿಕೊಳ್ಳುವ ಬದಲು, ಹೆಣ್ಣನ್ನೇ ಜೈವಿಕವಾಗಿ ಪರಿಭಾವಿಸಿ, ಅದರ ಉಪಭೋಗಕ್ಕೆ ಹೆಚ್ಚಿನ ಗಮನ ನೀಡುತ್ತದೆ. ಅಂತಹ ವೀರಯುಗದ ಮಹಾಕವಿಯಾದ ಪಂಪನ ವಿಕ್ರಮಾರ್ಜುನನಿಗೆ ಹೆಂಡಂದಿರು ಹಲವರಾಗುತ್ತಾರೆ. ಆದರಿದು ಬಹುಪತ್ನಿತ್ವದ ಸಾಧಾರಣ ಕತೆಯಲ್ಲ. ಶ್ರೀ, ವೀರಶ್ರೀ, ಕೀರ್ತಿಶ್ರೀ, ವಾಕ್‌ಶ್ರೀ ಇವರೆಲ್ಲರನ್ನೂ ಹೆಂಡಂದಿರಾಗಿ ಮಾರ್ಪಡಿಸಿಕೊಂಡು ಆಳುವ ಭೂಪೋತ್ತಮನ ಬಹುಪತ್ನಿತ್ವದ ಕತೆ. ಇಲ್ಲಿ ಹೆಣ್ಣು ತನ್ನ ಹಕ್ಕಿಗಾಗಿ, ಅಸ್ತಿತ್ವಕ್ಕಾಗಿ ಹೋರಾಡಬೇಕಿರುವುದು ಇನ್ನೊಂದು ಹೆಣ್ಣಿನೊಂದಿಗಲ್ಲ. ಭೌತಿಕ ಸರಕುಗಳೊಂದಿಗೆ ಬಾರಿ ಬಾರಿಗೂ ಹೆಣ್ಣು ಮುಖ್ಯವೇ?- ಅರ್ಥ ಮುಖ್ಯವೇ? ಹೆಣ್ಣು ಮುಖ್ಯವೇ- ಅಧಿಕಾರ ಮುಖ್ಯವೇ? ಹೆಣ್ಣು ಮುಖ್ಯವೇ-ಕೀರ್ತಿ ಮುಖ್ಯವೇ? ಎಂಬ ಸ್ಪರ್ಧೆಯಲ್ಲಿ ಸ್ಪರ್ಧಿಸಿ ಗೆಲ್ಲಬೇಕು? 'ಶ್ರೀ ವೀರಶ್ರೀ, ಕೀರ್ತಿಶ್ರೀ, ವಾಕ್‌ಶ್ರೀಯೆಂಬ ಪೆಂಡಿರ್ಗಲ್ಲದೆ ತನ್ನೊಳೆ ಭಾವಿಸಿದ ಪೆಂಡಿರೆನಿಸಿದ ಸೌಭಾಗ್ಯದ ಹರಿಗನೆಮ್ಮನೊಲ್ದಪನೋ' ಎಂದು ತಲ್ಲಣಿಸಬೇಕು. ಈ ತಲ್ಲಣದಲ್ಲಿ ಸಹಜವಾಗಿಯೇ ಸೆಕ್ಸಿಸ್ಟ್ ಧೋರಣೆ ಎಂಬುದು ಭಾವ, ಬದುಕು, ಕಾವ್ಯ ಎಲ್ಲದರ ಕೇಂದ್ರವಾಗುತ್ತದೆ. ಯಶಸ್ಸಿನ ಉತ್ತುಂಗದಲ್ಲಿ ನಿಂತೆನೆಂದು ನಂಬುವ ಗಂಡು ಈಗ ತನಗಿರುವ ಅಗತ್ಯ ಸೆಕ್ಸ್ ಮಾತ್ರ ಎಂದು ಭಾವಿಸುತ್ತಾನೆ. ಆ ಯಶಸ್ಸಿನ ಕತೆಯನ್ನು ನಂಬುವ ಹೆಣ್ಣು ತನ್ನದಾಗಿ ಉಳಿದಿರುವ ಸರಕು ಅದು ಮಾತ್ರವೇ ಎಂಬುದನ್ನು ಒಪ್ಪಿಬಿಡುತ್ತಾಳೆ. ಅಂತಹ ಸಮಾಜದಲ್ಲಿ ಸೆಕ್ಸಿಸ್ಟ್ ಧೋರಣೆ ಎಂಬುದು ಗಾಢವಾಗಿ ಮೆತ್ತಿಕೊಳ್ಳುತ್ತದೆ. ಅದು ರಾಜ್ಯವನ್ನು, ವಾಕನ್ನು, ಕೀರ್ತಿಯನ್ನು, ಸಾಹಸವನ್ನು ಹೆಣ್ಣಾಗಿಸಿ ಸಂಭೋಗಿಸುವುದು ಹೇಗೆ ಎಂದು ಹುಡುಕಲಾರಂಭಿಸುತ್ತದೆ. ಕಡೆಗೆ ಮುಕ್ತಿಯನ್ನು ಮುಕ್ತಾಂಗನೆಯಾಗಿಸಿ ಸಂಭೋಗಿ

ಸುವುದು ಹೇಗೆ ಎಂಬ ಕಡೆಗೂ ತೊಡಗುತ್ತದೆ. ಈ ಮನೋಭಾವ ವೀರಯುಗಕ್ಕೆ ಇದ್ದುದರಿಂದಲೇ ಅದು ವೈರಾಗ್ಯವನ್ನೂ ತನ್ನ ಪೌರುಷದ ಸಾಕ್ಷಿಯಾಗಿ ಉತ್ಪಾದಿಸತೊಡಗಿತು. ಕವಿಗಳೂ ವೀರ, ವೈರಾಗ್ಯವೆಂಬ ಹಿಂಜರಿಕೆ ಇಲ್ಲದೆ ಎರಡರಲ್ಲೂ ತಮ್ಮ ಸಾಮರ್ಥ್ಯ ತೋರತೊಡಗಿದರು. ಪರಿಣಾಮವಾಗಿ ನಮ್ಮ ಹಳೆಯ ಧಾರ್ಮಿಕ ಕಾವ್ಯಗಳು ಸೆಕ್ಸಿಸ್ಟ್ ಧೋರಣೆಯನ್ನು ಪ್ರಕಟಿಸಿದವು. ಲೌಕಿಕ ಕಾವ್ಯಗಳೂ ಪ್ರತಿಪಾದಿಸಿದವು. ಹಾಗಾಗಿಯೇ ಪಂಪನ 'ವಿಕ್ರಮಾರ್ಜುನ ವಿಜಯ'ದ ಸಂದರ್ಭದಲ್ಲಿ ಸ್ತ್ರೀವಾದ ಎತ್ತುವ ಪ್ರಶ್ನೆಗಳು 'ಆದಿಪುರಾಣ' ವನ್ನೇನೂ ತಟ್ಟದೆ ಉಳಿಯುವಂತಹವಲ್ಲ.

ಪುರುಷಾರ್ಥವು ಎಲ್ಲ ದಿಕ್ಕಿನಿಂದಲೂ ಹೆಣ್ಣನ್ನು ತನ್ನ ಸಾಧನೆಯ ಸಲಕರಣೆಯಾಗಿ, ನಿಮಿತ್ತವಾಗಿ ಹೇಗೆ ಬಳಸಿಕೊಳ್ಳುತ್ತದೆ ಎಂಬುದಕ್ಕೆ ಉದಾಹರಣೆಗಳು 'ವಿಕ್ರಮಾರ್ಜುನ ವಿಜಯ'ದಲ್ಲಿಯೂ ದೊರೆಯುತ್ತವೆ. ವ್ಯಾಸ ಮೂಲವನ್ನು ಹೊರತುಪಡಿಸಿಯೂ ಪಂಪನು ಈ ವಿಚಾರದಲ್ಲಿ ಬಹಳ ಭಿನ್ನನೇನು ಅಲ್ಲ ಎಂಬುದಕ್ಕೆ ಆತನ ಕಥನ ಕ್ರಮದಲ್ಲಿಯೇ ಉದಾಹರಣೆಗಳು ಸಿಗುತ್ತವೆ. ಅಂತಹ ಒಂದೆರಡು ಉದಾಹರಣೆಗಳು, ಅವುಗಳ ಪ್ರಧಾನಧಾರೆಯ ಅರ್ಥೈಸುವಿಕೆಗಳ ಹಿನ್ನೆಲೆಯಲ್ಲಿ ಪರಿಶೀಲಿಸಬಹುದಾಗಿದೆ.

ಪಂಪನದೇ ಎನ್ನಲಾಗುವ ನೆತ್ತ ಪ್ರಸಂಗವೊಂದು 'ವಿಕ್ರಮಾರ್ಜುನ ವಿಜಯ'ದಲ್ಲಿದೆ. ಇದನ್ನು ಪ್ರಧಾನ ವಿಮರ್ಶೆಯು ಆತನ ಸ್ವೋಪಜ್ಞತೆಗೆ ಸಾಕ್ಷಿಯಾಗಿ ಗುರುತಿಸಿಕೊಂಡಿದೆ ಸಹ. ಅದರ ಪ್ರಕಾರ ಈ ಪ್ರಸಂಗವು ಕರ್ಣ ಮತ್ತು ದುರ್ಯೋಧನರ ಪರಮ ಪವಿತ್ರ ಸಂಬಂಧ ಕುರಿತ ಪಂಪನ ಭಾಷ್ಯ. ಕರ್ಣ ಬಗೆಗಿನ ಸುಯೋಧನನ ಉದಾರತೆ ಹಾಗೂ ಅದಕ್ಕೆ ಕರ್ಣನು ತೋರಿಸಿದ ಕೃತಜ್ಞತೆ. ಈ ಎರಡನ್ನೂ ಮಾರ್ಮಿಕವಾಗಿ ಚಿತ್ರಿಸುವ ಅಪೂರ್ವ ಸನ್ನಿವೇಶ ಎಂಬುದಕಷ್ಟೇ ಇಲ್ಲಿ ಮಹತ್ವ. ಆದರೆ ಕರ್ಣ ಹಾಗೂ ಸುಯೋಧನರ ಉದಾತ್ತತೆಗೆ, ಉದಾರತೆಗೆ ನಿಮಿತ್ತ ಸರಕು ಮಾತ್ರ ಭಾನುಮತಿ. ಏಕೆಂದರೆ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಗಂಡು ಬಯಸಿದಾಗ ಪರ ಪುರುಷನಿಂದ ತನ್ನ ಮುಖವನ್ನು ಮರೆಸಿಕೊಳ್ಳುವ ಮೂಲಕ ತನ್ನ ಪಾವಿತ್ರ್ಯ ಕಾಪಾಡಿಕೊಳ್ಳಬೇಕಾದಷ್ಟೇ ನಿಷ್ಠೆಯನ್ನು ಆತನಿಗೆ ಅಗತ್ಯ ಬಿದ್ದಾಗ ಆ ಮುಸುಕನ್ನು ಸರಿಸಿ ಸಹ ತನ್ನ ಪಾವಿತ್ರ್ಯವನ್ನು ಪಣಕ್ಕಿಡುವ ಮೂಲಕ ಕೂಡ ಆತನ ಕ್ಷಮತೆಯನ್ನು, ಉದಾರತೆಯನ್ನು ಉಜ್ವಲಗೊಳಿಸಬೇಕು. ಅದಕ್ಕೆ ಸಾಕ್ಷಿಯಾಗಿ ಉಳಿಯಬೇಕು. ಅದಿಷ್ಟಕ್ಕಾಗಿಯೇ ಭಾನುಮತಿ ಅಗತ್ಯ. ಇದು ಘನವೆತ್ತ ಕುರುವಂಶದ ಒಬ್ಬ ಸೊಸೆಯ ಸ್ಥಾಮಾನ.[೩]

ಪಂಪನ ಮತ್ತೊಂದು ಪ್ರತಿಭಾನ್ವಿತ ಪ್ರಸಿದ್ಧ ಪದ್ಯ 'ಇದರೊಳ್ ಶ್ವೇತಾತ ಪತ್ರ ಸ್ಥಗಿತ...' ಎಂಬುದು. ಈ ಪದ್ಯವನ್ನು ಪ್ರಧಾನ ವಿಮರ್ಶೆ ಆತನ ಶಕ್ತಿಶಾಲಿ ಸಂವೇದನೆಗೆ ಸಾಕ್ಷಿಯಾಗಿ ಗುರುತಿಸಿಕೊಂಡಿದೆ. ವ್ಯಾಸ (ಕುಮಾರವ್ಯಾಸ)ರಲ್ಲಿ ಬರುವ ಶ್ರೀ ಮುಡಿಯನ್ನು ಪಂಪನು 'ಭವತ್ಕೇಶಪಾಶ' ಎನ್ನುವ ಮೂಲಕ ಅಲ್ಲಿ ಮಹಾಭಾರತದ ವಿನಾಶದ ದುರಂತದ ಛಾಯೆಯನ್ನು ಹೇಗೆ ಧ್ವನಿಸುತ್ತದೆ ಎಂಬುದು ಅದರ ತಾತ್ಪರ್ಯ. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿ ಪುರುಷಾರ್ಥದ ಹೋರಾಟವನ್ನು ನಾಯಕನ ಕಣ್ಣಿನಿಂದ ನೋಡುವಾಗ ಅದನ್ನೊಂದು

ವಿಕ್ರಮಾರ್ಜುನ ವಿಜಯವಾಗಿ ಕಾಣುತ್ತಲೆ, ಆ ಹೋರಾಟದ ಪರಿಣಾಮದ ವಿನಾಶವನ್ನು, ದುರಂತವನ್ನು ಮುಂದಿಟ್ಟುಕೊಂಡ ಕೂಡಲೇ ಅದಕ್ಕೆ ಬೇರೆಡೆ ಕಾರಣಗಳನ್ನು ಹುಡುಕ ಹೊರಡುತ್ತದೆ. ಅದಕ್ಕನುಗುಣವಾಗಿಯೇ ರಾಮಾಯಣ, ಮಹಾಭಾರತಗಳ ವಿನಾಶಗಳು ಕೇವಲ ಹೆಚ್ಚಿನ ಹೆಣ್ಣಿನ ಕಾರಣಕ್ಕಾಗಿ ನಡೆದ ಹೋರಾಟಗಳೆನಿಸುತ್ತವೆ. ದ್ರೌಪದಿಯು ಕುರುವಂಶಕ್ಕೆ ಪ್ರವೇಶಿಸುವ ಮೊದಲಿನಿಂದಲೂ ಇದ್ದ ಅವರ ಬದ್ಧ ವೈರ, ದಾಯಾದ ದ್ವೇಷ, ಆಸ್ತಿಯ ಜಗಳ, ಅಧಿಕಾರದ ಆಸೆ ಎಲ್ಲವೂ ದ್ರೌಪದಿಯ ಕಾರಣದಿಂದಲೇ ಎಂಬ ತಿರುಚಿದ ವಿವರಣೆಯೊಂದಿಗೆ 'ಮಹಾಭಾರತಕ್ಕಾದಿಯಾಯ್ತಿದು' ಎಂದಾಗುತ್ತದೆ. ಹೆಣ್ಣನ್ನು ಪಣವಾಗಿಸಿ ಗೆಲ್ಲುವ ಸೋಲುವ ಪುರುಷ ಅಹಂಕಾರದ ಹತಾಶೆಯು ಅದರಿಂದಾಗುವ ವಿನಾಶವನ್ನು ಹೆಣ್ಣಿನ ತಲೆಗೆ ಕಟ್ಟಿ ಸಮಾಧಾನಪಟ್ಟುಕೊಳ್ಳುತ್ತದೆ. ಇದು ಕುರುವಂಶದ ಇನ್ನೊಬ್ಬ ಸೊಸೆಯ ಕತೆ.

ಪಿತೃ ಸಂಸ್ಕೃತಿಯು ಹೆಣ್ಣಿನ ಅಸ್ತಿತ್ವವನ್ನು ಫಲವಂತಿಕೆಯ ಮೂಲಕ ಮಾತ್ರ ಸ್ವೀಕರಿಸುತ್ತದೆ. ಇದರಿಂದ ಆ ವ್ಯವಸ್ಥೆಯಲ್ಲಿ ತಾಯ್ತನ ಎನ್ನುವುದು ಸ್ತ್ರೀಯ ಅಸ್ತಿತ್ವದ ನಿರ್ಣಾಯಕ ಅಂಶವಾಗುತ್ತದೆ. ಅದರಂತೆಯೇ ಕುರುವಂಶಕ್ಕೆ ಈ ವಂಶದವರ ಪುರುಷಾರ್ಥದ ಸಾಕ್ಷಿಯಾಗಿಯೇ ಕಾಲಿಟ್ಟ ಪ್ರತಿಯೊಂದು ಹೆಣ್ಣಿನ ಮೇಲೂ ಇದರ ಪರಿಣಾಮ ವಿಪರೀತದಾಗಿದೆ. ಮಹಾಭಾರತದಲ್ಲಿ ದುಶ್ಯಲೆಯೊಬ್ಬಳ ಪ್ರಸ್ತಾಪ ಬಿಟ್ಟರೆ ಉಳಿದವರೆಲ್ಲ ಆ ಕುಟುಂಬಕ್ಕೆ ಹೊರಗಿನಿಂದ ನಾನು ಮಹತ್ವಾಕಾಂಕ್ಷೆಗಳಿಂದಾಗಿ ಬಂದು ಸೇರಿದ ಹೆಣ್ಣುಗಳೇ. ಹಾಗಾಗಿ ಇವರೆಲ್ಲ ಫಲವಂತಿಕೆಯಿಂದಲೇ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕಾಯಿತು. ಅದಕ್ಕಾಗಿ ಏನೇನೋ ಆಪದ್ಧರ್ಮಗಳನ್ನು ಅನುಸರಿಸಬೇಕಾಯಿತು. ಪಿತೃಪ್ರಧಾನ ಸಂಸ್ಕೃತಿಯ ಉತ್ತರಾಧಿಕಾರದ ಸಂದರ್ಭದಲ್ಲಿ ಹೇಗಾದರೂ ಮಕ್ಕಳನ್ನು ಹೆರುವ, ಅದರಲ್ಲೂ ಗಂಡು ಮಗುವನ್ನು ಹೆರುವ, ಇನ್ನೊಬ್ಬಳಿಗಿಂತ ಮುಂಚಿತವಾಗಿ ಹೆರುವ ಮೂಲಕ ತಮ್ಮ ಸ್ಥಾನಮಾನಗಳಿಗಾಗಿ ಸೆಣಸಾಡಬೇಕಾಯಿತು. ಆದರೆ ಪ್ರಧಾನ ಚಿಂತನಾಧಾರೆ ಮಾತ್ರ ಈ ವಿಚಾರವನ್ನು ಬದಿಗಿಟ್ಟು, ಕಾಲಕಾಲಕ್ಕನುಗುಣವಾಗಿ ಅವರು ಕೈಗೊಂಡ ಆಪದ್ಧರ್ಮ (ಅಧರ್ಮಗಳ) ಕುರಿತು ನೈತಿಕತೆಯ ಪ್ರಶ್ನೆಯನ್ನು ಹೇರುತ್ತಲೇ ಬಂದಿತು. ಈ ಹೇರುವಿಕೆಯ ಪ್ರಕ್ರಿಯೆಯ ಭಾಗವಾಗಿಯೇ ಪಂಪನೂ ತನ್ನ ಕಾಲದ ನೈತಿಕ ಒತ್ತಡವನ್ನು ಇಲ್ಲಿನ ಪ್ರಧಾನ ಪಾತ್ರಗಳ ಸಂದರ್ಭದಲ್ಲಿ ದಾಖಲಿಸಿದವನಾಗಿ ಕಂಡುಬರುತ್ತದೆ.

'ವಿಕ್ರಮಾರ್ಜುನ ವಿಜಯ' ಕನ್ನಡ ಸಂದರ್ಭದಲ್ಲಿ ಅತ್ಯಂತ ಸ್ವೋಪಜ್ಞವಾದ ಕೃತಿ ಎನ್ನುವುವಾದರೂ, ಅದೊಂದು ಮಹಾಭಾರತದ ಪುನರ್‌ನಿರ್ವಚನ ಎಂಬುದನ್ನು ಮರೆಯುವಂತಿಲ್ಲ. ಆ ಕಾರಣಕ್ಕಾಗಿಯೇ ತನ್ನ ಕಾಲಕ್ಕೆ ವ್ಯಾಸ ಭಾರತವನ್ನು ನಿರ್ವಚಿಸುವಾಗ ಆತನಿಗೆ ಹಲವಾರು ಮುಜುಗರಗಳು ಉಂಟಾಗಿವೆ ಸಹ. ಈ ಮುಜುಗರಕ್ಕೆ ಆತ ಅನ್ಯ ಧರ್ಮಿಯನಾದುದು, ಸಮಕಾಲೀನ ಇತಿಹಾಸವನ್ನು ಸಮೀಕರಿಸಿಕೊಂಡುದೂ ಕಾರಣವೆಂದು ಕೆಲಮಟ್ಟಿಗೆ ನಿಜವಾದರೂ, ಅದರೊಂದಿಗೆ ಮಹಾಭಾರತದಲ್ಲಿನ ಕೆಲವು ಅಪಾರ-ವಿಚಾರಗಳು ೧೦ನೇ ಶತಮಾನದ ಇಡೀ ಕನ್ನಡ ಸಮುದಾಯಕ್ಕೆ ಹಲವು ರೀತಿಯ ಮುಜುಗರಗಳನ್ನು ಉಂಟು

ಮಾಡುವುದಾಗಿದ್ದವು ಎಂಬುದು ಗಮನಿಸಬೇಕಾದ ಸಂಗತಿ. ಈ ಮುಜುಗರಗಳಲ್ಲಿ ಹೆಚ್ಚಿನವು ಸ್ತ್ರೀಗೆ ಸಂಬಂಧಿತವಾದುವೇ ಆದವು ಎಂಬುದೂ ಈ ಚರ್ಚೆಗೆ ಬೇರೆಯದೇ ಆದ ನೆಲೆಗಟ್ಟನ್ನು ಒದಗಿಸುತ್ತದೆ. ಈ ಸಮಾಜವು ಕಾಲಕಾಲಕ್ಕೆ ಎತ್ತುತ್ತ ಬಂದ ನೈತಿಕತೆಯ ಪ್ರಶ್ನೆಗಳು, ಹೇರುತ್ತ ಬಂದ ಪಾವಿತ್ರ್ಯದ ಹೊರೆಗಳು, ನೇರವಾಗಿರಲಿ ಇಲ್ಲವೆ ಸುತ್ತು ಬಳಸಿನದಾಗಿರಲಿ, ಅದು ಸ್ತ್ರೀಯನ್ನೇ ಕೇಂದ್ರೀಕರಿಸಿದ್ದಾಗಿದ್ದವು.

ಮಹಾಭಾರತದ ಸಂದರ್ಭದಲ್ಲಿ ಕಂಡುಬರುವ ನಿಯೋಗ, ಕಾನೀನ, ಬಹುಪತಿತ್ವ ಇತ್ಯಾದಿ ಸಂಗತಿಗಳು ಎರಡು ರೀತಿಯಲ್ಲಿ ಪ್ರತಿಕ್ರಿಯೆಗಳನ್ನು ಪಡೆದುಕೊಳ್ಳುವುದನ್ನು ಗಮನಿಸಬಹುದು. ಒಂದು, ಕಾವ್ಯದೊಳಗೇ ತಲೆಮಾರಿನಿಂದ ತಲೆಮಾರಿಗೆ ಈ ಮೌಲ್ಯಗಳು ಭಿನ್ನ ಪ್ರತಿಕ್ರಿಯೆಗಳನ್ನು ಪಡೆದುಕೊಳ್ಳುತ್ತ ಹೋಗುವುದು. ಮೂಲ ಮಹಾಭಾರತದ ಕಥಾ ಹಂದರವೇ ಈ ಪದ್ಧತಿಗಳನ್ನು ಒಂದು ಚಾರಿತ್ರಿಕ ಕ್ರಮದಲ್ಲಿ ಗ್ರಹಿಸುವ, ಮೌಲ್ಯಮಾಪನ ಮಾಡುವ ಪ್ರಯತ್ನದಲ್ಲಿ ತೊಡಗುವುದು. ಉದಾ: ಧೃತರಾಷ್ಟ್ರ, ಪಾಂಡುವಿನ ಜನನ ನಿಯೋಗದಿಂದಲೇ ಆದರೂ ಅವರಿಗಿಂತ ಭಿನ್ನವಾದ ನೈತಿಕ ಸವಾಲನ್ನು ಪಾಂಡವರು ಎದುರಿಸಬೇಕಾದ ಬಗೆ. ಆ ಮೂಲಕ ಅಂಬಿಕೆ, ಅಂಬಾಲಿಕೆಯರ ಮೇಲೆ ತಂದ ನೈತಿಕ ಒತ್ತಡಕ್ಕಿಂತ ಭಿನ್ನವಾದ ಒತ್ತಡವನ್ನು ಕುಂತಿ ಎದುರಿಸಬೇಕಾಗಿ ಬಂದುದು. ಅಂದರೆ ಅರಸೊತ್ತಿಗೆಯ ವಾರಸುದಾರಿಕೆಗಾಗಿ ನಿಯೋಗದಂತಹ ಆಪದ್ಧರ್ಮವನ್ನು ಕೈಗೊಳ್ಳಲೇಬೇಕೆಂಬ ಅಂಬಿಕೆ ಅಂಬಾಲಿಕೆಯರ ಮೇಲಿನ ನೈತಿಕ ಒತ್ತಡ, ವಾರಸುದಾರರಾಗಿ ಕೌರವರು ಇರುವ ಸಂದರ್ಭದಲ್ಲಿ ಕುಂತಿ ಕೈಗೊಂಡ ಆಪದ್ಧರ್ಮವು ಪ್ರಶ್ನಾರ್ಹವಾಗುವ ಸೂಕ್ಷ್ಮವನ್ನು ಗಮನಿಸುವುದಾದರೆ, ಆಪದ್ಧರ್ಮದ ಹೆಸರಿನಲ್ಲಿ ರಾಜಶಾಹಿಯು ಸ್ತ್ರೀಯ ಮೇಲೆ ಹೇರುತ್ತಿದ್ದ ನೈತಿಕತೆಯ ಒತ್ತಡ ಸ್ಪಷ್ಟಗೊಳ್ಳುತ್ತವೆ.

ಎರಡನೆಯದಾಗಿ ಮೂಲ ಭಾರತವನ್ನು ಪುನರ್‌ನಿರ್ವಚಿಸ ಹೊರಟ ಕವಿಗಳು ತಮ್ಮ ಕಾಲಮಾನಕ್ಕನುಗಣವಾಗಿ ಪ್ರತಿಕ್ರಿಯಿಸುತ್ತ ಬಂದ ಕ್ರಮ. ಉದಾಹರಣೆಗೆ: ಪಂಪ ದ್ರೌಪದಿಯ ಬಹುಪತಿತ್ವಕ್ಕೆ ನೀಡಿದ ನಿರಾಕರಣೆಯ ಪ್ರತಿಕ್ರಿಯೆ ಹಾಗೂ ಕುಮಾರವ್ಯಾಸ ಅದರ ಸಮರ್ಥನೆಗಾಗಿ ಉಪಕತೆಯನ್ನು ಕಟ್ಟಿದ ವಿಧಾನ. ಈ ಉದಾಹರಣೆಗಳನ್ನು ಗಮನಿಸುವುದಾದರೆ, ಭಿನ್ನ ಕಾಲಘಟ್ಟದ ನಿರ್ವಚನಗಳು ತಮ್ಮ ತಮ್ಮ ಬದ್ಧತೆಗಳಿಗೆ ಅನುಗುಣವಾಗಿ ಮೂರು ನೆಲೆಗಳಲ್ಲಿ ತಮ್ಮ ಪ್ರತಿಕ್ರಿಯೆಯನ್ನು ರೂಪಿಸಿಕೊಂಡಿರುವುದು ಕಂಡುಬರುತ್ತದೆ. ಒಂದು-ಪವಾಡ, ವರ, ಶಾಪ ಇತ್ಯಾದಿ ಅಮಾನುಷಗೊಳಿಸುವುದು. ಎರಡು-ನಡೆದೇ ಇಲ್ಲವೆಂದು ಸಾಧಿಸುವುದು. ಮೂರು-ಹೆಚ್ಚು ಚರ್ಚೆ ಬೆಳೆಸದೆ ಮೌನವಾಗಿ ಮುಂದುವರಿಯುವುದು.

ಪಂಪನೂ ಮೇಲಿನ ಮೂರು ವಿಧಾನಗಳನ್ನು ಅನುಸರಿಸುವ ಮೂಲಕ ತನ್ನ ಕಾಲದ ಮುಜುಗರವನ್ನು ಸಂಭಾಳಿಸಲು ಪ್ರಯತ್ನಿಸಿರುವನು. ಆದರೂ ಆತ ಅದರಲ್ಲಿನ ಒಂದು ಸಂಗತಿಯನ್ನು ಕುರಿತಂತೆ ತನ್ನ ಕಾಲದ ಪ್ರತಿಕ್ರಿಯೆಗಳನ್ನು ಗಮನಾರ್ಹವಾಗಿ ದಾಖಲಿಸಲು, ಚರ್ಚೆಗೆ ತರಲು ಆಸಕ್ತನಾಗಿರುವಂತೆ ಕಂಡುಬರುತ್ತಾನೆ. ಅದು ದ್ರೌಪದಿಯ ಬಹುಪತಿತ್ವದ ವಿಚಾರವಲ್ಲಿ.

ದ್ರೌಪದಿ ಪಂಚವಲ್ಲಭೆಯಾಗಿ ಎಂಬುದನ್ನು ಪಂಪ ನೇರವಾಗಿಯೇ ನಿರಾಕರಿಸಿದ್ದಾನೆ. ಇದಕ್ಕೆ ಅರ್ಜುನನನ್ನು ಅರಿಕೇಸರಿಯೊಂದಿಗೆ ಸಮೀಕರಿಸಿದ್ದೇ ಕಾರಣ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ. ಆದರೂ ಅದಕ್ಕೂ ಮೂಲಕಾರಣ ಮಾತ್ರ, ಆತನ ಕಾಲದ ನಾಗರೀಕ ಮೌಲ್ಯ ವ್ಯವಸ್ಥೆಗೆ ಬಹುಪತಿತ್ವದ ಮಾತು ಅತ್ಯಂತ ಮುಜುಗರವನ್ನುಂಟು ಮಾಡುತ್ತಿತ್ತು ಎಂಬುದಾಗಿದೆ. ಈ ಮುಜುಗರಕ್ಕೆ ಸ್ಪಂದಿಸಿದ ಪಂಪ ತನ್ನ ಕಾಲದ ಮೌಲ್ಯ ವ್ಯವಸ್ಥೆಯ ಪರವಾಗಿ ನಿಂತು ಅದನ್ನು ನಿರಾಕರಿಸಿದ್ದಾನೆ. ಇದರಲ್ಲಿ ಆತನಿಗೆ ರಾಜನ ಅಥವಾ ಗೆಳೆಯನ ಹೆಂಡತಿ ಬಹುಪತಿತ್ವ ಧಾರಿಯಾಗಿರಬೇಕೆ ಬೇಡವೆ ಎಂಬುದು ನಂತರದ ಪ್ರಶ್ನೆಯಾಗಿದ್ದು, ಒಟ್ಟಾರೆಯಾಗಿಯೇ ಹೆಣ್ಣೊಬ್ಬಳು ಬಹುಪತಿತ್ವ ಹೊಂದಿರುವುದು ಮುಜುಗರದ ಸಂಗತಿ ಎನಿಸುತ್ತದೆ.

ಆಧುನಿಕ ಸಂದರ್ಭವೂ ಬಹುಪತಿತ್ವದ ವಿಚಾರದಲ್ಲಿ ಇದೇ ಬಗೆಯ ಮುಜುಗರವನ್ನು ಅನುಭವಿಸುತ್ತಿದೆ. ಆದರೂ ಆಧುನಿಕ ವಿಮರ್ಶೆಯನ್ನು ಮಾತ್ರ ಪಂಪನ ಪ್ರತಿಕ್ರಿಯೆ ಬಗ್ಗೆ ಅದೊಂದು ಮಹಾಪರಾಧ ಎಂಬ ನೆಲೆಯಲ್ಲಿ ಮಾತನಾಡುವುದು ಕುತೂಹಲಕಾರಿಯಾದ ಸಂಗತಿ. ಪಂಪನ ಪ್ರತಿಭೆಯನ್ನು ಎತ್ತಿ ಹಿಡಿಯುವ ವಿಮರ್ಶೆಗಳೂ ಕೂಡ ಮಹಾ ಕಾವ್ಯವೆಂಬುದು ಮನದ ಕಾವ್ಯವೂ ಆಗಿರುತ್ತದೆ ಎಂದು ನಂಬುತ್ತಲೇ ಬಹುಪತಿತ್ವದ ವಿಚಾರದಲ್ಲಿ ಪಂಪನ ಪ್ರತಿಕ್ರಿಯೆ ರುಚಿಗೇಡಿನದು, ಮಹಾಭಾರತದ 'ಸ್ವಾದ' ಇರುವುದೇ ದ್ರೌಪದಿಯ ಬಹುಪತಿತ್ವದಲ್ಲಿ ಎಂದು ವಾದಿಸುತ್ತವೆ. ತನ್ನ ಕಾಲದ ಸಾಮಾಜಿಕ ಮೌಲ್ಯಗಳಿಗೂ ಆದಿಕಾವ್ಯವೊಂದು ಕಟ್ಟಿ ಕೊಡುವ ಮೌಲ್ಯಕ್ಕೂ ತಿಕ್ಕಾಟವೇ ಬೇಕಿಲ್ಲವೇನೋ ಎಂಬಂತೆ ವರ್ತಿಸುತ್ತದೆ.

ಮೇಲಿನ ವಿಚಾರದ ಹಿನ್ನೆಲೆಯಲ್ಲಿ ಕಾಲದಿಂದ ಕಾಲಕ್ಕೆ ಸ್ತ್ರೀ ಸಂಬಂಧಿತ ಮೌಲ್ಯಗಳಲ್ಲಿ ಎತ್ತಲಾಗುವ ಪ್ರಶ್ನೆಗಳು ಹಾಗೂ ಅವುಗಳ ಪರಿಹಾರಗಳನ್ನು ಕುರಿತು ಆಲೋಚಿಸುವುದಾದರೆ, ಅದರಲ್ಲಿ ಸ್ಪಷ್ಟವಾಗಿ ಕಾಣುವುದು. ಸ್ತ್ರೀಯ ಪಾವಿತ್ರ್ಯದ ಕಲ್ಪನೆಯು, ಪುರುಷನ ಅಗತ್ಯಗ ಳೊಂದಿಗೆ ಸಾಪೇಕ್ಷ ಸಂಬಂಧವನ್ನು ಹೊಂದಿದ್ದಾಗಿರುತ್ತದೆ ಎಂಬುದು ನಮ್ಮ ಪರಂಪರೆಯ ಪಳೆಯುಳಿಕೆಗಳಾಗಿ ಉಳಿದು ಬಂದಿರುವ ಸ್ತ್ರೀ ಸಂಬಂಧಿತ ಸಂಚಲನೆಗಳು ಪುರುಷನ ತುರ್ತನ್ನು ಅನುಸರಿಸಿ ಆಗಿರುವಂಥವು. ಆತ ತನ್ನ ಅಗತ್ಯಕ್ಕೆ ತಕ್ಕಂತೆ ಸ್ತ್ರೀಯ ಪಾವಿತ್ರ್ಯದ ಸ್ವಾತಂತ್ರ್ಯದ ಎಲ್ಲ ಗೆರೆಗಳನ್ನು ನಿರ್ಧರಿಸಿದ್ದಾನೆ. ಹಲವು ಬಾರಿ ಈ ಗೆರೆ ವಿಸ್ತಾರಗೊಂಡಿದ್ದಾಗಿದೆ, ಅಳಿಸಿಯೇ ಹೋಗಿದೆ ಎಂಬಷ್ಟು ಮಸುಕಾಗಿಯೂ ಇದೆ ಎನಿಸುವುದಾದರೂ ಅವೆಲ್ಲವುಗಳ ಹಿಂದೆಯೂ ಆತನ ಹಿತದ ಪ್ರಶ್ನೆಯೊಂದು ಪ್ರಧಾನವಾಗಿ ಇದ್ದೇ ಇದೆ. ಹಾಗಾಗಿಯೇ ವ್ಯಾಸ ಭಾರತದಲ್ಲಿ ಬಳಕೆಗೊಂಡ ಬಹುಪತಿತ್ವದ ಹಿಂದಿನ ಆಶಯ, ಅದನ್ನು ನಿರಾಕರಿಸುವ ಪಂಪನ ಮನೋ ಧರ್ಮ, ಅದನ್ನೊಂದು ಅಪರಾಧವಾಗಿ ಭಾವಿಸುವ ಪ್ರಧಾನ ವಿಮರ್ಶೆಯ ನಿಲವು, ಆ ನಿಲುವನ್ನು ಪುನರ್‌ಮೌಲ್ಯೀಕರಿಸಿ ಹೊರಡುವ ವೈಚಾರಿಕತೆ-ಎಲ್ಲವೂ ತಮ್ಮ ತಮ್ಮ ಅಗತ್ಯಗಳಿಗೆ ಅನುಗುಣ ವಾಗಿ ಹೊರಟವು ಅನಿಸುತ್ತದೆ. ಪ್ರತಿ ಹಂತದಲ್ಲೂ ಪುರುಷ ತನ್ನ ಅಗತ್ಯಕ್ಕೆ ತಕ್ಕಂತೆ ಹೆಣ್ಣಿಗೆ ಆಪದ್ಧರ್ಮವನ್ನೂ, ಅಧರ್ಮವನ್ನೂ ಬೋಧಿಸುತ್ತಾ ಬಂದ ಬಗೆ ಎನಿಸುತ್ತದೆ. ಈ ಹಿನ್ನೆಲೆ ಯಲ್ಲಿ ನೋಡಿದಾಗ ವ್ಯಾಸ ಭಾರತದಲ್ಲಿನ ಸ್ತ್ರೀಯ ಆಪದ್ಧರ್ಮಗಳ ಚಿತ್ರಣವು, ಸಂಸ್ಕೃತಿಯ

ವಿವಿಧ ಹಂತಗಳ ಸಮೀಕರಣವೆನ್ನುವುದಕ್ಕಿಂತ ಪಿತೃಪ್ರಧಾನ ಸಮಾಜದಲ್ಲಿನ ಹೆಣ್ಣಿನ ಛಿದ್ರತೆಗಳು ಅನಿಸುತ್ತದೆ; ಕುರುವಂಶವು ತನ್ನ ಅಗತ್ಯಕ್ಕೆ ತಕ್ಕಂತೆ ಹೆಣ್ಣನ್ನು ಬಳಸಿಕೊಳ್ಳುವ ಬಗೆ ಎನಿಸುತ್ತದೆ. ಈ ಬಗೆಯ ಬೇರೆ ಬೇರೆ ಆವೃತ್ತಿಗಳಾಗಿ 'ವಿಕ್ರಮಾರ್ಜುನ ವಿಜಯ', ಅದನ್ನು ಕುರಿತ ಆಧುನಿಕ ವಿಮರ್ಶೆ ಎಲ್ಲವೂ ಕಂಡುಬರುತ್ತದೆ. ಈ ಮಾರ್ಗದಲ್ಲಿ ಬಹುಪತ್ನಿತ್ವದ ಮಾತು ಲಾಭದಾಯಕವಾಗುವುದಾದರೆ ಅದಿರಲಿ, ಬಹುಪತಿತ್ವದಿಂದ ಲಾಭವಾಗುವುದಾದರೆ ಅದೂ ಇರಲಿ. ಒಟ್ಟಿನಲ್ಲಿ ಲಾಭದಾಯಕವಾದ ಇಲ್ಲಿ ಒಡೆತನದ ನಿರಂತರಂತೆ ಇಲ್ಲಿ ತುಂಬಾ ಮುಖ್ಯವಾಗಿದೆ.

●

ಕಾಸರಗೋಡು ಪರಿಸರದಲ್ಲಿ ಕನ್ನಡ ಪತ್ರಿಕೋದ್ಯಮದ ಇಕ್ಕಟ್ಟುಗಳು

•ಮೋಹನ ಕುಂಟಾರ್

ಬಹುಭಾಷಾ ಜನಸಮುದಾಯಗಳಿರುವ ಪ್ರದೇಶದಲ್ಲಿ ಒಂದು ಭಾಷೆಯ ಪತ್ರಿಕೆಗಳಿಗೆ ವರದಿ ಸಿದ್ಧ ಮಾಡುವಾಗ ನಡೆಯುವ ಭಾಷಾಂತರ ಎರಡು ಹಂತಗಳಲ್ಲಿ ನಡೆಯುತ್ತಿರುತ್ತದೆ. ಇಲ್ಲಿ ಮೌಖಿಕವಾಗಿ ಮಾಹಿತಿ ದೊರೆಯುವ ಭಾಷೆ ಬೇರೆ, ವರದಿ ಮಾಡಬೇಕಾದ ಭಾಷೆ ಬೇರೆಯಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಮನಸ್ಸಿನಲ್ಲಿ ನಡೆಯುವ ಭಾಷಾಂತರ ಪ್ರಕ್ರಿಯೆ ಒಂದು ಹಂತ. ಅನ್ಯ ಭಾಷಾಂತರ ಮಾಡುವುದು ಇನ್ನೊಂದು ಹಂತ. ಈ ಎರಡೂ ಹಂತಗಳಲ್ಲಿ ಭಾಷಾಂತರ ಪ್ರಕ್ರಿಯೆಗಳಲ್ಲಿ ಎದುರಾಗುವ ಕೆಲವು ಸಮಸ್ಯೆಗಳನ್ನು ಕೇರಳ ಕರ್ನಾಟಕ ಗಡಿ ಪ್ರದೇಶವಾದ ಕಾಸರಗೋಡನ್ನು ಕೇಂದ್ರೀಕರಿಸಿದ ಪತ್ರಿಕೆಗಳನ್ನು ಆಧರಿಸಿ ಮಾಡಲಾಗಿದೆ.

ಕಾಸರಗೋಡು ಮೂಲತಃ ಕನ್ನಡ ನೆಲ. ಇಲ್ಲಿ ತುಳು ಮನೆಮಾತಿನವರು ಬಹು ಸಂಖ್ಯಾತರು. ಕನ್ನಡ, ಮಲಯಾಳಂ ಮನೆಮಾತಿನ ಜನರೂ ಇದ್ದಾರೆ. ಅಲ್ಲದೆ ಕೊಂಕಣಿ, ಮರಾಠಿ, ಹವ್ಯಕ ಕನ್ನಡ ಮನೆಮಾತಾಗುಳ್ಳ ಮಂದಿಗಳೂ ಗಮನಾರ್ಹ ಸಂಖ್ಯೆಯಲ್ಲಿದ್ದಾರೆ. ಇವರೆಲ್ಲರಲ್ಲಿ ಬಹುತೇಕ ಮಂದಿಗೆ ಕನ್ನಡವೇ ಓದಿನ ಭಾಷೆ. ಇಲ್ಲಿನ ಆಡಳಿತ ಭಾಷೆ ಮಲಯಾಳಂ. ಹಾಗಾಗಿ ಇಲ್ಲಿನ ಆಡಳಿತಾತ್ಮಕವಾದ ವಿಚಾರಗಳು, ಔದ್ಯೋಗಿಕ ಸುದ್ದಿಗಳು, ಜನೋಪಯೋಗಿ ಯೋಜನೆಗಳ ತಿಳುವಳಿಕೆಗಳು ಲಭ್ಯವಾಗುವುದು ಮಲಯಾಳಂನಲ್ಲಿ. ಪತ್ರಿಕಾ ಪ್ರಕಟಣೆಗಳು ಸಹ ಮಲಯಾಳಂನಲ್ಲಿಯೇ ಇರುತ್ತವೆ. ಕನ್ನಡ ಮಲಯಾಳಂ ಈ ಪ್ರದೇಶದ ಜನ ಸಮುದಾಯದ ಓದುವ ಭಾಷೆಯಾದ್ದರಿಂದ, ಸ್ಥಳೀಯವಾಗಿ ಕನ್ನಡ ಮಲಯಾಳಂ ಪತ್ರಿಕೆಗಳಿಗೆ ಬೇಡಿಕೆ ಸಹಜ. ರಾಜ್ಯಮಟ್ಟದ ಕನ್ನಡ, ಮಲಯಾಳಂ ಪತ್ರಿಕೆಗಳು ಕರ್ನಾಟಕದಿಂದ ಪ್ರಕಟವಾಗುತ್ತಿದ್ದುವು. ಹಾಗಾಗಿ ಸ್ಥಳೀಯವಾದ ಸುದ್ದಿಗಳನ್ನು ಕನ್ನಡ ಪತ್ರಿಕೆಗಳು ವಿಳಂಬವಾಗಿ ವರದಿ ಮಾಡುತ್ತಿದ್ದುವು. ಅದರಲ್ಲೂ ಸ್ಥಳೀಯವಾದ ಸಣ್ಣಪುಟ್ಟ ಸುದ್ದಿಗಳು ಪ್ರಕಟವಾಗುತ್ತಿರಲಿಲ್ಲ. ಕಾಸರಗೋಡು ರಾಜಕೀಯವಾಗಿ ಕೇರಳದಲ್ಲಿ ಸೇರಿರುವುದರಿಂದ, ಸ್ಥಳೀಯವಾದ ಸಣ್ಣಪುಟ್ಟ ಸುದ್ದಿಗಳಿಗೂ ಕನ್ನಡ ಪತ್ರಿಕೆಗಳಿಗಿಂತಲೂ ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಹೆಚ್ಚು

ಅವಕಾಶ ಇರುತ್ತಿತ್ತು. ಆಡಳಿತಾತ್ಮಕವಾದ ವಿಚಾರಗಳೆಲ್ಲವೂ ಮಲಯಾಳಂ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಜನಪರವಾದ ಸರಕಾರದ ಅನೇಕ ಯೋಜನೆಗಳ ವಿವರಗಳನ್ನು ಮಲಯಾಳಂ ಪತ್ರಿಕೆಯ ಮೂಲಕವೇ ಜನ ತಿಳಿದುಕೊಳ್ಳಬೇಕಾಗಿತ್ತು. ಸರಕಾರದ ಔದ್ಯೋಗಿಕ ಪ್ರಕಟಣೆಗಳು, ಅದರಲ್ಲೂ ಲೋಕ ಸೇವಾ ಆಯೋಗದಂತಹ ಸಂಸ್ಥೆಗಳ ಪ್ರಕಟಣೆಗಳು ಅಲ್ಪ ಸಂಖ್ಯಾತರಾದ ಕನ್ನಡಿಗರಿಗೂ ಅನುಕೂಲವಾಗುವಂತೆ ಕನ್ನಡ ಪತ್ರಿಕೆಗಳಲ್ಲೂ ಪ್ರಕಟಣೆ ನೀಡಬೇಕು ಎಂಬ ಸರಕಾರದ ನಿಯಮವಿದೆ. ಆದರೆ ಅದು ಪ್ರಕಟವಾಗುವುದು ಬಹಳ ವಿಳಂಬವಾಗಿ, ಹಾಗಾಗಿ ಸರಕಾರದ ವಿಷಯಗಳಿಗೂ, ಸ್ಥಳೀಯವಾದ ಸುದ್ದಿಗಳಿಗೂ ಕನ್ನಡಿಗರು ಮಲಯಾಳಂ ಪತ್ರಿಕೆಗಳನ್ನು ಅವಲಂಬಿಸಬೇಕಾಗಿತ್ತು. ಈ ಕಾರಣಕ್ಕಾಗಿ ಸ್ಥಳೀಯ ಪತ್ರಕರ್ತರು ಸ್ಥಳೀಯ ಕನ್ನಡ ಪತ್ರಿಕೆಗಳನ್ನು ಹುಟ್ಟು ಹಾಕಿದರು.

ಕಾಸರಗೋಡಿನಲ್ಲಿ ಕನ್ನಡ ಪತ್ರಿಕೆ ಆರಂಭವಾದುದು ಸುಮಾರು ೧೯೪೬ರಲ್ಲಿ. ತರುವಾಯದ ದಿನಗಳಲ್ಲಿ ಅನೇಕ ಪತ್ರಿಕೆಗಳು ಹುಟ್ಟಿಕೊಂಡುವು. ಅವುಗಳಲ್ಲಿ ಮುಖ್ಯವಾದುವು 'ಪ್ರವಾಸಿ', 'ಜ್ಯೋತಿ', 'ನವಚೇತನ', 'ನಾಡಪ್ರೇಮಿ' ಇತ್ಯಾದಿ. ಇವೆಲ್ಲ ಬಹುತೇಕ ಅನ್ಯ ಭಾಷಾ ಸುದ್ದಿಗಳನ್ನು, ಸಂಸ್ಕೃತಿಗಳನ್ನು ಕನ್ನಡದಲ್ಲಿ ನೀಡಿದ ಪತ್ರಿಕೆಗಳು. ಇಂದಿಗೂ ಕಾಸರಗೋಡಿನಿಂದ ಅನೇಕ ಕನ್ನಡ ಪತ್ರಿಕೆಗಳು ಪ್ರಕಟವಾಗುತ್ತಿವೆ. ಅವುಗಳಲ್ಲಿ ಮುಖ್ಯವಾದುವು 'ಪ್ರತಿಸೂರ್ಯ', 'ಕಾರವಲ್', 'ಕಾಸರಗೋಡು ಸಮಾಚಾರ', 'ಬಯ್ಯಮಲ್ಲಿಗೆ'. ಸಂಜೆ ದೈನಿಕಗಳಾಗಿರುವ ಇವು ಬಹುತೇಕವಾಗಿ ಭಾಷಾಂತರಗಳ ಮೂಲಕ ಪುಟ ತುಂಬಿಕೊಳ್ಳುವ ಸ್ಥಳೀಯ ಪತ್ರಿಕೆಗಳಾಗಿವೆ. ಇವುಗಳಿಗೆ ಮೊದಲ ಆಕರ ಮಲಯಾಳಂ ದೈನಿಕಗಳು. ರಾಜ್ಯಮಟ್ಟದ ಮಲಯಾಳಂ ದೈನಿಕಗಳು ಪ್ರಕಟಿಸಿದ ಸ್ಥಳೀಯ ಸುದ್ದಿಗಳನ್ನು ಭಾಷಾಂತರ ಮಾಡುವುದರ ಮೂಲಕ, ಈ ಕನ್ನಡ ಪತ್ರಿಕೆಗಳ ದಿನದ ಕೆಲಸ ಆರಂಭವಾಗುತ್ತದೆ. ಬಳಿಕ ಸ್ಥಳೀಯ ಪೋಲೀಸ್ ಠಾಣೆಗಳಲ್ಲಿ ದಾಖಲಾದ ದೂರುಗಳು, ಸರಕಾರೀ, ಆಸ್ಪತ್ರೆಗಳಲ್ಲಿ ದಾಖಲಾದ ರೋಗಿಗಳು, ಗಾಯಾಳುಗಳು ನೀಡುವ ಮಾಹಿತಿ, ಇವೆಲ್ಲವುಗಳನ್ನು ವರದಿ ಮಾಡುವಾಗ ವರದಿಗಾರರು ಯಾವುದೇ ಭಾಷೆಯಲ್ಲಿ ಮಾಹಿತಿ ಪಡೆದಿದ್ದರೂ, ತಾವು ಬರೆಯುತ್ತಿರುವ ಪತ್ರಿಕೆಯ ಅಗತ್ಯಕ್ಕನುಗುಣವಾಗಿ ವರದಿ ಮಾಡುತ್ತಾರೆ. ವರದಿಯ ಭಾಷೆ, ಸ್ವರೂಪ, ಇವೆಲ್ಲ ಸಂದರ್ಭಗಳಲ್ಲೂ ಭಾಷಾಂತರ ಕ್ರಿಯೆ ಮುಖ್ಯವೆನಿಸದೆ, ಪತ್ರಿಕೆಯ ಮನೋಧರ್ಮವೇ ಮುಖ್ಯವೆನಿಸುತ್ತದೆ. ಇದನ್ನು ಬಹುಭಾಷಾ ಪ್ರದೇಶದಲ್ಲಿ ಏಕಭಾಷಾ ವರದಿ ಮಾಡುವವರ ವಿಶಿಷ್ಟತೆ ಎಂದು ಕರೆಯಬಹುದು. ಈ ವರದಿಗಾರರೇ ನಿಜವಾದ ಭಾಷಾಂತರಕಾರರು. ಇವರಿಗೆ ಜವಾಬ್ದಾರಿ ಹೆಚ್ಚು. ಸಮಯಾವಕಾಶ ಕಡಿಮೆ. ಸಲಹೆ, ಸೂಚನೆಗಳ ನೆರವಿಗೂ ಆಸ್ಪದವಿಲ್ಲ. ವರದಿಗಾರನೊಬ್ಬನೇ ಹೇಳಬೇಕಾದುದನ್ನು ಪತ್ರಿಕಾ ಚೌಕಟ್ಟಿನೊಳಗೆ, ಪತ್ರಿಕೆಯ ಸ್ಥಳಾವಕಾಶಕ್ಕೆ ಅನುಗುಣವಾಗಿ ಹೊಂದಿಸುವ ಅನಿವಾರ್ಯ ಸನ್ನಿವೇಶದಲ್ಲಿ ಭಾಷಾಂತರ ಕ್ರಿಯೆ ನಡೆಯುತ್ತದೆ. ವರದಿ ಬರೆಯುವ ಮತ್ತು ಮುದ್ರಣಗೊಳ್ಳುವ ನಡುವಿನ ಸಮಯಾವಕಾಶ ಅತ್ಯಂತ ಕಡಿಮೆ. ಅದೂ ಅಲ್ಲದೆ ಪತ್ರಿಕೆಯ ಅಗತ್ಯಕ್ಕೆ ಅನುಗುಣವಾಗಿ ವರದಿಯನ್ನು ಹಿಗ್ಗಿಸುವ, ಹಾಗೂ ಕುಗ್ಗಿಸುವ ಅನಿವಾರ್ಯತೆಯೂ

ಇವರ ಮುಂದಿರುತ್ತದೆ. ಅದಕ್ಕಾಗಿ ನಿರ್ದಿಷ್ಟವಾದ ಶೀರ್ಷಿಕೆಯನ್ನು ಪತ್ರಿಕೆಯೂ ರೂಪಿಸ ಬೇಕಾಗುತ್ತದೆ. ಅದು ಓದುಗರ ಗಮನ ಸೆಳೆಯುವಂತೆ ಇರಬೇಕಾಗುತ್ತದೆ. ಸುದ್ದಿಯ ತಾಜಾತನವನ್ನು ಉಳಿಸಿ ಕೊಳ್ಳಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ವರದಿಗಾರನ ಭಾಷಾಂತರ ಅತ್ಯಂತ ಜವಾಬ್ದಾರಿಯುತ ಆಗಿರುತ್ತದೆ. ಹಾಗೆಯೇ ಯಾಂತ್ರಿಕವಾದುದೂ ಆಗಿರುತ್ತದೆ. ಇಲ್ಲಿ ಭಾಷಾಂತರ ಕ್ರಿಯೆಯ ಮಾನದಂಡಗಳು ಸಾಹಿತ್ಯಕ ಆಗಿರುವುದಿಲ್ಲ. ಬದಲಾಗಿ ಪತ್ರಿಕೆಯ ತಾಂತ್ರಿಕ ಅನುಕೂಲತೆಗಳನ್ನು ಆಧರಿಸಿಯೇ ರೂಪಿಸಿಕೊಂಡ ಮಾನದಂಡಗಳಾಗಿರುತ್ತವೆ.

ಒಬ್ಬ ಸೃಜನಶೀಲ ಭಾಷಾಂತರಕಾರರಿಗಿಂತ ವರದಿಗಾರರ ಭಾಷಾಂತರವು ಈ ನೆಲೆಯಲ್ಲಿ ಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ಭಾಷಾಂತರಕಾರರಿಗೆ ಅನುವಾದದ ಮೊದಲ ಪ್ರತಿ ಸಿದ್ಧ ಮಾಡಿಕೊಂಡ ಬಳಿಕ, ಚಿಂತಿಸಿ,ಸಲಹೆ ಸೂಚನೆ ಪಡೆದು, ಬೇಕಾದಂತೆ ಪದಗಳನ್ನು ಬಳಿಕ ಬದಲಿಸಬಹುದು. ಮತ್ತೆ ಮತ್ತೆ ಓದಿ ಭಾಷಾಂತರಗೊಂಡ ಕೃತಿಯ ಭಾಷೆ, ವಾಕ್ಯ ರಚನೆಗಳು ಇತ್ಯಾದಿಗಳನ್ನು ಸರಿಯಾಗಿವೆಯೇ ಎಂದು ಖಚಿತಪಡಿಸಿಕೊಳ್ಳಬಹುದು. ಆದರೆ ಪತ್ರಿಕಾ ವರದಿ ಮಾಡುವ ಭಾಷಾಂತರಕಾರ 'ಪದವಿಟ್ಟಳುಪದೊಂದಗ್ಗಳಿಕೆ'ಯನ್ನು ಉಳಿಸಿಕೊಳ್ಳ ಬೇಕಾಗುತ್ತದೆ. ಈ ಅಗ್ಗಳಿಕೆ ಭಾಷಾಂತರಕಾಗನ ಹಿರಿಮೆಗಿಂತಲೂ ಪತ್ರಿಕೆಯ ತಾಂತ್ರಿಕ ಚೌಕಟ್ಟಿಗೆ ಸಂಬಂಧಿ ಸಿದುದು. ಇಲ್ಲಿನ ಭಾಷಾಂತರಕಾರನಿಗೆ ಅನೇಕ ಪರಿಮಿತಿಗಳಿವೆ. ಈ ಪರಿಮಿತಿಗಳ ನೆಲೆಯಲ್ಲಿ ಭಾಷಾಂತರದ ಮೂಲಕ ರೂಪುಗೊಂಡ ವರದಿ, ಪ್ರಕಟವಾದ ಬಳಿಕ ಬೇರೆತೆರನಾಗಿ ಯೋಜಿಸ ಬಹುದಿತ್ತು ಎಂದು ಅನ್ನಿಸುವುದು ಇದೆ. ಅಂತಿಮವಾಗಿ ಅವರ ಭಾಷೆಯಲ್ಲಿ ಕೆಲವು ಅಸಹಜತೆಗಳು ಉಳಿದು ಬಿಡುತ್ತವೆ.

ಹೀಗೆ ಆರಂಭವಾದ ಕಾಸರಗೋಡಿನಂತಹ ಪ್ರದೇಶದ ಕನ್ನಡ ಓದುಗನಿಗೆ ಕನ್ನಡ ಬಳಕೆಯ ಈ ಅಸಹಜತೆ ಸಾಮಾನ್ಯವಾಗಿ ಗೋಚರಿಸುವುದಿಲ್ಲ. ಮಲೆಯಾಳಂ ಭಾಷೆಯ ಸಂಪರ್ಕವಿಲ್ಲದ ಕನ್ನಡ ಓದುಗರು ಮಾತ್ರ ಈ ಕನ್ನಡ ಭಾಷೆಯಲ್ಲಿನ ಅಸಹಜ ಪ್ರಯೋಗಗಳನ್ನು ತಕ್ಷಣ ಗುರುತಿಸಬಲ್ಲರು. ಹಾಗೆಯೇ ಅವರು ಅರ್ಥ ಸಂವಹನದಲ್ಲಿ ಗೊಂದಲಕ್ಕೆ ಒಳಗಾಗಬಲ್ಲರು. ಕಾಸರಗೋಡಿನ ಕನ್ನಡ ಓದುಗರಿಗೆ ತುಳು, ಮಲಯಾಳಂ ಮಿಶ್ರಿತ ಕನ್ನಡವು ಸಂವಹನಕ್ಕೆ ತೊಡಕಾಗುವುದಿಲ್ಲ. ಈ ನೆಲೆಯಲ್ಲಿ ಒಂದು ಭಾಷಾ ಪ್ರದೇಶದಲ್ಲಿ ಭಾಷಾಂತರ ಮಾಡುವ ವರದಿಗಾರರು, ಹೊಸ ಕನ್ನಡವೊಂದನ್ನು ಸೃಷ್ಟಿಸುವಲ್ಲಿ ಮೊದಲಿಗರಾಗುತ್ತಾರೆ. ಸಾಮಾನ್ಯವಾಗಿ ಪತ್ರಿಕೆಯ ವರದಿ ಓದುಗರಿಗೆ ಅರ್ಥವಾಗುವಂತೆ ಬರೆಯುವುದು ಮಾತ್ರವಾಗಿರುತ್ತದೆ. ಆದರೆ ಅದು ಜೊತೆಗೆ ಅನ್ಯ ಭಾಷಾ ಪ್ರಭಾವಿರುವ ಪ್ರದೇಶಗಳಲ್ಲಿ, ಕನ್ನಡದ ಅಸ್ತಿತ್ವವನ್ನು ಉಳಿಸಿ ಕೊಳ್ಳುವ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ.

ಬಹುಭಾಷಾ ಪ್ರದೇಶಗಳಲ್ಲಿ ಸಾಂಸ್ಕೃತಿಕವಾಗಿಯೂ ವಿಭಿನ್ನ ಸನ್ನಿವೇಶಗಳಿರುತ್ತವೆ. ಕಾಸರಗೋಡಿನಂತಹ ಪ್ರದೇಶದಲ್ಲಿ ತುಳು, ಮಲಯಾಳಂ ಸಂಸ್ಕೃತಿಗಳ ಸಂಗತಿಗಳನ್ನು ಕನ್ನಡದಲ್ಲಿ ವರದಿ ಮಾಡುವಾಗ ಅನೇಕ ಗೊಂದಲಗಳುಂಟಾಗುತ್ತವೆ. ಹಾಗೆ ಸಾಂಸ್ಕೃತಿಕ

ವರದಿಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಮಾತ್ರವೇ ಮಾಡಲಾಗುತ್ತದೆ. ಸಾಮಾನ್ಯವಾಗಿ ಬಳಕೆಯಾಗುವ ಪದಗಳಿಗೂ ಸ್ಥಳೀಯವಾಗಿ ಸಾಂಸ್ಕೃತಿಕ ವಿಶಿಷ್ಟಾರ್ಥಗಳಿರುತ್ತವೆ.

ಉದಾ: ತುಳು ಸಾಂಸ್ಕೃತಿಕ ಸಂದರ್ಭದಲ್ಲಿ 'ಕೈ ಪತ್ತಾವುಣೆ' ಎನ್ನುವುದು ತುಳು ಮನೆ ಮಾತಿನ ಸಮುದಾಯವೊಂದರ ಮದುವೆಯನ್ನು ಸೂಚಿಸುತ್ತದೆ. ಇದರರ್ಥ ಕೈ ಹಿಡಿಸುವುದು. ಎಂದರೆ ಮದುವೆ ಮಾಡಿಸುವುದು ಎಂದೇ ಅರ್ಥ. ಆದರೆ ವರದಿಯೊಂದರಲ್ಲಿ 'ಕೈ ಹಿಡಿದರು' ಎಂದು ಬರೆಯಲಾಗಿತ್ತು. ಅದನ್ನು ಹಿರಿಯರೊಬ್ಬರು ಆಕ್ಷೇಪಿಸುತ್ತ 'ಕೈ ಹಿಡಿಯುವುದು ಶೂದ್ರ ಸಂಸ್ಕೃತಿ, ವೈದಿಕರಲ್ಲಿ ಕೈ ಹಿಡಿಯುವುದಷ್ಟೇ ಇಲ್ಲ. ಮದುವೆಯ ಧಾರ್ಮಿಕ ವಿಧಿಗಳೂ ಇವೆ ಎಂದು ಅವರು ಬರೆದಿದ್ದರು. 'ಉದ್ಘಾಟನಾ ಕರ್ಮ ನೆರವೇರಿಸಿದರು' ಎಂಬುದುದನ್ನು ಹಾಗೆಯೇ ಅನುವಾದಿಸಿ ಪ್ರಕಟಿಸಲಾಗಿತ್ತು. ಆಗ 'ಉದ್ಘಾಟನೆ' ಎಂಬುದು ಒಳ್ಳೆಯ ಕೆಲಸ. ಕಾರ್ಯ ಎಂದರೆ ಕೆಟ್ಟ ಕೆಲಸ ಎಂಬ ಅರ್ಥ ಬರುತ್ತದೆ' ಎಂದು ಒಬ್ಬರು ಸಲಹೆ ನೀಡಿದ್ದರು. ಕಾಸರಗೋಡು, ದಕ್ಷಿಣ ಕನ್ನಡದ ಪ್ರದೇಶಗಳಲ್ಲಿ ದೈವಗಳ ಆರಾಧನೆ ನಡೆಯುತ್ತವೆ. ಹಾಗೆ ನಡೆಯುವ ದೈವದ ಕೋಲಗಳನ್ನು 'ಭೂತಾರಾಧನೆ' ಎಂದು ಬರೆದುದಕ್ಕೆ ಒಬ್ಬ ಓದುಗರು, ಆಕ್ಷೇಪ ಎತ್ತಿದ್ದರು. ದೈವದ ಕೋಲ, ಕೇರಳದ್ದಾದರೆ 'ತೆಯ್ಯಂ ಕೆಟ್ಟ್' ಎಂದು ಬರೆಯಬೇಕೆಂದು ಸೂಚಿಸಿದ್ದರು. ಪತ್ರಿಕೆಗಳು ('ಉದಯವಾಣಿ' ಸಹಿತ) 'ತೆಯ್ಯಂ ಕೆಟ್ಟ್ ಮಹೋತ್ಸವ' ಎಂದೇ ವರದಿ ಮಾಡುತ್ತವೆ. ಈ ಮಹೋತ್ಸವದ ಅರ್ಥ 'ಕೆಟ್ಟ್' ಪದದಲ್ಲಿ ಒಳಗೊಂಡಿವೆ. ತುಳು ಹಾಗೂ ಕೇರಳದ ಎರಡೂ ಸಂದರ್ಭಗಳಲ್ಲೂ ದೈವದ ಕೋಲ ಎಂಬುದು ಸಮಾನವಾಗಿ ಬಳಸಬಹುದಾದ ಪದ ಎಂಬುದು ಅವರ ಅಭಿಪ್ರಾಯವಾಗಿತ್ತು. ಏಕೆಂದರೆ ಭೂತ ಪ್ರೇತಗಳು ಕ್ಷುದ್ರ ಶಕ್ತಿಗಳು. ಅವು ಕೆಡಕನ್ನುಂಟು ಮಾಡುವವುಗಳು. ಅವುಗಳನ್ನು ಜನ ಆರಾಧಿಸುವುದಿಲ್ಲ. ದಕ್ಷಿಣ ಕನ್ನಡ ಹಾಗೂ ಕೇರಳದ ದೈವಗಳು, ಅಲ್ಲಿನ ಜನರನ್ನು ರಕ್ಷಿಸುವ ಗ್ರಾಮ ದೇವತೆಗಳೇ ಹೌದು. ಹಾಗಾಗಿ ಒಂದು ಸಾಂಸ್ಕೃತಿಕ ಸನ್ನಿವೇಶದಲ್ಲಿ ಬದುಕುವ ಜನರ ಘಟನೆಗಳನ್ನು ಇನ್ನೊಂದು ಸಾಂಸ್ಕೃತಿಕ ಸನ್ನಿವೇಶದ ಜನರಿಗೆ ಹೇಳುವ ಸಂದರ್ಭದಲ್ಲಿ, ಎಚ್ಚರಿಕೆ ವಹಿಸ ಬೇಕಾಗುತ್ತದೆ. ಇತರ ಭಾಷಾಂತರ ಕೃತಿಗಳಂತೆ ಟಿಪ್ಪಣಿಗಳನ್ನು, ಸಾಂಸ್ಕೃತಿಕ ಪದಗಳ ಅರ್ಥಗಳನ್ನು ದೀರ್ಘವಾಗಿ ವಿವರಿಸುವ ಅವಕಾಶಗಳು ವರದಿಯ ಸಂದರ್ಭದಲ್ಲಿ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಅಪಾರ್ಥಗಳಿಗೆ ಎಡೆಕೊಡದಂತೆ ವರದಿ ಮಾಡಬೇಕಾದ ಜವಾಬ್ದಾರಿ ವರದಿಗಾರರದಾಗಿರುತ್ತದೆ.

ನಾನು 'ಪ್ರತಿಸೂರ್ಯ' ಪತ್ರಿಕೆಯಲ್ಲಿ ಸಹ ಸಂಪಾದಕನಾಗಿ ಕೆಲಸ ನಿರ್ವಹಿಸುತ್ತಿದ್ದಾಗ, ಹಿರಿಯ ಪತ್ರಕರ್ತರೊಬ್ಬರು ವರದಿಯೊಂದನ್ನು ನನ್ನ ಗಮನಕ್ಕೆ ತಂದರು. ಅದು ಭಾಷಾಂತರ ರೂಪದ ವರದಿ. ಅದು ಹೀಗಿತ್ತು. "ಮಲಬಾರದ ಮೂವರ ದಸ್ತಗಿರಿ: ನಗರದಲ್ಲಿ ಸಂಶಯಾಸ್ಪದ ವಾಗಿ ತಿರುಗಾಡುತ್ತಿದ್ದ ಮಲಬಾರಿನವರು ಎನ್ನಲಾದ ಮೂವರನ್ನು ಪೋಲೀಸರು ದಸ್ತಗಿರಿ ಮಾಡಿದರು". ಇದನ್ನು ಓದಿದ ತಕ್ಷಣ ನನಗೆ ಅಪಾರ್ಥಕ್ಕೆ ಎಡೆ ಮಾಡಿದಂತೆ ಅನ್ನಿಸಲೇ ಇಲ್ಲ. ಕೊನೆಗೆ ಅದರ ಅಪಾರ್ಥ ಸಾಧ್ಯತೆಗಳನ್ನು ನನ್ನ ಗಮನಕ್ಕೆ ತಂದರು. ಅದನ್ನು

'ಮಲಬಾರಿನ ಮೂವರ ದಸ್ತಗಿರಿ' ಎಂದು ಭಾಷಾಂತರಿಸಿದ್ದರೆ ಅಪಾರ್ಥಕ್ಕೆ ಅವಕಾಶವಿರುತ್ತಿರಲಿಲ್ಲ.

> "ಜಿಲ್ಲೆಯ ಶಾಲೆಗಳಲ್ಲಿ ನಾಲ್ಕು ಸಾವಿರ ವಿದ್ಯಾರ್ಥಿಗಳ ಕುಸಿತ-ಕಾಸರಗೋಡು: ಜಿಲ್ಲೆಯ ಐಡೆಡ್ ಸರಕಾರಿ ಶಾಲೆಗಳಲ್ಲಿ ಕಳೆದ ವರ್ಷಕ್ಕಿಂತ ೪೯೫೫ ವಿದ್ಯಾರ್ಥಿಗಳು ಈ ವರ್ಷ ಕಡಿಮೆಯಾಗಿದ್ದಾರೆ. ೧ ನೇ ತರಗತಿಗೆ ಪ್ರವೇಶ ಪಡೆದವರಲ್ಲಿ ೧೧೧೬ ವಿದ್ಯಾರ್ಥಿಗಳ ಕುಸಿತ ಕಂಡಿದೆ."

ಈ ವರದಿಯಲ್ಲಿ ವಿದ್ಯಾರ್ಥಿಗಳು ಕುಸಿದರು ಎಂದೇ ಅರ್ಥ ಬರುತ್ತದೆ. ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಕುಸಿತ ಎಂಬುದು ವರದಿ ಓದಿದ ತರುವಾಯ ಸ್ಪಷ್ಟವಾಗುತ್ತಾದರೂ, ಅಕ್ಷರಶಃ ಶೀರ್ಷಿಕೆ ವಿದ್ಯಾರ್ಥಿಗಳು ಕುಸಿದರು ಎಂದೇ ಹೇಳುತ್ತದೆ. ಇದು ಭಾಷಾ ರಚನೆ ಮತ್ತು ಅರ್ಥದ ಕಡೆಗೆ ಗಮನ ಕೊಡದೆ ಕನ್ನಡೀಕರಣಗೊಳಿಸಿದುದರ ಪರಿಣಾಮ ಎಂದು ಹೇಳಬಹುದು.

ಮಲಯಾಳಂ ಪತ್ರಿಕೆಗಳ ವರದಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದ ಮಾಡಿದ ವರದಿಗಳಲ್ಲಿ ಆ ಭಾಷೆಯ ಛಾಯೆ ದಟ್ಟವಾಗಿರುತ್ತದೆ:

> "ಅಧಿಕೃತರ ಅಸಡ್ಡೆಯಿಂದ ಸಾವಿರಾರು ಎಕರೆ ಕೃಷಿನಾಶ - ಕುಂಬಳೆ : ಅಧಿಕೃತರ ಅಸಡ್ಡೆಯಿಂದ ಸಾವಿರಾರು ಎಕರೆ ಕೃಷಿನಾಶಗೊಂಡ ಬಡ ಕೃಷಿಕರು ಸಂಕಟಪಡುವ ಸ್ಥಿತಿ ಬಂಬ್ರಾಣ ಗ್ರಾಮದಲ್ಲಿ ಉಂಟಾಗಿದೆ..... ಕಳೆದೆರಡು ವರ್ಷಗಳಿಂದ ಈ ರೀತಿ ಶೆಟ್ಟರ್ ಇಲ್ಲದೆ ಉಪ್ಪು ನೀರು ಹರಿಯುತ್ತಿದ್ದು, ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೂ ಸಮಸ್ಯೆಗೆ ಪರಿಹಾರ ಮಾಡಲು ಅಧಿಕೃತರು ತಯಾರಿಲ್ಲದಿರುವುದು ಖಂಡನೀಯವಾಗಿದೆ. ಇದೇ ರೀತಿ ಮುಂದುವರಿದರೆ ಇಲ್ಲಿನ ನೂರಾರು ಕುಟುಂಬಿಕರು ಕೃಷಿಯನ್ನು ಉಪೇಕ್ಷಿಸಿ ಅಲೆದಾಡಬೇಕಾದ ಪರಿಸ್ಥಿತಿ ಬರಬಹುದೆಂದು ಕೃಷಿಕರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ."

ಇಲ್ಲಿ 'ಅಧಿಕೃತರು' ಎಂಬುದು 'ಅಧಿಕಾರಿಗಳು' ಎಂಬ ಕನ್ನಡ ವರದಿಗೆ ಸಮಾನವಾದುದು. ಆದರೆ ಮಲಯಾಳಂನಲ್ಲಿ ಅಧಿಕೃತರು ಎಂದೇ ವರದಿ ಮಾಡಲಾಗುತ್ತದೆ. ಕೃಷಿಯನ್ನು ಉಪೇಕ್ಷಿಸಿ, ಕುಟುಂಬಿಕರು, ಕೃಷಿನಾಶ ಇತ್ಯಾದಿಗಳು ಮಲಯಾಳಂ ವರದಿಯ ಶೈಲಿ. ಅದನ್ನೇ ಇಲ್ಲಿ ಅನುಕರಿಸಿ ಭಾಷಾಂತರದಲ್ಲಿ ಉಳಿಸಿಕೊಳ್ಳಲಾಗಿದೆ.

"ಮನೆ ಮನೆಗಳಲ್ಲಿ ಕನ್ನಡ ಅಭಿಯಾನ"; 'ಚುನಾವಣಾ ಪ್ರಚಾರ ಪರ್ಯಟನೆ'; "ಸಾರ್ವಜನಿಕ ಸಹಭಾಗಿತ್ವದಲ್ಲಿ ತೆಂಗಿನಕಾಯಿ ಸಂಸ್ಕರಣ ಫ್ಯಾಕ್ಟರಿ"; 'ಉಪೇಕ್ಷಿತ ನೆಲೆಯಲ್ಲಿ ಸ್ಕೂಟರ್ ಪತ್ತೆ'; 'ವಾಹನ ಅವಘಡ'; 'ತೆಯ್ಯಂ ಕೆಟ್ಟ್ ಮಹೋತ್ಸವ'; 'ಖಾಸಗೀ ಬಸ್‌ಯಾನರದ್ದು'; 'ಕ.ಸಾ.ಪ. ಘಟಕ ರೂಪಣೆ'; ಇತ್ಯಾದಿ ವರದಿಗಳೆಲ್ಲ ಮಲಯಾಳಂನಿಂದ ನೇರ ಭಾಷಾಂತರ ಮಾಡಿದವುಗಳು. ಇಲ್ಲಿ ಮಲಯಾಳಂ ವರದಿಯ ದಟ್ಟ ಛಾಯೆಯಿದೆಯಾದರೂ ಕನ್ನಡ ಓದಿಗೆ, ಅರ್ಥ ಸಂವಹನಕ್ಕೆ ತೊಡಕಾಗುವುದಿಲ್ಲ. ಆದರೆ 'ದುರ್ಗಾ ಪರಮೇಶ್ವರಿ ಕ್ಷೇತ್ರ ಮಹೋತ್ಸವ' ಇಲ್ಲಿನ ಕ್ಷೇತ್ರ ಪದಕ್ಕೆ ದೇವಸ್ಥಾನ ಎಂದು ಮಹೋತ್ಸವ ಎಂಬುದಕ್ಕೆ ಜಾತ್ರೆ ಎಂದು ಅರ್ಥ ಮಾಡಿಕೊಳ್ಳಲು ಕಾಸರಗೋಡಿನವರನ್ನು ಹೊರತುಪಡಿಸಿ ಉಳಿದವರಿಗೆ ಕಷ್ಟ.

ವರದಿಯ ಭಾಷಾಂತರದಲ್ಲಿ ಅನೇಕ ವೇಳೆ ಭಾಷಾ ಶೈಲಿಯನ್ನೇ ಅಥವಾ ಧಾಟಿಯನ್ನೇ ಬದಲಿಸಿಕೊಂಡಿರುವುದು ಕಾಸರಗೋಡಿನ ಕನ್ನಡ ವರದಿಗಳಿಂದ ವೇದ್ಯವಾಗುತ್ತದೆ.

> 'ಧನ್ಯವಾದವಿತ್ತರು' (ಧನ್ಯವಾದ ಹೇಳಿದರು); 'ಶುಭಾಂಸನೆ ಗೈಯ್ಯುವರು' (ಶುಭ ಹಾರೈಸುವರು) 'ಉಪ ನಿರ್ದೇಶಕರ ಕಚೇರಿ ನೂತನ ಕಟ್ಟಡದಲ್ಲಿ ಕಾರ್ಯಾಚರಿಸುವುದು' (ಅಂದರೆ ಕಾರ್ಯಾರಂಭಿಸುವುದು. ಕನ್ನಡದ ಕಾರ್ಯಾಚರಣೆಗೆ ಬೇರೆಯೇ ಅರ್ಥವಿದೆ.) 'ವೇತನ ವರ್ಧನೆಯಾಗಲಿದೆ' (ವರ್ಧನೆ-ಹೆಚ್ಚಳ) 'ನೇಣು ಬಿಗಿದು ಆತ್ಮಹತ್ಯೆಗೈದರು' (ಆತ್ಮಹತ್ಯೆ ಮಾಡಿಕೊಂಡರು) (ಇಲ್ಲಿ ಕೊಲೆಗೈದರು ಎಂಬ ದ್ವಿತೀಯಾ ಪುರುಷದಲ್ಲಿ ಆತ್ಮಹತ್ಯೆಗೈದರು ಎಂದು ಬಳಸಲಾಗಿದೆ. 'ಜೀಪು ಕಳವಿಗೀಡಾಗಿರುವುದಾಗಿ ದೂರಲಾಗಿದೆ'.

ಈ ಎಲ್ಲಾ ವರದಿಗಳ ಭಾಷೆಯಲ್ಲಿ ಪ್ರಜ್ಞಾಪೂರ್ವಕವಾಗಿ ಮಲಯಾಳಂ ರೂಪವನ್ನು ಕನ್ನಡದ್ದೆಂದೇ ಬಳಸಲಾಗಿದೆ. ಭಾಷಾಂತರ ಮಾಡಿದ ಈ ವರದಿಗಳಲ್ಲಿ ಮಲಯಾಳಂ ಭಾಷೆಯ ಪ್ರಭಾವ ನಿಚ್ಚಳವಾಗಿದೆ. ಕನ್ನಡದ ಸಂದರ್ಭದಲ್ಲಿ ನೋಡಿದರೆ ಇಲ್ಲಿ ಭಾಷೆಯಲ್ಲಿನ ಅಸಹಜ ಬಳಕೆಯೂ ಗೋಚರಿಸುತ್ತದೆ.

ಬಹುಭಾಷಾ ಪ್ರದೇಶವಾದ ಕಾಸರಗೋಡಿನಲ್ಲಿ ಸಾಮಾನ್ಯವಾಗಿ ಸಾರ್ವಜನಿಕರಿಂದ ಬರುವ ಪತ್ರಗಳಲ್ಲಿ ಅಥವಾ ಮಾಹಿತಿ ಸಂಗ್ರಹಿಸಿ ವರದಿ ಮಾಡುವಾಗ, ನಾಮಪದಗಳ ಬಳಕೆಯಲ್ಲಿ ಗೊಂದಲಕ್ಕೊಳಗಾಗುವುದು ಸಾಮಾನ್ಯ ಕಾಸರಗೋಡು ಮಲಯಾಳಂ ಆಡು ಭಾಷೆಯಲ್ಲಿ 'ಕಾಞ ಲೋಟು' ಎಂದಾಗುತ್ತದೆ. ಕೆಲವೊಮ್ಮೆ ಬರವಣಿಗೆಯಲ್ಲಿಯೂ ಹಾಗೆಯೇ ಇರುವುದೂ ಇದೆ. ಮಂಗಳೂರು ತುಳುವರ ಬಾಯಲ್ಲಿ 'ಕುಡ್ಲ' ಆದರೆ ಬ್ಯಾರಿ ಭಾಷೆಯಲ್ಲಿ 'ಮೈಕಳ' ಎನ್ನುವರು. ಕನ್ನಡಿಗರು ಗ್ರಾಮೀಣ ಪ್ರದೇಶದಲ್ಲಿ 'ಕೊಡಿಯಾಲ' ಎಂದರೆ ಮಲಯಾಳಂ ಮಾತು ಮತ್ತು ಬರವಣಿಗೆಯಲ್ಲಿ 'ಮಂಗಳಾಪುರಂ' ಎಂದೇ ಬಳಕೆಯಾಗುತ್ತದೆ. ಈ ಎಲ್ಲಾ ಹೆಸರುಗಳೂ ಮಂಗಳೂರನ್ನೇ ನಿರ್ದೇಶಿಸುತ್ತವೆ ಎಂಬುದನ್ನು ವರದಿಗಾರರು ತಿಳಿದಿರ ಬೇಕಾಗುತ್ತದೆ. ಕರ್ನಾಟಕದ ಕೊಲ್ಲೂರು ಮಲಯಾಳಿಗರಿಗೆ 'ಮೂಕಾಂಬಿ'ಯಾಗುತ್ತದೆ. ಮಲಯಾಳಂನಲ್ಲಿ ಮೋಹನ, ವಿಜಯ, ಗಣಪತಿ ಇವೆಲ್ಲ ಸ್ತ್ರೀ ನಾಮಗಳು. ಇವು ಪುರುಷ ವಾಚಕವಾಗಬೇಕಾದರೆ ಮೋಹನ್/ಮೋಹನನ್, ವಿಜಯನ್ ಎಂದು ಬಳಸಬೇಕಾಗುತ್ತದೆ.

'ಮಲಯಾಳಂ' ಎನ್ನುವ ಪದವನ್ನು ಕನ್ನಡದ ಪತ್ರಿಕೆಗಳು, ಪುಸ್ತಕಗಳು ಬೇರೆ ಬೇರೆ ರೀತಿಯಲ್ಲಿ ರೂಢಿಗೆ ತಂದಿವೆ. ಮಳಯಾಳ, ಮಳೆಯಾಳ, ಮಲೆಯಾಳ, ಮಳಿಯಾಳಿ, ಮಳಯಾಳಿ, ಮಲೆಯಾಳಂ, ಮಳೆಯಾಳಂ ಹಾಗೆ ಸುಮಾರು ಏಳು ರೀತಿಯ ಪ್ರಯೋಗಗಳು ಕನ್ನಡದಲ್ಲಿ ದೊರೆಯುತ್ತವೆ. ಕನ್ನಡ ಪತ್ರಿಕೆಗಳು ಬರೆಯುತ್ತಿವೆ. ಆದರೆ ನಿಜವಾದ ರೂಪ 'ಮಲಯಾಳಂ'. ಹಾಗೆಯೇ 'ಕೋಟಯಂ' ಎಂಬ ಹೆಸರನ್ನು ಕನ್ನಡದಲ್ಲಿ 'ಕೊಟ್ಟಾಯಂ' ಎಂದೇ ಪತ್ರಿಕೆಗಳು ರೂಢಿಗೆ ತಂದಿವೆ. ಈ ಎಲ್ಲಾ ಸಂದರ್ಭಗಳಲ್ಲೂ ರೂಢಿಯಲ್ಲಿ ಬಂದ ರೂಪ ನಿರ್ದಿಷ್ಟವಾದ ಅರ್ಥ ಕೊಡುತ್ತಿದೆ ಎನ್ನುವುದನ್ನು ಮಾತ್ರ ಅಲ್ಲಗಳೆಯುವಂತಿಲ್ಲ.

ಇದು ಇತರ ಭಾಷಾ ಪ್ರದೇಶಗಳ ವರದಿಗಳ ಸಂದರ್ಭದಲ್ಲಿ ಆಯಾ ಭಾಷಾ ಜ್ಞಾನದ ಕೊರತೆಯಿಂದಾಗುವ ಅನಿವಾರ್ಯ ದೋಷಗಳು ಎಂದು ನಾವು ತಿಳಿಯಬಹುದು.

ಪತ್ರಿಕಾ ಜಾಹಿರಾತುಗಳನ್ನು ಬರೆಯುವಾಗಲೂ ಭಾಷಾಂತರ ಕ್ರಿಯೆ ಜಾಹಿರಾತುದಾರರ ಮರ್ಜಿಗೆ ಅನುಸರಿಸಿ ಭಾಷೆಯನ್ನು ಬಳಸಬೇಕಾಗುತ್ತದೆ. ಮಲಯಾಳಂ ಭಾಷೆಯಲ್ಲಿ ಬಳಸಿದ ಮಾತುಗಳನ್ನೇ ಹೋಲುವ ಪದಗಳು ಕನ್ನಡ ಜಾಹಿರಾತಿನ ಸಂದರ್ಭದಲ್ಲೂ ಇರಬೇಕೆಂದು ಅವರು ಬಯಸುತ್ತಾರೆ. ಹಾಗಾಗಿ ಜಾಹಿರಾತಿಗೆ ಭಾಷಾಂತರವನ್ನು ಮಲಯಾಳಂಗೆ ಪರಿಚಯವಿರುವ ಪದಗಳ ಮೂಲಕವೇ ಮಾಡಬೇಕಾದ ಅನಿವಾರ್ಯತೆ ಪತ್ರಿಕೆಗಳಿಗೆ ಉಂಟಾಗುತ್ತದೆ.

ಉದಾಹರಣೆಗೆ ಸಹಕಾರಿ ಸಂಘವೊಂದರ ವಾರ್ಷಿಕ ಮಹಾಸಭೆಯ ಜಾಹಿರಾತಿನಲ್ಲಿ "೧೯೯೭-೯೮ ಲೆಕ್ಕ ಪರಿಶೋಧನೆಯ ಸರ್ಟಿಫಿಕೇಟು ಮಹಾಸಭೆಯ ಅಂಗೀಕಾರಕ್ಕಾಗಿ ಮಂಡಿಸುವಿಕೆ" ಎಂದು ಮುದ್ರಿಸಲಾಗಿತ್ತು. ಇಲ್ಲಿನ ಎಲ್ಲಾ ಪದಗಳೂ ಮಲಯಾಳಿಗರಿಗೆ ಪರಿಚಿತವಾದವುಗಳೇ.

ಇನ್ನೊಂದು ಜವುಳಿ ಮಳಿಗೆಯ ಜಾಹಿರಾತಿನ ಭಾಷೆ ಹೀಗಿತು :

"ಅತ್ಯಾಕರ್ಷಕ ಫೇನ್ಸಿ ಸಾರಿಗಳ ಬೃಹತ್ ಸಂಗ್ರಹ
ವಿಶ್ವಸನೀಯ ಸಂಸ್ಥೆಯ ಅವಿಶ್ವಸನೀಯ ದರಗಳ ಮಾರಾಟ"

ಹೀಗೆ ಮಲಯಾಳಿಗರಿಗೂ ಪರಿಚಿತವಾದ ಪದಗಳ ಬಳಕೆಯ ಮೂಲಕ, ಜಾಹಿರಾತಿನ ವಿಶ್ವಸ್ಥತೆಯನ್ನು ಮಲಯಾಳಂ ಜಾಹಿರಾತುದಾರರು ಖಚಿತಪಡಿಸಿಕೊಳ್ಳುತ್ತಾರೆ. "ಮಖಾಂ ಊರೂಸ್" 'ಊರೂಸ್ ನೇರ್ಚೆ' ಇತ್ಯಾದಿ ಸಾಂಸ್ಕೃತಿಕ-ಧಾರ್ಮಿಕ ವಿಶಿಷ್ಟ ಸಂದರ್ಭ ಪದಗಳನ್ನು ಯಾವ ಕಾರಣಕ್ಕೂ ಭಾಷಾಂತರ ಮಾಡುವಂತಿಲ್ಲ. 'ನೇರ್ಚೆ' ಎನ್ನುವುದನ್ನು 'ಹರಕೆ' ಎಂದು ಭಾಷಾಂತರಿಸುವಂತಿಲ್ಲ.

ಒಂದು ಕೃತಿ ಭಾಷಾಂತರಗೊಂಡು ಪ್ರಕಟವಾಗುವುದಕ್ಕೂ ಒಂದು ವರದಿ ಭಾಷಾಂತರಗೊಂಡು ಪ್ರಕಟವಾಗುವುದಕ್ಕೂ ಒಂದು ವರದಿ ಭಾಷಾಂತರಗೊಂಡು ಪ್ರಕಟವಾಗುವುದಕ್ಕೂ ವ್ಯತ್ಯಾಸವಿದೆ. ಕೃತಿಗಿಂತ ಪತ್ರಿಕೆಗಳಿಗೆ ಓದುಗರು ಅಧಿಕ. ಮತ್ತು ಅದರ ಪರಿಣಾಮ ಆಯಾ ಪ್ರದೇಶದ ಓದುಗರ ಹಾಗೂ ಲೇಖಕರ ಮೇಲೆ ಆಗಿಯೇ ತೀರುತ್ತದೆ. ಹಾಗೆ ಈ ಪ್ರದೇಶದ ಸಾಂಸ್ಕೃತಿಕ ವಿವರಗಳು ಅಪಾರ್ಥಕ್ಕೆ ಗುರಿಯಾದುದರ ಬಗೆಗೆ ಒಂದೆರಡು ಉದಾಹರಣೆಯನ್ನು ಸಂಶೋಧನಾ ಕೃತಿಯೊಂದರಿಂದ (ಡಾ. ಉಪ್ಪಂಗಳ ರಾಮಭಟ್-ಗಡಿನಾಡು ಕಾಸರಗೋಡು) ಉಲ್ಲೇಖಿಸಬಹುದು.

ಚೇರಮಾನ್ ಪೆರುಮಾಲ್ (ಪ್ರ.೫೩) ಎಂದರೆ ಮಲಬಾರನ್ನು ಆಳಿದ ಒಬ್ಬ ರಾಜನ ಹೆಸರು. ಇದನ್ನು ಸಂಶೋಧಕರು 'ಚೇರಮಾನ್ ಪೆರುಮಾಳ್' ಎಂದೇ ಬರೆದಿದ್ದಾರೆ. (ಪ್ರ.೫೩) ಅದು ಆಂಗ್ಲದ ಚೇರ್‌ಮಾನ್ ಅಲ್ಲ. 'ಚೇರಮಾನ್' ಎಂದು ಈ ಪ್ರದೇಶದವರಲ್ಲದ ಕನ್ನಡಿಗರು ಅರ್ಥೈಸಿಕೊಳ್ಳುವುದು ಹೇಗೆ. "ಮೊಗೇರರ ಕಾವು ಎಂದರೆ ಮೊಗೇರರ ಕಾಡು ಎಂದರ್ಥ" (ಪ್ರ. ೧೫೨) ಎಂದು ಸಂಶೋಧಕರು ಹೇಳಿದ್ದಾರೆ. ಆದರೆ ಇಲ್ಲಿ ಕಾವು ಎಂದರೆ ಪವಿತ್ರತಾಣ, ಬನ

ಎಂದರ್ಥ. 'ಮೊಗೇರರ ಕಾಡಿ'ಗೆ ಅರ್ಥ ಬರಲಾರದು. ಹಾಗೆಯೇ ಮೂಲತಃ 'ಕೆಟ್ಟಿಲಮ್ಮ' ಎಂಬ ಪದವನ್ನು ಕಟ್ಟಿಲಮ್ಮ ಎಂದು ಅರ್ಥೈಸಿ ನಿಘಂಟುವಿನ ಅರ್ಥದಲ್ಲಿ 'ಕಟ್ಟಿಲ್' ಎಂದರೆ ಮಂಚ. ಕಟ್ಟಿಲಮ್ಮ ಎಂದರೆ ಮಂಚದಲ್ಲಿ ಕುಳಿತುಕೊಳ್ಳುವ ಯಜಮಾನಿ ಎಂದು ಹೇಳಲಾಗಿದೆ (ಪ್ರ.೧೪೨). ಆದರೆ ಕೆಟ್ಟಿಲಮ್ಮ ಎಂದರೆ 'ರಾಣಿ' ಎಂದರ್ಥ. ಎಂದರೆ 'ಕಟ್ಟಿಲ್' ಎಂಬ ಮಂಚದ ಮೂಲದಿಂದ ಹೊರಟ ಅರ್ಥ ಅಲ್ಲ ಇದು. ಇದನ್ನು 'ಇಲ್ಲ್' ಎಂಬ ಅರ್ಥದಿಂದ ಅರ್ಥೈಸಬೇಕು.

ಹೀಗೆ ಭಾಷಾಂತರ ವರದಿಗಳ ದೋಷಗಳು ಸದ್ಯಕ್ಕೆ ತಾತ್ಕಾಲಿಕವಾದರೂ, ಅವು ಸಮಕಾಲೀನ ಸಾಹಿತ್ಯ, ಸಂಶೋಧನಾ ಕ್ಷೇತ್ರದಲ್ಲಿ ಪರಿಣಾಮ ಬೀರಿಯೆ ಬೀರುತ್ತದೆ ಎಂಬುದು ಈ ಮೇಲಿನ ದೃಷ್ಟಾಂತದಿಂದ ತಿಳಿಯುತ್ತದೆ.

ಕೇರಳದ ನಂಬೂದಿರಿ ಬ್ರಾಹ್ಮಣರಲ್ಲಿ ಸ್ವಜಾತಿ ಹೆಣ್ಣಿನೊಂದಿಗೆ ಆಗುವ ವಿವಾಹಕ್ಕೆ 'ವೇಳಿ' ಎಂದೂ ನಾಯರ್ ಹೆಣ್ಣಿನೊಂದಿಗೆ ಆಗುವ ವಿವಾಹಕ್ಕೆ 'ಸಂಬಂಧ' ಎಂದೂ ಹೆಸರು. ಪತ್ರಿಕಾ ವರದಿಗೆ ಎಲ್ಲವೂ ಮದುವೆಯೆ. ಆದರೆ ಸಂಸ್ಕೃತಿ ಅಧ್ಯಯನ-ಸಂಶೋಧನೆಗಳಿಗೆ ಈ ಸಾಂಸ್ಕೃತಿಕ ವಿಶಿಷ್ಟ ಭಾಷೆಯ ಅರಿವಿರಲೇಬೇಕಾಗುತ್ತದೆ. 'ಅಕ್ಕ' ಎನ್ನುವುದಕ್ಕೆ ಮಲಯಾಳಂನಲ್ಲಿ ಹಲವು ಪ್ರಯೋಗಗಳಿವೆ. ನಂಬೂದಿರಿ ವರ್ಗದಲ್ಲಿ 'ಜ್ಯೆಷ್ಠತ್ತಿ', ಕ್ರಿಶ್ಚಿಯನರಲ್ಲಿ 'ಏಟತ್ತಿ', ನಾಯರ್ ಜನರಲ್ಲಿ 'ಓಪ್ಪೋಳ್', ಮುಸಲ್ಮಾನರಲ್ಲಿ 'ಇಞ', ಇತರ ಕೆಲವು ಜನರಲ್ಲಿ 'ಏಟಿ', ಸಾಮಾನ್ಯ ವ್ಯವಹಾರಿಕ ಭಾಷೆಯಲ್ಲಿ 'ಚೇಚಿ'- ಈ ಎಲ್ಲಾ ಪದಗಳ ಬಳಕೆ ವರದಿಗಾರರಿಗೆ ತಿಳಿದಿರಬೇಕಾದುದು ಅಗತ್ಯ.

ಪತ್ರಿಕಾ ವರದಿಗಾರರು ಭಾಷೆಯನ್ನು ತಾತ್ಕಾಲಿಕ ಅಗತ್ಯಕ್ಕಾಗಿ ಮಾತ್ರ ಬಳಸುವುದಲ್ಲ. ಅದನ್ನು ಓದುವ ಅನೇಕ ಓದುಗರಿದ್ದಾರೆ, ಅವರು ತಮ್ಮ ಭಾಷೆಯ ಜ್ಞಾನವನ್ನು ಪತ್ರಿಕಾ ಓದಿನ ಮೂಲಕ ವಿಸ್ತರಿಸಿಕೊಳ್ಳುತ್ತಿರುತ್ತಾರೆ. ಹಾಗೆಯೇ ಪತ್ರಿಕೆ ಬಳಸುವ ಭಾಷೆ, ಪದ ರಚನೆ ಇವೆಲ್ಲ ನಿರಂತರ ಪ್ರಯೋಗ, ಬಳಕೆ ಇವುಗಳಿಂದ ಚಾಲ್ತಿಗೆ ಬರುತ್ತವೆ. ಈ ಕಾರಣಕ್ಕಾಗಿ ಪತ್ರಿಕೋದ್ಯಮದಲ್ಲಾಗುವ ಪದ ಸೃಷ್ಟಿ, ವಿಶಿಷ್ಟ ಅರ್ಥಧಾರಣೆಯನ್ನು ಮಾಡಿಕೊಂಡಿರುತ್ತವೆ. ಬಳಕೆಯಾದಂತೆಲ್ಲ ಹೊಸ ಅರ್ಥಧಾರಣೆಯ ಪ್ರಕ್ರಿಯೆಗೆ ಒಳಗೊಂಡು ವ್ಯವಹಾರಿಕ ಕ್ಷೇತ್ರದಲ್ಲಿ ರೂಢಿಗೆ ಬರಬಹುದು. ಅರ್ಥಧಾರಣೆಯಲ್ಲಿ ವಿಫಲವಾದರೆ ವರದಿಯ ತಾತ್ಕಾಲಿಕ ಅಗತ್ಯ ಪೂರೈಸಿ ಮರೆಗೆ ಸರಿಯುತ್ತವೆ. ಹೀಗೆ ಪದಸೃಷ್ಟಿ, ಬಳಕೆ, ಅರ್ಥಧಾರಣೆ ಇವುಗಳ ಮೇಲೆ ಸಮಕಾಲೀನ ಸಾಂಸ್ಕೃತಿಕ ಪರಿಸರದ ಪ್ರಭಾವ ಮಾತ್ರ ಇದ್ದೇ ಇರುತ್ತದೆ. ಈ ಎಲ್ಲಾ ನೆಲೆಗಳಲ್ಲೂ ಪತ್ರಿಕೋದ್ಯಮದ ಭಾಷಾಂತರಕಾರರು ವರದಿಯ ಸಂದರ್ಭದಲ್ಲಿ ಗಮನ ಇರಿಸುವುದು ಅವಶ್ಯಕ.

ಇದನ್ನೆಲ್ಲ ಗಮನಿಸಿದರೆ ಬಹುಭಾಷಾ ಪ್ರದೇಶದಲ್ಲಿ ಏಕಭಾಷಾ ವರದಿ ಮಾಡುವವರ ಇತಿಮಿತಿಗಳು ಅವರಿಗೆ ಇರುವ ಅನುಕೂಲತೆಗಳು, ಪರಿಸರಗಳೇ ಕಾರಣವಾಗಿ ಭಾಷಾಂತರ ಕ್ರಿಯೆ ನಡೆಯುವುದು ಕಾಣಸುತ್ತದೆ. ಹಾಗೆಯೇ ಪತ್ರಿಕಾ ವರದಿಗಾರರು ಜವಾಬ್ದಾರಿಯುತ ಭಾಷಾಂತರಕಾರರು ಎಂಬುದನ್ನೂ ಸೂಚಿಸುತ್ತದೆ. ಈ ನೆಲೆಯ ಭಾಷಾಂತರ ಪ್ರಕ್ರಿಯೆಯಲ್ಲಿ ಬಹುಭಾಷಾ ಪ್ರದೇಶದ ಏಕಾಭಾಷಾ ವರದಿ ಮಾಡುವವರ ಕೊಡುಗೆ ಅನನ್ಯವಾಗಿದೆ.

‘ಹಕ್ಕೆಪೂಜೆ’ : ಸ್ತ್ರೀಯರ ಮೀಹದ ಆಚರಣೆ

● ಎಸ್ ಡಿ ಹೆಗ್ಗಡೆ

೧

ಹೆಣ್ಣು ಸಕಾಲದಲ್ಲಿ ಮೈನೆರೆದು ಪ್ರತಿತಿಂಗಳೂ ಬಹಿಷ್ಠೆಯಾಗುವುದು ನಿಸರ್ಗ ನಿಯಮ. ಅದು ಫಲವಂತಿಕೆ ಸಮೃದ್ಧಿಯ ಸಂಕೇತ. ಹೆಣ್ಣಿನ ಆರೋಗ್ಯ ಮೂಲವೂ ಹೌದು. ಭೂಮಿ, ನದಿ ವೃಕ್ಷಗಳು ವರ್ಷಕ್ಕೊಮ್ಮೆ ಬಹಿಷ್ಠೆಯಾಗಿ ಫಲನೀಡುತ್ತವೆ. ಭೂಮಿಯನ್ನು ‘ಕೆಡ್ಡಸ’[೧] ಎಂದೂ, ನದಿ ಹಳ್ಳ ಹೊಳೆ ಬಾವಿಯದನ್ನು ‘ಕರಿನೀರು ಬರುವುದು’[೨] ಎಂದೂ ವೃಕ್ಷದ್ದನ್ನು ‘ಅಂಕಲು ಒಡೆಯುವುದು’ ‘ಹೆಣೆ ಒಡೆಯುವುದು’ ‘ಹೆಡೆ ಒಡೆಯುವುದು’ ಎಂದೂ ಹೇಳುತ್ತಾರೆ. ವೃಕ್ಷಗಳು ಸಕಾಲದಲ್ಲಿ ಫಲ ನೀಡದೇ ಇದ್ದಾಗ ಅದಕ್ಕೆ ಮೊಳೆ ಹೊಡೆಯುವುದು, ರಂದ್ರ (ತೋಟೆ) ತೋಡುವುದು, ಗ್ರಹಣ ಕಾಲದಲ್ಲಿ ಯಾರಿಗೂ ಗೊತ್ತಾಗದಂತೆ ನಗ್ನರಾಗಿ ಒನಕೆಯಲ್ಲಿ ಹೊಡೆದು ಬರುವುದು ಮಾಡುತ್ತಾರೆ.[೩] ಇದಕ್ಕೆ ಕಾರಣ ಇಂದ್ರನು ತಾನು ಮಾಡಿದ ಬ್ರಹ್ಮಹತ್ಯಾ ದೋಷವನ್ನು, ಭೂಮಿ ನದಿ ವೃಕ್ಷ ಮತ್ತು ಸ್ತ್ರೀ ಈ ನಾಲ್ವರಿಗೆ ನಾಲ್ಕು ಭಾಗ ಮಾಡಿ ಹಂಚಿ ಕೊಟ್ಟ ಪರಿಣಾಮಗಳು ಎಂಬುದು ಪುರಾಣಗಳ ನಂಬಿಕೆಯಾಗಿದೆ.[೪]

ಪ್ರತಿ ತಿಂಗಳೂ ಹೆಣ್ಣು ಮೈನೆರೆದು ಮೂರು ದಿನ ಹೊರಗುಳಿದು ನಾಲ್ಕನೆಯ ದಿನ ಮಿಂದು ಮನೆಯೊಳಗೆ ಬರಬೇಕಾದರೆ, ಕೆಲವೊಮ್ಮ ಆಚರಣೆಗಳನ್ನು ನಸುಕಿನಲ್ಲಿ ಮಾಡುತ್ತಾಳೆ. ಇದನ್ನು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಕುಂಬಳೆ, ಕಾಸರಗೋಡು ಭಾಗಗಳಲ್ಲಿ ಮತ್ತು ಉತ್ತರ ಕರ್ನಾಟಕಗಳಲ್ಲಿ ‘ಹಕ್ಕೆಪೂಜೆ’ ಎಂದು ಕರೆಯುತ್ತಾರೆ. ಇದು ‘ಚೌಕಿಮನೆ’ಯಲ್ಲಿ ನಡೆಯುವ ಪೂಜೆಯಾಗಿದೆ. ಮ್ಯಾಲರಲ್ಲಿ ಇದು ಮುಟ್ಟಿನ ಮನೆಯಲ್ಲಿ ನಡೆಯುವ ‘ಗುಂಭಪೂಜೆ’ಯಾಗಿದೆ.[೫]

ಹಕ್ಕೆಪೂಜೆಯಲ್ಲಿ ಮಡಿವಾಳ (ವಣ್ಣಾನ್) ಮಡಿವಾಳ್ತಿ (ವಣ್ಣಾತ್ತಿ)[೬]ಯರ ಪಾತ್ರ ಬಹಳ ಮುಖ್ಯವಾದುದು. ಅಗಸರಿಗೆ ಕಾಯಿ ಕಡಿಗಳನ್ನು ಕೊಡುವ ಸಂಪ್ರದಾಯ ದೊಡ್ಡಾಟ ಬಯಲಾಟಗಳಲ್ಲಿ ಉತ್ತರ ಕರ್ನಾಟಕದಲ್ಲಿದ್ದರೆ, ಯಕ್ಷಗಾನ ಬಯಲಾಟದಲ್ಲಿ ‘ಚೌಕಿ ಮನೆ’[೭]ಯಲ್ಲಿ ನಡೆಯುವ ಗಣಪತಿ ಪೂಜೆ, ಕಿರೀಟ ಪೂಜೆಯಾಗಿದೆ. ಕಿರೀಟಕ್ಕೆ ಕುಂಭ ಮತ್ತು ಪಕ್ಕೆಗಳಿರುತ್ತವೆ.

೨

ಕಿಟೆಲ್‌ರವರು ತಮ್ಮ ಕನ್ನಡ ಇಂಗ್ಲಿಷ್ ಶಬ್ದಕೋಶದಲ್ಲಿ (ಪುಟ ೯೧೭) ಪಕ್ಕೆ, ಪಳ್ಕೆ, ಹಕ್ಕೆಯನ್ನು A dormitory, ಸೆಜ್ಜೆಮನೆ, ಶಯ್ಯಾಗೃಹ ಎಂದು ಕರೆದಿದ್ದಾರೆ. ಎಂ. ಮರಿಯಪ್ಪ ಭಟ್ಟರು ತಮ್ಮ A Havyaka English Dictionaryಯಲ್ಲಿ (ಪುಟ ೩೦೪) ಹಕ್ಕೆ ಎಂದರೆ a place for reposing, A bed for a woman during her mensus, ಎಂದಿದ್ದಾರೆ. ಪಟ್ಕೆ, ಪಕ್ಕೆ, ಪಳ್ಕೆ, ಹಕ್ಕೆ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಐದನೆಯ ಸಂಪುಟದಲ್ಲಿ (ಪುಟ ೫೪೭೦), ಹಾಸುಗೆ, ಶಯ್ಯೆ ಎಂದು, ಪ್ರಾಚೀನ ಕಾವ್ಯಗಳಲ್ಲಿಯ ಉದಾಹರಣೆಗಳನ್ನು ನೀಡಿದ್ದಾರೆ. 'ಪಕ್ಕೆವನೆ'ಯನ್ನು ಶಯ್ಯಾಗೃಹ ಎಂದೇ ಹೇಳಿದ್ದಾರೆ (ಪುಟ ೫೪೭೧). ಪಟ್ಕೆವೆಟ್ಟು, ಪಕ್ಕೆವೆಟ್ಟು, ಪಕ್ಕೆವೆಟ್ಟು ಎಂಬುದನ್ನು ಸೂರ್ಯನು ವಿಶ್ರಮಿಸುವ ಬೆಟ್ಟ, ಪಶ್ಚಿಮ ಬೆಟ್ಟ, ಪಡುವೆಟ್ಟ ಎಂದು ಹಿಂದಿನ ಕಾವ್ಯಗಳ ಉದಾಹರಣೆ ನೀಡಿ ತಿಳಿಸಿದ್ದಾರೆ. ಪಟ್ಕೆ ಸಾರ್ ಎಂಬುದಕ್ಕೆ ಹಾಸುಗೆಯನ್ನು ಸೇರು, ಮಲಗು ಎಂಬುದಾಗಿದೆ. ಇಲ್ಲೆಲ್ಲ ಹಕ್ಕೆಯ ಕುರಿತು ಮಾಹಿತಿ ಸಿಗುತ್ತದೆ ವಿನಾ, 'ಹಕ್ಕೆ ಪೂಜೆ'ಯ ಕುರಿತು ಎಲ್ಲಿಯೂ ಮಾಹಿತಿ ಇಲ್ಲ. ಉತ್ತರ ಕನ್ನಡ ಜಿಲ್ಲೆಯ ಎಲ್ಲ ಜಾತಿ-ಜನಾಂಗಗಳಲ್ಲಿ ಈ 'ಹಕ್ಕೆಪೂಜೆ' ಆಚರಣೆಯಲ್ಲಿದೆ.

೩

'ಹಕ್ಕೆಪೂಜೆ'ಯೆಂದರೆ ಹೆಣ್ಣು ಮೈನೆರೆದಾಗ ಚೌಕಿಮನೆಯಲ್ಲಿ ಮಾಡುವ ಪೂಜೆ. ಪ್ರತಿ ತಿಂಗಳೂ ಈ ಪೂಜೆಯನ್ನು ಮಾಡುತ್ತಾರೆ. ಪ್ರತಿದಿನ ಹೊಸ್ತಿಲ ಮೇಲೂ ಹಕ್ಕೆ ಬರೆದು ಪೂಜೆ ಮಾಡುತ್ತಾರೆ. ಮುಟ್ಟಿನ ಮನೆಯನ್ನು 'ಚೌಕಿಮನೆ' ಎಂದೇ ಕರೆಯುತ್ತಾರೆ. ಇಂದಿಗೂ ಚೌಕಿಮನೆಗಳು ಯಲ್ಲಾಪುರ ತಾಲೂಕು ಹಾಸಣಗಿಯಲ್ಲಿವೆ. ಇವು ಮನೆಯ ಹಿಂದೆ ಅಥವಾ ಮುಂದೆ ಇರುತ್ತವೆ. ಸ್ತ್ರೀಯರು ಮುಟ್ಟಾದಾಗ ಮತ್ತು ಬಾಣಂತಿಯರಾದಾಗ ಮೈಲಿಗೆಯ ದಿನಗಳಲ್ಲಿ ಇಲ್ಲಿ ಇರುತ್ತಾರೆ. ಗಂಡು ಮಗು ಹುಟ್ಟಿದರೆ ಜಾಗಟೆ (ಜವಟೆ) ಬಾರಿಸುತ್ತಾರೆ. ಹೆಣ್ಣು ಮಗು ಹುಟ್ಟಿದರೆ ಶಂಖ ಊದುತ್ತಾರೆ. ಗಂಡಿಗೆ ಸಕ್ಕರೆ ಕಾಯ್ಸುಳಿ ಹಂಚಿದರೆ, ಹೆಣ್ಣು ಹುಟ್ಟಿದಾಗ ಬೆಲ್ಲಕಾಯ್ಸುಳಿ ಹಂಚುತ್ತಾರೆ. ಹೆಂಡತಿ ಹಡೆದಾಗ ಗಂಡ ತನ್ನ ಸಂಬಂಧಿಕರಿಗೆ ಸಕ್ಕರೆ ಪೊಟ್ಟಣ ನೀಡುವ ಸಂಪ್ರದಾಯವಿದೆ. ಶೇಂಗಾ ಪೊಟ್ಟಣದಂತೆ ಉದ್ದವಾಗಿ ಸಕ್ಕರೆ ಪೊಟ್ಟಣ ಕಟ್ಟಿದರೆ ಗಂಡು ಎಂದು ತಿಳಿಯುತ್ತಾರೆ. ಚೌಕಟಿಯಾಗಿ ಪೊಟ್ಟಣ ಕಟ್ಟಿದರೆ ಹೆಣ್ಣು ಎಂದು ಅರ್ಥ.[೮]

೪

ಮುಟ್ಟಾದಾಗ ಮೂರು ರಾತ್ರಿ ಚೌಕಿಮನೆಯಲ್ಲುಳಿದು, ನಾಲ್ಕನೆಯ ದಿನ ನಸುಕಿನಲ್ಲೆದ್ದು ತಾವು ಮಲಗಿದ ಜಾಗೆಯನ್ನು ಮೇಲಿನಿಂದ ಕೆಳಕ್ಕೆ ಸಾರಿಸಿ, ಹೊಳೆ ಹಳ್ಳ ಕೆರೆ ಅಥವಾ ಬಾವಿಯಲ್ಲಿ ಬಟ್ಟೆಗಳನ್ನು ತೊಳೆದು ಸ್ನಾನ ಮಾಡುತ್ತಾರೆ. 'ಎಡಿ ಎಂಜಲ'ನ್ನು ತಿಂದು ಮತ್ತೆ ಪುನಃ ತಣ್ಣೀರಿನಿಂದಲೇ ಸ್ನಾನ ಮಾಡುತ್ತಾರೆ. ಕಲ್ಲಿನ ಮೇಲೆ ಅರಿಸಿನ ಕೊಂಬನ್ನು ತೇಯ್ದು ಪೀಳ್ಕದೆಲೆ ಪಟ್ಕೆಗೆ ಹಚ್ಚುತ್ತಾರೆ. ಸಗಣಿ ನೀರಿನಿಂದ ನೂರಾ ಎಂಟು ಸಾರೆ ಮೈಗೆ ಪ್ರೋಕ್ಷಣೆ

ಮಾಡಿಕೊಳ್ಳುತ್ತಾರೆ. ನಂತರ ಸೂರ್ಯನಿಗೆ ಏಳು ಸಾರೆ ಅರ್ಘ್ಯ ಕೊಡುತ್ತಾರೆ. ಸಗಣಿ ನೀರನ್ನು ಅಂತಃಶುದ್ಧಿಗಾಗಿ ಏಳು ಸಾರೆ ಕುಡಿಯುವ ಸಂಪ್ರದಾಯವೂ ಇದೆ. ಆಮೇಲೆ ಮಡಿವಾಳ್ತಿ ತಂದಿಟ್ಟ ಬಟ್ಟೆಯನ್ನು ಮುಟ್ಟಿ ಶುದ್ಧರಾಗಿ, ತಂಬಿಗೆಯಲ್ಲಿ ನೀರನ್ನು ತುಂಬಿಕೊಂಡು ಬಂದು, ತಾವು ಮೂರು ರಾತ್ರಿ ಮಲಗಿದ ಜಾಗದಲ್ಲಿ ಅಂದರೆ ತಲೆಯ ಭಾಗದಲ್ಲಿ ಇಲ್ಲವೇ ಹಸೆಯ ಮಧ್ಯ ಭಾಗದಲ್ಲಿ ಹಕ್ಕಿ ಬಿಡಿಸಿ ಪೂಜೆ ಮಾಡುತ್ತಾರೆ.

೫

ಮಡಿವಾಳರ ಬಟ್ಟೆಗೆ ದ್ರಾವಿಡ ಸಂಸ್ಕೃತಿಯಲ್ಲಿ ಬಹಳ ಪ್ರಾಧಾನ್ಯತೆಯಿದ್ದದ್ದು ಕಂಡುಬರುತ್ತದೆ. "ಮಡಿವಾಳರ ವಸ್ತ್ರ ಶುದ್ಧ, ಗೋವಿನ ಮುಕುಳಿ ಶುದ್ಧ, ಬ್ರಾಹ್ಮಣರ ಬಾಯಿಶುದ್ಧ"[೯] ಎಂಬ ಹೇಳಿಕೆಯೇ ಇದೆ. ಪ್ರತಿ ತಿಂಗಳು ಹೆಣ್ಣು ಮುಟ್ಟಾದಾಗ ಮಡಿವಾಳ್ತಿಯರೇ ಬಂದು ಸ್ನಾನ ಮಾಡಿಸುತ್ತಿದ್ದರು. ಅವರು ಬರದೇ ಇದ್ದಲ್ಲಿ, ಮೈನೆರೆದವಳು ಉಟ್ಟಬಟ್ಟೆ, ಹಸೆಬಟ್ಟೆಗಳೆಲ್ಲವನ್ನೂ ಹೊಳೆಯಲ್ಲಿ ಒಗೆಯುತ್ತಿದ್ದರು. ಮಡಿವಾಳರಿಲ್ಲದೆ ಯಾವ ಕಾರ್ಯವೂ ನಡೆಯುವುದಿಲ್ಲ. ಜಾತ್ರೆ ತೇರುಗಳ ಸಂದರ್ಭಗಳಲ್ಲಿ ಉತ್ಸವ ಮೂರ್ತಿ ಹೋಗಬೇಕಾದರೆ ಮಡಿವಾಳರು ಹಾಸಿದ ಮಡಿಬಟ್ಟೆಯ ಮೇಲೆ ಮೊದಲು ಹೋಗಬೇಕು. ಮದುವೆಯಿಂದ ಮಸಣದವರೆಗೂ ಪ್ರಮುಖರಾದವರು ಮಡಿವಾಳರು. ಮಡಿವಾಳರ ಮೇಲ್ಕಟ್ಟಿಲ್ಲದೆ ಮದುವೆ ಪೂರ್ಣವಾಗುವುದಿಲ್ಲ. ಹೆಣ್ಣು ಮೈನೆರೆದಾಗ ಮಡಿವಾಳ್ತಿ ಬರದೆ ಅವಳು ಶುದ್ಧವಾಗುವುದಿಲ್ಲ. ಹಡೆದಾಗಲೂ ಮಡಿವಾಳ್ತಿಯೇ ಬೇಕು. ಸಾವಿನ ಸಂದರ್ಭ ದಲ್ಲಿಯೂ ಮಡಿವಾಳರ ಬಟ್ಟೆಯನ್ನು ಮುಟ್ಟಿಸದಿದ್ದರೆ ಪವಿತ್ರವಾಗುವುದಿಲ್ಲ.[೧೦]

೬

ಹೆಣ್ಣು ಮೊಟ್ಟ ಮೊದಲಿಗೆ ಮೈನೆರೆದಾಗ ೧೦೮ ಸಗಣಿ ಉಂಡೆಯಿಂದ ಹಕ್ಕಿಯನ್ನು ಮೇಲಿನಿಂದ ಕೆಳಕ್ಕೆ ಸಾರಿಸುತ್ತಾರೆ. ಒಂದೊಂದೆ ಉಂಡೆ ಹಾಕಿ ಸಾರಿಸಬೇಕು. ಎರಡುಂಡೆ ಹಾಕಿದರೆ ಜೋಡುಮಕ್ಕಳು ಹುಟ್ಟುತ್ತಾರೆ ಎಂಬ ನಂಬಿಕೆಯಿದೆ. ಅವಳನ್ನು "ದಿಂಡಗಿತ್ತಿ" ಎಂದು ಕರೆಯುತ್ತಾರೆ. ಅವಳು ಮಿಂದು ಬಂದ ಐದನೆಯ ದಿನ 'ಜಾನಸಕ್ಕರೆ' ಎಂಬ ಕಜ್ಜಾಯವನ್ನು ಉದ್ದಿನ ಬೇಳೆಯಿಂದ ಮಾಡುತ್ತಾರೆ.[೧೧] ಅವಳ ಉಟ್ಟ ಸೀರೆ ರವಿಕೆಗಳನ್ನು ಮಡಿವಾಳರಿಗೇ ನೀಡುತ್ತಾರೆ. ಹೊಸ ಸೀರೆ ಹೊಸ ರವಿಕೆಗಳನ್ನು ಉಡಿಸಿರುತ್ತಾರೆ.

ಗೋಮಯದ ಬಳಕೆ, ಸಗಣಿ ನೀರು ಕುಡಿಯುವುದು ಇವುಗಳ ವಿಶೇಷವೇನು? ಎಂದು ಕೇಳಿದರೆ 'ಚವಿದೋಷ' ನಿವಾರಣೆಗೆ ಎಂದು ಹೇಳುತ್ತಾರೆ. ಹುಟ್ಟಿದ ಶಿಶುವಿನ ಮೈ ಮೇಲಿನ ಪಿಟ್ಟು ಸರಿಯಾಗಿ ಹೋಗಲು ಎಮ್ಮೆ ಸಗಣಿ ಇಲ್ಲವೇ ಕೋಳಿಮೊಟ್ಟೆಯ ಬಿಳಿಯ ರಸದಿಂದಲೇ ಮೀಯಿಸುತ್ತಾರೆ. ಹುಗಳಚವಿ, ಹುಳಕಚವಿ, ಒಡಕಚವಿ, ಎರಕ್ಲಚವಿ, ಹೊಟ್ಟೆಚವಿ, ಬತ್ತಚವಿ, ಡುಬ್ಬಚವಿ ಮುಂತಾದ ಅರವತ್ತು ನಮೂನೆಯ ಚವಿಗಳಿವೆ. ಸಗಣಿ ನೀರನ್ನು ಕುಡಿದರೆ ಈ ಚವಿದೋಷ ಇರುವುದಿಲ್ಲ.[೧೨] ದೇಹದ ಸರ್ವಾಂಗ ಶುದ್ಧಿಗಾಗಿ ಪಂಚಗವ್ಯ ಸೇವನೆಯ ಕ್ರಮ ಎಲ್ಲೆಡೆ ಇದೆ. ಗೋಮಯ ಅಂಗುಷ್ಠದ ಅರ್ಧದಷ್ಟು, ಗೋಮೂತ್ರ, ಗೋಮೂತ್ರದ ಎರಡು

ಪಟ್ಟು ಕುಶೋದಕ (ನೀರು), ಗೋಮೂತ್ರದ ಮೂರು ಪಟ್ಟು ಹಾಲು, ಎರಡೆರಡು ಪಟ್ಟು ಮೊಸರು ಮತ್ತು ತುಪ್ಪವನ್ನು ಸೇರಿಸಿ ಪಂಚಗವ್ಯ ತಯಾರಿಸುತ್ತಾರೆ.[೮] ಮಹಿಳೆಯರೇ ಪಂಚಗವ್ಯ ತಯಾರಿಸುತ್ತಾರೆ. (ಪುರೋಹಿತರು ಮಂತ್ರಿಸುತ್ತಾರೆ.) ಈ ಪಂಚಗವ್ಯದ ನಿಯಮಿತ ಸೇವನೆ ಸ್ತ್ರೀ ಪುರುಷರಿಬ್ಬರ ಬಂಜೆತನವನ್ನೂ ನಿವಾರಣೆ ಮಾಡುತ್ತದೆ ಎಂಬ ನಂಬಿಕೆಯಿದೆ.[೯]

"ಸಗಣಿ ತಿಂಬ ಕೆಲಸ ಮಾಡಿಕೊಂಡಿದ್ದಾನೆಂದರೆ" ಅವನ ಹೆಂಡತಿ ಗರ್ಭಿಣಿಯಾಗಿದ್ದಾಳೆ ಎಂದೂ, 'ಹೇಲು ತಿನ್ನುವ ಕೆಲಸ ಮಾಡಿಕೊಂಡಿದ್ದಾನೆಂದರೆ' ಹಾದರದ ಕೆಲಸ ಮಾಡಿದ್ದಾನೆ ಎಂದು ತಿಳಿಯುತ್ತಾರೆ.[೧೦] ಹೆಣ್ಣು ಹಡೆದು ಒಳಗೆ ಬರುವಾಗಲೂ 'ಹಕ್ಕೆಪೂಜೆ' ಮಾಡಿಕೊಂಡೇ ಒಳಗೆ ಬರುತ್ತಾರೆ. ಹೆಂಡತಿ ಹಡೆದು ಒಳಗೆ ಬರುವವರೆಗೂ ಗಂಡನಿಗೆ ಅಡ್ಡಪಂಕ್ತಿ ಭೋಜನವೇ ಆಗಿರುತ್ತದೆ.[೧೧] ಸಗಣಿ, ಗೋಮೂತ್ರದಿಂದ ತಯಾರಿಸಿದ ಭಸ್ಮ ಜನಪದ ವೈದ್ಯದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಆಕಳ ಸಗಣಿಯನ್ನು ಮಕರ ತಿಂಗಳಲ್ಲಿ ಒಣಗಿಸಿ, ಆಲ ಅರಳಿ ಅತ್ತಿ ಗೋಳಿ ಬಸರಿ ಟೊಂಗೆ ಸಮೇತ ಶಿವರಾತ್ರಿಯಂದು ಸುಟ್ಟು, ಮರುದಿನ ಸಾಣಿಸಿ, ಗೋಮೂತ್ರದಲ್ಲಿ ನಲವತ್ತೈದು ದಿನ ಕೊಳೆಯಿಸಿ, ನೆರಳಿನಲ್ಲಿಟ್ಟು ಒಣಗಿಸಿ ಉಂಡೆಕಟ್ಟಿ ಮಡಿಕೆಯಲ್ಲಿ ತುಂಬಿಸಿಡುತ್ತಾರೆ.[೧೨]

2

ಹಕ್ಕೆಪೂಜೆಯನ್ನು ಮುತ್ತೈದೆಯರು ಮಾಡಲೇಬೇಕು. ವಿಧವೆಯರು ಮಾಡಬಾರದು. ಮುತ್ತೈದೆಯರು ಮುಟ್ಟಾದಾಗ ಚೌಕಿಮನೆಯಲ್ಲಿಯೇ ಇರಬೇಕು. ಪರಸ್ಪರ ಒಬ್ಬರನ್ನೊಬ್ಬರು ಮುಟ್ಟಿಕೊಳ್ಳಬಾರದು. ಮುಟ್ಟಿದರೆ ತಣ್ಣೀರಿನ ಸ್ನಾನವನ್ನೇ ಮಾಡಿಸುತ್ತಾರೆ. ಚಿಕ್ಕ ಮಗುವಿದ್ದ ಮುತ್ತೈದೆ ಮುಟ್ಟಾದಾಗ, ಮಗುವಿನ ಬಗ್ಗೆ ಬಹಳ ಕಾಳಜಿ ವಹಿಸಬೇಕು. ಮಕ್ಕಳಿಗೆ ಬಂಜೆಯರಿಂದ ಕೆಡುಕಾಗುವ ಕುರಿತು ಒಂದು ಗಾದೆ ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿದೆ. "ಹಾದರಗಿತ್ತಿ ಬಳ್ಳಿ ಹಂದರ ಹಾಕಿತ್ತು; ಪತಿವ್ರತೆ ಬಳ್ಳಿ ಕರಕಲ ಬಿದ್ದಿತ್ತು."[೧೩] ಇಲ್ಲಿ ಈ ಕರಕಲು ಎಂಬುದು ಬಂಜೆಯರು ಮಕ್ಕಳನ್ನು ಪಡೆಯುವ ಸಲುವಾಗಿ ಮುತ್ತೈದೆಯ ಚಿಕ್ಕಮಗುವಿನ ಮರ್ಮಾಂಗಕ್ಕೆ ಕೇರುಕಾಯಿ (ಗುಡ್ಡೆಗೇರು)ಯ ಸೊನೆಯನ್ನು ಸೂಜಿಯ ಮೊನೆಗೆ ಹಚ್ಚಿಕೊಂಡು ಚುಚ್ಚುವ ಸಂಪ್ರದಾಯ. ಅದರಿಂದ ಆ ಮಗುವಿಗೆ ಮರಣವಾದರೆ ತಮಗೆ ಮಕ್ಕಳಾಗುತ್ತಾರೆ ಎಂಬ ನಂಬಿಕೆ ಬಂಜೆಯರಲ್ಲಿದೆ. ಇಂಥ ಘಟನೆಗಳಿಂದ ರಂಪಾಟಗಳು ಆಗಾಗ ಊರುಗಳಲ್ಲಿ ನಡೆಯುವುದು ಸರ್ವೇ ಸಾಮಾನ್ಯ.[೧೪] ಕೆಸುವಿನ ಸಪ್ಪಿನ 'ಕರಕಲಿ'ಯನ್ನು ಮಾಡಿ ಶಿವನಿಗೆ (ದೇವರಿಗೆ) ನೇವೇದ್ಯ ಮಾಡಿದರೆ ಮಕ್ಕಳಾಗುತ್ತವೆ ಎಂಬ ನಂಬಿಕೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಯಲ್ಲಾಪುರ ತಾಲೂಕಿನಲ್ಲಿದೆ. ಫಲವತ್ತತೆ ವಿರೋಧಿ ಆಚರಣೆಯಾಗಿ ಈ ರೀತಿ ಪ್ರಾದೇಶಿಕವಾಗಿ ಭಿನ್ನಭಿನ್ನವಾಗಿರುವುದು ಕಂಡುಬರುತ್ತದೆ.

ಹಕ್ಕೆಪೂಜೆ ಎಂದರೆ ಹಸೆಪೂಜೆ. ಶೇಡಿಯಿಂದ ಹಕ್ಕೆಯನ್ನು ಬಿಡಿಸಿ, ಅಕ್ಷತೆ ಹೂವು ಅರಿಸಿನ ಕುಂಕುಮದಿಂದ ಪೂಜೆ ಮಾಡುತ್ತಾರೆ. ಒಂದರಿಂದ ಏಳು ಸುತ್ತು ಪ್ರದಕ್ಷಿಣೆ ಮಾಡುತ್ತಾರೆ. ಹಾಲು ಇಲ್ಲವೇ ಬೆಲ್ಲ ಸಕ್ಕರೆ ಇಟ್ಟು ನಮಸ್ಕಾರ ಮಾಡುತ್ತಾರೆ. ಅದನ್ನು

ಅವರೇ ಸೇವಿಸುತ್ತಾರೆ. ಬೆಲ್ಲವನ್ನು ನೆಲದ ಮೇಲೆ ಹಾಕಿಕೊಂಡು ಏಳು ಸಾರೆ ನೆಕ್ಕುತ್ತಾರೆ.[೨೦] ನೀರಿನ ತಂಬಿಗೆ ಇಟ್ಟು, ನಮಸ್ಕಾರ ಮಾಡಿ ಸೂರ್ಯನನ್ನು ನೋಡಿ ಆ ನೀರನ್ನು ತೆಂಗಿನ ಮರಕ್ಕೆ ಹಾಕಿ ಮನೆಯೊಳಗೆ ಪ್ರವೇಶ ಮಾಡುತ್ತಾರೆ. ಸೂರ್ಯನನ್ನು ನೋಡುವುದೆಂದರೆ- ಎರಡೂ ಹಸ್ತವನ್ನೂ ಪರಸ್ಪರ ವಿರುದ್ಧವಾಗಿಟ್ಟು ಬೆರಳಿನ ಮೂಲಕ ಕಿಂಡಿಯೊಂದನ್ನು ಮಾಡಿಕೊಂಡು ಅದರಿಂದ ಸೂರ್ಯನನ್ನು ನೋಡುವುದು. ನಂತರ ನೀರಿನ ತಂಬಿಗೆಯನ್ನು ಮನೆಯೊಳಗೆ ತೆಗೆದುಕೊಂಡು ಹೋಗಿ ಗಂಡನ ಮುಖವನ್ನೇ ಮೊದಲು ನೋಡುತ್ತಾರೆ. ಅವನಿಗೆ ನೀರಿಟ್ಟು ನಮಸ್ಕಾರ ಮಾಡಿ ನಂತರ ತೆಂಗಿನ ಮರಕ್ಕೆ ಇಲ್ಲವೇ ಬಾಳೆಯ ಮರಕ್ಕೆ ನೀರನ್ನು ಹಾಕುತ್ತಾರೆ. ತೆಂಗಿನ ಮರಕ್ಕೆ ನೀರು ಹಾಕಿದರೆ ಗಂಡು ಸಂತಾನವಾಗುತ್ತದೆ. ಬಾಳೆ ಮರಕ್ಕೆ ಹಾಕಿದರೆ ಹೆಣ್ಣು ಸಂತಾನವಾಗುತ್ತದೆ ಎಂಬ ನಂಬಿಕೆಯಿದೆ.[೨೧] ಮಕ್ಕಳಾಗದೇ ಇರುವವರು ಮುಟ್ಟಾದ ಮೂರೂ ದಿನ ಮಣ್ಣಿನ ನೆಲದ ಮೇಲೆ ಸಗಣಿಯಿಂದ ಸಾರಿಸಿಕೊಂಡು ನೆಲದ ಮೇಲೆ ಊಟ ಮಾಡಿದರೆ ಮಕ್ಕಳಾಗುತ್ತವೆ ಎಂಬುದೂ ಇದೆ. ''ನೆಲದ ಮೇಲೆ ಊಟ ಮಾಡಿ ಮಕ್ಕಳ ಪಡದೆ''[೨೨] ಎಂದು ಹೇಳುವವರೂ ಇದ್ದಾರೆ. ಚವಿ ದೋಷ ನಿವಾರಣೆ ಮಾಡಿ ಕೊಳ್ಳಲು ಮತ್ತು ಆರೋಗ್ಯವಂತ ಮಕ್ಕಳನ್ನು ಪಡೆಯಲು ಹಕ್ಕೆಪೂಜೆ ಅತಿ ಅಗತ್ಯವೆಂದೇ ಸುಮಂಗಲೆಯರು, ನಿತ್ಯಸುಮಂಗಲೆಯರು ತಿಳಿದಿದ್ದಾರೆ.

ಮುಟ್ಟಾದ ಹೆಣ್ಣು, ಗಂಡ ಸ್ನಾನ ಮಾಡಿ ಬರುವಾಗ ಅವನಿಗೆ ಮುಖ ತೋರಿಸಬಾರದು, ತೋರಿಸಿದರೆ ಗಂಡನ ಆಯುಷ್ಯ ಕಡಿಮೆ ಆಗುತ್ತದೆ. ಕುಡಿಬಾಳೆಯಲ್ಲಿ ಊಟ ಮಾಡಬಾರದು, ಮಾಡಿದರೆ ಹಬ್ಬಹಬ್ಬಕ್ಕೆ ಮುಟ್ಟಾಗುತ್ತಾರೆ. ಹಸೆಯನ್ನು ಮೇಲಿನಿಂದ ಕೆಳಕ್ಕೆ ಸಾರಿಸಿದರೆ ರಾತ್ರಿ ಮುಟ್ಟಾಗುತ್ತಾರೆ. ಕೆಳಗಿನಿಂದ ಮೇಲೆ ಸಾರಿಸಿದರೆ ಬೆಳಿಗ್ಗೆಯೇ ಮುಟ್ಟಾಗುತ್ತಾರೆ. ಹಸೆ ಬರೆದ ಪ್ರತಿಯೊಂದು ಮೂಲೆಗೆ ಒಂದೊಂದೇ ಅಕ್ಷತ ಹಾಕಬೇಕು. ಎರಡೆರಡು ಹಾಕಿದರೆ ಜೋಡು ಮಕ್ಕಳು ಹುಟ್ಟುತ್ತಾರೆ[೨೩] ಎಂದೆಲ್ಲ ನಂಬಿಕೆಗಳಿವೆ.

೮

'ಹಕ್ಕೆಪೂಜೆ'ಯನ್ನು ಹಕ್ಕೆ ಬರೆಯುವುದು, ಹಕ್ಕೆ ಬಿಡಿಸುವುದು, ಅಡಿ ಬರೆದು ಹೊಡಾಡುವುದು, ಹಸೆ ಬರೆಯುವುದು, ಹಸೆ ಬಿಡಿಸುವುದು, ರಂಗೋಲಿ ಹಾಕುವುದು, ಶೇಡಿ ಬಿಡಿಸುವುದು, ಶೇಡಿ ಹಾಕುವುದು ಎಂದೂ ಹೇಳುತ್ತಾರೆ. ಇದು ಜೀವನಾವರ್ತನದಲ್ಲಿಯ ದಿನಬಳಕೆಯಲ್ಲಿರುವ ನಿತ್ಯದ ಆಚರಣೆಯೂ ಆಗಿದೆ. ಹಾಗಾದರೆ ಅವರು ಬರೆಯುವ ಚಿತ್ರಗಳ್ಯಾವವು? ಆ ಚಿತ್ರಗಳು ಏನನ್ನು ಹೇಳುತ್ತವೆ? ಅವುಗಳ ರಚನೆಗಳ ಕುರಿತು ವಿಶ್ಲೇಷಿಸಿ ನೋಡಬೇಕಾದ ಅಗತ್ಯವಿದೆ. ಹಕ್ಕೆಪೂಜೆಯಲ್ಲಿ ಮಾತ್ರವಲ್ಲ, ದಿನನಿತ್ಯ ಮನೆಯ ಹೊಸ್ತಿಲ ಮೇಲೂ ಹಕ್ಕೆಯನ್ನು ಬಿಡಿಸುತ್ತಾರೆ. ಮನೆಯ ಪ್ರಧಾನ ಬಾಗಿಲನ್ನು ಸಾರಿಸಿ ರಂಗೋಲಿ ಹಾಕಿ ಹೂವು ನೀರನ್ನು ಇಡುವ ರೂಢಿ ಕರ್ನಾಟಕದಾದ್ಯಂತ ಇದೆ. ಅದರಲ್ಲಿ ಏನಾದರೂ ವಿಶೇಷವಿದೆಯೇ ಎಂದು ನೋಡಬೇಕಾದ್ದು ಅಗತ್ಯವಲ್ಲವೇ? ಶೇಡಿಹುಡಿಯಿಂದಲೇ ಅವರು ಹಕ್ಕೆಯನ್ನು ಬರೆಯುತ್ತಾರೆ. ಕೆಳಗಿನಿಂದ ಮೇಲೆ ಬರೆಯುತ್ತಾರೆ ವಿನಾ ಮೇಲಿನಿಂದ ಕೆಳಗಲ್ಲ. ಬಲದಿಂದ ಎಡಕ್ಕೆ ಚಿತ್ರ ಬಿಡಿಸುತ್ತಾರೆ.

ಆ ಚಿತ್ರದಲ್ಲಿ ಹೊರಗಡೆ ಹಸೆ ಇರುತ್ತದೆ. ಅದರಲ್ಲಿ ಎಡಕ್ಕೆ ಸೂರ್ಯನ ಕದಿರು, ಬಲಕ್ಕೆ ಗಣಪತಿ ಮಂಡಲ, ಕೆಳಗಡೆ ತೊಟ್ಟಿಲು ಶಿಶು ಇರುತ್ತದೆ. ಸೂರ್ಯನ ಕದಿರನ್ನು ಅಷ್ಟದಳ ಎಂದೇ ಕರೆಯುತ್ತಾರೆ. ಗಣಪತಿ ಮಂಡಲದಲ್ಲಿ ಷಟ್ದಳವಿರುತ್ತದೆ. ಇದು ಬಹಳ ಪ್ರಧಾನ ವಾಗಿದ್ದು, ಎಲ್ಲ ಹಕ್ಕೆಯಲ್ಲೂ ಬಳಕೆಯಾಗುತ್ತದೆ. ಗಣಪತಿಯ ಚಿತ್ರವಿಲ್ಲದ ಹಕ್ಕೆಯಿಲ್ಲವೇ ಇಲ್ಲ. ಈ ಗಣಪತಿಯ ದಿನವನ್ನು ಪಂಚಾಗಗಳಲ್ಲಿ 'ವಿನಾಯಕೀ' ಎಂದೇ ಕರೆಯುತ್ತಾರೆ. ಇವನು ಪ್ರಕೃತಿಯ ಸಂಕೇತ. ಸೂರ್ಯ ಪುರುಷನ ಸಂಕೇತ. ಈ ಪುರುಷ ಪ್ರಕೃತಿಯರ ಸಮ್ಮಿಲನವೇ ಕೆಳಗಿರುವ ತೊಟ್ಟಿಲು ಮತ್ತು ಶಿಶು.

ಹೊಸ್ತಿಲ ಮೇಲೆ ಹಕ್ಕೆಯನ್ನು ಬಿಡಿಸಿದ ನಂತರ ನೀರಿಟ್ಟು ನಮಸ್ಕಾರ ಮಾಡಿ ಆ ನೀರನ್ನು ತುಳಸಿಗೆ ಹಾಕುತ್ತಾರೆ. ದೀಪ ಹಚ್ಚಿ, ನೀರಿಟ್ಟು ನಮಸ್ಕರಿಸುವ ರೂಢಿಯೂ ಇದೆ. ಮೈನೆರೆದು ಮಿಂದ ನಾಲ್ಕನೆಯ ದಿನದ ನೀರನ್ನು ತುಳಸಿಗೆ ಹಾಕಬಾರದು ಎನ್ನಲಾಗುತ್ತದೆ. ಈಗಲೂ ಸ್ತ್ರೀಯರು ರಂಗೋಲಿ ಹಾಕಿ ಹಕ್ಕೆಪೂಜೆ ಮುಗಿಸುತ್ತಾರೆ. ಹಕ್ಕೆ ಚಿತ್ರಗಳನ್ನು ಏಕೆ ಬಿಡಿಸುವುದಿಲ್ಲ ಎಂದು ಕೇಳಿದರೆ, "ಮೊದಲು ಗಣಪತಿ ಮಂಡಲ ಬರದು ಪೂಜೆ ಮಾಡ್ತಿದ್ಯ. ಕಡೀಗೆ ಭಟ್ಟಕ್ಕ (ಪುರೋಹಿತರು) ಎಲ್ಲಾವಾ ಮುಟ್ಟಾಗಿ ಮೀಯ ಹೆಂಗಸರು ಗಣಪತಿ ಮಂಡಲ ಬರೆಯಲ್ಲಾಗಾ ಅಂದೊ; ಅದಕಾಗಿ ಬಿಟ್ಬ್ಯೋ"[೨೪] ಎಂದು ಹೇಳುತ್ತಾರೆ. ಹಕ್ಕೆಪೂಜೆಯಲ್ಲಿ ಬಿಡಿಸುವ ಎಲ್ಲ ಚಿತ್ರಗಳೂ ಇಂದು ಪುರೋಹಿತರು ಮಾಡಿಸುವ ಎಲ್ಲ ಪೂಜೆಗಳಲ್ಲಿ ಬಳಕೆಯಾಗುತ್ತಿವೆ.[೨೫] ಈ ಪ್ರತಿಯೊಂದು ಪ್ರದರ್ಶನ ಕಲೆಯೂ ಫಲವತ್ತತೆ ಸಮೃದ್ಧಿಯ ಮೂಲವಾದ ಸ್ತ್ರೀ ಕೇಂದ್ರಿತ ನೆಲೆಯಿಂದಲೇ ಹುಟ್ಟಿದೆ. ಈ ಹಕ್ಕೆಪೂಜೆಯೇ ರಂಗಭೂಮಿಯ ಮೂಲ ಕೇಂದ್ರವಾಗಿದೆ ಎಂಬುದನ್ನು ಭರತನ 'ನಾಟ್ಯಶಾಸ್ತ್ರ'ದಲ್ಲಿಯ ಚಾರಣ, ಸೂತರ ವಿಷಯದಿಂದ ತಿಳಿಯ ಬಹುದು. 'ಕುಂಡಗೋಳಕ' ಎಂಬ ಶಬ್ದ ಇಂದಿಗೂ ಜನಜನಿತವಾಗಿದೆ.

ಅಮೃತೇಜಾರಜಃ ಕುಂಡ ಮೃತೇ ಭರ್ತರಿ ಗೋಲಕ

ಮನುಸ್ಮೃತಿಯ ಈ ಮಾತನ್ನು ಬಹಳ ಜನ ಪುರೋಹಿತರೇ ಉದಾಹರಣೆ ನೀಡಿದ್ದಾರೆ. ಈ ಜಾತಿ ವ್ಯವಸ್ಥೆ ನಿರ್ಮಾಣಕ್ಕೆ ಹುಟ್ಟೇ ಪ್ರಧಾನವಾದದ್ದನ್ನು ನಾವು ಇಂದಿಗೂ ಕಾಣುತ್ತಿದ್ದೇವೆ. 'ಕುಂಡವಾಳ' ಕುಂಡಗೋಳಕದ ಆಚರಣೆ ಎಲ್ಲ ಜಾತಿ ಜನಾಂಗ ಮತ್ತು ಬುಡಕಟ್ಟುಗಳಲ್ಲಿ ಪ್ರಧಾನ ಸ್ಥಾನ ಪಡೆದಿರುವುದು ಕಂಡುಬರುತ್ತದೆ. ಇವರನ್ನು ಇಂದಿಗೂ ಬಾಂದಿ, ಗೋಲಕ, ಹೊಟ್ಟೆಬಸರಿಗೆ ಹುಟ್ಟಿದವ, ಕೀಳಶಾಂತಿಭಟ್ಟಕ್ಕ, ಪಾಟಾಳಿಗಳು 'ಭಾಗವತರು' ಎಂದೂ ಕರೆಯುತ್ತಾರೆ. ಇವರಿಗೆ ಪೌರೋಹಿತ್ಯದ ಅಧಿಕಾರವಿಲ್ಲ. ವಾರಂಬಳ್ಳಿ ವಿಷ್ಣು, ಪಾರ್ತಿಸುಬ್ಬ, ಮುದ್ದಣ ಮುಂತಾದ ಯಕ್ಷಗಾನ ಕವಿಗಳು ಈ ಕುಂಡಗೋಳಕ ಜಾತಿಯವರೇ ಆಗಿದ್ದಾರೆ.

೬

ಈ 'ಹಕ್ಕೆಪೂಜೆ' ಇಂದಿಗೂ ಯಕ್ಷಗಾನ ಬಯಲಾಟ ಪ್ರದರ್ಶನದಲ್ಲಿ 'ಚೌಕಿಮನೆ'ಯಲ್ಲಿ ಕಿರೀಟ ಪೂಜೆಯೊಂದಿಗೆ ನಡೆಯುತ್ತಲೇ ಇದೆ. ಇದನ್ನು ಗಣಪತಿ ಪೂಜೆ ಎಂದೇ ಕರೆಯುತ್ತಾರೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಯಕ್ಷಗಾನ ಬಯಲಾಟದಲ್ಲಿ ಬಳಸುವ ಪದ್ಯವಂತೂ ಸ್ತ್ರೀ ಮೂಲದ್ದೇ ಆಗಿದೆ.

ಗಜಮುಖದವಗೆ ಗಣಪಗೇ ಚೆಲ್ವ
ತ್ರಿಜಗವಂದಿತಗಾರತಿಯೆತ್ತಿರೆ । ಆರತಿ ಬೆಳಗಿರೇ ॥ ಪಲ್ಲವಿ ॥

ಎಂಬ ಪದ್ಯದಿಂದಲೇ ಚೌಕಿಮನೆಯಲ್ಲಿ ಗಣಪತಿ ಪೂಜೆ ನಡೆಯುತ್ತದೆ. ಮುಕ್ತಾಯವೂ ಈ ಪದ್ಯದಿಂದಲೇ. ಸ್ತ್ರೀ ವೇಷದವರೇ ಆರತಿ ಬೆಳಗಿ ಮುಗಿಸುವ ಸಂಪ್ರದಾಯ ಇಂದಿಗೂ ರೂಢಿಯಲ್ಲಿದೆ.

ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಪ್ರದರ್ಶನ ಕಲೆಗಳನ್ನು ವೀಕ್ಷಿಸಿದಾಗ ನಮ್ಮ ಮುಂದೆ ನಿಗೂಢ ಇತಿಹಾಸ ತೆರೆದುಕೊಳ್ಳುತ್ತದೆ. ದಿಗ್ಭ್ರಮೆಗೊಳಿಸಿ ಖುಷಿಯನ್ನೂ ಉಂಟು ಮಾಡುತ್ತದೆ. ಯಕ್ಷಗಾನ ಬಯಲಾಟಗಳ ಮೂಲ ಧಾಟಿಗಳೆಲ್ಲ, ಇಂದಿಗೂ ಹೆಂಗಸರ ಬಾಯಲ್ಲಿರುವುದು ಕ್ಷೇತ್ರಕಾರ್ಯದಿಂದ ಗೋಚರವಾಗುತ್ತದೆ. ರಾಗಮನೋರಂಜನೆ ಪ್ರಧಾನವಾದದ್ದು ಪುರುಷ ಪ್ರಧಾನ ವ್ಯವಸ್ಥೆಯದು ಎಂದು ಸ್ಪಷ್ಟವಾಗುತ್ತದೆ. ಧಾಟಿ ಜನಪದರದ್ದು, ರಾಗ ವಿದ್ವಾಂಸರದ್ದು. ಸುರುಟಿ, ನವರೋಜು, ಮಾರವಿ, ಭೈರವಿ, ಕೇದಾರಗೌಳ, ಧಾಟಿಗಳು ಇಂದಿಗೂ ಮೂಲ ರೂಪದಲ್ಲಿಯೇ ಇರುವುದನ್ನು ಕಾಣುತ್ತೇವೆ. ಇವು ಬದಲಾವಣೆಗೊಳ್ಳಲು ಸಾಧ್ಯವಿಲ್ಲ. ಇಂಥ ಧಾಟಿಗಳು ಇಂದಿಗೂ ಹೆಂಗಸರಲ್ಲಿ ಮದುವೆ ಹಾಡುಗಳಾಗಿ, ಜಾವಳಿಗಳಾಗಿ ಬಳಕೆಯಲ್ಲಿವೆ.[೨೬]

'ಹಕ್ಕಿಪೂಜೆ'ಯಲ್ಲಿ ಬಿಡಿಸುವ ಎಲ್ಲ ಚಿತ್ರಗಳು, ಯಕ್ಷಗಾನ ಬಯಲಾಟ, ದೊಡ್ಡಾಟ, ಸಣ್ಣಾಟ, ಘಟ್ಟದ ಕೊರೆಯ ವೇಷಭೂಷಣಗಳಲ್ಲಿ ಇಂದಿಗೂ ಉಳಿದುಕೊಂಡಿವೆ. ಅರಳಿ ಯೆಲೆಯ ರೂಪದ ಪಗಡೆ ಯಕ್ಷಗಾನದಲ್ಲಿದೆ. ಕ್ಯಾದಿಗೆ ಮುಂದಲೆ, ಗುಂಭ ಮತ್ತು ಪಕ್ಕಿಗಳಿಂದ ಕೂಡಿದ ಕಿರೀಟ, ಭೀಮನಮುಡಿ, ಕತ್ತರಿ ವೀಳ್ಯದಲ್ಲಿ ಸ್ತ್ರೀ ವೇಷಧಾರಿಗಳಿಗೇ ವೀಳ್ಯವನ್ನು ಕೊಡುವ ಪದ್ಧತಿ, ಸ್ತ್ರೀ ವೇಷಧಾರಿಗಳಿಗೆ ಕಾಯಿಕಡಿಗಳಲ್ಲಿ ಗೆಜ್ಜೆ ಇಟ್ಟುಕೊಡುವ ಪ್ರಸಾದಗಳು, ಪಾತ್ರಧಾರಿ ಎಂಬ ಹೆಸರು, ಜಕ್ಕಡಿ ಜಕ್ಕಣಿ ಈ ಶಬ್ದಗಳು ಇಂದಿಗೂ ಜನ ಸಾಮಾನ್ಯರಲ್ಲಿ ಬಳಕೆಯಾಗುತ್ತಿರುವುದು[೨೭] ಇವೆಲ್ಲವೂ ಭಾರತದ ರಂಗಭೂಮಿಯ ಮೂಲ ಈ "ಹಕ್ಕಿಪೂಜೆ"ಯೇ ಆಗಿದೆ ಎಂಬುದು ಸಾಕಷ್ಟು ಸಾಕ್ಷ್ಯಾಧಾರಗಳು ಜನರಿಂದಲೇ ಸಿಗುತ್ತವೆ.[೨೮] ತಾಳಮದ್ದಳೆಯೇ ಯಕ್ಷಗಾನ ಬಯಲಾಟ, ದೊಡ್ಡಾಟ ಸಣ್ಣಾಟಗಳ ಮೂಲ ವಿನಾ ಹರಿಕಥೆ ಯಲ್ಲ ಎಂಬುದು ಸಾಬೀತಾಗುತ್ತದೆ.

ಸಂಕೇತ, ಸಂಜ್ಞೆ, ಚಿಹ್ನೆ ಭಾಷೆಗಳಿಂದ ಹಕ್ಕಿಪೂಜೆಯ ಚಿತ್ರಗಳು ಅಸ್ಪಷ್ಟವಾಗಿ ಏನನ್ನೊ ಉತ್ತರಿಸುತ್ತಿವೆ. ಭಾರತ ರಂಗಭೂಮಿಯ ಮೂಲತಃ ಸ್ತ್ರೀಕೇಂದ್ರಿತವಾಗಿದೆ ಎಂಬುದನ್ನು ಜನಪದರಿಂದ ತಿಳಿಯಲು ನಮಗೆ ಇನ್ನೂ ಸಾಧ್ಯವಿದೆ.

ಟಿಪ್ಪಣಿಗಳು

೦೧. ಅಮೃತ ಸೋಮೇಶ್ವರ ಸುವರ್ಣ ಜಾನಪದ ಭಾಗ-೧ (೧೯೯೮), 'ಭೂಮಿ ತಾಯಿಯ ಮೀಹದ ಹಬ್ಬ' ಪು. ೨೩೭

೦೨. ಶ್ರೀಮತಿ ಗಣಪಿ (೧೯೯೮) ಸುಬ್ರಾಯ ಹೆಗಡೆ ಕಲ್ಲಬ್ಬೆ (ಕುಮಟ) ಮತ್ತು ಮೊಗೇರ ಉಪ್ಪಿನಪಟ್ಟಣ (ಕುಮಟ)

೦೩. ಶ್ರೀ ದತ್ತಾತ್ರೇಯ ಸತ್ಯನಾರಾಯಣ ಹೆಗಡೆ, ಹುಳಗೋಳ (ಶಿರಸಿ)

೦೪. ಸುವರ್ಣ ಜಾನಪದ ಭಾಗ-೧, 'ಭೂಮಿತಾಯಿಯ ಮೀಹದ ಹಬ್ಬ' ಪುಟ ೨೩೭

೦೫. ಪುರುಷೋತ್ತಮ ಬಿಳಿಮಲೆ, ಕರಾವಳಿ ಜಾನಪದ (೧೯೯೦), 'ಮ್ಯಾಲರು' ಪು. ೧೪೫, ೧೪೬

೦೬. ಶ್ರೀಮತಿ ಪಾರ್ವತಿ, ಮೂರೂರು ಕಲ್ಲಬ್ಬೆ. ಇವರು ಮೂಲದಲ್ಲಿ ಕೇರಳದ ನಂಬೂದರಿ ಮನೆತನದವರು. ಅಲ್ಲೂ ಹಕ್ಕೆಪೂಜೆ ಇದೆಯೆಂದಿದ್ದಾರೆ.

೦೭. ಉತ್ತರ ಕನ್ನಡ ಜಿಲ್ಲೆ (ಯಲ್ಲಾಪುರ) ಹಾಸಣಗಿ ಗ್ರಾಮದಲ್ಲಿ ಈ ಚೌಕಿಮನೆಗಳು ಇಂದಿಗೂ ಇವೆ.

೦೮. ಈ ಮಾಹಿತಿಗಳು ನಾನು ಕ್ಷೇತ್ರಕಾರ್ಯ ನಡೆಸಿದ ಕಡತೋಕ, ಕಲ್ಲಬ್ಬೆ, ಸಂಪಖಂಡ, ಹಾಸಣಗಿ ಊರುಗಳಲ್ಲಿ ಒಂದೇ ರೀತಿಯಾಗಿವೆ.

೦೯. ಶ್ರೀ ತ್ರಿಯಂಬಕ ದ್ಯಾವಪ್ಪ ಹೆಗಡೆ ಹಿತ್ಲಳ್ಳಿ (ಯಲ್ಲಾಪುರ) ೭೫ ವರ್ಷ, ಇವರ ತಂದೆಯವರು ಪ್ರಸಿದ್ಧ ಯಕ್ಷಗಾನ ಪಾತ್ರಧಾರಿಗಳಾಗಿದ್ದರು.

೧೦. ಶ್ರೀ ಉಮೇಶ ಲಕ್ಷ್ಮೀನಾರಾಯಣ ಭಟ್ಟ, ಬಾಡ, ಯಕ್ಷಗಾನದ ಪ್ರಸಿದ್ಧ ಭಾಗವತರು ಮತ್ತು ಬಾಡದ ಕಾಂಚಿಕಾಂಬಾ ದೇವಾಲಯದ ಅರ್ಚಕರು.

೧೧. ಶ್ರೀಮತಿ ನಾಗವೇಣಿ ನಾರಾಯಣ ಭಟ್ಟ, ಹಿತ್ಲಳ್ಳಿ, ೯೦ ವರ್ಷ ಮತ್ತು ಶ್ರೀಮತಿ ಮಹಾದೇವಿ ದತ್ತಾತ್ರಯ ಹೆಗಡೆ, ಹುಳಗೋಳ (ಶಿರಸಿ) ೬೫ ವರ್ಷ

೧೨. ಶ್ರೀಮತಿ ಪಾರ್ವತಿ ಗಣಪತಿ ಭಟ್ಟ, ದಾಸನಹುಡಿಲು (ಸಿದ್ದಾಪುರ) ೬೮ ವರ್ಷ

೧೩. ಶ್ರೀರಾಮಚಂದ್ರ ಗಣಪತಿ ಜೋಶಿ, ೫೫ ವರ್ಷ, ಪುರೋಹಿತರು, ಹುಳಗೋಳ

೧೪. ಶ್ರೀಮತಿ ಪಾರ್ವತಿ ಗ. ಭಟ್ಟ, ಮುಂತಾದವರು ಈ ಅಭಿಪ್ರಾಯ ತಿಳಿಸಿದ್ದಾರೆ.

೧೫. ಶ್ರೀ ವಿ.ಎಸ್. ಕಟ್ಟೀಮನಿ, ಕನ್ನಡ ಉಪನ್ಯಾಸಕರು, ತಂಗಡಗಿ (ಬಿಜಾಪುರ)

೧೬. ಬೇರ್ಕಡ ಸೀತಾರಾಮಭಟ್ಟ, ಕಾಸರಗೋಡ, ೮೧ ವರ್ಷ

೧೭. ಶ್ರೀಮತಿ ಮಹಾದೇವಿ ದತ್ತಾತ್ರಯ ಹೆಗಡೆ ಮತ್ತು ಶ್ರೀಮತಿ ಗಣಪಿ ಸುಬ್ರಾಯ ಹೆಗಡೆ ಕಲ್ಲಬ್ಬೆ (ಕುಮಟ)

೧೮. ಶ್ರೀ ವಿ.ಎಸ್. ಕಟ್ಟೀಮನಿ, ತಂಗಡಗಿ

೧೯. ಶ್ರೀ ವಿ.ಎಸ್. ಕಟ್ಟೀಮನಿ, ತಂಗಡಗಿ

೨೦. ಶ್ರೀಮತಿ ದಾಕ್ಷಾಯಣಿ ಸುಬ್ರಾಯ ಶಾಸ್ತ್ರಿ ಜವಳೆಕೆರೆ ಕಡತೋಕಾ (ಹೊನ್ನಾವರ) ೭೫ ವರ್ಷ

೨೧. ಶ್ರೀಮತಿ ಕಾವೇರಿ ಭಾಸ್ಕರ ಭಟ್ಟ, ಗದ್ದೆಮನೆ ಸಂಪಖಂಡ (ಶಿರಸಿ) ೭೩ ವರ್ಷ

೨೨. ತಿಪ್ಪೆಲಕ್ಷ್ಮೀ ಸುದ್ದಿ ಹೇಳಿದವರು ಶ್ರೀಮತಿ ಸುಮನಾ ಗಣಪತಿ ಹೆಗಡೆ, ಕಲ್ಲಬ್ಬೆ (ತವರುಮನೆ ಗೋಕರ್ಣ) ಎದುರಮಕ್ಕಿ ಸುಬ್ರಾಯ ಶಿವರಾಮ ಭಟ್ಟ ಇವರು ಕೊಡುವ ಚವಿ ಔಷಧಕ್ಕೆ ಇಂದಿಗೂ ನೆಲದ ಮೇಲೆ ಊಟ ಮಾಡಬೇಕಾಗುತ್ತದೆ.

೨೩. ಶ್ರೀಮತಿ ಕಾವೇರಿ ಭಾಸ್ಕರ ಭಟ್ಟ, ಗದ್ದೆಮನೆ ಸಂಪಖಂಡ (ಶಿರಸಿ) ಮತ್ತು ಶ್ರೀಮತಿ ನೇತ್ರಾವತಿ ಎಸ್. ಹೆಗಡೆ ಹೊನ್ನಾವರ (ಹೆಂಡತಿ)

೨೪. ಶ್ರೀಮತಿ ದಾಕ್ಷಾಯಣಿ ಸುಬ್ರಾಯ ಶಾಸ್ತ್ರಿ, ಜವಳೆಕೆರೆ, ಕಡತೋಕಾ (ಹೊನ್ನಾವರ) ೭೫ ವರ್ಷ, ದಿನಾಂಕ ೧೩-೪-೨೦೦೧

೨೫. ಇವರ ಬಗ್ಗೆ ಸಂಪೂರ್ಣ ಮಾಹಿತಿ ನನ್ನಲ್ಲಿದೆ. ನೀಡಿದವರು ಶ್ರೀ ರಾಮಚಂದ್ರ ಗಣಪತಿ ಜೋಶಿ, ಹುಳಗೋಳ, ಪುರೋಹಿತರು ಮತ್ತು ಅರ್ಚಕರು.

೨೬. ನೆಬ್ಬೂರು ನಾರಾಯಣ ಭಾಗವತ, ಮಹಾಬಲ ಹೆಗಡೆ ಕೆರೆಮನೆ, ಕಡತೋಕಾ ಮಂಜುನಾಥ ಭಾಗವತ, ಬಾಳೇಹದ್ದ ಕೃಷ್ಣ ಭಾಗವತ ಇವರೆಲ್ಲ ಮೂಲದಲ್ಲಿ ಭಾಗವಂತಿಕೆ ಕಲಿತಿದ್ದು ತಮ್ಮ ಅಕ್ಕಂದಿರು-ತಾಯಂದಿರಿಂದಲೇ ಎಂದು ಹೇಳಿದ್ದಾರೆ.

೨೭. ಶ್ರೀಧರರಾವ್ ಅರೂರು, ಕಾಸರಗೋಡು

೨೮. ಈ 'ಹಕ್ಕಿಪೂಜೆ' ನಿಮಗೆ ಹೇಗೆ ಸಿಕ್ಕಿತು ಎಂದು ಹಲವು ವಿದ್ವಾಂಸರೊಡನೆ ಚರ್ಚಿಸಿದಾಗ ಕೇಳಿದ್ದಾರೆ. ಆದರೆ ಇದು ಸ್ತ್ರೀಯರು ಮಾತ್ರ ಮಾಡುವ ಆಚರಣೆ. ಇದಕ್ಕೆ ಪುರೋಹಿತರ ಅಗತ್ಯ ಇಲ್ಲ. ಪುರೋಹಿತರಿಗೂ ಹಕ್ಕಿಪೂಜೆ ಸರಿಯಾಗಿ ಗೊತ್ತಿಲ್ಲ.

ಕನ್ನಡಿ

ಅಲ್ಲಮ ಪ್ರಭು ಮತ್ತು ಗೋರಕ್ಷನಾಥ

• ಮೂಲ : ರಾ.ಚಿಂ.ಢೇರೆ

ಅನು : ಚಂದ್ರಕಾಂತ ಪೋಕಳೆ

(ಮರಾಠಿ ಸಂಸ್ಕೃತಿಯನ್ನು ಅರಿಯಲು ಬೇಕಾದ ಸಂಶೋಧನ ಬರೆಹಗಳನ್ನು ಕನ್ನಡಿಗರಾದ ದ ರಾ ಬೇಂದ್ರೆ ಹಾಗೂ ಶಂಬಾ ಜೋಶಿಯವರು ಮಾಡಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಬೇಕಾದ ಬರೆಹಗಳನ್ನು ಅನೇಕ ಮರಾಠಿ ವಿದ್ವಾಂಸರೂ ಮಾಡುತ್ತಿದ್ದಾರೆ. ಅಂತಹ ವಿದ್ವಾಂಸರಲ್ಲಿ ರಾಚಿಂ ಢೇರೆಯವರೂ ಒಬ್ಬರು. ಅವರು ಲಜ್ಜಾಗೌರಿಯ ಮೇಲೆ ಬರೆದಿರುವ ಪುಸ್ತಕವನ್ನು ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಢೇರೆಯವರು ಸೂಫಿ ನಾಥ ಮಹಾನುಭಾವ ವಾರಕರಿ ಮುಂತಾದ ಪಂಥಗಳ ಬಗ್ಗೆ ಕೆಲಸ ಮಾಡಿದವರು. ಈ ಪಂಥಗಳು ಕರ್ನಾಟಕ ಮಹಾರಾಷ್ಟ್ರಗಳ ಗಡಿಭಾಗದಲ್ಲಿ ಇದ್ದು, ಎರಡೂ ಭಾಷಿಕ ಸಂಸ್ಕೃತಿಗಳಲ್ಲಿ ತಮ್ಮ ಬೇರುಗಳನ್ನು ಬಿಟ್ಟಿವೆ. ಪ್ರಸ್ತುತ ಲೇಖನವು ಕನ್ನಡದ ವಚನಕಾರನೂ ಯೋಗಿಯೂ ಆದ ಅಲ್ಲಮಪ್ರಭುವು ಹೇಗೆ ನಾಥ ಪರಂಪರೆಯಲ್ಲಿ ಸಂಬಂಧ ಪಡೆದಿದ್ದಾನೆ ಎಂಬ ಬಗ್ಗೆ ಢೇರೆಯವರ ಚಿಂತನೆಗಳನ್ನು ಒಳಗೊಂಡಿದೆ. ತಮ್ಮ ಅನುವಾದಗಳ ಮೂಲಕ ಮರಾಠಿ ಕನ್ನಡಗಳ ನಡುವಿನ ಸೇತುವೆಯಂತೆ ಕೆಲಸ ಮಾಡುತ್ತಿರುವ ಚಂದ್ರಕಾಂತ ಪೋಕಳೆಯುವರು ಇದನ್ನು ಅನುವಾದಿಸಿಕೊಟ್ಟಿದ್ದಾರೆ. ಸಂ)

'ಷಟ್‌ಸ್ಥಲ'ದ ಕರ್ತೃ ವಿಸೋಬಾ ಖೇಚರನು ಪರಂಪರೆಯಿಂದ ನಾಥ ಪಂಥೀಯನಾಗಿದ್ದರೂ, ಅವನು ವೀರಶೈವ ಸಿದ್ಧಾಂತವನ್ನು ವಿವರಿಸುವ 'ಷಟ್‌ಸ್ಥಲ' ಗ್ರಂಥವನ್ನು ರಚಿಸಿದನು. ಈ ಘಟನೆಯು ನಾಥ ಹಾಗೂ ವೀರಶೈವ ಸಂಪ್ರದಾಯದ ಪರಸ್ಪರ ಸಂಬಂಧದ ಗಂಭೀರ ಶೋಧ ನಡೆಸಲು ಪ್ರವೃತ್ತಗೊಳಿಸುವಂತಹದಾಗಿದೆ. ಪ್ರಾಚೀನರ ಸಂಪ್ರದಾಯ ನಿಷ್ಠೆ ಅತ್ಯಂತ ಉತ್ಕಟವಾಗಿರುತ್ತಿತ್ತು. ವಿಚಾರವನ್ನು ಪ್ರಕಟಪಡಿಸಲು ಸಂಪ್ರದಾಯ ನಿಷ್ಠ ಪರಿಭಾಷೆಯನ್ನೇ ಬಳಸುತ್ತಿದ್ದರು. ಹೀಗಿದ್ದಾಗ್ಯೂ ಒಂದು ಪರಂಪರೆಯ ದೀಕ್ಷೆ ಪಡೆದವನು ಬೇರೊಂದು ಪರಂಪರೆಯ ಪರಿಭಾಷೆ ಮತ್ತು ವಿಚಾರ ಸರಣಿಯನ್ನು ಸ್ವೀಕರಿಸಿ ಗ್ರಂಥ ರಚನೆಯನ್ನು ಮಾಡುತ್ತಾನೆಂದರೆ, ಆ ಉಭಯ ಪರಂಪರೆಯಲ್ಲಿ ಏನೋ ಒಂದು ಆತ್ಮೀಯ ಸಂಬಂಧ ಇರಬೇಕೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇಂಥ ಸಂಬಂಧ ಅಪ್ರಕಟಿತವಾಗಿದ್ದರೆ, ಅದನ್ನು ಶೋಧಿಸಿ ಪ್ರಕಟಗೊಳಿಸಬೇಕು. ಇದರಿಂದ ಸಾಂಸ್ಕೃತಿಕ ಇತಿಹಾಸದ ನಷ್ಟಗೊಂಡ ಪುಟಗಳನ್ನು ಸ್ಪಷ್ಟ ರೂಪದಲ್ಲಿ ಬೆಳಕಿಗೆ ತಂದಂತಾಗುತ್ತದೆ. ವಿಸೋಬಾನ 'ಷಟ್‌ಸ್ಥಲ' ಎಂಬ ಈ ಗ್ರಂಥದ ನಿಮಿತ್ತದಿಂದ

ನಾಥ ಹಾಗೂ ವೀರಶೈವ ಸಂಪ್ರದಾಯದಲ್ಲಿಯ ಸಂಬಂಧವನ್ನು ಅನಾವರಣಗೊಳಿಸುವದು ಅಗತ್ಯವಾಗಿದೆ.

ನಾಥ ಮತ್ತು ವೀರಶೈವ ಸಾಮ್ಯಭೇದ

ನಾಥ ಮತ್ತು ವೀರಶೈವ ಇವೆರಡೂ ಶೈವ ಸಂಪ್ರದಾಯಗಳು. ಶಿವನು ಇವೆರಡರ ಪರಮಾರಾಧ್ಯ. ಶಿವ-ಶಕ್ತಿಯ ಸಾಮರಸ್ಯವನ್ನು ಅನುಭವಿಸುವದೇ ಎರಡೂ ಸಂಪ್ರದಾಯದ ಸಾಧಕರ ಜೀವನೋದ್ದೇಶವಾಗಿದೆ. ಸಾಮಾಜಿಕ ಭೇದದ ಆಚೆಗೆ ಹೋಗಿ, ಯಾವ ಭೇದವನ್ನೂ ಮಾಡದೆ ಎಲ್ಲರನ್ನು ಸಮಾವೇಶಗೊಳಿಸಿಕೊಳ್ಳುವ ಔದಾರ್ಯ ಈ ಎರಡೂ ಸಂಪ್ರದಾಯದಲ್ಲಿ ಮೊದಲಿನಿಂದಲೂ ಇದೆ. ಮತ್ತೊಂದು ಮಹತ್ವದ ಸಂಗತಿಯೆಂದರೆ ಈ ಎರಡೂ ಸಂಪ್ರದಾಯದ ಪೃಷ್ಠ ಭೂಮಿ ಒಂದೇ ಎಂದು ಇಡೀ ಭಾರತದ ಶೈವ ಸಂಪ್ರದಾಯವು ಸಿದ್ಧ ಪಡಿಸಿದೆ. ಅದರ ಹೆಸರೇ ಪಾಶುಪತ ಸಂಪ್ರದಾಯ.

ಇವೆರಡರ ನಡುವೆ ಪರಸ್ಪರ ಸಂಬಂಧವಿದ್ದರೂ ಎರಡೂ ಭಿನ್ನ-ಭಿನ್ನ ಸಂಪ್ರದಾಯಗಳಾಗಿವೆ. ಅವುಗಳ ಪರಂಪರೆ ಭಿನ್ನವಾಗಿವೆ; ಮಠಗಳು ಭಿನ್ನವಾಗಿವೆ; ಅದರ ಅನುಯಾಯಿಗಳ ಬಾಹ್ಯ ಲಕ್ಷಣಗಳೂ ಭಿನ್ನವಾಗಿವೆ. ಪರಮಾರ್ಥದಲ್ಲಿ ಬಾಹ್ಯ ಸಂಗತಿಗಳನ್ನು ಅದೆಷ್ಟೇ ಗೌಣವೆಂದು ಒಪ್ಪಿಕೊಂಡರೂ, ಒಮ್ಮೆ ಸಂಪ್ರದಾಯ ಸ್ಥಾಪಿತಗೊಂಡಿತೆಂದರೆ, ಬಾಹ್ಯ ಸಂಗತಿಗಳ ಪ್ರತ್ಯೇಕತೆಯನ್ನು ಬಲವಂತದಿಂದ ಉಲ್ಲಂಘಿಸಿದ ವಿಸೋಬಾನು ನಾಥ-ವೀರಶೈವರ ಸ್ನೇಹ ಬಂಧವನ್ನು ರಕ್ಷಿಸಿದ್ದಾನೆ. ಹಿನ್ನೆಲೆ ಮತ್ತು ಪ್ರಚಾರ ಕ್ಷೇತ್ರವನ್ನು ಪರೀಕ್ಷಿಸಿ ನೋಡೋಣ.

ಕರ್ನಾಟಕದ ಬಸವ ಪೂರ್ವ ಶೈವ ಸಂಪ್ರದಾಯ

ಕರ್ನಾಟಕದಲ್ಲಿಯ ಬಸವಪೂರ್ವ ಶೈವರು ಪಾಶುಪತರೊಳಗಿನ ಕಾಳಾಮುಖ ಸಂಪ್ರದಾಯದ ಅನುಯಾಯಿಗಳಾಗಿದ್ದರು.[೧] ಕ್ರಿ.ಶ. ೯ನೇ ಶತಮಾನದಿಂದ ಕರ್ನಾಟಕದಲ್ಲಿ ಪಾಶುಪತರ ಪ್ರಭಾವ ತುಂಬಾ ಅಸಾಧಾರಣವಾಗಿತ್ತು. ಅವರು ಜೈನರನ್ನು ಕಟುವಾಗಿ ವಿರೋಧಿಸಿದರು. ಅವರು ವಿದ್ಯಾ-ಧನ-ಸಂಪನ್ನ ಮಠ, ಶಿಲ್ಪ ಸೌಂದರ್ಯ ಮತ್ತು ಭವ್ಯ ಮಂದಿರಗಳನ್ನು ಕರ್ನಾಟಕದ ತುಂಬಾ ನಿರ್ಮಾಣ ಮಾಡಿದ್ದರು. ಚಾಲುಕ್ಯ ಅರಸು ಮನೆತನದ ರಾಜ ಪುರುಷರು, ಅವರ ಮಾಂಡಲಿಕರು ಮತ್ತು ಅಧಿಕಾರಿಗಳು ಕಾಳಾಮುಖ ಶೈವಾಚಾರ್ಯರಿಗೆ ಆಶ್ರಯ ನೀಡಿದರು. ಬಸವಣ್ಣನ ತಂದೆಯಾದ ಮಾದಿರಾಜನು ಬಾಗೇವಾಡಿಯ ಮಹಾಜನ ಸಭೆಯ ಅಧ್ಯಕ್ಷನಾಗಿದ್ದರು. ಬಾಗೇವಾಡಿಯು ಪಾಶುಪತರ ಒಂದು ಪ್ರಮುಖ ಕೇಂದ್ರವಾಗಿತ್ತು.[೨] ಅಲ್ಲಿಯ ಸಕಲ ಶಿವ ಮಂದಿರಗಳು ಪಾಶುಪತರ ಅಧೀನದಲ್ಲಿದ್ದವು. ಅಲ್ಲಿಯ ಬೋಟೇಶ್ವರ ಶಿವ ಮಂದಿರಕ್ಕೆ ದೇವಗಿರಿಯ ಚೈತ್ರಪಾಲನೆಂಬ ಯಾದವ ರಾಜನು ದಾನ ನೀಡಿದ ಉಲ್ಲೇಖವು ಅವನ ಕ್ರಿ.ಶ. ೧೧೨೦ರ ಒಂದು ಶಾಸನದಲ್ಲಿ ಉಪಲಬ್ಧವಿದೆ. ಬಾಗೇವಾಡಿಯಂತೆ ಬಸವನ ಆದ್ಯ ಸಾಧನೆ ಸ್ಥಾನ ಹಾಗೂ ಅವನ ಆರಾಧ್ಯನ ಕೇಂದ್ರವಾಗಿತ್ತು.[೩] ಇಲ್ಲಿಯ ಮಹಾಜನ ಸಭೆಯೂ ಸಹ ಅದೇ ಸಂಪ್ರದಾಯದ ಅನುಯಾಯಿತ್ವವನ್ನು ಸ್ವೀಕರಿಸಿತ್ತು. ಈ ಮಹಾಜನ ಸಭೆಯ ಅಧಿಪತ್ಯದಲ್ಲಿಯ ಆಚೇಶ್ವರ ಶಿವನಿಗೆ ಸೇವಗಿರಿಯ ಸಿಂಘಣ ಯಾದವ ರಾಜನು

ದಾನ ನೀಡಿದ ಉಲ್ಲೇಖವು ಆಪನ ಕ್ರಿ.ಶ. ೧೧೩೭ರ ಒಂದು ಶಾಸನದಲ್ಲಿದೆ. ಅಂದರೆ ಬಸವನ ಪೂರ್ವ ಜೀವನದೊಂದಿಗೆ ಸಂಬಂಧವಿದ್ದ, ಬಾಗೇವಾಡಿ ಮತ್ತು ಕೂಡಲಸಂಗಮವು ಪಾಶುಪತ ಸಂಪ್ರದಾಯದ ಪ್ರಭಾವದೊಳಗಿತ್ತು. ಬಸವನ ತಂದೆಯೂ ಅದೇ ಸಂಪ್ರದಾಯದ ಅನುಯಾಯಿಯಾಗಿದ್ದನು. ಇದರರ್ಥವೇನೆಂದರೆ, ಬಸವೇಶ್ವರನಿಗೆ ಶೈವ ಧರ್ಮದ ವಾರಸಾ ಜನ್ಮತಃ ದೊರಕಿತ್ತು, ಅದು ಪಾಶುಪತ ಶೈವರದ್ದೇ ವಾರಸಾ ಆಗಿತ್ತು ಎಂದಾಗುತ್ತದೆ. ಮಹಾರಾಷ್ಟ್ರದ ತತ್ಕಾಲೀನ ರಾಜರಿಗೂ ಸಹ ಈ ಪಾಶುಪತ ಶೈವಾಚಾರ್ಯರ ಮೇಲೆ ತುಂಬಾ ಶ್ರದ್ಧೆಯಿತ್ತು. ಪಾಶುಪತ ಶೈವರ ಸಂಚಾರದಿಂದ ಪ್ರಭಾವಗೊಂಡ ವಾತಾವರಣ ದಲ್ಲಿ ಬೆಳೆದ ಬಸವೇಶ್ವರನು ತನ್ನ ಪೂರ್ವ ಪರಂಪರೆಯ ಪ್ರಮುಖ ಸ್ಥಾನವನ್ನು ಆಯ್ದು, ನವ ಸಂಪ್ರದಾಯದ ಪರಿವರ್ತನೆಗೊಳಿಸಿದ ಬಳಿಕ ಪೂರ್ವ ಪರಂಪರೆಯ ಅನುಯಾಯಿಗಳೆಲ್ಲ ಅವನತ್ತ ಆಕರ್ಷಣೆಗೊಂಡಿದ್ದು ಸಹಜವಾಗಿದೆ.

ಖ್ಯಾತ ವಿದ್ವಾಂಸರಾದ ಡಾ. ನಂದೀಮಠ ಈ ಸಂದರ್ಭದಲ್ಲಿ ಹೇಳಿದ ಮಾತು ಅತ್ಯಂತ ಮಹತ್ವದ್ದು.[೪]

It is interesting to note that this influencial sect was absorbed by the post - Basavan Virasaivism. The great Kalamukha mathas are transformed into Virasiva mathas. we have definite evidence on this point. The math at Pulvalli, the modern Huli in Belgaum district, is of epigraplaical fame. The teacher who presided over that math had great influence over the ruling classes, namely the local chiefs; and the people------the math, its branch-mathas and pontiffs are recorded in many inscriptions. Now this math is a Virasaiva maths. The geneology preserved in the matha tallied with the geneology recorded in the inscriptions. Without the least shadow of doubt the whilom Kalamukha matha was transformed in to a Virasaiva matha, at what time we do not know. Perhaps the same may have been the case with other Kalamukha mathas, in the kannada country at least.

ಶ್ರೀ ಮ. ಪು. ಪಾಟೀಲರು ಬ್ರಹ್ಮದಾಸನ ಮರಾಠಿ 'ಲೀಲಾ ವಿಶ್ವಂಬರ' ಎಂಬ ಕಾವ್ಯಕ್ಕೆ ಬರೆದ ಪ್ರಸ್ತಾವನೆಯಲ್ಲಿ.[೫] ಈ ಪರಿವರ್ತನ ಪ್ರಕ್ರಿಯೆಯನ್ನು ಇದೇ ರೀತಿ ವಿವೇಚಿಸುತ್ತಾರೆ -

"ಕಾಳಾಮುಖ ಪಾಶುಪತ ಪಂಥ ಮತ್ತು ವೀರಶೈವ ಪಂಥ ಇವೆರಡೂ ಶೈವಪಂಥಗಳೇ ಆಗಿದ್ದರಿಂದ, ಕಾಳಾಮುಖ ಪಾಶುಪಥ ಪಂಥದ ಅನುಯಾಯಿಗಳು ಈ ಹೊಸ ಧರ್ಮವನ್ನು ಸ್ವೀಕರಿಸುವಾಗ ಅವರ ಧರ್ಮಾಂತರದ ಪ್ರಶ್ನೆ ಉದ್ಭವಿಸಲಿಲ್ಲ ಅಥವಾ ಅವರ ದೇವರೂ ಬದಲಾಗಲಿಲ್ಲ. ಸಮಾಜದಲ್ಲಿಯ ಅನಿಷ್ಟ ರೂಢಿ-ಪರಂಪರೆಯನ್ನು ನಾಶಗೊಳಿಸಿ, ಸಮತೆಯ ತತ್ವದ ಮೇಲೆ ಸಮಾಜದ ಐಕ್ಯವನ್ನು ಸಾಧಿಸುವದು ಹಾಗೂ ಜನರ ನೈತಿಕ ಮೌಲ್ಯವನ್ನು ಹೆಚ್ಚಿಸುವುದು, ಕಾಯಕ ವೃತ್ತಿಯ ಕಡೆಗೆ ಹೊರಳಿಸಿ ಸಮಾಜೋನ್ನತಿಯ ಕಾರ್ಯಕ್ರಮವನ್ನು ಸ್ವೀಕರಿಸುವದು - ಈ ಪ್ರಶ್ನೆಗಳಷ್ಟೇ ಅವರ ಎದುರಿಗಿದ್ದವು. ಬಹುಜನ ಸಮಾಜಕ್ಕೆ ಅಗತ್ಯವಿದ್ದ ಈ ಕಾರ್ಯಕ್ರಮದಿಂದಾಗಿ ಈ ಪಂಥದ ಬಹಳಷ್ಟು ಅನುಯಾಯಿಗಳು ಈ ಹೊಸ ಧರ್ಮದ

ಬುನಾದಿಯಾದರು....ಹೀಗೆ ಕಾಳಾಮುಖಿ ಪಾಶುಪಥ ಪಂಥವು ವೀರಶೈವ ಧರ್ಮದಲ್ಲಿ ಪರಿವರ್ತನೆಗೊಂಡು ಈ ಪಂಥದ ಸಕಲ ಮಠಗಳು ವೀರಶೈವ ಮಠಗಳಾಗಿ ರೂಪಾಂತರ ಗೊಂಡವು. ಆ ಧರ್ಮಗುರುಗಳೂ ಸಹ ವೀರಶೈವ ಧರ್ಮದ್ವೇ ಪ್ರಚಾರ ಮಾಡಲಾರಂಭಿಸಿದರು. ಈ ರೀತಿ ಕಾಳಾಮುಖಿ ಪಾಶುಪಥ ಪಂಥವು ವೀರಶೈವ ಧರ್ಮದಲ್ಲಿ ಸಂಪೂರ್ಣ ವಿಲೀನಗೊಂಡು ಅದರ ಪ್ರತ್ಯೇಕ ಅಸ್ತಿತ್ವವೇ ನಷ್ಟಗೊಂಡಿತು."

ಬಸವೇಶ್ವರನ ಮೊದಲ ಕರ್ಮಭೂಮಿ : ಮಂಗಳವೇಢೆ

ಯಾದವ ಕಾಲೀನ ಮಹಾರಾಷ್ಟ್ರದ ಸಾಂಸ್ಕೃತಿಕ ಇತಿಹಾಸದಲ್ಲಿ ಅಲ್ಲಲ್ಲಿ ಕಂಡು ಬರುವ ವೀರಶೈವ-ಸಂಪರ್ಕದ ಗುರುತುಗಳ ಕಾರಣವು ಕರ್ನಾಟಕ-ಮಹಾರಾಷ್ಟ್ರದ ಭೌಗೋಲಿಕ ಸಾನಿಧ್ಯ ದಲ್ಲಿ, ಉಭಯ ಪ್ರದೇಶದಲ್ಲಿಯ ಪರಸ್ಪರರ ರಾಜ್ಯ ವಿಸ್ತರಣೆಯಲ್ಲಿ, ಧರ್ಮ ಸಂಪ್ರದಾಯದ ವೈಚಾರಿಕ ಆದಾನ-ಪ್ರಧಾನದಲ್ಲಿ ಕಾಣಸಿಗುತ್ತವೆ. ಆದರೆ ಇದರ ಮಹತ್ವದ ಕಾರಣವನ್ನು ಡಾ. ಪಾಂಡುರಂಗ ದೇಸಾಯಿಯವರ 'ಬಸವೇಶ್ವರ ಮತ್ತು ಅವನ ಕಾಲ' ಎಂಬ ಗ್ರಂಥವು ಹೊಸ ಬೆಳಕು ಚೆಲ್ಲುತ್ತದೆ. ಅವರು ಹಲವು ಮಹತ್ವದ ಪುರಾವೆಗಳ ಮೂಲಕ ಸಿದ್ಧ ಪಡಿಸಿದ್ದೇನೆಂದರೆ-ಬಿಜ್ಜಳನ ಮೊದಲ ರಾಜಧಾನಿ ಮಂಗಳವೇಢೆಯಾಗಿತ್ತು. ಬಸವಣ್ಣನು ಕೂಡಲಸಂಗಮದಲ್ಲಿ ಚಿಂತನ-ಮನನ ನಡೆಸಿದ ಬಳಿಕ, ಬಿಜ್ಜಳ ರಾಜ್ಯಾಡಳಿತದ ಮಹತ್ವದ ಸ್ಥಾನ ಸ್ವೀಕರಿಸಿದರೂ ಸಹ ಮಂಗಳವೇಢೆಯಲ್ಲೇ. ನವ ಸಂಪ್ರದಾಯದ ಪರಿವರ್ತನೆಯ ಹೊಸ ಹೆಜ್ಜೆಯನ್ನು ಅವನು ಮಂಗಲವೇಢೆಯ ಇಪ್ಪತ್ತು ವರ್ಷದ ವಾಸ್ತವದ ಕಾಲದಲ್ಲೇ ಹಾಕಿದ್ದು.

ಬಸವಣ್ಣನು ಕ್ರಿ.ಶ. ೧೧೩೨ ರಿಂದ ೧೧೫೩ ಕಾಲಾವಧಿಯಲ್ಲಿ ಮಂಗಳವೇಢೆಯಲ್ಲಿದ್ದ. ಈ ಇಪ್ಪತ್ತರ ತಾರುಣ್ಯದಲ್ಲಿ ಅವನು ಒಂದೆಡೆ ಉಚ್ಚ ರಾಜ ಪದವಿಯನ್ನು ಗಳಿಸಿದ್ದರೆ, ಮತ್ತೊಂದೆಡೆ ಚೈತನ್ಯದಾಯಕ ಶಿವಭಕ್ತಿ ವಿಚಾರಗಳಿಂದ ಪರಿಪಕ್ವಗೊಳ್ಳುತ್ತಿದ್ದ. ಮತ್ತೋರ್ವ ಪ್ರಸಿದ್ಧ ವೀರಶೈವಾಚಾರ್ಯ ರೇವಣಸಿದ್ಧರಿಗೂ ಈ ಮಂಗಳವೇಢೆಯ ಸಂಬಂಧವಿದೆ. ಇವತ್ತಿಗೂ ಮಂಗಳವೇಢೆಯಲ್ಲಿ ಅವರದ್ದೊಂದು ಸ್ಮೃತಿ ಮಂದಿರವಿದೆ. ಹಾಗೆಯೇ ಅವರ ಸುಪುತ್ರ ಹಾಗೂ ಖ್ಯಾತ ವೀರಶೈವ ಸಂತ ರುದ್ರಮುನಿಯ ಜನ್ಮವು ಸಹ ಮಂಗಳವೇಢೆಯಿಂದ ಕೇವಲ ಎಂಟು ಮೈಲು ದೂರದಲ್ಲಿರುವ ಸಿದ್ಧನ ಕೆರೆಯಲ್ಲಾಯಿತೆಂಬ ಉಲ್ಲೇಖವಿದೆ. ಇದು ಸಹ ಮಹತ್ವದ್ದು.

ಮಂಗಳವೇಢೆಯಲ್ಲಿದ್ದ ಬಸವೇಶ್ವರ ಹಾಗೂ ಉಳಿದ ವೀರಶೈವರ ಸಂತರ ಸಂಬಂಧ ವೀರಶೈವ ಸಂಪ್ರದಾಯದ ಉದಯವು ಪಂಡರಪುರ ಪರಿಸರದಲ್ಲಾದುದನ್ನು ದೃಢಪಡಿಸುತ್ತದೆ. ಕೈಲಾಸದ ರಾಜ ಹಾಗೂ ವೈಕುಂಠದ ರಾಜ-ಇಬ್ಬರೂ ಏಕಕಾಲಕ್ಕೆ ಒಂದೇ ಭೂಮಿಯಲ್ಲಿ ತಂತಮ್ಮ ಭಕ್ತರಿಗೆ ದರ್ಶನ-ಪ್ರೇರಣೆ ನೀಡುತ್ತಿದ್ದರು. ಸಮತೆಯ ದೀಕ್ಷೆ ನೀಡುತ್ತಿದ್ದರು. ಕರುಣೆಯ ಮಹತ್ವವನ್ನು ತಿಳಿಯಪಡಿಸುತ್ತಿದ್ದರು.

ಬಸವೇಶ್ವರನು ತಾವು ಶಿವಭಕ್ತಿಯಿಂದ, ಸಮಾಜೋದ್ಧಾರದ ಕಳಕಳಿಯಿಂದ ಮತ್ತು

ಶೈವ ಪರಂಪರೆಯ ವೈಚಾರಿಕ ಬುನಾದಿಯ ಸಹಾಯದಿಂದ ಪ್ರವರ್ತಿತಗೊಳಿಸಿದ ಹೊಸ ವೀರಶೈವ ಸಂಪ್ರದಾಯವು ಕರ್ನಾಟಕಕ್ಕೆ ತೀರಾ ಸನಿಹದಲ್ಲಿದ್ದ ಮಹಾರಾಷ್ಟ್ರದಲ್ಲಿಯೂ ಕೆಲ ಪ್ರಮಾಣದಲ್ಲಿ ಪಸರಿಸಿದ್ದು ಸ್ವಾಭಾವಿಕವಾಗಿದೆ.

ಯಾದವರ ಕಾಲದಲ್ಲಿ, ೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ವೀರಶೈವರು ತಮ್ಮ ಪ್ರಭುತ್ವ ಪ್ರಸ್ಥಾಪಿಸಿದರು. ವೀರಶೈವರೊಂದಿಗೆ ಯಾದವರಿಗೆ ಸಂಬಂಧ ಬರುವದು ಸಹಜ ವಾಗಿತ್ತು.[೯] ಯಾದವರ ರಾಜ ವ್ಯವಸ್ಥೆಯಲ್ಲಿ ವೀರಶೈವ ಉಚ್ಚ ಸ್ಥಾನ ಸಿಕ್ಕ ಉದಾಹರಣೆ ಉಪಲಬ್ಧವಿದೆ. ಮಹಾದೇವ ಯಾದವನ ಪ್ರಧಾನಿ ದೇವರಾಜನು ಹಾಗೂ ರಾಮದೇವರಾಯನ ಸೇನಾಪತಿ ಚೌಂಡರಸನು ವೀರಶೈವ ಪಂಥದ ಅನುಯಾಯಿಗಳಾಗಿದ್ದರು. ದೇವರಾಜನು ಸೊಲ್ಲಾಪುರದ ಕಪಿಲಸಿದ್ಧ ಮಲ್ಲಿಕಾರ್ಜುನನ ದರ್ಶನ ಪಡೆದು, ಅದರ ಪೂಜೆ-ಅರ್ಚನೆಗಾಗಿ ಒಂದು ಊರು ಇನಾಮು ನೀಡಿದ ಉಲ್ಲೇಖ ಅರ್ಚುನವಾರಾ ತಾಮ್ರ ಪಟ (ಕ್ರಿ.ಶ. ೧೧೮೨)ದಲ್ಲಿದೆ. ಈ ಸಾಧು ಬಸವೇಶ್ವರನ ವಂಶಜನಾಗಿದ್ದನು.[೧೦]

ಮಹಾರಾಷ್ಟ್ರದಲ್ಲಿ ವೀರಶೈವರು

ಯಾದವರ ಕಾಲದಲ್ಲಿ ಕರ್ನಾಟಕ-ಮಹಾರಾಷ್ಟ್ರದ ನಡುವೆ ರಾಜಕೀಯ-ಸಾಂಸ್ಕೃತಿಕ ಕೊಡು-ಕೊಳ್ಳುವಿಕೆ ಅತಿ ದೊಡ್ಡ ಪ್ರಮಾಣದಲ್ಲಿ ನಡೆಯಿತು. ಮರಾಠಿ ರಾಜರು ಕರ್ನಾಟಕದಲ್ಲಿ, ಕರ್ನಾಟಕದ ರಾಜರು ಮಹಾರಾಷ್ಟ್ರದಲ್ಲಿ ರಾಜ್ಯವಿಸ್ತಾರ ಮಾಡಿದರು. ವೀರಶೈವರ ಆದಿ ಕೇಂದ್ರವಾದ ಕಲ್ಯಾಣವು ಮರಾಠಿ ಸೀಮೆಯ ಸನಿಹದಲ್ಲಿತ್ತು. ಇದೂ ಅಲ್ಲದೆ ಇವತ್ತಿಗೂ ಅಲ್ಲಿ ಮರಾಠಿ ಪರಂಪರೆ ಉಳಿದುಕೊಂಡಿದೆ.

ಈ ಭೌಗೋಳಿಕ, ರಾಜಕೀಯ ಮತ್ತು ಸಾಂಸ್ಕೃತಿಕ ನಿಕಟದಿಂದಾಗಿ ಮಹಾರಾಷ್ಟ್ರದಲ್ಲಿಯೂ ವೀರಶೈವರ ಪ್ರವೇಶವಾಯಿತು. ಬಸವ ಸಮಕಾಲೀನ ವೀರಶೈವ ಆಚಾರ್ಯನಾದ ಸಿದ್ಧರಾಮೇಶ್ವರನು ಸೊಲ್ಲಾಪುರದವನು. ಸೊಲ್ಲಾಪುರ, ಕೊಲ್ಲಾಪುರ, ಸಾಂಗಲಿ-ಈ ದಕ್ಷಿಣ ಮಹಾರಾಷ್ಟ್ರದಲ್ಲಿ ಮತ್ತು ಬೀದರ-ಕಲ್ಯಾಣಿಗೆ ನಿಕಟವಾಗಿದ್ದ ಪೂರ್ವ ಮಹಾರಾಷ್ಟ್ರವು ವೀರಶೈವರನ್ನು ಸ್ವಾಗತಿಸಲು ಅನುಕೂಲವಾಗಿದ್ದರೆ ಅಚ್ಚರಿ ಪಡಬೇಕಿಲ್ಲ. ನಾಂದೇಡು ಉಸ್ಮಾನಾ ಬಾದ ಪ್ರದೇಶದಲ್ಲಿ ಹಲವು ಕನ್ನಡ ಶಿಲಾಶಾಸನಗಳು ಉಪಲಬ್ಧವಾಗಿವೆ. ಇದು ಈ ಪ್ರದೇಶ ಕರ್ನಾಟಕದೊಂದಿಗೆ ಹೊಂದಿದ ಸಂಬಂಧವನ್ನು ದೃಢಪಡಿಸುತ್ತದೆ. ಇಂದಿಗೂ ಮಹಾರಾಷ್ಟ್ರ ದಲ್ಲಿಯ ಶಿವ ಮಂದಿರದಲ್ಲಿ ಜಂಗಮ ಪೂಜಾರಿಗಳಿದ್ದಾರೆ. ಹಾಗೆಯೇ ವಾಣಿ, ನೇಕಾರರಂಥಹ ಲಿಂಗಾಯತ ಪಂಥದ ವ್ಯಾಪಾರಿಗಳ ಸಮೂಹ ಮಹಾರಾಷ್ಟ್ರದ ಎಲ್ಲೆಡೆ ಪಸರಿಸಿದ್ದಾರೆ. ಮರಾಠವಾಡದಲ್ಲಿ ಪಸರಿಸಿದ ದೇವಾಂಗ ಸಮಾಜ ಹಾಗೂ ಮೋಗಾದಲ್ಲಿಯ ಪುರೋಹಿತರಾದ ಡಕ್ಕಲವಾರರು ವೀರಶೈವ ಸಂಪ್ರದಾಯದ ಅನುಯಾಯಿಗಳೇ ಆಗಿದ್ದಾರೆ. ದೇವಾಂಗ ಮತ್ತು ಡಕ್ಕಲವಾರರ ಜಾತಿ ಪುರಾಣದಲ್ಲಿ ವೀರಶೈವ ಪ್ರಭಾವದ ಗುರುತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಮಹಾನುಭಾವ ಮತ್ತು ವೀರಶೈವರು

ನಾಥ ಸಂಪ್ರದಾಯದಂತೆ ಮಹಾನುಭಾವ ಪಂಥದ ಮೇಲೂ ವೀರಶೈವ ಸಂಪ್ರದಾಯದ ಪ್ರಭಾವ ಕೆಲ ಅಂಶದ ಮಟ್ಟಿಗಾದರೂ ಬಿದ್ದಿರಬೇಕು. ಮಹಾನುಭಾವ ಪಂಥದ ಸಂಸ್ಥಾಪಕನಾದ ಚಕ್ರಧರ ಸ್ವಾಮಿಯು ನವಪಂಥ ಸ್ಥಾಪನೆಗಿಂತ ಮೊದಲು, ಗುರು ಬೋಧನೆಯ ಬಳಿಕ ಶ್ರೀಶೈಲಗಿರಿಯಲ್ಲಿ ಏಕಾಂತ ಸಾಧನೆಗಾಗಿ ಹನ್ನೆರಡು ವರ್ಷ ನೆಲೆಸಿದ್ದನು. ಆ ಕಾಲದಲ್ಲಿ ಶ್ರೀ ಶೈಲವು ವೀರಶೈವರದ್ದೇ ಒಂದು ಮಹಾಕೇಂದ್ರವಾಗಿತ್ತು. ಸ್ವಾಮಿಯ ಸಂಪರ್ಕದಲ್ಲಿ ಬಂದ ನಾನಾ ಸಾಧನ ಪ್ರವಾಹಗಳಲ್ಲಿ ವೀರಶೈವ ಮತದ ಸಮಾವೇಶವೂ ಆಗಿದ್ದರಲ್ಲಿ ಸಂದೇಹವಿಲ್ಲ. ಪ್ರಾ.ರ.ಮ. ಭುಸಾರಿ ಈ ಮೊದಲೇ ಉಭಯ ಪಂಥದಲ್ಲಿಯ ಸಾಮ್ಯ ಸ್ವರೂಪವನ್ನು ಸ್ಪಷ್ಟ ಪಡಿಸಿದ್ದಾರೆ.[೨೦] ಮಹಾನುಭಾವರ ಪಂಚ ಕೃಷ್ಣಕಲ್ಪನೆಯು ವೀರಶೈವರ ಪಂಚಾಚಾರ್ಯ ಕಲ್ಪನೆಯೊಂದಿಗೆ ಹೋಲುತ್ತಿರುವದನ್ನು ತಿಳಿಸಿ, ಎರಡೂ ಪಂಥದ ಆಚಾರ-ವಿಚಾರಗಳ ಸಾಮ್ಯವನ್ನು ಈ ರೀತಿ ಹೇಳಿದ್ದಾರೆ.

> ಈ ಎರಡೂ ಪಂಥಗಳು ಸಾಮಾಜಿಕ ವಿಷಮತೆಯ ವಿರುದ್ಧ ಹೋರಾಡುತ್ತವೆ. ವಿಶೇಷವಾಗಿ ಸ್ತ್ರೀ ಶೂದ್ರ ಸಂಬಂಧದಲ್ಲಿ ಉಭಯ ಪಂಥ ಸಂಸ್ಥಾಪಕರ ಧೋರಣೆ ಒಂದೇ ಆಗಿದೆ. ಲಿಂಗಾಯತ ಪಂಥದಲ್ಲಿ ಪುರುಷರಂತೆ ಹೆಂಗಸರಿಗೂ ದೀಕ್ಷೆ ನೀಡಲಾಗುತ್ತದೆ. ಮಹಾನುಭಾವವು ಸನ್ಯಾಸ ಮಾರ್ಗಿಯಾಗಿದ್ದರಿಂದ ಪುರುಷರಂತೆ ಸ್ತ್ರೀಯರಿಗೂ ಸನ್ಯಾಸ ಪಡೆಯುವ ಅಧಿಕಾರವಿದೆ. ಎರಡೂ ಪಂಥದಲ್ಲಿ ಸ್ತ್ರೀಯರು ಮಾಸಿಕ ಮುಟ್ಟ-ಚಿಟ್ಟನ್ನು ಪಾಲಿಸುವದಿಲ್ಲ. ತಾತ್ವಿಕವಾಗಿ ಎರಡೂ ಪಂಥಗಳು ಮೂರ್ತಿಪೂಜೆಯನ್ನು ವಿರೋಧಿಸುತ್ತವೆ. ಆದರೂ ಆಚಾರದಲ್ಲಿ ಮೂರ್ತಿ ಪೂಜೆಯ ಅಂತರ್ಭಾವ ಮಾಡಿಕೊಂಡಿದ್ದಾರೆ. ಲಿಂಗಾಯತ ಜನ ಯಾವ ರೀತಿಯಲ್ಲಿ ಶಿವಾಲಯಕ್ಕೆ ಹೋಗಿ ಶಿವಲಿಂಗದ ಪೂಜೆ-ಅರ್ಚನೆ ಮಾಡುತ್ತಾರೋ, ಅದೇ ರೀತಿಯಲ್ಲಿ ಮಹಾನುಭಾವರು ಸಂಬಂಧಿಸಿದ ಪಾಷಾಣದ ಮೂರ್ತಿಯನ್ನು ನಿರ್ಮಿಸಿ ಪೂಜೆ ಮಾಡುತ್ತಾರೆ. ಈ ಎರಡೂ ಪಂಥದಲ್ಲಿ ಅಗ್ನಿಯ ವೈದಿಕ ಉಪಾಸನೆಯು ಅಸ್ವೀಕೃತವಾಗಿದ್ದರಿಂದ ಅವರ ಪ್ರೇತ ಸಂಸ್ಕಾರವು ಅಗ್ನಿ ರಹಿತವಾಗಿ ನಡೆಯುತ್ತದೆ. ಹೀಗಾಗಿ ಹೆಣ ಹುಗಿಯುವ ಪದ್ಧತಿ ರೂಢಿಗೊಂಡಿರಬೇಕು. ಈ ಎರಡೂ ಪಂಥ ಶಿವಾ ಸೂತ್ರವನ್ನು ತ್ಯಾಗ ಮಾಡಿದ್ದಲ್ಲದೆ, ಉಳಿದ ಧಾರ್ಮಿಕ ಸಂಸ್ಕಾರಕ್ಕೂ ತಿಲಾಂಜಲಿ ನೀಡಿದರು.

ವೀರಶೈವರಿಗೆ ಪ್ರಿಯವಾಗಿದ್ದ 'ಸ್ಥಲ' ಎಂಬ ಸಂಜ್ಞೆಯು ಮಹಾನುಭಾವರ 'ಆಚಾರ ಸ್ಥಳ', 'ತ್ಯಾಗ ಸ್ಥಳ', 'ಸ್ಮೃತಿ ಸ್ಥಳ'- ಎಂಬ ಗ್ರಂಥದಲ್ಲಿ ಧಿಮಾಕಿನಿಂದ ಮೆರೆಯುತ್ತಿರುವದಕ್ಕೂ ವೀರಶೈವ ಪ್ರಭಾವವೇ ಕಾರಣ. ಲೀಳಾ ಚರಿತ್ರೆಯಲ್ಲಿ 'ಸ್ಥಳ' ಎಂಬ ಸಂಜ್ಞೆಯನ್ನು ಸಿದ್ಧಾಂತ ಸೂಚಿಕವಾಗಿ ಒಂದೆಡೆ ಬಳಸಿದ್ದು ಕಂಡು ಬರುತ್ತದೆ.[೨೧] ಒಂದೂರಿನಲ್ಲಿ ಇಬ್ಬರು ಸನ್ಯಾಸಿಗಳ ನಡುವೆ ನಡೆಯಿತು. ಇದಕ್ಕೆ ಚಕ್ರಧರ ಸ್ವಾಮಿ ಪಂಚರಾಗಿದ್ದರು. ಇಲ್ಲಿ 'ಸ್ಥಲ' ಎಂಬ ಸಂಜ್ಞೆಯನ್ನು 'ಸಿದ್ಧಾಂತ' ಎಂಬ ಅರ್ಥದಲ್ಲಿ ಬಳಸಲಾಗಿದೆ.

ಅಲ್ಲಮ ಪ್ರಭು-ಗೋರಕ್ಷನಾಥ ಸಂಬಂಧ

ಉದಯದ ಹಿನ್ನೆಲೆಯ ಸಮಾನತೆ ಮತ್ತು ಪ್ರಚಾರ ಕ್ಷೇತ್ರಗಳ ನಿಕಟತೆಯಿಂದಾಗಿ ನಾಥ ಮತ್ತು ವೀರಶೈವ ಈ ಸಂಪ್ರದಾಯದೊಳಗೆ ಆತ್ಮೀಯ ಸಂಬಂಧ ಪ್ರಸ್ಥಾಪಿತಗೊಂಡಿದ್ದು ಮತ್ತು ಆ ಸಂಬಂಧದಿಂದ ವೈಚಾರಿಕ ಕೊಡು-ಕೊಳ್ಳುವಿಕೆ ನಡೆದದ್ದು ತೀರಾ ಸ್ವಾಭಾವಿಕವಾಗಿತ್ತು. ಆದರೆ ಹೀಗೆನ್ನುವದು ಬರೇ ಸಂಭಾವನೀಯತೆಯ ಕಕ್ಷೆಯೊಳಗಿನ ಒಂದು ಅನುಮಾನ, ಅಷ್ಟೆ. ಈ ಅನುಮಾನಕ್ಕೆ ಸತ್ಯದ ಪ್ರತಿಷ್ಠೆ ದಕ್ಕಬೇಕಾದರೆ, ದೃಢ ಪ್ರಮಾಣದ ಅಗತ್ಯವಿದೆ. ಸುದೈವಕ್ಕೆ ಈ ಬಾಬತ್ತಿನ ಎಲ್ಲ ಸಂಶಯ ನಿವಾರಣೆ ಮಾಡುವ ಮತ್ತು ಈ ಎರಡು ಸಂಪ್ರದಾಯದ ಸನಿಹದ ರಹಸ್ಯವನ್ನು ಉದ್ಘೋಷಿತಗೊಳಿಸುವಂತಹ ಒಂದು ಪ್ರಮಾಣ ಉಪಲಬ್ಧವಿದೆ. ಈ ಪ್ರಮಾಣವನ್ನು ಸ್ಥೂಲ ರೂಪದಲ್ಲಿ, ಆದರೆ, ಖಚಿತ ಮಾತಿನಲ್ಲಿ-ದ.ರಾ. ಬೇಂದ್ರೆಯವರು 'ಮಹಾರಾಷ್ಟ್ರ-ಸಾಹಿತ್ಯ-ಪತ್ರಿಕೆ'ಯ ಒಂದು ಲೇಖದಲ್ಲಿ ಹೇಳಿದ್ದಾರೆ.[೧೩] "(ವೀರಶೈವ ಮುಖಂಡ) ಅಲ್ಲಮನು ಗೋರಖನಾಥನ ಸಮಕಾಲೀನನಾಗಿದ್ದ. ಅವರಿಬ್ಬರಲ್ಲಿ ವಾದ -ಸಂವಾದ ನಡೆಯಿತು. ಅಲ್ಲಿ ಗೋರಖನಾಥ' ಸೋತನು. ಗೋರಖನು ಲಿಂಗ ಮಹಾನುಭಾವದಲ್ಲಿ ಕೆಲ ದಿನ ಕಳೆದನು; ಕನ್ನಡದಲ್ಲಿ ವೀರಶೈವರಂತೆ ವಚನ ನಿರ್ಮಿಸಿದನು. ಅವನ ವಚನಗಳು ಉಪಲಬ್ಧವಾಗಿವೆ. ಗೋರಖನಾಥನು ನಿರ್ಮಿಸಿದ ಮರಾಠಿ ಸಾಹಿತ್ಯದಲ್ಲಿ ಲಿಂಗ ಸಂಜ್ಞೆಯನ್ನು ಮೇಲ್ನೋಟಕ್ಕೆ ಬಳಸಲಾಗಿದೆ. ಗೋರಖನು ಮತ್ಸ್ಯೇಂದ್ರನ ಖಾಸಾ ಶಿಷ್ಯ."

ಅಲ್ಲಮ ಹಾಗೂ ಗೋರಖನಾಥನ ಪರಸ್ಪರ ಭೆಟ್ಟಿಯಾಗಿತ್ತು. ಅಲ್ಲಮನ ಪ್ರಭಾವ ಗೋರಖನ ಮೇಲಾಗಿತ್ತು. ಗೋರಖನು ಅಲ್ಲಮನನ್ನು ಅನುಸರಿಸಿ ವಚನಗಳನ್ನು ನಿರ್ಮಿಸಿದ- ಈ ವಿವರಗಳು ನಾಥರ ಮೇಲಾದ ವೀರಶೈವರ ಪ್ರಭಾವವನ್ನು ತಿಳಿಸುತ್ತದೆ. ಅಲ್ಲಮ ಹಾಗೂ ಗೋರಖನ ವಾದ ಹಾಗೂ ಗೋರಖನ ಪೂರಕವಾದ ಪ್ರತಿಕ್ರಿಯೆಯು ಅಲ್ಲಮನ 'ಶೂನ್ಯ ಸಂಪಾದನೆ'ಯಲ್ಲಿ ಸಂಕಲನಗೊಳಿಸಲಾಗಿದೆ.

ಅಲ್ಲಮನು ಸಹ ಬಸವನಂತೆಯೇ ಕಾಳಾಮುಖ ಪಾಶುಪಾತ ಸಂಪ್ರದಾಯದ ಸಂಸ್ಕಾರ ದಿಂದಲೇ ಸಮೃದ್ಧಗೊಂಡಿದ್ದನು. ಅಲ್ಲಮ ಕರ್ನಾಟಕದ ಜ್ಞಾನೇಶ್ವರನಾಗಿದ್ದರೆ, ಬಸವಣ್ಣ ನಾಮದೇವನಾಗಿದ್ದ. ಕಲ್ಯಾಣದ ಅನುಭವಮಂಟಪಕ್ಕೆ ಅಲ್ಲಮನೇ ಅಧ್ಯಕ್ಷ ನಾಗಿದ್ದನು. ವೀರಶೈವ ಸಂಪ್ರದಾಯದಲ್ಲಿ ಅವನ ಸ್ಥಾನ ಅತ್ಯಂತ ಉನ್ನತ.

ಅಲ್ಲಮನ ಗುರು-ಅನಿಮಿಷ ಮುನಿ

ಅಲ್ಲಮ ಸಂಚಾರದಲ್ಲಿದ್ದಾಗ ಗೋಗಾರ್ಯನೆಂಬ ಒಬ್ಬ ಶಿವಭಕ್ತ ವನರಕ್ಷಕನು ಅವನಿಗೆ ಭೆಟ್ಟಿಯಾದ. ಅವನ ಜೊತೆಗಿರುವಾಗ ಒಂದು ಸಮಾಧಿ ಗುಹೆಯಲ್ಲಿ 'ಅನಿಮಿಷ'ನೆಂಬ ಯೋಗಿಯು ಸಮಾಧಿ ಸ್ಥಿತಿಯಲ್ಲಿದ್ದದ್ದು ಕಂಡು ಬಂತು. ಆ ಯೋಗಿಯು 'ಅನಿಮಿಷನೆಂಬ ಶ್ರೇಷ್ಠ ದೇಶಿಕ'ನಾಗಿದ್ದಾನೆ ಎಂದು ಅಲ್ಲಮನು ತಕ್ಷಣ ಗುರುತಿಸಿದನು. ಗೋಗನ ಸಹಾಯದಿಂದ ತನಗೊಬ್ಬ ಶ್ರೇಷ್ಠ ಗುರು ಲಭಿಸಿದ ಎಂಬ ಅರಿವಿನಿಂದ ಅವನು ಗೋಗಾನಿಗೆ ಹೇಳಿದ,

"ಬಡವನಿಗೆ ಹಣ, ಕುರುಡನಿಗೆ ಕಣ್ಣು, ಕುಂಟನಿಗೆ ಕಾಲು ಸಿಕ್ಕಂತೆ, ಅನಿಮಿಷರ ದರ್ಶನ ದೊರಕಿದ್ದು ನನ್ನ ಸುದೈವ! ನಿನ್ನಿಂದಾಗಿ ನಾನು ಕೃತಾರ್ಥನಾದೆ."

ಶಿವಯೋಗಿಗಳ ದರ್ಶನಕ್ಕಾಗಿ ಸಂಚರಿಸುತ್ತಿದ್ದ ಅಲ್ಲಮನಿಗೆ ಅನಿಮಿಷರ ದರ್ಶನದಿಂದ ತುಂಬಾ ಸಂತೋಷವಾಯಿತು. ಅನಿಮಿಷನ ಸ್ತುತಿಗೆ ತೊಡಗಿದ - 'ಹೇ ಅನಿಮಿಷನೇ, ನೀನು ಮೂಲೋಕದ ಗುರು. ನನ್ನ ಶ್ರೇಷ್ಠ ಗುರು. ಉತ್ತಮ ಋಷಿ, ನೀನು ಕೃಪಾ ದಯಾಳು. ಪುಟ್ಟ ಮಗುವಾದ ನನ್ನ ಮೇಲೆ ಕೃಪೆ ತೋರು.'

ತಕ್ಷಣ ಅನಿಮಿಷನು ತನ್ನ ತೇಜೋಮಯ ಕೈ ಚಾಚಿ ಅಲ್ಲಮನ ಕೈ ಸ್ಪರ್ಶಿಸಿದನು. ಆಗ ಅನಿಮಿಷನ ಪ್ರಾಣಕಳೆಯು ಇಷ್ಟಲಿಂಗ ಸಹಿತ ಅಲ್ಲಮನಲ್ಲಿ ಸೇರಿಕೊಂಡಿತು.

ಈ ವರ್ಣನೆಯು 'ಪ್ರಭುಲಿಂಗಲೀಲೆ'ಯಲ್ಲಿ ಬಂದಿದ್ದು.[೧೪] ಅಲ್ಲಮನಿಗೆ ಅನಿಮಿಷನೆಂಬ ಶಿವಯೋಗಿ ಗುರುವಾಗಿದ್ದ ಎಂಬುದು ತಿಳಿದು ಬರುತ್ತದೆ. 'ಅನಿಮಿಷ'ದ ಅರ್ಥ 'ಮತ್ಸ್ಯ' ಎಂದಿರುವದರಿಂದ ಬೇಂದ್ರೆಯವರು ಅನಿಮಿಷ ಮತ್ಸ್ಯೇಂದ್ರ ಒಂದೇ ಎಂಬ ವಿಚಾರ ಮುಂದಿಡುತ್ತಾರೆ.[೧೫] "ಅಲ್ಲಮನಿಗೆ ಅನಿಮಿಷನ ನೇರ ಉಪದೇಶವಾಗಲಿಲ್ಲ. ದೇಹ ಬಿಡುವ ಕೊನೆಗಳಿಗೆಯಲ್ಲಿ ಅವರಿಬ್ಬರ ಭೆಟ್ಟಿಯಾಯಿತು. ಅನಿಮಿಷ ಅಲ್ಲಮನಿಗೆ ಲಿಂಗ ನೀಡಿದ. ಇದೇ ದೀಕ್ಷೆ. 'ಗುರೋಸ್ತು ಮೌನ ವ್ಯಾಖ್ಯಾನ ಶಿಷ್ಯಸ್ತು ಛಿನ್ನ ಸಂಶಯ:' ಇದಿಷ್ಟೇ ಉಪದೇಶ. ಅನಿಮಿಷ ಮರುಕ್ಷಣ ದೇಹ ತೊರೆದ. ಬಳಿಕ ಅಲ್ಲಮ ಕರ್ನಾಟಕ ತುಂಬಾ ಅಲೆದಾಡಿದ. ....ಅನಿಮಿಷನೇ ಮತ್ಸ್ಯೇಂದ್ರನಾಥನಾಗಿರಬೇಕು ಎಂಬುದು ತರ್ಕ. ಯಾಕೆಂದರೆ, ಅನಿಮಿಷ ನೆಂದರೆ ಮತ್ಸ್ಯ. ಅಲ್ಲಮನು ಮತ್ಸ್ಯೇಂದ್ರನ ಪಂಥದವನಾಗಿದ್ದನು.....ಅಲ್ಲಮ ಪ್ರಭುವಿನ ಹೆಸರು ನಾಥ ಸಂಪ್ರದಾಯದ ಹಠಯೋಗ ಪ್ರದೀಪಿಕೆಯ ಪರಂಪರೆಯಲ್ಲಿ ಬರುತ್ತದೆ."

ಬೇಂದ್ರೆಯ ಪ್ರಕಾರ ಅಲ್ಲಮ ಪ್ರಭು ಹಾಗೂ ಗೋರಕ್ಷನಾಥ ಇಬ್ಬರೂ ಮತ್ಸ್ಯೇಂದ್ರನಾಥನ ಶಿಷ್ಯರಾಗಿದ್ದರಿಂದ ಅವರಿಬ್ಬರು ಗುರು ಬಂಧುಗಳಾಗುತ್ತಾರೆ. ಬೇಂದ್ರೆಯವರ ಊಹೆಯಂತೆ ಅನಿಮಿಷನು ಮತ್ಸ್ಯೇಂದ್ರನಾಗಿರಲಿ-ಬಿಡಲಿ, ಆದರೆ ಅಲ್ಲಮ ಹಾಗೂ ಗೋರಕ್ಷ ಭೆಟ್ಟಿಯಾಗಿದ್ದರು, ಆ ಭೆಟ್ಟಿಯಿಂದ ಗೋರಕ್ಷನ ವೈಚಾರಿಕ ನಿಲುವಿನಲ್ಲಿ ಬದಲಾವಣೆಯಾಯಿತು ಎಂಬುದು ಮುಖ್ಯವಾಗುತ್ತದೆ. 'ಪ್ರಭುಲಿಂಗಲೀಲೆ'ಯಲ್ಲಿ ಈ ಚಾರಿತ್ರಿಕ ಅಂಶವನ್ನು ಕಾಣಬಹುದು.

ಅಲ್ಲಮ ಹಾಗೂ ಗೋರಕ್ಷನ ಭೆಟ್ಟಿ

೧೫ನೇ ಶತಮಾನದ ಕನ್ನಡ ಕವಿ ಚಾಮರಸನು 'ಪ್ರಭುಲಿಂಗಲೀಲೆ'ಯಲ್ಲಿ ಅಲ್ಲಮನ ಚರಿತ್ರೆ ಹೇಳಿದ್ದಾನೆ. ಈ ಗ್ರಂಥ ಆಧಾರದಿಂದ ನರಸಿಂಹ ಸರಸ್ವತಿ ಪರಂಪರೆಯ ಮರಾಠಿ ಕವಿ ಬ್ರಹ್ಮದಾಸನು 'ಲೀಲಾ ವಿಶ್ವಂಭರ' ಎಂಬ ಓವೀ ಗ್ರಂಥ ರಚಿಸಿ, ಪರಿಚಯಿಸಿದ್ದಾನೆ. 'ಪ್ರಭುಲಿಂಗ ಲೀಲೆ' ಎಂಬ ಹೆಸರಿನ ಇಪ್ಪತ್ತೈದು ಅಧ್ಯಾಯಗಳ ಒಂದು ಸಂಸ್ಕೃತ ಗ್ರಂಥವನ್ನೂ ರಚಿಸಲಾಗಿದೆ. ಈ ಮೂರು ಗ್ರಂಥದಲ್ಲಿಯ ಅಲ್ಲಮನು ಚರಿತ್ರೆ ಒಂದೇ ಬಗೆಯದಾಗಿದೆ. ಅವನು ವಿವಾಹಿತನೇ, ಬ್ರಹ್ಮಚಾರಿಯೇ ಎಂಬ ಬಗೆಗಷ್ಟೇ ಭಿನ್ನಾಭಿಪ್ರಾಯವಿದೆ.

ಅಲ್ಲಮ ಬನವಾಸಿಯವನು. ಅಲ್ಲಿಯ ಮಧುಕೇಶ್ವರ ದೇವಾಲಯದ ಶಿವಭಕ್ತ. ಒಮ್ಮೆ ಓರ್ವ ನರ್ತಕಿಯ ಪೂಜೆ ನೃತ್ಯಕ್ಕೆ ಮೃದಂಗ ಬಾರಿಸುತ್ತಿದ್ದಾಗ ಆಕೆ ತರುಣ ಅಲ್ಲಮನ ಮೇಲೆ ಮೋಹಗೊಂಡಳು. ಅವನನ್ನು ತನ್ನ ಮೋಹ ಜಾಲದಲ್ಲಿ ಸಿಲುಕಿಸಲು ಪ್ರಯತ್ನಿಸಿದಳು. ಆದರೆ ವಿರಕ್ತನಾದ ಅಲ್ಲಮನು ಆಕೆಗೆ ಮರುಳಾಗಲಿಲ್ಲ. ಬಳಿಕ ಅಲ್ಲಿಂದ ನಿರ್ಗಮಿಸಿದ ಅಲ್ಲಮನು ಕರ್ನಾಟಕದ ಉದ್ದಕ್ಕೂ ಸಂಚರಿಸಿದ. ಈ ಭ್ರಮಣ ಕಾಲದಲ್ಲಿ ಅನಿಮಿಷ ಗುರು ಸಿಕ್ಕ; ಕಲ್ಯಾಣದಲ್ಲಿ ಬಸವನ ಭೇಟ್ಟಿಯಾಯಿತು; ಬಸವ ಅವನನ್ನು ಅನುಭವಮಂಟಪದ ಅಧ್ಯಕ್ಷನನ್ನಾಗಿಸಿದ; ಸಿದ್ಧರಾಮ, ಅಕ್ಕ, ಮುಕ್ತಾಯಕ್ಕ-ಇವರ ಸಹವಾಸ ದೊರಕಿತು. ಕೊನೆಗೆ ಶ್ರೀ ಶೈಲದ ಕದಳೀ ವನದಲ್ಲಿ ನೆಲೆಸಿದರು. ಕದಳೀ ವನವೇ ಅವರ ಸಮಾಧಿ ಸ್ಥಳ. ಇಡೀ ಭಾರತದ ಆಧ್ಯಾತ್ಮಿಕ ಚರಿತ್ರೆಯಲ್ಲೇ ಅಲ್ಲಮನ ಬದುಕು ಆದರ್ಶಪ್ರಾಯವಾದುದು. ಅಲ್ಲಮನ ವಚನಗಳು ಆಧ್ಯಾತ್ಮಿಕ ದಿವ್ಯಾನುಭವದ ಏಭಂಡಾರವಾಗಿವೆ.

ತನ್ನ ಸಾರ್ಥಕ ಬದುಕನ್ನು ಶಿವನಲ್ಲಿ ಐಕ್ಯಗೊಳಿಸಲು ಅಲ್ಲಮ ಕದಳೀ ಬನಕ್ಕೆ ಹೋದ. ಅಲ್ಲಿ ಗೋರಕ್ಷನ ಭೇಟ್ಟಿಯಾಯಿತು. ಸಂಸ್ಕೃತ 'ಪ್ರಭುಲಿಂಗಲೀಲೆ'ಯ ೧೯ನೇ ಅಧ್ಯಾಯದಲ್ಲಿ ಈ ಭೇಟ್ಟಿಯ ವರ್ಣನೆ ಬಂದಿದೆ."......ಸಿದ್ಧಿ ಮಂತ್ರ ಸಾಧಕರ ಪ್ರಸಿದ್ಧ ಸ್ಥಳವಾದ ಶ್ರೀಗಿರಿಯಲ್ಲಿ ಗೋರಕ್ಷನಾಥ ವಾಸಿಸುತ್ತಿದ್ದ. 'ಎಲ್ಲ ಸಿದ್ಧಿ ಪ್ರಾಪ್ತಿಗಳಿಸಿಕೊಂಡ ನಾನು ಎಲ್ಲ ಯೋಗೀಶ್ವರನಿಗಿಂತಲೂ ಶ್ರೇಷ್ಠ' ಎಂಬ ಅಭಿಮಾನ ಗೋರಕ್ಷನಲ್ಲಿತ್ತು. ಅಲ್ಲಮ ಗೋರಕ್ಷನ ಮನದ ಶೋಧನೆ ನಡೆಸಿದ್ದರು. ಅಲ್ಲಮನನ್ನು ಕಾಣುತ್ತಲೇ ಗೋರಕ್ಷನು ಅವನಿಗೆ ಉತ್ಥಾನ ನೀಡಿ, ಅರ್ಘ್ಯ ಪಾದ್ಯಾದಿಗಳಿಂದ ಪೂಜಿಸಿದನು. ಬಳಿಕ ಅಲ್ಲಮನನ್ನು ದರ್ಭೆಯ ಮೇಲೆ ಕುಳ್ಳಿರಿಸಿ ಬಂದ ಉದ್ದೇಶ ಕೇಳಿದ. ಆಗ ಅಲ್ಲಮನು ಹೀಗೆ ಉತ್ತರಿಸಿದನು. "ಹುಟ್ಟು ಸಾವು ಹಾಗೂ ಈ ದುಃಖದಿಂದ ಮುಕ್ತಗೊಳ್ಳಲು ಇಚ್ಛಿಸುವ ಮುಮುಕ್ಷು ಮತ್ತು ಸಾಧಕರಿಗೆ ನಿಗಮಾಗಮದಲ್ಲಿ ಹೇಳಿದ ಲಿಂಗೈಕ್ಯದ ಉಪದೇಶ ನೀಡಲು ನಾನು ಭೂತಲದಲ್ಲಿ ಸಂಚರಿಸುತ್ತಿದ್ದೇನೆ. ಆದರೆ ದೇಹವಿದ್ದರೇನೆ ಮೋಕ್ಷ ಸಾಧ್ಯ. ಆದ್ದರಿಂದ ದೇಹವೇ ಮುಖ್ಯ. ಈ ದೇಹ ಸಿದ್ಧಿಗೆ ಬುದ್ಧಿವಂತರು ಕಾಪಾಲಿಕ ಮತ ಎನ್ನುತ್ತಾರೆ" ಎಂದು ಅಲ್ಲಮನು ಕಾಯಾ ಸಿದ್ಧಿಯನ್ನು ತುಚ್ಛವಾಗಿ ಟೀಕಿಸಿ ಗೋರಕ್ಷನ ಅಹಂಕಾರ ನೋಯಿಸಿದನು. ಕಾಯಾ ಸಿದ್ಧಿಯ ಸಾಮರ್ಥ್ಯದ ಪರೀಕ್ಷೆಗೆ ಆಹ್ವಾನ ನೀಡಿ-'ದೇಹ ನಾಶವಾದದ್ದು' ಎಂದು ತಿಳಿಸಿದನು. ಈ ಮಾತು ಗೋರಕ್ಷನ ಮೇಲೆ ಯಾವ ಪರಿಣಾಮವನ್ನು ಬೀರಲಿಲ್ಲ. ಅವನು ಹರಿತವಾದ ಖಡ್ಗವನ್ನು ನೀಡಿ ತನ್ನ ದೇಹದ ಮೇಲೆ ಪ್ರಹಾರ ಮಾಡುವಂತೆ ತಿಳಿಸಿದನು. ಆ ವಜ್ರಕಾಯದ ಮೇಲೆ ಅಲ್ಲಮನು ಹಲವು ಬಾರಿ ಪ್ರಹಾರ ಮಾಡಿದನು. ಗೋರಕ್ಷನ ದೇಹಕ್ಕೆ ಯಾವ ಗಾಯವೂ ಆಗಲಿಲ್ಲ, ಬದಲು ಖಣ್ ಖಣ್ ಎಂದು ಸದ್ದಾಗತೊಡಗಿತು. 'ಬಾಹ್ಯ ದೇಹಕ್ಕಿಂತಲೂ ಒಳಗಿನ ಮನ ಅತ್ಯಂತ ಮುಖ್ಯವಾದದ್ದು. ಅದನ್ನು ಗೆದ್ದವನೇ ಯೋಗಿ' ಎಂದು ಅಲ್ಲಮನು ತಿಳಿಸಿ ಹೇಳಿದನು.

ಗೋರಕ್ಷನಿಗೆ ಅಲ್ಲಮನನ್ನು ಪರೀಕ್ಷಿಸುವ ಇಚ್ಛೆಯಾಯಿತು. ಅವನು ಕೆಳಗೆ ಬಿದ್ದ ಖಡ್ಗವೆತ್ತಿ ಅಲ್ಲಮನ ದೇಹದ ಮೇಲೆ ಪ್ರಹಾರ ಮಾಡಿದ. ಆದರೆ ಖಡ್ಗಕ್ಕೆ ದೇಹವೇ ಸ್ಪರ್ಶವಾಗಲಿಲ್ಲ.

ಅದು ಆಕಾಶದಂತೆ ನಿರಾಕಾರವಾಗಿ ಗೋಚರಿಸಿತು. ಈ ಅಚ್ಚರಿ ಕಂಡು ಗೋರಕ್ಷ ಅಲ್ಲಮನಿಗೆ ಶರಣಾದ. ಆಗ ಅಲ್ಲಮ ಹೀಗೆ ಉಪದೇಶ ನೀಡಿದನು- "ದೇಹ ಬಲಿಷ್ಠಗೊಂಡರೆ ಮಾಯೆಯೂ ಪ್ರಬಲಗೊಳ್ಳುತ್ತದೆ. ಎರಡು ಪ್ರಬಲಗೊಂಡರೆ ಪ್ರಪಂಚದ ನೆರಳು ದಟ್ಟಗೊಳ್ಳುತ್ತದೆ. ಆಗ ದೇಹ ಸಿದ್ಧಿಗೊಳ್ಳುವದಾದರೂ ಹೇಗೆ? ಆದ್ದರಿಂದ ಮನಸ್ಸಿನಲ್ಲೇ ದೇಹ ಮತ್ತು ಮಾಯೆ ಎರಡೂ ಇಲ್ಲವಾಗಬೇಕು, ಆಗ ಪ್ರಪಂಚದ ನೆರಳು ಇಲ್ಲವಾಗುತ್ತದೆ. ಆಗಲೇ ಶರೀರ ಸಿದ್ಧಿಯಾಗುತ್ತದೆ. ಅದರ ಮುಖ್ಯ ಲಕ್ಷಣವೇ ಮೋಕ್ಷ." ಈ ಅಮೃತವಾಣಿ ಕೇಳಿ ಗೋರಕ್ಷನು ಅಲ್ಲಮನ ಕಾಲಿಗೆರಗಿದನು. ಅಲ್ಲಮನು ಅವನಿಗೆ ಶಿವಜ್ಞಾನದ ಅರಿವು ನೀಡಿ ಶಿವದೀಕ್ಷೆ ನೀಡಿದನು.

ಗೋರಕ್ಷನಾಥನ ಪರಂಪರೆಯಲ್ಲಿ ಶಿವಾಗಮೋಕ್ತ ಷಟಸ್ಥಲ ಸಿದ್ಧಾಂತವನ್ನು ಆತ್ಮೀಯತೆಯಿಂದ ಸ್ವೀಕರಿಸಿದ ವಸ್ತುಸ್ಥಿತಿಯನ್ನು ಗಮನಿಸಿದರೆ, 'ಪ್ರಭುಲಿಂಗಲೀಲೆ'ಯ ಈ ವರ್ಣನೆಯನ್ನು ಅತಿಶಯೋಕ್ತಿ ಅಥವಾ ಸಾಂಪ್ರದಾಯಿಕ ಪಕ್ಷಪಾತಿತನದ್ದು ಎಂದೆನ್ನುವ ಹಾಗಿಲ್ಲ ಎಂಬುದು ಗಮನಿಸಬೇಕಾದ ಅಂಶ.

ಗೋರಕ್ಷನಾಥನ ಸಂಸ್ಕೃತ-ಪ್ರಾಕೃತ ವಾಣಿಯಲ್ಲಿ ಪಾಶುಪತ, ಲಿಂಗಧಾರಕ ಇತ್ಯಾದಿ ವಿಷಯುಗಳ ಕುರಿತು ನಿಷೇಧ ವ್ಯಕ್ತವಾಗಿದ್ದು ಕಂಡು ಬರುತ್ತದೆ. ಡಾ. ಕಲ್ಯಾಣಿ ಮಾಲಿಕ ನೀಡಿದ 'ಸಿದ್ಧ ಸಿದ್ಧಾಂತ ಪದ್ಧತಿ'ಯ ಶ್ಲೋಕವೊಂದರ ಪರ್ಯಾಯ ಪಾಠ ಹೀಗಿದೆ.[೧೭]

ಶೈವಾಃ ಪಾಶುಪತಾ ಮಹಾ ವ್ರತಧಾರಣ......ಕೃತ್ರಿಮ ಮಂತ್ರ-ತಂತ್ರ ನಿರತಾಸ್ತೆ ತತ್ವತೋ ವಂಚಿತಾಃ |' ಇಲ್ಲಿ ಗೋರಕ್ಷನು ಸಮಕಾಲೀನ ಸರ್ವ ಜನಪ್ರಿಯ ಮತಗಳನ್ನು 'ಕೃತ್ರಿಮ ಮಂತ್ರ-ತಂತ್ರ ನಿರತ' ಎಂದು ತಿರಸ್ಕರಿಸಿದ್ದಾನೆ. ಇದು ಒಂದೋ ಸ್ವಮತದ ನಿಷ್ಠೆಯಿಂದ ಪ್ರಕಟಗೊಂಡಿದ್ದೆನ್ನಲು, ಗೋರಕ್ಷನ ಇದೇ ಗ್ರಂಥದಲ್ಲಿ ಸಾಕ್ಷಿಯಿದೆ. ಪಾಶುಪತ, ಕಾಳಾಮುಖ ಮತ್ತು ಲಿಂಗಾಧಾರಿಯ ಆದರ್ಶದ ಕುರಿತು ಗೋರಕ್ಷ ಹೇಳುವದು ಹೀಗೆ[೧೮] 'ಕ್ರಿಯಾಜಾಲ ಪಶು ಹತ್ವಾ ಪತಿತ್ವಂ ಪೂರ್ಣತಾ ಗತಮ್|...... ಸರ್ವದಾ ಯೆಸ್ ವಿರೇಣ ಲಿಂಗಾಧಾರಿಭಾವೇತ ತು ಸಃ|' ಈ ಆದರ್ಶ ಕಥನದಲ್ಲಿ ಸರ್ವಮತದ ಸಮತೆ ಹಾಗೂ ಸಮನ್ವಯದ ವ್ಯಾಪಕ ದೃಷ್ಟಿ ಸ್ವೀಕರಿಸಲಾಗಿದೆ. ಹಿಂದಿ ವಾಣಿಯಲ್ಲೂ (ಏಕಕಾಲ ಮಹಾ ಜಟಧಾರಿ, ಲ್ಸಂಗ-ಉಪಾಸಕ ಹುವಾ| ಮಹಾದೇವಕೌತಿನ ಪಾರನ ಪಾಯ್ಯೋ, ರಾಷು ಕೌಲಿ ಕಾಲಿ ಮುದ್ರಾ) ಗೋರಕ್ಷನು ಕಾಳಾಮುಖ ಹಾಗೂ ಲಿಂಗೋಪಾಸಕರನ್ನು ನಿಷೇಧಿಸುತ್ತಾನೆ.[೧೯] ಆಗ ಅವನ ಕಣ್ಣೆದುರಿಗೆ ದೇಹಕ್ಕೆ ಬೂದಿ ಬಡಿದುಕೊಳ್ಳುವ, ಶಿವ ಪ್ರಾಪ್ತಿಯಿಂದ ವಂಚಿತಗೊಂಡ ಬಾಹ್ಯ ವೇಷಧಾರಿ ಢಾಂಬಿಕ ಶೈವರಿರುತ್ತಾರೆ. ತನ್ಮಯತೆಯಿಂದ ಮಹಾದೇವನ ಚಿಂತನೆ ಮಾಡಿದವರ ಬಗೆಗೆ ಗೋರಕ್ಷನಿಗೆ ಅಭಿಮಾನ ಹಾಗೂ ಆತ್ಮೀಯತೆಯೂ ಮೂಡಿರಬೇಕು. ಆವನು ಗಂಗಾ-ಜಮನಿ ಭಾಷೆಯ ಪದದಲ್ಲಿ 'ಲಿಂಗ' ಸಂಜ್ಞೆಯನ್ನು ತುಂಬಾ ಆತ್ಮೀಯವಾಗಿ ಬಳಸಿದ್ದು ಕಂಡು ಬರುತ್ತದೆ.[೨೦] 'ಪಾಷಾಣಾಚಿ ದೇವುಳೇ ಪಾಷಾಣಾಚಿ ದೇವ್ರೋ| .... ಆತ್ಮಲಿಂಗ ಹೃದಯಿ| ಕೊಯಿನ ಮಿರ್ಝತಿ ಅಂಧಾ. ನಿಜಲಿಂಗ ನ್ಯಾಹಾಳುನಿ| ಸಂಸಾರ ದಿಕ್ತ್ರಿ ಪಾಣಿ||

'ನಿಜಲಿಂಗ', 'ಆತ್ಮಲಿಂಗ' ಈ ಸಂಜ್ಞೆಯಿಂದ ಆತ್ಮವಸ್ತುವನ್ನು ನಿರ್ದೇಶಿಸುವ ಗೋರಕ್ಷನಾಥನಿಗೆ ವಿರೋಧವಿರುವದು, ಸಾಧನೆಯ ಮುಖವಾಡ ಧರಿಸುವವರ ಬಗೆಗೆ. ಅಂತರಂಗ 'ಆತ್ಮ'ಗೊಂಡವರು ಗೋರಕ್ಷನಿಗೆ ವಂದನೀಯವಾಗಿದ್ದಾರೆ.

ಶ್ರೀಗಿರಿಯಲ್ಲಿಯ ನಾಥ, ವೀರಶೈವ ಮತ್ತು ಪಾಶುಪತರು

ಶ್ರೀಗಿರಿಯಲ್ಲಿಯೇ ಅಲ್ಲಮ-ಗೋರಕ್ಷನ ಭೆಟ್ಟಿಯ ಚಾರಿತ್ರಿಕ ಘಟನೆ ನಡೆಯಿತು. ಕದಳೀವನದಲ್ಲಿ ಗೋರಕ್ಷನ ನಿವಾಸ ಸ್ಥಾನವಿತ್ತೆನ್ನುವದು ವೀರಶೈವ ಸಾಧನೆಯಿಂದ ತಿಳಿದು ಬರುತ್ತದೆ. ಮಹಾನುಭವದ ಸಾಧನೆಯಿಂದ ತಿಳಿದು ಬರುವದೇನೆಂದರೆ, ಗೋರಕ್ಷನು ತನ್ನ ಶಿಷ್ಯೆ ಮುಕ್ತಾದೇವಿ ಯೋಗಿನಿ ಸಹಿತ ಶ್ರೀಗಿರಿಯ ಕದಳೀವನದಲ್ಲಿ ಬಂದು ನೆಲೆಸಿದ್ದನು. ಚಕ್ರಧರ ಹಾಗೂ ಮುಕ್ತಾದೇವಿಯ ಭೆಟ್ಟಿಯೂ ಸಹ ಆಕೆಯ ಕದಳೀವನದ ಮಠದಲ್ಲೇ ನಡೆಯಿತು ಎನ್ನುವದು ಮುಕ್ತಾದೇವಿಯ ಚರಿತ್ರೆಯಿಂದ ತಿಳಿದು ಬರುತ್ತದೆ. ಇದಕ್ಕೆ ವಿಸೋಬಾ ಖೇಚರನ 'ಷಟಸ್ಥಲ' ಗ್ರಂಥವು ಆಧಾರವಾಗಿದೆ. ನಾಥ ಸಂಪ್ರದಾಯ ಹಾಗೂ ಕದಳೀಬನದ ಸಂಬಂಧ ನಾಥರ ಕಥಾ ಸಾಮಗ್ರಿಯಲ್ಲಿ ಸ್ವೀಕರಿಸಿದ್ದು ಕಂಡು ಬರುತ್ತದೆ. ಇದರಿಂದ ಸ್ಪಷ್ಟವಾಗುವುದೇ ನೆಂದರೆ, ಶ್ರೀಗಿರಿಯ ಕದಳೀಬನವು ನಾಥ ಸಂಪ್ರದಾಯದ ಪ್ರಮುಖ ಕೇಂದ್ರವಾಗಿತ್ತು. ಅಲ್ಲಮನು ಆ ಕೇಂದ್ರಕ್ಕೆ ಹೋಗಿ ನಾಥರನ್ನು ಪ್ರಭಾವಿತರನ್ನಾಗಿ ಮಾಡಿದನು ಎನ್ನುವದು.

ಶ್ರೀಗಿರಿಯು ವೀರಶೈವರ ಅತ್ಯಂತ ಪವಿತ್ರ ತಾಣ. ಅಕ್ಕ, ಅಲ್ಲಮರ ನಿವಾಸವೇ ಕದಳೀಬನ. ಬಸವನ ಸಮಾಧಿನಂತರ (ಕ್ರಿ.ಶ. ೧೧೬೭)ವಂತೂ ಗೊಂದಲದಲ್ಲಿ ಸಿಲುಕಿದ ವೀರಶೈವ ಸಂತರ ಹಾಗೂ ವೀರಶೈವರ ಒಂದು ದೊಡ್ಡ ಸಮೂಹವೇ ಶ್ರೀ ಗಿರಿಗೆ ಆಗಮಿಸಿತು.[೨೧] ಅಕ್ಕನು 'ತನು ಕದಳೀವನ, ಮನ ಕದಳೀಬನ....' ಎಂಬ ವಚನದಲ್ಲಿ ಕದಳೀವನದ ಉಲ್ಲೇಖ ಮಾಡಿದ್ದಾಳೆ. ಶ್ರೀ ಗಿರಿಯಲ್ಲಿಯ ವೀರಶೈವ ಮಠದ ಶ್ರೇಷ್ಠತೆ ಹಾಗೂ ಪ್ರಾಚೀನತೆಯು ಶಾಸನ ದಿಂದಲೂ ಸ್ಪಷ್ಟವಾಗುತ್ತದೆ.[೨೨] ಆಂಧ್ರದ ಪ್ರಸಿದ್ಧ ಶಿವಯೋಗಿಯಾದ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಶಿವನ ಅನನ್ಯ ಭಕ್ತನಾಗಿದ್ದನು.

ಶ್ರೀ ಶೈಲವು ಪಾಶುಪತರ ಪ್ರಸಿದ್ಧ ಕೇಂದ್ರವೂ ಆಗಿತ್ತು.' Srisaila and Balligave were Pre-eminent Strongholds of the Kalamukha Teachers' ಎಂದು ಡಾ. ದೇಸಾಯಿ ಅಭಿಪ್ರಾಯಪಡುತ್ತಾರೆ.[೨೩] ಅಲ್ಲಿಯ ಅಗಸ್ತ್ಯ ಮಠ, ಹಾಗೂ ಆ ಮಠದ ರಾಜ ಗುರು ಕ್ರಿಯಾಶಕ್ತಿ ಪಂಡಿತರ ಉಲ್ಲೇಖವು ೧೨ನೇ ಶತಮಾನದ ಕೊನೆಗೆ ಸಿಗುತ್ತದೆ.[೨೪] ಕಾಳಾಮುಖ ಪಾಶುಪತರ ಒಂದು ಶಾಖೆಯು 'ಪರ್ವತಾವಳಿ' ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿತ್ತು. ಪರ್ವತಾವಳಿಗೂ-ಶ್ರೀ ಗಿರಿಗೂ ಸಂಬಂಧವಿದೆ. 'ಪರ್ವತಾವಳಿ'ಯೆಂದರೇನೆ ಶ್ರೀಗಿರಿ. ಉಸ್ಮಾನಾಬಾದ ಜಿಲ್ಲೆಯ ಗಣೇಶ ವಾಡಿಯಲ್ಲಿದ್ದ, VI ವಿಕ್ರಮಾದಿತ್ಯ ಚಾಲುಕ್ಯನ ಪ್ರಧಾನಿ ಭೀಮನಾಥನ ಒಂದು ದಾನಲೇಖವು ಪರ್ವತಾವಳಿ ಶಾಖೆಯಲ್ಲಿಯ ಸತ್ಪುರುಷ ಪಂಡಿತರ, ಅವರ ಗುರು ಪರಂಪರೆಯ ಆಚಾರ್ಯರನ್ನು ಗೌರವಿಸುತ್ತದೆ.[೨೫] ವಿಜಯನಗರದ ಕೃಷ್ಣನ ಕಿರಿಯ ಸೋದರ ಗೋವಿಂದನ ಒಂದು ದಾನಶಾಸನದಲ್ಲಿ ಪರ್ವತಾವಳಿ ಶಾಖೆಯ ಮೂವರ

ಕೋಣೆಯ 'ಸಂತತಿ'ಯ ಸೋಮೇಶ್ವರ ಪಂಡಿತದೇವನ ಉಲ್ಲೇಖವನ್ನು ಭಕ್ತಿ ಪೂರ್ವಕ ಮಾಡಿದ್ದು ಕಂಡು ಬರುತ್ತದೆ.[೨೭] ಮಹಾಮಂಡಲೇಶ್ವರ ಬಿಜ್ಜಮದೇವನ ಪ್ರಧಾನಿ ಮಾಯಿದೇವರಸನು ಶಕೆ ೧೧೫೬ರಲ್ಲಿ ಮೂವರ ಕೋಣೆಯ ಸಂತತಿ (ಪರ್ವತಾವಳಿ ಶಾಖೆಯ)ಯ ವಾಮಶಕ್ತಿ ಪಂಡಿತ ದೇವನೆಂಬ ರಾಜಗುರುವಿಗೆ ದಾನ ನೀಡಿದ ಉಲ್ಲೇಖ ಒಂದು ಶಿಲಾಶಾಸನದಲ್ಲಿದೆ. ಇದರಿಂದ ಶ್ರೀಗಿರಿಯಲ್ಲಿಯ ಕಾಳಾಮುಖ ಪಾಶುಪತರ ವಿಸ್ತಾರ ಗಮನಕ್ಕೆ ಬರುತ್ತದೆ.

ಶ್ರೀಗಿರಿಯ ಒಂದು ಪ್ರಸಿದ್ಧ ಸಾಧನ ಕೇಂದ್ರವೆಂಬ ಖ್ಯಾತಿ ಭಾರತದ ತುಂಬಾ ಹಬ್ಬಿದ್ದರಿಂದ, ಅದೊಂದು ಆಕರ್ಷಣೀಯ ಕೇಂದ್ರವಾಗಿತ್ತು. ಪ್ರಸಿದ್ಧ ಜ್ಯೋತಿರ್ಲಿಂಗ, ಒಂದು ಶಕ್ತಿಪೀಠ ಹಾಗೂ ಹಲವು ಸಂಪ್ರದಾಯಗಳ ಮಠವೆನಿಸಿದ ಈ ತಾಣವು ಮಹಾರಾಷ್ಟ್ರದ ಸಾಧು-ಸಂತರಿಗೆ, ಭಕ್ತರಿಗೆ ಮೊದಲಿನಿಂದಲೂ ಇದರ ಬಗೆಗೆ ಒಲವು ಇತ್ತು. ೧೨ನೇ ಶತಮಾನದ ತೆಲಗು ಕವಿ ಪಾಲ್ಕುರಿಕೆ ಸೋಮನಾಥ ರಚಿಸಿದ 'ಪಂಡಿತಾರಾಧ್ಯ ಚರಿತ್ರೆ'ನಲ್ಲಿ ಶ್ರೀಗಿರಿಯ ವರ್ಣನೆಯ ಕಾಲಕ್ಕೆ ವಿವಿಧ ಪ್ರಾಂತೀಯ ಯಾತ್ರಿಕರ ಮುಖದಿಂದ ಹೊರಬಿದ್ದ ಮಲ್ಲಿಕಾರ್ಜುನ ಶಿವನ ಸ್ತೋತ್ರದಲ್ಲಿ 'ಆರೆದೇಶ' (ಮಹಾರಾಷ್ಟ್ರ) ಯಾತ್ರಿಕರ ಸ್ತೋತ್ರವು 'ಆರೆಭಾಷೆ' (ಮರಾಠಿ) ಯಲ್ಲಿದೆ. ಈ ಸ್ತೋತ್ರ ಮರಾಠಿ ಯಾತ್ರಿಕರ ಶ್ರದ್ಧೆಯ ಪ್ರತೀಕವಾಗಿದೆ.[೨೮] ಮಾಗಾರ ಗಾನಕೋ ಮಜ ಬಾಪು ಮ್ಹಣತ...ವರ ಸುಖ ಸುಖ ಬೇಗ ವರದು ಹೇಳಿತ್ತ'. ತೆಲಗು ಕವಿ ರಚಿಸಿದ್ದರಿಂದ ತೆಲಗಿನ ಪ್ರಭಾವ ಹಾಗೂ ಲಿಪ್ಯಂತರ ಕಾಲಕ್ಕೆ ಭ್ರಷ್ಟ ಹಾಗೂ ಸಂದಿಗ್ಧಗೊಳ್ಳುವದು ಸಹಜವಾದುದು. ಆದರೂ ಅದರಲ್ಲಿ 'ಪರ್ವತ ಮಲ್ಲಯ್ಯ'ನ ಬಗೆಗೆ ಇರುವ ಮರಾಠಿ ಭಕ್ತನ ಉತ್ಕಟ ಶ್ರದ್ಧೆ ಗಮನಾರ್ಹ.

ವಿಸೋಬಾ ಖೇಚರನ ಶಿಷ್ಯ ನಾಮದೇವನ ಅಭಂಗದಲ್ಲೂ ಈ ಶ್ರೀಗಿರಿಯ ವರ್ಣನೆಯಿದೆ.[೨೯] 'ಸಾರಿ ಸಹಸ್ರ ವಿಘ್ನಾಂತರಿ | ಶಿವನಾಮ ಪಕ್ಷಾಂತರಿ|| ತೋ ಪರ್ವತ ರಾಜಾ ಕೈದೇಖೇನ| ಜೇಥೆ ಅಸೇ ಮಲ್ಲಿಕಾರ್ಜುನ.....ತೇಣೆ ಮಲಯಾನಿಥ ದೇಖಿಲಾ"

'ಪರ್ವತ ರಾಜ ಮಲ್ಲಿಕಾರ್ಜುನನ' ಬಗೆಗೆ ನಾಮದೇವನಿಗೆ ತುಂಬಾ ಶ್ರದ್ಧೆಯಿದೆ. ವಿಠ್ಠಲನ ಅನನ್ಯ ಭಕ್ತನಾದ ನಾಮದೇವನು ಪರ್ವತ-ಮಲನನ ದರ್ಶಕ್ಕಾಗಿ ಹಾತೊರೆಯುವದು, ಆ 'ಗುಪ್ತನಿಧಿ ಸಾಧನ' ಪ್ರಾಪ್ತ ಮಾಡಿಕೊಳ್ಳುವದು ನಿಜಕ್ಕೂ ಸೋಜಿಗ ಪಡುವಂತಹದಾಗಿದೆ. ನಾಮದೇವನ ಗಾಥೆಯಲ್ಲಿಯ ಈ ಅಭಂಗವು ಅವನ ಪಾರಮಾರ್ಥ ಜೀವನದೊಂದಿಗೆ ಸಂಬಂಧ ಹೊಂದಿಯೂ ನಾವು ಆ ಕಡೆ ಗಮನಹರಿಸಿರಲಿಲ್ಲ. ಶ್ರೀಗಿರಿಯ ಕದಳೀಬನಕ್ಕೆ ಬಂದ ಯೋಗಿನಿ ಮುಕ್ತಾಯಿಯು, ಅಲ್ಲಮನಿಂದ ಗೋರಕ್ಷನಿಗೆ ಲಭಿಸಿದ ಈ ಠೇವು ಚಾಂಗದೇವನಿಗೆ ಹಸ್ತಾಂತರ ಮಾಡಿದ್ದಳು.

ಜ್ಞಾನದೇವಿಯಲ್ಲಿಯ ವೀರಶೈವ ಪರಿಭಾಷೆ

ಪರಂಪರೆಯಿಂದ ಜ್ಞಾನದೇವನು ಗೋರಕ್ಷನ ವಾರಸುದಾರ: ಗೋರಕ್ಷನು ಅಲ್ಲಮನಿಂದ ಪ್ರಭಾವಿತಗೊಂಡವನು. ಹೀಗಾಗಿ ಜ್ಞಾನದೇವನಿಗೆ ವೀರಶೈವ ಪರಿಭಾಷೆಯ ಪರಿಚಯ

ವಾಗುವದು ಸ್ವಾಭಾವಿಕ. ವೀರಶೈವರು ಪರಮ ಶ್ರೇಯಸ್ಸಿನ ಪ್ರಾಪ್ತಿಗಾಗಿ ಬಳಸಿದ 'ಲಿಂಗಾಂಗ ಸಾಮರಸ್ಯ'ದ ಸಂಜ್ಞೆಯನ್ನು ಜ್ಞಾನದೇವನು ಅದೇ ಅರ್ಥದಲ್ಲಿ ಜ್ಞಾನದೇವಿಯಲ್ಲಿ ಬಳಸಿದ್ದಾನೆ. ಈ ಸಂಜ್ಞೆಯಲ್ಲಿ ಲಿಂಗ, ಅಂಗ, ಸಾಮರಸ್ಯ- ಹೀಗೆ ಮೂರು ಘಟಕಗಳಿವೆ. ಲಿಂಗ=ಶಿವ, ಲಿಂಗ=ದೇಹ. ಇವೆರಡರ ಐಕ್ಯವೇ ಸಾಮರಸ್ಯ. ಇದು ವೀರಶೈವರ ಪರಮ ಧ್ಯೇಯ. ಇದರ ಬಗೆಗಿನ ವಿವರ ವೀರಶೈವ ಶಾಸ್ತ್ರ ಗ್ರಂಥದಲ್ಲಿ, ವಚನದಲ್ಲಿ ಕಾಣಸಿಗುತ್ತದೆ. ವೀರಶೈವರು ಪರಬ್ರಹ್ಮನನ್ನು 'ಸ್ಥಲ' ಎಂಬ ಸಂಜ್ಞೆಯಿಂದ ಗುರುತಿಸುತ್ತಾರೆ. ಇಲ್ಲಿ ಲಿಂಗಸ್ಥಲ, ಅಂಗಸ್ಥಲ- ಎಂಬೆರಡು ವಿಧ. ಮತ್ತೆ ಇದರಲ್ಲಿ ಆರು-ಆರು ಪ್ರಕಾರಗಳಿವೆ. ಭಕ್ತಿ, ಮಹೇಶ, ಪ್ರಸಾದಿ, ಪ್ರಾಣ, ಶರಣ ಮತ್ತು ಐಕ್ಯ ಸ್ಥಲ - ಇವು ಅಂಗಸ್ಥಲದ ಆರು ವಿಧ. ಜೀವ ಶಿವನ ಕಡೆಗೆ ಹೋಗುವ ಆರು ಹಂತಗಳಿವು. ಇದೇ 'ಷಟ್‌ಸ್ಥಲ'. ಇದರಿಂದಲೇ ಲಿಂಗಾಂಗ ಸಾಮರಸ್ಯ.

ಜ್ಞಾನದೇವನು ಇದೇ ಅರ್ಥದಲ್ಲಿ ಬಳಸಿದ್ದಾನೆ. ಪ್ರಸಂಗ ಕುಂಡಲಿನಿ ಶಕ್ತಿಯ ಪ್ರವಾಸದ ವರ್ಣನೆಯದು. ಷಟ್-ಚಕ್ರ-ಭೇದನಾ ನಂತರ ಕುಂಡಲಿನಿ ಶಕ್ತಿಯು ಬ್ರಹ್ಮರಂಧ್ರದಲ್ಲಿ ಬರುತ್ತಾಳೆ. ಮತ್ತು -

ಮಗ ಬ್ರಹ್ಮರಂಧ್ರಿ ಥಿರಾವೌನಿ | ಅಹಂಭಾವಾಚಿಯಾ ಬಾಹ್ಯ ಪಸರುನಿ |
ಪರಮಾತ್ಮಲಿಂಗಾ ಧಾವೌನಿ | ಅಂಗಾ ಘಡೆ ||
ತವ ಮಹಾಭೂತಾಚಿ ಜವನಿಕ ಫಿಟೆ | ಮಗ ದೋಹೋಸಿಹಿ ಹೊಯ ಝುಟೆ ||
ತೇಥ ಗಗನಾ ಸಕಟಿ ಆಟೆ | ಸಮರಸಿ ತಿಯೆ || (ಜ್ಞಾನೇಶ್ವರಿ. ೬.೩೦೫.೦೬)

- ಈ ಎರಡು ಓವಿಗಳಲ್ಲಿ ಜ್ಞಾನದೇವನು 'ಪರಮಾತ್ಮಲಿಂಗ', 'ಆಂಗಾ ಘಡಣೆ' ಮತ್ತು 'ಸಮರಸ' (ಸಾಮರಸ್ಯ) - ಈ ಮೂರು ಶಬ್ದಗಳನ್ನು ವಿಶಿಷ್ಟ, ಪಾರಿಭಾಷಿಕ ಅರ್ಥದಲ್ಲಿ ಬಳಸಿದ್ದಾನೆ. 'ಪರಮಾತ್ಮಲಿಂಗ' ಈ ಶಬ್ದವು ಇಲ್ಲಿ ಶಿವತತ್ವ ವಾಚಕವಾಗಿದೆ. ಇದನ್ನು ಜ್ಞಾನೇಶ್ವರಿಯ ೬.೩೦೧ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಇದೇ ಸಂದರ್ಭದಲ್ಲಿ ಶಕ್ತಿ (ಕುಂಡಲಿನಿ), ಶಿವನ ಉಲ್ಲೇಖವೂ ಇದೆ. 'ಆಂಗಾ ಘಡಣೆ' ಈ ಸಂಯುಕ್ತ ಕ್ರಿಯೆಯನ್ನು 'ಕೂಡಿ ಹೋಗುವುದು (ಜೊತೆಯಾಗಿ), ಏಕರೂಪ ಹೊಂದುವದು' ಎಂಬರ್ಥದಲ್ಲಿ ಜ್ಞಾನೇಶ್ವರನು ಬಳಸಿದ್ದಾನೆ. 'ಪರಮಾತ್ಮಲಿಂಗಾ ಧಾವೌನಿ ಆಂಗಾ ಘಡೆ' ಇದರ ಅರ್ಥವೇ' ಲಿಂಗಾಂಗ ಐಕ್ಯ ಸಾಧಿಸುವದು ಎಂದಾಗುತ್ತದೆ. ಇದಕ್ಕೆ ಅನುಸರಿಸಿ ಎರಡನೇ ಓವಿಯಲ್ಲಿ 'ಸಮರಸ' ಸಂಜ್ಞೆ ಬಳಸಲಾಗಿದೆ.

ಷಟಸ್ಥಲದ ಯಾತ್ರೆಯ ನಂತರ ಬಂದ ಅವಸ್ಥೆಗೆ ವೀರಶೈವರು ಲಿಂಗಾಂಗ ಸಾಮರಸ್ಯ' ವೆಂದರೆ, ಜ್ಞಾನದೇವನು ಷಟ್‌ಚಕ್ರ ಭೇದನೆಯ ನಂತರ ಪ್ರಾಪ್ತವಾಗುವ ಪರಮ ಅವಸ್ಥೆಗೆ ಅದೇ ಸಂಜ್ಞೆ ಬಳಸುತ್ತಾನೆ. ಈ ಸತ್ಯವು ಜ್ಞಾನದೇವನ ವಿಚಾರ ವಿಶ್ವದಲ್ಲಿಯ ವೀರಶೈವ ಸಂಸ್ಕಾರವನ್ನು ಶೋಧಿಸುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದೆಂದು ನನಗನಿಸುತ್ತದೆ. ವೀರಶೈವ ಸಾಹಿತ್ಯದಲ್ಲಿ 'ಷಟ್‌ಸ್ಥಲ', ಮತ್ತು 'ಷಟ್‌ಚಕ್ರ' - ಇವುಗಳ ಸಮನ್ವಯ ಸಾಧಿಸಲಾಗಿದೆ.

ಜ್ಞಾನೇಶ್ವರನು ಜ್ಞಾನೇಶ್ವರಿಯಲ್ಲಿ 'ಲಿಂಗ' ಎಂಬ ಶಬ್ದದ ಬಳಕೆಯನ್ನು ಪರಮಾತ್ಮಲಿಂಗ

(೬.೬೦೫), (೧೮, ೬೩೨); ಆತ್ಮಲಿಂಗ (೧೮;೧೩೬೦), ಗುರುಲಿಂಗ (೧೩.೩೮೬, ೧೮.೧೭೬೦), ಆರಾಧ್ಯಲಿಂಗ (೧೦.೩, ೧೭.೧೭), ಶೂನ್ಯಲಿಂಗ (೬.೨೭೩) - ಹೀಗೆ ಹಲವೆಡೆ ತುಂಬಾ ಆಸ್ಥೆಯಿಂದ ಬಳಸಿದ್ದಾನೆ. ಅವನ ಸ್ಪುಟ ರಚನೆಯಲ್ಲಿಯೂ ಗುರುಲಿಂಗ ಜಂಗಮದ ಮತ್ತು ಶೈವಾಗಮದ ಭಾಷೆ ಬಳಸಿದಂತೆ ಕಾಣುತ್ತದೆ.[೬೦] (ಅಭಂಗ ಕ್ರಿ.೭೨೩). ಜ್ಞಾನದೇವ ಅನುಯಾಯಿಯಾದ ನಾಥ ಸಂಪ್ರದಾಯ ಮತ್ತು ವೀರಶೈವ ಸಂಪ್ರದಾಯ ದಾರ್ಶನಿಕ ಜಾತಿ-ಕುಲ ಒಂದೇ ಆಗಿದ್ದರಿಂದ ಇವರಲ್ಲಿ ಅಸ್ವಾಭಾವಿಕವಾದದ್ದು ಏನೂ ಇಲ್ಲ. ಇನ್ನೂ ಸೂಕ್ಷ್ಮ, ಹಾಗೂ ಆಳವಾಗಿ ಶೋಧ ನಡೆಸಿದಲ್ಲಿ ಜ್ಞಾನೇಶ್ವರಿಯಲ್ಲಿಯ ವೀರಶೈವ ಸಂಸ್ಕಾರದ ಮತ್ತೆ ಕೆಲವು ಗುರುತುಗಳು ಸಿಗುವ ಸಾಧ್ಯತೆಯಿದೆ.

ಜ್ಞಾನದೇವ-ಕಥಿತ 'ಪಂಚೀಕರಣ' ಮತ್ತು ಷಟ್‌ಸ್ಥಲ

ಜ್ಞಾನದೇವನ ಹೆಸರಿನಲ್ಲಿರುವ 'ಪಂಚೀಕರಣ' ಎಂಬ ಲಘುಗ್ರಂಥ ಪ್ರಕಟಗೊಂಡಿದೆ.[೬೧] ಅದರ ಓವೀ ಸಂಖ್ಯೆಯು ಏಳು ಸಮಾಸದಿಂದ ಕೂಡಿ ೧೪೮ ಇದೆ. ಈ ಲಘು ಗ್ರಂಥದ ನಾಲ್ಕನೇ ಸಮಾಸದಲ್ಲಿ 'ಆಜಪಾ ಬ್ರಹ್ಮಾಂಡಿ'ಯ ವಿಷಯ ವಿವರಿಸುವಾಗ ಕವಿಯು ವೀರಶೈವ ಆಚಾರಲಿಂಗದ ಷಟ್‌ಸ್ಥಲ ಪರಿಭಾಷೆ ಬಳಸಿದ್ದಾನೆ. ಪ್ರಸ್ತುತ 'ಪಂಚೀಕರಣ'ವು ಜ್ಞಾನದೇವನದಾಗಿರಲಿ-ಬಿಡಲಿ, ಅಲ್ಲಿ ಬಳಸಿದ ಷಟ್‌ಸ್ಥಲ ಪರಿಭಾಷೆಯು, ಅದೇ ವಿಷಯದ ಒಂದು ಆಭಂಗವು ಜ್ಞಾನದೇವ ಗಾಥೆಯಲ್ಲಿ ಸಮಾವೇಶಗೊಂಡಿದ್ದು, (ಕ್ರಿ.೮೭೨), ಅಭಂಗ ದಲ್ಲೂ 'ಮಹಾಲಿಂಗ' ಎಂಬ ವೀರಶೈವ ಸಂಜ್ಞೆ ಬಳಸಲಾಗಿದೆ - 'ಆತಾ ಓಟಪೀಠಿಚಾ ಮಾರ್ಗ ಏಕ ಬಾಯಿ......ಜಾಣಿತಾ ದಾವಿತಾ ವಿರಳಾ ಏಕ'

- ಹಿಂದೆ ಸೂಚಿಸಿದ ಷಟ್‌ಸ್ಥಲ ಹಾಗೂ ಷಟ್‌ಚಕ್ರ ಸಂಬಂಧ ದೃಢೀಕರಣಕ್ಕೆ ಈ ಅಭಂಗ ಮಹತ್ವದ್ದಾಗಿದೆ ಎಂದು ನನಗನಿಸುತ್ತದೆ.

ಆಳಂದಿ : ಒಂದು ಶೈವಾಗಮೋಕ್ತ ಶಿವಪೀಠ

ಜ್ಞಾನದೇವನ ಪರಾತ್ಪರಗುರು ಗೋರಕ್ಷನಾಥನು ಅಲ್ಲಮನ ಸಂಪರ್ಕದಲ್ಲಿದ್ದುದರಿಂದ ಜ್ಞಾನದೇವನಿಗೆ ವೀರಶೈವ ವಿಚಾರಗಳ ಪರಿಚಯವಿರುವದು ಹೇಗೆ ಸಂಭವವೋ, ಹಾಗೆಯೇ ಜ್ಞಾನದೇವನ ಪುಣ್ಯಭೂಮಿಯಾದ ಆಳಂದಿಯು ಜ್ಞಾನದೇವ ಪೂರ್ವ ಕಾಲದಿಂದಲೂ ವೀರಶೈವರ ಪ್ರಭಾವ ಕ್ಷೇತ್ರ ದ[illegible]ದ್ದುದರಿಂದಲೂ ಅವನಿಗೆ ವೀರಶೈವರ ಆಚಾರ-ವಿಚಾರಗಳ ಪರಿಚಯ ತುಂಬಾ ಸನಿಹ[illegible] ಆಗಿರುವ ಸಂಭವವೂ ಇದೆ.

ಆಳಂದಿಯು ಪ್ರಾಚೀನವಾದ ಪುರಾಣ ಪ್ರಸಿದ್ಧ ಶಿವಪೀಠವೆಂದು ಮರಾಠಿ ಕವಿಗಳು ಆಗಾಗ ಉಲ್ಲೇಖಿಸಿದ್ದಾರೆ. ಬಾಲ ಮುಕುಂದ ಕೇಸರಿಯು 'ಅಲಕಾಮಹಾತ್ಮ'ದಲ್ಲಿ ಆಳಂದಿಯನ್ನು ಶಿವಪೀಠ ಎಂದು ಬಣ್ಣಿಸಿದ್ದಾನೆ.[೬೨] ನಾಮದೇವನ ಗಾಥೆಯಲ್ಲಂತೂ ಈ ರೀತಿಯ ಆಳಂದಿಯ ವರ್ಣನೆ ಆಗಾಗ ಬಂದಿದೆ.[೬೩] ಈ ಶಿವಪೀಠ ಶಿವನದ್ದು (ಇದರ ಪೂರ್ವ ಸ್ಥಾನವೇ ಅಗಸ್ತ್ಯನದ್ದು) (ಆ. ೭೪೭); ಈ ಶಿವಪೀಠ ಮನೋಹರ...... (ಆ. ೭೪೮). ಇದಕ್ಕೆ ಶೈವಾಗಮ ಮತ್ತು ಶೈವಶಾಸ್ತ್ರದ ಆಧಾರ ನೀಡಲಾಗಿದೆ (ಆ.೭೦೮, ೭೩೫)- ನಾಮದೇವನ ಈ ಉಲ್ಲೇಖವು

ಜ್ಞಾನದೇವನ ಸಮಾಧಿ ಪ್ರಕರಣದಲ್ಲಿ ಬಂದಿದೆ. ಆಳಂದಿಯು ಶಿವಪೀಠವಾಗಿತ್ತು ಎನ್ನುವದು ಮಹತ್ವದ ಸಂಗತಿಯಾಗಿದೆ.

ಜ್ಞಾನದೇವನ ಸಮಾಧಿ ಪ್ರಾಕಾರದಲ್ಲೇ ಭೋಜಲಿಂಗನ (ಜ್ಞಾನದೇವ ಇವನನ್ನು 'ಕಾಕಾ' ಎನ್ನುತ್ತಿದ್ದನಂತೆ) ಸಮಾಧಿಯೂ ಇದೆ. ಈ ಹೆಸರಂತೂ ವೀರಶೈವ ಸೂಚಕ ಎಂದೇ ಹೇಳ ಬಹುದು. ಆಳಂದಿಯಲ್ಲಿಯ ವೀರಶೈವ ವಾಸ್ತವ್ಯ, ಅವನೊಂದಿಗಿರುವ ಜ್ಞಾನದೇವನ ಸಂಬಂಧವು ಭೋಜಲಿಂಗನಿಂದಾಗಿ ಖಚಿತ ಪಡಿಸುತ್ತದೆ.[೩೪]

ಇದೇ ರೀತಿ ಮುಕ್ತಾಯ ಓವಿಯಲ್ಲಿಯೂ ಇಂಥದೇ ಉಲ್ಲೇಖವಿದೆ.[೩೫] 'ಪಹಲೀ ಮಾಝು ಓವ್ವಿ| ಪ್ರಾತಃ ಕಾಲ ಹೋತಾ| .... ಅನುಭವಾಚೆ ರೋಹಿ| ಸ್ಥಿರಾವಲೀ||'.

ಜ್ಞಾನದೇವ-ಮುಕ್ತಾಬಾಯಿಯ ಕೃತಿಯಲ್ಲಿ ಈ ವೀರಶೈವ ಪರಿಭಾಷೆಯನ್ನು ಯೋಗಾ ನುಭವದ ಅಭಿವ್ಯಕ್ತಿಗಾಗಿ ಬಳಸಿದ್ದು ಮತ್ತು ಮರಾಠಿ ಭಾಗವತ ಪರಂಪರೆಯಲ್ಲಿ ಈ ಕೃತಿಯ ಗಾಯನ-ವಾಚನ ಶ್ರದ್ಧೆಯಿಂದ ನಡೆಯುತ್ತಿದ್ದುದು, ಎಂಬ ವಸ್ತುಸ್ಥಿತಿಯು ವೀರಶೈವ ಪ್ರಭಾವದ ದ್ಯೋತಕವಾಗಿದೆ, ಎಂಬುದರಲ್ಲಿ ಸಂಶಯವಿಲ್ಲ. ಇದು ಅನಂತರದ ಹಲವು ಕೃತಿಗಳಲ್ಲೂ ಹರಿಯುತ್ತ ಬಂದಿರುವದೂ ಕಂಡು ಬರುತ್ತದೆ.

ಧುಳೆಯ ರಾಜವಾಡೆ ಸಂಶೋಧನ ಮಂಡಳದಲ್ಲಿ 'ಜ್ಞಾನ ದೀಪಿಕಾ' (ಕ್ರಿ. ೪೩೪:೯೫) ಎಂಬ ಹೆಸರಿನ ದತ್ತಗೋರಕ್ಷ-ಸಂವಾದದ ನಾಥ ಪಂಥದ ಗ್ರಂಥ ಸುರಕ್ಷಿತವಾಗಿದೆ. ಅದರಲ್ಲಿ 'ಲಿಂಗ' ಪರಿಭಾಷೆಯ ಬಳಕೆಯಾಗಿದೆ. ಪಿಂಡ-ಬ್ರಹ್ಮಾಂಡ ರಚನೆಯ ವಿವರಣೆ ನೀಡುವ ಗ್ರಂಥ ಇದಾಗಿದ್ದು, ಅದರಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ-ಇತ್ಯಾದಿ ವೀರಶೈವ ಪರಿಭಾಷೆಯ ಸಂಜ್ಞೆ ಬಳಸಲಾಗಿದೆ. ಅಲ್ಲಿಯ ಮತ್ತೊಂದು ಅಪೂರ್ಣ ಹಸ್ತಲಿಖಿತವು ಲಿಂಗಬೋಧಕೃತ 'ಜ್ಞಾನ ವಿಜ್ಞಾನ ಸಿಂಧು' (ಕ್ರಿ. ೪೩೪:೧೫೬೭) ಎಂಬ ಹೆಸರಿ ನಲ್ಲಿದೆ. ಅದರಲ್ಲಿಯೂ ಪ್ರಸಾದಲಿಂಗಾದಿಯ ಸಂಜ್ಞೆಯಿದ್ದು, ಶಿವನ ಪಂಚಮುಖದಿಂದ 'ಪರಬ್ರಹ್ಮ'ನಿಂದ-ಪಂಚಭೂತಗಳು ಉತ್ಪನ್ನಗೊಂಡಿದೆ ಎನ್ನಲಾಗಿದೆ,. ಶೈವಾಗಮದ ಆಧಾರ ವನ್ನು ನೀಡಲಾಗಿದೆ. ಈ ಲಿಂಗಬೋಧನು ರತ್ನನಾಥನ ಶಿಷ್ಯ, 'ಸಿದ್ಧೇಶ್ವರ' ಶಿವನ ಉಪಾಸಕ. ಇಂಥ ಹಲವು ಉದಾಹರಣೆಗಳನ್ನು ತೋರಿಸಬಹುದಾಗಿದೆ.

ಮರಾಠಿ ವೀರಶೈವರಿಗಾಗಿ ಸಾಹಿತ್ಯ ನಿರ್ಮಿತಿ

ಇಲ್ಲಿಯವರೆಗಿನ ವಿವೇಚನೆಯಿಂದ ಸ್ಪಷ್ಟವಾಗುವದೇನೆಂದರೆ - ಮರಾಠಿ ವಾಙ್ಮಯದ ಮೊದಲ ಸಮೃದ್ಧಿಯ ಕಾಲದಲ್ಲೇ ಮಹಾರಾಷ್ಟ್ರದಲ್ಲಿ ವೀರಶೈವರ ಸಂಪರ್ಕವಾಯಿತು. ಮರಾಠಿ ಕವಿಗಳು ವೀರಶೈವ ವಿಚಾರವನ್ನು ಉದಾರತೆಯಿಂದ ಸ್ವೀಕರಿಸಿದರು. ಉತ್ತರ ಕಾಲದಲ್ಲಿ ಕಂಡು ಬರುವ ವೀರಶೈವರ ಬಗೆಗಿನ ದೂರತನ, ಯಾದವರ ಕಾಲದಲ್ಲಿ ಕಂಡು ಬರುವದಿಲ್ಲ.

ಯಾದವ ಕಾಲದಲ್ಲಿ ವೀರಶೈವ ಅನುಯಾಯಿಗಳು ನೆಲೆಸಿದ್ದರಿಂದ ಅವರ ಸಾಂಪ್ರದಾಯಿಕ ಭಾವನೆಯ ಪೋಷಣೆಗಾಗಿ ಮರಾಠಿಯಲ್ಲಿ ಸಾಹಿತ್ಯ ನಿರ್ಮಾಣಗೊಂಡಿರಬೇಕು. ಆದರೆ ಮಹಾರಾಷ್ಟ್ರದಲ್ಲಿ ನಡೆದ ಅವರ ಸಂಚಾರ, ಪ್ರಭಾವ ಹಾಗೂ ಸಾಹಿತ್ಯದ ಕಡೆಗೆ ಸಂಶೋಧಕರು

ಅಷ್ಟೊಂದು ಗಮನ ಹರಿಸಿದಂತಿಲ್ಲ. ಮಹಾರಾಷ್ಟ್ರದ ವೀರಶೈವರು ಸಹ ಹರಿಸಲಿಲ್ಲ. ಮಹಾರಾಷ್ಟ್ರದ ಹಲವು ವೀರಶೈವ ಮಠಗಳಲ್ಲಿ ಮರಾಠಿ ಹಸ್ತಪ್ರತಿಗಳಿವೆ. ಅವುಗಳಲ್ಲಿ ಹಾಳಾಗಿದ್ದರೆ, ಉಳಿದ ಕೆಲವು ಕತ್ತಲೆಯ ಗರ್ಭದಲ್ಲಿಹೂತು ಹೋಗುವ ಸಾಧ್ಯತೆಯಿದೆ.

ಎಲ್ಲ ಮರಾಠಿ ವೀರಶೈವರಿಗೆ ತಮ್ಮ ಸಂಪ್ರದಾಯದ ಠೇವಿನ ಅರಿವು ಇದೆ ಎಂದಲ್ಲ. ಇದೂ ಅಲ್ಲದೆ ಮಠದಲ್ಲಿಯ ಗ್ರಂಥಗಳು ಬೆಳಕಿಗೆ ಬರದೆ ಇರುವದರಿಂದ ತಮ್ಮ ಹಸಿವನ್ನು ಶಿವದಾಸ ಗೋಮಾನ 'ಕಾಶಿಖಂಡ' ಮತ್ತು ಶ್ರೀಧರ ಸ್ವಾಮಿಯ 'ಶಿವಲೀಲಾಮೃತ'-ಇಂಥ ಪ್ರಕಟಿತ ಗ್ರಂಥಗಳ ಮೂಲಕ ತೀರಿಸಿಕೊಳ್ಳುತ್ತಾರೆ. ಈ ಗ್ರಂಥ ಸಂಪ್ರದಾಯಿಕರು ನಿರ್ಮಿಸಿದ್ದಲ್ಲ, ಆದರೂ ವೀರಶೈವರಿಗೆ ಅದರ ಬಗೆಗೆ ಶ್ರದ್ಧೆಯಿದೆ. ಹಾಗೆಯೇ ವೀರಶೈವ ವಿಚಾರದಿಂದ ಮುಕ್ತವಾದ 'ಮೂಲ ಸ್ತಂಭಾ'ದಂತಹ ಗ್ರಂಥವನ್ನು ವೀರಶೈವೇತರರೂ ಶ್ರದ್ಧೆಯಿಂದ ಓದುತ್ತಾರೆ. ವೀರಶೈವೇತರರು ತಮ್ಮ ಗ್ರಂಥದಲ್ಲಿ ವೀರಶೈವರ ಪ್ರಕರಣ ಸೇರಿಸಿದ್ದರೆ, ವೀರಶೈವ ಮಠದಲ್ಲಿ ವೀರಶೈವೇತರ ಗ್ರಂಥ ಸಂಭಾಳಿಸಿದ್ದು ಕಂಡು ಬರುತ್ತದೆ. ನಗರ ಜಿಲ್ಲೆಯ ಮಾಂಢ ವಗಣಾದ ವೀರಶೈವ ಗೋಸಾವಿ ಮಠದಲ್ಲಿ ಶ್ರೀ ಸುರೇಶ ಜೋಶಿಯವರಿಗೆ ದೊರಕಿದ ಪ್ರಚಂಡ ಗ್ರಂಥಗಳ ಸಂಗ್ರಹದಲ್ಲಿ ಸಾಂಪ್ರದಾಯಿಕ ವೀರಶೈವ ಗ್ರಂಥಗಳ ಜೊತೆಗೆ ಬಹಿರಾ ಜಾತವೇದದ ಭಾಗವತ ಟೀಕೆಯಂತಹ ಗ್ರಂಥಗಳೂ ಸೇರಿವೆ.

ವೀರಶೈವ ಮರಾಠಿ ಗ್ರಂಥಕಾರರಲ್ಲಿ ಶುದ್ಧ ವೀರಶೈವ ಹಾಗೂ ಸಿದ್ಧ ನಾಗೇಶದ ಅನುಯಾಯಿಗಳೂ ಇದ್ದಾರೆ. ಶಾಂತರಿಂದ, ಮನ್ಮಥ ಶಿವಲಿಂಗ ಮತ್ತು ಅವರ ಪ್ರಭಾವಲಯ, ಅಜ್ಞಾನ ಸಿದ್ಧ ನಾಗೇಶ, ಸತ್ಯಾತ್ಮಜ, ರಂಕ, ಗಣೇಶ ದೇವಾಂಗ - ಇತ್ಯಾದಿ ಹಲವು ಗ್ರಂಥಕಾರರು ವೀರಶೈವ ಆಚಾರ-ವಿಚಾರಗಳನ್ನು ಮರಾಠಿಯಲ್ಲಿ ಮಂಡಿಸಿದ್ದಾರೆ.[೬]

ಮೂಲ ಮರಾಠಿ : ರಾ.ಚಿ. ಢೇರೆ

ಕನ್ನಡಕ್ಕೆ : ಚಂದ್ರಕಾಂತ ಪೋಕಳೆ

ಆಕರ ಗ್ರಂಥಗಳು

೧. ಪಿ.ಬಿ. ದೇಸಾಯಿ, 'ಪೂರ್ವ ನಿರ್ದಿಷ್ಟ ಗ್ರಂಥ', ೧೯೬೮, ಪು. ೧೧೧-೧೨೫.

೨. ಎಸ್.ಸಿ. ನಂದೀಮಠ, 'ಎ ಹ್ಯಾಂಡ್‌ಬುಕ್ ಆಫ್ ವೀರಶೈವಿಸಂ', ೧೯೪೨, ಪು. ೭ ರಿಂದ ೧೦. ಪಿ.ಬಿ. ದೇಸಾಯಿ, 'ಬಸವೇಶ್ವರ ಅಂಡ್ ಹಿಜ್ ಟೈಮ್ಸ್' ಪು. ೧೫೬-೧೧೬೨

೩. ಅದೇ, ಪು. ೧೬೨-೧೬೬.

೪. ಎಸ್.ಸಿ. ನಂದೀಮಠ, 'ಎ ಹ್ಯಾಂಡ್ ಬುಕ್ ಆಫ್ ವೀರಶೈವಿಸಂ' ಪು. ೯-೧೦.

೫. ಶಂ.ಧೋ. ಸಾರ್ದಳ (ಸಂ), 'ಲೀಲಾ ವಿಶ್ವಂಭರ', ೧೯೬೪, ಪ್ರ.ಪು. ೬೮-೭೦.

೬. ರಾಂಗೆಯ ರಾಘವ, ಗೋರಖನಾಥ ಔರ ಉನಕಾ ಯುಗ, ೧೯೬೩, ಪು. ೬೧.

೭. ವಿ.ಎಸ್. ಪಾಠಕ, ಶೈವ ಕಲ್ಟ್ಸ್ ಇನ್ ನಾರ್ದನ್ ಇಂಡಿಯಾ, ೧೯೬೦, ಪು. ೧೮
೮. ಪಿ.ಬಿ. ದೇಸಾಯಿ. 'ಪೂರ್ವ ನಿರ್ದಿಷ್ಟ ಗ್ರಂಥ' ಪು. ೧೭೯-೧೮೩, ೩೪೭-೩೫೩.
೯. ರ.ಮ. ಭುಸಾರಿ, ಪ್ರಾಚೀನ ಮಹಾರಾಷ್ಟ್ರಚಾ ಧಾರ್ಮಿಕ ಇತಿಹಾಸ, ೧೯೬೫, ಪು. ೮೧-೮೨.
೧೦. ಶ್ರೀನಿವಾಸ ರಿತ್ತಿ, ಜಿ.ಸಿ. ಶೆಳ್ಕೆ (ಸಂ). ಇನಸ್ಕ್ರಿಪ್ಶನ್ಸ್ ಫ್ರಾಮ ನಾಂದೇಡ ಡಿಸ್ಟ್ರಿಕ್ಟ, ೧೯೬೮.
೧೧. ರ.ಮ. ಭುಸಾರಿ, ಸಾಹಿತ್ಯ ಆಣೀ ಸಂಶೋಧನ, ೧೯೫೧, ಪು. ೨೪-೨೫.
೧೨. ಶಂ.ಗೋ. ತುಳಪುಳೆ (ಸಂ) ಚರಿತ್ರ : ಏಕಾಂಕ. ೧೯೬೪, ಪು. ೨೭.
೧೩. ದ.ರಾ.ಬೇಂದ್ರೆ - 'ಜ್ಞಾನೇಶ್ವರ ಪೂರ್ವಕಾಲೀನ ಕನ್ನಡ ವಾಙ್ಮಯ' (ಉತ್ತರಾರ್ಧ), 'ಮಹಾರಾಷ್ಟ್ರ-ಸಾಹಿತ್ಯ-ಪತ್ರೀಕಾ' ೭.೫, ಜನೇವರಿ ೧೯೬೫, ಪು. ೬೭.
೧೪. ಮಲ್ಲಿಕಾರ್ಜುನ ಶಾಸ್ತ್ರೀ (ಸಂ) ಪ್ರಭುಲಿಂಗಲೀಲಾ, II, ೧೯೦೪, ಪು. ೩೯-೪೨.
೧೫. ದ.ರಾ.ಬೇಂದ್ರೆ, 'ಪೂರ್ವ ನಿರ್ದಿಷ್ಟ ಗ್ರಂಥ' ಲೇಖನ ಪು. ೬೭.
೧೬. ಮಲ್ಲಿಕಾರ್ಜುನ ಶಾಸ್ತ್ರೀ (ಸಂ). 'ಪ್ರಭುಲಿಂಗಲೀಲಾ', III, ೧೯೦೪, ಪು. ೧೨-೩೨
೧೭. ಕಲ್ಯಾಣಿ ಮಲೀಕ (ಸಂ) 'ಸಿದ್ಧ ಸಿದ್ಧಾಂತ ಪದ್ಧತಿ, ೧೯೫೪, ಪು.೩೯ (ಅಡಿಟಿಪ್ಪಣಿ).
೧೮. ಅದೇ, ಪು. ೩೬.
೧೯. ಪೀತಾಂಬರ ದತ್ತ ಬಡಥ್ವಾಲ (ಸಂ), ಗೋರಖಬಾನಿ, ಸಂವತ್ ೨೦೦೩, ಪು. ೧೩೨.
೨೦. ವಿ.ಲ. ಭಾವೆ- ಮಹಾರಾಷ್ಟ್ರ ಸಾರಸ್ವತ, ೫ನೇ ಆವೃತ್ತಿ ೧೯೬೩, ಪು. ೩೨.
೨೧. ಪಿ.ಬಿ. ದೇಸಾಯಿ-'ಪೂರ್ವ ನಿರ್ದಿಷ್ಟ ಗ್ರಂಥ' ಪು. ೨೫೦.
೨೨. ಜಯದೇವಿ ಲಿಗಾಡೆ -ಮಹಾಯೋಗಿನಿ, ೧೯೫೫, ಪು. ೯೫.
೨೩. ರಾಮಾರಾವ್ 'ಶ್ರೀ ಶೈಲಂ', ಜರ್ನಲ ಆಫ್ ದಿ ಆಂಧ್ರ ಹಿಸ್ಟಾರಿಕಲ್ ರಿಸರ್ಚ್ ಸೊಸೈಟಿ, ೧೯೬೦-೬೧, ಪು. ೧೩೦-೧೩೫.
೨೪. ಪಿ.ಬಿ. ದೇಸಾಯಿ 'ಪೂರ್ವ ನಿರ್ದಿಷ್ಟ ಗ್ರಂಥ' ಪು. ೧೧೭.
೨೫. ಬಿ.ಎ. ಸಾಲೆತ್ತೂರ 'ದಿ ರಾಜಗುಗು ಆಫ್ ದಿ ಫೌಂಡರ್ಸ್ ಆಫ್ ವಿಜಯನಗರ ಎಂಡ್ ದಿ ಪಾಂಟಿಕ್ಸ ಆಫ್ ಶೃಂಗೇರಿ ಮಠ'. ಜರ್ನಲ್ ಆಫ್ ಅಂಧ್ರ.... ಪಾರ್ಟ IV, ಏಪ್ರಿಲ್ ೧೯೩೫, ಪು. ೩೪.
೨೬. ಗ.ತ್ರ್ಯಂ. ದೇಶಪಾಂಡೆ, ವಿದರ್ಭ ಸಂಶೋಧನ ಮಂಡಳ ವಾರ್ಷಿಕ ೧೯೬೯, ೧೯೭೦, ಪು. ೩೬.೮೦.
೨೭. ಬಿ.ಎ. ಸಾಲೆತ್ತೂರ ಪೂ. ನಿ. ಲೇಖನ ಪು. ೩೫.
೨೮. ಚಿ.ಗ. ಆರ್ವೆ 'ಜ್ಞಾನೇಶ್ವರ ಪೂರ್ವ ತೆಲಗು ಕಾವ್ಯಾತೀಲ ಮರಾಠಿ ಉತಾಣ' ಭಾ.ಇ.ಸಂ.ಮಂ. ತ್ರೈಮಾಸಿಕ, ೨೨, ೩-೪, ೧೯೬೩-೬೪, ಪು. ೯೪-೯೬.
೨೯. ರಾ.ಚಿ. ಢೇರೆ, ಗಂಗಾಜಳಿ, ೧೯೭೨, ಪು. ೬೯.

೩೦. ತ್ರ್ಯಂ. ಹ. ಆವಟೆ (ಸಂ), ಶ್ರೀ ಜ್ಞಾನದೇ ಮಹಾರಾಜ ಯಾಂಚಾ ಅಭಿಂಗಾಟೆ ಗಾಥಾ, ೧೯೬೦, ಪು. ೨೬೫.

೩೧. ದ.ವಿ. ಪಾಠಕ (ಪ್ರ) ಶ್ರೀ ಜ್ಞಾನದೇವ ಪಂಚಿಕರಣ, ೧೯೬೩.

೩೨. ಬಾಲ ಮುಕುಂದ ಕೇಸರಿ - (ಹಸ್ತಪ್ರತಿ) ಭಾ.ಇ.ಸಂ.ಪುಂ. ಪುಣೆ, ಗ್ರಂ. ೨೨, ೪೧೪.

೩೩. ತ್ರ್ಯಂ.ಹ. ಆವಟೆ (ಸಂ) ಶ್ರೀ ಜ್ಞಾನದೇವ ಮಹಾರಾಜ ಯಾಂಚಾ ಅಭಿಂಗಾಟೆ ಗಾಥಾ, ಶಕೆ ೧೮೩೦.

೩೪. ರಾ.ಚ. ಢೇರೆ 'ಸಂತ ಭೋಜಲಿಂಗ ರಚನಾ; ಜ್ಞಾನೇಶ್ವರ ತ್ರೈಮಾಸಿಕ, ಫೆಬ್ರವರಿ ೧೯೭೨, ಪು.೧-೩.

೩೫. ಪಾ.ಮಾ. ಚಾಂದೋರಕರ 'ಶ್ರೀ ಮುಕ್ತಾಬಾಯಿ ಅಪ್ರಸಿದ್ಧ ಕವಿತಾ' ಭಾ.ಇ.ಸಂ.ಮಂ. ತ್ರೈಮಾಸಿಕ ೧೨.೪ ಚೈತ್ರ ಶಕೆ ೧೮೫೪, ಪು. ೧೭೯-೧೮೧.

೩೬. ರಾ.ಚಿ. ಢೇರೆ, 'ಪ್ರಾಚೀನ ಮರಾಠಿಚ್ಯಾ ನವಧಾರಾ', ೧೯೭೨.

●

ಹೊಳಹು

ಹೊಯ್ಸಳರಲ್ಲಿ ಗರುಡ ಪದ್ಧತಿ ಯಾಕೆ ಹುಟ್ಟಿತು ?

•ಅರವಿಂದ ಚೊಕ್ಕಾಡಿ

ಹೊಯ್ಸಳರ ಕಾಲದಲ್ಲಿ ಕಂಡುಬರುವ ವಿಶಿಷ್ಟ ಸಂಪ್ರದಾಯ ಗರುಡ ಪದ್ಧತಿ. ರಾಜರ ಅಂಗರಕ್ಷಕ ಪಡೆಯನ್ನು ಗರುಡರೆಂದು ಕರೆಯುತ್ತಿದ್ದರು. ತಮ್ಮ ರಾಜ ಮರಣ ಹೊಂದಿದಾಗ ರಾಜನೊಂದಿಗೆ ಗರುಡರೂ ಪ್ರಾಣ ಹತ್ಯೆ ಮಾಡಿಕೊಳ್ಳುತ್ತಿದ್ದರು. ಈ ಪದ್ಧತಿಯನ್ನು 'ಕೀಳ್ಗುಂಟೆ' ಎಂದು ಕರೆಯಲಾಗುತ್ತಿತ್ತು. ೧೨೨೦ರಲ್ಲಿ ಎರಡನೆ ಬಲ್ಲಾಳನು ಮರಣ ಹೊಂದಿದಾಗ ಕುವಲ ಲಕ್ಷ್ಮಣನ ನಾಯಕತ್ವದಲ್ಲಿ ಒಂದು ಸಾವಿರ ಗರುಡರು ಪ್ರಾಣ ಹತ್ಯೆ ಮಾಡಿಕೊಂಡರಲ್ಲದೆ ಕುವರ ಲಕ್ಷ್ಮಣನ ಹೆಂಡತಿಯೂ ಸಾವನ್ನಪ್ಪಿದಳೆಂದು ಬೇಲೂರು ಶಾಸನದಲ್ಲಿ ಹೇಳಲಾಗಿದೆ. ಸೇವಕರು ಒಡೆಯರ ಬಗ್ಗೆ ತೋರಿಸಿದ ನಿಷ್ಠೆಗೆ ಗರುಡ ಪದ್ಧತಿಯೊಂದೇ ಉದಾಹರಣೆಯೇನಲ್ಲ. ಚರಿತ್ರೆಯ ಪುಟಗಳಲ್ಲಿ ಅಂಥ ಉದಾಹರಣೆಗಳು ಹೇರಳವಾಗಿ ಸಿಗುತ್ತವೆ. ಆದರೆ ಗರುಡ ಪದ್ಧತಿಯೆಂಬ ಪ್ರತ್ಯೇಕ ಸಂಪ್ರದಾಯದ ಅಸ್ತಿತ್ವಕ್ಕೆ ಕಾರಣಗಳೇನಿರಬಹುದು? ಈ ಪ್ರಶ್ನೆಯತ್ತ, ಗಮನಹರಿಸಿದರೆ, ಹೊಯ್ಸಳ ಸಾಮ್ರಾಜ್ಯದ ಒಟ್ಟು ಸ್ವರೂಪ ತೆರೆದುಕೊಳ್ಳುತ್ತದೆ.

ಹೊಯ್ಸಳ ವಂಶದ ಸ್ಥಾಪನೆಯ ಕುರಿತು ಜನಜನಿತವಾದ ಕಥೆಯೆಂದರೆ 'ಸಳ' ಎಂಬ ಯುವಕ ಗುರ್ವಾಜ್ಞೆಯನ್ನನುಸರಿಸಿ, ಹುಲಿಯನ್ನು ಕೊಂದು ಹೊಯ್ಸಳ ವಂಶವನ್ನು ಸ್ಥಾಪಿಸಿದ ನೆಂಬುದು. ಅದಕ್ಕೆ ಆಧಾರವಾಗಿ ದೊರಕುವುದು ಜನ್ನನ 'ಯಶೋಧರ ಚರಿತ್ರೆ'ಯಲ್ಲಿ ಕಾಣಿಸಿ ಕೊಳ್ಳುವ "ಸಳನೆಂಬ ಯಾದವಂ ಪೊಯ್ಸಳನಾದನ್" ಎಂಬ ಮಾತು. ಶಾಸನಗಳು ಉಲ್ಲೇಖಿ ಸುವಂತೆ ಈ ವಂಶದ ಪ್ರಾರಂಭಿಕ ರಾಜರುಗಳ ಹೆಸರುಗಳಲ್ಲಿ ನೃಪಕಾಮ ಮೊದಲಿಗನಾಗಿದ್ದಾನೆ. ಕೆಲವು ವಿದ್ವಾಂಸರ ಪ್ರಕಾರ, ನೃಪಕಾಮನೇ ಸಳ. ಏನೇ ಆದರೂ ಹೊಯ್ಸಳ ವಂಶದ ಮೂಲ ಬಿಂದು ಸಾಮಾನ್ಯ ಕುಟುಂಬದಿಂದ ಬಂದುದಾಗಿತ್ತೇ ಹೊರತು ಸಾಮ್ರಾಟರ ಮೂಲವಲ್ಲ ಎಂಬುದು ಸ್ಪಷ್ಟ. ನಂತರದ ಹೊಯ್ಸಳ ರಾಜರುಗಳಲ್ಲಿ ವಿನಯಾದಿತ್ಯ, ಬಲ್ಲಾಳರು ಮುಖ್ಯರಾಗುತ್ತಾರೆ. ಅವರೆಲ್ಲರೂ ಕಲ್ಯಾಣದ ಚಾಲುಕ್ಯರ ಸಾಮಂತ ರಾಜರುಗಳಾಗಿದ್ದರು. ಮುಂದೆ ವಿಷ್ಣುವರ್ಧನನ ಕಾಲಕ್ಕೆ ಅವರು ಸ್ವತಂತ್ರರಾದರೆಂದು ತಿಳಿದು ಬರುತ್ತದೆ. ಕಲ್ಯಾಣದ ಚಾಲುಕ್ಯ ೬ನೆಯ ವಿಕ್ರಮಾದಿತ್ಯ ೧೧೨೬ರಲ್ಲಿ ಕಾಲವಾದ ಮೇಲೆಯೇ ಆತ ಸ್ವತಂತ್ರನಾದ ಎಂದು ಡಾ.ಜಿ ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ ಅಭಿಪ್ರಾಯಪಟ್ಟಿದ್ದಾರೆ.

ಯಾವೊಬ್ಬ ರಾಜನಿಗಾದರೂ ಸ್ವತಂತ್ರ ಆಳ್ವಿಕೆ ನಡೆಸಬೇಕೆಂಬ ಸಹಜವಾದ ಬಯಕೆ. ಅದಕ್ಕೆ ಬೇಕಾದ ಸಿದ್ಧತೆಗಳು ವಿನಯಾದಿತ್ಯ, ಎರೆಯಂಗರ ಕಾಲದಲ್ಲಿಯೇ ನಡೆದುಕೊಂಡು ಬಂದಿದ್ದವು. ಚಾಲುಕ್ಯರ ಸಿಂಹಾಸನಕ್ಕಾಗಿ ಸೋಮೇಶ್ವರನ ಮಕ್ಕಳಾದ ಎರಡನೆಯ ಸೋಮೇಶ್ವರ ಮತ್ತು ವಿಕ್ರಮಾದಿತ್ಯರ ನಡುವೆ ನಡೆದ ಹೋರಾಟದಲ್ಲಿ ಸೋಮೇಶ್ವರನ ನೆರವಿಗೆ ವಿನಯಾದಿತ್ಯ ತನ್ನ ಮಗ ಎರೆಯಂಗನ ನೇತೃತ್ವದಲ್ಲಿ ಒಂದು ದೊಡ್ಡ ಸೈನ್ಯವನ್ನು ಕಳುಹಿಸಿಕೊಟ್ಟಿದ್ದನು. ಆದರೆ ವಿಕ್ರಮಾದಿತ್ಯನ ಗೆಲುವಿನಿಂದಾಗಿ ವಿನಯಾದಿತ್ಯನ ಉದ್ದೇಶ ಈಡೇರಲಿಲ್ಲವಾದರೂ ಮುಂದೆ ಆತ ವಿಕ್ರಮಾದಿತ್ಯನ ಸಾಮಂತ ರಾಜನಾಗಿ ಮುಂದುವರಿದ. ಇಲ್ಲಿ ಗಮನಾರ್ಹ ಅಂಶವೆಂದರೆ ವಿಕ್ರಮಾದಿತ್ಯ ಹೊಯ್ಸಳರನ್ನು ತಿರಸ್ಕರಿಸುವಷ್ಟು ಹೊಯ್ಸಳರು ದುರ್ಬಲವಾಗಿರಲಿಲ್ಲ ಹಾಗೂ ವಿಕ್ರಮಾದಿತ್ಯನನ್ನು ಎದುರಿಸುವಷ್ಟು ಹೊಯ್ಸಳರು ಸಮರ್ಥರೂ ಆಗಿರಲಿಲ್ಲ ಎಂಬುದು. ವಿನಯಾದಿತ್ಯನ ಮಗ ಎರೆಯಂಗನು, ವಿಕ್ರಮಾದಿತ್ಯನ ನಿಷ್ಠಾವಂತ ಸಾಮಂತನಾಗಿದ್ದು ಹಲವಾರು ಯುದ್ಧಗಳಲ್ಲಿ ವಿಕ್ರಮಾದಿತ್ಯ ಜಯಶೀಲನಾಗುವುದಕ್ಕೆ ನೆರವಾಗಿದ್ದುದರಿಂದ, ಅವನನ್ನು ವಿಕ್ರಮಾದಿತ್ಯನ ಬಲಗೈ ಬಂಟನೆಂದು ಪರಿಗಣಿತನಾಗಿದ್ದ ಎಂಬ ಐತಿಹ್ಯವಿದೆ. ಆದರೂ ವಿಕ್ರಮಾದಿತ್ಯ ಹೊಯ್ಸಳರನ್ನು ಅನುಮಾನದ ದೃಷ್ಟಿಯಿಂದಲೇ ನೋಡಿದ್ದ. ಇದಕ್ಕೆ ವಿಕ್ರಮಾದಿತ್ಯನ ಸಾಮಂತನಾಗಿದ್ದ ಪಾರಮಾರ ದಂಡನಾಯಕ ಜಗದ್ದೇವನು ದ್ವಾರಸಮುದ್ರದ ಮೇಲೆ ದಾಳಿ ನಡೆಸಿದಾಗ, ಆತ ಮೌನವಹಿಸಿದ್ದುದೇ ಸಾಕ್ಷಿ. ತನ್ನ ಒಬ್ಬ ಸಾಮಂತ ಇನ್ನೊಬ್ಬ ಸಾಮಂತನ ಮೇಲೆ ದಾಳಿ ನಡೆಸಿದಾಗ ಚಕ್ರವರ್ತಿ ಮೌನ ವಹಿಸಿಬೇಕಾದರೆ, ಬೆಳೆಯುತ್ತಿರುವ ಸಾಮಂತನ ಶಕ್ತಿಯನ್ನು ಕುಂದಿಸುವ ಉದ್ದೇಶವಿದ್ದಿರಬೇಕು ಎಂದು ಗ್ರಹಿಸಬಹುದು. ಇಂಥ ಸ್ಥಿತಿಯಲ್ಲಿ ಹೊಯ್ಸಳರು ಮಾತ್ರ ಯಾವ ಶಂಕೆಯೂ ಇಲ್ಲದೆ ಚಾಲುಕ್ಯರ ನಿಷ್ಠಾವಂತ ಅನುಯಾಯಿಗಳಾಗಿಯೇ ಇದ್ದರು ಎಂದು ಭಾವಿಸಲು ಸಾಧ್ಯವಿಲ್ಲ. ಅವರಿಗೂ ಅನುಮಾನಗಳು ಕಾಡಿರಬೇಕು. ಅಲ್ಲದೆ ರಾಜರ ಸಹಜ ಪ್ರವೃತ್ತಿಯಾದ ಮಹತ್ವಾಕಾಂಕ್ಷೆ ಇದ್ದಿರಬೇಕು. ಹೀಗಿರುವಲ್ಲಿ ಅವರಿಗೊಂದು ಬಲಾಢ್ಯ ಸೈನ್ಯದ ಅವಶ್ಯಕತೆ ಇತ್ತು. ಆದರೆ ತಾವು ಚಾಲುಕ್ಯರ ಸಾಮಂತರಾಗಿದ್ದುದರಿಂದ ತಮ್ಮ ಸೈನ್ಯವೂ ಚಾಲುಕ್ಯರಿಗೆ ನಿಷ್ಠಾವಂತಿಕೆಯನ್ನು ಪ್ರದರ್ಶಿಸಬೇಕಾದ ಅಗತ್ಯ ಇತ್ತು. ಅಲ್ಲದೆ ಚಾಲುಕ್ಯರ ಅನುಮಾನದ ದೃಷ್ಟಿಯಿಂದ ಸೈನ್ಯದಲ್ಲಿ ಗೂಢಚಾರ ಚಟುವಟಿಕೆಗಳು ನಡೆಯುವುದಕ್ಕೆ ಆಸ್ಪದವಿತ್ತು. ಹೀಗಿರುವಲ್ಲಿ ಕೇವಲ ರಾಜರಿಗಷ್ಟೇ ನಿಷ್ಠಾವಂತರಾಗಿರುವ ಯೋಧರ ಅವಶ್ಯಕತೆಯನ್ನು ಮನಗಾಣಲಾಗಿ ಗರುಡರನ್ನು ಸಿದ್ಧಪಡಿಸಿದ್ದಿರಬಹುದು.

ಹೊಯ್ಸಳರ ಕಾಲದಲ್ಲಿ ನಡೆದಂಥ ಯುದ್ಧಗಳ ಪ್ರಮಾಣವನ್ನು ಗಮನಿಸಿದಾಗ ಅವರಿಗೊಂದು ಬಲಿಷ್ಠ ಅಂಗರಕ್ಷಕ ಪಡೆಯ ಅನಿವಾರ್ಯತೆ ಇತ್ತೆಂದು ತಿಳಿದು ಬರುತ್ತದೆ. ಸಾಮ್ರಾಜ್ಯ ಸ್ಥಾಪನೆಯ ಮೊದ ಮೊದಲಿನ ಕಾಲದಲ್ಲಿ ಸಣ್ಣ ಪುಟ್ಟ ಸಾಮಂತರಾಜರುಗಳ ಉಪಟಳಗಳು ಅತಿಯಾಗಿದ್ದರೆ, ಸಾಮ್ರಾಜ್ಯದ ಉಚ್ಛ್ರಾಯ ಸ್ಥಿತಿಯಲ್ಲಿ ಬಲಾಢ್ಯ ಚಾಲುಕ್ಯರನ್ನು, ಚೋಳರನ್ನು ಅವರು ಎದುರಿಸಬೇಕಾಗಿತ್ತು. ಸಾಮ್ರಾಜ್ಯದ ಅಂತಿಮ ಹಂತದಲ್ಲಿ ಮುಸ್ಲಿಂ

ರಾಜರುಗಳ ದಾಳಿಯನ್ನು ಎದುರಿಸಬೇಕಾಗಿತ್ತು. ಯುದ್ಧ ಕಾಲದಲ್ಲಿ ವೇಶ್ಯೆಯರ ಬಳಕೆ, ಫಿತೂರಿಗಳೆಲ್ಲ ನಡೆಯುತ್ತಿದ್ದುದು ಸಹಜವಾದ್ದರಿಂದ ಹಾಗೂ ಸಮರ್ಥ ರಾಜರುಗಳು ಸ್ವಯಂ ಯುದ್ಧದ ಶಿಬಿರಗಳಲ್ಲಿ ಉಪಸ್ಥಿತರಿರುವ ಪರಿಪಾಠವನ್ನು ಇಟ್ಟುಕೊಂಡದ್ದರಿಂದ, ರಾಜರಿಗೆ ಪ್ರಾಣಾಪಾಯ ಭೀತಿ ಸದಾ ಇರುತ್ತಿತ್ತೆಂಬುದು ಸುಸ್ಪಷ್ಟ. ಅಂಥಲ್ಲಿ ರಾಜರ ರಕ್ಷಣೆಗೆ ಒಂದು ಪ್ರಬಲ ಅಂಗರಕ್ಷಕ ಪಡೆ ಅವಶ್ಯವಿದ್ದಿರಬೇಕು.

ಮೇಲಿನ ಎರಡು ಕಾರಣಗಳು ಹೆಚ್ಚು ಕಮ್ಮಿ ಎಲ್ಲ ರಾಜರುಗಳಿಗೂ ಇದ್ದಂಥವೇ. ಆದರೆ ವಿಷ್ಣುವರ್ಧನನ ಕಾಲಕ್ಕೆ ಹೊಯ್ಸಳ ಸಾಮ್ರಾಜ್ಯದಲ್ಲಿ ಧರ್ಮ ಸಂಬಂಧಿಯಾದ ಭಿನ್ನತೆ ಅತಿಯಾಗಿತ್ತೆಂಬುದನ್ನು ಗಮನಿಸಬೇಕು. ರಾಜ ಬಿಟ್ಟಿದೇವ ರಾಮಾನುಜಾಚಾರ್ಯರ ಪ್ರಭಾವದಿಂದ ಶ್ರೀ ವೈಷ್ಣವ ಪಂಥವನ್ನು ಸ್ವೀಕರಿಸಿ ವಿಷ್ಣುವರ್ಧನನಾದ. ಆದರೆ ಅವನ ಪಟ್ಟ ಮಹಿಷಿಯಾದ ಶಾಂತಲೆ ಜೈನಳಾಗಿಯೇ ಉಳಿದಳೆಂಬ ವಿಷಯದಲ್ಲಿ ಸಂದೇಹವಿದೆ. ಆ ಸಂದೇಹ ವಿಷ್ಣುವರ್ಧನ ತನ್ನ ಮೂಲ ಧರ್ಮವನ್ನು ಬದಲಾಯಿಸಿದ್ದನೇ ಇಲ್ಲವೇ ಎಂಬುದರ ಕುರಿತಾಗಿಯೇ ಹೊರತು, ರಾಮಾನುಜಾಚಾರ್ಯರು ಅವನ ಮೇಲೆ ಬೀರಿದ ಪ್ರಭಾವದ ಕುರಿತಾಗಿ ಅಲ್ಲ. ರಾಮಾನುಜಾಚಾರ್ಯರಿಂದ ಪ್ರಭಾವಿತನಾಗದೆ ಹೋಗಿದ್ದರೆ ಆತ ತನ್ನ ಹೆಸರನ್ನು ಬದಲಾಯಿಸಿಕೊಳ್ಳಬೇಕಾದ ಅನಿವಾರ್ಯತೆ ಅಥವಾ ಅವಶ್ಯಕತೆ ಏನಿತ್ತು ಎಂಬ ಬಗ್ಗೆ ಬೇರೆ ಕಾರಣಗಳು ತಿಳಿಯುತ್ತಿಲ್ಲ. ಇದೇನೇ ಇದ್ದರೂ ಮೂಲ ಜೈನ ಸಾಮ್ರಾಜ್ಯವಾದ ಹೊಯ್ಸಳರ ಸಾಮ್ರಾಜ್ಯದಲ್ಲಿ ರಾಮಾನುಜಾಚಾರ್ಯರ ಆಗಮನದ ನಂತರ, ಧರ್ಮ ಸಂಬಂಧಿ ಭಿನ್ನತೆಗಳು ತಲೆದೋರಿದ್ದವು ಎನ್ನುವುದರಲ್ಲಿ ಸಂದೇಹವಿರಲಾರದು. ಈ ಎರಡು ಭಿನ್ನ ಚಿಂತನೆಗಳು ಸಾಕಷ್ಟು ಬಲಾಢ್ಯವೂ ಆಗಿದ್ದವು ಎಂಬುದನ್ನು ಗಮನಿಸಬೇಕು.

ಒಂದು ರಾಜ್ಯದಲ್ಲಿ ರಾಜ ಧರ್ಮವೊಂದಿದ್ದು ಇತರ ಧರ್ಮಗಳಿಗೆ ಪ್ರೋತ್ಸಾಹ ಕೊಡುವುದಕ್ಕೂ ಆಳುವ ವರ್ಗದಲ್ಲಿಯೇ ಭಿನ್ನ ಧರ್ಮಗಳ ಚಿಂತನೆಗಳಿರುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಈ ದೃಷ್ಟಿಯಲ್ಲಿ ವಿಷ್ಣುವರ್ಧನ ಮತ್ತು ಶಾಂತಲೆಯರು ಸಮಾನ ಬಲದ ಎರಡು ಧಾರ್ಮಿಕ ಚಿಂತನೆಗಳ ಪ್ರತೀಕರಾಗಿ ಕಾಣಿಸುತ್ತಾರೆ. ಶಾಂತಲೆಯಾದರೂ ಒಬ್ಬ ರಾಜನ ಸಾಮಾನ್ಯ ರಾಣಿಯಂತಿರದೆ ರಾಜಕೀಯದಲ್ಲಿ, ವಿವಿಧ ಕಲಾ ಪ್ರಕಾರಗಳಲ್ಲಿ, ಯುದ್ಧದಲ್ಲಿ ನಿಪುಣಳಾಗಿದ್ದಳು. 'ರಣದೊಳ್ ಬಳ್ಗದೇವತೆ' ಎಂಬುದು ಆಕೆಯ ಬಿರುದಾಗಿತ್ತು. ಹೀಗಿರುವಲ್ಲಿ ಸಾಮ್ರಾಜ್ಯದಲ್ಲಿ ಎರಡು ಪ್ರಬಲ ಧರ್ಮಗಳು ಮುಖಾಮುಖಿಯಾಗಿ ಪೈಪೋಟಿ ನಡೆಸುವ ಸಾಧ್ಯತೆ ಇತ್ತು. ಈ ಭಿನ್ನತೆ ರಾಜಕುಟುಂಬದಲ್ಲಿಯೂ ಧ್ವನಿಸಬಹುದಾಗಿತ್ತು ಎಂಬುದಕ್ಕೆ ಸಿ.ಕೆ. ನಾಗರಾಜರಾವ್ ಅವರ ಸಂಶೋಧನಾ ಲೇಖನ "ಚಿಲ್ಡ್ರನ್ ಆಫ್ ವಿಷ್ಣುವರ್ಧನ (ಸೀನಿಯರ್) ಹೊಯ್ಸಳೇಶ್ವರ" (ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ ವಾಲ್ಯೂಂ LIX)ದಲ್ಲಿ ಸಾಕ್ಷಿ ದೊರಕುತ್ತದೆ. ಹೊಯ್ಸಳ ಇತಿಹಾಸ ರಚನೆಯಲ್ಲಿ ಬಹುಮಟ್ಟಿಗೆ ಶಾಂತಲೆಗೆ ಮಕ್ಕಳಿರಲಿಲ್ಲ ಎಂದೇ ಚಿತ್ರಿತವಾಗಿದೆ. ಆದರೆ ಈ ಸಂಶೋಧನ ಬರಹ, ಆ ಕಲ್ಪನೆಯನ್ನು ತೊಡೆದು ಹಾಕಿ ಶಾಂತಲೆಗೆ ಮೂವರು ಗಂಡು ಮಕ್ಕಳು ಹಾಗೂ ಒಬ್ಬ ಮಗಳು ಇದ್ದರೆಂದು

ಸಮರ್ಥಿಸುತ್ತದೆ. ಹೀಗಿರುವಾಗ ಧರ್ಮ ಸಂಬಂಧಿಯಾದ ಘರ್ಷಣೆಗಳು ಶಾಂತಲೆಯ ಮಕ್ಕಳ ಬಗೆಗಿನ ಉಲ್ಲೇಖಗಳನ್ನು ಅಳಿಸಿ ಹಾಕಿರಬಹುದೆಂದು ಸಿ ಕೆ ನಾಗರಾಜರಾವ್ ಅವರ ಊಹೆಯನ್ನು ತಳ್ಳಿಹಾಕುವಂತಿಲ್ಲ. ಕುಟುಂಬದಲ್ಲಿ ಅಂಥ ಘರ್ಷಣೆಗಳು ಸಂಭವಿಸಿದಾಗ ಅದು ರಾಜನ ಪ್ರಾಣಕ್ಕೆ ಸಂಚಕಾರ ತರಬಹುದಾದ ಸಾಧ್ಯತೆ ಇತ್ತು. ಏಕೆಂದರೆ ಧರ್ಮ ಸಂಬಂಧಿಯಾದ ಕಲಹಗಳು ಇತರ ಕಲಹಗಳಿಗಿಂತ ಭಿನ್ನ ಧರ್ಮವೆನ್ನುವುದು ಮನುಷ್ಯನ ಜೀವನ ವಿಧಾನ ಗಳನ್ನು, ಚಿಂತನೆಯನ್ನು ರೂಪಿಸುವ ಸಾಮರ್ಥ್ಯವುಳ್ಳದ್ದು. ಇಂಥ ಸ್ಥಿತಿಯಲ್ಲಿ ರಾಜನ ಅಂಗ ರಕ್ಷಕರು ಬಹುಮುಖ್ಯ ಪಾತ್ರವಹಿಸುತ್ತಾರೆ. ಅಷ್ಟಲ್ಲದೆ 'ಗರುಡ' ಎಂಬ ಪದ ಶ್ರೀ ವೈಷ್ಣವ ಪಂಥಕ್ಕೆ ಸಂಬಂಧಿಸಿರುವಂಥದು ಎಂಬುದನ್ನು ಗಮನಿಸಬೇಕು.

ಸೈನಿಕನಾಗುವುದು, ರಾಜನ ಅಂಗರಕ್ಷಕನಾಗುವುದು ಎಲ್ಲವೂ ಸಾವಿಗೆ ಹತ್ತಿರವಾದ ಕೆಲಸಗಳೇ ಆಗಿರುವಾಗ ಗರುಡ ಎನ್ನುವ ಪದ್ಧತಿಯ ವಿಶೇಷತೆಯೇನು ಎಂಬ ಪ್ರಶ್ನೆ ಸಹಜ. ಇಲ್ಲಿ ಗರುಡರ ಜೀವನ ಶೈಲಿ ಮುಖ್ಯವಾಗುತ್ತದೆ. ತಾವು ಒಪ್ಪಿಕೊಂಡ ರಾಜನನ್ನು ಹೊರತು ಪಡಿಸಿ ಬೇರಾರಿಗೂ ಅವರು ಸೇವೆ ಸಲ್ಲಿಸುತ್ತಿರಲಿಲ್ಲ. ಗರುಡರ ಬದುಕೇನಿದ್ದರೂ ಅದು ರಾಜನೊಬ್ಬನಿಗಾಗಿ. ಅವನನ್ನು ಉಳಿದು ಬೇರೊಂದು ಚಿಂತೆ ಅವರಿಗಿಲ್ಲ. ಯಾವುದೇ ಸಂದರ್ಭ ದಲ್ಲಾಗಲಿ ಅಪಾಯವಿದೆ ಎಂದಾಗ ರಾಜನಿಗಿಂತ ಮೊದಲು ಅವರು ಅದನ್ನು ಸ್ವೀಕರಿಸಬೇಕೆಂಬ ಮನೋಭಾವನೆ ಅವರಲ್ಲಿತ್ತು. ಇಂಥ ತ್ಯಾಗಕ್ಕೆ ಪ್ರತಿಯಾಗಿ ನಂಬಿಕಸ್ಥರನ್ನಾಗಿ ಪರಿಗಣಿಸಲಾ ಗುತ್ತಿತು. ಅಲ್ಲದೆ ಗರುಡ ಎಂಬ ವಿಶೇಷ ಸ್ಥಾನಮಾನಗಳು ಅವರಿಗೆ ಸಂದಾಯವಾಗಿದ್ದವು. ಇವೆಲ್ಲದರ ಮೂಲಕ ಗರುಡರನ್ನು ಇನ್ನಿತರ ಸೈನಿಕರಿಗಿಂತ ಅಂಗರಕ್ಷಕರಿಗಿಂತ ಹೆಚ್ಚು ಮಟ್ಟಿಗೆ ಸಾವಿನ ಸನಿಹಕ್ಕೆ ಕೊಂಡೊಯ್ಯಲಾಗಿತ್ತು. ಇಂಥಲ್ಲಿ ಗರುಡನಾಗುವ ವ್ಯಕ್ತಿ ಗರುಡತ್ವವನ್ನು ಸ್ವೀಕರಿಸುವಾಗ ನಡೆಸುವ ಕಾರ್ಯಕ್ರಮಗಳು ಧರ್ಮದ ಆಸರೆಯಲ್ಲಿ ನಡೆಯುತ್ತಿದ್ದುದರಿಂದ ಹಬ್ಬಗಳೋಪಾದಿಯಲ್ಲಿ ಅದು ಆಪ್ಯಾಯಮಾನವಾಗಿದ್ದಿರ ಬೇಕು. ಏಕೆಂದರೆ ಒಟ್ಟು ಊಳಿಗ ಮಾನ್ಯ ಜೀವನ ಶೈಲಿಯಲ್ಲಿ ತ್ಯಾಗಕ್ಕೆ ವಿಶೇಷವಾದ ಮಹತ್ವವಿದೆ. ಒಡೆಯನಿಗಾಗಿ ಜೀವ ಕೊಡುವುದು ಶ್ರೇಷ್ಠ ಕಾರ್ಯ ಎನ್ನುವುದು ಊಳಿಗಮಾನ್ಯ ಸಮಾಜದ ನಂಬಿಕೆ. 'ಗೆದ್ದರೆ ವಿಜಯ, ಸತ್ತರೆ ವೀರ ಸ್ವರ್ಗ' ಎಂಬ ತಿಳಿವಳಿಕೆ ಈ ಸಮಾಜದ್ದು. ಹೀಗಿರುವಾಗ ದೈವ ಸ್ವರೂಪನಾದ ರಾಜನು ತನ್ನನ್ನು ಸ್ವೀಕರಿಸುತ್ತಾನೆ ಎಂದಾದರೆ ಅದು ಸಂತೋಷಕರ ವಿಷಯವಾಗಿತ್ತೆನಿಸುತ್ತದೆ.

ಸಾಮಾನ್ಯ ಸೈನಿಕನಲ್ಲಿಯೂ ಈ ಎಲ್ಲ ಗ್ರಹಿಕೆಗಳಿದ್ದವು ಎಂಬುದಕ್ಕೆ ರಾಜರಿಗಾಗಿ ಹೋರಾಡಿದ, ಮಡಿದ ಸೈನಿಕರ ಜೀವನ ಚಿತ್ರಣಗಳು ಹೇಳುತ್ತವೆ. ಆದರೆ ಸೈನಿಕನ ಜೀವನ ಶೈಲಿಗೂ ಗರುಡರ ಜೀವನ ಶೈಲಿಗೂ ಅಲ್ಪ ಸ್ವಲ್ಪ ವ್ಯತ್ಯಾಸವಿದೆ. ಸೈನಿಕರು, ಅಂಗರಕ್ಷರು ತಮ್ಮ ರಾಜ ಮಡಿದನಾದರೆ ಮುಂದಿನ ರಾಜನ ಸೈನ್ಯದಲ್ಲೂ ಮುಂದುವರೆಯಬಲ್ಲರು. ಪರಕೀಯ ಅರಸರು ರಾಜ್ಯವನ್ನು ಆಕ್ರಮಿಸಿ ಪ್ರಭುಗಳಾದರೆ ಕೆಲವು ನಿಷ್ಠಾವಂತರನ್ನು ಹೊರತು

ಪಡಿಸಿ ಮಿಕ್ಕ ಸೈನಿಕರು ಇನ್ನೊಬ್ಬ ರಾಜನಿಗಾಗಿಯೂ ಸೇವೆ ಸಲ್ಲಿಸಬಲ್ಲರು. ಹೀಗಾಗಿ ಅವರ ದೃಷ್ಟಿ ರಾಜನ ಹೊರತಾಗಿ ಇತರ ಕಡೆಗೂ ಸ್ವಲ್ಪ ಮಟ್ಟಿಗೆ ವ್ಯಾಪಿಸಿತ್ತೆನ್ನಬಹುದು.

ಗರುಡರದು ಹಾಗಲ್ಲ. ಅವರದು ಏಕ ವ್ಯಕ್ತಿ ನಿಷ್ಠೆ. ಭಾವನಾತ್ಮಕವಾಗಿ ಅವರನ್ನು ಏಕ ವ್ಯಕ್ತಿ ನಿಷ್ಠರನ್ನಾಗಿಸುವಲ್ಲಿ ಗರುಡ ಎಂಬ ಆಚರಣೆ ಸಹಾಯಕವಾಗಿತ್ತು ಎನಿಸುತ್ತದೆ. ಅದನ್ನು ಸಮರ್ಥವಾಗಿ ಗ್ರಹಿಸಿದವರು ಹೊಯ್ಸಳ ರಾಜರುಗಳು.

●

ಮಂಗಳೂರಿನ 'ಕದ್ರಿ'ಯು ಒಂದು ಕದಳಿವನವೇ ?

●ಆನಂದನಾಥ್

ಅಭಿಪ್ರಾಯಗಳಿಗನುಸಾರವಾಗಿ "ಕದಲಿ" ಎಂಬ ಶಬ್ದವನ್ನು ಕೇಳಿದೊಡನೆ ತಕ್ಷಣ ಕದಲಿ ಬಾಳೆಹಣ್ಣಿನ ನೆನಪು ಮನಸ್ಸಿನಲ್ಲಿ ಮೂಡುತ್ತದೆ. ಕದಲಿ, ಕದಳಿ, ಕದಲಿವನ ಎಂದರೆ ಅರಣ್ಯದ ಮಧ್ಯಭಾಗ, ವನಾಂತರ, ತಪಸ್ಸಿಗೆ ಅರ್ಹವಾಗಿರುವ ಸ್ಥಳ, ಮುಕ್ತಿವನ ಎಂಬ ಅರ್ಥಗಳೂ ಇವೆ. ಮಂಗಳೂರಿನ ಕದಲೀ ಕ್ಷೇತ್ರವನ್ನು ನಾಥ ಸಂಪ್ರದಾಯದ (ಪಂಥದ) ಸಿದ್ಧಿ ಪುರುಷರಿಂದಲೂ, ಯೋಗಿ ಯೋಗಿನಿಯರಿಂದಲೂ, ಅವತಾರ ಪುರುಷರಿಂದಲೂ "ಕದಲಿವನ" ಎಂಬ ಹೆಸರು ಕರೆಯುತ್ತಾ ಬಂದಿದ್ದಾರೆ. ಮಂಗಳೂರಿನ ಈ ಕ್ಷೇತ್ರದಲ್ಲಿ ಪರಶುರಾಮನಿಗೆ ಮಂಜುನಾಥನಾಗಿ ಒಲಿದ ಶಿವನು, ಮುಂದಕ್ಕೆ ತಾನು ಗೋರಕ್ಷನಾಥನಾಗಿ ಭುವಿಯೊಳವತರಿಸಿ, ಯೋಗ ಮಾರ್ಗದಿಂದ ಮುಕ್ತಿಯನ್ನು ಹೇಗೆ ಪಡೆಯಬಹುದೆಂಬುದನ್ನು ಬೋಧಿಸಿ, ಈ ಕದಲಿವನದಲ್ಲಿ ಮುಕ್ತಿ ಹೊಂದುವವನಾಗುವೆನು ಎಂದು ಆಶೀರ್ವದಿಸಿದನು ಎಂಬ ಪುರಾಣವಿದೆ. ಗೋರಕ್ಷನಾಥನು ಕದಲಿ (ಕದ್ರಿ)ಯ ಮಂಜುನಾಥ ಶಿವನಲಿಂಗದಲ್ಲಿ ಐಕ್ಯವಾಗಿ ಮುಕ್ತಿ ಹೊಂದಿದನೆಂದೂ ಐತಿಹ್ಯವಿದೆ. ಅಂತೆಯೇ ಇಲ್ಲಿರುವ ನಾಥ ಪಂಥದ ಜೋಗಿ ಮಠಕ್ಕೆ, ಸಂಪ್ರದಾಯದಂತೆ ಹನ್ನೆರಡು ವರ್ಷಗಳಿಗೊಮ್ಮೆ ಪೀಠಾಧಿಪತಿಗಳಾಗಿ ನಿಯುಕ್ತರಾಗುವ ಸಮಾಧಿ ಯೋಗಿಗಳು, ಈ ಕದಲಿವನದಲ್ಲಿ ಹೊಂದುತ್ತಾರೆ. ಶ್ರೀ ಸಿದ್ಧಿ ಜ್ವಾಲಾನಾಥ್ ಜೀಯ "ಸಜೀವ ಸಮಾಧಿ"ಯನ್ನೂ ಒಳಗೊಂಡಂತೆ ಅನೇಕ ಸಮಾಧಿ ಸ್ಥಳಗಳನ್ನೂ ಈ ಕ್ಷೇತ್ರದಲ್ಲಿ ಈಗಲೂ ಕಾಣಬಹುದು. ಈ ಸಂಪ್ರದಾಯವು ಇಂದಿಗೂ ಇಲ್ಲಿ ಪ್ರಚಲಿತದಲ್ಲಿದೆ.

ಪರಂಪರಾಗತ ೧೨ ವರ್ಷಗಳಿಗೊಮ್ಮೆ ನಡೆಯುತ್ತಿರುವ ಕದಲಿ ಪೀಠಾರೋಹಣ ಸಮಾರಂಭವು ಕೊನೆಗೊಂಡಂತೆ, ನಿರ್ಗಮಿಸುವ ಪೀಠಾಧಿಪತಿಗಳವರು ಸಮಾಧಿ ಸ್ವೀಕರಿಸಲು ಸಿದ್ಧರಾಗುತ್ತಾರೆ. ಇವರು ೧೨ ವರ್ಷಗಳ ಪೂರ್ವದಲ್ಲಿ ಇಲ್ಲಿಯ ಪೀಠಾಧಿಪತಿಗಳಾಗಿ ತ್ರ್ಯಂಬಕೇಶ್ವರದಿಂದ ಪಾದಯಾತ್ರೆಯಲ್ಲಿ ದೈನಂದಿನ ಅನುಷ್ಠಾನಕ್ಕೆಂದು ತಂದಿರುವ ಪಾತ್ರ ದೇವತೆಯನ್ನು, ಸಮುದ್ರ ಕಿನಾರೆಗೆ ತೆಗೆದು ಕೊಂಡು ಹೋಗಿ, ಅಲ್ಲಿ ವಿಸರ್ಜನ ಪೂಜೆಯನ್ನು

ಸಲ್ಲಿಸಿ, ಪಾತ್ರ ದೇವತೆಯನ್ನು ಸಮುದ್ರದ ನೀರಿನಲ್ಲಿ ಬಿಟ್ಟು, ಮೂರು ಬಾರಿ ನೀರಿನಲ್ಲಿ ಮುಳುಗಿ ಎದ್ದು "ಜಲಸಮಾಧಿ" ಕೈಕೊಂಡನೆಂಬ ಸಾಂಕೇತಿಕ ಆಚರಣೆಯನ್ನು ಆಚರಿಸುತ್ತಾರೆ. ಇದೇ ಇಲ್ಲಿಯ ಕದಲಿವನದಲ್ಲಿ ಮುಕ್ತಿಹೊಂದುವ ಪ್ರಚಲಿತ ಸಾಂಕೇತಿಕ ಪದ್ಧತಿ.

ಶ್ರೀ ಶೈಲದಲ್ಲಿ ಅಕ್ಕಮಹಾದೇವಿಯ ಅಲ್ಲಿಯ ಕದಲಿವನದೊಳಗೆ ಶ್ರೀ ಮಲ್ಲಿಕಾರ್ಜುನನ ನೆಚ್ಚಿ ಮೋಕ್ಷ ಹೊಂದಿದಳೆಂದು ಪ್ರಚಲಿತವಿದೆ. ಸರ್ವಭೂಷಣಸ್ವಾಮಿಗಳವರೂ ತಾನು "ಮುಕ್ತಿವನ"ವನ್ನು ಸೇರುವ ಮೊದಲು ತನ್ನ ಶಿಷ್ಯರೊಡನೆ "ಸಪ್ತ ನದಿಯ ಸಂಗಮ ದಾಂಟಿ ಮತ್ತು "ಕದಲಿವನ"ದೊಳು ಸುಳಿದು ಅಲ್ಲಿರ್ಪ ಗುಹೆಯೊಳು ಒಬ್ಬನೇ ಹೊಕ್ಕೇನು. ಓಂ ಶ್ರೀ ಗುರುಸಿದ್ಧ ಯೋಗಿ ಜನರ ಮರ್ಮವೇನುಂಟೋ" ಎಂದು ಕದಲಿವನದ ಬಗ್ಗೆ ವಿವರಣೆ ನೀಡಿರುತ್ತಾರೆ. ಶ್ರೀ ಅಲ್ಲಮ ಪ್ರಭುಗಳವರು ಸಹ "ಕದಲಿವನಕ್ಕೆ ನಡೆಗೊಂಡವರು".

ಈ ಮೇಲಿನ ಆಧಾರಾನುಸಾರವಾಗಿ ಅಕ್ಕಮಹಾದೇವಿ, ಅಲ್ಲಮಪ್ರಭು, ಸರ್ವಭೂಷಣ ಸ್ವಾಮಿಗಳು, ಮತ್ಸ್ಯೇಂದ್ರ, ಗೋರಕ್ಷನಾಥಾದಿ ನವನಾಥರು, ಎಂಭತ್ತನಾಲ್ಕು ಸಿದ್ಧಯೋಗಿಗಳು, ಮಹಾತಪಸ್ವಿಗಳು, ಕುಂಡಲಿನೀಯೋಗ ಸಾಧಕರು, ಇವರೆಲ್ಲಾ ತಮ್ಮ ತಮ್ಮ ಮೋಕ್ಷಕ್ಕಾಗಿ ಆರಿಸಿದ ಅರಣ್ಯದ ಮಧ್ಯಭಾಗ, ವನಾಂತರ, ತಪಸ್ಸಿಗೆ ಅರ್ಹವಾಗಿರುವ ಸ್ಥಳ, ಮುಕ್ತಿವನ, ಇವುಗಳೇ ಕದಲಿ ವನಗಳು. ಈ ಹಿನ್ನೆಲೆಯಲ್ಲಿ ಮಂಗಳೂರಿನ "ಕದಲಿವನ" (ಕದ್ರಿ) ಕೂಡಾ ನಾಥ ಪಂಥದ ಸಿದ್ಧ ಯೋಗಿಗಳ ಹಾಗೂ ಯೋಗಿನಿಯರ, ಅವತಾರ ಪುರುಷರ "ಮುಕ್ತಿವನ" ಎಂಬುದು ಶತಸಿದ್ಧವಾಗಿದೆ.

●

ಡಿ ಆರ್ ನಾಗರಾಜ : ಅರ್ಧಕ್ಕೆ ಬಿಟ್ಟು ಹೋದ ಚಿಂತಕ

●ರಾಜೇಂದ್ರ ಚೆನ್ನಿ

ಅದ್ಭುತವಾದ ಪುಸ್ತಕಗಳನ್ನುಬರೆದು ಕಣ್ಮರೆಯಾಗಿಬಿಟ್ಟು ಮಾಡಬೇಕಾದ ಕೆಲಸಗಳನ್ನು ಅರ್ಧಕ್ಕೆ ಬಿಟ್ಟು ಹೋದ ವ್ಯಕ್ತಿಯ ಬಗ್ಗೆ ಪ್ರೀತಿ ಮತ್ತು ಸಿಟ್ಟಿನಿಂದ ಬರೆಯುತ್ತಿದ್ದೇನೆ. ಇದಕ್ಕೆ ಒಂದು ಸಮರ್ಥನೆಯನ್ನೂ ಕೊಡಬಲ್ಲೆ. ಡಿ ಆರ್ ನಾಗರಾಜರ ದೇಶೀವಾದೀ ಚಿಂತನೆಯ ಅತ್ಯಂತ ಪ್ರಬುದ್ಧವಾದ ಕೊನೆಯ ಪುಸ್ತಕದಿಂದ ಸಾಬೀತಾಗುವುದೆಂದರೆ ದೇಶೀವಾದಿ ಚಿಂತನೆಯು ಮಾದರಿಯೆನ್ನುವುದಿಲ್ಲ, ಸಿದ್ಧ ಚೌಕಟ್ಟಿನ ಮಾದರಿಗಳಿಲ್ಲ. ಅಲ್ಲಮನ ಬಗ್ಗೆ ಬರೆಯುವುದೆಂದರೆ, ವಿಶಾಲವಾದ ಒಂದು gridನಲ್ಲಿ ಪ್ರವೇಶ ಮಾಡಿ ಹಲವಾರು ಸಂಕೀರ್ಣ ಮಜಲುಗಳನ್ನು ಸಾವಧಾನದಿಂದ, ವೈಚಾರಿಕ ಸಾಮರ್ಥ್ಯ ಹಾಗೂ ಅಧ್ಯಯನಶೀಲತೆಯ ಜೊತೆಗೆ ಬೌದ್ಧಿಕ ಸಾಹಸದ ಖುಷಿಯನ್ನು ಬಿಟ್ಟುಕೊಡುವಂತೆ ಬರೆಯುವುದಾಗಿದೆ. ಅಲ್ಲಿ ಕಾಶ್ಮೀರಿ ಶೈವ, ಭಾರತೀಯ ವೈಚಾರಿಕತೆಯ ಪ್ರಧಾನ ಮತ್ತು ಬಂಡಾಯ ಪರಂಪರೆಗಳು, ಬ್ರಾಹ್ಮಣ ಮತ್ತು

ಶ್ರಮಣ ಪರಂಪರೆಗಳ "ಆತ್ಮೀಯ ಶತ್ರುತ್ವ", ವೀರಶೈವ ಪರಂಪರೆಯ ಹಲವಾರು ಮಜಲುಗಳು ಮತ್ತು ಮಂಟೇಸ್ವಾಮಿ ಕಾವ್ಯದಲ್ಲಿ ಕಂಡುಬರುವ ಪರಿವರ್ತಿತ ರೂಪಗಳು- ಹೀಗೆ ಎಲ್ಲವನ್ನೂ ಎದುರಿಟ್ಟುಕೊಂಡೇ ಬರೆಯಬೇಕಾಗುತ್ತದೆ. ಆಶ್ಚರ್ಯವೆಂದರೆ ದೇಶೀವಾದಿ ನೆಲೆಗಳನ್ನು ಹುಡುಕಲು ಹೊರಡುವ ಅನೇಕರಿಗೆ ಈ ವೈಚಾರಿಕ ವ್ಯವಧಾನವೇ ಇರುವುದಿಲ್ಲ. ದೇಶೀವಾದೀ ಚೌಕಟ್ಟೊಂದಕ್ಕೆ ಹಲವಾರು ಬಗೆಯ ಸಮರ್ಥನೆಗಳನ್ನು ಸಿದ್ಧಮಾಡಿಕೊಂಡು, ಆ ಮೂಸೆಯೊಳಗೆ ಎಲ್ಲವನ್ನೂ ತುರುಕಬಹುದೆನ್ನುವ ಧಾರ್ಷ್ಟ್ಯ ಮಾತ್ರ ಅವರಲ್ಲಿ ಕಂಡುಬರುತ್ತದೆ. ಡಿ ಆರ್ ಅದೃಷ್ಟವೆಂದರೆ, ಅವರ ಚಿಂತನೆಯ ಒಂದು ಮುಖ್ಯ ಹಂತದಲ್ಲಿ ವೈಚಾರಿಕ ವಿಕಲ್ಪಗಳ ಬದಲಾಗಿ ದೇಶೀ ಚಿಂತನೆಯ ಪಠ್ಯಗಳನ್ನು ಸಂಪಾದನೆ ಮಾಡಿ, ಅವುಗಳ ಬಗ್ಗೆ ಅಧ್ಯಯನ ಮಾಡುವ ಅವಕಾಶ ಅವರಿಗೆ ಸಿಕ್ಕಿದ್ದು. ಉದಾಹರಣೆಗೆ ತಮಿಳು ಕಾವ್ಯ ಮಿಮಾಂಸೆ, ಸೂಫೀ ಕಾವ್ಯ, ನಾಗಾರ್ಜುನ- ಹೀಗೆ ಹತ್ತು ಹಲವಾರು ಪಠ್ಯಗಳನ್ನು, ವಿಶಿಷ್ಟವಾದ ವೈಚಾರಿಕ ನುಡಿಗಟ್ಟುಗಳನ್ನು ಅವುಗಳ ಚಾರಿತ್ರಿಕ ಸಂಬಂಧದಲ್ಲಿ ಇಟ್ಟು ನೋಡುವ ಶಿಕ್ಷಣ ಅವರಿಗೆ ದೊರೆಯಿತು. ಡಿ ಆರ್ ಇವುಗಳ ಮೂಲಕ ಕಲಿತುಕೊಂಡಿದ್ದೆಂದರೆ ಯಾವುದೇ ದೇಶೀ ಚಿಂತನೆಯ ಕ್ರಮವನ್ನು ಒಂದು ಪವಿತ್ರ ಅಥವಾ ಅನಾಕ್ರಾಮಿತ spaceನಲ್ಲಿ ಇಡುವುದು ಅಸಾಧ್ಯ ಎಂಬುದನ್ನು. ಅದೇ ರೀತಿ ಪ್ರಧಾನ ಮತ್ತು ದೇಸೀ ಪರಂಪರೆಗಳನ್ನು (ಡಿ ಆರ್ ಅವರ ಮಾದರಿನಲ್ಲಿ "ವಿಶ್ವಾತ್ಮಕ" ಮತ್ತು ಪ್ರಾದೇಶಿಕ ವಾಚಿಕೆಗಳನ್ನು) ಕೇವಲ ಶ್ರೇಣೀಕೃತ ವ್ಯವಸ್ಥೆಯಲ್ಲಿ ಇಡಲಾಗದು. ಅವುಗಳ ಮಧ್ಯ ಇರುವ "ಅಂತರ್-ಪಠ್ಯತ್ವ" ಅಥವಾ ಆತ್ಮೀಯ ಶತ್ರುತ್ವವನ್ನು ಮರೆಯಲಾಗದು. ನಾನು ಇಲ್ಲಿ ದೇಶೀವಾದೀ ಚಿಂತನೆ ಬಳಸಿಕೊಂಡ ರೂಪಕಗಳ ಬಗ್ಗೆ ಯೋಚಿಸುತ್ತಿದ್ದೇನೆ. ಸಾಮಾನ್ಯವಾಗಿ ಈ ಚಿಂತನೆಯಲ್ಲಿ ಪ್ರಧಾನ ಪರಂಪರೆ ಕಲುಷಿತಗೊಂಡ ಅಥವಾ ಆಕ್ರಾಮಕವಾದ ದೊಡ್ಡ ನದಿಯಾಗಿ ಕಂಡು ಬಂದರೆ, ದೇಶೀ ಪರಂಪರೆ ನಿರ್ಮಲವಾದ ತೊರೆಯಾಗಿ ಕಂಡು ಬರುತ್ತದೆ. ಆದ್ದರಿಂದ ಈ ತೊರೆ ನದಿಯನ್ನು ಸೇರಿ ಕಲುಷಿತವಾದ ಕಾಲದ ಮೊದಲು, ಅವಕಾಶದ ಮೊದಲಿನ ಒಂದು Primordial ಅವಸ್ಥೆಯನ್ನು ತಲುಪುವುದೇ ಇಂಥ ಚಿಂತನೆಯ ಉದ್ದೇಶವಾಗಿಬಿಡುತ್ತದೆ. ಅಂದರೆ ಪ್ರಧಾನ ಪರಂಪರೆಯಿಂದ ಅಪವಿತ್ರಗೊಂಡಿರದಿದ್ದ ಒಂದು ಸ್ಥಿತಿ ಇತ್ತು ಎನ್ನುವ ಮರು ಹಂಬಲದ ಧೋರಣೆ ಇಲ್ಲಿರುತ್ತದೆ. ವಿಶೇಷವಾಗಿ ನಿರ್ವಹಸಾಹತೀಕರಣದ ಚಿಂತನೆಯಲ್ಲಿ ವಸಾಹತುಪೂರ್ವದ ಒಂದು ಸಾಂಸ್ಕೃತಿಕ space ಮತ್ತು timeನ ಬಗ್ಗೆ ನಂಬಿಕೆ ಇದೆ. ನನಗೆ ತೋರುವುದೆಂದರೆ ಇಂಥ ಚಿಂತನೆಯ ಕ್ರಮಕ್ಕೆ ಬೆಂಬಲವಾಗಿರುವುದು. ರಾಜಕೀಯವಾಗಿ ಸಕ್ರಮವಾಗಿರುವುದನ್ನೇ ಆಯ್ದು ಸಮರ್ಥಿಸಬೇಕೆನ್ನುವ ಹಂಬಲ. (The Desire to be politically correct) ನಮ್ಮ ಇಂದಿನ ಜಗಳಗಳಲ್ಲಿ ನಮ್ಮ ಶತ್ರುವಿನ ಪಾಳ್ಯದಲ್ಲಿರುವ ಪ್ರಧಾನ ಪರಂಪರೆಯನ್ನು ತಿರಸ್ಕರಿಸುವ ಹಟದಲ್ಲಿ ಅದಕ್ಕೆ ವಿರುದ್ಧ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ನಿರ್ವಾತವೊಂದರಲ್ಲಿ ದೇಶೀ ಪರಂಪರೆಗಳನ್ನು ಕಟ್ಟಿಕೊಳ್ಳುತ್ತೇವೆ. ಡಿ ಆರ್ ಚಿಂತನೆಯ ಸ್ವಂತಿಕೆ ಇರುವುದು, ಇಂಥ "ಕಟ್ಟರ್" ರೂಪಕಗಳಿಂದ ಹೊರಬಂದು ದೇಶೀ ಪರಂಪರೆಗಳು ಪ್ರಧಾನ ಪರಂಪರೆಗಳ ಜೊತೆಗೆ ಶಾಮೀಲಾಗಿರುವುದು,

ಕಡ ಪಡೆದುಕೊಂಡಿರುವುದು, ತಿರುಗಿ ಕೊಟ್ಟಿರುವುದು -ಇದೇ ಮುಂತಾದ ಸಕಲ ವ್ಯಾಪಾರಗಳನ್ನು ಗಮನಿಸುವ ಸಾವಧಾನವನ್ನು ಪಡೆದುಕೊಂಡಿದ್ದರಲ್ಲಿ. ಹೀಗಾಗಿ ಅವರು ವಸಾಹತೋತ್ತರ ಚಿಂತನಗಳ ಲಾಭಗಳನ್ನು ಪಡೆದುಕೊಂಡರೂ ಅವುಗಳ ಆಕ್ರಮಣಶೀಲ ಶಕ್ತಿಯಿಂದ ಪಾರಾದರು. "ಸಮಾಜವಾದಿ, ದೇಶೀವಾದಿ" ಚಿಂತನೆಗಳನ್ನು ಒಪ್ಪಿಕೊಳ್ಳುವುದಾಗಿ ಘೋಷಿಸಿಕೊಂಡಿದ್ದರು ಕೂಡ ಡಿ ಆರ್ ಅವುಗಳ ಹಠಮಾರಿತನವನ್ನು ಬದಿಗಿಟ್ಟು ಬರೆದರು.

ಡಿ ಆರ್ ಅವರ 'ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ' ದೇಶೀವಾದೀ ಚಿಂತನೆಯ ಬಗ್ಗೆ ಮಾಡುವ ಮುಖ್ಯ ಪ್ರಸ್ತಾವನೆಗಳು ಅತ್ಯಂತ seminal ಆಗಿವೆ. ಅವುಗಳ ಬಗ್ಗೆ ದೀರ್ಘವಾದ ಚರ್ಚೆ ನಡೆಯುವುದು ಅವಶ್ಯಕವಾಗಿದೆ. ಅವು ಹೀಗಿವೆ:

"ನಿರ್ದಿಷ್ಟ ಸಾಂಸ್ಕೃತಿಕ ದೇಶ-ಕಾಲದಲ್ಲಿ ಸೃಷ್ಟಿಯಾದ ಕೃತಿ ಸಮೂಹವನ್ನು ಅದರ ಕ್ಷೇತ್ರದಲ್ಲೇ ಹುಟ್ಟಿದ ಗ್ರಹಿಕೆಯ ಕ್ರಮಗಳನ್ನು ಬಳಸಿ ಅರ್ಥೈಸುವ ವಿಧಾನದ ಉಪಯುಕ್ತತೆಯ ಪ್ರಶ್ನೆ. ಒಗಟು ಬಿಡಿಸಿ ಸ್ಪಷ್ಟವಾಗಿ ಹೇಳಬೇಕು ಎಂದರೆ : ಬೌದ್ಧಿಕ ನಿರ್ವಸಾಹತೀಕರಣದ ಸ್ವರೂಪವನ್ನು ತಿಳಿಯುವ ಒಂದು ಪ್ರಕ್ರಿಯೆ ಇದು" (ಪು. ೩೫)

ಇದು ಬಹು ಮುಖ್ಯವಾದ ಪ್ರಸ್ಥಾನವೊಂದನ್ನು ಸೂಚಿಸುತ್ತದೆ. ದೇಶೀವಾದೀ ಚಿಂತನೆಯ ಬಹುದೊಡ್ಡ ತೊಡಕೆಂದರೆ ಇಂದಿನ ಜಾಗತಿಕ ವೈಚಾರಿಕ ಪ್ರಸ್ಥಾನಗಳು ಒಡ್ಡಿರುವ ಸವಾಲುಗಳು. ನಾವು ಮರೆಯಬಾರದ ಅಂಶವೆಂದರೆ ಇಂದು ದೇಶೀವಾದೀ ಚಿಂತನೆಗಳಿಗೆ ಬೆಂಬಲ ದೊರೆಯುತ್ತಿರುವುದು ಪಶ್ಚಿಮದ ಪಾಂಡಿತ್ಯದಿಂದ; ಅಲ್ಲಿಯ ಶಿಕ್ಷಣ ಮತ್ತು ಸಂಶೋಧನೆಯ ಸಂಸ್ಥೆಗಳಿಂದ. ಇಲ್ಲಿಯ ವಿಪರ್ಯಾಸವೆಂದರೆ ಎಲ್ಲ ವೈಚಾರಿಕ ಪರಿಕರಗಳು ವೃದ್ಧಿಯಾಗಿ ಅಗಾಧವಾದ ಮಾನ್ಯತೆ ಮತ್ತು ಪ್ರಾಬಲ್ಯವನ್ನು ಪಡೆಯುತ್ತಿರುವುದು ಪಶ್ಚಿಮದ ಸಂಸ್ಥೆಗಳಲ್ಲಿ, ಸಾಮಗ್ರಿಯನ್ನು ಒದಗಿಸಿ ಕೊಡುತ್ತಿರುವವು ಮೂರನೇ ಜಗತ್ತಿನ ದೇಶೀ ಮೂಲಗಳು; ಅಂದರೆ ಯೂರೋಪಿನ ಜ್ಞಾನಮಾರ್ಗಗಳ ಬಕಾಸುರ ಹಸಿವೆಗೆ ಅನ್ನವನ್ನು ಇವು ಒದಗಿಸುತ್ತಿವೆ. ಇದು ಅಂತರ್‌ರಾಷ್ಟ್ರೀಯ ವೈಚಾರಿಕ ಮಾರುಕಟ್ಟೆಯಲ್ಲಿ ಹುಟ್ಟಿಕೊಂಡಿರುವ ನವ ಉದಾರವಾದ ಅಲ್ಲದೆ, ಇದರಿಂದಾಗುವ ವೈಚಾರಿಕ ವಿಕೃತಿಗಳ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಡಿ ಆರ್ ಹೇಳುವ ಹಾಗೆ ಅವರು ಸೂಚಿಸಿರುವ ಪ್ರಸ್ಥಾನ ಕೂಡ ಸುಲಭವಾದದ್ದಲ್ಲ. ಏಕೆಂದರೆ "ಕಾಲ, ದೇಶದಲ್ಲಿ ಹುಟ್ಟಿದ ಗ್ರಹಿಕೆಯ ಕ್ರಮಗಳನ್ನು" ಕೂಡ ಇಂದು ಬರೆಯುತ್ತಿರುವವರು re-construct ಮಾಡಿಯೇ ಪಡೆದುಕೊಳ್ಳಬೇಕಲ್ಲವೆ? ಈ ಪುನರ್ ನಿರ್ಮಾಣದ ಕೆಲಸದಲ್ಲಿ ಹೆಜ್ಜೆ ಇಟ್ಟಲ್ಲೆಲ್ಲಾ ಹುದುಲೇ ಇರುತ್ತದೆ. ಡಿ ಆರ್ ಅವರ ಇಡೀ ಪುಸ್ತಕವೇ ಈ ಕೆಲಸದ ಸಂಕೀರ್ಣತೆಯ ಮೂರ್ತ ರೂಪವಾಗಿದೆ.

■

ಸಂವಾದ

ನಾನೇಕೆ ಓದುತ್ತೇನೆ ?

(ನೀವೇಕೆ ಬರೆಯುತ್ತೀರಿ ಎಂಬ ಪ್ರಶ್ನೆಯನ್ನು ಕನ್ನಡದ ಲೇಖಕರಿಗೆ ಕೇಳುವುದು, ಅದಕ್ಕೆ ಅವರು ಉತ್ತರಕೊಡುವುದು, ಈ ಸಂಪ್ರದಾಯ ಕನ್ನಡದಲ್ಲಿ ಮೊದಲಿಂದಲೂ ಇದೆ. ಕೆಲವೊಮ್ಮೆ ಸ್ವತ: ಲೇಖಕರೇ ತಾವೇಕೆ ಬರೆಯುತ್ತೇವೆ ಎಂಬ ಪ್ರಶ್ನೆಯನ್ನು ಕೇಳಿಕೊಂಡು, ಬರೆಹ ಮಾಡುವಾಗ ತಮ್ಮ ಅನುಭವವನ್ನು ಕುರಿತು ವಿವರಿಸುವುದೂ ಇದೆ. ಈ ಬಗೆಯ ಬರೆಹಗಳು ೨೦ನೇ ಶತಮಾನದ ತುಂಬ ಪ್ರಕಟವಾಗಿವೆ. ಈ ಬರೆಹಗಳು ಸಾಹಿತ್ಯಸೃಷ್ಟಿ ಎಂಬ ಖಚಿತವಾಗಿ ವಿವರಿಸಲು ಸಾಧ್ಯವಾಗದ ಕ್ರಿಯೆಯನ್ನು ಕುರಿತು ಅನೇಕ ಕುತೂಹಲಕರ ಸಂಗತಿಗಳನ್ನು ಹೊರಗೆಡಹಿವೆ. ಆತ್ಮಕಥನದ ದಾಟಿ ಇರುವ ಇವಕ್ಕೆ ಕನ್ನಡದಲ್ಲಿ ವ್ಯಾಪಕವಾಗಿ ಓದುಗರೂ ಇದ್ದಾರೆ. 'ಕನ್ನಡ ಅಧ್ಯಯನ' ದ ಲನೇ ಸಂಪುಟದ ೨ಮತ್ತು ೩ ಸಂಚಿಕೆಯಲ್ಲಿ ಇಂತಹ ಬರೆಹಗಳು ಪ್ರಕಟವಾಗಿವೆ. ಇದರ ಮುಂದುವರೆದ ಭಾಗವಾಗಿ 'ನಾನೇಕೆ ಓದುತ್ತೇನೆ?' ಎಂಬ ಈ ಲೇಖನಗಳನ್ನು ಗಮನಿಸಬಹುದು.

ಸಾಹಿತ್ಯಸೃಷ್ಟಿಯ ಪ್ರಕ್ರಿಯೆಯಲ್ಲಿ ಲೇಖಕರಿಗೆ ಸಮಾನ ಸ್ವರೂಪದ ಅನುಭವಗಳು ಬೇಕಾದಷ್ಟು ಇರುತ್ತವೆ. ಆದರೂ ಈ ಬಗೆಯ ಬರೆಹಗಳು ಏಕರೂಪವಾಗಿರುವುದಿಲ್ಲ. ಇದಕ್ಕೆ ಕಾರಣ, ಸಾಹಿತ್ಯ ನಿರ್ಮಿತಿಯು ನಮ್ಮ ಸಮಾಜದ ವಿಭಿನ್ನಸ್ತರಗಳಿಂದ ಬರುವ ಲೇಖಕರಿಗೆ ಬೇರೆಬೇರೆ ಬಗೆಯ ಅನುಭವವನ್ನು ಉಂಟುಮಾಡಿರುವುದು. ದಲಿತ ಅಥವಾ ಮಹಿಳಾ ಲೇಖಕರೊಬ್ಬರು 'ನಾನೇಕೆ ಬರೆಯುತ್ತೇನೆ' ಎಂದು ಬರೆದುಕೊಳ್ಳುವುದು, ಕೇವಲ ಸಾಹಿತ್ಯಕವಾದ ಅನುಭವಗಳನ್ನು ಒಳಗೊಂಡಿರುವುದಿಲ್ಲ. ಹೀಗಾಗಿ ಬರೆಹ ಮಾಡುವಾಗ ಉಂಟಾಗುವ ವಿಶಿಷ್ಟವೂ ಆಪ್ತವೂ ಆದ ಅನುಭವಗಳನ್ನು ಹಂಚಿಕೊಳ್ಳುವ ಇವು, ಕೇವಲ ಕುತೂಹಲಕರ ಓದಿಗೆ ಒಳಗಾಗುವ ಬರೆಹ ಮಾತ್ರವಾಗಿಲ್ಲ. ಬರೆಹ ಮಾಡುವ ಹಿಂದಿನ ಪ್ರೇರಣೆಗಳ ಬಗೆಗೆ ಕೂಡ ಹೊಸಹೊಸ ಸಂಗತಿಗಳನ್ನು ಹೊರಗೆಡಹುತ್ತ ಕನ್ನಡ ಸಾಹಿತ್ಯಚಿಂತನೆಯ ಭಾಗವಾಗಿವೆ.

'ನಾನೇಕೆ ಬರೆಯುತ್ತೇನೆ' ಎಂದು ಲೇಖಕರಿಗೆ ಕೇಳುವಂತೆ 'ನಾನೇಕೆ ಓದುತ್ತೇನೆ' ಎಂದು ಓದುಗರನ್ನು ಕೇಳುವುದು ನಮ್ಮಲ್ಲಿ ತುಂಬ ಕಡಿಮೆ. ಹಿಂದೆ ಅಂತಹ ಕೆಲವು ಪ್ರಯತ್ನಗಳು ನಡೆದಿವೆ. ಆದರೂ ಒಂದು ಶತಮಾನದ ಅವಧಿಯಲ್ಲಿ ಅವು ಬೆರಳೆಣಿಕೆಯಷ್ಟು ಮಾತ್ರ ನಡೆದಿವೆ. ಇದು ಸಾಹಿತ್ಯ ಲೋಕದ ಲೇಖಕ ಕೇಂದ್ರಿತ ಪ್ರವೃತ್ತಿಯನ್ನು ಕೂಡ ಸೂಚಿಸುತ್ತಿರಬಹುದು. ಅದೆಂದರೆ, ಬರೆಹಗಾರರು ಸಾಹಿತ್ಯದ ಸೃಷ್ಟಿಕರ್ತರು. ಓದುಗರು ಅನುಭೋಗಿಗಳು ಅಥವಾ ಗಿರಾಕಿಗಳು. ಲೇಖಕರು ಬರೆದರೆ ಓದುವುದೊಂದೇ ಅವರಿಗುಳಿದ ಕೆಲಸ. ಸಾಹಿತ್ಯ ಅರ್ಥಮಾಡಿಕೊಳ್ಳುವುದಕ್ಕೆ, ಅದರಿಂದ ಮನರಂಜನೆಯನ್ನೊ ಜ್ಞಾನವನ್ನೊ ಪಡೆಯುವುದಕ್ಕೆ ಬೇಕಾದ ಸಿದ್ಧತೆಯನ್ನು ಓದುಗರು ಪಡೆದು

ಕೊಳ್ಳಬೇಕು; ಓದುಗರ ಪ್ರತಿಕ್ರಿಯೆಗಳ ಮೂಲಕ ಲೇಖಕ ತನ್ನ ಬರವಣಿಗೆಯ ಸ್ವರೂಪವನ್ನು ಬದಲಾಯಿಸಿಕೊಳ್ಳಬೇಕಾಗಿಲ್ಲ ಎಂಬಂತಹ ಏಕಪಕ್ಷೀಯ ನಿಲುವುಗಳು ಸಾಹಿತ್ಯಲೋಕದಲ್ಲಿ ಇವೆ.

ಸಾಹಿತ್ಯ ಸೃಷ್ಟಿಯು ಮೊದಲನೆಯ ಹಾಗೂ ಮುಖ್ಯವಾದ ಕ್ರಿಯೆಯೇನೋ ನಿಜ. ಆದರೆ ಈ ಕ್ರಿಯೆಯು ಓದುಗರಿಲ್ಲದೆ ಪೂರ್ಣಗೊಳ್ಳದು. ಸಹೃದಯ ಓದುಗರ ಲೋಕ ಸಾಹಿತ್ಯಲೋಕದ ಅರ್ಧಜೀವ. ಇದಕ್ಕೆ ಪ್ರತಿಯಾಗಿ ಕಾವ್ಯ ಮೀಮಾಂಸೆಯಲ್ಲಿ ಓದುಗರನ್ನು 'ಸಹೃದಯ' 'ರಸಿಕ' ಎಂದು ಕರೆದು ಮನ್ನಿಸುವ, 'ಭಾವಯತ್ರೀ ಪ್ರತಿಭೆ' ಎಂದು ಕೊಂಡಾಡುವ ಚಿಂತನೆಗಳು ಇವೆ. 'ಮಾಲೆಗಾರನ ಪೊಸಬಾಸಿಂಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೆ?' ಎಂದು ಸಹೃದಯನ ಅನಿವಾರ್ಯತೆಯನ್ನು ಪರಿಭಾವಿಸಲಾಗಿದೆ. ಆದರೂ ಸಾಹಿತ್ಯ ಲೋಕದಲ್ಲಿ ಓದುಗರಿಗೆ ನೀವೇಕೆ ಓದುತ್ತೀರಿ, ಯಾವುದನ್ನು ಓದುತ್ತೀರಿ ಅಥವಾ ಯಾಕೆ ಓದುವುದಿಲ್ಲ ಎಂದು ಕೇಳುವುದು ತುಂಬ ಕಡಿಮೆ. ಹಾಗೆ ಕೇಳುವಾಗಲೂ ಲೇಖಕರ ನೆಲೆಯಿಂದಲೇ ಕೇಳುತ್ತ, ಓದುಗರನ್ನು ತಮ್ಮ ಸಾಹಿತ್ಯ ಓದುವ ಗಿರಾಕಿಗಳನ್ನಾಗಿ ನೋಡುತ್ತ ಮಾರುಕಟ್ಟೆ ಸರ್ವೆದೃಷ್ಟಿಯೇ ಹೆಚ್ಚು. ಓದುಗರ ಅನುಭವ ಪ್ರತಿಕ್ರಿಯೆಗಳ ಮೂಲಕ ಸಾಹಿತ್ಯದ ಸ್ವರೂಪವನ್ನು ಒಟ್ಟು ಬಾಳಿನ ಪರಿಸರವನ್ನು ವಿಶ್ಲೇಷಿಸಲು ಹೊರಡುವುದು ಕಡಿಮೆ.

ಓದುಗರು ಅಮೂರ್ತ ರೂಪದ ಧಣಿಗಳು. ಅವರು ಓದದೆಯೂ ಇರಬಲ್ಲರು. ಅದರಲ್ಲೂ ಈಗ ಬರೆಹವನ್ನು ಓದದೆ ಇರಲು ಬೇಕಾದಷ್ಟು ಕಾರಣಗಳನ್ನೂ ಪರ್ಯಾಯಗಳನ್ನೂ ಆಧುನಿಕ ಸಮಾಜ ನಿರ್ಮಿಸಿಕೊಡುತ್ತಿದೆ. ಓದು ಅನಿವಾರ್ಯವಲ್ಲ ಎಂಬಂತಹ ವಾತಾವರಣ ನಿರ್ಮಾಣ ವಾಗುತ್ತಿದೆ. ಪುಸ್ತಕ ಸಂಸ್ಕೃತಿಯು ತನ್ನ ಅಸ್ತಿತ್ವದ ಬಗ್ಗೆಯೆ ಅಳುಕು ವ್ಯಕ್ತಮಾಡುವಂತಹ ಪರಿಸ್ಥಿತಿ ಇದೆ. ಇಂಥಹ ಸಂದರ್ಭದಲ್ಲಿ ಸಾಹಿತ್ಯ ಲೋಕದ ಧಣಿಗಳಾದ ಓದುಗರನ್ನು 'ನೀವೇಕೆ ಓದುತ್ತೀರಿ' ಅಥವಾ 'ನೀವೇಕೆ ಓದುವುದಿಲ್ಲ' ಎಂಬ ಪ್ರಶ್ನೆ ಕೇಳಿ, ಉತ್ತರ ಕೇಳಿಸಿಕೊಳ್ಳುವುದಕ್ಕೆ ಬಹಳ ಮಹತ್ವವಿದೆ. ಈಗಲೂ ನಮ್ಮ ಸಮಾಜದಲ್ಲಿ ಓದೆಂಬುದು ಕೇವಲ ಸಾಹಿತ್ಯಲೋಕಕ್ಕೆ ಸಂಬಂಧಿಸಿದ ವಿದ್ಯಮಾನವಲ್ಲ. ಅಕ್ಷರಕ್ಕೆ ಹೊಸದಾಗಿ ಕಣ್ಣನ್ನು ಬಿಡುತ್ತಿರುವ ತಲೆಮಾರುಗಳು ಇನ್ನೂ ಗೂಡೊಳಗಿನ ಇರುವೆಗಳಂತೆ ಹುಟ್ಟು ಹೊರಬರುತ್ತಲೇ ಇವೆ. ಅವಕ್ಕೆ ಓದುವ ಅಕ್ಷರದ ಶತಮಾನದ ಹಸಿವೆ. ಜತೆಗೆ ನಮ್ಮ ಸಮಾಜದ ವಿಭಿನ್ನ ಸ್ತರದ ವಿಭಿನ್ನ ವೃತ್ತಿಗಳಲ್ಲಿ ತೊಡಗಿರುವ ಲಕ್ಷಾಂತರ ಓದುಗರು ಸಾಹಿತ್ಯದ ಬಗ್ಗೆ ಬಗೆಬಗೆಯ ಕಲ್ಪನೆ ಇಟ್ಟುಕೊಂಡಿದ್ದಾರೆ. ಅವರ ಪ್ರಿಯವಾದ ಲೇಖಕರು ಅಥವಾ ಪುಸ್ತಕಗಳು, ಅವರಿಗೆ ಇಷ್ಟವಾಗದ ಲೇಖಕರು ಹಾಗೂ ಪುಸ್ತಕಗಳು ಯಾರೆಂಬ/ ಯಾವುವೆಂಬ ಬಗ್ಗೆ ತಿಳಿಯುವುದು ಉಪಯುಕ್ತವಾದ ಚಟುವಟಿಕೆಯಾಗಿದೆ. ಒಬ್ಬ ಗೃಹಿಣಿಯ ಓದು, ಒಬ್ಬ ನಿರುದ್ಯೋಗಿಯ ಓದು, ಒಬ್ಬ ಕಾಡಮೂಲೆಯಲ್ಲಿ ಬದುಕುವ ರೈತನ ಓದು, ನಗರದ ಗಡಿಬಿಡಿಯಲ್ಲಿ ಬದುಕುವ ನೌಕರನೊಬ್ಬನ ಓದು-ಎಷ್ಟೊಂದು ಬಗೆಯ ಓದುಗಳಿವೆ. ಇವುಗಳ ಮಾಹಿತಿಯು ಲೇಖಕ ಕೇಂದ್ರಿತ ಸಾಹಿತ್ಯ ಕಲ್ಪನೆಗಳ ಅರೆಸತ್ಯದಿಂದ ಮುಂದೆ ಚಲಿಸಲು ಒತ್ತಾಯ ಹಾಕುತ್ತದೆ. 'ನಾನೇಕೆ ಬರೆಯುತ್ತೇನೆ' ಎಂಬುದು ಒಂದು ಅರ್ಧ ಉತ್ತರವಾದರೆ, ನಾವೇಕೆ ಓದುತ್ತೇವೆ, ಯಾವುದನ್ನು ಓದುತ್ತೇವೆ ಎಂಬುದು ಇನ್ನರ್ಧ ಉತ್ತರವಾಗಿದೆ. ಈ ಉತ್ತರಗಳು ಅಕ್ಷರಸ್ಥ ಮಧ್ಯಮವರ್ಗಕ್ಕೆ ಸೇರಿದ ಜನರು ಸಾಹಿತ್ಯದ ಬಗ್ಗೆ ಹೊಂದಿರುವ ಕೆಲವು ಭ್ರಮೆಗಳನ್ನು ಪ್ರಶ್ನಿಸಬಲ್ಲವು. ಹೀಗಾಗಿ ಈ ಉತ್ತರಗಳು ಮಾರುಕಟ್ಟೆಯನ್ನು ಮತ್ತಷ್ಟು ವ್ಯಾಪಕವಾಗಿ ಆವರಿಸಲು ಮಾಡುವ ಸಮೀಕ್ಷೆಯಲ್ಲ. ಬದಲಿಗೆ ಇವು ಸತ್ಯದ ಹುಡುಕಾಟದಲ್ಲಿ ಹಲವು ದಿಕ್ಕುಗಳಿಂದ ನಡೆದು ಹೋಗಲು ಮಾಡುವ

ನಮ್ಮ ಯತ್ನ. ಸಾಹಿತ್ಯದ ಬಗೆಗಿನ ಸತ್ಯದ ಇನ್ನೊಂದು ಮಗ್ಗುಲನ್ನು ತಿಳಿಯಲು ಮಾಡುವ ಡೆಮಾಕ್ರಟಿಕ್ ಪ್ರಕ್ರಿಯೆ.

ಈ ನಂಬಿಕೆಯಿಂದ ಎರಡು ಪ್ರಶ್ನೆಗಳನ್ನು ಕರ್ನಾಟಕದ ಬೇರೆಬೇರೆ ಭಾಗದ ಬೇರೆ ಬೇರೆ ವೃತ್ತಿಯ ಹಾಗೂ ಸಾಮಾಜಿಕ ಸ್ತರದ ಜನರನ್ನು ಹುಡುಕಿ ಕೇಳಲಾಯಿತು. ಆ ಪ್ರಶ್ನೆಗಳೆಂದರೆ -

೧. ನೀವು ಯಾವ ಲೇಖಕರನ್ನು ಅಥವಾ ಪುಸ್ತಕಗಳನ್ನು ಓದಿಗೆ ಆರಿಸಿಕೊಳ್ಳುತ್ತೀರಿ, ಈ ಆಯ್ಕೆಗೆ ಕಾರಣವೇನು?

೨. ನೀವು ಯಾಕೆ ಓದುತ್ತೀರಿ, ಇದರಿಂದ ನೀವು ಪಡೆಯುವ ಅನುಭವ ಎಂತಹುದು?

ಸುಮಾರು ಮೂವತ್ತು ಜನರಿಗೆ ಕೇಳಲಾಗಿ, ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಉತ್ತರಿಸಿದರು. ಲೇಖಕರನ್ನು ಪತ್ತೆಮಾಡಿ ಲೇಖನ ಬರೆಯಿಸುವುದು ಸುಲಭ. ಓದುಗರನ್ನು ಪತ್ತೆಮಾಡಿ ಬರೆಯಿಸುವುದು ಸುಲಭದ ಕೆಲಸವಲ್ಲ. ಬಹಳ ಜನ ಗಂಭೀರ ಓದುಗರಾಗಿರುತ್ತಾರೆ. ಆದರೆ ಅವರು ಅದೃಶ್ಯರಾಗಿರುತ್ತಾರೆ. ಒಂದೊಮ್ಮೆ ಅವರು ಸಿಕ್ಕರೂ ಇಂತಹ ಪ್ರಶ್ನೆಗೆ ಉತ್ತರಿಸುವುದಕ್ಕೆ ಬೇಕಾದ ಬರೆಹದ ಅಭ್ಯಾಸ ವಿರುವುದಿಲ್ಲ. ಹೀಗಾಗಿ ಅನೇಕರಿಗೆ ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟವಾಗಿದೆ. ಮತ್ತೆ ಕೆಲವರಿಗೆ, ಏನನ್ನು ಓದುತ್ತೇವೆ ಅನ್ನುವುದು ವೈಯಕ್ತಿಕ ವಿಚಾರ ಅನಿಸುವುದರಿಂದ, ಈ ಬಗೆಯ ಪ್ರಶ್ನೆಗೆ ಉತ್ತರಿಸುವುದು ಅನಗತ್ಯವೆನಿಸಿದೆ. ಇಷ್ಟೆಲ್ಲ ಇಕ್ಕಟ್ಟುಗಳ ಒಳಗೂ ಹಲವಾರು ಓದುಗರು ವಿಶ್ವಾಸ ವಿಟ್ಟು ಉತ್ತರ ಬರೆದಿದ್ದಾರೆ. ಈ ಉತ್ತರಗಳು ನೇರವಾಗಿವೆ, ಪ್ರಾಮಾಣಿಕವಾಗಿವೆ. ಮುಗ್ಧತೆ ಜೀವಂತಿಕೆಯಿಂದ ಕೂಡಿವೆ. ಸಾಹಿತ್ಯ ಕುರಿತು ನಮ್ಮ ವಿಮರ್ಶಕರು ಲೇಖಕರು ನಿರ್ಮಿಸಿಕೊಟ್ಟಿರುವ ಕೆಲವಾದರೂ ಗ್ರಹಿಕೆಗಳನ್ನು ಮುರಿಯುವ, ವಿಸ್ತರಿಸುವ, ಬೆಳೆಸುವ ಮಾಹಿತಿ ಹಾಗೂ ಅನುಭವಗಳನ್ನು ಒಳಗೊಂಡಿವೆ-ಸಂ)

•ಗಂಗಾಧರ ಬೀಚನಹಳ್ಳಿ (ಸೂಪರ್‌ವೈಜರ್)

'ನಾನೇಕೆ ಓದುತ್ತೇನೆ, ಓದಬೇಕು' ಎಂದು ಯೋಚಿಸುವುದಕ್ಕೂ ಮೊದಲೇ ನಾನು ಓದಿನಲ್ಲಿ ತೊಡಗಿಕೊಂಡಿದ್ದೆ. "ಅವನು ಬಸವ, ಇವಳು ಕಮಲ" ಎಂಬ ಪಠ್ಯಕ್ರಮದ ವಿದ್ಯಾರ್ಥಿ ಬಳಗಕ್ಕೆ ಸೇರಿದವ ನಾನು. ನನ್ನ ತಾಯ ತವರಿನಲ್ಲಿ ಓದದೆ ದನ ಕುರಿ ಕಾಯಲು ಹೊರಟಿದ್ದ ನನ್ನ ಸೋದರ ಮಾವ, ದೊಡ್ಡಮ್ಮನ ಮಕ್ಕಳು ಮೂಲೆಗೆಸೆದಿದ್ದ ಹಳೇ ಪಠ್ಯಕ್ರಮದ 'ಬಕಾಸುರನ ವಧೆ', 'ಭೀಮ ಕೀಚಕನನ್ನು ಕೊಂದ ಕಥೆ', 'ಕಾಗೆ ಕೃಷ್ಣಸರ್ಪವನ್ನು ಕೊಂದ ಕಥೆ'-ಮುಂತಾದ ವುಗಳಲ್ಲಿ ಬರುವ ಚಿತ್ರಗಳನ್ನು ನೋಡಿದಾಗ ಅವುಗಳ ಆಂತರ್ಯವನ್ನು ತಿಳಿದುಕೊಳ್ಳುವ ತವಕ. ನನ್ನ ಓರಗೆಯವರಿನ್ನೂ ಕಾಗುಣಿತ ಕಲಿಯುತ್ತಿದ್ದಾಗಲೇ ನನ್ನನ್ನು ಅವನ್ನೆಲ್ಲ ಓದಿಸಿ 'ಚಂದಮಾಮ'ದ ಕಥೆಗಳತ್ತ ತಿರುಗಿಸಿತ್ತು. ಗಳಗನಾಥ, ಬಿ.ವೆಂಕಟಾಚಾರ್ಯರಂಥವರ ಅನುವಾದಿತ ಕಾದಂಬರಿಗಳ ಜೊತೆಗೆ ಐದನೇ ತರಗತಿಗೆ ಬರುವಷ್ಟರಲ್ಲೇ, ಎಡ್ಗರ್ ಅಲೆನ್ ಪೋನ ಅನುವಾದಿತ 'ಸಾವಿಗೆ ಮುಂಚೆ ಸಮಾಧಿ'ಯಂತಹ ಕಥಾಸಂಕಲನವನ್ನು ಓದಿ ಅರ್ಥೈಸಿ ಕೊಳ್ಳುವ ಮಟ್ಟಿಗೆ ನನ್ನ ಓದಿನ ತೀವ್ರತೆ ಮತ್ತು ಗುಣಮಟ್ಟ ಬೆಳೆದಿತ್ತು. ಇದನ್ನು ಯೋಚಿಸುವಾಗ ಇಂದು ನನಗೆ ಆಶ್ಚರ್ಯವಾಗುತ್ತದೆ.

ಇಂದಿನ ನನ್ನ ಓದು ತೇಜಸ್ವಿ, ಲಂಕೇಶ್, ಮಹಾದೇವ, ವೊಗಳ್ಳಿ, ಕಂಬಾರ, ಟಾಲ್‌ಸ್ಟಾಯ್, ದಾಸ್ತೋವಸ್ಕಿ, ಗಾಂಧಿ, ರಸೆಲ್ ಲೋಹಿಯಾಗಳಂತಹ ಕೆಲವರಿಗೆ ಸೀಮಿತ ಗೊಂಡಿದೆ. ಆದರೂ ಇದಿಷ್ಟೇ 'ನನ್ನ ಆಯ್ಕೆ'ಯೆಂದು ಹೇಳಹೊರಟರೆ ಅದೊಂದು ನಿಂತ ನೀರಿನಂತೆ ಸಾವಿನತ್ತ ಮುಖ ಮಾಡಿದೆಯೆಂದು ಒಪ್ಪಿಕೊಂಡಂತಾಗುತ್ತದೆ. ಹಾಗಲ್ಲದೆ ಈ ಆಯ್ಕೆ ಒಂದು ಕ್ರಮಬದ್ಧ ಚಲನಶೀಲ ಪ್ರವೃತ್ತಿಯ ಈ ಹೊತ್ತಿನ ಒಂದು ಹಂತವೆಂದು ಮಾತ್ರ ಹೇಳಬಲ್ಲೆ. ಈ ಆಯ್ಕೆಯ ಕ್ರಮ ಒಬ್ಬ ವ್ಯಕ್ತಿಯ ಹುಟ್ಟು, ಬೆಳವಣಿಗೆ, ಪರಿಸರ, ಒಡನಾಟ, ಉದ್ಯೋಗ, ಕಾಲ, ವಯೋಮಾನ ದೊರಕುವ ಪುಸ್ತಕಗಳು ಇವೆಲ್ಲ ತಮ್ಮ ತಮ್ಮಲ್ಲಿ ಒಂದರೊಡನೊಂದು ತಳುಕು ಹಾಕಿಕೊಂಡು ವರ್ತಿಸಿ, ರೂಪಿಸಿದ ವ್ಯಕ್ತಿಯ ಚಿಂತನಶೀಲ ಪ್ರವೃತ್ತಿಯ ಗುಣ ಮಟ್ಟವನ್ನು ಅವಲಂಬಿಸಿರುತ್ತದೆಂದು ನನ್ನ ಅಭಿಪ್ರಾಯ.

ನನ್ನ ಮಟ್ಟಿಗೆ ಹೇಳುವದಾದರೆ, ಆವತ್ತಿಗೆ ೫೦-೬೦ ಮನೆಗಳ ಕೇವಲ ಐದಾರು ಅಕ್ಷರಸ್ಥರಿದ್ದ ಬಯಲು ಸೀಮೆಯ ಗ್ರಾಮವೊಂದರ ಅನಕ್ಷರಸ್ಥ ತಾಯಿ-ತಂದೆಗಳ ಮಗನಾದ ನಾನು, ಪ್ರೌಢ ಶಾಲೆಯವರೆಗೆ ಕಲಿತದ್ದು ಲೈಬ್ರರಿಯೇ ಇಲ್ಲದ ಊರಿನಲ್ಲಿ. ಅಷ್ಟರೊಳಗಾಗಿ ಅನಕೃ, ತರಾಸು, ಎಂ ಕೆ ಇಂದಿರಾ, ತ್ರಿವೇಣಿ, ಕಟ್ಟೀಮನಿ, ಕೆ.ವಿ. ಅಯ್ಯರ್, ಕಾರಂತ, ದೇವುಡು, ಮ.ನ.ಮೂರ್ತಿ, ಭೈರಪ್ಪ-ಹೀಗೆ ಎನ್. ನರಸಿಂಹಯ್ಯನಿಂದ ಹಿಡಿದು ಸಿಕ್ಕಿದ ನೂರಾರು ಪುಸ್ತಗಳನ್ನು ಓದಿ ಮುಗಿಸಿದ್ದೆ. ಅಂಥ ಊರಿನಲ್ಲಿ ಇವೆಲ್ಲ ಪುಸ್ತಕಗಳನ್ನು ಹೇಗೆ ಪತ್ತೆ ಹಚ್ಚಿ, ಪೀಕಿ ಗಿಟ್ಟಿಸಿಕೊಂಡು ಓದುತ್ತಿದ್ದೆ ಎಂದರೆ, ಇವತ್ತಿಗೂ ನನಗೆ ಆಶ್ಚರ್ಯ

ವಾಗುತ್ತದೆ. ನಂತರ ಪಿಯುಸಿ ರಾಜ್ಯದ ರಾಜಧಾನಿಯಲ್ಲಿ. ಕೇಂದ್ರ ಗ್ರಂಥಾಲಯವಿರುವ ಕಬ್ಬನ್ ಪಾರ್ಕಿನ ಪಕ್ಕದ G A S ಕಾಲೇಜು. ಅಲ್ಲಿನ ಇಂಗ್ಲೀಷ್ ಮಾಧ್ಯಮದ ಬೋರ್‌ಗೆ ಚಕ್ಕರ್ ಹೊಡೆದು, ಬೆಳಿಗ್ಗೆ ಗ್ರಂಥಾಲಯವನ್ನು ಹೊಕ್ಕೆನೆಂದರೆ ಹೊರಬರುತ್ತಿದ್ದುದೇ ೩-೪ ಕಾದಂಬರಿಗಳನ್ನು ಓದಿ ಮುಗಿಸಿ. ಓದಿನ ಪ್ರಮಾಣ ಹೆಚ್ಚಾಯಿತೇ ಹೊರತು ಗುಣಮಟ್ಟವಲ್ಲ. ಮುಂದಿನ ಓದು ನಾಡಿನ ಸಾಂಸ್ಕೃತಿಕ ರಾಜಧಾನಿ, ಮೈಸೂರಿನ ಯುವ ರಾಜಾ ಕಾಲೇಜು. ಅದೇ ಇಂಗ್ಲೀಷ್ ಮಾಧ್ಯಮ. ಪಡೆದದ್ದು ವಿಜ್ಞಾನದಲ್ಲಿ ಪದವಿ. ಪದವಿ ಗಳಿಸಲೇ ಬೇಕಾದ ಜವಾಬ್ದಾರಿಯಿದ್ದರೂ, ಅಲ್ಲಿನವರೆಗೂ ಸಾಹಿತ್ಯದ ಓದು ದೊರಕಿಸಿ ಕೊಟ್ಟಿದ್ದು ಓದಿದ್ದನ್ನು ಜೀರ್ಣಿಸಿಕೊಳ್ಳುವ, ಕಲ್ಪಿಸಿಕೊಳ್ಳುವ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ. ಸಾಹಿತ್ಯದ ಓದಿನ ಗೀಳು ಕಾಲೇಜಿನಲ್ಲಿಯೂ ಮುಂದುವರೆದಿತ್ತು. ಕಾಲೇಜಿನ ದಿನಚರಿಯ ನಡುವೆಯೂ 'ಮಲೆಗಳಲ್ಲಿ ಮದುಮಗಳು' 'ಕಾನೂರು ಹೆಗ್ಗಡಿತಿ' 'ಗ್ರಾಮಾಯಣ'ದಂತಹ ಬೃಹತ್ ಕಾದಂಬರಿಗಳು, ಎರಡು ಮೂರು ದಿನಗಳಲ್ಲಿ ಮುಗಿದು ಹೋಗುತ್ತಿದ್ದವು. ಇದೇ ಸಂದರ್ಭದಲ್ಲಿ ತೇಜಸ್ವಿ, ಅನಂತಮೂರ್ತಿ, ಲಂಕೇಶ್, ಆಲನಹಳ್ಳಿ, ದೇವನೂರರಂಥವರ ಜೊತೆಗೆ ಎಮಿಲಿ ಜೋಲಾ, ಡಿಕನ್ಸ್, ಸ್ಟೀವನ್‌ಸನ್, ಅರ್ಥರ್ ಕೌನನ್ ಡಾಯ್ಲ್ (ಷೆರ್ಲಾಕ್ ಹೋಮ್ಸ್ ಅಷ್ಟೇ ಅಲ್ಲ) ಹಾರ್ಡಿ, ಷೇಕ್ಸ್‌ಪಿಯರ್, ಸ್ಕಾಟ್, ಟಾಲ್‌ಸ್ಟಾಯ್, ಹೆಮಿಂಗ್ವೇ, ಗ್ರೀಕ್ ರುದ್ರನಾಟಗಳು ಇವೆಲ್ಲ ನನ್ನ ಓದಿನಲ್ಲಿ ನುಸುಳಿದವು. ನನ್ನೆದುರು ನಾವಿರುವ ಜಗತ್ತಿನ ಬಗ್ಗೆ, ನಾವು ಬದುಕುತ್ತಿರುವ ಬದುಕಿನ ಬಗ್ಗೆ ಇವೆಲ್ಲಕ್ಕೂ ಹೊರತಾಗಿ ಬದುಕಿಗಿರುವ ಹೊಸ ಸಾಧ್ಯತೆಗಳ ಬಗ್ಗೆ ಬೇರೆಯದೇ ಲೋಕ ತೆರೆದುಕೊಳ್ಳುತ್ತಿತ್ತು. ನನ್ನ ಒಟ್ಟಾರೆ ಓದಿನಲ್ಲಿ ಗಾತ್ರದ ದೃಷ್ಟಿಯಿಂದ ಪಿಯುಸಿಯವರೆಗೆ ಶೇ. ಎಂಬತ್ತು ಭಾಗವಾದರೆ, ನಂತರ ಓದಿದ್ದು ಗುಣಮಟ್ಟದ ದೃಷ್ಟಿಯಿಂದ ಶೇ. ಎಂಬತ್ತು.

ಈ ಆಯ್ಕೆಯ ಪ್ರಕೃತಿ ಒಂದು ಚಲನಶೀಲ ಪ್ರವೃತ್ತಿಯೆಂದು ಏಕೆ ಹೇಳಿದೆನೆಂದರೆ, ಇವತ್ತಿಗೂ ನಾನು ಎಲಿಯಟ್, ಕಾಮು, ಕಾಫ್ಕಾ, ಸಾರ್ತರ್, ಮಾರ್ಕ್ವೆಸ್ ಎಲ್ಲರನ್ನು ತೆಕ್ಕೆಗೆ ತೆಗೆದುಕೊಳ್ಳಲು ತುಡಿಯುತ್ತಲೇ ಇದ್ದೇನೆ. ಆದರೆ ಅಕಾಡೆಮಿಕ್ ವಲಯದಿಂದ ಹೊರತಾಗಿ, ಕುಸಿಯುತ್ತಿರುವ ಕೇಂದ್ರೋದ್ಯಮವೊಂದರ ನೌಕರನಾದ ನನ್ನ ಸಂದರ್ಭ, ಅಂಥ ಪ್ರಯತ್ನ ವನ್ನು ತುಂಬ ದುಬಾರಿಯಾಗಿಸಿವೆ.

ಸಾಹಿತ್ಯ ಕಟ್ಟಿದ ನನ್ನ ಜೀವನ ದೃಷ್ಟಿ ಮತ್ತು ನಾನು ಬದುಕುತ್ತಿರುವ ನನ್ನ ಸುತ್ತಲಿನ ಮನುಷ್ಯ ಕೇಂದ್ರಿತ ಜಗತ್ತು-ಇವನ್ನು ತುಲನೆ ಮಾಡುತ್ತ ಹೊರಟಾಗ ನಾವೆಲ್ಲ ಮಾಡುತ್ತಿರುವ ಮುಖ್ಯ ಕೆಲಸಗಳು ನಮ್ಮ ಸಹಜ ಬದುಕಿಗೆ ನೇರವಾಗಿ ಸಂಬಂಧವೇ ಇರದೆ ಕೇವಲ ಕಂಬಸುತ್ತುವ, ಬೆಟ್ಟಕ್ಕೆ ಕಲ್ಲು ಹೊರುವ ಕೆಲಸಗಳಂತೆ ಕಂಡು ಬಂದು, ಅವೆಲ್ಲ ಮನುಷ್ಯನ ಅಜ್ಞಾನದ ಪರಮಾವಧಿಯ, ಒಬ್ಬರೊಬ್ಬರಿಗೆ ತೊಡೆದುಕೊಡುವ, ಅದರಿಂದ ತಪ್ಪಿಸಿಕೊಳ್ಳಲು ಹೆಣಗುವ ಪ್ರವೃತ್ತಿಯ ಒಟ್ಟಾರೆ ಕ್ರಿಯೆಗಳಂತೆ ಕಂಡು ಬರುತ್ತವೆ.

ಮೇಲ್ವರ್ಗದ ಜನರಿಗೆ ಪ್ರತಿಷ್ಠೆಯ ಸಂಕೇತವಾಗಬಹುದಾದ ಸಾಹಿತ್ಯ, ತುಂಬುವ ಬದುಕಿನ ಆದರ್ಶಗಳು ಕೆಳ ಮಧ್ಯಮ ವರ್ಗದಿಂದ ಬಂದ ನನ್ನಲ್ಲಿ 'ಮೊಲಕ್ಕೆ ರೆಕ್ಕೆ ಮೂಡಿಸಿ'ದಂತಾಗಿದೆ.

ಮೇಲೆ ಹಾರೋಣವೆಂದರೆ ಹಮ್ಮುಗಳ ಭಯ. ನೆಲದ ಮೇಲೆ ರೆಕ್ಕೆಗಳೇ ಒಂದು ಹೊರೆ. ಐವತ್ತರ ಹೊಸ್ತಿಲಲ್ಲಿರುವ ನಾನು ಇಪತ್ತಿನವರೆಗೆ 'ನಾನು ಬದುಕುತ್ತಿರುವ ಈ ಜಗತ್ತಿನಲ್ಲಿ' ಒಂದು ಲಂಚ ಕೊಡದೆ ಒಂದು ಕಮಿಷನ್ ಹೊಡೆಯದೆ ಉಸಿರಾಡುತ್ತಿದ್ದೇನೆಂದರೆ, ಆಶ್ಚರ್ಯ ವಾಗುತ್ತದೆ. ಯಾರಿಗೂ ಟೋಪಿ ಹಾಕದೆ ಬದುಕಬೇಕೆಂಬ ಛಲ ಹೊತ್ತ ನನಗೆ, ಎಷ್ಟೇ ಎಚ್ಚರವಾಗಿದ್ದರೂ ಆತ್ಮೀಯರು 'ಯಾಮಾರಿಸಿ' ಹಾಕುವ ಟೋಪಿಗಳೆಲ್ಲ ಖರ್ಚಾಗದೆ ನನ್ನಲ್ಲೇ ಉಳಿದು, ಅವುಗಳ ಹೊರೆ ಅತಿಯೆನ್ನಿಸಿದಾಗ, ಮಾರ್ಕಟ್ವೈನನ 'ಹಕಲ್ ಬೆರಿ ಫಿನ್', 'ಟಾಮ್ ಸಾಯರ್'ಗಳ ನನ್ನ ಬಾಲ್ಯಕ್ಕೆ ಮರಳಿ ವಿಹರಿಸುತ್ತಲೋ, ಥೊರೋವಿನ 'ವಾಲ್ಡನ್' ಸರೋವರದ ಹತ್ತಿರವೇ ನನಗೊಂದು ಬಯಲನ್ನು ಹುಡುಕುತ್ತಲೋ ಹೊರೆ ನೀಗಿಕೊಳ್ಳಲು ಹೆಣಗುತ್ತೇನೆ.

●

•ಸುರೇಶ ಕಂಜರ್ಪಣೆ (ರೈತ)

ನಾನು ಯಾಕೆ ಓದುತ್ತೇನೆ ಅನ್ನುವುದಕ್ಕೆ ಕಾರಣ ತೀರಾ ಸರಳ. ನನ್ನ ಈ ಜೀವಿತದಲ್ಲಿ ಮನುಷ್ಯರ ಸುಖ-ದುಃಖಗಳನ್ನು, ವರ್ತನೆಯನ್ನು ಎಷ್ಟೆಂದು ಅರಿಯಲು ಸಾಧ್ಯ? ಹತ್ತೋ ನೂರೋ ಜನರನ್ನು ಜೀವಮಾನ ಪೂರ್ತಾ ಗಮನಿಸಿ ಸಂವಾದಿಸಿದರೂ ಗಲಿಬಿಲಿ ಇದ್ದೇ ಇದೆ. ಜೊತೆಗೆ ನನ್ನ ಭಾವ ಸಂವೇದನೆಗಳನ್ನು ಮಾನವೀಯಗೊಳಿಸಲು ಏನು ದಾರಿ? ನಿತ್ಯದ ಬದುಕಿನಲ್ಲಿ ಇವೆಲ್ಲ ಆಗಬೇಕಲ್ಲ? ಕತೆ ಕಾದಂಬರಿಗಳು ಕೆಲವೇ ಗಂಟೆಗಳಲ್ಲಿ ಅದೆಷ್ಟೋ ಮನುಷ್ಯರ ಒಳ-ಹೊರಗಿನ ಸಂಬಂಧಗಳು, ಸುಖ-ದುಃಖಗಳನ್ನು ತೆರೆದಿಡುತ್ತವೆ. ನಿಜ ಮನುಷ್ಯ ರಲ್ಲಿ ಅಂಥಾ ಸಂವಾದೀ ಗುಣ ಸಂದರ್ಭಗಳನ್ನು ಒದಗಿ ಬಂದಾಗ ನನ್ನ ನೆಲೆಗೆ, ಪ್ರತಿ ಕ್ರಿಯೆಯ ಆಯಾಮಕ್ಕೆ, ಸ್ಪಂದನದ ಗುಣಶೀಲಕ್ಕೆ ಒಂದು ಲಂಗರು ಸಿಗುತ್ತದೆ. ಈ ಲೌಕಿಕದ ಲಾಭವನ್ನು ನಾನು ಅನುಭವಿಸಿದ್ದೇನೆ.

ನಾನಿರುವ ತಾವನ್ನು ವಿಶದಪಡಿಸುವುದು ಒಳಿತು. ಇನ್ನೂ ವಿದ್ಯುತ್ತಿಲ್ಲದ ಬೆಟ್ಟದ ಬುಡದಲ್ಲಿ ನಾನು ಜೀವನ ನಡೆಸುತ್ತಿದ್ದೇನೆ. ಹತ್ತಿರದ ನಾಗರಿಕ ಸೌಲಭ್ಯ ಸಂಪರ್ಕಕ್ಕೆ ೪ ಕಿ.ಮೀ. ನಡೆಯ ಬೇಕು (ಅಂಚೆ, ಸಹಕಾರಿ ಸಂಘ, ಶಾಲೆ ಇಷ್ಟೆ.) ತಾಲ್ಲೂಕು ಕೇಂದ್ರ ೨೦ ಕಿ.ಮೀ ದೂರ. ಕೃಷಿಯ ಪಡಿಪಾಟಲಿನೊಂದಿಗೇ ಒಂದು ಏಕಾಂತಕ್ಕೂ ಅವಕಾಶವಿದೆ. ಟಿವಿ ಇತ್ಯಾದಿ ಇಲ್ಲದ ಕಾರಣ, ಓದುವುದೊಂದೇ ನನಗೂ ನನ್ನ ಸಂಸಾರಕ್ಕೂ ಇರುವ 'ಸಾಂಸ್ಕೃತಿಕ ಚಟುವಟಿಕೆ'. ಹೀಗೆ ಓದು ಏಕಕಾಲಕ್ಕೆ ಎಸ್ಕೇಪ್ ಮತ್ತು ಧ್ಯಾನ ಆಗಿದೆ.

ನನ್ನ ವ್ಯಕ್ತಿತ್ವ,ಸಂವೇದನೆ, ಸೂಕ್ಷ್ಮತೆಗಳ ಕೊರೆಗಳನ್ನು ನೀಗಿಸಿಕೊಳ್ಳುವ ಪಾರಮಾರ್ಥಿಕ ಚಟುವಟಿಕೆ ನನ್ನ ಮಟ್ಟಿಗೆ ಓದು ಮಾತ್ರ. ಓದಿನಿಂದ ಈ ಅನುಭವ ನನಗೆ ದಕ್ಕಿದೆ. ನನ್ನನ್ನು ಮೃದುಗೊಳಿಸುತ್ತಾ, ನನ್ನ ಅರಿವನ್ನು ಹೆಚ್ಚಿಸುತ್ತಾ, ಒಂದು ಶಾಂತಸ್ಥಿತಿಯನ್ನು ನೀಡಿದೆ.

ಸಾವೊಂದನ್ನು ಬಿಟ್ಟು ಇನ್ನೇನೂ ನನ್ನನ್ನು ಚಕಿತಗೊಳಿಸದು ಎಂಬಷ್ಟರ ಮಟ್ಟಿಗೆ. ಎಲ್ಲಾ ಕಾಲ ದೇಶಗಳೂ ಸದಾ ನನ್ನೆದುರು ಕೃತಿಗಳ ಮೂಲಕ ಜೀವಂತವಾಗುವ ರೀತಿಯ ಬಗ್ಗೆ ಯೋಚಿಸಿದರೆ, ಅಹಾ! ನಾನೇ ಸೃಷ್ಟಿಕರ್ತ, ತಪ್ಪಿದರೆ ಅವನಿಗೆ ಸ್ಪರ್ಧಿ ಅನಿಸುತ್ತದೆ. ಯಾವ ಶ್ರೇಷ್ಠ ಬರಹಗಾರನನ್ನು ಓದಿದಾಗಲೂ ಹೊಟ್ಟೆ ಕಿಚ್ಚು ಬಂದಿಲ್ಲ. ಐ ಸಿಂಪ್ಲಿ ಅಪ್ರಾಪ್ರಿಯೇಟ್ ಹಿಸ್ ಎಕ್ಸ್‌ಪೀರಿಯನ್ಸ್! ಅಕಾಡೆಮಿಕ್ ಓದು, ಪ್ರಬಂಧಗಳ ಹಂಗಿಲ್ಲದ ಕಾರಣ ನನಗೆ ಎಲ್ಲಾ ಓದು ತೀವ್ರ ಆನಂದವನ್ನು ಒಳ ಉತ್ಕಟತೆಯನ್ನು ನೀಡಿದೆ. ದಿನ ದಿನ ಫ್ರೆಶ್ ಆಗುವ ಸುಖವನ್ನು ಓದು ನೀಡಿದೆ. ಈ ಉಲ್ಲಾಸವನ್ನು ನನ್ನ ಸಹ ರೈತರೊಂದಿಗೆ, ಬಂಧು ಬಾಂಧವರೊಂದಿಗೆ ಹಂಚಿಕೊಂಡಿದ್ದೇನೆ. ಅಮೂರ್ತ ಪದಗಳ ಜೋಡಣೆಯ ವಿನ್ಯಾಸಗಳು ಬದಲಾಗುತ್ತಿದ್ದಂತೆ ಹುಟ್ಟುವ ಅನಂತ ಅರ್ಥಗಳು; ಅವು ಪ್ರಪಂಚ ವನ್ನು, ಜೀವನವನ್ನು ದರ್ಶಿಸುವ, ವ್ಯಾಖ್ಯಾನಿಸುವ ಬಗೆಗಳ ಬಗ್ಗೆ ವಿಸ್ಮಯ ಸದಾ ಜಿನುಗಿದೆ.

ಆದರ್ಶದ ಬದುಕಿನ ಕಲ್ಪನೆಗೆ ಅಗತ್ಯವಾದ ನೈತಿಕ ನೆಲೆಗಳ ಅನ್ವೇಷಣೆ ಮತ್ತು ಸೃಜನ ಶೀಲತೆಯ ಪ್ರಮುಖ ಅಭಿವ್ಯಕ್ತಿಯಾದ ಭಾಷೆಯ ಆಯಾಮಗಳು ನನ್ನ ಪ್ರಿಆಕ್ಯುಪೇಶನ್‌ಗಳು.

ನನ್ನ ಓದಿನ ಅಂತಿಮ ಆಯ್ಕೆಯ ಕೃತಿಗಳು ಈ ಹೆಣಿಗೆಯನ್ನು ಹೊಂದಿರುತ್ತವೆ. ನಾನು ಈಗಾಗಲೇ ಹೇಳಿದಂತೆ ನಾನು ಜೀವಿಸುತ್ತಿರುವ ಸ್ಥಿತಿಯಲ್ಲಿ ಸಮಯ ಬಹಳ ಅಮೂಲ್ಯ. ಆದ್ದರಿಂದ ಆಯ್ಕೆ ಮಾಡುವಾಗ ಜಾಗ್ರತೆ ವಹಿಸುತ್ತೇನೆ. ಕನ್ನಡದಲ್ಲಿ ಆಯ್ಕೆಯ ಬಗ್ಗೆ ಹೆರವರ ರೆಫರೆನ್ಸ್ ಬೇಕಾಗುವುದಿಲ್ಲ. ಕಾರಂತ, ಮಾಸ್ತಿ, ಕುವೆಂಪು, ಅನಂತಮೂರ್ತಿ, ಲಂಕೇಶ್, ಅಡಿಗ, ಬೇಂದ್ರೆ - ಹೀಗೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಮತ್ತೆ ಮತ್ತೆ ಓದುತ್ತೇನೆ. ಹೊಸ ಲೇಖಕರನ್ನು, ವಿಮರ್ಶೆಯನ್ನು ಒಮ್ಮೆ ಸ್ಕಿಮ್ ರೀಡಿಂಗ್ ಮಾಡುತ್ತೇನೆ. ಮುಖ್ಯವೆನಿಸಿದರೆ ವಿವರವಾಗಿ ಓದುತ್ತೇನೆ. ಐಡಿಯಾಟಿರಿಯಲ್ ಅಡ್ವೆಂಚರ್ ಇಲ್ಲದ ಪುಸ್ತಕಗಳು ನನ್ನನ್ನು ಆಕರ್ಷಿಸುವುದಿಲ್ಲ. ಡಿ.ಆರ್. ನನ್ನ ಇಷ್ಟ ಪಡುವುದು ಈ ಡೇರಿಂಗ್‌ಗಾಗಿ.

ಕನ್ನಡೇತರ ಸಾಹಿತ್ಯದಲ್ಲಿ ಈಗಾಗಲೇ ಕ್ಲಾಸಿಕ್ ಎಂದು ಮಾನ್ಯವಾಗಿರುವ ಪುಸ್ತಕಗಳನ್ನು ಓದುತ್ತೇನೆ. ಮನುಷ್ಯನ ಸ್ಥಿತಿಯ ಬಗ್ಗೆ ಧ್ಯಾನಿಸುವ ತುರ್ಗಿನೇವ್, ದಾಸ್ತೋವಸ್ಕಿ, ಟಾಲ್ ಸ್ಟಾಯ್, ಶೇಕ್ಸ್‌ಪಿಯರ್ ಹೀಗೆ. ಕಾವ್ಯದ ಮಟ್ಟಿಗೆ ವಚನಕಾರರು, ಕುಮಾರವ್ಯಾಸ, ಬ್ಲೇಕ್, ಯೇಟ್ಸ್ ನನ್ನ ಆಯ್ಕೆ. ಭಾಷೆಯ ಆಯಾಮಗಳ ಮೂಲಕವೇ ಬದುಕಿನ ಮೆಟಫರ್‌ಗಳನ್ನು ನೀಡುವ ಕೃತಿಕಾರರು ಇವರು.

ಇತ್ತೀಚೆಗಿನ ಬರಹಗಾರರಲ್ಲಿ ಯಾರು ಮುಖ್ಯ ಅನ್ನುವುದನ್ನು ಅಲ್ಲಿ ಇಲ್ಲಿ ಬರುವ ವಿಮರ್ಶೆ ಮೂಲಕ ತಿಳಿದುಕೊಂಡರೂ, ನಾನಿರುವ ದುರ್ಗಮ ತಾಣಕ್ಕೆ ಅವರು ಪ್ರವೇಶಿಸುವುದು ತಡವಾಗಿ! ಆದರೂ ಮಾರ್ಕ್ವೆಜ್, ಕುಂದೆರಾ, ಕಾಲ್ವಿನೋರನ್ನು ಕಾಣ್ಕೆಯ ಹೊಸ ರೀತಿಗಾಗಿ ಇಷ್ಟಪಟ್ಟಿದ್ದೇನೆ. ಇಷ್ಟಾಗೂ ನಾನು ತೀರ ಎಚ್ಚರದಲ್ಲಿ ಓದುವುದು ಗಾಂಧಿಯನ್ನೇ. ನಿತ್ಯದ ತುರ್ತಿನಲ್ಲಿ ಬರೆದಾಗಲೂ, ಗಾಂಧಿ ಗಮನಿಸುವ ಸೂಕ್ಷ್ಮತೆಗಳೆಲ್ಲಾ ಬದುಕಿನ ನೈತಿಕ ನೆಲೆಗಳ ಎಚ್ಚರವಿದೆ. ನಾನು ಬಾಳಲಿಚ್ಛಿಸುವ ರೀತಿಗೆ ಗಾಂಧಿ ಸದಾ (ಅಕ್ಷರಶಃ) ಕೈಮರ. ಈ ಬದುಕಿಗೆ ಅಗತ್ಯವಾದ ಏಕೀಭೂತ ಚಿಂತನೆಗೆ ಅವಶ್ಯವಾದ ಹೆಣಿಗೆಗಳ ಹುಡುಕಾಟದಲ್ಲಿರುವ ನನಗೆ,

ಈ ಎಳೆಗಳನ್ನು ಒದಗಿಸುವ ಬರಹಗಾರರು ಮುಖ್ಯ. ಗಾಂಧಿ, ಪ್ರಕೋಕಾ, ಥೋರೊ ಜೊತೆಗೆ ಉಳಿದವರು ಕೈ ಜೋಡಿಸಬೇಕು.

ಕೊನೆಗೂ "ನನ್ನನ್ನು ನಿನ್ನ ಅಸ್ತಿತ್ವದ ಭಾಗವಾಗಿ ಸೇರಿಸಿಕೋ" ಎಂದು ಕೃತಿಯೊಂದು ಬೇಡುತ್ತದಲ್ಲಾ, ಅದು ನನ್ನ ಸಾರ್ಥಕ್ಯದ ಕ್ಷಣ ಮಾತ್ರವಲ್ಲ, ನನ್ನ ಬದುಕಿನ ರೀತಿಯ ಅಗ್ನಿ ದಿವ್ಯ ಕೂಡಾ.

•ಎಸ್ ಬಿ ಜೋಗುರ (ಸಮಾಜಶಾಸ್ತ್ರ ಅಧ್ಯಾಪಕ)

ಇಂದಿನ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಬೆಳೆಸಿಕೊಂಡು ಬಂದ ಹವ್ಯಾಸವು, ಅಪ್ಪಟ ಅಭಿರುಚಿ ಇಲ್ಲವೇ ಆತ್ಮಸಂತೃಪ್ತಿಗಾಗಿ ಎಂದು ಹೇಳಿದರೆ, ಅದು ಹೊಯ್ಮಾಲಿತನದ ಸೋಗಲಾಡಿತನದ ಮಾತಾಗಬಹುದು. ಮನುಷ್ಯ ಸಂಬಂಧಗಳನ್ನೇ ವ್ಯಾವಹಾರಿಕವಾಗಿ ನಿಭಾಯಿಸುವ ಈಗಿನ ದಿನಮಾನಗಳಲ್ಲಿ ಯಾವದೋ ಒಂದು ಮುಂಧೋರಣೆಯ ಸಹ ಸಂಬಂಧವಿಲ್ಲದೇ ಹವ್ಯಾಸಗಳು ಚಿಗಿಯುವದಿಲ್ಲ. ಹಣಕ್ಕಿಂತಲೂ ಸಮಯ ದುಬಾರಿಯಾಗಿರುವ ಈಗಿನ ಸಂದರ್ಭದಲ್ಲಿ, ಹವ್ಯಾಸ ಎಂಬುದು 'ಟೈಂಪಾಸಿಗಾಗಿ' ಎಂದು ಉತ್ತರಿಸುವವರನ್ನು ದಿಟ್ಟಿಸಿ ನೋಡಬೇಕಾಗುವದು.

ಸಾಹಿತ್ಯಕ ಮಟ್ಟದಲ್ಲಿ 'ನಾನೇಕೆ ಬರೆಯುತ್ತೇನೆ' ಎಂಬುದು ಬೇರುಗಳ ತಡಕಾಟವಾದರೆ, 'ನಾನೇಕೆ ಓದುತ್ತೇನೆ' ಎನ್ನುವದು ಆ ಬೇರು ಮೂಲದ ಫಲಾನುಭವ ಸಂಬಂಧವಾಗಿದೆ. ಓದುವವರಲ್ಲಿ ಬಹಳ ಪ್ರಕಾರಗಳಿವೆ. ಉಮೇದಿಗಾಗಿ ಓದುವವರು, ಯಾರೋ ಒಂದು ಪುಸ್ತಕ ಕೊಟ್ಟು ಇದನ್ನೋದಿ ಎಂದಾಗ ಓದುವವರು, ಅನಿವಾರ್ಯವಾಗಿ ಓದುವವರು, ಸಹಜವಾಗಿ ಓದುವವರು, ಗಂಭೀರವಾಗಿ ಓದುವವರು, ಬರೆಯುವ ಸಲುವಾಗಿಯೇ ಓದುವವರು. ಬಹುಶಃ ನಾನು ಕೊನೆಯ ಗುಂಪಿನಲ್ಲಿ ಬರುವೆನು.

ನಾನು ಕಳೆದ ೪-೫ ವರ್ಷಗಳಿಂದ ಕಾರವಾರದ ದಿನಪತ್ರಿಕೆ 'ಕರಾವಳಿ ಮುಂಜಾವು'ನಲ್ಲಿ ಅಂಕಣ ಬರಹಗಾರನಾಗಿ ಕೆಲಸ ಮಾಡುತ್ತಿರುವೆ. ಈಗ ಬೆಂಗಳೂರಿನ ಒಂದು ಪತ್ರಿಕೆಗೂ ಅಂಕಣಗಳನ್ನು ಬರೆಯುತ್ತಿರುವೆ. ಹೀಗೆ ಬರೆಯುವಾಗ ತೌಡು ಕಟ್ಟುವ ಶಬ್ದ ಬರಬಾರದು ಎಂದು ನಾನು ಓದುತ್ತೇನೆ. ಮಾನವನ ಮಿದುಳು ಜ್ಞಾನದ ಸಂಕೇತವಾದರೆ ಓದು ಅನುಭವ, ಓದು ಇಲ್ಲದವನ ಜ್ಞಾನವೆಂದರೆ ಪಾತ್ರೆ ಇಲ್ಲದವನ ಕೈಗೆ ನೀರು ಸಿಕ್ಕಂತೆ. ಓದು ಮನುಷ್ಯನ ಮತಿಯ ಮಿತಿಯನ್ನು ಅಗಲುಗೊಳಿಸುವದು. ಭಾವಜೀವಿಯನ್ನಾಗಿಸುವದು, ಸೂಕ್ಷ್ಮ ಸಂವೇದನೆಗಳನ್ನು ತುಂಬುವದು, ಒಂದು ಸಣ್ಣ ಝರಿಯಾಗಿದ್ದ ಅಂತರಗಂಗೆ ಕ್ರಮೇಣವಾಗಿ ತೊರೆಯಾಗಿ ಹರಿಯುವದು, ನಮಗೆ ಗೊತ್ತಿಲ್ಲದೇ ಮಾನವೀಯತೆಗೆ ಹತ್ತಿರಬರುವದು, ಸಮಾಜದ ಬೇರೆ ಬೇರೆ ಸ್ತರಗಳನ್ನು ಅರಿಯಲು ನೆರವಾಗುವದು. ಜಾಗತಿಕ ವಿದ್ಯಮಾನಗಳನ್ನು ತಿಳುವಳಿಕೆಯ ಜೊತೆಗೆ ಸಾಹಿತ್ಯದಲ್ಲಿ ಅಭಿರುಚಿ ಮೂಡತೊಡಗುವದು. ಆ ಮೂಲಕ ನಾವೂ ಕೈಯಲ್ಲಿ

ಪೆನ್ನು ಹಿಡಿಯಬೇಕು ಎಂಬ ತುಡಿತ ಮೂಡಲಿಕ್ಕೆ, ಹೀಗೆ ಓದು ಅನೇಕ ಮಜಲುಗಳಲ್ಲಿ ನನ್ನಂಥವನಿಗೆ ನೆರವಾಗಿದೆ.

ತಲೆ ತಲಾಂತರದಿಂದಲೂ ನಾವು ಯಾವದೋ ಒಂದು ಶಿಷ್ಟ ಸಮೂಹ ಪರಂಪರೆಯ ಹೆಸರಲ್ಲಿ ಮೌಢ್ಯಗಳನ್ನು ಹಾಗೂ ಹುಸಿ ಮೌಲ್ಯಗಳನ್ನು ಪ್ರತಿಪಾದಿಸಿಕೊಂಡು ಬಂದಿದ್ದೇವೆ. ಉದ್ದೇಶ ಧರ್ಮ-ಜಾತಿ ಜನಾಂಗದ ಹಿನ್ನೆಲೆಯಲ್ಲಿ ಪ್ರಭುತ್ವ ಸ್ಥಾಪಿಸುವ ಹುನ್ನಾರ. ಅವರು ಬ್ರೇನು ತೊಳೆಯುವ ಕೆಲಸ ಮಾಡಿದರೆ, ಓದು ಅದಕ್ಕೆ ವ್ಯತಿರಿಕ್ತವಾಗಿ ನಮ್ಮ ಮಿದುಳಿಗೆ ಸಾಣೆ ಹಿಡಿಯುವ ಕೆಲಸ ಮಾಡುತ್ತದೆ. ಪರಂಪರೆಯ ಹೆಸರಲ್ಲಿ ನಡೆದುಕೊಂಡು ಬಂದ ದೊಂಬರಾಟಗಳು ಏನು ಎಂಬ ಸತ್ಯ ಅನಾವರಣಗೊಳ್ಳುತ್ತದೆ. ಹೀಗಾಗಿ ಗಂಭೀರವಾದ ಓದು ನಮಗೆ ಬಹು ಅಮೂಲ್ಯವಾದುದನ್ನು ಗಳಿಸಿಕೊಡಬಹುದು.

ಇನ್ನು ಓದಿಗಾಗಿ ನಾವು ಆಯ್ಕೆ ಮಾಡಿಕೊಳ್ಳುವ ಲೇಖಕರು, ಕೃತಿಗಳು ತುಂಬಾ ಮುಖ್ಯ. ಪುರಾಣವನ್ನು, ದಂತ ಕತೆಗಳನ್ನು ಚರಿತ್ರೆಯನ್ನಾಗಿ ಮಾರ್ಪಡಿಸಿದ ಮಳ್ಳ ಲೇಖಕರು ನಮ್ಮಲ್ಲಿ ಅಪಾರ. ಆ ಬಗ್ಗೆ ರೋಮಿಲಾಥಾಪರರ ಚರಿತ್ರೆಯ ಬಗೆಗಿನ ವಿಚಾರಗಳನ್ನು ಓದುವದು. ಬದುಕಿನಲ್ಲಿ ಮುಕ್ತತೆ ಸಾಧ್ಯವಾದದ್ದೇ ತೀರ ಇತ್ತೀಚಿಗೆ, ಹಾಗೆಯೇ ಓದಿಗೂ ಕೂಡಾ. ಹೀಗಿರುವಾಗ ಹುಸಿ ಪಂಡಿತರ ಕೃತಿಗಳು ಕೈಗೆ ಸಿಕ್ಕು ಮನಸಿಗೆ ಆಪ್ತವಾದರೆ, ನಮ್ಮ ಓದು ನಮಗೆ ತಿಳಿಯದಂತೆ ನಮ್ಮನ್ನು ದುರಂತದೆಡೆಗೆ ಸೆಳೆಯುತ್ತದೆ. ಆ ದಿಶೆಯಲ್ಲಿ ಬಂಡಾಯ ಹಾಗೂ ದಲಿತ ಸಾಹಿತ್ಯ ಪ್ರಜ್ಞೆಗಳು ವಸ್ತುನಿಷ್ಠ ಓದಿಗಾಗಿ ತುಂಬಾ ನೆರವಾಗಿವೆ.

ಶಿಷ್ಟ ಸಂಸ್ಕೃತಿಯ ಹೆಸರಲ್ಲಿ ಸಂವೇದನೆಗಳಲ್ಲಿ ಹಾದರ ಬೆರೆಸಿ ಬ್ರೇನು ತೊಳೆಯಲೆಂದೇ ಬರೆದಂತಿರುವ ಕೆಲ ಮಹಾನ್ ಲೇಖಕರಿದ್ದಾರೆ. ಇವರಿಂದ ನಾನು ಬಲು ದೂರ. ಇವರು ಯಾವದೇ ವಿಷಯವನ್ನು ಎಲ್ಲಿಂದಲೇ ಪ್ರಾರಂಭಿಸಲಿ ಮತ್ತೆ ಬಂದು ನಿಲ್ಲುವದು ತಮ್ಮ ಕರ್ಮಠ ವಠಾರಕ್ಕೆ. ನನಗೆ ಹೆಚ್ಚು ಆಪ್ತರಾದ ಬರಹಗಾರರೆಂದರೆ ಡಿ.ಆರ್ ನಾಗರಾಜ್, ಲಂಕೇಶ, ದೇವನೂರ, ಜಯಂತ ಕಾಯ್ಕಿಣಿ, ಕೃಷ್ಣ ಆಲನಹಳ್ಳಿ, ಬರಗೂರು ರಾಮಚಂದ್ರಪ್ಪ, ರಹಮತ್ ತರೀಕೆರೆ. ಈಚೆಗಿನ ಮೊಗಳ್ಳಿ ಗಣೇಶ ತುಂಬಾ ಇಷ್ಟವಾಗುವ ಲೇಖಕರು. ಇನ್ನು ಹಿರಿಯ ತಲೆಮಾರಿನವರಲ್ಲಿ ಕುವೆಂಪು, ವಿ.ಸೀ. ಗೋಕಾಕ, ಕಾರ್ನಾಡ್, ಎ.ಕೆ. ರಾಮಾನುಜನ್, ಬಿ.ಜಿ.ಎಲ್ ಸ್ವಾಮಿ, ಎ.ಎನ್ ಮೂರ್ತಿರಾವ್, ಶಂಬಾ ಜೋಶಿ, ಗೌರೀಶ ಕಾಯ್ಕಿಣಿ, ಚಿತ್ತಾಲ ಮುಂತಾದವರು.

ಇನ್ನು ಬೇರೆ ಭಾಷೆಯ ಅನುವಾದಿತ ಕೃತಿಗಳಿಗೆ ಸಂಬಂಧಿಸಿ ಹೇಳುವುದಾದರೆ, ಲಕ್ಷ್ಮಣ ಗಾಯಕವಾಡರ 'ಉಚಲ್ಯಾ' ರಾಮ ಮನೋಹರ ಲೋಹಿಯಾರ ಸಂಪುಟಗಳು, ರಸ್ಕಿನ್ ಬಾಂಡ್‌ರ ಬರಹಗಳು, ಖುಶ್ವಂತಸಿಂಗ್, ಡೇಲ್ ಕಾರನಿಜ್, ಬರ್ಟೆಂಡ್ ರಸೆಲ್, ಸಿ-ಇ-ಎಮ್ ಜೋಡ್, ಥಾಮಸ್ ಹಾರಿಸನ್ ಮುಂತಾದವರು ಹೌದು.

ಇವರ ಜೊತೆಗೆ ಇನ್ನು ಮುಂದೆ ಭವಿಷ್ಯದ ಓದಿನಲ್ಲಿ ನನಗೆ ಯಾರು ಆಪ್ತರಾಗುತ್ತಾರೆಂದು ಹೇಳಲಾಗುವುದಿಲ್ಲ. ತುಳಿತಕ್ಕೊಳಗಾದ ಹಿನ್ನೆಲೆಯಿಂದ ಬಂದವರು ಒಂದು ಉತ್ತಮವಾದ

ಓದಿಗೆ ಅನುವು ಮಾಡಿಕೊಟ್ಟಾಗ ನನಗೆ ತುಂಬಾ ಖುಷಿಯೆನಿಸುತ್ತದೆ. ಓದು ಹಾಗೂ ಬರಹಗಳೆರಡೂ ಹುಟ್ಟಿನಿಂದ ಸಾಂಸ್ಕೃತಿಕ ಪರಿಸರವೇ ಆಗಿರುವಲ್ಲಿ ಒಂದು ಉತ್ತಮ ಕೃತಿ ಕೊಟ್ಟರೆ ಮಹಾನ್ ಎನಿಸುವುದಿಲ್ಲ. ಶಿಷ್ಟತೆಯನ್ನೇ ಮುಂದು ಮಾಡಿಕೊಂಡು ಸೋಗು ಮೆರೆಯುವ ಲೇಖಕರಿಗಿಂತಲೂ, ಸಹಜವಾಗಿ ಬಯಲುಗೊಳ್ಳುವ ಬರಹಗಾರರೆಂದರೆ ನನಗೆ ತುಂಬಾ ಇಷ್ಟ. ನಾನೂ ಒಬ್ಬ ಮನುಷ್ಯ. ಕೆಲ ಲೇಖಕರ ಬಗೆಗೆ ನನ್ನಲ್ಲಿ ಪೂರ್ವಗ್ರಹ ಪೀಡೆಗಳೂ ಇರಬಹುದು. ಅಂತಹ ಲೇಖಕರ ಕೃತಿಗಳನ್ನು ನಾನು ಒಟ್ಟಾರೆಯಾಗಿ ಮುಟ್ಟಲಿಲ್ಲವೆಂದಲ್ಲ. ಮುಟ್ಟಿದಾಗಲೆಲ್ಲಾ ಅವರ ಪಾರಂಪರಿಕ ವಿಚಾರಗಳ ಹೇರಿಕೆಯಿಂದ ಮುನಿಸಿಕೊಳ್ಳುವದೇ ಹೆಚ್ಚು. ಒಂದೇ ಮಾತಿನಲ್ಲಿ ಹೇಳುವದಾದರೆ, ಸಂವೇದನೆಗಳಲ್ಲಿ ಸಾಂಸ್ಕೃತಿಕ ಡೌಲು ಮೆರೆಯುವ ಲೇಖಕರೆಂದರೆ ನನಗೆ ಅಲರ್ಜಿ.

●

•ಸಿ ಸೋಮಶೇಖರಯ್ಯ (ದಿನಸಿ ವ್ಯಾಪಾರಿ)

ನನ್ನ ಮಟ್ಟಿಗೆ ನಾನೇಕೆ ಓದುತ್ತೇನೆ ಎಂದು ಪ್ರಶ್ನಿಸಿಕೊಳ್ಳುವುದೆಂದರೆ, ನಾನೇಕೆ ಉಸಿರಾಡುತ್ತೇನೆ, ನಾನೇಕೆ ಬದುಕಿದ್ದೇನೆ, ಎಂಬ ಪ್ರಶ್ನೆಗೆ ಸಮ.

ನನಗೆ ನೆನಪಿದ್ದಂತೆ, ನಾನು ಓದಲು ತೊಡಗಿದುದು ೧೯೫೫ರ ಸುಮಾರಿಗೆ. ಆಗ ನನಗೆ ಹನ್ನೆರಡು ವರ್ಷ. ೧೯೫೫ರ ಚಂದಮಾಮ, ದೀಪಾವಳಿ ವಿಶೇಷಾಂಕ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ಅನಂತರ ನನ್ನ ಕೈಗೆ ಸಿಕ್ಕ ಪುಸ್ತಕ 'ಗಲಿವರನ ಪ್ರವಾಸ'. ಹನ್ನೆರಡರ ನಾನು ಗಲಿವರನ ಪ್ರವಾಸ ನಿಜವಾಗಿಯೂ ನಡೆದದ್ದು! ಆ ಲಿಲಿಪುಟ್ ದೇಶ ಎಲ್ಲಿರಬಹುದು? ಎಂದು ಸಾಕಷ್ಟು ತಲೆ ಕಡಿಸಿಕೊಂಡಿದ್ದೆ. ಗಲಿವರ್ ಅಂಗೈಯಲ್ಲಿ ಹಿಡಿದುಕೊಂಡಿದ್ದ ಆ ಪುಟಾಣಿ ಕುರಿಗಳು, ದನಗಳು, ಮುಂತಾದುವನ್ನು ಹುಡುಕಲು ನಮ್ಮೂರ ಹಳ್ಳದ ದಂಡೆಗಳೆಲ್ಲೆಲ್ಲ ಅಲೆದಾಡಿದ ನೆನಪು. ಸುಮಾರು ಹದಿಮೂರರ ನಾನು ಸಮುದ್ರ ಪ್ರಯಾಣ ಮಾಡಿದೆ! ನನ್ನ ದೋಣಿ ಶಾರ್ಕ್‌ಗಳಿಂದ ಸುತ್ತುವರಿದಿತ್ತು! ಹಾಗೂ ಹೀಗೂ ಬಚಾವಾಗಿ ನನ್ನ ಮಿತ್ರರ ಜೊತೆ ಒಂದು ಅನೂಹ್ಯ ದ್ವೀಪ ಸೇರಿಕೊಂಡೆ, ಅಲ್ಲಿ ಪಟ್ಟ ಪಾಡು ಏನು ಹೇಳುತ್ತೀರಿ! ಅಲ್ಲಿನ ನರಭಕ್ಷಕ ಕಾಡುಜನರ ಕೈಯಿಂದ ಪಾರಾದದ್ದೇ ಒಂದು ಸಾಹಸ.

ಇದು ನನ್ನ ಮನಸ್ಸಿನಲ್ಲಿ 'ಹವಳದ ದ್ವೀಪ' ಓದಿದ ಪರಿಣಾಮದ ಕಲ್ಪನೆ. ಇಂತಹ ಹುಚ್ಚುಗಳಿಗೆ ಜಿ.ಪಿ. ರಾಜರತ್ನಂ ತಮ್ಮ ಒಂದು ಭಾಷಣದಲ್ಲಿ "ಅನುಕಲ್ಪನೆ " ಎಂಬ ಹೆಸರು ಕೊಟ್ಟು ನಮ್ಮಂತಹವರನ್ನು ಬಚಾವು ಮಾಡಿದರು. ಬಾಲ್ಯಕಾಲದಲ್ಲಿ ಕುತೂಹಲ ಹಾಗೂ ಮನರಂಜನೆಗಾಗಿ ನಾನು ಓದಲು ತೊಡಗಿರಬೇಕು.

ನನಗೆ ಅನುಕೂಲವಾದ ಒಂದು ಅಂಶವೆಂದರೆ ಮನೆಯಲ್ಲಿ ಸಾಕಷ್ಟು ಪುಸ್ತಕಗಳ ಸಂಗ್ರಹವಿತ್ತು. ಆದರೆ ಕಾವ್ಯ ಪ್ರಕಾರಗಳೇ ಹೆಚ್ಚು. ಪಂಪನ 'ವಿಕ್ರಮಾರ್ಜುನ ವಿಜಯ'

ರನ್ನನ 'ಸಾಹಸಭೀಮ ವಿಜಯ' ಹರಿಹರನ ರಗಳೆಗಳು, ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ' ಚಾಮರಸನ 'ಪ್ರಭುಲಿಂಗಲೀಲೆ' ಲಕ್ಷ್ಮೀಶನ 'ಜೈಮಿನಿ ಭಾರತ' ಇತ್ಯಾದಿಗಳು. ಸಣ್ಣವನಿದ್ದಾಗ ಇವು ಸರಿಯಾಗಿ ಅರ್ಥವಾಗದಿದ್ದರೂ ರಾಗವಾಗಿ ಓದುತ್ತಿದ್ದೆ. ಮುಂದೆ ಕಾವ್ಯವು ನನ್ನ ಮನಸ್ಸಿಗೆ ಆನಂದ ಕೊಡುವ, ಚಿಂತೆ ಬೇಸರ ಗಳನ್ನು ಮರೆಸುವ, ಬದುಕಿನ ಬಗ್ಗೆ ಭರವಸೆ ತುಂಬುವ ಒಂದು ಸಾಧನವಾಯಿತು. 'ಕುಮಾರವ್ಯಾಸ ಭಾರತ'ವಂತೂ ನನ್ನ ಪಾಲಿನ ವಜ್ರದ ಗಣಿ. ಸಾಲಂಕೃತ ಕನ್ಯೆಯಾದ ದ್ರೌಪದಿಯ ಸ್ವಯಂವರ-ರಾಜರುಗಳ ಮಧಾಂಧತೆ ಮತ್ತು ಮಾತ್ಸರ್ಯ-ಕುದುರೆಗಳ ಖುರಪುಟಧ್ವನಿ-ಸೈನಿಕರ ಕೋಲಾಹಲ-ಇಂದ್ರನ ಓಲಗ-ಊರ್ವಶಿಯ ಸುಮನೋಹರ ಭಯಂಕರ ರೂಪು-ಕಿರಾತಾರ್ಜುನ ಯುದ್ಧ-ರಾಜಸೂಯ-ವಿದುರನೀತಿ ಹೀಗೆ ಬದುಕಿನ ಅನೇಕ ಸ್ತರಗಳ ವರ್ಣನೆಗಳು ಓದುತ್ತಿದ್ದರೆ, ನನ್ನ ಮುಂದೆ ನಡೆಯುತ್ತಿದ್ದಂತೆ ಭಾಸವಾಗುತ್ತಿದ್ದವು. ವಚನ ಸಾಹಿತ್ಯದಲ್ಲಿ ನನ್ನ ಮನಸ್ಸನ್ನು ಸೂರೆಗೊಂಡವರು ಇಬ್ಬರು-ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ. ಇವರ ಕಾವ್ಯಾತ್ಮಕ ಶೈಲಿ, ವಿಷಯದ ಸ್ಪಷ್ಟತೆ, ಅದಕ್ಕಾಗಿ ಬಳಸುವ ಉಪಮೆ ಗಳು, ಅಸದೃಶ್ಯವಾದವು.

ಕಾರಂತರ "ಚಿಗುರಿದ ಕನಸು" ಓದಿದ ಮೇಲೆ, ಅವರು ಬರೆದ ಯಾವ ಸಾಹಿತ್ಯವನ್ನೂ ನಾನು ಬಿಡಲಿಲ್ಲ. ವಿಜ್ಞಾನ ಪ್ರಪಂಚ ಬಾಲಪ್ರಪಂಚವೂ ಸೇರಿದಂತೆ. ನಂತರ ಕುವೆಂಪುರವರ 'ಕಾನೂರು ಹೆಗ್ಗಡತಿ' ಪ್ರಾಯಶಃ ಅವರ ಎಲ್ಲ ಕವನ ಸಂಕಲನಗಳು, 'ರಾಮಾಯಣ ದರ್ಶನಂ' ಮಹಾಕಾವ್ಯ, 'ಬಿರುಗಾಳಿ' 'ಜಲಗಾರ' ಸೇರಿದಂತೆ ಎಲ್ಲ ನಾಟಕಗಳು, ಸಣ್ಣ ಕಥೆಗಳು, ವಿಮರ್ಶಾ ಲೇಖನಗಳು, ವಿವೇಕಾನಂದ ಸೇರಿದಂತೆ ಅವರು ಬರೆದ ಎಲ್ಲಾ ಜೀವನ ಚರಿತ್ರೆಗಳು, ನನ್ನನ್ನು ತಿದ್ದಿಕೊಳ್ಳಲು ಸಹಾಯ ಮಾಡಿದವು. ಮಾಸ್ತಿಯವರ ಸಣ್ಣ ಕಥೆಗಳು, ಬಿಡಿಲೇಖನಗಳು, ಕವನಗಳು ಬಾಳಿನಲ್ಲಿ ಪ್ರೀತಿ ಅನುಕಂಪಗಳನ್ನು ಬೋಧಿಸಿದವು. ಆ ಕಾಲದ ನನ್ನ ಮೆಚ್ಚಿನ ಇನ್ನೊಬ್ಬ ಬರಹಗಾರರೆಂದರೆ, ಗೊರೂರು ರಾಮಸ್ವಾಮಿ ಅಯ್ಯಂಗಾರರು. ಅವರ 'ಗರುಡ ಗಂಬದ ದಾಸಯ್ಯ'ದಿಂದ ಹಿಡಿದು ಅವರ ಎಲ್ಲಾ ಬರಹಗಳನ್ನು ಓದಿ ನಕ್ಕಿದ್ದೇ ನಕ್ಕಿದ್ದು. ರಾ.ಶಿ. ನನ್ನ ಪ್ರೀತಿಪಾತ್ರ ಇನ್ನೊಬ್ಬ ಸಾಹಿತಿ. 'ಕೊರವಂಜಿ' ನನ್ನ ಪ್ರೀತಿಯ ಪತ್ರಿಕೆ. 'ಮನೋನಂದನ' 'ಮನಮಂಥನ' ಸೇರಿದಂತೆ ಅವರೆಲ್ಲಾ ಸಾಹಿತ್ಯಕ್ಕೆ ನಾನು ಓದುಗ. ಹಾಗೆಯೇ ರಾಜರತ್ನಂರ ಬುದ್ಧನ ಕುರಿತ ಬರಹಗಳು. 'ರತ್ನನ ಪದಗಳು' ನನಗೆ ಇಷ್ಟವಾದವುಗಳು. ಅವರ ಎದುರಾಳಿ ಬೀಚಿ ಸಹ ನನಗೆ ಪ್ರಿಯರು. ಒಮ್ಮೊಮ್ಮೆ ಇವರಿಬ್ಬರ ಜಗಳಗಳು ಗಂಧದವರ ಗುದ್ದಾಟದಂತೆ ಓದುಗರಾದ ನಮಗೆ ಚಿಂತನೆಗೆ ಗ್ರಾಸವಾಗುತ್ತಿದ್ದವು.

ಶರಣ ಸಾಹಿತ್ಯದ ಬಗ್ಗೆ ನನ್ನ ಗಮನ ಸೆಳೆದು ಇಬ್ಬರು ಆಧುನಿಕ ಸಾಹಿತಿಗಳೆಂದರೆ ಹೆಚ್. ತಿಪ್ಪೇರುದ್ರಸ್ವಾಮಿ, ಬಿ.ಪುಟ್ಟಸ್ವಾಮಯ್ಯ. ತಿಪ್ಪೇರುದ್ರಸ್ವಾಮಿಯವರ 'ಕರ್ತಾರನ ಕಮ್ಮಟ' ಓದಿ ಅದೇ ಗುಂಗಿನಲ್ಲಿದ್ದಾಗ, ನನ್ನ ಕೈಗೆ ಅವರು ಸಿಕ್ಕುಬಿದ್ದರು. ಬಹುಶಃ ಇಡೀ ಒಂದು ರಾತ್ರಿ ನಾನು ಅವರಿಗೆ ನಿದ್ರೆ ಮಾಡಲು ಅವಕಾಶ ಕೊಡಲಿಲ್ಲ. ಈ ಚಿತ್ರಹಿಂಸೆಯನ್ನು ಅವರು ನಗುನಗುತ್ತಲೇ ಸಹಿಸಿದರು.

ಭಾವಗೀತೆಗಳ ವಿಷಯದಲ್ಲಿ ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಜಿ.ಎಸ್.ಶಿವರುದ್ರಪ್ಪ ನನ್ನ ಮೆಚ್ಚಿನ ಕವಿಗಳು. ಇತ್ತೀಚಿನ ದಿನಗಳಲ್ಲಿ ತೇಜಸ್ವಿ ನನ್ನ ಅಚ್ಚುಮೆಚ್ಚಿನ ಸಾಹಿತಿ. ವಿಶ್ವದ ಬಗ್ಗೆ ಅವರ ಕುತೂಹಲ ಆಶ್ಚರ್ಯ ಹುಟ್ಟಿಸುತ್ತದೆ. ಅವರು ಪ್ರಪಂಚದ ಅದ್ಭುತಗಳ ಬಗ್ಗೆ ಬರೆಯುವುದು, ಕಾಡುಗಳು, ಕಾಡುಪ್ರಾಣಿಗಳು, ಪಕ್ಷಿಗಳ ಬಗ್ಗೆ ಅವರ ಲೇಖನಗಳು ಹೊಸ ಹೊಸ ವಿಷಯಗಳನ್ನು ಪರಿಚಯಿಸುತ್ತಲೇ ಇರುತ್ತವೆ.

ನನ್ನ ಮೆಚ್ಚಿನ ಸಾಹಿತ್ಯ ಪ್ರಕಾರಗಳಲ್ಲಿ ಆತ್ಮಚರಿತ್ರೆಯೂ ಒಂದು. ಆತ್ಮಚರಿತ್ರೆಗಳು ನಮ್ಮ ಬಾಳುವೆಯ ದಾರಿ ದೀಪಗಳಾಗಬಲ್ಲವು. ಗಾಂಧೀಜಿಯವರ 'ಆತ್ಮಚರಿತ್ರೆಗೆ' ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಮಾಸ್ತಿಯವರ 'ಭಾವ' ಬೀಚಿಯವರ 'ಭಯಾಗ್ರಫಿ' ಇವೆಲ್ಲಾ ಸಂಗ್ರಹ ಯೋಗ್ಯ.

ಇವುಗಳ ನಂತರ ಪ್ರವಾಸ ಸಾಹಿತ್ಯ ಮುಖ್ಯವಾದುದು. ಇವುಗಳ ಮೂಲಕ ಕುಳಿತಲ್ಲೇ ಪ್ರಪಂಚ ಪರ್ಯಟನೆ ಮಾಡಬಹುದು. 'ಅಪೂರ್ವ ಪಶ್ಚಿಮ' 'ಅಮೆರಿಕಾದಲ್ಲಿ ಗೊರೂರು' 'ಅಪರವಯಸ್ಕನ ಅಮೇರಿಕಾ ಯಾತ್ರೆ' 'ಅಮೆರಿಕಾದಲ್ಲಿ ನಾನು' 'ಅಬೂವಿನಿಂದ ಬರಾಮಾಕ್ಕೆ' 'ಹಿಮಾಲಯ ದರ್ಶನ' ಇವೆಲ್ಲಾ ಪ್ರಿಯವಾದ ಪ್ರವಾಸ ಸಾಹಿತ್ಯ ಕೃತಿಗಳು.

ಹೀಗೆ ಕನ್ನಡ ಸಾಹಿತ್ಯಕ್ಕೆ ಮೇರೆಗಳೆಂಬುದಿಲ್ಲ. ಇವುಗಳನ್ನು ಓದುವುದರಿಂದ ನನಗಾಗಿರುವ ಪ್ರಯೋಜನಗಳೇನೆಂಬುದನ್ನು ಹೇಳಲೆ? ಮೂಲತಃ ನಾನೊಂದು ವಿಕಾಸ ಹೊಂದಿದ ಪ್ರಾಣಿ, ಈ ಪ್ರಾಣಿಗೆ ಪ್ರಕೃತಿ ಬುದ್ಧಿಶಕ್ತಿಯನ್ನು ಅಳವಡಿಸಿ ಮನುಷ್ಯನನ್ನಾಗಿ ಮಾಡಿದೆ. ಬುದ್ಧಿಯನ್ನು ಭಾವವನ್ನಾಗಿ ಮಾರ್ಪಡಿಸಿರುವುದೇ ಈ ಸಾಹಿತ್ಯವೆಂಬ ಗಾರುಡಿ. ಈ ಅಪಾರ ವಿಸ್ಮಯಕರ ಅದ್ಭುತ ಜಗತ್ತಿನೆದುರು, ನನ್ನ ಅಹಂಕಾರ ಎಂಬುದು ಎಷ್ಟು ಸಣ್ಣ ವಸ್ತು ಎಂಬ ಅರಿವನ್ನು ನೀಡುತ್ತಿರುವುದೇ ಈ ಸಾಹಿತ್ಯ. ಅದೇ ಸಮಯಕ್ಕೆ ಒತ್ತಡಗಳಿಗೆ ಬಗ್ಗದೆ ಸೆಟೆದು ನಿಲ್ಲಲು, ನಿರಂಕುಶ ಮತಿಯಾಗಲು ಪ್ರೇರೇಪಿಸಿರುವುದು ಸಹ ಈ ಸಾಹಿತ್ಯವೇ. ಮನುಷ್ಯರ ನಡುವಣ ಸ್ನೇಹ ಪ್ರೀತಿಗಳನ್ನು ಕಾಪಾಡಿಕೊಳ್ಳಲು; ಮನುಷ್ಯ ಸಂಬಂಧಗಳನ್ನು ಗೌರವಿಸಲು; ಕಲಿಸಿರುವುದೂ ಸಹ ಇದೆ ಸಾಹಿತ್ಯ. ಬೇಸರವಾದಾಗ ಮನರಂಜಿಸುವ, ಧೈರ್ಯಗೆಟ್ಟಾಗ ಧೈರ್ಯತುಂಬುವ, ಯಾವುದು ಸರಿ ಯಾವುದು ತಪ್ಪು ಎಂಬ ಚಿಂತೆ ಕಾಡಿದಾಗ ದಾರಿತೋರಿಸುವುದು ಸಹ ಇದೇ ಸಾಹಿತ್ಯ. ಒಳ್ಳೆಯ ಮಿತ್ರನೂ ಒಳ್ಳೆಯ ಗುರುವೂ ಒಳ್ಳೆಯ ಬಂಧುವೂ ಆದ ಸಾಹಿತ್ಯ ನನ್ನ ಜೀವವಾಗಿದೆ.

•ವನಮಾಲಾ ಕಟ್ಟೀಗೌಡರ (ಗೃಹಿಣಿ)

ಒತ್ತಡ ಹೆಚ್ಚಿದಷ್ಟೂ ಪ್ರತಿರೋಧ ಹೆಚ್ಚುತ್ತದೆ ಎಂಬ ಒಂದು ವೈಜ್ಞಾನಿಕ ನಿಯಮವುಂಟು. ಬಹುಶಃ ನನ್ನ ಓದು ಪ್ರಾರಂಭವಾದದ್ದು ಈ ನಿಯಮಕ್ಕೆ ಅನುಸಾರವಾಗಿಯೇ ಎನ್ನಬಹುದು. ಅದೊಂದು 'ಬಂಡು ಬಿದ್ದು' ದಕ್ಕಿಸಿಕೊಂಡ 'ಹುಚ್ಚು' ಎಂದರೂ ಅಡ್ಡಿಯಿಲ್ಲ.

ನಾನು ಬಾಲ್ಯ ಕಳೆದ ಗದಗ-ಬೆಟಗೇರಿಯಲ್ಲಿ ಸಾಹಿತ್ಯಕ ವಾತಾವರಣ ತುಂಬಿ ತುಳುಕುತ್ತಿತ್ತು. ಆದರೂ ನಾನು ಹುಟ್ಟಿ ಬೆಳೆದದ್ದು ತೀರಾ ಸಂಪ್ರದಾಯಸ್ಥ ಮನೆತನದಲ್ಲಿ . ಹೆಣ್ಣು ಮಕ್ಕಳು ಪಠ್ಯೇತರ ವಿಷಯಗಳನ್ನು ಓದುವುದನ್ನು ಇಲ್ಲಿ ಉಗ್ರವಾಗಿ ಖಂಡಿಸುತ್ತಿದ್ದರು. ಅದರಲ್ಲೂ ಕಥೆ-ಕಾದಂಬರಿಗಳನ್ನು ಓದಿದರೆ ಹೆಣ್ಣು ಮಕ್ಕಳು ಕೆಟ್ಟುಕೆರ ಹಿಡಿಯುತ್ತಾರೆಂಬುದು ಅವರ ಖಚಿತ ನಿಲುವಾಗಿತ್ತು! ಅವರ ದೃಷ್ಟಿಯಲ್ಲಿ ಕಥೆ-ಕಾದಂಬರಿಗಳನ್ನು ಓದುವವರು ದಾರಿ ತಪ್ಪಿದ ಬಜಾರಿಯರು!! ಮಾನ-ಮರ್ಯಾದೆ ಎಲ್ಲವನ್ನು ಬಿಟ್ಟವರು!!! ಓದಿಗೆ ತಾಯಿಗಿದ್ದ ಇಷ್ಟೊಂದು ಉಗ್ರ ವಿರೋಧದ ನಡುವೆ ನನ್ನ ಓದಿನ ಕುತೂಹಲ, ಆಸಕ್ತಿ, ಹಂಬಲ. ಮುದ್ದಾಂ ಬೆಳೆಯ ತೊಡಗಿತ್ತು! ಅದು ನನ್ನನ್ನು ಎಷ್ಟು ಬಂಡುತನಕ್ಕೆ ಈಡು ಮಾಡಿತೆಂದರೆ-ದಿನಸಿ ಸಾಮಾನು ಹಸನು ಮಾಡಲು ಮೊರ ಮುಂದಿಟ್ಟರೆ, ಪೊಟ್ಟಣದಲ್ಲಿನ ದಿನಸಿಯನ್ನು ಮೊರದಲ್ಲಿ ಹಾಕಿ ಮೊದಲು ಆ ಪೊಟ್ಟಣದ ಹಾಳೆಯನ್ನು ಪೂರ್ತಿ ಓದಿ ನಂತರ ಕಾಳು ಹಸನು ಮಾಡುವುದಿತ್ತು. ತಿಂಡಿ ಪೊಟ್ಟಣಗಳಲ್ಲಿನ ತಿಂಡಿಯನ್ನು ತಟ್ಟೆಗೆ ಹಾಕಿ ಮೊದಲು ಓದು ಮುಗಿಸಿ ನಂತರ ತಿಂಡಿಯ ಕಡೆಗೆ ಲಕ್ಷ್ಯ! ಬರಬರುತ್ತ ಈ ಬಂಡಾಟ ಎಲ್ಲಿಗೆ ಬಂತೆಂದರೆ ಗೆಳತಿಯರಿಂದ ಕಥೆ ಪುಸ್ತಕಗಳನ್ನು ಅದ್ಹೇಗೋ ಪಡೆದು ತಾಯಿಗೆ ಕಾಣದಂತೆ ಪಠ್ಯ ಪುಸ್ತಕಗಳ ನಡುವೆ ಇರಿಸಿಕೊಂಡು ಕಳ್ಳತನದಿಂದ ಓದುವಷ್ಟು! ಸದ್ಯ, ನಮ್ಮ ತಂದೆ ತಾಯಿಯಂತಲ್ಲ. ಅವರೊಬ್ಬ ಮುಕ್ತ ಮನಸ್ಸಿನ ಸಾಹಿತ್ಯಾಭ್ಯಾಸಿ. ಅವರಿಗೆ ದಿನವೂ ತಪ್ಪದೇ ಗ್ರಂಥಾಲಯಕ್ಕೆ ಹೋಗುವ ಹವ್ಯಾಸ ವಿತ್ತು. ನನ್ನ ಓದಿನ ಹುಚ್ಚನ್ನು ಗಮನಿಸಿ ತಮ್ಮೊಡನೆ ಆಗಾಗ ಗ್ರಂಥಾಲಯಕ್ಕೆ ಕರೆದೊಯ್ಯುತ್ತಿದ್ದರು. ತಾಯಿಯ ಅಸಹನೆಯನ್ನು ಲೆಕ್ಕಿಸದೆ ಮೆಲ್ಲನೆ ನನ್ನಲ್ಲಿಯ ಓದಿನ ಪ್ರೀತಿಗೆ ನೀರೆರೆಯ ತೊಡಗಿದರು. ತಾವು ಓದಿದ ಫ್ರೆಂಚ್-ರಷ್ಯನ್ ಕ್ರಾಂತಿಯ ಬಗ್ಗೆ ಎಲ್ಲಾ ಹೇಳುತ್ತಿದ್ದರು. ನನಗೆ ಅಷ್ಟೊಂದು ತಿಳಿಯುತ್ತಿರಲಿಲ್ಲವಾದರೂ ಕುತೂಹಲದಿಂದ ಕೇಳುತ್ತಿದ್ದೆ. ನಮ್ಮ ಶಾಲೆಯಲ್ಲೂ ಓದಿಗೆ ಪೂರಕ ವಾತಾವರಣವಿತ್ತು. ನಾನು ಚಂದಮಾಮ, ಬಾಲಮಿತ್ರ, ಪತ್ರಿಕೆಗಳಲ್ಲಿನ ಮಕ್ಕಳ ಅಂಕಣಗಳು...ಮೊದಲಾದವುಗಳನ್ನು ಓದುತ್ತಲೇ ಬರವಣಿಗೆಯನ್ನೂ ರೂಢಿಸಿಕೊಂಡು ಚಿಕ್ಕ ಚಿಕ್ಕ ಕವನ, ಪ್ರಬಂಧಗಳನ್ನು ಬರೆದು ಶಾಲೆಯ ವಾರ್ಷಿಕ ಸಂಚಿಕೆಗೆ ಕೊಡುತ್ತಿದ್ದೆ. ಎಲ್ಲಾ ಸ್ಪರ್ಧೆಗಳಲ್ಲೂ ಹುರುಪಿನಿಂದ ಭಾಗವಹಿಸಿ ಬಹುಮಾನ ಗಿಟ್ಟಿಸುತ್ತಿದ್ದೆ.

ಮುಂದೆ ಹೈಸ್ಕೂಲಿಗೆ ಬಂದಾಗ ನನ್ನ ಓದಿನ ಹುಚ್ಚಿಗೆ ಸರಿಯಾಗಿ ನಮ್ಮ ಶಾಲೆಯ

ಪಕ್ಕದಲ್ಲೇ ಒಂದು ಸಾರ್ವಜನಿಕ ಗ್ರಂಥಾಲಯವಿತ್ತು. ಬಿಡುವಿನ ವೇಳೆ ಅಲ್ಲಿಂದ ಪುಸ್ತಕ ತಂದು ಓದುತ್ತಿದ್ದೆ. ಮೊದಲು ನಾನು ಓದಿದ್ದು ಉಷಾ ನವರತ್ನರಾಂರವರು ಬರೆದ 'ಹೊಂಬಿಸಿಲು' ಕಾದಂಬರಿ. ಅದು ಸಿನಿಮಾ ಆದಾಗ ಕುತೂಹಲದಿಂದ ಹೋಗಿ ನೋಡಿ ಬಂದಿದ್ದೆ. ಯಾಕೋ ಸಿನಿಮಾಕ್ಕಿಂತ ಕಾದಂಬರಿ ಓದುವಿಕೆಯೇ ಹೆಚ್ಚು ಇಷ್ಟವಾಯಿತು. ನಂತರ ವಿವಿಧ ವಾರ-ಮಾಸ ಪತ್ರಿಕೆಗಳಲ್ಲಿನ ಕಥೆ-ಕಾದಂಬರಿಗಳನ್ನು ಓದುತ್ತಿದ್ದೆ. ಎಚ್.ಕೆ. ಅನಂತರಾವ್, ಸುದರ್ಶನ ದೇಸಾಯಿಯವರ ಕಾದಂಬರಿಗಳನ್ನು ಉಸಿರು ಬಿಗಿಹಿಡಿದು ಓದುತ್ತಿದ್ದೆ. ಹೀಗೆ ಬರೀ ಕಥೆ-ಕಾದಂಬರಿ ಓದುತ್ತಿದ್ದ ನನಗೆ ಕವನಗಳ ಹುಚ್ಚು ಹಿಡಿಸಿದವರು ನಮ್ಮ ಗಣಿತದ ಗುರುಗಳು - 'ಆರ್.ಎಚ್. ಏಕಬೋಟೆ' ಅಂತ. ಅವರು ಒಮ್ಮೆ ಶಾಲಾ ವಾರ್ಷಿಕೋತ್ಸವಕ್ಕೆ ಬೇಂದ್ರೆಯವರ 'ಬೆಳಗು' ಕವನದ ನೃತ್ಯಾಭ್ಯಾಸವನ್ನು ವೀಕ್ಷಿಸುತ್ತಿದ್ದರು. ನಾವು ರಾಗವಾಗಿ ಹಾಡುತ್ತ ಹೆಜ್ಜೆ ಹಾಕುತ್ತಿದ್ದೆವು. ಆಗ ಅವರು ತಟ್ಟನೆ ಅದನ್ನು ನಿಲ್ಲಿಸಿ ಕೇಳಿದರು- "ಈ ಹಾಡಿನ ಅರ್ಥವನ್ನ ಒಂಚೂರು ವಿವರಿಸಿ ಹೇಳ್ರಿ ನೋಡೂಣು?". ನಮಗೆ ಅದನ್ನು ಪೂರ್ತಿಯಾಗಿ ವಿವರಿಸಲು ಸಾಧ್ಯವಾಗಲಿಲ್ಲ. ಇದು ಸೂರ್ಯೋದಯದ ರಮಣೀಯತೆಯನ್ನು ತಿಳಿಸುವ ಕವನವಿರಬಹುದು ಎಂದಷ್ಟೇ ಹೇಳಿ ಸುಮ್ಮನಾದೆವು. ಅವರಾಗ ನಸುನಕ್ಕು ಅದನ್ನು ಸಮಗ್ರವಾಗಿ ವಿವರಿಸಿದಾಗ, ಒಂದು ಕವನ ಇಷ್ಟೆಲ್ಲಾ ಹೇಳಬಲ್ಲದೆ? ರೋಚಕ ಅನುಭವಗಳನ್ನು ಕೊಡಬಲ್ಲದೆ? ಎಂದು ದಿಗ್ಭ್ರಮೆಯಾಯ್ತು! ಜೊತೆಗೆ ಕವನಗಳ ಬಗ್ಗೆ ಕುತೂಹಲವೂ ಕುಡಿಯೊಡೆಯಿತು. ಅಲ್ಲಿಂದ ಶುರುವಾಯ್ತು ಕವನಗಳ ಓದುವಿಕೆ! ಓದುತ್ತ ಹೋದಂತೆಲ್ಲಾ ನಮಗೆ ಬಾಲ್ಯದಿಂದಲೂ ಕಂಠಪಾಠವಾಗಿರುವ ಅನೇಕ ಜನಪದ ಗೀತೆಗಳು ಬೇಂದ್ರೆಯವರು ಬರೆದ ಗೀತೆಗಳೆಂದು ತಿಳಿದಾಗ ಅಚ್ಚರಿಯಾಯ್ತು!

ಹೈಸ್ಕೂಲ್ ಶಿಕ್ಷಣ ಮುಗಿಸಿದ ಮರು ವರ್ಷವೇ ನಮ್ಮ ಮನೆಯ ಸಂಪ್ರದಾಯ (!)ದಂತೆ ತುಂಬ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿ ಹೊಸಪೇಟೆಗೆ ಬಂದಾಗ, 'ಕಾಲೇಜು' ಸೇರಲಿಲ್ಲವಲ್ಲಾ' ಎಂಬ ದುಗುಡ ಮನಸ್ಸನ್ನು ತುಂಬಿತ್ತು. ಆದರೂ ಓದಿನ ಹವ್ಯಾಸವೊಂದು ಗಟ್ಟಿಗೊಳ್ಳ ತೊಡಗಿದ್ದರಿಂದ ಆ ದುಗುಡವನ್ನು ಮರೆತೆ. ಮಕ್ಕಳು-ಮರಿ ಅಂತ ಸಂಸಾರದ ಅನೇಕ ತಾಪತ್ರಯಗಳ ನಡುವೆಯೂ ಓದಿನ ಪ್ರೀತಿಯನ್ನು ಕಾಯ್ದುಕೊಳ್ಳುತ್ತ ಬಂದೆ. ಅದಕ್ಕೆ ನನ್ನವರ ಸಹಕಾರವೂ ಸಾಕಷ್ಟು ದೊರೆಯಿತು. ಒಮ್ಮೆ ಪುಸ್ತಕ ಮೇಳವೊಂದಕ್ಕೆ ಹೋದಾಗ ಮೂರ್ತಿರಾಯರ 'ದೇವರು', ಲಂಕೇಶರ 'ಕಲ್ಲು ಕರಗುವ ಸಮಯ', ತೇಜಸ್ವಿಯವರ ಹಲವಾರು ಪುಸ್ತಕಗಳನ್ನು ಕೊಂಡು ತಂದು ಓದಿದೆ. ಅದರಲ್ಲಿ 'ದೇವರು' ಪುಸ್ತಕ ನನ್ನ ಓದಿನ ಗತಿಯನ್ನೇ ಬದಲಾಯಿಸಿತೆನ್ನಬೇಕು! ಅಲ್ಲಿಂದ ನನಗೆ ಅನಿಸತೊಡಗಿತು-ಓದು ಬರೀ ಮನರಂಜನೆಗಲ್ಲ, ಅದರಾಚೆಗೂ ಅದರ ಆಯಮಾಮಗಳಿವೆ ಅಂತ! ನಂತರ ಜಿ.ಟಿ. ನಾರಾಯಣರಾವ್ ಹಲವಾರು ಪುಸ್ತಕಗಳನ್ನು ತರಿಸಿಕೊಂಡು ಓದಿದೆ. ಎಷ್ಟು ಓದಿದರೂ ತೀರದ ಹಸಿವು! ಕೈಗೆ ಸಿಗುವ ನಾಲ್ಕಾರು ಪುಸ್ತಕಗಳು 'ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎನ್ನುವಂತಾಗುತ್ತಿದ್ದವು! ಇಷ್ಟರಲ್ಲಿಯೇ ನನ್ನ ಆರೋಗ್ಯ ವಿಪರೀತ ಹದೆಗೆಟ್ಟು ಬಹುಕಾಲ ಹಾಸಿಗೆಗೇ ಅಂಟಿಕೊಂಡಿರ

ಬೇಕಾದ ಪರಿಸ್ಥಿತಿ ಯೊದಗಿತು. ಹೊರಜಗತ್ತಿಗೂ-ನನಗೂ ಸಂಪರ್ಕ ಸಂಪೂರ್ಣ ಬಂದ್! ಅಂತಹ ಪರಿಸ್ಥಿತಿಯಲ್ಲಿ ನನ್ನೆಲ್ಲಾ ನೋವುಗಳನ್ನು ಮರೆಯಲು ನೆರವಾದದ್ದು, ಬದುಕಿನ ಸಮಸ್ಯೆಗಳಿಗೆ ಧೈರ್ಯವಾಗಿ ಎದೆಗೊಡುವಂತೆ ಮಾಡಿ ಜೀವನ ಪ್ರೀತಿಯನ್ನು ಉಳಿಸಿದ್ದು, ಸಮಗ್ರ ಬದುಕನ್ನು ನಿರ್ಲಿಪ್ತವಾಗಿ ಅವಲೋಕಿಸಲು ಕಲಿಸಿದ್ದು - ಈ ಓದು; ಮುಂದೆ ಆರೋಗ್ಯ ಸುಧಾರಿಸಿದಂತೆಲ್ಲಾ ಇನ್ನಷ್ಟು ಆಳವಾಗಿ ಓದಿನಲ್ಲಿ ಮುಳುಗಿ ಹೋದೆ, ಮಾತ್ರವಲ್ಲ ಅಲ್ಲಿಯ ವರೆಗೆ ಕೇವಲ ಹವ್ಯಾಸ ಮಾತ್ರವಾಗಿದ್ದ ಬರವಣಿಗೆಯನ್ನು ಗಂಭೀರವಾಗಿ ತೆಗೆದುಕೊಂಡೆ. ನನ್ನ ಬರಹಗಳು ಪತ್ರಿಕೆಗಳಲ್ಲಿ ಪ್ರಕಟವಾಗ ತೊಡಗಿದವು. ಅನೇಕ ಓದುಗರು ಅವನ್ನು ಕುರಿತು ಪತ್ರಗಳನ್ನು ಬರೆಯತೊಡಗಿದರು; ಮುಂದೆ ಡಾ.ಪುರುಷೋತ್ತಮ ಬಿಳಿಮಲೆ ಯವರು ನಮ್ಮ ನೆರೆಮನೆಗೆ ವಾಸಕ್ಕೆ ಬಂದರು. ನನ್ನ ಓದಿನ ಹುಚ್ಚನ್ನು ಗಮನಿಸಿದ ಅವರು, ತಮ್ಮ ಸಂಗ್ರಹದಲ್ಲಿನ ವಿವಿಧ ಬಗೆಯ ಅನೇಕ ಪುಸ್ತಕಗಳನ್ನು ಕೊಡುತ್ತಿದ್ದರು. ಕುವೆಂಪು, ಕಾರಂತ, ಬೇಂದ್ರೆ, ನಿರಂಜನ, ಚದುರಂಗ, ಕುಂವೀ, ಎಷ್ಟೋ ಹಿರಿ-ಕಿರಿಯ ಲೇಖಕರ ಕಥೆ-ಕಾದಂಬರಿ-ಕಾವ್ಯಗಳು, ಸಾಹಿತ್ಯಿಕ ಪತ್ರಿಕೆಗಳು, ಜೀವನ ಚರಿತ್ರೆಗಳು, ವೈಚಾರಿಕ ಬರಹಗಳು, ಸಂಶೋಧನಾ ಪ್ರಬಂಧಗಳು... ಹೀಗೆ ಅಸಂಖ್ಯ ಪುಸ್ತಕಗಳು. ನನ್ನ ನಿಜವಾದ ಓದು ಈಗ ಶುರುವಾಯ್ತೆನ್ನ ಬೇಕು! ಇದಕ್ಕಾಗಿ ಬಿಳಿಮಲೆಯವರಿಗೆ ಎಷ್ಟು ಕೃತಜ್ಞತೆಯನ್ನು ಸಲ್ಲಿಸಿದರೂ, ಸಾಲದು! ಒಂದು ಬಾರಿ ಅವರು ಫ್ರೆಂಚ್ ಲೇಖಕರ ವಿಕ್ಟರ್ ಹ್ಯೂಗೋನ 'ಲಾ ಮಿಸ್‌ರೇಬಲ್' ಕಾದಂಬರಿ ಅನುವಾದಿತ 'ದುಃಖಾರ್ತರು' ಕೊಟ್ಟು ಹೇಳಿದರು- "ಇದನ್ನು ಓದಿ, ಇದು ಅದಮ್ಯ ಜೀವನ ಪ್ರೀತಿಗೆ ಬರೆದ ಭಾಷ್ಯ!" ನಾನು ಓದಿದೆ- ಒಮ್ಮೆಯಲ್ಲ ಎರೆಡೆರಡು ಬಾರಿ! ಆ ಕಾದಂಬರಿಯಲ್ಲಿನ 'ಜೀನ್‌ವೇಲ್‌ಜೀನ್'ನ ಪಾತ್ರ ಅಂತರಂಗದ ಸೌಂದರ್ಯಕ್ಕೊಂದು ಪ್ರತೀಕ ಎಂದುಕೊಂಡೆ ಆ ಪಾತ್ರದ ಔನ್ನತ್ಯಕ್ಕೆ ಬೆರಗಾದೆ! ಟಾಲ್‌ಸ್ಟಾಯ್ ಚಿಂತನಗಳನ್ನು ಇದೇ ಬೆರಗಿನಿಂದ ಓದಿ ಮುಗಿಸಿದೆ. ಬಿಳಿಮಲೆಯವರು ಹೊಸಪೇಟೆ ಬಿಡುವಾಗ ಒಂದು ರಾಶಿ ಪುಸ್ತಕಗಳನ್ನು ನಮ್ಮಲ್ಲಿಯೇ ಬಿಟ್ಟು ಹೋದರು. ಆ ಪುಸ್ತಕಗಳು ಬೆಳೆಸಿದ ಅರಿವು ಅಪಾರ!

ಈಗ ನಾನು ಹಲವಾರು ಪುಸ್ತಕಗಳಲ್ಲದೆ ಸಂಕ್ರಮಣ, ಸಂವಾದ, ವಿಮುಕ್ತಿ, ಮಹಿಳಾ ಅಧ್ಯಯನ, ಕನ್ನಡ ಅಧ್ಯಯನ, ವಿಜ್ಞಾನ, ಸಂಗಾತಿ, ಜಾಗೃತಿ...ಮೊದಲಾದ ಸಾಹಿತ್ಯಿಕ ಪತ್ರಿಕೆಗಳನ್ನು ತರಿಸಿಕೊಂಡು ಓದುತ್ತೇನೆ. ಸಾಹಿತ್ಯಿಕ ಪತ್ರಿಕೆಗಳಲ್ಲಿನ ಅನೇಕ ಹಿರಿ-ಕಿರಿಯ ಲೇಖನಗಳು ಚಿಂತನೆಗೆ ಹಚ್ಚುತ್ತವೆ. ಹೀಗೆ ಚಿಂತನೆಗೆ ಹಚ್ಚುವ ಲೇಖನಗಳು ನನಗಿಷ್ಟ. ಹೈಸ್ಕೂಲಿನಲ್ಲಿದ್ದಾಗಲೇ ನನ್ನ ಮನಸೆಳೆದ ಬೇಂದ್ರೆಯವರ ಕವನಗಳು ಈಗಲೂ ನನಗಿಷ್ಟ. ಅವರ 'ಸಖೀಗೀತ'ವನ್ನು ಅದೆಷ್ಟೋ ಬಾರಿ ಓದಿ ಖುಷಿಪಟ್ಟಿದ್ದೇನೆ. ಅಲ್ಲದೆ ಸಮಕಾಲೀನ ಬರಹಗಾರರಾದ ಸಿ.ಎನ್.ರಾಮಚಂದ್ರನ್, ಬರಗೂರು ರಾಮಚಂದ್ರಪ್ಪ, ಬಿಳಿಮಲೆ, ರಹಮತ್ ತರೀಕೆರೆ, ಶಿವರಾಮಯ್ಯ, ಬಸವರಾಜ ಮಲಶೆಟ್ಟಿ, ರಂಜಾನ್ ದರ್ಗಾ, ಜಿ.ರಾಜಶೇಖರ, ಜಿ.ಎಂ.ಪುಟ್ಟಯ್ಯ, ಎಚ್.ಎಸ್.ಶ್ರೀಮತಿ, ನೇಮಿಚಂದ್ರ, ಶೈಲಜಾ ಹಿರೇಮಠ, ಎಂ. ಉಷಾ. ಮಲ್ಲಿಕಾ ಘಂಟಿ, ಗಾಯತ್ರಿ ನಾವಡ - ಮೊದಲಾದ ಅನೇಕರ ಬರಹಗಳು ನನಗಿಷ್ಟ.

ಜಿ.ಟಿ.ನಾರಾಯಣರಾವ್, ಬಿಳಿಮಲೆ, ತರೀಕೆರೆ, ರಾಮಚಂದ್ರನ್‌ರವರ ಬರಹಗಳು ನನ್ನ ಮೇಲೆ ವಿಶೇಷ ಪ್ರಭಾವ ಬೀರಿವೆ. ವಚನ ಸಾಹಿತ್ಯ ಓದು ನನಗೊಂದು ತಾತ್ವಿಕ ನೆಲೆ ಒದಗಿಸಿದೆ. 'ಮಹಿಳಾ ಅಧ್ಯಯನ'ದಲ್ಲಿನ 'ಮಾತುಕತೆ' ಹಾಗೂ 'ಕನ್ನಡ ಅಧ್ಯಯನ'ದಲ್ಲಿನ 'ಮುಖಾಮುಖಿ', 'ಹಿಂದಣ ಹೆಜ್ಜೆ' ಅಂಕಣಗಳು ಹಾಗೂ ಸಂಪಾದಕೀಯಗಳು ನನಗಿಷ್ಟ. ಸಂಪಾದಕೀಯಗಳಂತೂ ಅನೇಕ ಹೊಳಹುಗಳನ್ನು ನೀಡಬಲ್ಲ ಲೇಖನಗಳಾಗಿರುತ್ತವೆ. ವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ಪುಸ್ತಕ, ಪತ್ರಿಕೆಗಳನ್ನು ತರಿಸಿಕೊಂಡು ಓದುತ್ತೇನೆ. ಅದರಲ್ಲಿ ಜಿ.ಟಿ.ನಾರಾಯಣರಾವ್, ಪ್ರೊ.ಜೆ.ಆರ್. ಲಕ್ಷ್ಮಣರಾವ್, ನಾಗೇಶ ಹೆಗಡೆ... ಮೊದಲಾದವರು ಪರಿಣಾಮಕಾರಿಯಾಗಿ ಬರೆಯುತ್ತಾರೆ. ಲೇಖನಗಳು ವೈಚಾರಿಕತೆಯನ್ನು ಬೆಳೆಸುತ್ತವೆ. ಇದೆಲ್ಲಾ ಸರಿ ಆದರೆ ಅಲ್ಲಿ ಒಂದು ಪ್ರಶ್ನೆ ಏಳುತ್ತದೆ - ಓದು ಎಷ್ಟೇ ಆನಂದ ದಾಯಕ, ಜ್ಞಾನದಾಯಕ ಕಾರ್ಯವಾದರೂ ಬದುಕಿನ ಅನುಭವಗಳೊಂದಿಗೆ ಅನುಸಂಧಾನ ನಡೆಸದಿದ್ದರೆ ಏನು ಪ್ರಯೋಜನ? ಅಂತ. ಸಮಕಾಲೀನ ಸಮಸ್ಯೆಗಳಾದ ಕೋಮುವಾದ, ಮಹಿಳಾ ಶೋಷಣೆ, ದಲಿತರ ಮೇಲಿನ ದೌರ್ಜನ್ಯಗಳು ಮೊದಲಾದವುಗಳಿಗೆ ನಾವು(ಓದುಗರು) ಕುರುಡರೂ ಕಿವುಡರೂ ಆದಾಗ ನಮ್ಮ ಓದಿಗೇನು ಬೆಲೆ? ಇದು ರೋಂ ಹತ್ತಿ ಉರಿಯುತ್ತಿರುವಾಗ ಪಿಟೀಲು ಬಾರಿಸಿದ ನಿರೋನನಷ್ಟೇ ಅಮಾನುಷ. ಪ್ರಜ್ಞಾವಂತ ಓದುಗರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲ.

ಆದ್ದರಿಂದ ನಾನು ಓದುತ್ತೇನೆ - ನನ್ನನ್ನು ನಾನು ಅರಿತುಕೊಳ್ಳುವುದಕ್ಕಾಗಿ, ನನ್ನ ಜ್ಞಾನದ ಕ್ಷಿತಿಜಗಳನ್ನು ವಿಸ್ತರಿಸಿಕೊಳ್ಳುವುದಕ್ಕಾಗಿ ಮಾತ್ರವಲ್ಲ-ಸಮಕಾಲೀನ ವಿದ್ಯಮಾನಗಳಿಗೆ ಸ್ಪಂದಿಸುವದಕ್ಕಾಗಿ, ಸಹ ಮಾನವರ ನೋವಿಗೆ ತುಡಿಯುವುದಕ್ಕಾಗಿ, ಸಮುದಾಯ ಬದುಕಿನ ಮೌಲ್ಯಗಳ ಅನ್ವೇಷಣೆಗಾಗಿ...,

•ವಿ ರಮೇಶ ಕಾರಂತ (ಬ್ಯಾಂಕ್ ಅಧಿಕಾರಿ)

ಮನರಂಜನೆಯಿಂದ ಮನೋವಿಕಸನದೆಡೆಗೆ, ಭಾವುಕತೆಯಿಂದ ಬೌದ್ಧಿಕತೆಯೆಡೆಗೆ, ಕುತೂಹಲದಿಂದ ಗಹನಾಧ್ಯಾಯದ ಕಡೆಗೆ ಕೊಂಡೊಯ್ಯುವುದೇ ಓದಿನ ಮೂರು ಮೆಟ್ಟಿಲುಗಳು. ವಯೋಧರ್ಮಕ್ಕೆ ಅನುಗುಣವಾಗಿ ಸ್ವಭಾವ ಆಸಕ್ತಿಗಳಿಗೆ ತಕ್ಕಂತೆ ಓದುವ ವಿಷಯಗಳಲ್ಲಿ ಬದಲಾವಣೆಯಾಗುತ್ತದೆ. ಜತೆಯಲ್ಲಿ ಬೆಳೆಸಿಕೊಂಡ ಹವ್ಯಾಸ, ತೊಡಗಿಕೊಂಡ ವೃತ್ತಿ, ಜೀವನ ಶೈಲಿಯೂ ಓದಿನ ಮೇಲೆ ಪ್ರಭಾವ ಬೀರುತ್ತದೆ. ಈ ಹಿನ್ನೆಲೆಯಲ್ಲಿ ನನ್ನ ಓದು ಬೆಳೆದು ಬಂದಿದೆ.

ನಾನೊಬ್ಬ ಸಾಮಾನ್ಯ ಓದುಗ. ವೃತ್ತಿಯಲ್ಲಿ ಬ್ಯಾಂಕ್ ಉದ್ಯೋಗಿಯಾಗಿದ್ದು ನಿತ್ಯ ಎರಡು-ಮೂರು ಘಂಟೆಗಳು ಪ್ರಯಾಣದಲ್ಲಿ ಸೋರಿ ಹೋಗುತ್ತಿರುವ ಕಾರಣ ನನ್ನ ಹೆಚ್ಚಿನ ಓದು

ಯಾಣದಲ್ಲಿಯೇ. ನನ್ನ ಆಸಕ್ತಿಯ-ವಿಷಯುಗಳು ಮುಖ್ಯವಾಗಿ ಕನ್ನಡ ಸಾಹಿತ್ಯ ಮತ್ತು ತಿಹಾಸ ಸಂಶೋಧನೆಯಾದರೂ, ಸಾಮಾನ್ಯ ವಿಜ್ಞಾನ, ವೈದ್ಯಕೀಯ ವಿಜ್ಞಾನ, ಶಿಲ್ಪ, ಸಂಗೀತ, ವಾಸ, ಪರಿಸರ, ಪ್ರಕೃತಿ, ವ್ಯಕ್ತಿ-ವಿಚಾರ-ಭಾಷೆ ಮುಂತಾದವುಗಳು ನನ್ನ ಕುತೂಹಲ ಕೆರಳಿಸುವ ಸಕ್ತಿಗಳು. ಹೀಗೆ ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ಯಾರೇ ಬರೆದ ಲೇಖನ ಪುಸ್ತಕಗಳು ಕ್ಕಿಲಿ, ಅರ್ಥವಾಗಲಿ ಬಿಡಲಿ ಓದುತ್ತಿರುತ್ತೇನೆ. ನನ್ನ ಗ್ರಹಣ ಶಕ್ತಿಗೆ ಅಳವಿಗೆ ಸಿಕ್ಕ ವಿಷಯ ಳು ಮನಸ್ಸಿಗೆ ಗ್ರಾಹ್ಯವಾಗಿ ನೆನಪಿನ ಕೊಳದಲ್ಲಿ ಉಳಿಯುತ್ತವೆ. ಇಲ್ಲವಾದರೆ ಮರೆತು ೋಗುತ್ತದೆ ಎಂಬ ನಿರ್ಲಿಪ್ತ ಧೋರಣೆ ನನ್ನದು. ಆದರೂ ಸಂಗ್ರಾಹ್ಯವಾದುದು ಎಂದೆನಿಸಿದಲ್ಲಿ ದುವಾಗಲೇ ಪುಸ್ತಕದಲ್ಲಿ ಗುರುತಿನ ಚೀಟಿಯಿರಿಸಿ ನಂತರ ಬರೆದಿಡುತ್ತೇನೆ. ಇದು ಸಗಲ್ಲದಿದ್ದರೂ ಯಾರಿಗಾದರೂ ಉಪಯೋಗವಾದೀತು ಎಂಬ ಆಶಯದಿಂದ.

ನನ್ನ ವಿದ್ಯಾರ್ಥಿ ದೆಸೆಯಲ್ಲಿ ಓದಿದಷ್ಟು ಕಾದಂಬರಿಗಳನ್ನು ನಂತರ ಓದಿಲ್ಲ. ಆಗಲೂ ವಿ.ಅಯ್ಯರ್ ಕಾರಂತ ಭೈರಪ್ಪ ದೇವುಡುರವರ ಕಾದಂಬರಿಗಳು, ಅಡಿಗರ ಮೂರು-ನಾಲ್ಕು ನುವಾದಿತ ಕಥಾಗುಚ್ಛ ಕಾದಂಬರಿಗಳು, ಕುವೆಂಪುರವರ ಎರಡು ಕಾದಂಬರಿಗಳು, ಅನುವಾದಿತ ಷ್ಯನ್ ಕಥೆಗಳು ನನ್ನನ್ನು ಸೆಳೆದವು. ಇದರಂತೆ ಇತರ ಲೇಖಕರ ಕಾದಂಬರಿಗಳು ನನ್ನನ್ನು ಯಲೇ ಇಲ್ಲ. ಈಗಲೂ ಪತ್ರಿಕೆಯಲ್ಲಿ ಬರುವ ಕಿರುಕಥೆಗಳು ನನ್ನನ್ನು ಸೆಳೆಯುವುದಿಲ್ಲ. ರಂತರ ಕಾದಂಬರಿಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳು ಕಣ್ಣಿಗೆ ಕಟ್ಟುವ ಪ್ರಕೃತಿ ಸರದ ಯಥಾವತ್ ಚಿತ್ರಣ, ಜನಸಾಮಾನ್ಯರ ಭಾವನೆಗಳ ಪ್ರತಿಫಲನ; ಭೈರಪ್ಪನವರ ದಂಬರಿಗಳ ತರ್ಕಬದ್ಧ ವೈಚಾರಿಕತೆ, ಭಾವಪೂರ್ಣ ಅಭಿವ್ಯಕ್ತಿ; ಕೆ.ವಿ.ಅಯ್ಯರ್ ಹಾಗೂ ವುಡುರವರ ಬರಹದ ಶೈಲಿ, ಅವರ ಕಾದಂಬರಿಗಳನ್ನು ಮತ್ತೆ ಮತ್ತೆ ಓದಬೇಕೆನ್ನಿಸುತ್ತದೆ. ಯ್ಯರ್‌ರ 'ರೂಪದರ್ಶಿ', ದೇವುಡುರವರ 'ಮಹಾಕ್ಷತ್ರಿಯ'ವನ್ನು ಹಲವು ಬಾರಿ ಓದಿದ್ದೇನೆ. ಯಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರ 'ಕೃಷ್ಣಾವತಾರ' ಸಂಪುಟಗಳು, ಹಾಸ್ಯ ಬರಹಗಳಲ್ಲಿ ಪಂ, ಕಾರಂತ, ರಾಶಿ, ಭುವನೇಶ್ವರಿ ಹೆಗಡೆ ಮುಂತಾದವರ ಕೃತಿಗಳು. ಬೇಂದ್ರೆಯವರ ಷಣಗಳು, ಕವಿತೆಗಳು, ಕಾಳೇಗೌಡ ನಾಗವಾರರ ಸಂಪಾದಕತ್ವದಲ್ಲಿ ಬಂದ ಲೋಹಿಯಾ ಹಗಳ ಸಂಪುಟ, ಮ ನ ಜವರಯ್ಯ, ಲಕ್ಕಪ್ಪಗೌಡರ ಅಂಬೇಡ್ಕರ ಬಗೆಗಿನ ಪುಸ್ತಕಗಳು ನ್ನು ಆಕರ್ಷಿಸಿವೆ. ಇತಿಹಾಸ ಶಾಸನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಧ್ಯಯನದ ದೃಷ್ಟಿಯಿಂದ ಓದಿನ ಹರವು ಇತ್ತೀಚೆಗೆ ಹೆಚ್ಚುತ್ತಿದೆ. ದಿಕ್ಸೂಚಿ, ಬಾಲವಿಜ್ಞಾನ, ವಿಜ್ಞಾನ ಸಂಗಾತಿ, ಗ್ಲೀಷ್ ಪತ್ರಿಕೆಗಳ ವಿಜ್ಞಾನ ಹಾಗೂ ಆರೋಗ್ಯ ಪುರವಣಿಗಳನ್ನು ಓದುತ್ತಿರುತ್ತೇನೆ.

ಏನನ್ನಾದರೂ ಬರೆಯಬೇಕೆಂಬ ಉದ್ದೇಶದಿಂದ ನಾನು ಓದುವುದಿಲ್ಲವಾದ ಕಾರಣ ಓದಿಗೆ ಖಚಿತ ರೂಪು ಕೊಡಲಾಗದು. ಅಲ್ಲದೆ ಯಾವೊಂದು ಬಗೆಯ ಕೃತಿಯನ್ನು ವೆ ಯಾವೊಬ್ಬರೇ ಲೇಖಕರ ಪುಸ್ತಕಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳದಿರುವಿಕೆಯು ತಂತ್ರ್ಯ ಉಂಟಾಗಿದೆ. ಇನ್ನು ಓದಿದ್ದಕ್ಕೆ ಪ್ರತಿಕ್ರಿಯಿಸಬೇಕು ಎಂದೆನ್ನಿಸಿದಲ್ಲಿ ಇಲ್ಲವೆ ವುದೋ ಒಂದು ವಿಷಯ ಮನಸ್ಸನ್ನು ಸೆಳೆದು ಮಾಹಿತಿ ಅಪೂರ್ಣವೆನ್ನಿಸಿದಲ್ಲಿ, ಆ ಷಯದ ಬಗೆಗೆ ಸಿಗುವ ಇತರ ಪುಸ್ತಕಗಳನ್ನು ಹುಡುಕುತ್ತೇನೆ. ಇಲ್ಲವಾದಲ್ಲಿ ಗ್ರಂಥಾಲಯ

ಗಳಲ್ಲಾಗಲಿ ಪುಸ್ತಕ ಮಳಿಗೆಗಳಲ್ಲಾಗಲಿ, ನನ್ನ ಆಸಕ್ತಿಗೆ ಸಂಬಂಧಿಸಿದ ಕಣ್ಣಿಗೆ ಕಂಡ ಮನಕ್ಕೊಪ್ಪಿದ ಪುಸ್ತಕವನ್ನು ಆರಿಸಿ ಓದುತ್ತೇನೆ.

ಕನ್ನಡದಲ್ಲಿ ಶಿವರಾಮ ಕಾರಂತ, ಪೂರ್ಣಚಂದ್ರ ತೇಜಸ್ವಿ, ಜಿ.ಪಿ.ರಾಜರತ್ನಂರಂತೆ ಜ್ಞಾನದ ಎಲ್ಲಾ ಭಾಗಗಳನ್ನು ಕನ್ನಡದಲ್ಲಿ ತರಬೇಕೆಂದು ಮುಂದಾಗಿ ತಾವೇ ಬರೆದವರು ವಿರಳ. ಪರಿಸರ ವಿಜ್ಞಾನದ ಮೇಲೆ ಸಂಬಂಧಿಸಿದಂತೆ ಮೊದಲಿಬ್ಬರ ಕೊಡುಗೆ ಅಪಾರವೆ. ತೇಜಸ್ವಿಯವರ 'ಪುಸ್ತಕ ಪ್ರಕಾಶನ'ದ ಹಲವಾರು ಕೃತಿಗಳು ಹೀಗಾಗಿ ನನ್ನ ಬಳಿ ನಿಂತಿವೆ. ರಾಜರತ್ನಂ ಶಾಕ್ಯ ಸಾಹಿತ್ಯ ಮಂಟಪದ ಮೂಲಕ ಕನ್ನಡ ಸಾಹಿತ್ಯಕ್ಕೆ ಪ್ರಾಕೃತ ಪಾಲಿ ಭಾಷೆಗಳಿಂದ ಅನುವಾದಿಸಿ ಕೊಟ್ಟ ಬೌದ್ಧ-ಜೈನ ಸಾಹಿತ್ಯ ರಾಶಿ, ಎಲ್ಲಾ ವಯೋಮಾನದವರಿಗೆ ತಕ್ಕಂತೆ ಬರೆದ ನೂರಾರು ಹಿರಿ-ಕಿರಿಯ ಪುಸ್ತಕಗಳು 'ಭ್ರಮರ' 'ರಶ್ಮಿ'ಯಂತಹ ವೈಚಾರಿಕ ಲೇಖನ ಸಂಗ್ರಹಗಳು, ಅವರನ್ನನುಸರಿಸಿ ಅವರ ಸಾಹಿತ್ಯ ಪರಿಚಾರಿಕೆಯನ್ನು ಮುನ್ನಡೆಸಿಕೊಂಡು ಬರುವ ಶ್ರೀಮತಿ ಶೈಲಾ ಶ್ರೀಧರರಿಂದಾಗಿ ರಾಜರತ್ನಂ ಪುಸ್ತಕಗಳು ಸಾಕಷ್ಟು ನನ್ನ ಬಳಿ ಸೇರಿವೆ.

ಕನ್ನಡದಲ್ಲಿ ಪುಸ್ತಕಗಳ ಪ್ರಕಟಣೆ ಎಂದಿಗಿಂತ ಇಂದು ಹೆಚ್ಚಾಗಿದ್ದರೂ ಪ್ರವಾಸ ಸಾಹಿತ್ಯ, ವಿಜ್ಞಾನಗಳ ಬಗೆಗೆ ಹೊರಬರುವ ಪುಸ್ತಕಗಳ ಸಂಖ್ಯೆ ಕಡಿಮೆಯೆನ್ನಿಸುತ್ತದೆ. ಜತೆಯಲ್ಲಿಯೇ ಉಪಲಬ್ಧವಿರದ ಪ್ರಾಚೀನ ಸಾಹಿತ್ಯ ಕೃತಿಗಳ, ಗಣಿತ, ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯಕ್ಕೆ ಸಂಬಂಧಿಸಿದ ನಮ್ಮ ಹಿರಿಯರ ಗ್ರಂಥಗಳ ಪುನರ್ಮುದ್ರಣವಾಗಿ ಓದುಗರ ಕೈಗೆಟಕುವಂತಾದಲ್ಲಿ ಇವುಗಳ ಪರಿಚಯ ಈ ತಲೆಮಾರಿನವರಿಗೆ ದೊರಕುವಂತಾದೀತು.

ಒಟ್ಟಿನಲ್ಲಿ ನನ್ನ ಓದು ನನ್ನ ಆಸಕ್ತಿಗೊಂದು ರೂಪು ನೀಡಿದೆ. ಅದಕ್ಕೊಂದು ಗೊತ್ತು ಗುರಿಯನ್ನು ತೋರಿದೆ. ತಾಡವಾಲೆ ಹಾಗೂ ಇತರ ಹಸ್ತಪ್ರತಿಗಳನ್ನು ಓದುವಲ್ಲಿ ಪರಿಶ್ರಮವಿದ್ದ ಕಾರಣ, ಇತಿಹಾಸ ಸಂಶೋಧನೆ ಹವ್ಯಾಸವಾಗಿ ನನ್ನಲ್ಲಿ ಬೆಳೆದಿದೆ. ಹೀಗಾಗಿ ನನ್ನ ಹವ್ಯಾಸವಾದ ಬೆಳವಣಿಗೆಗೆ ಪೂರಕವಾಗುವಂತಹ ಗ್ರಂಥಗಳ ಓದು ಈಗ ನನ್ನದಾಗುತ್ತಿದೆ. ನನ್ನ ಅರಿವಿನ ಇತಿ-ಮಿತಿಯನ್ನು ತೋರಿ ಅದರ ಹರವನ್ನು ಹಿಗ್ಗಿಸಲು ಈ ನನ್ನ ಓದು ನನಗೆ ನೆರವಾಗುತ್ತಿದೆ. ●

•ಗಿರೀಶ್ ವಿ. ವಾಘ್ (ಅಂಕಣಕಾರ)

ನಾನು ಸಾಹಿತ್ಯ ಕೃತಿಗಳನ್ನು (ಮುಖ್ಯವಾಗಿ ಕತೆ-ಕಾದಂಬರಿಗಳನ್ನು) ಮನರಂಜನೆ ಪಡೆಯುವುದಕ್ಕಾಗಿ ಮತ್ತು ಮನುಷ್ಯ ಜೀವನದ ಬಗ್ಗೆ ಹೊಸ ಹೊಳವುಗಳನ್ನು ಪಡೆಯುವುದಕ್ಕಾಗಿ ಓದುತ್ತೇನೆ. ನನ್ನ ಸುತ್ತಲಿನ ಜನಜೀವನದ ಆಗು-ಹೋಗುಗಳನ್ನು ಅರ್ಥಮಾಡಿಕೊಳ್ಳಲು ಬೇರೆ ಬೇರೆ ಕ್ಷೇತ್ರದ ತಜ್ಞರ ಬರಹಗಳನ್ನು ಓದುವ ಅಭ್ಯಾಸವನ್ನೂ ನಾನು ಇಟ್ಟುಕೊಂಡಿದ್ದೇನೆ. ನನಗೆ ಓದುವುದು ಒಂದು ಚಟ.

ಮೇಲೆ ಹೇಳಿದ ಮನರಂಜನೆ ಮತ್ತು ಹೊಸ ಒಳನೋಟಗಳಿಗಾಗಿ, ನಾನು ಇಲ್ಲಿ ನನಗೆ

ಮೆಚ್ಚುಗೆಯಾದ ವಸುಮತಿ ಉಡುಪ ಮತ್ತು ಕೆ.ಸತ್ಯನಾರಾಯಣರ ರಚನೆಗಳನ್ನು ಉದಾಹರಿಸಬಹುದು. ವಸುಮತಿ ಉಡುಪ ಅವರ ಕತೆಗಳು, ಅವುಗಳಲ್ಲಿರುವ ಸಮರ್ಥವಾದ ಕಥಾ ನಿರೂಪಣೆ, ಪಾತ್ರಗಳು ಮತ್ತು ಸನ್ನಿವೇಶಗಳ ಚಿತ್ರಣ ಮುಂತಾದ ಅಂಶಗಳಿಂದಾಗಿ ಸರಾಗವಾಗಿ ಓದಿಸಿಕೊಂಡು ಮನಸ್ಸಿಗೆ ಮುದ ನೀಡುತ್ತವೆ. ಆದರೆ ಅವುಗಳನ್ನು ಓದಿದ ಸ್ವಲ್ಪ ಕಾಲದ ನಂತರ ಮರೆತೂ ಹೋಗುತ್ತವೆ. ಅದೇ ಕೆ.ಸತ್ಯನಾರಾಯಣ ಅವರ 'ಮಾರ್ಕ್ ಟುಲಿ ಹೇಳಬೇಕಾಗಿ ಬಂದ ಶ್ರೀ (ದಲಿತ) ರಾಮಚಂದ ಕತೆ', 'ಲೋಕನಾಯಕರ ಮೇಲುಕೋಟೆ ಪುರಾಣ', ದಂತಹ ಕಥೆಗಳು ನನಗೆ ನನ್ನ ಸುತ್ತಲಿನ ವ್ಯಕ್ತಿಗಳ ಬಗ್ಗೆ ಹಾಗೂ ಜೀವನದ ಬಗ್ಗೆ ಚಿಂತಿಸುವಂತೆ ಮಾಡುತ್ತವೆ. ಸತ್ಯನಾರಾಯಣ ಅವರ ಕಥೆಗಳ ಕಥಾ ನಿರೂಪಣೆ 'ಕಾಣಿಸುವ' ('ಶೋಯಿಂಗ್') ಬಗೆಯದಲ್ಲ, ಬದಲಿಗೆ 'ಹೇಳುವ' ('ಟೆಲ್ಲಿಂಗ್') ಬಗೆಯದು. ನನಗೆ ವಾಸ್ತವದಲ್ಲಿ 'ಕಾಣಿಸುವ' ಬಗೆಯ, 'Evocation of Time and Place' ಇರುವ ಕೃತಿಗಳೇ ಇಷ್ಟ. ಹೇಗಿದ್ದರೂ ನನಗೆ ಸತ್ಯನಾರಾಯಣ ಅವರ ಕಥೆಗಳಲ್ಲಿ ಮನುಷ್ಯರ ವಿಶಿಷ್ಟ ವ್ಯಕ್ತಿತ್ವ, ಅನುಭವಗಳ ಬಗ್ಗೆ ಇರುವ ಪ್ರಾಮಾಣಿಕ ಕುತೂಹಲ ಮತ್ತು ಅದನ್ನು ಅವರು ಮುಕ್ತ ಮನಸ್ಸಿನಿಂದ ನಿರೂಪಿಸುವ ರೀತಿ ಬಹಳ ಇಷ್ಟ.

ನಾನು ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವಾಗಿ ಶಾಲಾ ಕಾಲೇಜುಗಳಲ್ಲಿ ಓದಿದವನಲ್ಲ. ಸುಮಾರು ಹತ್ತೊಂಬತ್ತನೇ ವಯಸ್ಸಿನ ತನಕ ನನಗೆ ಸಾಹಿತ್ಯವನ್ನು ವಿಶೇಷವಾಗಿ ಓದಿದವರ ಅಥವಾ ಅದರಲ್ಲಿ ವಿಶೇಷ ಅಭಿರುಚಿ ಬೆಳೆಸಿಕೊಂಡವರ ಸಂಪರ್ಕ ಇರಲಿಲ್ಲ. ಅಂದರೆ ನಾನೊಬ್ಬ ಅಪ್ಪಟ ಸಾಮಾನ್ಯ ಓದುಗ. ೬೦ರ ದಶಕದಲ್ಲಿ ಬಂದ ನವ್ಯ ಕಥೆ ಕಾದಂಬರಿಗಳು ಸಾಮಾನ್ಯ ಓದುಗರನ್ನು ಕನ್ನಡ ಸಾಹಿತ್ಯದಿಂದ ದೂರ ಮಾಡಿದವು ಎಂಬುದು ಕಳೆದ ಸುಮಾರು ಮೂರು ದಶಕಗಳಿಂದ ನಮ್ಮ ಸಾಹಿತ್ಯ ಕ್ಷೇತ್ರದ ಜನರು ಹೇಳುತ್ತಾ ಬಂದಿರುವ ಮಾತು. ಆದರೆ ನನ್ನನ್ನು ಕನ್ನಡ ಕಥಾ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ವಹಿಸುವಂತೆ ಮಾಡಿದ್ದು ಇದೇ ನವ್ಯ ಸಾಹಿತ್ಯ. ನನ್ನಲ್ಲಿ ಈ ಬದಲಾವಣೆಯಾದದ್ದು ಸುಮಾರು ೬೯ನೇ ಇಸವಿಯಿಂದ ೭೨ನೇ ಇಸವಿಯ ನಡುವೆ ಎಂದು ನೆನಪು.

ಅದಕ್ಕೂ ಮುಂಚೆ ಯಾವುದನ್ನು 'ಜನಪ್ರಿಯ ಸಾಹಿತ್ಯ' ಎಂದು ಗುರುತಿಸಲಾಗುತ್ತದೆಯೋ, ಅದರ ಓದಿನಲ್ಲೇ ನಾನು ಮುಳುಗಿದ್ದೆ. ಪಠ್ಯೇತರ ಪುಸ್ತಕಗಳನ್ನು ಓದುವುದಕ್ಕೆ ನಮ್ಮ ಮನೆಯಲ್ಲಿ ವಿರೋಧವಿರಲಿಲ್ಲ. ನಾನು ೧೧-೧೨ನೇ ವಯಸ್ಸಿನಿಂದಲೇ ಲೈಬ್ರರಿಗೆ ಹೋಗಿ ಓದುವ ಅಭ್ಯಾಸ ಬೆಳೆಸಿಕೊಂಡಿದ್ದೆ. ನನಗೆ ಈಗಲೂ ನೆನಪಿರುವಂತೆ ೬೩ ಇಸವಿಯಲ್ಲಿ (ಆಗ ಹದಿಮೂರು ವರ್ಷ) 'ಗೋಕುಲ' ವಾರ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಗುತ್ತಿದ್ದ ತ್ರಿವೇಣಿಯವರ 'ಶರಪಂಜರ' ಕಾದಂಬರಿಯನ್ನು ಓದಲು ಪ್ರತಿ ವಾರ ಲೈಬ್ರರಿಗೆ ಹೋಗುತ್ತಿದ್ದೆ. (ಈ ಕಾದಂಬರಿ ಪ್ರಕಟವಾಗುತ್ತಿದ್ದಾಗಲೆ ತ್ರಿವೇಣಿಯವರು ನಿಧನರಾದರು. ಅದೇ ವರ್ಷ ಎಂ.ಕೆ. ಜಯಲಕ್ಷ್ಮಿ ಎಂಬ ಆಗ ತಾನೆ ಪ್ರಸಿದ್ಧಿಗೆ ಬರುತ್ತಿದ್ದ ಇನ್ನೊಬ್ಬ ಕಾದಂಬರಿಗಾರ್ತಿಯೂ ನಿಧನರಾದರು). ನನಗೆ ಈಗ ನೆನಪಾಗುವ ಆಗಿನ ಕೆಲವು ಕೃತಿಗಳೆಂದರೆ 'ಪ್ರಜಾವಾಣಿ'ಯಲ್ಲಿ

ಧಾರಾವಾಹಿಯಾಗಿ ಪ್ರಕಟವಾದ ಎಂ.ಕೆ. ಇಂದಿರಾ ಅವರ 'ಗೆಜ್ಜೆಪೂಜೆ'. 'ಸುಧಾ' ವಾರ ಪತ್ರಿಕೆಯಿಂದ ಬಹುಮಾನ ಪಡೆದು ಪ್ರಕಟವಾದ ಭಾರತೀಸುತರ 'ಎಡಕಲ್ಲು ಗುಡ್ಡದ ಮೇಲೆ'. ಆ ಕಾಲದಲ್ಲಿ ನಾನು ಓದಿದ ವ್ಯಾಸರಾಯ ಬಲ್ಲಾಳರ 'ಅನುರಕ್ತೆ' ನನಗೆ ತ್ರಿವೇಣಿಯವರ ಕಾದಂಬರಿಗಳಿಗಿಂತ ಚೆನ್ನಾಗಿದೆ ಎಂದು ಅನಿಸಿತ್ತು.

ಆಗ ನಾನು ಇಂಗ್ಲೀಷಿನಲ್ಲಿ ಎಡ್ಗರ್ ವಾಲೇಸಂ, ಜೇಮ್ಸ್ ಹ್ಯಾಡ್ಲೆ ಚೇಸ್ ಮುಂತಾದವರ ಪತ್ತೇದಾರಿ ಕಾಂದಬರಿಗಳು ಮತ್ತು ಪಿ.ಜಿ.ವುಡ್‌ಹೌಸ್, ಸಮರ್ ಸೆಟ್ ಮಾಮ್, ಜಾನ್ ಓಹಾರಾ, ಹೆರಾಲ್ಡ್ ರಾಬಿನ್ಸ್ ಮುಂತಾದವರ ಕಾದಂಬರಿಗಳನ್ನು ಓದುತ್ತಿದ್ದೆ. ಎಮಿಲಿ ಬ್ರಾಂಟೆಯ 'ವೂದರಿಂಗ್ ಹೈಟ್ಸ್'ನಂತಹ ಮೌಲಿಕ ಕೃತಿಗಳನ್ನು ಓದಿದ್ದೆ.

ಸುಮಾರು ೬೯-೭೦ರಲ್ಲಿ 'ಸಂಸ್ಕಾರ' ಚಲನಚಿತ್ರದ ಬಗ್ಗೆ ವಿವಾದ ಹುಟ್ಟಿಕೊಂಡಾಗ ಅನಂತಮೂರ್ತಿಯವರ ಹೆಸರು ನನ್ನ ಗಮನಕ್ಕೆ ಬಂತು. ಪ್ರಾಯಶಃ ಅದೇ ಸಮಯದಲ್ಲಿ ನನಗೆ ಮಾವಿನಕೆರೆ ರಂಗನಾಥನ್ ಅವರ ಸಂಪಾದಕತ್ವದಲ್ಲಿ ಪ್ರಕಟವಾದ 'ದಿಗಂತ' ಎಂಬ ಕಥಾ ಸಂಕಲನ ಸಿಕ್ಕಿತು. ಅದರಲ್ಲಿ ಅನಂತಮೂರ್ತಿಯವರ 'ಪ್ರಕೃತಿ' ಮತ್ತು ಯಶವಂತ ಚಿತ್ತಾಲರ 'ಸೆರೆ' ಕತೆಗಳಿದ್ದವು. ಅವು ನನಗೆ ಬಹಳ ಇಷ್ಟವಾದವು. ಅವುಗಳಲ್ಲಿ ಸನ್ನಿವೇಶಗಳನ್ನು ಓದುಗನ ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ ರೀತಿ, Evocation of Time and Place ನನಗೆ ಬಹಳ ಮೆಚ್ಚುಗೆಯಾಯಿತು. ನಂತರ ನಾನು ಅನಂತಮೂರ್ತಿಯವರ 'ಪ್ರಶ್ನೆ' ಮತ್ತು ಚಿತ್ತಾಲರ 'ಅಬೋಲಿನಾ' ಕಥಾ ಸಂಕಲನಗಳನ್ನು ಓದಿದೆ. ರಸವತ್ತಾದ ಸಾಹಿತ್ಯ ಅಂದರೆ ಇದೇ ಎಂದು ಅನ್ನಿಸಿತು. ನಾನು ಅದವರೆಗೆ ಓದಿದ್ದ ಕನ್ನಡ ಕೃತಿಗಳಲ್ಲಿ ಇಷ್ಟು ದಟ್ಟವಾದ ವಿವರಗಳಾಗಲಿ ಬಿಗಿಯಾದ ಬಂಧವಾಗಲಿ ಇರಲಿಲ್ಲ. ಅವುಗಳಲ್ಲಿ ಪಾತ್ರಗಳ ಮತ್ತು ಸನ್ನಿವೇಶಗಳ ಬಗ್ಗೆ ಇರುತ್ತಿದ್ದ ಅಲ್ಪ ಸ್ವಲ್ಪ ವಿವರಗಳಿಂದ ನಾನೇ ನನ್ನ-ಕಲ್ಪನೆಯಿಂದ ಒಂದು ಜಗತ್ತನ್ನು ಸೃಷ್ಟಿ ಮಾಡಿಕೊಳ್ಳುತ್ತಿದ್ದೆ. ಅದಕ್ಕೆ ಸಾಹಿತ್ಯ ಕೃತಿ ಒಂದು ನೆಪ ಮಾತ್ರವಾಗಿತ್ತು ಎಂದು ಆಗ ನನಗೆ ಅನ್ನಿಸಿತು.

೧೯೭೨ರ ಸುಮಾರಿನಲ್ಲಿ ಮೂರ್ತಿಯವರ 'ಪ್ರಜ್ಞೆ ಮತ್ತು ಪರಿಸರ' ಹಾಗೂ ಎಂ.ಜಿ. ಕೃಷ್ಣಮೂರ್ತಿಯವರ ಲೇಖನಗಳ ಸಂಗ್ರಹ, ನನಗೆ ಕಥಾ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಲು ಸಹಾಯ ಮಾಡಿದುವು. ಕನ್ನಡದ ಅನೇಕ ಮುಖ್ಯ ಕೃತಿಗಳ ಕಡೆಗೂ ನನ್ನ ಗಮನವನ್ನು ಈ ಕೃತಿಗಳು ಸೆಳೆದವು. ಅನಂತಮೂರ್ತಿಯವರ ಲೇಖನಗಳಿಂದ ನಮ್ಮ ಸಮಾಜ ದಲ್ಲಿ ಜಾತಿ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಮನಗಂಡೆ. ನಾನು ಬೆಂಗಳೂರಿನಲ್ಲಿ ಬ್ರಾಹ್ಮಣೇತರ ನವ ಶ್ರೀಮಂತರು ಮತ್ತು ಉತ್ತರ ಭಾರತೀಯರೇ ಹೆಚ್ಚಾಗಿದ್ದ ಬಡಾವಣೆಯಲ್ಲಿ ಒಂದು 'ನಾನ್ ಪ್ರಾಕ್ಟೀಸಿಂಗ್' ಬ್ರಾಹ್ಮಣ ಕುಟುಂಬದಲ್ಲಿ (ಕೊಂಕಣಿ ಭಾಷಿಕ ಸ್ಮಾರ್ತ ಗೌಡ ಸಾರಸ್ವತ ಪಂಗಡದಲ್ಲಿ) ಬೆಳೆದವನಾದ್ದರಿಂದ, ನನಗೆ ಜಾತಿ ವ್ಯವಸ್ಥೆಯ ಒಳಗು-ಹೊರಗುಗಳು ಬಗ್ಗೆ ತಿಳಿದಿರಬೇಕಾದಷ್ಟು ತಿಳಿದಿರಲಿಲ್ಲ.

ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಮುಖ್ಯ ಕೃತಿಗಳೆಂದು ಗುರುತಿಸಲಾಗಿರುವ ಕುವೆಂಪು ಅವರ

ಎರಡು ಕಾದಂಬರಿಗಳು, ಕಾರಂತರ 'ಮರಳಿ ಮಣ್ಣಿಗೆ' ಮಿರ್ಜಿ ಅಣ್ಣಾರಾಯ 'ನಿಸರ್ಗ', ರಾವ್‌ಬಹಾದ್ದೂರರ 'ಗ್ರಾಮಾಯಣ', ಎಸ್.ಎಲ್. ಭೈರಪ್ಪನವರ 'ಗೃಹಭಂಗ' ಮುಂತಾದ ಕೃತಿಗಳು ಇಷ್ಟವಾಗಿವೆ. ಇವುಗಳ ಜೊತೆಗೆ ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ', ನಾ.ಕಸ್ತೂರಿಯವರ 'ಚಕ್ರದೃಷ್ಟಿ'. ನಿರಂಜನರ 'ರಂಗಮ್ಮನ ವಠಾರ', ಕುಸುಮಾಕರ ದೇವರಗೆಣ್ಣೂರರ 'ನಾಲ್ಕನೇ ಆಯಾಮ', ತೇಜಸ್ವಿಯವರ 'ಜುಗಾರಿ ಕ್ರಾಸ್', ಸುನಂದಾ ಬೆಳಗಾಂವ್‌ಕರ್ ಅವರ 'ಝುವಾದಿ', ಕೆ.ಸತ್ಯನಾರಾಯಣ ಅವರ 'ಸನ್ನಿಧಾನ' - ಮುಂತಾದ ಕೃತಿಗಳೂ ಇಷ್ಟವಾಗಿವೆ. ನನಗೆ ಇಷ್ಟವಾದ ಕಥೆಗಾರರ ಪಟ್ಟಿ ದೊಡ್ಡದಿದೆ. ಜಿ.ಎಚ್. ನಾಯಕರಿಂದ ಮತ್ತು ಇತ್ತೀಚೆಗೆ ರಾಮಚಂದ್ರ ಶರ್ಮರಿಂದ ನ್ಯಾಷನಲ್ ಬುಕ್ ಟ್ರಸ್ಟಿಗಾಗಿ ಸಂಪಾದಿಸಲ್ಪಟ್ಟ ಕಥಾ ಸಂಕಲನಗಳಲ್ಲಿರುವ ಬಹುತೇಕ ಕತೆಗಾರರು ನನ್ನ ಮೆಚ್ಚಿನ ಕತೆಗಾರರಾಗಿದ್ದಾರೆ.

ಎಪ್ಪತ್ತರ ದಶಕದಲ್ಲಿ ನನಗೆ ಅನಂತಮೂರ್ತಿ ಮತ್ತು ಯಶವಂತ ಚಿತ್ತಾಲರು ಐವತ್ತು ಮತ್ತು ಅರವತ್ತರ ದಶಕದಲ್ಲಿ ಬರೆದ ಕೃತಿಗಳು ಬಹಳ ಇಷ್ಟವಾಗಿದ್ದವು. ಹಾಗಾಗಿ ಆಗ ಅವರು ನನ್ನ 'ಫೇವರೆಟ್' ಬರಹಗಾರರಾಗಿದ್ದರು. ಆದರೆ ಈಗ ನನಗೆ ಒಬ್ಬ ಕೃತಿಕಾರನ ಒಂದೆರಡು ಕೃತಿಗಳು ಇಷ್ಟವಾಗುತ್ತವೆ. ಆದರೆ ಇನ್ನು ಕೆಲವು ಇಷ್ಟವೇ ಆಗುವುದಿಲ್ಲ. ಹೀಗಾಗಿ ಈಗ ನನಗೆ ತುಂಬಾ 'ಫೇವರೆಟ್' ಎಂದು ಹೇಳಬಹುದಾದ ಲೇಖಕರಾರೂ ಇಲ್ಲ. ನಾನು Reflective (ಆಲೋಚನಾ ಪರವಾದ ಎಂದು ಹೇಳಬಹುದೇನೋ) ಮನೋಧರ್ಮದವನಾದ್ದರಿಂದ, ಈ ಮನೋಧರ್ಮಕ್ಕೆ ಪೂರಕವಾದ ಕೃತಿಗಳೇ ನನಗೆ ಇಷ್ಟ. ಇದಕ್ಕೆ ನಮ್ಮ ಕಥಾ ಸಾಹಿತ್ಯದಿಂದ ಉದಾಹರಣೆಯನ್ನು ಕೊಡಬೇಕಾದರೆ ಅನಂತಮೂರ್ತಿಯವರ 'ಪ್ರಶ್ನೆ' ಕಥಾ ಸಂಕಲನದಲ್ಲಿರುವ 'ಪ್ರಕೃತಿ', ಕಾರ್ತೀಕ' ಮತ್ತು 'ಪ್ರಸ್ತ' ಕತೆಗಳು, ರಾಘವೇಂದ್ರ ಖಾಸನೀಸರ 'ತಬ್ಬಲಿಗಳು' ಕಥೆ; ಮೇಲೆ ಹೆಸರಿಸಿರುವ ಕೆ.ಸತ್ಯನಾರಾಯಣ ಅವರ ಕಥೆಗಳು ಹಾಗೂ ಯಶವಂತ ಚಿತ್ತಾಲರ 'ಮೂರು ದಾರಿಗಳು' ಕಾದಂಬರಿ ಇವರನ್ನು ಹೆಸರಿಸಬಹುದು.

ಸಾಹಿತ್ಯ ಕೃತಿಗಳನ್ನು ಓದುವುದರಷ್ಟೆ ಮಟ್ಟಿಗೆ ಸಾಹಿತ್ಯ ಚಿಂತನೆಯ (ವಿಮರ್ಶೆ ಎಂಬ ಪದಕ್ಕೆ ಬದಲಾಗಿ ಸಾಹಿತ್ಯ ಚಿಂತನೆ ಎಂಬ ಮಾತನ್ನು ಬಳಸಬೇಕೆಂದು ಈಚೆಗೆ ಒಬ್ಬ ವಿದ್ವಾಂಸರು ಹೇಳಿದ್ದಾರೆ. ಅವರ ಮಾತು ಸರಿ ಎಂದು ನನ್ನಗನ್ನಿಸಿದೆ) ಬರಹಗಳನ್ನು ಓದುವ ಅಭ್ಯಾಸವೂ ನನಗಿದೆ. ಕಳೆದ ಎರಡು ದಶಕಗಳಲ್ಲಿ ನನಗೆ ಬಹಳ ಮೆಚ್ಚುಗೆಯಾದ ಕೆಲವು ಸಾಹಿತ್ಯ ಚಿಂತಕರೆಂದರೆ ಸಿ.ಎನ್.ರಾಮಚಂದ್ರನ್. ಕೆ.ವಿ.ನಾರಾಯಣ, ಡಿ.ಆರ್. ನಾಗರಾಜ್ ಹಾಗೂ ರಹಮತ್ ತರೀಕೆರೆ ಅವರು.

●

•ಹುರುಕಡ್ಲಿ ಶಿವಕುಮಾರ (ರೈತ)

ನಾನೇಕೆ ಓದುತ್ತೇನೆ? ಎಂಬ ಪ್ರಶ್ನೆಗೆ ಉತ್ತರವನ್ನು ಹೀಗೆ ಹೇಳಬಯಸುವೆ. ನಾನಾಗ ಪ್ರೌಢ ಶಾಲಾ ವಿದ್ಯಾಭ್ಯಾಸದ ನಂತರ ರಜೆಯಲ್ಲಿ ಊರಲ್ಲಿದ್ದೆ. ಊರಿನ ಗುಡ್ಡ ಬೆಟ್ಟ, ಹಕ್ಕಿ ಪಕ್ಕಿಗಳು, ಹೊಳೆ ಹಳ್ಳಗಳು ಒಂದು ಬಗೆಯ ಸಂತೋಷ ನೀಡುತ್ತಿದ್ದವು, ಊರಿನ ಒಟ್ಟಾರೆ ಜನ ಜೀವನದೊಳಗಿನ ಕೂಡಿ ಬಾಳುವ ಅಂತರ್ಗತ ತತ್ವ ನನಗೆ ಮತ್ತೊಂದೇ ಬಗೆಯ ಸಂತೋಷ ನೀಡುತ್ತಿತ್ತು. ಆದರೆ ಈ ಸಂತೋಷವನ್ನು ವಿಕಸಿಸುವ ಉತ್ತೇಜಿಸುವ ಬೆಂಬಲ ನನಗೆ ದೊರೆತೇ ಇರಲಿಲ್ಲ. ಹೀಗಾಗಿ ನನ್ನ ಬಾಲ ಮನಸ್ಸು ಒಳಗೊಳಗೇ ಮುರುಟತೊಡಗಿತ್ತು. ಅಂಥ ಸಂದರ್ಭದಲ್ಲಿ ಒಂದು ದಿನ ತೀರ ಆಕಸ್ಮಿಕವಾಗಿ ನನಗೆ ಕುವೆಂಪು ಅವರ 'ನವಿಲು' ಕವನ ಸಂಗ್ರಹ ಸಿಕ್ಕಿತು. ಈ ಸಂಕಲವನ್ನು ಓದುತ್ತಾ ಹೋದಂತೆ ನಾನು ಅನುಭವಿಸಿದ ಅನುಭೂತಿಯನ್ನು ಪದಗಳಲ್ಲಿ ವಿವರಿಸಿ ಹೇಳುವುದು ಕಷ್ಟ! ಬೆಂಬಲ ಅನ್ನಬಹುದೇ? ರೋಮಾಂಚನ ಅನ್ನಬಹುದೆ? ಮಾನಸಿಕ ಬಿಡುಗಡೆ ಅನ್ನಬಹುದೆ? ಏನೋ ಒಟ್ಟಿನಲ್ಲಿ ಅದು ನನಗೆ ಅತ್ಯಂತ ಸಂತೋಷವನ್ನು ನೀಡಿದ ಅನುಭವವಾಗಿತ್ತು.

ಆ ಸಂತೋಷದಲ್ಲಿ ನಾನು ಕುವೆಂಪು ಅವರ ಎಲ್ಲ ಕೃತಿಗಳನ್ನೂ ಓದಲು ಹಾತೊರೆದೆ. ಹಾಗೇ ಓದುತ್ತಾ ಹೋದಾಗ ಕುವೆಂಪು ಅವರ ಕಾದಂಬರಿಗಳು ನನ್ನ ಅರಿವನ್ನು ವಿಸ್ತರಿಸಿದವು. ಅವರ ಕಥೆ - ನಾಟಕಗಳು ಜೀವನದ ವಾಸ್ತವವನ್ನು ಬಿಡಿಸಿ ಹೇಳಿದವು. ಭಾಷಣ-ಲೇಖನಗಳು ಮಾನಸಿಕ ಪ್ರಬುದ್ಧತೆಯನ್ನು ನೀಡಿದವು. 'ರಾಮಾಯಣ ದರ್ಶನಂ' ಕಾವ್ಯವಂತೂ ನನಗೆ ನನ್ನ ಜೀವನದ ಗುರಿಯನ್ನೇ ನಿಗದಿಪಡಿಸಿ ಬಿಟ್ಟಿತು!! ಹೀಗೆ ಕುವೆಂಪು ಅವರ ಬದುಕು ಮತ್ತು ಬರಹಗಳ ಅಭ್ಯಾಸದಿಂದ ನನ್ನ ಬದುಕಿನ ಸ್ವರೂಪವೇ ಬದಲಾಗಿ ಹೊಚ್ಚ ಹೊಸ ತಾಗಿಬಿಟ್ಟಿತು.

ನಂತರ ಹೊಸಗನ್ನಡ ಸಾಹಿತ್ಯವನ್ನೆಲ್ಲಾ ಓದಿದೆ. ಸರಕು ಸರಬರಾಜು ಮಾಡುವ ಲಾರಿ ಸಂಸ್ಥೆಯಲ್ಲಿ ನಾನಾಗ ಉದ್ಯೋಗಿಯಾಗಿದ್ದೆ. ಆದ್ದರಿಂದ ಆ ಗೋಜಲಿನಲ್ಲಿ ಪಂಪ, ರನ್ನ, ಕುಮಾರವ್ಯಾಸ ರನ್ನು ಓದಲಾಗಲೇ ಇಲ್ಲ. ಆದರೂ ವಚನ ಸಾಹಿತ್ಯ (ಮುಖ್ಯವಾಗಿ ಬಸವಣ್ಣ) ಮತ್ತು ಜಾನಪದ ಸಾಹಿತ್ಯವನ್ನಾದರೂ ಓದಲು ಸಾಧ್ಯವಾಯಿತು.

ಮತ್ತೆ ಈ ಲಾರಿ ಆಫೀಸಿನ ಕೆಲಸ ಬಿಟ್ಟು, ಹಳ್ಳಿಗೆ ಹೋಗಿ ರೈತನಾಗಿ ಬದುಕುತ್ತಿರುವೆ. ಇಂದಿನ ದಿನಗಳಲ್ಲಿ ನಾನು ಓದಿಗೆ ಆಯ್ಕೆ ಮಾಡಿಕೊಳ್ಳುತ್ತಿರುವ ಪುಸ್ತಕಗಳೆಂದರೆ ಕುವೆಂಪು, ಕಾರಂತ, ಬೇಂದ್ರೆ, ಲಂಕೇಶ್, ತೇಜಸ್ವಿ ಅವರ ಕೃತಿಗಳು. ಕಾರಣವೇನೆಂದರೆ ಈ ಲೇಖಕರ ಸಾಹಿತ್ಯದಲ್ಲಿ ನಮ್ಮ ಬದುಕಿನ ಬಗ್ಗೆ ಒಂದು ಪೂರ್ಣದೃಷ್ಟಿ ಲಭಿಸುತ್ತದೆ. ನಮ್ಮ ಊರಿನಲ್ಲಿ ಕಂಡು ಬರುವ ಸಾಮಾಜಿಕ ಅಸಮಾನತೆಗಳು, ಮೂಢನಂಬಿಕೆಯ ಅವಾಂತರಗಳು ಮುಂತಾದ

ಪಿಡುಗುಗಳನ್ನು ನಿವಾರಿಸಿ ಅದಕ್ಕೆ ಪರ್ಯಾಯವಾಗಿ ಎಂಥ ಬದುಕು ಉತ್ತಮ ಎಂಬುದನ್ನು ಸ್ಪಷ್ಟವಾಗಿ ಹೇಳುವುದು ಕುವೆಂಪು ಮತ್ತು ಕಾರಂತರ ಸಾಹಿತ್ಯದ ಹೂರಣವಾಗಿದೆ. ನಮ್ಮ ಹಳ್ಳಿಯಲ್ಲೇ ಪ್ರತಿದಿನವೂ ಒಂದಲ್ಲ ಒಂದು ಜಗಳ ಇದ್ದೇ ಇರುತ್ತದೆ. ಈ ಎಲ್ಲಾ ಜಗಳಗಳಿಗೆ ಕಾರಣವಾಗುವ ಅಜ್ಞಾನ ಅಲ್ಪ ಮತೀಯತೆಗಳನ್ನು ಕಂಡಾಗ, ಜಗಳಗಳಲ್ಲಿ ಭಾಗಿಯಾದವರಿರಲಿ ಜಗಳಗಳನ್ನು ಬಗೆಹರಿಸುವ ಹಳ್ಳಿಯ ವಕೀಲರು ಹಾಗೂ ನ್ಯಾಯಾಧೀಶರಾದರೂ, ಕುವೆಂಪು ಕಾರಂತ ಸಿದ್ಧಲಿಂಗಯ್ಯ ದೇವನೂರು ಮಹಾದೇವರ ಸಾಹಿತ್ಯ ಓದಿದ್ದರೆ ಎಷ್ಟೊಂದು ಚೆನ್ನಾಗಿತ್ತಲ್ಲ! ಅಂತ ಅನ್ನಿಸುತ್ತಿದೆ. ಏಕೆಂದರೆ ಹಳ್ಳಿಯ ಜಗಳಗಳನ್ನು ಬಗೆಹರಿಸುವ ಮುಖಂಡರು ಕೂಡ ತಮ್ಮ ಜ್ಞಾನದ ಮಿತಿಯಿಂದ ಘಟಿಸಿದ ಘಟನೆಗಳನ್ನು ಮತ್ತಷ್ಟು ಜಟಿಲಗೊಳಿಸಿ ಬಿಡುತ್ತಾರೆ. ಹೀಗಾಗಿ ಜಗಳಗಳಲ್ಲಿ ಭಾಗಿಯಾದ ಅಮಾಯಕರು ಮತ್ತೆ ಮತ್ತೆ ಅನ್ಯಾಯಕ್ಕೆ ಒಳಗಾಗಿ ಮನುಷ್ಯತ್ವವನ್ನೇ ಕಳೆದುಕೊಂಡು ಬಿಡುತ್ತಿದ್ದಾರೆ.

ಅಂಥದೊಂದು ಪ್ರಯತ್ನವನ್ನು ನಾನು ನಮ್ಮ ಹಳ್ಳಿಯಲ್ಲಿ ಗ್ರಂಥಾಲಯದ ಮುಖಾಂತರ ಮಾಡಲೆತ್ನಿಸಿದೆ. ಆಗ ಅಂತರ್‌ರಾಷ್ಟ್ರೀಯ ಗ್ರಂಥಾಲಯ ತಜ್ಞರಾದ ಡಾ.ಕೆ.ಎಸ್. ಉಮಾಪತಿಯವರು ಸಂಪೂರ್ಣ ಬೆಂಬಲ ನೀಡಿದರು. ಅದರ ಫಲವಾಗಿ ನಮ್ಮ ಊರು ಓದುಗರ ಊರಾಗಿ ಮಾರ್ಪಡುತ್ತಿದೆ. ಎಲ್ಲ ಊರುಗಳೂ ಹೀಗಾದರೆ ಎಷ್ಟೊಂದೂ ಚೆನ್ನ! ಎಂದು ಅನ್ನಿಸುತ್ತಿದೆ.

●

•ಪಿ ಅನಂತಕೃಷ್ಣ (ಜೀವವಿಮಾ ಅಧಿಕಾರಿ)

ನಾನೇಕೆ ಓದುತ್ತೇನೆ? ಈ ಪ್ರಶ್ನೆಯನ್ನು ನನ್ನಲ್ಲಿ ನಾನು ಕೇಳಿಕೊಂಡಿರಲಿಲ್ಲ. ಆದರೂ ವಿದ್ಯೆಯ ಸಂಕೇತವಾದ ಓದು - ಬರಹದ ಜತೆಗೆ ಈ ಜಾಡ್ಯ ನನಗಂಟಿಕೊಂಡಿದೆ ಎಂದು ತಿಳಿಯುತ್ತೇನೆ. ಬಹುಶಃ ಯಾಕೆ ಓದುತ್ತೇನೆಂದು ತಿಳಿಯುವುದಕ್ಕೇ ಓದುತ್ತೇನೆ. ಸಮಯ-ಸಂದರ್ಭಗಳು ಮಾನದೊಂದಿಗೆ ಮಿಳಿತವಾದಾಗ, ಕಲಿಸಿದ ಗುರುಗಳನ್ನು ನೆನೆಯುತ್ತ ಓದುತ್ತೇನೆ.

ಹ್ಞಾಂ! ಗುರುಗಳೆಂದಾಗ ಅವರು ನನಗೆ ಉರು ಹೊಡೆಸಿದ್ದ - "ಓದದ ಬಾಯಮೃತಾನ್ನವ ಮೋದದ ಬಾಯಿ.....ಮೇದಿನಿಯೊಳ್ ಬಿಲದಬಾಯಿ" ನೆನಪಾಯ್ತು. ಬಿಲದಬಾಯಾಗದಿರಲೆಂಬ ಬಯಕೆಯಿಂದ ಓದಿಗೆ ಬಾಯ್ಬಿರೆದೆನೇನೊ? ಮೊದಲು ಪರೀಕ್ಷೆಗಾಗಿ. ಆಮೇಲೆ ಯಾಕೋ ಏನೋ ಏನನ್ನೋ, ಅಂತೂ ಸಿಕ್ಕಿದ್ದನ್ನು ಓದುತ್ತಿದ್ದೆ. ಬರೆಯುವವರು- 'ಓದ ಬಲ್ಲವರೆಲ್ಲ ಓದಲೆಂದೇ' ಬರೆಯುವಾಗ ಅದನ್ನೋದದೆ ಅವರಿಗೆ ಅವಮಾನ ಮಾಡಲೆಂತು? ಅಂತೆಯೇ ನಾನು ಓದುವುದೇಕೆಂದು ಬರೆಯುವುದು ಕಷ್ಟ.

ದಿನಪತ್ರಿಕೆಯಿಂದ ಮೊದಲ್ಗೊಂಡು ಮಹಾಕಾವ್ಯಗಳವರೆಗೆ - ಕಾವ್ಯ, ವಿಮರ್ಶೆ, ಕಥೆ, ಕವನ ಕಾದಂಬರಿ, ಕಾಡುಹರಟೆ ಹೀಗೆ ಏನೇನನ್ನೊ| ಓದಿದಾಗ ಯಾಕೆ ಓದಿದೆನೆಂದು

ಪ್ರಶ್ನಿಸಿಕೊಳ್ಳುವುದು - ಅದರಲ್ಲೇನಿದೆ ಅಂತ ತಿಳಿಸಿದಷ್ಟು ಸುಲಭವಲ್ಲ. ಓದು ಒಂದು ವ್ಯಸನ ಸುರಾಪಾನ ಧೂಮ್ರಪಾನಗಳಂತೆ. ಯಾಕೆ ಓದಬೇಕೆಂಬ ಪ್ರಶ್ನೆಯೇ ಅಸಂಗತವೆನ್ನುವಷ್ಟು ಮಟ್ಟಿನ ಚಟ. ಅದು ಅಥವಾ-ನಾನೇಕೆ ಓದುತ್ತೇನೆಂದು ತಿಳಿಯಬೇಕಾದರೆ ನೀನೂ ಓದು ದೊಳಿತೆಂಬ ಜಾಣ್ಮೆಯೇ ಅದಕ್ಕೆ ಉತ್ತರವಾಗಬಲ್ಲುದಲ್ಲವೇ? ಬೇರೇನೂ ನನಗೆ ಈ ನಿಟ್ಟಿನಲ್ಲಿ ತೋಚದು.

ಯಾರ ಪುಸ್ತಕಗಳನ್ನೋದಲಿ!? ಓದುವವನಿಗೆ ಯಾರಾದರೇನು? ಭಾಷೆ ಜಾತಿ ಲಿಂ ಮುಂತಾದುವನ್ನು ದೃಷ್ಟಿಯಲ್ಲಿಟ್ಟುಕೊಂಡು ಓದುವವನಿಗೆ ನಷ್ಟವೇ ಹೆಚ್ಚೆಂದು ಎಲ್ಲೋ ಓದಿದ ನೆನಪು. ಉತ್ತಮ ಲೇಖನ, ಸುಂದರ ಕಲೆ, ಮಧುರ ಸಂಗೀತ, ಆಹ್ಲಾದವೀ ನೆಮ್ಮದಿಯ ತಾಣ, ಕನಸು ಕಾಣುವ ಪುಟ್ಟ ಕಂಗಳಷ್ಟೆ! ಚೆಂದ. ಲೇಖಕನ ವಿಚಾರಗಳ ವಾಚಕನ ಯೋಜನೆಗಳೊಂದಿಗೆ ಹೊಸ ಅನುಭವ ಆಯಾಮಗಳನ್ನೊದಗಿಸಿದರೆ ಆ ಓದ ಸಾರ್ಥಕ. ಕೆಲವೊಮ್ಮೆ ಒಂದೇ ವಿಚಾರವನ್ನು (ಲೇಖನವನ್ನು) ಪದೇಪದೇ ಓದಬೇಕೆಂದೆ ಸುತ್ತದೆ. ಆಗ ಅಯ್ಯರ್‌ರವರ 'ರೂಪದರ್ಶಿ'ಯ ಅನುಭವದಂತೆ ಒಮ್ಮೆ ಕಂಡದ್ದು ಇನ್ನೊಮ್ಮೆ ಬೇರೆಯಾಗಿಯೇ ಕಾಣಿಸಿತು. ಉದಾ: 'ಮೈಸೂರು ಮಲ್ಲಿಗೆ'ಯ ಕವನದ ಸಾಲುಗಳ ಶಾಲ ದಿನಗಳ ಅನುಭವಕ್ಕೂ ಸಾಂಸಾರಿಕ ಅನುಭವಕ್ಕೂ ಅಜ-ಗಜ ಅಂತರವಿಲ್ಲವೇ? ಅಂತಹ ಹೊಸ ಅನುಭೂತಿಗಾಗಿ ಆಗಾಗ ಓದಬೇಕಾಗುತ್ತದೆ-ಓದುತ್ತೇನೆ.

ಪಂಪನ ಬನವಾಸಿಯ ನೆನಪಿನಂತೆ ನಮ್ಮ ಓದಿನ ಅನುಭವವೂ ಅನನ್ಯ. ಕಲ್ಪನೆ ಕನಸುಗಳು, ಕಾವ್ಯಮಯ ಭಾಷಾ ವೈಭವ, ವಿಚಾರವಂತರೊಂದಿಗಿನ ಭಾವಗಳ ಹಂಚಿಕೆ ಸುಗಂಧ ಪುಷ್ಪದೊಡನಾಡುವ ಮಂದಾನಿಲನ ಮಾದಕತೆಯಂತೆ ಅವರ್ಣನೀಯ, ಅಪ್ಯಾಯ ಮಾನ, ಬೆಲ್ಲ-ಸಕ್ಕರೆ-ಜೇನು-ಎಲ್ಲವೂ ಸಿಹಿಯೇ. ಆದರೂ ಒಂದೊಂದರದೂ ಒಂದೊಂದ ರುಚಿ-ವಾಸನೆ. ಹಾಗೇ ನೋಡಿದರೆ ಕವಿಗಳೂ ಕುಸುಮಗಳಂತೆ. ಬಣ್ಣ-ವಾಸನೆ-ಆಕಾರಗಳಲ್ಲಷ್ಟೆ ಅಂತರ. ಸುವಾಸನಾಯುಕ್ತ ಕುಸುಮಗಳಿಗೆ ಪ್ರಸಿದ್ಧಿ-ಪ್ರಾಮುಖ್ಯತೆ. ಆದರೆ ಆಕಾರ ಓಜಸ್ಸು ತೇಜಸ್ಸುಗಳಿಂದ ಸೂರೆಗೊಳ್ಳುವ ಕುಸುಮಗಳೂ ಬಹಳ. ಅಂತೆಯೇ ದುರ್ಗಂಧವೀವ ಪುಷ್ಪಗಳು ಇಲ್ಲದಿಲ್ಲ. ಕೆಲವು-ಹಲವು ಕಾಲ (ಸಂಬಂಧಿಕರಂತೆ) ನೆನಪಲ್ಲಿ ಉಳಿಯುತ್ತವೆ. ಹಲವು- ಬಹ ಬೇಗ (ಸಂತೆಯಲಿ ಕಂಡ ಆಗಂತುಕರಂತೆ) ಮರೆತು ಹೋಗುತ್ತವೆ. ಎಲ್ಲ ಭಾಷೆ, ಪ್ರಾಂತ ಳಿಂದಲೂ ಶ್ರೇಷ್ಠ ಲೇಖಕರ ಪರಿಚಯ ನಮಗಾಗಬಹುದು.

ಕನ್ನಡ ಭಾಷಾ ವಾಚಕನಿಗೆ ಅನೇಕ ಪ್ರಕಾರಗಳ ಕೊಡುಗೆ ಸಿಗುತ್ತದೆ. ವೈಚಾರಿಕ ಉದ್ದಿ ಪನಕ್ಕೆ, ಭಾವಸ್ಫುರಣಕ್ಕೆ, ಭಾಷಾ ಬಂಧಕ್ಕೆ, ರಸಾಸ್ವಾದದ ಹಲವು ಆಯಾಮಗಳಿಗನುಸಾರವಾ ನವರಸಯುಕ್ತ ರಸದೌತಣ ನಮಗೆ ಸಿದ್ಧಿಸಿದೆ. ಆದರೆ ಅಲ್ಲಿ-ಊಟದ ಸಮಯದಲ್ಲಿ-ಅನ್ನ ಸಾರು-ಪಾಯಸ-ಕಜ್ಜಾಯ-ಚಟ್ನಿ-ಉಪ್ಪಿನಕಾಯಿಗಳಲ್ಲಿ ಯಾವುದು ಮುಖ್ಯ? ಎಲ್ಲವೂ ಅಲ್ಲವೇ ದೇಹದ ಬೆಳವಣಿಗೆಯೊಂದಿಗೆ ಬೌದ್ಧಿಕ ವಿಕಾಸವಾಗುವ ಎಲ್ಲವನ್ನೂ ನಾವು ಓದಬೇಕು ಅನಿಕೇತನ ಚೇತನ ಸ್ವರೂಪಿ ವಿಶ್ವ ಮಾನವರಾಗೋಣವೆಂಬ ಕರೆಯಿದ್ದಾಗ್ಯೂ, ಸಿದ್ಧಿಸುವು

ಸಾಧ್ಯವಾಗಿ ನಾವು ಸೋತಿಲ್ಲವೇ? ಅಂತೆಯೇ "ಕ್ರಿಯಾಸಿದ್ಧಿ: ಸತ್ವೆ, ಭವತ್ ಮಹತಾನೋ ಪಕರಣೆ" ಅಂತ ಅನುಕರಣೀಯ ವರ್ಚಸ್ಸು-ವ್ಯಕ್ತಿತ್ವಗಳು ಅಲಭ್ಯವಾಗಿ 'ಭಾವ ಬರ'ವೂ ನಮಗೆ ಕಾಡಬಹುದಲ್ಲವೇ? ಆದ್ದರಿಂದ, ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ನಡಾವಳಿ, ಕಲೆ-ಸಾಹಿತ್ಯ ವಿಜ್ಞಾನ, ಸಂಗೀತ, ಪರಂಪರೆಗಳ ಪರಿಚಯವೀವ ವಿಮರ್ಶೆ-ಕತೆಗಳಿಷ್ಟ ನನಗೆ. ಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆ, ಸಾಮಾಜಿಕ ನ್ಯಾಯಗಳ ಬಗ್ಗೆ ಬರುವ ಕಾದಂಬರಿ ನೀಳ್ಗತೆಗಳೇ ನಮ್ಮ ಬಂಡವಾಳ. ನಲುಗುತ್ತಿರುವ ಭಾಷೆ, ಕರಗುತ್ತಿರುವ ಸಂಸ್ಕೃತಿ, ಕಾಣಸಿಗದ ನಮ್ಮತನ, ಮರೆತ ಸಾಮಾಜಿಕ ಮೌಲ್ಯಗಳನ್ನು ಮತ್ತೆ ಕಳಕಳಿಯಿಂದ ಜಾಗೃತಗೊಳಿಸಬಲ್ಲ ಲಲಿತಪ್ರಬಂಧಗಳು, ಕವನ-ಕಾವ್ಯಗಳು ಖುಷಿ ಕೊಡುತ್ತವೆ.

ಈ ಕಾರಣಕ್ಕಾಗಿ ಪಂಪ, ಲಕ್ಷ್ಮೀಶ, ರನ್ನ, ಮುದ್ದಣ, ಕುವೆಂಪು, ನಾರಣಪ್ಪ, ಬೇಂದ್ರೆ, ಶ್ರೀನಿವಾಸ, ಬಸವಣ್ಣ, ಡಿ.ವಿ.ಜಿ, ಶಿವರುದ್ರಪ್ಪ, ನಿಸಾರ್ ಅಹಮದ್, ಲಕ್ಷ್ಮಣರಾವ್, ಕಣವಿ, ಕೆ.ಎಸ್. ನರಸಿಂಹ ಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಕಾರಂತ ಹೀಗೆ ಪಟ್ಟಿ ಬೆಳೆದಷ್ಟೂ ನೆನಪಾಗುವ ಲೇಖಕರು-ಲೇಖನಗಳು ನನ್ನ ಮುಂದೆ ನಿಲ್ಲುತ್ತವೆ. 'ಜೈಮಿನಿ ಭಾರತ'ದ ಮಧುರ ಗೇಯತೆ, ಆನಂದ ಅನ್ಯ ಕಾವ್ಯಗಳಲ್ಲಿ ನನಗೆ ಸಿಕ್ಕಿಲ್ಲ. ಅಂತೆಯೇ 'ಶ್ರೀ ರಾಮಾಶ್ವಮೇಧಂ'ನ ಗದ್ಯದ ಗತ್ತನ್ನು ಬೇರೆಲ್ಲೂ ನಾನು ಆಸ್ವಾದಿಸಿಲ್ಲ. ಆದರೂ ಬಸವಣ್ಣನವರ ಜೀವನ ಸಿದ್ಧಾಂತ, ಡಿ.ವಿ.ಜಿಯವರ ಚಿಂತನಗಳೆಲ್ಲವೂ ನನಗೆ ಪ್ರಿಯವಾಗುತ್ತದೆ. ಪುಟ್ಟಪ್ಪನವರ ಗದ್ಯದ ಗಂಭೀರತೆಯನ್ನೂ ಮರೆಯಲಾರೆ. ಜಾನಪದರ ವಿಶೇಷ ಜೀವನ ರೀತಿ-ರಿವಾಜುಗಳ ಅಲಿಖಿತ ದಾಖಲೆಗಳೂ ನಮ್ಮ ಚಿಂತನೆಗಳೊಂದಿಗೆ ಬೆಸೆದಾಗ ನಾವು ಓದಿನಿಂದ ಪಡೆದುದೆಷ್ಟೆಂದು ಹೇಗೆ ಹೇಳಲಿ? ಲಾಗಾಯ್ತಿನಿಂದ ಇಂದಿನವರೆಗೆ ಹೊಸತನದ ಹರಹಿನೊಂದಿಗೆ ನಮ್ಮೊಡನಾಡುವ ಪುಸ್ತಕದ ಗೀಳು (ಚಟ) ಬಿಡದೆ ಅಂಟಿಕೊಳ್ಳುವುದೇ ಸತ್ಯ.

ಕೊನೆಗೆ ನನ್ನ ತಿಳಿವಿಷ್ಟು-ಓದಿಗೆ ಆರಂಭ ಮಾತ್ರ; ಅಂತ್ಯವಿಲ್ಲ. ಹಾಗಾಗಿ 'ಅಂತ್ಯ'ದವರೆಗೆ ಓದುವ ಶಕ್ತಿ ನನಗೆ ಬರಲಿ.

●

•ಡಾ. ಮಿರ್ಜಾಬಷೀರ್ (ಪಶುವೈದ್ಯ)

ನಾನು ಸಾಹಿತ್ಯವನ್ನು ವ್ಯವಸ್ಥಿತವಾಗಿ ಓದಿದವನೇನೂ ಅಲ್ಲ. ನನ್ನ ಕಾರ್ಯಕ್ಷೇತ್ರವೇ ಬೇರೆ. ಕಾರ್ಯಕ್ಷೇತ್ರಕ್ಕೂ ಸಾಹಿತ್ಯಕ್ಕೂ ಸಂಬಂಧದೇನಿಲ್ಲ. ನಾನು ಸಾಹಿತ್ಯ ಲೋಕಕ್ಕೆ ಓದುಗನಾಗಿ ಕಾಲಿಟ್ಟದ್ದೇ ವಿಸ್ಮಯ. ನನ್ನ ಪದವಿ ಪೂರ್ವ ತರಗತಿಯಲ್ಲಿ ಪಠ್ಯವಾಗಿದ್ದ ಕಾರಂತರ 'ನಮ್ಮ ಅಳತೆಯನ್ನು ಮೀರಲಾರದ ದೇವರು' ಎಂಬ ಬರಹ ನನ್ನ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಕಾರಂತರ 'ಬಾಳ್ವೆಯೇ ಬೆಳಕು' ಪುಸ್ತಕವೇ ನಾನು ಓದಿದ ಪ್ರಥಮ ಪಠ್ಯೇತರ ಪುಸ್ತಕ. ಅದೇ ಸಮಯದಲ್ಲಿ ನಾನಿದ್ದ ಊರಿನಲ್ಲಿ ವಾಚನಾಲಯ ಪ್ರಾರಂಭವಾಗಿ

ಕಾರಂತರ ಪುಸ್ತಕಗಳೆಲ್ಲ ನನಗೆ ಓದಲು ಸಿಕ್ಕಿದ್ದು, ಎಂದೆಂದೂ ಮರೆಯಲಾಗದ ಅನುಭವ. ಹೀಗೆ ಪುಸ್ತಕ ಪ್ರಪಂಚಕ್ಕೆ ಪ್ರವೇಶಿಸಿ ಸಾಹಿತ್ಯದಲ್ಲಿ ಅಭಿರುಚಿ ಬೆಳೆಸಿಕೊಂಡ ನನಗೆ ಕಾರಂತರಲ್ಲದೆ ಕುವೆಂಪು, ಮಾಸ್ತಿ, ಡಿವಿಜಿ, ರಾಜರತ್ನಂ, ಬೀಚಿ, ಬೇಂದ್ರೆ, ಅನಂತಮೂರ್ತಿ, ಲಂಕೇಶ್, ಅಡಿಗ, ರಾಮಾನುಜನ್, ಆಲನಹಳ್ಳಿ ಕೃಷ್ಣ, ಗಿರೀಶ್ ಕಾರ್ನಾಡ್, ತೇಜಸ್ವಿ ಚಂಪಾ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ ಮುತಂದಾದವರ ಪುಸ್ತಕಗಳನ್ನು ವಾಚನಾಲಯಗಳಲ್ಲಿ ಓದಿದ್ದಷ್ಟೇ ಅಲ್ಲ, ನೂರಾರು ಪುಸ್ತಕಗಳನ್ನು ಖರೀದಿಸಿ ಮನೆಯನ್ನು ಮಿನಿ ಲೈಬ್ರರಿ ಮಾಡಿಕೊಳ್ಳತೊಡಗಿದೆ. ಅದೇ ಸಮಯದಲ್ಲಿ, ಲ೦ರ ದಶಕದಲ್ಲಿ ಪ್ರಾರಂಭವಾದ 'ಲಂಕೇಶ್ ಪತ್ರಿಕೆ' ನನ್ನ ಜೀವನದ ಅವಿಭಾಜ್ಯ ಅಂಗವೇ ಆಗಿ ಹೋಯಿತು. ಕಾರಂತರ ನಂತರ ನನಗೆ ಲಂಕೇಶ್ ಒಬ್ಬರೇ ಅತ್ಯಂತ ಆಪ್ತ ಬರಹಗಾರರಾಗಿದ್ದು. 'ಲಂಕೇಶ್ ಪತ್ರಿಕೆ' ಪ್ರಾರಂಭವಾಗುವ ಮುಂಚೆಯೇ ಅವರ ಅದುವರೆಗಿನ ಎಲ್ಲ ಸಾಹಿತ್ಯವನ್ನು ಓದಿದ್ದ ನನಗೆ, ಅವರ 'ಅವ್ವ' ಕವನವು ವಿಶೇಷ ಪ್ರಭಾವ ಬೀರಿತ್ತು. ಅವರ ಕಾದಂಬರಿಗಳು, ಸಣ್ಣ ಕತೆಗಳು, ನಾಟಕಗಳು ಹಾಗೂ ನಾನು ಅನೇಕ ಸಲ ಓದಿರುವ ಅನುವಾದಗಳಾದ 'ಪಾಪದ ಹೂವುಗಳು' 'ದೊರೆ ಈಡಿಪಸ್ ಮತ್ತು ಅಂತಿಗೊನೆ' ನಿಜಕ್ಕೂ ನನ್ನನ್ನು ಎತ್ತರಕ್ಕೇರಿಸಿದ್ದವು. ಅವರ ಬರಹದಲ್ಲಿ ಪ್ರಾಮಾಣಿಕತೆಯಷ್ಟೇ ಅಲ್ಲ, ಎದೆಗಾರಿಕೆಗೆ ಸಾಟಿಯೇ ಇಲ್ಲ. ಒರಿಜಿನಲ್ ಬರಹಗಾರರಾಗಿದ್ದ ಅವರು ಪ್ರತಿಭಾ ಸ್ಫೋಟವಾಗಿದ್ದರು. ಕಾರಂತರಂತೆಯೇ ಗಿಲೀಟಿಲ್ಲದೆ ಜನಸಾಮಾನ್ಯರಿಗಾಗಿ ಬರೆದ ಲಂಕೇಶ್, ಪತ್ರಕರ್ತ ರಾಗಿ ಸಾವಿರಾರು ಪುಟ ಬರೆದರೂ ಎಲ್ಲಿಯೂ ಜಾಳಾಗಲಿಲ್ಲ. ಕರ್ನಾಟಕದ ಬೌದ್ಧಿಕ ಸಾಂಸ್ಕೃತಿಕ ನಾಯಕತ್ವ ವಹಿಸಿದ್ದವರಲ್ಲಿ ಪ್ರಮುಖರಾಗಿದ್ದ ಅವರು, ಬಹುಶಃ ಕನ್ನಡದ ಯಾವುದೇ ಬರಹಗಾರನಿಗಿಂತ ಹೆಚ್ಚು ಕೋಮುವಾದದ ವಿರುದ್ಧ ಬರೆದರು. ಗಾಂಧೀಜಿ ಬಗ್ಗೆ ಚಿಂತಿಸಿದವರು. ಅದರ 'ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ' ಮತ್ತು 'ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನ ದಲ್ಲಿ' ಇಂತಹ ಬರಹಗಳಂತೂ ಉತ್ಕೃಷ್ಟ ಬರವಣಿಗೆಗಳು. ಅನೇಕ ಬರಹಗಾರರನ್ನು ಸೃಷ್ಟಿಸಿದ ಲಂಕೇಶ್, ಸಾವಿರಾರು ರಾಜಕೀಯ ನಾಯಕರನ್ನು ಅಧಿಕಾರಗಳನ್ನು ಬರಹಗಾರರನ್ನು ನಿಜ ಬಣ್ಣದಲ್ಲಿ ತೋರಿಸಿ, ನಮ್ಮಂತಹ ಸಾವಿರಾರು ಜನರಿಗೆ ಹೊಸ ಜೀವನ ದೃಷ್ಟಿ ಕೊಟ್ಟರು. ಜೊತೆ ಜೊತೆಗೆ ಕರ್ನಾಟಕ ರಾಜಕೀಯದಲ್ಲಿ ಅನೇಕ ಪಲ್ಲಟಗಳನ್ನು ಉಂಟು ಮಾಡಿದರು. ಇದು ನಂಬಲಸಾಧ್ಯ. ಕಾರಂತರಂಥ ಕಾರಂತರೇ ಕೊನೆ ಕೊನೆಗೆ ಕೋಮುವಾದಿಗಳ ಎದುರು ಮೆತ್ತಗಾದರೆ, ಲಂಕೇಶ್ ಮಾತ್ರ ಕೊನೆ ದಿನದವರೆಗೂ ಕೋಮುವಾದಿಗಳ ವಿರುದ್ಧ ಬೆಂಕಿಯು ಗುಳುತ್ತಲೇ ಇದ್ದರು!

ಕಾಸಿಗೆ, ಕಾಂಟೆಸ್ಸಾ ಗಿರಿಗೆ, ಸರಕಾರಿ ಬಂಗಲೆಗೆ ಹಾತೊರೆಯುವ ಬರಹಗಾರನನ್ನು ನಾನು ಇಷ್ಟಪಡುವುದಿಲ್ಲ. ಸರಕಾರದ ಪ್ರಶಸ್ತಿಗೆ ತಿಪ್ಪರಲಾಗ ಹಾಕುವ ಬರಹಗಾರನನ್ನು ಇಷ್ಟ ಪಡುವುದಿಲ್ಲ. ಅಕ್ಷರ ಹಾದರ ಮಾಡುವವರನ್ನು ನಾನು ಇಷ್ಟ ಪಡುವುದಿಲ್ಲ. ಕೋಮುವಾದಕ್ಕೆ ತುಪ್ಪ ಸುರಿಯುತ್ತ ಜಾತಿ ಧರ್ಮಗಳ ಕೈಕೋಳ ತೊಟ್ಟು ಸ್ವಯಂ ಖೈದಿಗಳಾಗಿರುವ ಸಾಹಿತಿಗಳು ನನಗೆ ಇಷ್ಟವಾಗುವುದೇ ಇಲ್ಲ.

ನಾನು ಸಾಹಿತ್ಯ ಓದುವುದು ಹೊತ್ತು ಕಳೆಯಲು ಅಲ್ಲ, ಬರೀ ಜ್ಞಾನಾರ್ಜನೆಗಾಗಿ ಅಲ್ಲ,

ಬರೀ ಮಿದುಳಿನ ಸಂಪತ್ತಿಗಲ್ಲ, ಪಂಡಿತನಾಗಲು ಅಲ್ಲ, ನಾಲ್ಕು ಜನರ ಮಧ್ಯ ದೊಡ್ಡಸ್ತಿಕೆ ಮೆರೆಸುವುದಕ್ಕಲ್ಲ. ಸಾಹಿತ್ಯವೆಂಬುದು ಮಿದುಳು ಹೃದಯಕ್ಕಷ್ಟೇ ಅಲ್ಲ-ವ್ಯಕ್ತಿಯ ಆತ್ಮಕ್ಕೆ ದ್ರವ್ಯವನ್ನೊದಗಿ ಸುತ್ತದೆ. ಸಂಜೀವಿನಿಯಾದ ಸಾಹಿತ್ಯ ಆತ್ಮಕ್ಕೆ ತಂಪೆರೆಯುತ್ತದೆ. ಬದುಕಿನ ವಿಲಕ್ಷಣತೆ, ದ್ವಂದ್ವ ಮತ್ತು ನಿರರ್ಥಕತೆಯನ್ನು ತಿಳಿಸುತ್ತಲೇ ಅದಕ್ಕೆ ಉಪಶಮನವನ್ನೂ ಒದಗಿಸುತ್ತದೆ. ಬದುಕಿನ ನೂರಾರು ಅನುಭವಗಳ ಹಿಡಿದಿಟ್ಟುಕೊಳ್ಳುವ ಶಕ್ತಿಯನ್ನು ಕೊಡುತ್ತದೆ. 'ಶುದ್ಧ ಸಾಹಿತ್ಯಕ್ಕೆ ಉದ್ದೇಶವೇ ಇಲ್ಲ' ಎಂದು ವಾದಿಸುವವರನ್ನು ಕಂಡಿದ್ದೆ. ಆದರೆ ಅನಕ್ಷರತೆಯಾಗಿದ್ದ ನನ್ನಮ್ಮನಿಗೆ ಕುವೆಂಪುರವರ 'ಕಾನೂರು ಹೆಗ್ಗಡಿತಿ'ಯನ್ನು ಪೂರ್ತಿ ಓದಿ ಹೇಳಿದ ಮೇಲೆ, ಅವಳಲ್ಲಾಗಿದ್ದ ಕೆಲವು ಸೂಕ್ಷ್ಮ ಬದಲಾವಣೆಗಳನ್ನು ನೋಡಿರುವ ನಾನು, ಸಾಹಿತ್ಯದ ಮಾಂತ್ರಿಕ ಶಕ್ತಿ ಕಂಡು ದಂಗಾಗಿ ಹೋಗಿದ್ದೇನೆ.

●

●ಸಿ ಬಿ ಶೈಲಾ (ಗೃಹಿಣಿ ಮತ್ತು ಅಧ್ಯಾಪಕಿ)

'ನೀವೇಕೆ ಓದುತ್ತೀರಿ'? ಎಂತಹ ಪ್ರಶ್ನೆ ಕೇಳ್ತೀರಿ? ಬೇರೆ ಯಾವುದೂ ನೆನಪಗಾಲಿಲ್ಲವೆ? 'ನಾನಿದ್ದೀನಿ? ಎಂದರೆ ಓದುವುದಕ್ಕಾಗಿ ಬದುಕಿದ್ದೀನಿ ಎನ್ನುವ ಅಸತ್ಯ ಅಪ್ರಾಮಾಣಿಕ ಉತ್ತರ ನನ್ನಿಂದ ಸಾಧ್ಯವಿಲ್ಲ. ಆದರೆ ಓದು ನನ್ನ ಜೀವನದ ಅವಿಭಾಜ್ಯ ಅಂಗವೆಂದಷ್ಟೇ ಒಪ್ಪಿಕೊಳ್ಳಲು ಬಯಸುವೆ. ಪುಸ್ತಕಗಳೇ ಸಂಗಾತಿ. ನನ್ನ ಜೀವನದ ಉಲ್ಲಾಸ. ನನ್ನ ಅಸ್ತಿತ್ವದ ಕುರುಹು. ನನ್ನ ಬೆಳವಣಿಗೆಗೆ ಸಹಕಾರಿ. ನನ್ನ ಸಮಚಿತ್ತತೆ ಕಾಪಾಡಿಕೊಳ್ಳುವ ಭಗವದ್ಗೀತೆ, ಒಂಟಿತನ, ಅನಾಥ ಪ್ರಜ್ಞೆ ಕಾಡಿದಾಗ ಸಮಾಧಾನ, ನೆಮ್ಮದಿಯನ್ನು ನವೀಕರಿಸುವ ಸಾಧನ.

ಸಾಹಿತ್ಯ, ಸೌಂದರ್ಯ, ಸೊಬಗು, ಕಲಾತ್ಮಕತೆ ಇತ್ಯಾದಿ ಯಾವುದರ ಕಡೆಗೂ ಹೊರಳದ ಜಡಮನಸ್ಸು ಕಡಿವಾಣ ಹಾಕಿದ ಕುದುರೆ. ಅಡಿಗೆ ಮನೆಯಿಂದ ನೇರ ಬಸ್‌ನಿಲ್ದಾಣಕ್ಕೆ, ಸಂಜೆ ಮತ್ತೆ ಬಸ್‌ನಿಲ್ದಾಣದಿಂದ ನೇರ ಅಡಿಗೆ ಮನೆಗೆ. ಕೈಗೊಂಡ ವೃತ್ತಿಗೆ ಎಷ್ಟು ಬೇಕೋ ಅಷ್ಟೇ ಓದು. ಸಾಹಿತ್ಯಕ್ಕೆಲ್ಲಿ ಸಮಯ, ಓದುವುದಕ್ಕೆ ಎಲ್ಲಿ ಪುರಸೊತ್ತು ಅಂದುಕೊಳ್ತಿದ್ದೆ. ಹಾಗೆಂದು ಕೊಂಡು ಹಾಸಿಗೆಯ ಮೇಲೆ ಉರುಳಿದರೆ ನಿದ್ದೆ ಮಾರು ದೂರ. ಕೈಯಲ್ಲಿ ಪುಸ್ತಕ ಹಿಡಿಯಲೇ ಬೇಕು. ಪುಟ್ಟ ಮಗುವನ್ನು ಮಲಗಿಸಲು ತಾಯಿ ಜೋಗುಳ ಹಾಡುತ್ತಿದ್ದಳಂತೆ. ಹಾಗೆ ಆ ತಾಯಿ-ಮಗುವಿನ ಸಂಬಂಧದಂತೆ ನನ್ನ ಮತ್ತು ಪುಸ್ತಕಗಳ ಸಂಬಂಧ. ಓದುರಹಿತ ಬದುಕೊಂದು ಬದುಕೆ? ಹಾಗಾಗಿ ನನ್ನತನ ಉಳಿಸಿಕೊಳ್ಳಲು, ಮಾತಾಡುವ ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಓದುವುದು ಅನಿವಾರ್ಯವೆನಗೆ. ಅತ್ಯಗತ್ಯದ ಕ್ರಿಯೆನಗೆ. ಪ್ರವೃತ್ತಿಗಳ ಮಟ್ಟದಲ್ಲೇ ಬದುಕುವ ಜನರಿಗೆ 'ಓದು' ಎನ್ನುವುದು ಲಕ್ಸುರಿಯೇ ಇರಬಹುದೇನೋ. ಆದರೆ ನನಗೆ ಅದೊಂದು ಮೂಲಭೂತ ಅಗತ್ಯ.

ಸೋತ ಕಣ್ರೆಪ್ಪೆಗಳು ಒಂದನ್ನೊಂದು ಕೂಡುತ್ತಿರುವಾಗಲೇ, ಬುದ್ಧಿ ಮುಷ್ಕರ ಹೂಡಿ ಓದುವ ಮನಸ್ಸನ್ನು ಜಾಗೃತಗೊಳಿಸುತ್ತದೆ. ದಿನಕ್ಕೊಮ್ಮೆಯಾದರೂ ಪುಸ್ತಕ ಪತ್ರಿಕೆ ಮುಟ್ಟಿದಿದ್ದಲ್ಲಿ ಅಮೂಲ್ಯವಾದದ್ದೇನನ್ನೋ ಕಳೆದುಕೊಂಡಂತೆ ಭಾಸವೆನಿಸುತ್ತದೆ. ರಾತ್ರಿ ಹತ್ತರ ನಂತರವೆ ಓದುವ ಸಮಯ ನನ್ನದು. ಆಗ ಓದುವುದು ರಂಜನೆಗಾಗಿ, ಮನಸ್ಸ್ವಾಸ್ಥ್ಯಕ್ಕಾಗಿ. ಆ ಸಮಯದಲ್ಲಿ ವಾರ ಪತ್ರಿಕೆಗಳು ನನ್ನ ಆಪ್ತರು. ದಿನಪತ್ರಿಕೆಗಳ ಮೇಲೆ ಕಣ್ಣಾಡಿಸಲೂ ಅದೇ ಸಮಯ. ಪ್ರಜಾಪ್ರಭುತ್ವದ ಪ್ರಬುದ್ಧ ಜವಾಬ್ದಾರಿ ಪ್ರಜೆಯಾಗಿರಬೇಕೆಂದರೆ, ಹದಿಹರೆಯ ದವರೆದುರು ನಿಂತು ಉಪನ್ಯಾಸ ನೀಡಬೇಕೆಂದರೆ ವರ್ತಮಾನದ ಅರಿವು ಇರಬೇಕಲ್ಲವೇ? ವರ್ತಮಾನಕ್ಕೆ ಕೈಗನ್ನಡಿಗಳೆಂದರೆ ಪತ್ರಿಕೆಗಳೇ ಅಲ್ಲವೆ? ಹಾಗಾಗಿ ಪತ್ರಿಕೆ ಓದುವುದು ನನಗೆ ಅನಿವಾರ್ಯವೂ ಹೌದು.

ನಿಜ! ಬದುಕು ಅನಿಶ್ಚಿತ. ಸಂತೋಷಕ್ಕಿಂತ ಬೇಸರವೇ ಹೆಚ್ಚು. ನಲಿವಿಗಿಂತ ನೋವೇ ಅಧಿಕ. ಹುಟ್ಟಿಸಿದ ಆ ಬ್ರಹ್ಮನಾದರೂ ನಮ್ಮನ್ನು ಎಂದೆಂದೂ ಸುಖವಾಗಿಟ್ಟಿರುತ್ತೇನೆಂದು ಮುಚ್ಚಳಿಕೆ ಪತ್ರವನ್ನೇನೂ ಬರೆದುಕೊಟ್ಟಿಲ್ಲ. ಸುಖ ಅನ್ನುವುದು ಮರೀಚಿಕೆಯೇ. ಎಲ್ಲರ ಮನೆಯ ದೋಸೆಯೂ ತೂತೇ. ದುಡ್ಡು ಸಕಲ ಸಂತೋಷಕ್ಕೆ ಕಾರಣವೂ ಆಗುವುದಿಲ್ಲ. ಆದರೆ ಕೆಲವು ಪುಸ್ತಕಗಳು ಸುಖ ಸಂತಸ ನೆಮ್ಮದಿ ಆತ್ಮೀಯತೆ ಒದಗಿಸಬಲ್ಲವು ಎನ್ನುವು ದಂತೂ ಸತ್ಯ. ಸಿಕ್ಕಿದ್ದಕ್ಕೆಲ್ಲಾ ಬಾಯಿ ಹಾಕುವ ತೊಂಡು ದನದಂತೆ ನನಗೆ ಓದುವ ಹವ್ಯಾಸವಿಲ್ಲ. ಶಬರಿಯಂತೆ ಹುಳಿಯನ್ನು ಒಗರನ್ನು ಬಿಸುಟು, ಸೊಗಸು ಸಿಹಿಯನ್ನು ಮಾತ್ರ ಮಡಿಲಲ್ಲಿಟ್ಟು ಒಡಲಲ್ಲಿಟ್ಟು, ದನಗಳಂತೆ ಆಗಾಗ್ಗೆ ಮಲುರು ಹಾಕುತ್ತ ಓದಬೇಕೆನಿಸುವ ಪುಸ್ತಕಗಳು ನನ್ನ ದೃಷ್ಟಿಯಲ್ಲಿ ಕೆಲವು.

ಮರ್ತ್ಯದಲ್ಲಿ ಅಮರ್ತ್ಯಕ್ಕಾಗಿ ಬಯಸುತ್ತ, ಸ್ವಾತಂತ್ರ್ಯ, ಸ್ವಂತಿಕೆಗಾಗಿ ಹಂಬಲಿಸಿದ ವಚನಕಾರರು, ಹರಿದಾಸರು ಮತ್ತು ಅವರ ಸಾಹಿತ್ಯ ನನಗೆ ಪ್ರಿಯವೆನಿಸುತ್ತೆ. ಹಂಗಿಗೆ ಒಳಗಾಗದ, ಡೊಗ್ಗು ಸಲಾಮು ಹೊಡೆಯದ, ಮುಲಾಜಿಗೆ ಬಗ್ಗದ ವಚನಗಳು, ಕೀರ್ತನೆಗಳು, ವೇದನೆ-ಸಂವೇದನೆ-ನಿವೇದನೆಗಳಿಗೆ, ಅನುಭವ-ಅನುಭಾವಗಳಿಗೆ ಭಾಷೆಯ ರೂಪು ಕೊಡಲು ಯತ್ನಿಸಿದ ಈ ಸಾಹಿತ್ಯ, ನನ್ನ ಆಯ್ಕೆ. ಮನದ ಮೈಲಿಗೆ ತೊಳೆಯಬೇಕಾದರೆ ಕೂಡಲ ಚೆನ್ನ ಸಂಗಯ್ಯನ ಶರಣರೊಂದಿಗೆ ಅನುಭಾವವ ಮಾಡುವುದು ಹಿತವೆನ್ನಿಸುತ್ತೆ.

ಎಲ್ಲೋ ಸಂದುಗೊಂದುಗಳಲ್ಲಿ ಬೆಟ್ಟ ಕಣಿವೆಗಳಲ್ಲಿ ಗುಪ್ತವಾಗಿ ಹರಿದು ನಂತರ ದುಮ್ಮಿಕ್ಕುವ ಜಲಪಾತದಂತೆ ಜನಪದರ ತ್ರಿಪದಿಗಳು ನನ್ನ ದೃಷ್ಟಿಯಲ್ಲಿ. ಈ ತ್ರಿಪದಿಗಳನ್ನು ಗಟ್ಟಿಯಾಗಿ ಓದಿ ಸವಿಯನ್ನು ಸವಿಯುವುದು, ಮಳೆಗಾಲದಲ್ಲಿ ಬಿಸಿಬಿಸಿ ಮೆಣಸಿನಕಾಯಿ ಮಂಡಕ್ಕಿ ತಿಂದಂತಹ ಅನುಭವವನ್ನು ತಂದುಕೊಡುತ್ತದೆ. ಬದುಕಿನ ಅನುಭವಗಳೆಲ್ಲಾ ಗಟ್ಟಿಗೊಂಡು ಘನೀಭೂತವಾದ ಈ ಜನಪದ ತ್ರಿಪದಿಗಳು, ಸರ್ವಜ್ಞನ ತ್ರಿಪದಿಗಳು ತಮ್ಮ ಸರಳತೆ, ಸ್ಥಿತಪ್ರಜ್ಞತೆ, ಲೋಕಾನುಭವ, ಭಾವುಕತೆ, ಆತ್ಮೀಯತೆಯಿಂದ ಮನಸ್ಸಿಗೆ ತೀರಾ ಹತ್ತಿರವಾಗಿ ಬಿಡುತ್ತವೆ.

ಇಂದಿನ ದಿನಗಳಲ್ಲಿ ಶಿಕ್ಷಣದಿಂದ ಮೊದಲ್ಗೊಂಡು ಎಲ್ಲವೂ ವ್ಯಾಪಾರೀಕರಣದ ಸುಳಿಯಲ್ಲಿ ಸಿಲುಕಿ, ತಳವೇ ಇಲ್ಲದ ಬಾವಿ ಸೇರುತ್ತಿರುವಾಗ, ಪ್ರೀತಿಯ ಒರತೆಯೇ ಬತ್ತಿ ಹೋಗುತ್ತಿದೆ. ಪ್ರೀತಿ, ಪ್ರೇಮಕ್ಕೆ ಕಮರ್ಶಿಯಲೈಜೇಶನ್ ಎನ್ನುವ ಮಹಾರೋಗ ಬಡಿದಿರುವಾಗ ನೆನಪಾಗುತ್ತವೆ ಪ್ರೇಮ ಕವನಗಳು. ವಿಶೇಷವಾಗಿ ಕೆ ಎಸ್ ನರಸಿಂಹಸ್ವಾಮಿ, ತೀ ನಂ ಶ್ರೀ ಹಾಗೂ ಕುವೆಂಪು ಅವರ ಮಧುರ ಪ್ರೇಮಗೀತೆಗಳು. ಮದುವೆಗೆ ಮುನ್ನವೇ ಪ್ರೇಮ ದ್ರವವೆಲ್ಲಾ ಆವಿಯಾಗಿರುವಾಗ ಉಳಿಯುವುದೇನು? ಖಾಲಿ ಖಾಲಿ ಶೂನ್ಯ. ವಿವಾಹೋತ್ತರ ಬದುಕಿನಲ್ಲಿ ಮಧುಪಾತ್ರೆಯನ್ನು ಖಾಲಿಯಾಗಂತೆ ತುಂಬಿಸಬಲ್ಲ ಅದ್ಭುತ ಶಕ್ತಿ ಈ ಪ್ರೇಮ ಕವನಗಳಿಗಿದೆ. ಅಶ್ಲೀಲದ ಸೋಂಕು ತಾಗದ ಈ ಕವನಗಳು ಸಂತಸ ಸಮೃದ್ಧಿಯನ್ನು ತಂದುಕೊಡಬಲ್ಲವೆನ್ನಿಸುತ್ತವೆ. ಬದುಕಿಗೆ ವಿಮುಖರಾಗಿ ಸಾವಿಗೆ ಸನ್ನಿಹಿತರಾಗುವ ಸಂದರ್ಭಗಳಲ್ಲಿ ಪ್ರಭು ಸಂಹಿತೆಯಂತಹ ಸಾಹಿತ್ಯ ಅಗತ್ಯವೆನಿಸುತ್ತದೆ. ಬದುಕಿನಲ್ಲಿ ನಂಬಿಕೆ ಹುಟ್ಟಿಸುವ, ವಸ್ತುನಿಷ್ಠವಾಗಿ ಬದುಕನ್ನು ಸ್ವೀಕರಿಸುವ ಮಂಕುತಿಮ್ಮನ ನೀತಿ ಬೋಧೆ ಪ್ರಿಯವೆನ್ನಿಸುತ್ತದೆ. 'ಕುಮಾರವ್ಯಾಸ ನಿನ್ನದೋ ಭಾಮಿನಿ' ನನ್ನದೋ ಬರೀ ಮಿನಿ' ಎಂದೆನ್ನುವ ಹನಿಗವನಗಳು ಕಿರಿದರಲ್ಲಿ ಪಿರಿದರ್ಥ ಕೊಡುವಂತಹವು. ಅವಸರದ ಬದುಕಿನಲ್ಲಿ ದೀರ್ಘ ಓದಿಗೆ ಪುರಸೊತ್ತಿಲ್ಲದಾಗ ಬಿ.ಆರ್. ಲಕ್ಷ್ಮಣರಾವ್, ದುಂಡಿರಾಜ್, ಸಿಪಿಕೆ, ಜರಗನಹಳ್ಳಿ ಶಿವಶಂಕರ್ ಅವರ ಮಿನಿ ಕವನಗಳು ಖುಷಿ ಕೊಡುತ್ತವೆ. ಅವುಗಳಲ್ಲಿನ ಮೊನಚುವ್ಯಂಗ್ಯ ಚಿಂತನೆಗೂ ಗ್ರಾಸ ಒದಗಿಸಬಲ್ಲದು. ಕಚಗುಳಿಯನ್ನಿಟ್ಟು ನಗಿಸಲೂ ಬಲ್ಲದು.

ಕಾದಂಬರಿ ಜಗತ್ತಿನಲ್ಲಿ ಕಾರಂತ, ಭೈರಪ್ಪನವರ ಕಾದಂಬರಿಗಳನ್ನು ಪ್ರೀತಿಯಿಂದ ಇಷ್ಟಪಟ್ಟು ಓದುತ್ತೇನೆ. ಮನುಷ್ಯ-ಮನುಷ್ಯ, ಮನುಷ್ಯ-ಪ್ರಕೃತಿ, ಮನುಷ್ಯ-ಸಮಾಜದೊಂದಿಗಿನ ನಿಷ್ಠುರ ಸತ್ಯಗಳನ್ನು ಅನಾವರಣ ಮಾಡುವ ಶಿವರಾಮ ಕಾರಂತರ 'ಚೋಮನ ದುಡಿ', 'ಮರಳಿ ಮಣ್ಣಿಗೆ, 'ಬೆಟ್ಟದ ಜೀವ' ಕಾದಂಬರಿಗಳು ಮತ್ತೆ ಮತ್ತೆ ಓದಿಸಿಕೊಳ್ಳುತ್ತವೆ. ಇನ್ನು ಭೈರಪ್ಪನವರ ಕಾದಂಬರಿಗಳೆಂದರೆ ವಿಚಾರ, ವಿಚಾರವಾದ-ವಿವಾದ, ತರ್ಕ-ಚರ್ಚೆ. ಮಾನಸಿಕ ಗೊಂದಲ, ತಳಮಳ ಘರ್ಷಣೆ. 'ದಾಟು', 'ಧರ್ಮಶ್ರೀ', 'ತಬ್ಬಲಿಯು ನೀನಾದೆ ಮಗನೆ', 'ನಿರಾಕರಣ'ಗಳನ್ನು ಓದಿದ ಮೇಲೆಯೂ ಅವುಗಳದೇ ಗುಂಗು. ಇವರ 'ಅಂಚು' ಕಾದಂಬರಿಯ ನಾಯಕಿ 'ಅಮೃತ'. ನನ್ನ ನೆನಪಿನಾಗಸದಲ್ಲಿ ಸದಾ ಹೊಳೆಯುವ ನಕ್ಷತ್ರ.

ಏ ಸೀ, ತೀ ನಂ ಶ್ರೀ, ಗೊರೂರು, ಎ ಎಸ್ ಮೂರ್ತಿರಾವ್ ಅವರ ಲಲಿತ ಪ್ರಬಂಧಗಳು ಯೋಚಿಸುವ ದಾಟಿಯನ್ನೇ ಬದಲಿಸಿ ಬಿಡುತ್ತವೆ. ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸುವ ಶಿಸ್ತನ್ನು ಬೆಳೆಸುತ್ತವೆ. ಮನಸ್ಸನ್ನು ತಿಳಿಯಾಗಿಸುತ್ತವೆ.

ಇತಿಹಾಸದ ಘಟನೆಗಳು, ಪ್ರಸಿದ್ಧ ವ್ಯಕ್ತಿಗಳು, ಜೀವನ ಶೈಲಿಗಳನ್ನು ಉದಾಹರಿಸಲು, ವಿದ್ಯಾರ್ಥಿಗಳನ್ನು ಸತ್ವಯುತರನ್ನಾಗಿಸಲು ನನ್ನ ತರಗತಿಯ ಉಪನ್ಯಾಸ ರಸವತ್ತಾಗಿರಲು ನನಗೆ ಮರೆಯಬಾರದ ಮಹಾನುಭಾವರ ಜೀವನ ಚರಿತ್ರೆಗಳನ್ನು, ಐತಿಹಾಸಿಕ ಕಾದಂಬರಿಗಳನ್ನು ಓದಬೇಕೆನಿಸುತ್ತದೆ. 'ದೇಶ ಸುತ್ತೋಕಾಗ್ತಿಲ್ಲ' ಆದ್ದರಿಂದ ದೇಶ ಸುತ್ತಿದವರ ಅನುಭವಗಳ

ನ್ನಾದರೂ ನನ್ನದಾಗಿಸಿಕೊಳ್ಳುವ ಹಂಬಲ ನನ್ನದು. ಸೀಮಿತ ಬದುಕಿಗೆ ಅನುಭವದ ವೈವಿಧ್ಯ ತಂದುಕೊಂಡುವ ಶ್ರೀಮಂತ ಪ್ರವಾಸ ಸಾಹಿತ್ಯವೂ ನನ್ನಿಂದ ಓದಿಸಿಕೊಳ್ಳುತ್ತದೆ.

ರಾಮಾಯಣ ಮಹಾಭಾರತದ ಕತೆಗಳು ನನಗೆಂದೂ ಪ್ರಿಯವೆ. ಆದರೆ ಈಚೆಗೆ ನವ್ಯದ ಪ್ರಭಾವದಲ್ಲಿ, ಸಮಾನತೆ ಸ್ವಾತಂತ್ರ್ಯಗಳ ಹಂಬಲದಲ್ಲಿ ಪುರಾಣಗಳ ಪ್ರಾತ:ಸ್ಮರಣೀಯ ಸ್ತ್ರೀಯರೂ ಮನಬಿಚ್ಚಿ ಮಾತನಾಡುತ್ತಿದ್ದಾರೆ. ರಾಮನ ಸೀತೆ, ಗೌತಮನ ಅಹಲ್ಯೆ, ಹರಿಶ್ಚಂದ್ರನ ಚಂದ್ರಮತಿ, ಪಾಂಡವರ ದ್ರೌಪದಿ ಇವರೆಲ್ಲ ವ್ಯವಸ್ಥೆಯನ್ನು ಪ್ರತಿಭಟಿಸಿ, ಪುರುಷ ಪ್ರಧಾನ ಸಮಾಜದ ತಳಹದಿಯನ್ನು ಕೆಣಕುವ ಗಂಡನ್ನು, ಆತನ ಮನೋಧರ್ಮವನ್ನು ಪ್ರಶ್ನಿಸುವ ಪಾತ್ರಗಳಾಗಿ ನಾಟಕಗಳಲ್ಲಿ ಈಚೆಗೆ ಸೃಷ್ಟಿಯಾಗುತ್ತಿವೆ. ಗಂಡೇ ಸೃಷ್ಟಿಸಿದ ಇಂತಹ ಸ್ತ್ರೀ ಪಾತ್ರಗಳನ್ನು ಸ್ವನಿರೂಪಣೆಯ ತಂತ್ರಗಳಲ್ಲೋದುವುದು, ಒಂದು ರೀತಿಯ ಪುಳಕ ರೋಮಾಂಚನವನ್ನುಂಟು ಮಾಡುತ್ತದೆ.

ಮನುಷ್ಯ-ಮನುಷ್ಯರ ನಡುವೆ ಆದರ ಕುಸಿಯುತ್ತಿರುವಾಗ, ಮೌಲ್ಯಗಳೇ ಪಲ್ಲಟಗೊಳ್ಳುತ್ತಿರುವ ಸಂದರ್ಭಗಳಲ್ಲಿ ಮಾಲಿನ್ಯ ಎಲ್ಲಾ ರಂಗಗಳಲ್ಲಿ ತುಂಬಿಕೊಂಡಿರುವ ವರ್ತಮಾನದಲ್ಲಿ, ಅನಿಶ್ಚಿತತೆಯೇ ಬದುಕಾಗಿರುವ ದಿನಗಳಲ್ಲಿ, ಮನಸ್ಸುಗಳ ಹಳಸುತ್ತಿರುವ ಕ್ಷಣಗಳಲ್ಲಿ ಓದಿನಿಂದಲ್ಲದೆ ಮತ್ಯಾವುದರಿಂದ ಸಮಾಧಾನ ದೊರೆಯಲು ಸಾಧ್ಯ ನೀವೇ ಹೇಳಿ?

●

•ಬಿ ಕೆ ಪಾಂಡುರಂಗ (ವಾಹನ ಚಾಲಕ)

ಓದುಗರ ಅನಿಸಿಕೆಗಾಗಿ ತಾವು ಕೇಳಿರುವ ಎರಡು ಪ್ರಶ್ನೆಗಳೊಂದಿಗೆ ತಮ್ಮ ಪತ್ರ ಬಂದಿರುವುದು ನೋಡಿ ಆಶ್ಚರ್ಯವಾಯಿತು. ಇದೊಂದು ಹೊಸ ಯೋಚನೆ, ಯೋಜನೆ. ಆದರೆ ಸ್ವಾಮಿ, ನನಗೆ ಬರವಣಿಗೆಯ ಮೂಲಕ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟ. ಯಾವ ಪುಸ್ತಕವಾದರೂ ಸರಿ, ಓದುತ್ತೇನೆ. ಬರೆಯುವ ರೂಢಿ ಇಲ್ಲ. ಮೊದಲಾದರೆ ಸ್ನೇಹಿತರಿಗೆ ಬಂಧುಗಳಿಗೆ ಪತ್ರವನ್ನಾದರೂ ಬರೆಯುತ್ತಿದ್ದೆ. ಈಗ ಹಳ್ಳಿಹಳ್ಳಿಗೂ ದೂರವಾಣಿ ಸೌಲಭ್ಯ ಇರುವುದರಿಂದ, ಕ್ಷೇಮ ಸಮಚಾರವೆಲ್ಲಾ ದೂರವಾಣಿಯಲ್ಲಿ ಕ್ಷಣದಲ್ಲಿ ದೊರೆಯುತ್ತದಲ್ಲ!

ಸ್ವಾಮಿ, ಕನ್ನಡದ ನೂರಾರು ಬರಹಗಾರರ ಹಿರಿಯ ಸಾಹಿತಿಗಳ ಬರಹಗಳನ್ನು ಯಾವ ಆಯ್ಕೆಯು ಇಲ್ಲದೆ ಓದಿದ್ದೇನೆ. ಎಲ್ಲವೂ ಉತ್ತಮ ಬರಹಗಾರರ ಉತ್ತಮ ಬರಹಗಳೆ. ಆದರೆ ನಾನು ಎರಡು ಮೂರು ಬಾರಿ ಓದಿರುವಂತಹ ಸಾಹಿತಿಗಳು ಎಂದರೆ- ಮೊದಲನೆಯದಾಗಿ ಪೂರ್ಣಚಂದ್ರ ತೇಜಸ್ವಿ, ಡಾ.ಶಿವರಾಮ ಕಾರಂತರು, ದೇವನೂರ ಮಹದೇವ, ಲಂಕೇಶ್, ಕುಂವಿ, ಅಮರೇಶ ನುಗಡೋಣಿ-ಹೀಗೆ ಪಟ್ಟಿ ಬೆಳೆಯುತ್ತೆ. ನಾನು ಓದಲು ಆರಿಸುವ ಕೃತಿಗಳೆಂದರೆ, ಕಥಾಸಂಕಲನಗಳು ಕಾದಂಬರಿಗಳು ವೈಚಾರಿಕ ಕೃತಿಗಳು ಲೇಖನಗಳ ಸಂಗ್ರಹ ಜೀವನಚರಿತ್ರೆ ಆತ್ಮಕಥನಗಳು ಹಾಗೂ ಆಕರ್ಷಕ ಶೀರ್ಷಿಕೆಯುಳ್ಳ ಪುಸ್ತಕಗಳು. ತೇಜಸ್ವಿಯವರ

ಸರಳ ಕನ್ನಡ, ಗಂಭೀರ ವಸ್ತುವನ್ನು ವಿಷಯವನ್ನು ಹಾಸ್ಯ ಮಿಶ್ರಿತ ಶೈಲಿಯಲ್ಲಿ ನಗುವಿನಲ್ಲಿ ತೇಲಿಸಿ ನಂತರ ಗಂಭೀರವಾಗಿ ಯೋಚಿಸುವಂತಾಗುತ್ತೆ. ಆದ್ದರಿಂದ ಅವರ ಎಲ್ಲಾ ಬರಹಗಳನ್ನು, ಎರಡಕ್ಕಿಂತ ಹೆಚ್ಚು ಬಾರಿ ಓದಿದ್ದೇನೆ. ಕಾರಂತರ 'ಬೆಟ್ಟದ ಜೀವ' 'ಕುಡಿಯರ ಕೂಸು'ಗಳಲ್ಲಿ ಗಿರಿಕಾನನದ ನಡುವೆ ಜೀವಿಸುವ ಮನಸ್ಸುಗಳ ನೇರ ನಡೆ ನುಡಿ ಮನಕಲಕಿಸುತ್ತದೆ. 'ಅಳಿದ ಮೇಲೆ', 'ಮರಳಿಮಣ್ಣಿಗೆ' ಮತ್ತೆ ಮತ್ತೆ ಓದಿಸುವಂತೆ, 'ಮೂಕಜ್ಜಿಯ ಕನಸು' ವಿಸ್ಮಯಗೊಳಿಸುತ್ತೆ.

ದೇವನೂರ ಮಹಾದೇವರ ಎಲ್ಲಾ ಕೃತಿಗಳನ್ನು ಎರಡೆರಡು ಬಾರಿ ಓದಿದ್ದೇನೆ. 'ಕುಸುಮ ಬಾಲೆ'ಯಂತೂ, ಸಿನಿಮಾ ದೃಶ್ಯಗಳಂತೆ ಕಣ್ಮುಂದೆ ಮೂಡುತ್ತದೆ. ಅವರ ಕಥೆಗಳನ್ನು ಸಂತೆಯಲ್ಲಿ ಕೂತೂ ಓದಬಹುದು. ಅವು ಇವೇ ಮರೆತು, ಕೃತಿಯಲ್ಲಿ ನಾನೂ ಒಂದು ಪಾತ್ರವಾದಂತೆ ಅನುಭವ ನೀಡುತ್ತವೆ. ಅವರು ತಮ್ಮ ಕಥೆಗಳಿಗೆ ಬಳಸಿರುವ ಭಾಷೆ ಸೊಗಸಾಗಿ ಸುವುದರಿಂದ ನನಗೆ ಮತ್ತೆಮತ್ತೆ ಓದಲು ಪ್ರೇರೇಪಿಸುತ್ತದೆ.

ಸಿನಿಮಾ ಪ್ರೇಮಿಯೊಬ್ಬ, ನೋಡಿರುವ ಸಿನಿಮಾವನ್ನೇ ಪದೇ ಪದೇ ನೋಡುವಂತೆ, ಓದುಗನಾಗಿ ನಾನು ಮತ್ತೆಮತ್ತೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳ'ನ್ನ ಓದಿದ್ದೇನೆ. ವೈಚಾರಿಕತೆ, ಸಾಮಾಜಿಕತೆ, ಪ್ರೇಮ, ಕಾಮ, ಬಂಡಾಯ, ಧರ್ಮ, ಮೂಢಾಚಾರ, ಎಲ್ಲದರ ಬಗ್ಗೆಯೂ ಸಮಗ್ರ ಅಧ್ಯಯನಕ್ಕೊಂದು ಸಮರ್ಥ ಕೃತಿ ಈ 'ಮಲೆಗಳಲ್ಲಿ ಮದುಮಗಳು'.

ಮಾನ್ಯರೆ, ಇನ್ನು ತಾವು ಕೇಳಿರುವ ಎರಡನೇ ಪ್ರಶ್ನೆ. ನಾನು ನನ್ನ ಸ್ನೇಹಿತರಿಗೆ 'ನೀವೇಕೆ ಓದುವುದಿಲ್ಲ? ಓದಿ ರವಿ ಕಾಣದ್ದನ್ನು ಕವಿ ಕಂಡ ಅಪೂರ್ವ ಜಗತ್ತನ್ನು ಓದಿಯಾದರೂ ತಿಳಿಯಿರಿ' ಎನ್ನುತ್ತಿರುತ್ತೇನೆ. ಅವರು ನನಗೆ ಬೈಯುತ್ತಾ ಕೆಲವಾರು ಕೃತಿಗಳನ್ನಾದರೂ ಓದಿದ್ದಾರೆ. ನನ್ನ ದೃಷ್ಟಿಯಲ್ಲಿ ಪುಸ್ತಕಗಳು ಅಮೂಲ್ಯ ಸಂಪತ್ತು. ಎಂದೆಂದೂ ನೋಡಲಾರದ ಹಿಂದಿನ ರಾಜ್ಯ, ರಾಜರ ಯುದ್ಧ ಸೋಲು ಗೆಲವು ಪುಸ್ತಕ ಓದಿ ದುಃಖ, ಸಂತೋಷ ಎರಡನ್ನೂ ಅನುಭವಿಸಿದ್ದೇನೆ. ಪ್ರಕೃತಿಯಲ್ಲಿನ ಆಗು-ಹೋಗುಗಳ ವಿಸ್ಮಯ ಪ್ರಪಂಚವನ್ನು 'ಜೀವ ಜಾಲ' ಓದಿನಿಂದ ಈಗ ಗಮನಿಸುತ್ತಿದ್ದೇನೆ. ನಮ್ಮೊಡನಿರುವ ನಮ್ಮ ಸಹ ಜೀವಿಗಳ ಬಗ್ಗೆ ವೀರಭದ್ರ ಚನ್ನಮಲ್ಲ ಸ್ವಾಮಿಯವರ ಕೃತಿ 'ಸಹಜ ಜೀವಿಗಳು' ಕಣ್ತೆರೆದು ನೋಡುವಂತೆ ಮಾಡಿದೆ. ನಾನು ನೋಡದ ದೂರದ ಪಶ್ಚಿಮ ರಾಷ್ಟ್ರಗಳ ಪುರಾತನ ನಗರಗಳನ್ನು, ಕಣ್ಣಾರೆ ಕಂಡಷ್ಟು ನಿಖರವಾಗಿ ಕಾರಂತರ 'ಅಪೂರ್ವ ಪಶ್ಚಿಮ' ಪ್ರವಾಸ ಕಥನ ಹೇಳುತ್ತದೆ. ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್' ನಿಂದ ನಾನೇ ಅಲೆಮಾರಿಯಾಗಿ ಅಂಡಮಾನ್ ನಿಕೋಬಾರ್ ಸುತ್ತಿದಂತಹ ಅನುಭವವಾಗಿದೆ. ಎ ಎನ್ ಮೂರ್ತಿರಾಯರು, ಅಮೇರಿಕ ಯಾತ್ರೆ ಮಾಡಿಸಿದ್ದು ನನ್ನ ಓದಿನ ಫಲ.

ಎ ಎನ್ ಮೂರ್ತಿರಾಯರ 'ದೇವರು', ಭಗವಾನರ 'ಶಂಕರಚಾರ್ಯ ಮತ್ತು ಪ್ರತಿಗಾಮಿತನ'ದಂತಹ ಕೃತಿಗಳ ಓದಿನಿಂದ, ಕಂಡಕಂಡ ದೇವರಿಗೆ ಚಪ್ಪಲಿ ಬಿಚ್ಚಿ ಕೈ ಮುಗಿಯುವುದು ಕಡಿಮೆಯಾಗಿದೆ ಮತ್ತು ಗಂಭೀರವಾಗಿ ಚಿಂತಿಸುವಂತೆ ಇವು ಮಾಡಿವೆ. ಆಕರ್ಷಕ ಶೀರ್ಷಿಕೆಯ ಕೃತಿ 'ಮರದೊಳಗಣಕಿಚ್ಚು' ಎಂಬ ಗ್ರಂಥದಲ್ಲಿ ಬರುವ ಒಂದು ವಿಚಾರ. ಶೃಂಗೇರಿಯಂತಹ

ಧರ್ಮ ಸಂಸ್ಥಾನದಲ್ಲಿ ಹೆಣ್ಣಿನ ವಿಕ್ರಯದಂತಹ ಅನಿಷ್ಟ ಪದ್ಧತಿಯನ್ನು ನಡೆಸುತ್ತಿತ್ತು ಎನ್ನುವುದನ್ನು ಓದಿ ದಿಗ್ಭ್ರಾಂತನಾಗಿದ್ದೇನೆ. ಇದೆಲ್ಲದರ ನಡುವೆ ನನಗೆ ಬಹಳ ಬೇಸರ ತಂದಿರುವ ವಿಚಾರವೆಂದರೆ, ಕುವೆಂಪು ರಚಿಸಿದ 'ರಾಮಾಯಣ ದರ್ಶನಂ' ಕೃತಿಯನ್ನು ಒಂದು ವರ್ಷದಿಂದ ಮನೆಯಲ್ಲಿಟ್ಟಿದ್ದೇನೆ. ಓದಲಾಗಿಲ್ಲ. ದಯವಿಟ್ಟು ಸಮರ್ಥ ಸಾಹಿತಿಗಳು ಸರಳ ಕನ್ನಡದಲ್ಲಿ ಜ್ಞಾನ ಪೀಠ ಪುರಸ್ಕೃತ ಕೃತಿಯನ್ನು ಮರುಸೃಷ್ಟಿ ಮಾಡಿದರೆ, ನನ್ನಂತಹ ಚಾಲಕ ವೃತ್ತಿಯಲ್ಲಿರುವ ಓದಿನ ಹಸಿವಿರುವ ೧೦ನೇ ತರಗತಿ ಫೇಲಾಗಿರುವ ಓದುಗ ಓದಬಹುದು ಎಂದು ಬಿನ್ನವಿಸುತ್ತೇನೆ. ನಮಸ್ಕಾರ.

●

•ಹೇಮಾರೆಡ್ಡಿ (ಸರಕಾರಿ ನೌಕರ)

"ನೀನೊಬ್ಬ ಸರ್ಕಾರಿ ನೌಕರ, ನಿನ್ನ ಕರ್ತವ್ಯಗಳನ್ನು ನಿರ್ವಹಿಸಲು ಒಂದಿಷ್ಟು ಪತ್ರಲೇಖನ ಕಲೆ, ಗಣಿತದ ಸಾಮಾನ್ಯ ಜ್ಞಾನ ಇದ್ದರೆ ಸಾಕು. ಆದರೂ ಯಾವಾಗಲೂ ಏನಾದರೊಂದು ಪುಸ್ತಕವನ್ನೋ ಪತ್ರಿಕೆಯನ್ನೋ ಓದುತ್ತಿರುವೆ. ನೀನೇನು ಪುಸ್ತಕದ ಹುಳುವೇ? ನಿನಗೆ ಬೇರೇನು ಕೆಲಸವಿಲ್ಲವೇ? ಪುಸ್ತಕ-ಪತ್ರಿಕೆಗಳನ್ನು ಕೊಳ್ಳಲು ಅಷ್ಟೊಂದು ಹಣವನ್ನೇಕೆ ವ್ಯಯಿಸುವೆ? ಈ ಓದಿನಿಂದ ನಿನಗಾಗುವ ಲಾಭವಾದರೂ ಏನು? ಓದಿ ಓದಿ ಮರುಳಾದ ಕೂಚುಭಟ್ಟ ಎಂಬ ಗಾದೆಯ ಮಾತಿನಂತೆ ಹುಚ್ಚನಾದೀಯೆ ಎಚ್ಚರ'- ಎಂದು ಹಲವಾರು ಮಂದಿ ನನ್ನನ್ನು ಅಪಹಾಸ್ಯ ಮಾಡಿದ್ದಾರೆ, ಬುದ್ಧಿವಾದ ಎಂಬಂತೆ ಹೇಳಿದ್ದಾರೆ, ಕುತೂಹಲ ತೋರಿಸಿದ್ದಾರೆ. ಇದೊಂದು ನಮ್ಮ ನಡುವಿನ ಅಪ್ರಸ್ತುತ ವಸ್ತು ಎಂದು ಧಿಕ್ಕರಿಸಿದ್ದಾರೆ. ಅವರ ಪ್ರಕಾರ ಓದು ಎಂದರೆ ಪಠ್ಯಪುಸ್ತಕಗಳ ಓದು ಮಾತ್ರ. ಒಂದು ಡಿಗ್ರಿ ಗಳಿಸಿ, ಕೆಲಸ ಸಂಪಾದಿಸಿದರೆ ಅಲ್ಲಿಗೆ ಮುಗಿಯಿತು ಅವರ ಓದಿನ ಅಗತ್ಯ. ಆದರೆ ನನಗೆ ಓದು ಎಂಬುದು ಊಟ ನಿದ್ರೆಯಷ್ಟೇ ಅಗತ್ಯ.

ನಾನು ಬಾಲ್ಯದಲ್ಲಿ ಆಲಿಸಿದ ಹರಿಕಥೆ, ಕೇಳಿದ ರಾಮಾಯಣ-ಮಹಾಭಾರತ-ಭಾಗವತಗಳ ಪಾರಾಯಣ, ಓದಿದ ಕಾಮಿಕ್ಸ್, ಗ್ರೀಕ್ ಮತ್ತು ಭಾರತದ ಪುರಾಣದ ಕಥೆಗಳು ನನ್ನ ಮುಂದೆ ಅದ್ಭುತ ರಮ್ಯ ಲೋಕವನ್ನೇ ತೆರೆದಿಟ್ಟವು. ಅವು ಉಂಟು ಮಾಡಿದ ಆಶ್ಚರ್ಯ, ಆನಂದ, ರೋಮಾಂಚನ ಮುಂತಾದ ಭಾವನೆಗಳು ನನ್ನ ಬಾಲ್ಯ ಜೀವನದ ಅವಿಸ್ಮರಣೀಯ ಅನುಭವ ಗಳು. ಅವೇ ಮುಂದೆ ನನ್ನನ್ನು ಸಾಹಿತ್ಯದ ಮಧುವನ್ನು ಹೀರಿ 'ಮದೋನ್ಮತ್ತವಾಗಲು' ಪ್ರೇರೇಪಿಸಿದವುಗಳು. ಅಂದಿನಿಂದ ಸಂತತವಾಗಿ ಸಾಗಿ ಬಂದಿದೆ ಓದುವ ಅನಿವಾರ್ಯ ಕರ್ಮ!

ಮಾನವನ ಬದುಕು ಅಶನ-ವಸನಗಳಿಂದಷ್ಟೇ ಪೂರ್ಣವಾಗಲಾರದು. ಅವೇನಿದ್ದರೂ ಪ್ರಾಥಮಿಕ ಅಗತ್ಯಗಳು ಮಾತ್ರ. ಬದುಕು ಆನಂದಮಯವಾಗಬೇಕಾದರೆ, ಸಹ್ಯವಾಗಬೇಕಾದರೆ, ಸಾರ್ಥಕವಾಗಬೇಕಾದರೆ, ಪ್ರಯೋಜನಕಾರಿಯಾಗಬೇಕಾದರೆ ಸರಿಯಾದ ಜೀವನ ವಿಧಾನವನ್ನು ಅನುಸರಿಸಬೇಕು. ಈ ರೀತಿಯ ಜೀವನ ವಿಧಾನವನ್ನು ರೂಪಿಸಿಕೊಳ್ಳುವ ಹಲವು ಮಾರ್ಗಗಳಲ್ಲಿ

'ಸೋಮೇಶ್ವರ ಶತಕ'ದಲ್ಲಿ ಹೇಳಿದಂತೆ ಶಾಸ್ತ್ರಗಳನ್ನು ಕೇಳುವುದು ಮತ್ತು ಓದುವುದು ಸಹಾ ಒಂದು. ಭೌತಿಕ ಬೆಳವಣಿಗೆಯಷ್ಟೇ ಬೌದ್ಧಿಕ ಬೆಳವಣಿಗೆಯೂ ಮುಖ್ಯ. ಊಟ-ವಸತಿಯಷ್ಟೇ ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಪಟ್ಟ ವಿಷಯಗಳೂ ಅಗತ್ಯ. ಇಲ್ಲದಿದ್ದರೆ ಬದುಕು ಬರಡು ಎನಿಸುತ್ತದೆ.

ನಾನೇಕೆ ಓದುತ್ತೇನೆ ಎಂಬುದಕ್ಕೆ ಈಗಾಗಲೇ ಪರೋಕ್ಷವಾಗಿ ಕಾರಣಗಳನ್ನು ನೀಡಿದ್ದೇನೆ. ನೇರವಾಗಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ರಂಜನೆ ಮತ್ತು ಬೋಧನೆಗಾಗಿ. ಇವನ್ನೇ ಕಾವ್ಯ ಮೀಮಾಂಸಕಾರರು ಆನಂದಾನುಭವ, ರಸಾಸ್ವಾದನೆ, ಆತ್ಮಸಂಸ್ಕಾರ ಎಂದು ಹೇಳಿರುವುದು. ಈ ಉದ್ದೇಶಗಳ ಸಾಧನೆಗೆ ಕೈಗೊಂಡ ಮಹಾಯಾತ್ರೆಯೇ ನನ್ನ ಓದು.

ಮೂಲಭೂತವಾಗಿ ಸಾಹಿತ್ಯವೂ ಒಂದು ಲಲಿತಕಲೆ. ಎಲ್ಲಾ ಲಲಿತ ಕಲೆಗಳ ಮೂಲೋದ್ದೇಶ ದಂತೆ ಸಾಹಿತ್ಯದ ಮೂಲೋದ್ದೇಶವೂ ಸಹೃದಯ ಓದುಗನಿಗೆ ಆನಂದಾನುಭವವನ್ನುಂಟು ಮಾಡುವುದಾಗಿದೆ. ಒಂದು ಉತ್ತಮ ಕೃತಿಯನ್ನು ಓದುತ್ತಿದ್ದ ಹಾಗೆ ಮನಸ್ಸಿಗೆ ಹಿತಕರವಾದ ಅನುಭವ ಉಂಟಾಗುತ್ತದೆ. ಮಹಾಕೃತಿಗಳಲ್ಲಿ ಜೀವನದ ಸಾರವೆಲ್ಲಾ ಭಟ್ಟಿ ಇಳಿದಿದ್ದು, ಉತ್ತಮ ಪಾತ್ರ ಚಿತ್ರಣ, ಸನ್ನಿವೇಶ ನಿರ್ಮಾಣವಾಗಿದ್ದು, ಅವನ್ನು ಓದಿದಾಗ ರಸಾಸ್ವಾದದ ಜೊತೆಗೆ ಆತ್ಮಸಂಸ್ಕಾರವೂ ಉಂಟಾಗುತ್ತದೆ. ಓದುತ್ತಿರುವಷ್ಟು ಹೊತ್ತೂ ಮನೋವಿಕಾರಗಳು ದೂರವಾಗಿ ಅನುಪಮವಾದ ಆನಂದದಲ್ಲಿ ಮೈಮರೆತಂತಾಗುತ್ತದೆ. ಕ್ಷಣಕಾಲವಾದರೂ ಬದುಕಿನ ಕಷ್ಟ-ಕೋಟಲೆಗಳಿಂದ ಮುಕ್ತವಾಗಿ ಬ್ರಹ್ಮಾನಂದ ಪಡೆದಂತಾಗುತ್ತದೆ. ಇದು ತಾತ್ಕಾಲಿಕ ವಾದರೂ ಅದರ ಪರಿಣಾಮ ಸಂಪೂರ್ಣವಾಗಿ ಮನಸ್ಸಿನಿಂದ ಅಳಿಸಿ ಹೋಗುವುದಿಲ್ಲ. ಅನುಭವ ದಂತೆ ಆ ಅನುಭವದ ನೆನವು ಸಹ ಸವಿಯಾಗಿಯೇ ಇರುತ್ತದೆಯಲ್ಲವೆ?

ಒಂದು ಮಹಾಕೃತಿ ನೇರವಾಗಿ ಬದುಕಿನಿಂದಲೇ ಆವಿರ್ಭವಿಸುತ್ತದೆ. ಮನುಷ್ಯರು ಬದುಕಿನಲ್ಲಿ ಏನನ್ನು ಕಂಡಿದ್ದಾರೆ, ಏನನ್ನು ಅನುಭವಿಸಿದ್ದಾರೆ, ಅದರ ವಿವಿಧ ಮುಖಗಳ ಬಗ್ಗೆ ಏನನ್ನು ಆಲೋಚಿಸಿದ್ದಾರೆ ಎಂಬುದರ ಮುಖ್ಯ ದಾಖಲೆಯೇ ಸಾಹಿತ್ಯ. ಅದನ್ನು ಓದುವುದರಿಂದ ನಾವು ಬದುಕಿನ ವಿಶಾಲವೂ ನಿಕಟವೂ ಆದ ಸಂಬಂಧಗಳನ್ನು ಪಡೆಯುತ್ತೇವೆ. ನಮ್ಮ ದೈನಂದಿನ ಜೀವನದ ಕ್ಷುಲ್ಲಕ ವಿಷಯಗಳಿಂದ ದೂರ ಸಾಗಿ ಉದಾತ್ತವೂ ಶಕ್ತಿಯುತವೂ ಆದ ಚೇತನಗಳೊಂದಿಗೆ ಸಂಪರ್ಕ ಸಾಧಿಸುತ್ತೇವೆ. ನಮ್ಮ ವೈಯಕ್ತಿಕ ಅರಿವಿನ ಪರಿಧಿಯಾಚೆಗಿನ ವಿಶಾಲವಾದ ಶ್ರೀಮಂತವಾದ ವೈವಿಧ್ಯಪೂರ್ಣವಾದ ಬದುಕಿನಲ್ಲಿ ಪಾಲ್ಗೊಳ್ಳುತ್ತೇವೆ. ಇಂತಹ ಸಾಹಿತ್ಯದ ಓದಿನಿಂದ ಆನಂದ, ಆತ್ಮಸಂಸ್ಕಾರ ಜೀವನ ದರ್ಶನ ಪಡೆಯುತ್ತೇವೆಂದು ಹೇಳು ವುದು ಅತಿಶಯೋಕ್ತಿಯೇನಲ್ಲ.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ನನ್ನ ಓದು 'ಪದ್ಮ ಇಷ್ಟು ಲೈಟಾದರೆ ಹೇಗೆ ಸ್ವಾಮಿ?' ಎಂಬ ಲಘು ಸಾಹಿತ್ಯದಿಂದ ಹಿಡಿದು ಸಾಹಿತ್ಯ ವಿಮರ್ಶೆಯಂತಹ ಗಂಭೀರ ಸಾಹಿತ್ಯದವರೆಗೆ ಇರುವ ಸಾಹಿತ್ಯದ ವಿವಿಧ ಪ್ರಕಾರಗಳನ್ನು, ಪ್ರಖ್ಯಾತ ಲೇಖಕರಿಂದ ಹಿಡಿದು ಹೆಸರು ತಿಳಿಯದ ಜಾನಪದರವರೆಗಿನ ಲೇಖಕರ ಕೃತಿಗಳನ್ನು ಒಳಗೊಂಡಿದೆ. ಹೀಗಿರುವಾಗ

ಹೆಸರಿಸುವುದು ಸರಿಯಲ್ಲ. ಆದರೂ ಪ್ರಾತಿನಿಧಿಕವೆಂಬಂತೆ ಕೆಲವು ಮುಖ್ಯ ಪ್ರಕಾರಗಳಿಂದ ಕೆಲವು ಪ್ರಮುಖ ಲೇಖಕರನ್ನಷ್ಟೇ ಹೆಸರಿಸಬಯಸುತ್ತೇನೆ. ಕಾವ್ಯಕ್ಕೆ ಕುವೆಂಪು, ಕೆ.ಎಸ್.ನರಸಿಂಹ ಸ್ವಾಮಿ, ಕಾದಂಬರಿಗೆ ಶಿವರಾಮಕಾರಂತ, ಎಸ್.ಎಲ್.ಭೈರಪ್ಪ, ಸಣ್ಣಕತೆಗೆ ಬೆಸಗರಹಳ್ಳಿ ರಾಮಣ್ಣ ಮತ್ತು ಕುಂ. ವೀರಭದ್ರಪ್ಪ, ಕಾದಂಬರಿ ಮತ್ತು ಸಣ್ಣ ಕತೆಗಳೆರಡಕ್ಕೂ ಕೆ.ಪಿ. ಪೂರ್ಣಚಂದ್ರ ತೇಜಸ್ವಿ. ನಾಟಕಕ್ಕೆ ಟಿ.ಪಿ.ಕೈಲಾಸಂ, ಗಿರೀಶ್‌ಕಾರ್ನಾಡ್ ಮತ್ತು ಚಂದ್ರಶೇಖರ ಕಂಬಾರ, ಪ್ರಬಂಧಕ್ಕೆ ಎ.ಎಸ್. ಮೂರ್ತಿರಾವ್, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ನನ್ನ ಪ್ರಥಮ ಆಯ್ಕೆ.

ಈ ಒಬ್ಬೊಬ್ಬರದೂ ಒಂದೊಂದು ರೀತಿಯ ವಿಶೇಷತೆ. ಕುವೆಂಪುರವರು ವೈಚಾರಿಕತೆ ಮತ್ತು ಜೀವನದರ್ಶಕ್ಕೆ ಇಷ್ಟವಾದರೆ, ನರಸಿಂಹಸ್ವಾಮಿಯವರ ಕಾವ್ಯ ಮಲ್ಲಿಗೆಯಷ್ಟೇ ಸರಳವಾದ ಸುಕುಮಾರವಾದ ಭಾವಾಭಿವ್ಯಕ್ತಿಗೆ ಇಷ್ಟವಾಗುತ್ತದೆ. ಶಿವರಾಮಕಾರಂತ ಮತ್ತು ಎಸ್.ಎಲ್. ಭೈರಪ್ಪ ಅವರ ಕಾದಂಬರಿಗಳು ವೈವಿಧ್ಯಮಯವಾದ ಜೀವನಾನುಭಗಳಿಂದ ದಟ್ಟೈಸಿ ನಮ್ಮ ಅನುಭವದ ನೆಲೆಗಳನ್ನು ವಿಸ್ತಾರಗೊಳಿಸುತ್ತವೆ. ವಿಷಾದವೇ ಸ್ಥಾಯಿ ಭಾವವಾಗಿರುವ ಬೆಸಗರಹಳ್ಳಿ ರಾಮಣ್ಣನವರ ಕಥೆಗಳು ನಮ್ಮನ್ನು ಕರುಣೆಯ ಮಡುವಿನಲ್ಲಿ ಮೀಯಿಸುತ್ತವೆ. ವಿಸ್ಮಯಕಾರಿ ವಿಷಯಗಳನ್ನು ರೋಚಕವಾಗಿ ನಿರೂಪಿಸುವ ಶೈಲಿ ತೇಜಸ್ವಿ ಯವರದಾದರೆ, ಕುಂ.ವೀಗಭದ್ರಪ್ಪ ಅವರದು ಚಾರ್ಲ್‌ಚಾಪ್ಲಿನ್ ಮಾದರಿಯಲ್ಲಿ ನೋವಿನ ಸಂಗತಿಗಳನ್ನು ನಗೆಯ ಲೇಪ ಹಚ್ಚಿ ಹೇಳುವುದು.

ಕನ್ನಡ ರಂಗಭೂಮಿಗೆ ಹೊಸ ಆಯಾಮ ತಂದುಕೊಟ್ಟ ಪ್ರಹಸನ ಪಿತಾಮಹ ಟಿ.ಪಿ.ಕೈಲಾಸಂ ಅವರ ನಾಟಕಗಳು, ಸಮಾಜದ ನ್ಯಾಯ ಪ್ರಜ್ಞೆಯನ್ನು ಬಡಿದೆಬ್ಬಿಸುವ, ವ್ಯಕ್ತಿಗಳ ನಡತೆಯನ್ನು ಶೋಧಿಸುವ ಕಲೆಗಾರಿಕೆಯಿಂದ, ಗ್ರಾಂಥಿಕವಲ್ಲದ ಕನ್ನಡ-ಇಂಗ್ಲೀಷ್ ಎರಡನ್ನೂ ವಿಶಿಷ್ಟವಾಗಿ ಬೆರೆಸಿ ರೂಪಿಸಿದ ಭಾಷೆಯ ಪ್ರಯೋಗದಿಂದ ಆಪ್ತವಾಗುತ್ತವೆ. ಹಾಗೆಯೇ ಪುರಾಣ ಮತ್ತು ಚರಿತ್ರೆಯ ಸಂಗತಿಗಳನ್ನು ವರ್ತಮಾನದೊಂದಿಗೆ ಮುಖಾಮುಖಿಯಾಗಿಸುವ ಗಿರೀಶ್ ಕಾರ್ನಾಡರ ನಾಟಕಗಳು ಅವುಗಳ ಪ್ರಸ್ತುತತೆಗೆ ಇಷ್ಟವಾಗುತ್ತವೆ. ಊಳಿಗಮಾನ್ಯ ಪದ್ಧತಿಯ ಅಟ್ಟಹಾಸವನ್ನು ಅನಾವರಣಗೊಳಿಸುವ ಚಂದ್ರಶೇಖರ ಕುಂಬಾರರ ನಾಟಕಗಳು ರಂಜನೀಯ ಜಾನಪದ ಶೈಲಿಗೆ ಇಷ್ಟವಾಗುತ್ತವೆ. ಇನ್ನು ಪ್ರಬಂಧ ಸಾಹಿತ್ಯದಲ್ಲಿ ನನಗೆ ಆಸಕ್ತಿ ಮೂಡಿದ್ದೇ ಎ.ಎನ್.ಮೂರ್ತಿರಾಯರ ಪ್ರಬಂಧಗಳ ಪಠನದಿಂದ. ಲಲಿತವಾದ ವಿಷಯಗಳನ್ನು ಸುಲಲಿತ ವಾದ ಶೈಲಿಯಲ್ಲಿ ಹೃದ್ಯವಾದ ಗದ್ಯದಲ್ಲಿ ಹೇಳುವುದರಲ್ಲಿ ಮೂರ್ತಿರಾಯರ ವಿಶಿಷ್ಟತೆ ಅಡಗಿದೆ. ಹಳ್ಳಿಗಾಡಿನ ಸಮಸ್ತ ಆಗು-ಹೋಗುಗಳ ಚಿತ್ರಣವನ್ನು ನವಿರು ಹಾಸ್ಯದ ಮೂಲಕ ಕಣ್ಣಿಗೆ ಕಟ್ಟಿದಂತೆ ಹೇಳುವುದು ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೆ ಸಿದ್ಧಿಸಿದೆ. ಹೀಗೆ ಪ್ರತಿ ಯೊಬ್ಬರೂ ತಾವು ನಿರೂಪಿಸುವ ವಸ್ತು, ಶೈಲಿ, ಆಯ್ಕೆ ಮಾಡಿಕೊಂಡ ಪ್ರಕಾರಗಳಿಂದ ನನ್ನೊಳಗಿನ ಓದುಗನನ್ನು ಬಡಿದೆಬ್ಬಿಸಿ ಅನುಸಂಧಾನಕ್ಕೆ ಅಣಿ ಮಾಡುತ್ತಾರೆ.

ಇಲ್ಲಿ ನಾನು ಹೆಸರಿಸಿರುವ ಲೇಖಕರು ನನ್ನ ತಲೆಮಾರಿಗೆ ಮತ್ತು ಅದರ ನಿಕಟಪೂರ್ವ

ತಲೆಮಾರಿಗೆ ಸೇರಿದವರು. ಹಾಗೆಂದು ನಾನು ಅವರನ್ನು ಅವಗಣಿಸಿದ್ದೇನೆಂದು ತಿಳಿಯಬೇಕಿಲ್ಲ. ಈ ಎರಡು ತಲೆಮಾರಿಗೆ ಸೇರಿದ ಲೇಖಕರ ಕೃತಿಗಳನ್ನು ಓದುವ ಅಭ್ಯಾಸದ ಜೊತೆಗೆ ಅದಕ್ಕೂ ಹಿಂದಿನ ತಲೆಮಾರುಗಳಿಗೆ ಸೇರಿದ ಹಳೆಗನ್ನಡ ಮತ್ತು ನಡುಗನ್ನಡ ಕಾಲದ ಕರ್ತೃಗಳ ಕೃತಿಗಳ ಬಗ್ಗೆ ಶಾಲಾ-ಕಾಲೇಜು ದಿನಗಳಲ್ಲಿ ಪಾಠ ಕೇಳಿದ್ದೇನೆ. ವಿಚಾರಗೋಷ್ಠಿಗಳನ್ನು ಆಲಿಸಿದ್ದೇನೆ. ಅಲ್ಲಲ್ಲಿ ಕ್ವಚಿತ್ತವಾಗಿ ಓದಿಕೊಂಡಿದ್ದೇನೆ. ಆನಂದಿಸಿದ್ದೇನೆ. ಅವುಗಳಲ್ಲಿನ ಉದಾತ್ತ ವಿಚಾರಗಳನ್ನು ಕಾಂತಾ ಸಂಹ್ಮಿತೆ ಎಂಬಂತೆ ಸ್ವೀಕರಿಸಿದ್ದೇನೆ.

ಕನ್ನಡ ಸಾಹಿತ್ಯದ ಜೊತೆಗೆ ಅನ್ಯ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡು ಬಂದ ಸಾಹಿತ್ಯವನ್ನು ಸ್ವಲ್ಪಮಟ್ಟಿಗೆ ಓದಿರುವೆ. ಹಿಂದಿ, ಪಂಜಾಬಿ, ಒರಿಯಾ, ಉರ್ದು, ತೆಲುಗು, ಅಸ್ಸಾಮಿ, ಗುಜರಾತಿ ಭಾಷೆಗಳ ಕಥಾ ಮತ್ತು ಕಾದಂಬರಿ ಸಾಹಿತ್ಯ ನನ್ನ ಓದಿನ ದಾಹಕ್ಕೆ ಉದಕವನ್ನೆರೆದು ತಣಿಸಿವೆ.

●

•ಟಿ ಬಸವರಾಜ್ ತೂಲಹಳ್ಳಿ (ಇಂಗ್ಲಿಷ್ ಅಧ್ಯಾಪಕ)

ಆನಂದಕ್ಕಾಗಿ, ಸಮಯ ಹರಣಕ್ಕಾಗಿ, ಬದುಕಿನ ಜಂಜಡತೆಯಿಂದ ಕೆಲಕಾಲ ಮುಕ್ತವಾಗಿಸಿಕೊಳ್ಳಲು, ಜ್ಞಾನೋದ್ದೀಪನೆಗಾಗಿ, ಸಂಶೋಧನೆಗಾಗಿ.....ಹೀಗೆ ಓದಿನ ಉದ್ದೇಶ ಹಲವಾರು. ಆನಂದ, ಸಮಯ ಹರಣಕ್ಕಾಗಿ ಓದು ಮೊದಲನೆ ವರ್ಗದ್ದು. ಇಲ್ಲಿ ನಿರ್ದಿಷ್ಟ ಲೇಖಕರ ಹಾಗೂ ಕೃತಿಗಳ ಆಯ್ಕೆ ಅಭಿರುಚಿಯಾಧಾರಿತ. ಕೆಲವೊಮ್ಮೆ ಹಾಗಿರಲೂಬೇಕಿಲ್ಲ. ಸಂಶೋಧನೋದ್ದೇಶದ ಬರಹ-ಭಾಷಣಗಳಿಗಾಗಿ ಓದು ಎರಡನೇ ವರ್ಗದ್ದು. ಇಲ್ಲಿ ಯಾವ ಗ್ರಂಥ, ಯಾವ ಲೇಖಕ-ಎಂಬುದೆಲ್ಲ ಓದುಗರ ಆಯ್ಕೆಯ ಕ್ಷೇತ್ರ ಮತ್ತು ಅಧ್ಯಯನೋದ್ದೇಶದಿಂದ ನಿರ್ಧರಿತವಾಗುವಂತಹುದು.

ಈ ಎರಡು ರೀತಿಯ ಓದುಗಳಲ್ಲಿ ನನ್ನದು ಎರಡನೇ ವರ್ಗದ್ದು. ಖಚಿತ ಉದ್ದೇಶದಿಂದ ಓದುತ್ತೇನೆ. ನಿಶ್ಚಿತೋದ್ದೇಶಿತ ಓದೇ ಅರ್ಥಪೂರ್ಣ ಓದು ಎಂಬುದು ನನ್ನ ಅಭಿಮತ! ಮನೋ ರಂಜನೆಗೆ ನಾನು ಓದುವುದಿಲ್ಲ. ಒಂದು ಗೊತ್ತಾದ ಕಾಲದಲ್ಲಿ ಸಮಾಜದಲ್ಲಿ ಪ್ರಮುಖ ಅಲೆ ಎಬ್ಬಿಸುವ ಸಮಸ್ಯೆಗಳಲ್ಲಿ, ಅವನ್ನು ಕುರಿತಾದ ಜನ ಮನೋಧರ್ಮ-ಜನಾಭಿಪ್ರಾಯಗಳಲ್ಲಿ ಕಾಣಬರುವ ಗೊಂದಲ ತಪ್ಪು ಗ್ರಹಿಕೆಗಳು ನನ್ನನ್ನು ಓದಿಗೆ ಪ್ರೇರಿಸುತ್ತವೆ. ಆ ಸಮಸ್ಯೆಗಳ ಆಳದಲ್ಲಿರಬಹುದಾದ ಸತ್ಯವನ್ನು ತಿಳಿಯಬೇಕೆಂಬ, ತಿಳಿದು ನನ್ನ ಸುತ್ತಲಿನ ಪರಿಸರಕ್ಕೆ ತಾಕಿಸ ಬೇಕೆಂಬ ಕಾಳಜಿಯೇ, ನನ್ನ ಓದಿಗೆ ಮೂಲಕಾರಣ. ವೈಜ್ಞಾನಿಕ ಅಧ್ಯಯನವೊಂದೇ ಅರ್ಥಾತ್ ಮಾರ್ಕ್ಸ್‌ವಾದಿ ಅಧ್ಯಯನ ಪದ್ಧತಿಯೊಂದೇ ಸತ್ಯಾನ್ವೇಷಣೆಯ ಏಕೈಕ ದಾರಿಯೆಂಬ ಮೂಲ ತಿಳುವಳಿಕೆ ನನ್ನದು. ಹಿರಿಯ ಬುದ್ಧಿಜೀವಿಗಳ ಬರಹ ಸಂಪರ್ಕ

ದಿಂದ, ಆಗಲೇ ವಿಶ್ವವ್ಯಾಪ್ತಿ ದಟ್ಟವಾಗಿ ಬೆಳೆದು ನಿಂತ ವಿದ್ಯುತ್‌ಕ್ಷೇತ್ರದಿಂದ ತಿಳಿದುಕೊಂಡ ತಿಳುವಳಿಕೆ ಇದು. ಆದ್ದರಿಂದ ನನ್ನ ಸೈದ್ಧಾಂತಿಕ ಆಕರ ಮತ್ತು ಲೇಖಕರು ನಿಶ್ಚಿತವಾಗಿದೆ. ಅದು ಮಾರ್ಕ್ಸ್‌ವಾದಿ ಬರಹಗಾರರು. ನನ್ನದು ಸ್ವಯಂಪ್ರೇರಿತ ಸಂಶೋಧನಾ ಯೋಜನೆಯ ಅಧ್ಯಯನ. ಯಾವುದೇ ವಿಶ್ವವಿದ್ಯಾಲಯ ನೆರವು, ವಿಶ್ವವಿದ್ಯಾಲಯಪಂಡಿತರ ಮಾರ್ಗದರ್ಶನದ ವರವಿಲ್ಲದ, ನನ್ನ ಮನೆಯೆಂಬ ವಿ.ವಿ.ಯಲ್ಲಿ ನಡೆದ 'ಸಂಶೋಧನೆ'. ಅದು ಇತರರಿಗೆ ಹೇಗೋ, ನನಗೆ ಮಾತ್ರ ಸಂಶೋಧನೆಯೆ! ಈ ಉದ್ದೇಶದ ಓದಿನಲ್ಲಿ ಹಿಂಸೆ, ಖುಷಿ, ಆತಂಕ, ನಿರಾಸೆ, ಎಲ್ಲಾ ಉಂಟು. ಒಂದು ನಿರ್ದಿಷ್ಟ ಸಮಸ್ಯೆ ಕುರಿತು ಜನರೇನು 'ಸತ್ಯ' ಎಂದು ನಂಬಿರುತ್ತಾರೋ ಅದಕ್ಕಿಂತ ಬೇರೆಯದೇ ಆದ 'ಸತ್ಯ'ವನ್ನು ಒಂದು ಸಾಮಾನ್ಯ ಚಿಂತನೆಯ ಹಿನ್ನೆಲೆಯಲ್ಲಿ ನಾನು ಊಹಿಸಿರುತ್ತೇನೆ. ಅದು ಅಧ್ಯಯನ ಕಾಲದಲ್ಲಿ 'ಸರಿ' ಎಂದು ಕಾಣುತ್ತಾ ಹೋದಾಗ ಆಗುವ ಖುಷಿ ಅಗಣಿತ! ಅಡಲೊಂದು ಚಿಕ್ಕ ಕುಣಿ ತೋಡಲು ಚೂರ ಬಂಗಾರ ಸಿಕ್ಕಿತು. ಆಸೆ ಹೆಚ್ಚಿ ತೋಡೇ ತೋಡಿ ಭಾವಿಯನ್ನೇ ಮಾಡಿದೆ! ಹಾಗೆ, ಓದಿನಲ್ಲಿ ತೀವ್ರತೆ ಹೆಚ್ಚಿ, ಚಿಂತೆಯೂ ಸೇರಿ, ನಿದ್ದೆಯೂ ಹೋಗುತ್ತದೆ. ಸುಡುಗಾಡು ಈ ಓದೇ ಬೇಡ ಎಂಬ ವೈರಾಗ್ಯ! ಆದರೆ ಈ ಲಘುತಮ ಸಂಚಾರಿ ಭಾವದ ಮೇಲೆ ಇದರ ಸವಾರಿ: ನಾನು ಇಂದು ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಬದುಕಿದ್ದೆ ಎಂಬುದಕ್ಕೆ ಸ್ಮಾರಕವಾಗಿ ನಿಂತು, ಇಂದು ನನ್ನನ್ನು ವಕ್ರದೃಷ್ಟಿಯಿಂದ, ತಿರಸ್ಕೃತವಾಗಿ ಕಂಡವರ ಮಕ್ಕಳ ಮರಿಮೊಮ್ಮಕ್ಕಳ ತಲೆಕೊರೆದು ಅವರ ಮನಸ್ಸಿನಲ್ಲಿ ನನ್ನ ಹೆಸರನ್ನು ಸ್ಥಾಯಿಗೊಳಿಸುವ 'ಹೊತ್ತಿಗೆ' ನಾನು ಬರೆಯಬೇಕು ಅಥವಾ ಅಂಥದನ್ನು ನಾನು ಬರೆಯುತ್ತಿದ್ದೇನೆ ಎಂಬ ಪ್ರಜ್ಞೆ! 'ನನ್ನದೊಂದು ಹೆಸರು ಈ ಒಂದು ಪುಸ್ತಕದ ಮೂಲಕ ಉಳಿದೀತು' ಎಂಬ ಚಿಕ್ಕ ವಿಚಾರವೇ ನನ್ನಂತಹ ಅನೇಕ ಸ್ವಯಂ ಪ್ರೇರಿತ ಅಧ್ಯಯನ ಶೀಲರಿಗಿರುವ ಏಕಮಾತ್ರ Stimuli. ಏಕೆಂದರೆ, ಸರಕಾರಿ ಅನುದಾನ ಪ್ರಶಸ್ತಿ ಪುರಸ್ಕಾರ "ಪುಣ್ಯವಂತರಿಗೆ" ಮಾತ್ರ!

ನನ್ನ 'ಸಂಶೋಧನೆಗಾಗಿ ಓದು' ಕೇವಲ ವರ್ತಮಾನದ ಪ್ರಚಲಿತ ಸಾಮಾಜಿಕ ಸಮಸ್ಯೆಗಳಿಂದ ಪ್ರೇರಿತವಾದುದಲ್ಲ. ಆಗಲೇ ಆಗಲೇ ಇತಿಹಾಸ ಪುಟ ಸೇರಿದ್ದು, ತನ್ನ ವಿದ್ಯುತ್ ಸ್ಪರ್ಶವನ್ನು ಸದಾ ಮೆದುಳಿಗೆ ಮುಟ್ಟಿಸುತ್ತಾ ಸದಾ ಸಂಪುಟ ಕೃತೀಕರಣಕ್ಕೊಳಗಾಗುವಂತಹ ವಿಚಾರಗಳಿಂದಲೂ ಪ್ರೇರಿತವಾದುದು. ಈ ಓದಿನಲ್ಲಿ ನಾನು ಬೌದ್ಧಿಕವಾಗಿ ಒಂದೊಂದು ಮೆಟ್ಟಿಲು ಏರುತ್ತಿದ್ದೇನೇನೋ ಎಂಬ ನಂಬುಗೆ! ಪರೀಕ್ಷೆಗೊಳಗಾಗಿಲ್ಲ! ಇತರರ ಅಧ್ಯಯನೋದ್ದೇಶಿತ ಓದು ಚಿಂತನೆಯ ಹರುಕು ಮುರುಕು ಪ್ರಯತ್ನಗಳಿಗೆ ಒಂದೆರಡು ಉದಾಹರಣೆ : ೧. "ವಿವಾಹ ದಕ್ಷಿಣೆ:ಮಾರ್ಕ್ಸ್‌ವಾದಿ ಅಧ್ಯಯನ ೨. "ಲೋಕಾಯತ ಮತ್ತು ಶೈವ-ವೀರಶೈವದ ಆರ್ಷೇಯ ಸ್ವರೂಪ"-ಇವುಗಳ ಸುತ್ತವೇ ನನ್ನ ಓದು.

ಕೊನೆಯದಾಗಿ ಶುದ್ಧ ಸಾಹಿತ್ಯಾಧ್ಯಯನ ಕುರಿತು. ನಾನು ಸಾಹಿತ್ಯ ಓದುವುದು ಕಮ್ಮಿ. ವೈಯಕ್ತಿಕ ಜ್ಞಾನಾರ್ಜನೆ ಮತ್ತು ಸಾಮಾಜಿಕ ಸಮಸ್ಯೆಗೆ ನನ್ನಿಂದ ಸಾಧ್ಯವಾಗುವ ಸ್ಪಂದನೆ ಇವೆರಡು ವೈಚಾರಿಕ ಕೃತಿ ಓದಿನಿಂದಲೇ ಸಾಧ್ಯ. ಸಾಹಿತ್ಯದ ಓದು ಇಷ್ಟು ಲಾಭಕರ ಅಲ್ಲ!

ಹಾಗೆಂದಾಕ್ಷಣ, ಸಾಹಿತ್ಯದ ಮಹತ್ವ ಕಡಿಮೆಯಾಗಲಿಲ್ಲ. ಆನೆ ಭಾರ ಆನೆಗೆ, ಒಂಟೆ ಭಾರ ಒಂಟೆಗೆ! ನನಗೊಂಚೂರು ವಿಮರ್ಶೆ ಚಪಲ! ಓದಿದ್ದನ್ನು ವಿಮರ್ಶಿಸಿದ್ದೇನೆ. ವಿಮರ್ಶೆಗೆಂದೇ ಸುದೀರ್ಘ ಸಾಹಿತ್ಯ ಓದಿಗೆ ತೊಡಗಿಲ್ಲ. ಹಾಗೆ ಒಂಚೂರು ಅದೂ ಇದು ಬರೆವುದನ್ನು ಕಲಿಯುವ ಪ್ರಯತ್ನ. ಈ ಕಲಿಕೆಗಾಗಿ ಪುರುಸೊತ್ತು ಸಿಕ್ಕಾಗ ಓದುತ್ತೇನೆ. ಕುವೆಂಪುರವರ ನಾಟಕ ಕವನ ಸಂಕಲನಗಳು, 'ಕೋಗಿಲೆ ಮತ್ತು ಸೋವಿಯತ್ ರಷ್ಯಾ', ಬೇಂದ್ರೆಯವರ 'ಗರಿ', 'ನಾಕು ತಂತಿ', ಚಂಪಾ-ಕಾರ್ನಾಡರ ನಾಟಕಗಳು, ಕುಂವೀ ಬೆಸಗರಳ್ಳಿ ಕತೆಗಳು, ಬರಗೂರು ಸಿದ್ಧಲಿಂಗಯ್ಯನವರ ಕವನಗಳು, ಕಾರಂತರ ಕೆಲ ಬರಹಗಳು, ವೈಚಾರಿಕ ಸಾಹಿತ್ಯ ದಲ್ಲಿ ದೇವಿ ಪ್ರಸಾದರ 'ಲೋಕಾಯುತ', 'ದಿ ಮದರ್ಸ್', 'ಎನ್‌ಶಿಯಂಟ್ ಸೊಸೈಟಿ', ಎಸ್ ಎಸ್ ಹಿರೇಮಠ, ಶಂಬಾ, ಕಲಬುರ್ಗಿ, ಚಿ.ಮೂ. ತಿಪ್ಪೇರುದ್ರ ಸ್ವಾಮಿ ಮುಂತಾದವರ ಕೃತಿಗಳು; ವಿಮರ್ಶೆಯಲ್ಲಿ ಡಿ.ಆರ್, ಟಿ.ಪಿ. ಅಶೋಕ್, ರಹಮತ್ ಮುಂತಾದವರ ಬರಹಗಳು- ಹೀಗೆ ಪಟ್ಟಿ ಬೆಳೆಸಬಹುದು.

ಕೊನೆಯದಾಗಿ: ಓದು, ಮೇಲಿನ ಯಾವುದಾದರೂ ಆಗಿರಲಿ, ಆನಂದ ನೀಡುವ, ಅರಿವು, ಹಿಗ್ಗಿಸುವ ಏಕೈಕ ಸಾಧನ! ಕಾಲ ಹೇಗೆ ಸರಿಯುತ್ತದೆ ಗೊತ್ತಾಗದು! ಓದಿ ಮುಗಿಸಲಾರದ ಪುಸ್ತಕಗಳ ಮಹಾಸಾಗರ. ಆದರೆ ಆಯಷ್ಯ ಅಲ್ಪ ಎಂಬುದು ನೆನೆಸಿಕೊಂಡಾಗ ಸಂಕಟವಾಗುತ್ತದೆ.

●

•ಜಿ ಎನ್ ಅಶೋಕವರ್ಧನ (ಪುಸ್ತಕ ವ್ಯಾಪಾರಿ)

ಬಿ. ಎ ಯಲ್ಲಿ ನನ್ನದು ಕನ್ನಡ ಇಂಗ್ಲಿಷ್ ಐಚ್ಛಿಕ ವಿಷಯಗಳು. ಆಗ ಅಸಂಖ್ಯ ಕನ್ನಡ ಕಾದಂಬರಿಗಳನ್ನು ಓದಿದೆ. ಪರ್ವತಾರೋಹಣ ಸಂಬಂಧೀ ಸಾಹಸ ಕ್ರೀಡೆಗಳು ಅಂದೂ ನನ್ನ ಹವ್ಯಾಸವಾಗಿದ್ದವು. ಅದಕ್ಕೆ ಸಂಬಂಧಪಟ್ಟ, ಹಲವು ಕೃತಿಗಳನ್ನು (ಪ್ರವಾಸ ಕಥನ, ಸಾಹಸಯಾನ, ಮೃಗಯಾ ಸಾಹಿತ್ಯ) ಇಂಗ್ಲಿಷ್ ಕನ್ನಡ ಎರಡರಲ್ಲೂ ಆಸ್ವಾದಿಸಿದ್ದೇನೆ. ಇಂಗ್ಲಿಷ್ ಎಂ.ಎ.ಗೆ ಬಂದಾಗ ಅಧ್ಯಯನದ ಔಪಚಾರಿಕತೆಯಲ್ಲಿ ಪ್ರಥಮ ಬಲಿ ಓದಿನ ಖುಶಿ. ಅಲ್ಲಿ ಒಟ್ಟಾರೆ ಓದಿರಲಿ, ನೇರ ಪಠ್ಯಗಳನ್ನೂ ಪೂರ್ಣ ಓದಲಿಲ್ಲ! ಆದರೂ ನಾನು ಕುರಿತೋದದೆಯುಂ ಎಂ.ಎ.ಪದವೀಧರನ್!

ನನ್ನ ಸ್ವಂತ ಆಯ್ಕೆಯಿಂದ ಪುಸ್ತಕ ವ್ಯಾಪಾರಿಯಾದೆ. ಸುಮಾರು ಇಪ್ಪತ್ತೇಳು ವರ್ಷಕಾಲ ಹೆದ್ದಾರಿಗಳಲ್ಲೇ ನಡೆದು ಇಂದು ಪ್ರಕಾಶಕನೂ ಆಗಿದ್ದೇನೆ. ಇಲ್ಲಿನ ಸಾರ್ವಜನಿಕ ಸಂಪರ್ಕ ನನ್ನ ಆಸ್ತಿಗಳನ್ನು ವಿಶ್ವಮುಖಿವಾಗಿಸಿವೆ. ಸುಲಭ ಹಣದ ಪಠ್ಯ, ಗೈಡ್, ಲೇಖನ ಸಾಮಗ್ರಿಗಳು ಮೊದಲಾದವನ್ನು ನಾನು ನಿರಾಕರಿಸುತ್ತೇನೆ. ನನ್ನ ಪುಸ್ತಕಗಳ ಆಯ್ಕೆ, ಕೊಳ್ಳುವುದು ಧಾರಾಳವಿದೆ, ವೈವಿಧ್ಯಮಯವೂ ಇದೆ. ಆದರೆ ಆ ಎಲ್ಲ ಪುಸ್ತಕಗಳೂ ಪರ್ಯವಸಾನ ಗೊಳ್ಳುತ್ತಿರುವುದು ನನ್ನಲ್ಲಿರುವ ವ್ಯಾಪಾರಿಯಲ್ಲಿ (ಓದುಗನಲ್ಲಿ ಅಲ್ಲ!).

ನನ್ನ ನಿಜ ಓದಿನ ಬಗ್ಗೆ ಹೇಳುವುದಾದರೆ ಎರಡು ಸ್ಪಾಕ್ ಜೋಕುಗಳಿವೆ (ಹಳಸಲು ಹಾಸ್ಯ!). ೧. ನನ್ನ ಸಾಹಿತ್ಯಕ ಒಲವು ನೋಡಿ ಸಾಮಾನ್ಯವಾಗಿ ಎಲ್ಲರೂ ಕೇಳುವ ಪ್ರಶ್ನೆಗಳು...'ಈಚೆಗೆ ಏನು ಬರೆಯುತ್ತಿದ್ದೀರಿ? ನಿಮ್ಮ ಈಚಿನ ಓದು ಯಾವುದು?' ಅದಕ್ಕುತ್ತರ...ಬಿಲ್ಲೂ ನೆನಪಿನೋಲೆಗಳೂ ಜಗಳಗಂಟೀ ಪತ್ರಗಳು ನನ್ನ ಪ್ರಮುಖ ಬರೆವಣಿಗೆ. ಪ್ರಕಾಶಕರ ಬಿಲ್ಲೂ ಬೆಲೆಪಟ್ಟಿಗಳೂ ನನ್ನ ಓದಿನಲ್ಲಿ ಸಿಂಹಪಾಲು. ೨. ಏನಾದರೂ ಕೊಳ್ಳ ಬೇಕೆಂದು ಬಂದ ಕೆಲವರು ತುಂಬಿದ ಕಪಾಟುಗಳನ್ನು ತೋರಿಸಿ ನನ್ನಲ್ಲಿ ಕೇಳುವುದಿದೆ... 'ಯಾವುದು ಸ್ವಾಮಿ, ಇವುಗಳಲ್ಲಿ ನಿಮ್ಮ ಆಯ್ಕೆ? ಹೇಳದಿರುವುದು ಹೇಗೆ... ಇಡೀ ಮಳಿಗೆ ನನ್ನ ಆಯ್ಕೆ! ಎರಡೂ ಉತ್ತರಗಳು ನಗೆ ಉಕ್ಕಿಸುವುದು ನಿಜ. ಆದರೆ ಅವು ವಾಸ್ತವವೂ ಆಗಿವೆ. ಆದ್ದರಿಂದ ಇಷ್ಟಕ್ಕೇ ವಿರಮಿಸುತ್ತೇನೆ.

•ಪೃಥ್ವಿರಾಜ ಕವತ್ತಾರು (ಶಿಕ್ಷಕ)

ನಾನು ಓದುವುದು ಎರಡು ಕಾರಣಗಳಿಗಾಗಿ. ಒಂದು ಜ್ಞಾನವರ್ಧನೆ; ಈ ಮೂಲಕ ಜೀವನದಲ್ಲಿ ಹೊಸ ದೃಷ್ಟಿಯನ್ನು ಕಂಡುಕೊಳ್ಳುವ ಪ್ರಯತ್ನ. ಎರಡು, ಜೀವನೋಪಾಯ. ನನ್ನದು ಅಕ್ಷರ ಕೈಂಕರ್ಯವಾಗಿರುವುದರಿಂದ ಬದುಕಲು ಒಂದಿಷ್ಟು ಓದಲೇಬೇಕಾಗಿದೆ.

ನಾನು ಬಾಲ್ಯದಲ್ಲಿ 'ಚಂದಮಾಮ' ಓದುತ್ತಿದ್ದುದಕ್ಕೂ, ಈಗ ಎಚ್ ಎಸ್ ಶಿವಪ್ರಕಾಶರ 'ಮಿಲರೇಪ'ವನ್ನು ಓದುತ್ತಿರುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಕಾವ್ಯದ ಒಂದನೇ ಓದು, ಎರಡನೇ ಓದು... ಹೀಗೆ ಹೇಳಿದಾಗಲೆಲ್ಲ 'ಓದು' ಕೂಡಾ (ಸಾಹಿತ್ಯ ವಿಮರ್ಶಕರ ಪ್ರಕಾರ) ಒಂದು ಪರಿಭಾಷೆಯಾಗಿ ಬಳಕೆಯಾಗುತ್ತಿದೆ ಅಂತ ನನ್ನ ಅನಿಸಿಕೆ. ಅಂತೆಯೇ ನಿಮ್ಮ ಪ್ರಶ್ನೆ ಕೂಡಾ 'ಗಂಭೀರ ಸಾಹಿತ್ಯದ ಓದುಗ'ರನ್ನು ಒಳಗೊಂಡೀತೆಂಬ ಗುಮಾನಿ ನನ್ನದು. 'ಗಂಭೀರ' ಎಂಬ ಪದಕ್ಕೆ ನನ್ನದೇನೂ ಆಕ್ಷೇಪವಿಲ್ಲ, ಆದರೆ ಈಗಿನ 'ಕ್ಯಾಂಪಸ್ ಸಂಸ್ಕೃತಿ' ಹೇಗೆ ದೊಡ್ಡದೊಂದು ಓದುಗ ವಲಯವನ್ನು ಹೊರಗೇ ಇಟ್ಟಿದೆ ಎಂಬ ಅಂಶವನ್ನು ಅರಿತುಕೊಳ್ಳದೇ ಹೋದಲ್ಲಿ 'ಓದುಗರ ಸಂಖ್ಯೆ' ಕಡಿಮೆಯಾಗುತ್ತಿರುವುದಕ್ಕೆ ಕಾರಣ ಹೊಳೆಯಲಾರದು.

ಈವರೆಗೆ ನಾನು ನಿರ್ದಿಷ್ಟವಾಗಿ ಇದೇ ಲೇಖನವನ್ನು ಓದಿದ್ದೇನೆ ಅಂತ ಹೇಳುವಂತಿಲ್ಲ. ಮಿದುಳು ಮತ್ತು ಹೃದಯಗಳಿಗೆ ಪ್ರಿಯವಾಗುವ ಹಲವು ಲೇಖಕರನ್ನು ಓದಿದ್ದೇನೆ.

ಡಿ.ಆರ್. ನಾಗರಾಜ್ ನನ್ನ ಪ್ರಿಯ ವಿಮರ್ಶಕ. ಇದರ ಮೂರ್‍ನಾಲ್ಕು ಸಂಕಲನಗಳ ಲೇಖನಗಳನ್ನು ಆಗಾಗ್ಗೆ ಓದಿದ್ದೇನೆ. ಎಷ್ಟೋ ವಿಚಾರಗಳನ್ನು ಅರಗಿಸಿಕೊಳ್ಳಲು ಹೆಣ ಗಾಡಿದ್ದಿದೆ. ಡಿ.ಆರ್‌ನ ಪುಸ್ತಕಗಳನ್ನು ಕಂಕುಳಲ್ಲಿರಿಸಿ ತಿರುಗಾಡುವುದೇ ರೋಮಾಂಚನ ಹುಟ್ಟಿಸುವ ದಿನವೊಂದಿತ್ತು. ಆದರೆ ಕೆಲವೊಮ್ಮೆ ಡಿ.ಆರ್‌ನ ಬರಹಗಳು ಕೇವಲ ಮಿದುಳಿಗೆ ಮಾತ್ರ (ಬುದ್ಧಿಗೆ) ತಲುಪುತ್ತವೆ, ಹೃದಯಕ್ಕೆ ತಟ್ಟುತ್ತಲೇ ಇಲ್ಲವಲ್ಲ ಅಂತನ್ನಿಸಿದ್ದೂ ಇದೆ.

'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' ಪುಸ್ತಕದಲ್ಲಿ ಡಿ.ಆರ್. ಮಂಡಿಸಿದ ವಾದಗಳು ತುಂಬಾ ಇಷ್ಟವಾದರೂ, ಓದುತ್ತ ಓದುತ್ತ ಏಕೋ ಇದಕ್ಕಿಂತ ಅಲ್ಲಮನ ವಚನಗಳೇ ಹೆಚ್ಚು ಆಪ್ತ ಅಂತನ್ನಿಸಿ ಅದನ್ನು ಮುಚ್ಚಿ ವಚನಗಳ ಪುಸ್ತಕವನ್ನು ತೆರೆದದ್ದಿದೆ. ಸಾಹಿತ್ಯ ವಿಮರ್ಶಕರೆಲ್ಲರ ಬರಹಗಳಲ್ಲೂ ಇಂತಹ ಮಿತಿಯ ಅರಿವಾಗಿ ತಟ್ಟನೆ ಮನಸ್ಸು ಇನ್ನೊಂದೆಡೆಗೆ ಓಲಾಡುವ ಸಾಮಾನ್ಯ ಅನುಭವವಿದು.

ವೈದೇಹಿ, ಜಯಂತ ಕಾಯ್ಕಿಣಿ, ನೇಮಿಚಂದ್ರ ಮುಂತಾದವರ ಕತೆಗಳನ್ನು ಓದಿದಾಗಲೂ ಅಷ್ಟೆ. ಯಾವುದೋ 'ಮಿತಿ'ಯ ಅರಿವಾದಾಗ 'ವಿಮರ್ಶಾ' ಪ್ರಕಾರಕ್ಕೆ ಜಿಗಿದದ್ದೂ ಇದೆ. ಈ ಮಿದುಳು-ಹೃದಯಗಳ ಓಲಾಟ ನನ್ನ ಓದನ್ನು ವಿಸ್ತರಿಸಿಕೊಳ್ಳಲು ಅನುಕೂಲವೇ ಆಯಿತೆನ್ನ ಬಹುದು.

ಇನ್ನೊಂದು ವಿಶಿಷ್ಟ ಅನುಭವವನ್ನು ಹೇಳುತ್ತೇನೆ. ಕತೆಗಾರರಲ್ಲಿ ಸೂಕ್ಷ್ಮಜ್ಞತೆ ಮಾನವೀಯತೆಯನ್ನು ನಿರೀಕ್ಷಿಸುತ್ತಾ, ಅದು ಅವರಲ್ಲಿ ಇಲ್ಲದಾಗ ಅವರ ಕತೆಗಳ ಬಗ್ಗೆಯೇ ವಿಶ್ವಾಸ ಕಳೆದುಕೊಳ್ಳುವುದು. 'ಬಂಡಾಯ'ದ ಹಣೆಪಟ್ಟಿ ಕಟ್ಟಿಕೊಂಡ ವಿಮರ್ಶಕರು ಆಡಳಿತ ಶಾಹಿಯ ಗುಲಾಮರಾದಾಗ, ಅವರ ಚಿಂತನೆಗಳ ಬಗ್ಗೆಯೇ ನಂಬಿಕೆಯನ್ನು ಕಳೆದು ಕೊಂಡದ್ದೂ ಇದೆ.

ತಾವು ಓದುವ ಲೇಖಕರ 'ಆದರ್ಶ'ಗಳು ಕೇವಲ ಆದರ್ಶ ಮಾತ್ರವಾಗಿ ಉಳಿದಾಗ ನನ್ನಂಥ ಎಷ್ಟೋ ಮಂದಿ ಸಣ್ಣಗೆ ಕಳವಳಗೊಂಡಿರಬಹುದು, ಓದಿನತ್ತ ವಿಮುಖರಾಗಿರಲೂ ಬಹುದು. ಅಶೀಶ್ ನಂದಿಯವರ ಎಷ್ಟೋ ವಿಚಾರಧಾರೆಗಳು ಇಷ್ಟವಾದರೂ ಅವರ ಚಿಂತನೆಗಳು ಎಲ್ಲಿಯೊ 'ಎಕಡಮಿಕ್ ಜಾಣತನದ್ದು' ಅಂತ ಭಾಸವಾಗತೊಡಗುತ್ತವೆ. ಅವರಿಗಿಂತ ಭಿನ್ನರಾದ ಮೇಧಾಪಾಟ್ಕರ್ ಅವರ ಕ್ರಿಯಾತ್ಮಕ ನೆಲೆಗಳು ಹೆಚ್ಚು ಇಷ್ಟವಾಗುತ್ತವೆ.

ಇಷ್ಟೆಲ್ಲ ಬರೆದರೂ, ಇದರ ಅರ್ಥ ನಾನು ಓದಿನ ಕುರಿತು ಉತ್ಸಾಹ ಕಳೆದು ಕೊಂಡಿದ್ದೇನೆಂದಲ್ಲ. ಆದರೆ, ನನ್ನ ಓದಿಗೆ ವಿದ್ಯುನ್ಮಾನ ಮಾಧ್ಯಮ, ತಂತ್ರಜ್ಞಾನಗಳಂತಹ ಅಂಶಗಳಿಗಿಂತ ಹೊರತಾಗಿ 'ಸಾಹಿತ್ಯ'ದ ಆಂತರಿಕ ಸಂಗತಿಗಳೇ ಹೇಗೆ ಪ್ರಭಾವ ಬೀರಿವೆ ಎಂಬುದನ್ನು ಹೇಳುವುದು ನನ್ನ ಉದ್ದೇಶ ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಿದ್ದರೆ ಇಂದಿನ ಓದಿನ ನೆಲೆಯನ್ನು ಭಿನ್ನ ರೀತಿಯಲ್ಲಿ ಕಂಡುಕೊಳ್ಳುವ ಪ್ರಯತ್ನ.

●

•ಯಂ. ಉಮಾಮಹೇಶ್ವರ (ಕೆಎಸ್‌ಆರ್‌ಟಿಸಿ ಕಂಡಕ್ಟರ್)

ಈ ಘೋರ ಸಂಸಾರ ದುಃಖ ಸಾಗರದಲ್ಲಿ ತೊಳಲುತ್ತಿರುವಾಗ ಸ್ವಲ್ಪ ಸುಖದ ಬಿಂದು ಕಾಣಿಸುವುದು, ಪುಸ್ತಕಗಳಲ್ಲಿ. ಸರ್ವಜನಾಂಗದ ಸಾಧಕರು, ಜ್ಞಾನಿಗಳು, ಪಂಡಿತರು ವಿಶ್ವತೋಃ ಮುಖಿಗಳು ಇಂದಿಗೂ ಅಮರರಾಗಿ ರಾರಾಜಿಸಲು ಈ ಹೊತ್ತಿಗೆಗಳು ಮತ್ತು ಅವುಗಳ ಪ್ರಾಮುಖ್ಯತೆ ಓದುಗರ ಮೇಲಾದ ಪ್ರಭಾವ, ನಡೆದು ಬಂದ ಹಾದಿ, ಶೋಧ-ಹೀಗೆ ಒಂದಲ್ಲ ಒಂದನ್ನು ತಿಳಿಸುತ್ತಲೇ ಇರುವ ಪುಸ್ತಕಗಳನ್ನು ಓದುತ್ತಲೇ ಇದ್ದರೆ, ಯಾರಿಗೆ ತಾನೆ ಪ್ರಿಯವಾಗುವುದಿಲ್ಲ? ಇಂತಹ ಪುಸ್ತಕ ಪ್ರಿಯರು, ಜನಪದ ವಿದ್ವಾಂಸರೂ ಆದ ಮುದೇನೂರು ಸಂಗಣ್ಣನವರು ನನ್ನ ನಮ್ಮ ಮನೆ ಅಂಗಳದಲ್ಲಿ ನಿತ್ಯ ಹುಡುಕಾಟದ ಕಂಗಳಲ್ಲಿ ಮನಗಳಲ್ಲಿ ಚಿತ್ರಿತವಾಗಿದ್ದು ನನ್ನ ಸುದೈವ. ಅವರ ಸಾಹಿತ್ಯದ ಅಧ್ಯಯನ ನನಗೆ ತುಂಬಾ ಇಷ್ಟ.

ರಾಜಕಾರಣ, ಸುಳ್ಳು, ವಂಚನೆ, ಕೊಲೆ, ಸುಲಿಗೆ, ಅಹಂಕಾರ, ಮಮಕಾರ, ಜನಜನಿತ ಅಮಲುಗಳು ಕನ್ನಡ ಸಾಹಿತ್ಯದಲ್ಲಿ ಪರಂಪರಾಗತವಾಗಿರುವುದಕ್ಕೆ ಕಾರಣವೇನು? ಈ ಹಿನ್ನೆಲೆಗಳಲ್ಲಿಯೇ ಬೆಳೆದು ಬಂದ ಜಾತೀಯತೆ, ಮತ-ಧರ್ಮ, ಮೌಢ್ಯತೆಗಳ ಮರ್ಮ ಅರಿಷಡ್ವರ್ಗಗಳ ಅಂತರಂಗ, ಭಯೋತ್ಪಾದಕರು, ಕೋಮುವಾದಿಗಳು, ಬಂಡವಾಳಶಾಹಿಗಳು, ಸಾಮ್ರಾಜ್ಯಶಾಹಿಗಳು, ಪುರೋಹಿತಶಾಹಿಗಳು ಇಂತಹ ಅನೇಕ ವಿಚಾರಗಳಿಗೆ ಪರ್ಯಾಯ ಚಿಂತನಗಳ ಮಂಥನ ನಡೆಯುವುದು ಓದಿನಿಂದಲ್ಲವೇ? ಹಾಗಾಗಿ ನಾನು ಇಂದು ಒಬ್ಬ ಓದುಗನಾಗಿದ್ದೇನೆ.

ಮೊದಮೊದಲು ನಾನು ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಬಿಡಿಗವನಗಳನ್ನು ಓದುತ್ತಿದ್ದೆ. ಅವು ಸಾಕಷ್ಟು ಖುಷಿ ಕೊಟ್ಟು ಮುದ ನೀಡುತ್ತಿದ್ದವು. ತದನಂತರ ಗಂಭೀರ ಲೇಖನಗಳತ್ತ, ವಿದ್ವಾಂಸರತ್ತ ಒಲವು, ಅವರ ವಿಮರ್ಶೆ, ಸೆಮಿನಾರ್ಸ್‌·ಭಾಷಣಗಳು ಮತ್ತಷ್ಟು ನನ್ನನ್ನು ಪ್ರಭಾವಿತಗೊಳಿಸಿದವು. ಹಾಗಾಗಿ ವಚನ ಸಾಹಿತ್ಯ, ದಾಸ ಸಾಹಿತ್ಯ ಹಾಗೂ ಕಾದಂಬರಿಗಳನ್ನು ಓದಲು ತೊಡಗಿದೆ. ಇತ್ತೀಚೆಗೆ ನವ್ಯ ಬಂಡಾಯ ಸಾಹಿತ್ಯದ ಪುಸ್ತಕಗಳನ್ನು ಬಿಡಿ ಲೇಖನಗಳನ್ನು ಕೊಂಡು ಓದುತ್ತಿದ್ದೇನೆ.

ನಾನು ವಿವಿಧ ಲೇಖಕರ ಪುಸ್ತಕಗಳನ್ನೇ ಓದಿಗೆ ಆರಿಸಿಕೊಂಡಿದ್ದೇನೆ. ನನ್ನಲ್ಲಿರುವ ಸಾವಿರಾರು ಪುಸ್ತಕಗಳಲ್ಲಿ ಓದಿದ್ದು ನೂರಾರು ಅಷ್ಟೇ. ವಿಷಯಕ್ಕನುಗುಣವಾಗಿ ಮಿಕ್ಕ ಪುಸ್ತಕಗಳನ್ನು ತೆರೆದು ನೋಡುವ ಹವ್ಯಾಸವಿದೆ. ಸಾಂದರ್ಭಿಕ, ಪ್ರಚಲಿತ ವಿದ್ಯಮಾನಕ್ಕನುಗುಣವಾಗಿ ಅದು ಸಾಗಿದೆ. ಸಮಯದ ಅಭಾವ ಹಾಗೂ ಬಡತನದಿಂದ ಅದನ್ನು ಕೈ ಬಿಟ್ಟೆ. ರಂಗಭೂಮಿಗೆ ಸಂಬಂಧಿಸಿದಂತೆಯೂ ಕಣ್ಣಾಡಿಸಿದ್ದು ಇದೆ. ಅಭಿನಯಿಸಿದ್ದೂ ಇದೆ. ಕಂಡಕ್ಟರ್ ಆಗಿ ಕಾಮ್ರೇಡ್ ಅನಿಸಿಕೊಂಡು ಕಮ್ಯೂನಿಜಂನಲ್ಲಿ ದುಡಿವ ದಿನಗಳು ಇವೆ. ಗಿರೀಶ್ ಕಾರ್ನಾಡರ 'ಟಿಪ್ಪು ಸುಲ್ತಾನ್' ಮತ್ತು 'ತುಘಲಕ್' ನಾಟಕಗಳನ್ನು ಬಿಟ್ಟರೆ ಉಳಿದೆಲ್ಲಾ

ನಾಟಕಗಳನ್ನು ಓದಿದ್ದೇನೆ. ಸಂಗಣ್ಣನವರ ಪುಸ್ತಕಗಳನ್ನು ಓದಿದ್ದೇನೆ. ಕಂಬಾರರ 'ಸಿರಿ ಸಂಪಿಗೆ', 'ಸಂಗ್ಯಾ ಬಾಳ್ಯ', 'ಜೋಕುಮಾರಸ್ವಾಮಿ', 'ಹರಕೆಯ ಕರಿ' ನನಗೆ ಪ್ರಿಯವಾಗಿವೆ. ಇಷ್ಟಾದರೂ ಇಂದಿಗೂ ಡಾ.ಪುರುಷೋತ್ತಮ ಬಿಳಿಮಲೆಯವರು ಒಂದು ಪ್ರಬಂಧದಲ್ಲಿ ಉಲ್ಲೇಖಿಸಿರುವುದು ನನಗೆ ನೆನಪಾಗಿ ಕಾಡುತ್ತಿದೆ. ಅದೇಂದರೆ "ನಾವು ರಚಿಸಿರುವ ಸಾಹಿತ್ಯ ಬೆಂಕಿಯಲ್ಲಿ ಉರಿದರೂ ಚಿಂತೆಯಿಲ್ಲ, (ಜನರು) ಆಡುವ ಮಾತಿಗೆ ಬೀಗ ಬಿದ್ದರೆ ಆಗುವ ನಷ್ಟ ಅಪಾರ" ಎಂಬ ಮಾತು. ಈ ಆಧುನಿಕ ದಿನಗಳಲ್ಲಿ, ಕಂಪ್ಯೂಟರ್ ಜಗತ್ತಿನಲ್ಲಿ, ಯಂತ್ರ ಮಾನವನಾದ ನನ್ನಂಥನಿಗೆ ಜೀವಿಸಲು ಅಲ್ಪ ಉಸಿರು ನೀಡಿರುವುದು ಪುಸ್ತಕಗಳೇ ಹೊರತು ಬೇರೇನೂ ಅಲ್ಲ. ಇವು ನನ್ನ ಆತ್ಮಹತ್ಯೆಯಿಂದಲೂ ಕೂಡ ಪಾರು ಮಾಡುವ ದಾರ್ಶನಿಕ ಜಗತ್ತನ್ನು ತೋರಬಲ್ಲವುಗಳಾಗಿವೆ. ಇವು ನನ್ನನ್ನು ನಿರಂತರ ಆಶಾವಾದಿಯನ್ನಾಗಿಸಿವೆ. ಬಾಯಿಲ್ಲದವರ ಬೆನ್ನು ಹತ್ತಿ ಸವಾರಿ ಮಾಡುವ, ದುಡಿವ ಶ್ರಮಿಕ ವರ್ಗವನ್ನು ಹತ್ತಿಕ್ಕುವ, ಅಷ್ಟೇ ಏಕೆ ಅನಕ್ಷರಸ್ಥರ/ಅರೆ ಸಾಕ್ಷರಸ್ಥರ ಮೇಲೆ ಸಾಕ್ಷರಸ್ಥರ ದಬ್ಬಾಳಿಕೆ ಮಾಡುವ ಪರಿಸ್ಥಿತಿ ಒಂದೆಡೆ ಇದೆ. ಬಂಡವಾಳಿಗರ ವ್ಯವಸ್ಥೆಯ ಕೈಗೊಂಬೆಯಾಗಿ ಖಾಲಿಬಾಂಡ್‌ಗಳ ಮೇಲೆ ಸಹಿ ಮಾಡಿ ಸಾಹಿತ್ಯ ಸೃಷ್ಟಿ ಮಾಡಿರುವ ದಿಗ್ಗಜರು, ಜನತೆಯನ್ನು ತಪ್ಪು ದಾರಿಗೆ ಎಳೆದಿರುವ ಬರಹಗಳೂ, ಕಾಲಕಾಲಕ್ಕೂ ಎದುರಾಗಿರುವ ಸಂದರ್ಭದಲ್ಲಿ ಓದುಗ ಬಹಳ ಎಚ್ಚರದಿಂದಲೇ ನಿಗಾವಹಿಸಿ ಓದಬೇಕಾಗುತ್ತದೆ. ಹಸಿದ ಜನಕ್ಕೆ, ಸಾಲದ ಋಣಕ್ಕೆ, ವಿಶ್ವದ ತೊಟ್ಟಿಲನ್ನು ತೂಗುವುದಕ್ಕೆ. ಇತ್ತೀಚೆಗೆ ರಹಮತ್ ತರೀಕೆರೆಯವರ 'ಅಂಡಮಾನ್' ಪ್ರವಾಸ ಸಾಹಿತ್ಯ ಓದಿದ್ದು ನೆನಪಾಗುತ್ತದೆ.('ಹೊಸತು' ಪತ್ರಿಕೆಯಲ್ಲಿ) ಅದು ಕಣ್ಣಿಗೆ ಕಾಣದ ಅದ್ಭುತ ಲೋಕವೊಂದನ್ನು ನ್ಯಾಷನಲ್ ಜಿಯಾಗ್ರಫಿಯಲ್ಲಿ ದೂರದರ್ಶನದವರು ಸೆರೆ ಹಿಡಿದು ತೋರಿಸುತ್ತಾರೆನ್ನುವ ಹಾಗಿತ್ತು. ನಾನು ಓದಿದ ಪುಸ್ತಕಗಳು ಈ ಕೆಳಗಿನಂತೆ ಇವೆ.

ಶಿವಶಂಕರ ಪಾಟೀಲ ಚಾವಳಿಯವರ 'ಸಮಗ್ರ ಕಾವ್ಯ', ಲಂಕೇಶರ 'ಪಾಪದ ಹೂಗಳು' (ಅನುವಾದ), ಅನಂತಮೂರ್ತಿಯವರ 'ಮಿಥುನ', ಹೆಚ್ ಎಸ್ ಶಿವಪ್ರಕಾಶರ 'ಸೂರ್ಯಜಲ', ಜಿ.ಪಿ.ಬಸವರಾಜರ 'ಸಮೀಪ', ಬೇಂದ್ರೆಯವರ 'ಸಖೀಗೀತ', 'ನಾಕುತಂತಿ', 'ಉಯ್ಯಾಲೆ', ಸರ್ವಜ್ಞನ ತ್ರಿಪದಿ ಅಲ್ಲದೆ ವಚನಕಾರರ ಕೆಲವರ ಸಮಗ್ರ ವಚನಗಳು. ಕನಕದಾಸರ, ಪುರಂದರದಾಸರ ತ್ಯಾಗರಾಜರ ಹಾಡುಗಳು ಇತ್ಯಾದಿ ಬಿಡಿಗವನಗಳು. ಹರಿಹರನ ರಗಳೆಗಳು, ಜೈಮಿನಿ ಭಾರತ, ಕುವೆಂಪು ಅವರ ರಾಮಾಯಣದರ್ಶನಂ ಇತ್ಯಾದಿ; 'ಪ್ರಣಯ ಪಕ್ಷಿ ಹಾರಿತು' (ಲೇಖಕರು ನೆನಪಿಲ್ಲ) 'ಡೈರಿ ಆಫ್ ಮಿಸೆಸ್ ಶಾರದ' (ಯಂಡಮೂರಿ) 'ಗಾಂಧಿ ಬಂದರು' (ನಾ.ಡಿಸೋಜ) 'ಕಗ್ಗತ್ತಲೆಯ ಖಂಡದಲ್ಲಿ ೯೦ ದಿನ' (ನಗರಿ ಬಾಬಯ್ಯ), 'ತುಳುನಾಡಸಿರಿ', 'ಕರ್ತಾರನ ಕಮ್ಮಟ', 'ಸರಸಮ್ಮನ ಸಮಾಧಿ', 'ಬೆಟ್ಟದ ಜೀವ', 'ಮೂಕಜ್ಜಿಯ ಕನಸು', (ಕಾರಂತ) ಅನಂತಮೂರ್ತಿಯವರ 'ಸಂಸ್ಕಾರ', 'ಅವಸ್ಥೆ', 'ಬಂಗಾರದ ಮನುಷ್ಯ', 'ಗಿಂಬಾಲೆ' ಇತ್ಯಾದಿ.

ಬರಗೂರು ರಾಮಚಂದ್ರಪ್ಪ ಮತ್ತು ಜಿ ಎಸ್ ಶಿವರುದ್ರಪ್ಪನವರ ಚಿಂತನಶೀಲ ಬರಹಗಳ

ನ್ನೋದಿರುವೆನು. ಗಾಂಧಿ, ಜೆ ಪಿ, ನೆಹರು, ಮುರಾರ್ಜಿ, ರಾಮಕೃಷ್ಣ ಪರಮಹಂಸರು, ವಿವೇಕಾನಂದ ಮುಂತಾದವರನ್ನು ಓದಿರುವೆ. ಅನೇಕ ಕವಿಗಳ ಪರಿಚಯ ಪ್ರಬಂಧಗಳನ್ನು ಓದಿರುವೆ. ಒಟ್ಟಾರೆ ಶೋಷಣೆ ರಹಿತ ಸಮಾಜವನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ಎಲ್ಲಾ ಪುಸ್ತಕಗಳು ತೆರೆದು ಕಾಣಿಸುತ್ತಲಿವೆ. ಓದದಿರುವ ಪುಸ್ತಕಗಳೂ ನನ್ನಲ್ಲಿ ಇವೆ.

ಹೀಗೆ ನನಗೆ ಅನೇಕ ರೀತಿಯ ಲೇಖಕರು ಪ್ರಿಯವಾಗುತ್ತಾರೆ. ಯಾವ ಸಾಹಿತಿಯನ್ನು ಹೆಸರಿಸುವುದು? ಆಯ್ಕೆಗೆ ಮಿತಿಯುಂಟೆ? ಪುಸ್ತಕಗಳು ನನ್ನನ್ನು ಪ್ರತಿಭಾವಂತನನ್ನಾಗಿಸಿವೆ ಮತ್ತು ಒಳಹೊಕ್ಕು ನೋಡುವ ಗುಣವನ್ನು ನೀಡಿವೆ.

ಮೈಸೂರು ಒಡೆಯರ ಮೇಲಿನ ಅಧ್ಯಯನಗಳು

•ಎಸ್. ಚಿನ್ನಸ್ವಾಮಿ ಸೋಸಲೆ

ಮೈಸೂರು ಒಡೆಯರ ಚರಿತ್ರೆಯನ್ನು ಬರೆಯುವುದಕ್ಕೆ ಆಧಾರ ಗ್ರಂಥಗಳು ವಿಪುಲವಾಗಿ ದೊರೆಕಿದರೂ, ಒಂದರ್ಥದಲ್ಲಿ ಕಡಿಮೆ ಎಂದರೆ ತಪ್ಪಾಗದು. ಒಡೆಯರ ಚರಿತ್ರೆಯನ್ನು ಇಂದು ಅಭ್ಯಾಸಿಸಬೇಕಾದರೆ ಆಸ್ಥಾನ ವಿದ್ವಾಂಸರ ಕೃತಿಗಳು, ಆಡಳಿತಾಂಗದ ಕಡತಗಳು, ಪ್ರವಾಸಿಗರ ದಿನಚರಿಗಳು, ಇವುಗಳನ್ನೆಲ್ಲ ತುಂಬ ಎಚ್ಚರಿಕೆಯಿಂದ ಹುಡುಕಬೇಕಾಗುತ್ತದೆ. ಬೇಕಾದಂತಹ ಮಾಹಿತಿಯನ್ನು ವಸ್ತು ನಿಷ್ಠೆಯಿಂದ ಎತ್ತಿಕೊಳ್ಳಬೇಕಾಗುತ್ತದೆ. ಕಾರಣ ಈ ಲೋಕ ಪ್ರಾಚೀನರದು. ನಾವು ಪ್ರಾಚೀನಾ ಕಾಲದಿಂದಲೂ ಲೌಕಿಕ ಘಟನೆಗಳನ್ನು ಪೌರಾಣಿಕ ದೃಷ್ಟಿ ಯಿಂದ ನೋಡುವ ಮನೋಭಾವವನ್ನು ಬೆಳೆಸಿ ಕೊಂಡು ಬಂದುದೇ ಇಂದು ಈ ನ್ಯೂನತೆಗೆ ಕಾರಣವಾಗಿರಬಹುದು. ಇದಕ್ಕಾಗಿಯೇ ನಮ್ಮ ನಾಡಿನ ಇತಿಹಾಸವನ್ನು ಅರಿಯಲು ನಮಗೆ ಹಿಂದಿನ ಯಾವ ಇತಿಹಾಸ ಗ್ರಂಥಗಳೂ ಇಲ್ಲದೆ ಅನೇಕ ಸಂದರ್ಭದಲ್ಲಿ ಇತಿಹಾಸದ ರಚನೆಗೆ ಸಾಧನಗಳನ್ನು ಮಾತ್ರ ಅವಲಂಬಿಸಬೇಕಾಗಿದೆ. ವಿವಿಧ ಮೂಲಗಳಿಂದ ಲಭಿಸುವ ಸಾಧನಗಳನ್ನು ಕೂಲಂಕುಷವಾದ ವಿವೇಚನೆಯಿಂದ ಪರೀಕ್ಷಿಸಿ ಅದರಲ್ಲಿರುವ ವಾಸ್ತವಿಕವೆನಿಸುವ ಅಂಶವನ್ನು ಹೆಕ್ಕಿ ತೆಗೆಯಬೇಕಾಗುತ್ತದೆ. ಮೈಸೂರು ಒಡೆಯರ ಇತಿಹಾಸಕ್ಕೆ ಸಂಬಂಧಿಸಿದಂತೆ ಈ ಆಕರಗಳ ಮೂಲಕ ತಿಳಿದು ಬರುವ ಅಂಶಗಳೂ ಹೆಚ್ಚಿನ ಪ್ರಮಾಣದಲ್ಲಿ ಮಹತ್ವಪೂರ್ಣವಾಗಿವೆ. ಸಾಹಿತ್ಯ ಆಕರ ಈ ದೃಷ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಮೈಸೂರಿನ ಚರಿತ್ರೆಗೆ ಕಂಡು ಬರುವ ಸಾಹಿತ್ಯಕ ಕೃತಿಗಳನ್ನು ಒಂದೇ ಪ್ರಾಂತ್ಯಕ್ಕೆ ಸೇರಿದ್ದೆಂದು ಹೇಳುವುದು ಕಷ್ಟವಾಗುತ್ತದೆ. ಏಕೆಂದರೆ ವಿದ್ವಾಂಸರು ತಮಗೆ ರಾಜಾಶ್ರಯ ದೊರೆತಂತೆಲ್ಲಾ ನಾಡಿನ ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ನೆಲೆಸಿದ್ದಾರೆ. ಅಲ್ಲದೆ, ಬೇರೆ ಬೇರೆ ಮತಾಚಾರ್ಯರಿಂದ ವಿದ್ಯಾಭ್ಯಾಸ ಮಾಡಿರುವುದೂ ಕಂಡುಬರುತ್ತದೆ. ಇದರಿಂದ ನಾಡಿನ ಒಂದು ಪ್ರದೇಶದಲ್ಲಿ ರಚಿತವಾದ ಗ್ರಂಥಗಳು, ಮತ್ತೊಂದು ಪ್ರದೇಶದ ವಿಮರ್ಶಗ್ರಂಥ ರಚನೆಯಾಗಿರುವುದಕ್ಕೆ ಸ್ಫೂರ್ತಿ ಕೊಡುತ್ತವೆ. ಹಾಗೆಯೇ ಅದೇ ರೀತಿಯ ಮತ್ತೊಂದು ಗ್ರಂಥ ಅಲ್ಲಿ ರಚನೆಯಾಗುವುದಕ್ಕೆ ಮಾದರಿಯೂ ಆಗಿರುತ್ತದೆ. ಈ ಮಾತು ಮುಖ್ಯವಾಗಿ ಧರ್ಮಗ್ರಂಥಗಳಿಗೆ ಹೆಚ್ಚಾಗಿ ಅನ್ವಯಿಸುತ್ತದೆ ಎನ್ನಬಹುದು. ಆದ್ದರಿಂದ ಆ ಕಾಲಾವಧಿಯಲ್ಲಿ ನಡೆದ ಸಾಹಿತ್ಯದ ಕೃಷಿಯ

ಸ್ವರೂಪವನ್ನು ಚೆನ್ನಾಗಿ ಅರಿತುಕೊಳ್ಳುವುದಕ್ಕೆ ಆ ಗ್ರಂಥಗಳಿಗೆ ಸಂಬಂಧಪಟ್ಟ, ಇತರ ಗ್ರಂಥಗಳನ್ನು ಸೂಚಿಸುವುದು ಅವಶ್ಯಕವಾಗಿದೆ. ಈ ಕಾರಣದಿಂದ ಕರ್ನಾಟಕದ ಪ್ರಸಿದ್ಧ ಬರಹಗಾರರು ತಮ್ಮ ಸಾಹಿತ್ಯ ಕೃತಿಗಳಿಂದ ಮೈಸೂರು ಚರಿತ್ರೆಯನ್ನು ಅನೇಕ ದೃಷ್ಟಿಕೋನಗಳಿಂದ ಕಂಡು, ಬರೆದು ನಮ್ಮ ಮುದ್ದಿಟ್ಟಿದ್ದಾರೆ. ಈ ಕೆಲವು ಪ್ರಮುಖ ಗ್ರಂಥಗಳ ವಿವರವನ್ನು ಇಲ್ಲಿ ಕೊಟ್ಟಿದೆ.

ಇಂದಿನ ಕಾಲದ ಜನಾಂಗದ ಪ್ರಗತಿಶೀಲ ಅಭಿವೃದ್ಧಿಗೆ ಬಹು ದೊಡ್ಡ ಪ್ರಮಾಣದಲ್ಲಿ ಮಾಹಿತಿ ಸಾಹಿತ್ಯ ಅವಶ್ಯಕವಾಗಿ ಬೇಕಾಗಿದೆ. ಚರಿತ್ರೆಯಲ್ಲಿ ಕಂಡುಬರುವಂತಹ ಎಷ್ಟೊಂದು ವಿಷಯಗಳು, ಪ್ರತಿಯೊಂದು ವಿಷಯಕ್ಕೂ ವಿಧ ವಿಧವಾದಂತಹ ಮುಖಗಳು. ಬಗೆ ಬಗೆಯ ಮಾಹಿತಿಗಳು ಇಂದಿನ ಅಧ್ಯಯನಕಾರರು ತಿಳಿದಿಲ್ಲದಿದ್ದರೆ ಹಾಗೂ ಮಾಹಿತಿಗಳು ದೊರೆಯುವ ಆಕಾರಗಳು ಗೊತ್ತಿಲ್ಲದಿದ್ದರೆ, ಅಸಹಾಯಕರಾಗುತ್ತಾರೆ. ಚರಿತ್ರೆಯ ಅಧ್ಯಯನದ ದೃಷ್ಟಿಯಿಂದ ಅನೇಕ ಭಾಷೆಗಳು ಸಹ ಈ ಮಾಹಿತಿ ಸಾಹಿತ್ಯವನ್ನು ತನ್ನ ಮಡಿಲಿನಲ್ಲಿ ಒಳಗೊಂಡಿದ್ದರೆ ಹೆಚ್ಚಿನ ಪ್ರಯೋಜನವಾಗುತ್ತದೆ. ಈ ದಿಸೆಯಲ್ಲಿ ಅರ್ಥಕೋಶಗಳು, ವಿಶ್ವಕೋಶಗಳು, ಸೂಚಿಗಳು, ನಕ್ಷೆಗಳು, ವರದಿಗಳು, ಕೈಪಿಡಿಗಳು, ಪರಮಾರ್ಶನ ಗ್ರಂಥಗಳು, ವಿದೇಶಿಯರ ಬರವಣಿಗೆಗಳು, ವಿವರಣಾತ್ಮಕ ಟಿಪ್ಪಣಿಗಳು, ಸೂಚನ ಗ್ರಂಥಗಳು ಮೊದಲಾದವುಗಳು ಮಾಹಿತಿ ಸಾಹಿತ್ಯವನ್ನು ಸೃಷ್ಟಿಸುತ್ತವೆ. ಹಾಗೆಯೇ ಸಂಶೋಧನೆಗೆ ಅಗತ್ಯವಾದಂತಹ ಮಾಹಿತಿಗಳನ್ನು ತಕ್ಷಣವೇ ಪಡೆಯಲು ನೆರವಾಗುತ್ತವೆ. ಇದರಿಂದ ಮತ್ತು ಕ್ಷೇತ್ರದಲ್ಲಿ ಇತಿಹಾಸದ ವಿದ್ಯಾರ್ಥಿಯೇ ಅಲ್ಲದೆ ನಾಡಿನ ಪ್ರತಿಯೊಬ್ಬ ಸಾಮಾನ್ಯ ಓದುಗರ ತಿಳುವಳಿಕೆ ಹೆಚ್ಚುವಂತೆ ಪ್ರೇರಣೆ ನೀಡುತ್ತದೆ.

I. ಕರ್ನಾಟಕ ರಾಜ್ಯ ಪತ್ರಾಗಾರದ ಕೆಲವು ಪ್ರಮುಖ ದಾಖಲೆಗಳು

೧. ಕಾಂತರಾಜ್ ಅರಸ್‌ರವರ ಪತ್ರ ವ್ಯವಹಾರಗಳು.
೨. ನಾಲ್ವಾಡಿ ಕೃಷ್ಣರಾಜ ಒಡೆಯರ್‌ರವವರ ಅನ್ಯರಾಜ್ಯ ಹಾಗೂ ರಾಜ್ಯದೊಳಗಿನ ಪತ್ರ ವ್ಯವಹಾರಗಳು.
೩. ಮಿರ್ಜಾ ಇಸ್ಮಾಯಿಲ್‌ರವರ ಪತ್ರ ವ್ಯವಹಾರಗಳು.
೪. ಮುಜರಾಯಿ ಫೈಲುಗಳು, ಮೈಸೂರು, ರಾಜ್ಯ ಪತ್ರಾಗಾರ ಇಲಾಖೆ.
೫. ವಿಶ್ವೇಶ್ವರಯ್ಯನವರ ಪತ್ರ ವ್ಯವಹಾರಗಳು.
೬. Agriculture and Industry-File Nos 56 :Sl.No. 1.3. 7,22,29-35-1915
೭. Dewan's office File 1917-Sl.Nos. 128
೮. Education - File No. 454-13- Sl.Nos 1 to 7 1913-14
೯. Education File-No. 106-Sl.Nos 1 to 4 : 9 to 10. 1917
೧೦. Education - File -No. 294-18. Sl. Nos. 30,32,33, 38, 86-1918
೧೧. Education - File.No. 89-17. Sl.Nos. 4.46 to 48. 1917

೧೨. Industry and Commerce - File No. 128 Sl. No. 14. 16,19-21-1918
Industry and Commerce-Iron Scheme-1916

೧೩. Industry and Commerce-File No 159-Sl.Nos. 3-1918

೧೪ Municipal File No 13-14- Sl. Nos 7 to 36-1914

೧೫ Muncipal File No. 83-16 Sl. Nos. 1 Nos. I to 6. 1916

೧೬ Muncipal File No. 23-17 Sl. Nos. 53 to 59.1916

೧೭. Muncipal File No. 83-16 Sl. Nos. 1 Nos. I to 6. 1916

೧೮. Notes of the Dewan's Tour in the Mysore District - 1914

II. ಕನ್ನಡ ಗ್ರಂಥಗಳು

೧. ನಾ. ಕಸ್ತೂರಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರು

೨. ಎಂ.ವಿ. ಕೃಷ್ಣರಾವ್, ಎಂ. ಕೇಶವಭಟ್ಟ, ಕರ್ನಾಟಕ ಇತಿಹಾಸ, ೧೯೭೪, ಚೇತನ ಬುಕ್ ಹೌಸ್, ಮೈಸೂರು.

೩. ಎಂ.ವಿ. ಕೃಷ್ಣರಾವ್, ಕರ್ನಾಟಕ ಚರಿತ್ರೆ, ೧೯೫೯, ಕಾವ್ಯಾಲಯ ಪ್ರಕಾಶನ, ಬೆಂಗಳೂರು

೪. ಎಸ್. ಚಂದ್ರಶೇಖರ್, ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ-ಕೆಲವು ಒಳನೋಟಗಳು (೧೮೮೧ ರಿಂದ ೧೯೪೦) ೧೯೮೩, ಅಂಕಣ ಪ್ರಕಾಶನ, ಬೆಂಗಳೂರು

೫. ಎಸ್. ಚಂದ್ರಶೇಖರ್, ಆಧುನಿಕ ಕರ್ನಾಟಕದ ಆಂದೋಲನಗಳು, ೨೦೦೨, ನಮ್ಮ ಪ್ರಕಾಶನ, ತಿಪಟೂರು, ಬೆಂಗಳೂರು.

೬. ಡಿ.ಆರ್. ಚನ್ನೇಗೌಡ, ನಮ್ಮ ಮಹಾರಾಜರು, ಕಾವ್ಯಾಲಯ ಪ್ರಕಾಶನ, ಮೈಸೂರು- ೧೯೯೪.

೭. ಚಿನ್ನಸ್ವಾಮಿ ಸೋಸಲೆ, ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಆಸಹಿತ್ಯ ಸಿವಿಜಿ ಪಬ್ಲಿಕೇಶನ್ಸ್, ೨೦೦೧, ಬೆಂಗಳೂರು.

೮. ಡಿ.ಎಸ್. ಜಯಪ್ಪಗೌಡ, ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಕಾರ್ಯ ಸಾಧನಗಳು, ೧೯೯೪, ಶುಭೋದಯ ಪ್ರಕಾಶನ, ಮೈಸೂರು.

೯. ದೇ. ಜವರೇಗೌಡ, 'ಕೆಂಪೇಗೌಡ ಜೀವನ ಚರಿತ್ರೆ' ಜೀವನ ಚರಿತ್ರೆ, ಕೆಂಪೇಗೌಡ ಬೆಂಗಳೂರು.

೧೦. ವೆಂ.ಮು.ಜೋಶಿ, ಮೈಸೂರು ದಸರಾ, ೧೯೮೬, ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೧೧. ಡಿ ವಿ ಗುಂಡಪ್ಪ, ಜ್ಞಾಪಕ ಚಿತ್ರಶಾಲೆ, ಡಿ ವಿ ಜಿ ಕೃತಿಶ್ರೇಣಿ, (ಸಂ) ಹಾಮಾನಾಯಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೯, ಬೆಂಗಳೂರು.

೧೨. ಡಿ ವಿ ಗುಂಡಪ್ಪ, ಮೈಸೂರಿನ ದಿವಾನರುಗಳು (ಸ್ವಾತಂತ್ರ ಪೂರ್ವದ ಆರು ದಶಕಗಳು) ೧೯೭೧, ಕಾವ್ಯಾಲಯ, ಮೈಸೂರು.

೧೩. ನವರತ್ನ ರಾಮರಾವ್, ಕೆಲವು ನೆನಪುಗಳು (ಪುನರ್ ಮುದ್ರಣ), ೧೯೮೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೧೪. ಎಚ್.ಎಸ್. ದೊರೆಸ್ವಾಮಿ, ಕೋಲಾಟದ ದಿಟ್ಟ ಹೆಜ್ಜೆಗಳು, ೧೯೭೨, ಬೆಂಗಳೂರು.

೧೫. ಎಚ್.ಎಲ್. ನಾಗೇಗೌಡ, ಬೆಟ್ಟದಿಂದ ಬಟ್ಟಲಿಗೆ, ಸೌಂದರ್ಯ ಪ್ರಕಾಶನ, ಬೆಂಗಳೂರು.

೧೬. ಹಾ ಮಾ ನಾಯಕ, (ಸಂ) ಕರ್ನಾಟಕ ವಿಷಯ ವಿಶ್ವಕೋಶ, ೧೯೮೦, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೭. ವಿ.ಎಸ್. ನಾರಾಯಣರಾವ್, ಬಡತನಕ್ಕೆ ಬಾಗದ ಧೀಮಂತರು, ೧೯೮೩, ಗೀತಾ ಬುಕ್ ಹೌಸ್, ಮೈಸೂರು.

೧೮. ದಿವಾನ್ ರಂಗಾಚಾರ್ಲು, ನಿ.ಶ್ರೀ. ಚಂದ್ರಶೇಖರ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ೧೯೭೫, ನವದೆಹಲಿ.

೧೯. ಮಾಸ್ತಿ ವೆಂಕಟೇಶ್ ಅಯ್ಯಂಗಾರ್, (ಸಂ); ಸರ್.ಎಂ. ವಿಶ್ವೇಶ್ವರಯ್ಯ (ನೂರನೆಯ ವರ್ಧಂತಿಯ ಪೂಜನ ಗ್ರಂಥ), ೧೯೬೦, ಜೀವನ ಕಾರ್ಯಾಲಯ, ಬೆಂಗಳೂರು.

೨೦. ವಿ.ಎಸ್. ನಾರಾಯಣರಾವ್, ಸರ್.ಮಿರ್ಜಾ ಎಂ. ಇಸ್ಮಾಯಿಲ್ ಜೀವನ ಚರಿತ್ರೆ.

೨೧. ಬಿ. ಮುದ್ದಾಚಾರಿ, ದಕ್ಷಿಣ ಭಾರತದ ಇತಿಹಾಸ, ೧೯೮೧, ಗೀತಾ ಬುಕ್ ಹೌಸ್, ಮೈಸೂರು.

೨೨. ವಿ.ಎಸ್. ನಾರಾಯಣರಾವ್, ದಿವಾನ್ ಸರ್. ಶೇಷಾದ್ರಿ ಆಯರ್: ಜೀವನ-ಸಾಧನೆ ೧೯೭೮, ಗೀತಾ ಬುಕ್ ಹೌಸ್, ಮೈಸೂರು.

೨೩. ಮ.ನ. ಮೂರ್ತಿ, ನಾವು ಕಂಡ ಬೆಂಗಳೂರು (ಪ್ರವಾಸ ಕಥನ),

೨೪. ರಂಗನಾಥ ದಿವಾಕರ, ಕರ್ನಾಟಕ ಏಕೀಕರಣದ ಕಥೆ, ೧೯೫೬, ಹುಬ್ಬಳ್ಳಿ.

೨೫. ರವಿ, ದಸರಾ ವೈಭವ, ೧೯೯೯, ಕಾವ್ಯ ಪ್ರಕಾಶನ, ಬೆಂಗಳೂರು.

೨೬. ರಾಧಾಕೃಷ್ಣ, ನನ್ನ ತಂದೆ (ಶ್ರೀ ಬಿ. ಪುಟ್ಟಯ್ಯನವರ ಜೀವನ ಚಕ್ರ), ೧೯೪೯, ಬೆಂಗಳೂರು.

೨೭. ಯಂ. ರಾಮರಾವ್, ಚಾಮರಾಜ ಒಡೆಯರ್, ಕಾವ್ಯಾಲಯ ಪ್ರಕಾಶನ, ಮೈಸೂರು.

೨೮. ಯಂ. ರಾಮರಾವ್, ಮೈಸೂರಿನ ರಾಜ್ಯಲಕ್ಷ್ಮಿಯವರು, ಕಾವ್ಯಾಲಯ ಪ್ರಕಾಶನ, ಮೈಸೂರು.

೨೯. ಸಂ. ರಾಮಾನುಜ ಅಯ್ಯಂಗಾರ್, ತಿರುಮಲರಾಯ ಚಿಕ್ಕದೇವರಾಜ ವಂಶಾವಳಿ, ೧೯೧೯, ಮೈಸೂರು.

೩೦. ಎಂ.ಕೆ. ಲಿಂಗಪ್ಪ, ಮೈಸೂರು ಒಂದು ಅಧ್ಯಯನ, ೧೯೮೦, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೧. ಡಿ. ಲಿಂಗಯ್ಯ, ಶಿವಪುರ ಧ್ವಜ ಸತ್ಯಗ್ರಹ, ೧೯೬೬, ಬೆಂಗಳೂರು.

೩೨. ಕೆ. ವೀರತಪ್ಪ, ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ, ೧೯೭೭, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

೩೩. ಸಿ.ಕೆ. ವೆಂಕಟರಾಮಯ್ಯ, ಆಳಿದ ಮಹಾಸ್ವಾಮಿಗಳು, ೧೯೮೧, ಕಾವ್ಯಾಲಾಯ ಪ್ರಕಾಶನ, ಮೈಸೂರು.

೩೪. ಬ.ನ. ಸುಂದರರಾವ್, ಸರ್.ಎಂ. ವಿಶ್ವವಿಶ್ವೇಶ್ವರಯ್ಯ (ಜೀವನ ಚರಿತ್ರೆ) ವಸಂತ ಸಾಹಿತ್ಯಾ ಗ್ರಂಥ ಮಾಲಾ, ೧೯೭೬, ಬೆಂಗಳೂರು.

೩೫. ಬ.ನ. ಸುಂದರರಾವ್, ಬಿ. ವೆಂಕಟೇಶ ಶಾಸ್ತ್ರಿ, ವಸಂತ ಸಾಹಿತ್ಯ ಗ್ರಂಥ ಮಾಲಾ, ೧೯೮೨, ಬೆಂಗಳೂರು.

೩೬. ಬ.ನ. ಸುಂದರರಾವ್, ಬೆಂಗಳೂರಿನ ಇತಿಹಾಸ, ವಸಂತ ಸಾಹಿತ್ಯ ಗ್ರಂಥ ಮಾಲಾ, ೧೯೮೫, ಬೆಂಗಳೂರು.

೩೭. ಸೂರ್ಯನಾಥ ಯು. ಕಾಮತ್ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ೧೯೯೫, ಬೆಂಗಳೂರು.

೩೮. ಸೂರ್ಯನಾಥ ಯು. ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ.

೩೯. ಸೋಸಲೆ ಅಯ್ಯಶಾಸ್ತ್ರಿ, ಮಹಿಶೂರ ಮಹಾರಾಜ ಚರಿತ್ರಂ, (ಸಂ) ನಾ. ಗೀತಾಚಾರ್ಯ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ೨೦೦೨, ಬೆಂಗಳೂರು.

೪೦. ಎಂ. ಶಾಮರಾವ್, ಮೈಸೂರು ಸಂಸ್ಥಾನದ ಚರಿತ್ರೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ (ಸರಕಾರಿ ಪ್ರಕಟಣೆ) ಮೈಸೂರು.

೪೧. ಎಂ. ಶಿಂಗ್ರಯ್ಯ, ನಾಲ್ವಡಿ ಕೃಷ್ಣರಾಜ ಒಡೆಯರ್.

೪೨. ಎಂ. ಶಿಂಗ್ರಯ್ಯ, ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರ್‌ರವರ ಜೀವನ ಚರಿತ್ರೆ, ೧೯೦೫, ಕಾವ್ಯಾಲಾಯ ಪ್ರಕಾಶನ, ಮೈಸೂರು.

೪೩. ಕಾಶಿ ವಿಶ್ವನಾಥಶೆಟ್ಟಿ, ಎಸ್.ವಿ. ಶೆಟ್ಟಿ, ೧೯೭೫, ಎಸ್.ವಿ.ಎಸ್. ಪ್ರಕಾಶನ ಕೊಳ್ಳೇಗಾಲ.

೪೪. ಶ್ರೀನಾಥ, ನಾಲ್ವಡಿ ಕೃಷ್ಣರಾಜನ ಮೈಸೂರು, ಕಾವ್ಯಾಲಾಯ ಪ್ರಕಾಶನ, ಮೈಸೂರು

೪೫. ಶ್ರೀನಿವಾಸ ಹಾವನೂರು, ಶಾಸನ ಪಿತಾಮಹ ಬಿ.ಎಲ್.ರೈಸ್. ೧೯೯೩, ಐ.ಬಿ.ಎಸ್. ಪ್ರಕಾಶನ, ಬೆಂಗಳೂರು.

೪೬. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦, ಬೆಂಗಳೂರು.

೪೭. ಷೇಕ ಅಲಿ .ಬಿ ಹಾಗೂ ರಂಗಸ್ವಾಮಿಯ್ಯ ಜಿ. ಆರ್. ದಕ್ಷಿಣ ಭಾರತದ ಇತಿಹಾಸ, ೧೯೮೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

III. ಮೂಲ ಆಕರಗಳು ಮೈಸೂರು-ಸರ್ಕಾರದ ಪ್ರಕಟಣೆಗಳು (ಇಂಗ್ಲಿಷ್)

೧. Administrative Report of Public works Department, Government of Mysore - 1911-12 - Upto-1918-19.

೨. Agriculture in Mysore, IInd Edition - 1939.

೩. Bhabha H.J. : Special Report on Manual Training School of General Education - 1909.

೪. Constitutional Reforms in Mysore-Report of the Committee on Constitutional Reform Bangalroe - 1939.

೫. Constitutional Developments in Mysore-Report of the Committee appointed to work out the details of the Scheme - 1923.

೬. Deccinial Review of the Progress of Education in Mysore during the period of 1922 - 1932.

೭. District Fund Administration Reports and accounts for the year-1914-15- Bagalore.

೮. Finance and Revenue Accounts for the year 1912 - 13- and upto 1910-19

೯. Hand Book of Mysore Administration Bangalore - 1917.

೧೦. Hayavadanarao (Ed) : Mysore Gazatteer Vol.11. Part IV (Modern). New Edition - 1930.

೧೧.. - do- Part - IV (Modern) Vol. 111 [Economic) New Edition - 1929.

೧೨. Part - IV (Modern) Vol. IV (Edministralive) New Edition - 1929.

೧೩. Karnataka Gazetteer, Mysore District, Bangalore - 1988.

೧೪. Karnataka State Gazetteer (Part I) Ed : Suryanatha-V. Kamath Government, Karnataka.

೧೫. Manual of Council Ruler and Proceedures - 1918.

೧೬. Manual of Important Orders, serics - 2 Agricultural Department.

೧೭. Manual of Important Orders (M.I.O) Serics - 6. Co-operative Societies, II nd Edition - 1926.

೧೮. Manual of Important Orders - Series - 5. Education - 1917 - Bangalore.

೧೯. Manual of Important Orders - Serics - 3. Indestries and Commerce - 1916.

೨೦. Mysore Committee Report - Bangalore - 1919.

೨೧. Miller Education Mannual - 1916.

೨೨. Mysore - Madras Arbitration Enquiry - 1913 - 14. Volume -1-1914.

೨೩. Opinions regarding the Organazation of the Economic Conference, Bangalore - 1911.

೨೪. Organization and Development of local self Government in Mysore. 1914. Part - I.

೨೫. Proceedings of the Government of His Highness the Maharaya's of Mysore - 1912 to 1918.

೨೬. Procedings of the Governement of Bombay Presidencey - P.W.D 17 9 - E 641 - 1899-26-4-1999.

೨೭. Proceedings of the Mysore Economic Conference - 1911 - 18.

೨೮. Proceedings of the Mysore Represenative Assembly from-1912-18.

೨೯. Proceedings of the second session of the Mysore Representative Assembly - April - 1917.

೩೦. Ramalinga Reddy - C.R. Deputation Studies - 11 : Education, Industry and Commerce and local Government - 1916 - Bangalore.

೩೧. Report of the Committee Apponted by The Government for the Development of Irrigation under the Krishnaraya sagar - 1927.

೩೨. Report of the First Civil and Social Conference - 1917.

೩೩. Report on the Addministration of Mysore (R.A.M) from - 1904 - 10 upto - 1918 -19.

೩೪. Report on the Mysore Civil Service Examination, 1913.

೩೫. Report on the Administration of the Public works Department - 1912 - 13 to 1918 - 1922.

೩೬. Review of the Progress of Education in the Mysore State During the Period - 1916 -17 to 1921 - 1926, Bangalore - 1927.

೩೭. Review of the Progress of Education in the Mysore State for the Quinquinnium - 1911 - 16, Bangalore - 1918.

೩೮. Rice B.L (Compiled) : Mysore Gazetteer Vol. I Mysore in General - 1897.

೩೯. Rules of Business relating to the Council (revised upto 1 1918)

೪೦. Speeches by His Highness Maharaja Sri Krishnaraga Wodeyar Bahadus (1902 - 32) MYsore - 1934.

೪೧. Standing Orders and Rulings Passed by the Government of Mysore in 1916 -18.

೪೨. Statistical Abstract of Mysore - 1915 and 20.

೪೩. Summary of the Proceedings of the Education Committee (1911 - 17) 2 Volumes Bangalore, 1918 - 26.

೪೪. Supplement to the Statistical Abstract of the Mysore State - 1917 - 18. Banglaore - 1918.

೪೫. The Malanad Improvement Manual - 1916.

೪೬. The Mysore Code Volume V. Ragulations Passed during the Year - 1911.

೪೭. The Mysore Educational Manual - 1916 - Bangalore.

೪೮. The Mysore Province Public work Department Capital and Revenue Account (1915 -16) Bangalore.

೪೯. The Mysore Village Improvement Manual - 1917.

೫೦. Thyagarajaaiyar V.R : A Briaf Summary of Mysore Census - 1911.

೫೧. Transnfer of the Mysore State Railway to the Southern Maratha, Railway - 1914.

೫೨. Veniata Krishnaya. M. : Report of the First Mysore Civil and Social Conference - 1917 - Mysore.

೫೩. Government of India : Report on the Proress of Agriculture in India for the Year 1917 - 18. Calcutta - 1919.

೫೪. Muncipal File No. 23-17. Sl. Nos. 53 to 59 - 1916.

೫೫. Muncipal File No. 83 - 16 Sl. Nos. 1 to 6 - 1916.

೫೬. Notes of the Dewan's Tour in the Mysore District - 1914.

೫೭. Notes of the Maharaja's Tour in the Mysore State - 1911 to 1940.

೫೮. Notes of the Dewan's Tour in the Chitraduga and Bangalore District, 1914 - 16, 18, 22.

IV. ಇಂಗ್ಲಿಷ್ ಗ್ರಂಥಗಳು

1. Dildar Hussain : An Engineering Wizard of India (Sri. M. Visvesvarya Memorial Souvens Volume) Institution of Engineers (India) Andhrapradesh Centre, Hyderabad - 1966.

2. Elliot . R. H : Gold, Sport and Coffes Planting in Mysore, London - 1894.

3. Gopal .M.H. : Thi Finances of the Mysore State (1799 to 1831- 1960).

4. Hettne, Bjorn : The Political Economy of Indirect Rule - Mysore - 1881 - 1947.

5. Iyengar .R.A. : The Economic Out - look in Mysore- Ma dras - 1917.

6. Krishnamurthi .Y.G. : Sri M. Visvesvaraya -A Study Bombay-1941.
7. Kuppuswamy. B. : Backward Classs Movement in Karnataka, Bangalore University, 1978.
8. Manor James : Political Changes in an Indian State Mysore-1917 - 55, New Delhi - 1977.
9. Misra . B.B. : Administrative History of India Oxford University Press, New Delhi - 1970.
10. Narayana Rao. V.S. : Moksha Gundam Vishveswarayya - His life and work. Geetha Book House, Mysore - 1973.
11. Raghunatha Rao. C.S. (Ed) : Model State of Mysore - Ruling Chiefs of India Series Vol. 11. Subhan Vilas, Madras - 1908.
12. Shakunthala Krishnamurthy : Dr.Moshagundam Visvesvaraya. Visvesvaraya National Medical Turst, Muddenahalli - 1983.
13. Shama Rao .M. : Modern Mysore - 1936.
14. Veerathappa. K. (Ed): Studies in Karnataka History and culture Vol. I. Proceedings of Karnataka History Congrees - 1985.
15. Suryanatha V. Kamath : A Concise History of Karnataka, Bangalore - 1980.
16. Vishveswarayya.M. : Speeches by Sir.M. Vishveswarayya (Dewan of Mysore - 1910 - 1917) Vol - 1, Government Press - Bangaloren - 1917.
17. Vishveswarayya.M. : A Brief memories of My Complete Working lefe. Govenment Press, Bangalore - 1959.
18. MV. (Dr.M. Vishveswa rayya) : Birth Centenary Commemoration Volume. Vishveswarayya Centenary Celebration Committee, Bangalore - 1960.

V. ಅಪ್ರಕಟಿತ ಕೃತಿಗಳು

1. Shivanna.C. : Mysore Under Krishnaraja Wodeyer IV (1902 - 1940). (Ph.D Thesis) Mysore University, Mysore.

2. Sugitha.S. : Dewanship of Sri Mirza Ismail in Mysore States (1926 - 1941) (Thesis) university of Mysore - Mysore. 1982.
3. Vedavalli : Administrative History of Mysore (The sis) Mysore University - Mysore - 1936.
4. Chinna Swamy Sosale : 'ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣಾಭಿವೃದ್ಧಿಯ ಒಂದು ಸಮೀಕ್ಷೆ'(೧೮೮೧-೧೯೪೦)ಮೈಸೂರು ವಿಶ್ವವಿದ್ಯಾಲಯ, ಮೈಸೂರು-೨೦೦೦.
5. ಪ್ರಭಾಮಣಿ. ವಿ. : ಕಳಲೆ ನಂಜರಾಜಯ್ಯ : ಜೀವನ ಮತ್ತು ಸಾಧನೆ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೧೯೯೯.

VI. ನಿಯುತ ಕಾಲಿಕೆಗಳು

1. Mysore Economcic Journal, Bangalore - 1918 .
2. Quarterly Journal of mythic Society Jan - April 1941, Krishnaraja woodeyer's Special Number, Bangalore - 1941 .
3. The Mysore Blue Book Jouranla - Vol. I (1916 - 17) Bangalore.
4. The Mysore Blue Book Jouranla - Vol. II (1917 - 18) Bangalore.
5. The Mysore Blue Book Jouranla - Vol. III (1918 - 19) Bangalore.
6. ಪ್ರಬುದ್ಧ ಕರ್ಣಾಟಕ, ಸಂಪುಟ ೬೮, ಸಂಚಿಕೆ ೪, (ನಾಲ್ವಡಿ ಕೃಷ್ಣರಾಜ ಒಡೆಯರ ಕುರಿತ ವಿಶೇಷ ಸಂಚಿಕೆ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಮಾನವಿಕ ಕರ್ಣಾಟಕ, ಸಂಪುಟ ೭, ಸಂಚಿಕೆ ೨, (ನಾಲ್ವಡಿ ಕೃಷ್ಣರಾಜ ಒಡೆಯರವರ ವಿಶೇಷ ಸಂಚಿಕೆ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಮೈಸೂರು ವಿಶ್ವವಿದ್ಯಾನಿಲಯದ ರಜತ ಮಹೋತ್ಸವದ ಸವಿ ನೆನಪಿನ ಸಂಚಿಕೆ ಮೈಸೂರು.

ಮುಖಾಮುಖಿ

ಚೆನ್ನವೀರಕಣವಿ ಅವರೊಂದಿಗೆ

•ಸಂಪಾದಕ

(**ಚೆ**ನ್ನವೀರ ಕಣವಿಯವರು (೧೯೨೮) ನವೋದಯ ಸಂಪ್ರದಾಯದ ಎರಡನೇ ತಲೆಮಾರಿನ ಕವಿಗಳಲ್ಲಿ ಬಹಳ ಮುಖ್ಯರು. ಕವಿತೆಯನ್ನೇ ತಮ್ಮ ಅಭಿವ್ಯಕ್ತಿ ಪ್ರಕಾರವನ್ನಾಗಿ ಮಾಡಿಕೊಂಡ ಲೇಖಕರಲ್ಲಿ ಒಬ್ಬರಾದ ಕಣವಿಯವರು, ಕಳೆದ ಅರ್ಧ ಶತಮಾನದಿಂದ ಕಾವ್ಯ ರಚನೆ ಮಾಡಿದವರು. ೨೦ನೇ ಶತಮಾನದ ಇಬ್ಬರು ದೊಡ್ಡ ಕವಿಗಳಾದ ಬೇಂದ್ರೆ ಮತ್ತು ಕುವೆಂಪು ಅವರ ತಪ್ಪಿಸಿಕೊಳ್ಳಲಾಗದ ಪ್ರಭಾವಗಳ ನಡುವೆ, ತಮ್ಮದೇ ಕಾವ್ಯ ಹಾದಿಯನ್ನು ತುಳಿದವರು. ಕೋಮಲತೆ ಸಜ್ಜನಿಕೆ ಅವರ ಕವಿತೆಗಳ ಮುಖ್ಯಧಾತು. ಅದು ಅವರ ಕಾವ್ಯದ ವಿಶಿಷ್ಟತೆಯೂ ಹೌದು. ಮಿತಿಯೂ ಹೌದು. ಈ ತನಕ ೧೪ ಕವನ ಸಂಕಲನಗಳನ್ನು ಪ್ರಕಟಿಸಿರುವ ಕಣವಿಯವರಿಗೆ ನಾಡು ಪಂಪ ಪ್ರಶಸ್ತಿ ನೀಡಿ ಗೌರವಿಸಿದೆ. ಈಚೆಗೆ ಕನ್ನಡ ವಿಶ್ವವಿದ್ಯಾಲಯವು ತನ್ನ ೧೧ನೇ ನುಡಿಹಬ್ಬದಲ್ಲಿ ಅವರಿಗೆ ನಾಡೋಜ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಈ ಸಂದರ್ಭದಲ್ಲಿ ಅವರನ್ನು ದಿನಾಂಕ ೧೮.೧೧.೦೩ರಂದು ಧಾರವಾಡ ಅವರ ಮನೆಯಲ್ಲಿ ಸಂದರ್ಶನ ಮಾಡಲಾಯಿತು. ಕಣವಿಯವರು ತಮ್ಮ ಕಾವ್ಯ ನಿರ್ಮಿತಿಯ ಅನುಭವಗಳನ್ನು ಇಲ್ಲಿ ಆಪ್ತವಾಗಿ ಹಂಚಿಕೊಂಡಿದ್ದಾರೆ-ಸಂ)

ಸಂ: ನಿಮ್ಮ ಮೊದಲ ಕವಿತೆಗಳಲ್ಲಿ ಒಂದಾದ 'ಭಾವಜೀವಿ'ಯಲ್ಲಿ, ಹಳ್ಳಿಯ ಮಧುರ ನೆನಪುಗಳೆಲ್ಲ ಭಾವುಕವಾಗಿ ಬರ್ತವೆ. ಅವು ಉಸಿರು ಕಟ್ಟುವಂತಹ ನಾಗರಿಕ ಸಮಾಜದಲ್ಲಿ ಬದುಕುತ್ತಿರುವ ವ್ಯಕ್ತಿಯ ಹಳಹಳಿಕೆಗಳಂತೆ ಕೂಡ ಇವೆ. ಗ್ರಾಮೀಣ ನೆನಪುಗಳು ಯಾಕೆ ನಿಮಗೆ ಅಷ್ಟು ಭಾವುಕ ಮಾಡ್ತವೆ?

ಕಣವಿ: ಅದು ಬಹಳ ಮಹತ್ವದ ಅಂತ ನನ್ನ ಕಾವ್ಯದಲ್ಲಿ. ಯಾಕೆಂದರೆ ನನ್ನ ಬಾಲ್ಯವನ್ನು ಕಳೆದದ್ದು ಗದಗ ತಾಲೂಕಿನ ಚಿಕ್ಕ ಹಳ್ಳಿಗಳಲ್ಲಿ. ಹೊಂಬಳ ನನ್ನ ತಾಯಿ ತೌರಮನೆ. ಶಾಸನಗಳಲ್ಲಿ ಪೊಂಬೊಳಲ್ ಅಂತ ಅದರ ಹೆಸರು. ಅಲ್ಲಿ ನಾನು ಹುಟ್ಟಿದ್ದಷ್ಟೆ. ಆಮೇಲೆ ಬೆಳೆದದ್ದು, ಬಾಲ್ಯ ಕಳೆದದ್ದು, ಶಿರುಂದ ಗ್ರಾಮದಲ್ಲಿ. ಅದು ಗದಗು ಮತ್ತೆ ಶಿರಹಟ್ಟಿ ನಡುವೆ ಇದೆ. ಅಲ್ಲಿ ನಮ್ಮ ತಂದೆಯವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ತಂದೆಯವರೇ ನನಗೂ ಶಿಕ್ಷಕರಾಗಿದ್ದರು. ಆವಾಗೆಲ್ಲ ಏಕೋಪಾಧ್ಯಾಯ ಶಾಲೆಗಳು. ಎಲ್ಲಾ ವರ್ಗಗಳಿಗೆ ಎಲ್ಲಾ ವಿಷಯಗಳನ್ನು ಅವರೊಬ್ಬರೇ ಹೇಳೋರು. ತಂದೆಯವರ ಒಂದು ಸ್ವಭಾವ ಅಂದ್ರೆ ಬಹಳ ನಿಷ್ಠೆಯಿಂದ ತಮ್ಮ

ಕರ್ತವ್ಯ ನೆರವೇರಿಸೋದು. ಮನೆಯಲ್ಲಿ ಹಿಂದಿನ ಕಾಲದ ಪುರಾಣಗಳನ್ನ ನಿಜಗುಣರ ಬಾಲಲೀಲಾ ಮಹಾಂತಯೋಗಿಗಳ ತತ್ವಪದಗಳನ್ನ ಓದ್ತಾ ಇರೋದು. ಅಲ್ಲೇ ಮುಳುಗುಂದ ಅಂತ, ಹತ್ತಿರದ ಊರು. ಅಲ್ಲಿ ಇನ್ನೊಬ್ಬ ಶಿಕ್ಷಕರಿದ್ದರು. ತಂದೆಯವರು ಅವರಿಂದ ಗುರುದೀಕ್ಷೆ ತೆಗೆದುಕೊಂಡಿದ್ದರು. ಈಗ ನನಗೆ ಆಶ್ಚರ್ಯ ಆಗ್ತದೆ. ಆ ಕಾಲಕ್ಕೇನೆ ಅವರು ತಮ್ಮ ಇಷ್ಟಲಿಂಗದ ಪೂಜೆಯನ್ನು ಬಿಟ್ರೆ ಉಳಿದ ಯಾವ ದೇವರಿಗೂ ಹೋಗ್ತಿರಲಿಲ್ಲ. ಇಡೀ ಊರಿಗೆ ಒಂದು ದೃಷ್ಟಿಯಿಂದ ಗುರುಗಳ ಹಾಗೆ ಇದ್ದರು. ಸಣ್ಣಹಳ್ಳಿ ಅದು. ನಮ್ಮ ಮನೆಯ ಎಡಕ ಬಲಕ ಒಕ್ಕಲುತನದ ಜನ. ನಮ್ಮ ಹಳ್ಳಿಯ ವೈಶಿಷ್ಟ್ಯ ಏನೆಂದರೆ, ಎಲ್ಲಾ ವೃತ್ತಿಯ ಜನ ಅಲ್ಲಿದ್ದರು- ಕಮ್ಮಾರರು ಬಡಿಗರು, ಅಕ್ಕಸಾಲಿಗರು, ಮಾದರು, ವಡ್ಡರು ಹೀಗೆ ಎಲ್ಲ. ಅಮೇಲೆ ನಮ್ಮ ಊರಿಗೆ ಬಹಳ ಸಮೀಪದಲ್ಲಿ ಲಂಬಾಣಿ ತಾಂಡಾಗಳಿದ್ದವು. ಅವರು ಪ್ರತಿ ದಿವಸಾನೂ ಬೆಳಿಗ್ಗೇನೇ ಕಟ್ಟಿಗೆ ಹೊರೆ ಹೊತ್ತುಕೊಂಡು ಬರೋದು, ಅಲ್ಲಿ ಮಾರೋದು, ಕುಣಿಯೋದು, ಇದೆಲ್ಲಾ ಇತ್ತು. ಇಡೀ ಹಳ್ಳಿಯ ಜೀವನ ಅದು ನನ್ನ ಮನಸ್ನಲ್ಲಿ ಗಾಢವಾಗಿ ಅಚ್ಚೊತ್ತಿದ ಹಾಗೆ ನನ್ನ ಅನುಭವದೊಳಗೆ ಇಳಿದ ಹಾಗೆ ಇದೆ. ಉದಾಹರಣೆಗೆ ನಮ್ಮೂರ ಜಾತ್ರೇಲಿ ಕಂಡ ತೇರು, ಈಗಲೂ ಕೂಡ ನನ್ನ ಕವಿತೇಲಿ ಒಂದು ಉತ್ಸಾಹದ ಪ್ರತೀಕವಾಗಿ, ಸಂತೋಷದ ಸಂಕೇತವಾಗಿ ಅಥವಾ ಜನಸಮುದಾಯದ ಒಂದು ಅಭಿವ್ಯಕ್ತಿಯಾಗಿ ಬರ್ತದೆ.

ಸಂ: ನಿಮ್ಮ ಕಾವ್ಯ ರಚನೆಯಲ್ಲಿ ಸೋಜಿಗ ತುಂಬ ಮುಖ್ಯವಾದ ಚಾಲಕ ಶಕ್ತಿಯಾಗಿ ಬರ್ತದೆ.

ಕಣವಿ: ಈ ಕುತೂಹಲ, ಸೋಜಿಗ, ಎ ಸೆನ್ಸ್ ಅಫ್ ವಂಡರ್ ಅಂತೀವಲ್ಲ ಅದು, ನನಗೆ ಬಾಲ್ಯದಿಂದಲೂ ಇರುವಂಥಾದ್ದು. ನಾನು ನಮ್ಮನೆ ಸಮೀಪದ ಕಂಬಾರ ಸಾಲೆಗೆ ಹೋಗಿ ಆ ಕೆಂಡ ಕಾಯೋದು, ಅದನ್ನ ಬಡಿಯೋದು, ಕಿಡಿಹಾರೋದು, ನೋಡ ನೋಡತಾನ ಸೊರ್ ಅಂತ ನೀರುಣಿಸೋದು ಇದನ್ನ ನೋಡ್ಕೋತ ನಿಂತಬಿಡ್ತಿದ್ದೆ. ಕ್ರಿಯೇಟಿವ್ ಪ್ರಾಸೆಸ್ ಅಲ್ಲಿತ್ತು ಅಂತ ಕಾಣ್ತುತ್ತೆ. ಅದೇ ರೀತಿಲಿ ಕುಂಬಾರರು. ಕಮ್ಮಾರರಕ್ಕಿಂತಲೂ ಇದು ಹೆಚ್ಚು. ಅರಲು ತುಳಿಯೋದು, ಅದನ್ನ ತಿಗರಿಗೆ ಹಚ್ಚೋದು, ನೋಡನೋಡಾಣ ಅದಕ್ಕೆ ಒಂದು ರೂಪ ಕೊಟ್ಟು ಬಿಡೋದು. ಆಕಾರ ಸಣ್ಣದು ದೊಡ್ಡದು ತರತರತರದ್ದು ಇಟ್ಟು ಬಿಡುವಂತಹ ಒಂದು ಕ್ರಿಯೆ.

ಸಂ: ವಿಸ್ಮಯ ನಿಮ್ಮ ಕಾವ್ಯದ ಜೀವಾಳ ನಿಜ. ಆದರೆ ನಾಗರಿಕ ಜಗತ್ತಿಗೆ ಮುಖಾ ಮುಖಿ ಮಾಡುವಾಗ ಯಾಕೆ ಈ ವಿಸ್ಮಯವನ್ನ ವಿರುದ್ಧ ದಿಕ್ಕಿನಲ್ಲಿ ಇಡ್ತೀರಿ? 'ನಾಗರಿಕ ನಾಗರವು ಹುತ್ತ ಕಟ್ಟಿದ ಹಳ್ಳಿ' ಅಂತ ಬರೀತೀರಿ. ನಿಜವಾಗಲೂ ಧಾರವಾಡ ಅಂತಹ ಭಯಭೀತಗೊಳಿಸುವ ನಗರ ಅನಿಸ್ತಾ?

ಕಣವಿ: ಆಗಿನ ಕಾಲಕ್ಕ ೫೦-೬೦ ವರ್ಷಗಳ ಹಿಂದೆ, ನನಗ ಅದು ನಾಗರಿಕ. ಈಗ ಅಷ್ಟು

ಅನಿಸೋಲ್ಲ. ಹಾಗೆ ನೋಡಿದರ ಧಾರವಾಡ ದೊಡ್ಡ ಹಳ್ಳೀನೆ! ಧಾರವಾಡ ಆಮೇಲೆ ನನಗೆ ಭಾಳ ಪ್ರಿಯವಾಯ್ತು. ನಮ್ಮೂರಿನ ಒಂದು ಹತ್ತುಪಟ್ಟು ದೊಡ್ಡ ಊರು ಅಂತ ಅನಿಸಿತು. ನಮ್ಮೂರಲ್ಲಿ ಇರೋವಾಗ ಜನರ ಮುಗ್ಧತೆ, ಕಷ್ಟ, ಬಡತನ, ಅದರಲ್ಲೂ ಒಂದು ಸಂತೋಷವಾಗಿ ಇರೋವಂಥಾದ್ದು ನೋಡ್ತಿದ್ದೆ ನಾನು. ಏನು ಒಂದು ನಟ್ ಕಡೀಲಿಕ್ಕೆ ಮಟಾಮಟ ಮಧ್ಯಾಹ್ನದಲ್ಲಿ ಹೋಗಬೇಕು ಹಳ್ಳಿಜನ. ಎರಡಾಣೆ ಕೂಲಿ ಅವರಿಗೆ. ಆಮೇಲೆ ಹೆಣ್ಮಕ್ಕಳು ಹತ್ತಿ ಹೊಲಕ್ಕೆ ಹೋಗಿ ಹತ್ತಿ ಬಿಡಿಸ್ಕೊಂಡು ಬರೋದು. ನಮ್ಮೂರ ಹತ್ರ ಎಲಿಶಿರುಂದ ಅಂತ ಮತ್ತೊಂದು ಊರಿತ್ತು. ಅಲ್ಲಿ ಎಲಿತೋಟ ಇರ್ತಿತ್ತು. ಅದಕ್ಕ ಯಾತ ಹೊಡೀತಾರಲ್ಲ, ಅದು ಗಿರ್‍ರ್ರಕು ಗಿರ್‍ರ್ರಕೂ ಅಂತ ಸಪ್ಪಳ ಮಾಡ್ತಾ ಇರೋದು. ಆ ನಾದಕ್ಕ ನನ್ನ ಲಕ್ಷ್ಯಯೆಲ್ಲ ಆಕಡೆ ಹೋಗದು.

ಸಂ: ಹೌದು ಸಾರ್, ನಿಮ್ಮ ಕಾವ್ಯದಲ್ಲಿ ಕಿವಿಯಿಂದ ಕೇಳೋ ನಾದಕ್ಕೆ ತುಂಬಾ ದೊಡ್ಡ ಪಾತ್ರ ಇದೆ...

ಕಣವಿ: ನಮ್ಮ ಊರಿನ ಗೌಡರು ಲಕ್ಷ್ಮಣಗೌಡ್ರು ಅಂತ. ಅವರು ಕುರುಬರು. ಅವರು ಒಂದು ಗ್ರಾಮದೇವತೇನ ಪೂಜಿ ಮಾಡೋರು. ಅದು ನಮ್ಮನಿ ಎದುರಿಗೇನೇ ಇತ್ತು. ಪ್ರತಿವಾರ ಅದರ ಪಲ್ಲಕ್ಕಿ ಸೇವೆ, ಡೊಳ್ಳು ಬಾರಿಸೋದು ಇದೆಲ್ಲ ನಡೀತಾ ಇತ್ತು. ಮತ್ತೆ ಡೊಳ್ಳಿನ ಹಾಡುಗಳು, ಈರಗಾರ ಪದ ಅಂತ ಕರೀತಿದ್ರು ಅವಕ್ಕೆ. ನಮ್ಮ ಮನೆ ಎದುರಿಗೇನೇ ಒಂದು ಅರಳೆಮರ. ಆ ಅರಳೇ ಮರದಲ್ಲಿ ಗಿಳಿಗಳು ಬಹಳ ಬಂದು ಇರ್‍ತಿದ್ದವು. ಆಮೇಲೆ ಊರ ಹೊರಗಿನ ತೋಟದೊಳಗೆ ನವಿಲು ಇರ್‍ತಿದ್ದವು. ನವಿಲುಗಳು ಬಂದ ಹೋದ ಮ್ಯಾಲೆ ಗರಿಗಳನ್ನ ಆರಿಸಿಕೊಂಡು ಬರೋದು, ತಂದು ನಮ್ಮ ಪುಸ್ತಕದಲ್ಲಿ ಇಡೋದು ಇಂಥದೆಲ್ಲ ಮಾಡ್ತಾ ಇದ್ದೆ.

ಸಂ: ಆಧುನಿಕ ಕನ್ನಡ ಸಾಹಿತ್ಯದಲ್ಲಿ ತೇಜಸ್ವಿಯವರನ್ನ ಬಿಟ್ಟರೆ ಹಕ್ಕಿಗಳ ಮೇಲೆ ನಿಮ್ಮಷ್ಟು ಆಕರ್ಷಿತರಾದ ಲೇಖಕರೇ ಇಲ್ಲವೇನೋ. ಆಗಸ ಮತ್ತು ಹಕ್ಕಿಗಳನ್ನು ಬಿಟ್ಟು ನಿಮ್ಮ ಕಾವ್ಯವನ್ನು ಕಲ್ಪಿಸಿಕೊಳ್ಳೋಕೆ ಆಗೋಲ್ಲ.

ಕಣವಿ: ಈಗಲೂ ನೋಡಿ, ನಾನು ಎಷ್ಟೊತ್ತಿಗೆ ಮಲಗಿಕೊಂಡ್ರೂ ಕೂಡಾ ಬೆಳಿಗ್ಗೆ ಐದುವರಿ ಆರರೊಳಗೇನೆ ಎಚ್ಚರ ಆಗಿಬಿಡ್ತದೆ. ಆ ಎಚ್ಚರ ಆಗೋದೇನೆ ಹಕ್ಕಿಗಳ ಚಿಲಿಪಿಲಿ ಯಿಂದ.

ಸಂ: ನಮ್ಮ ರಮ್ಯ ಸಂಪ್ರದಾಯದ ದೊಡ್ಡ ಲೇಖಕರೆಲ್ಲ ನಿಸರ್ಗದ ಮೇಲೆ ಬಹಳ ಪ್ರೀತಿಯುಳ್ಳೋರು. ಇದರ ಜತೆಗೇನೆ ನಾಗರಿಕತೆಯನ್ನ ಆಧುನಿಕತೆಯನ್ನ ಒಂದು ಪಾಸಿಟಿವ್ ಶಕ್ತಿಯಾಗಿ ನೋಡ್ತಾರೆ. ಆದರೆ ನಿಮ್ಮಲ್ಲಿ ಮತ್ತು ಜಿಎಸ್ಎಸ್ ಅವರಲ್ಲಿ ಆಧುನಿಕ ನಾಗರಿಕತೆ ಬಗ್ಗೆ ಒಂದು ಕಟುವಾದ ನಿಷ್ಠುರವಾದ ನಿಲುವು ಇದೆ ಯಾಕೆ?

ಕಣವಿ: ನಾವು ಹಳ್ಳಿಗಳಲ್ಲಿ ಕಂಡಂಥಾ ಒಂದು ಪ್ರಾಮಾಣಿಕತೆ ಮುಗ್ಧತೆ ಸರಳತೆ ಏನಿರ್ತಿತ್ತು,

ಅದಕ್ಕೆ ಬಹಳ ವಿರುದ್ಧವಾದಂಥಾ ಅಂಶಗಳನ್ನು ಈ ನಾಗರಿಕ ಜೀವನದಲ್ಲಿ ಒಮ್ಮೇಲೆ ಬಂದಾಗ ಕಾಣ್ತಾ ಇದ್ದದ್ದೇ ಬಹುಶಃ ಇದಕ್ಕೆ ಕಾರಣ ಇರಬೇಕು.

ಸಂ: ಅಂದರೆ ಹಳ್ಳಿಗಳಲ್ಲಿ ಈ ಜಾತಿ ಅಸ್ಪೃಶ್ಯತೆಯ ಕ್ರೌರ್ಯ ದಮನಗಳು ಇರಲಿಲ್ಲವಾ?

ಕಣವಿ: ನಾವು ಇದ್ದಾಗ ಬಹಳ ಕಡಿಮೆ ಪ್ರಮಾಣದಲ್ಲಿತ್ತು. ಈಗ ನೋಡಿ, ನನಗೆ ೭೫ ವರ್ಷ. ಸುಮಾರು ೭೫ ವರ್ಷದ ಹಿಂದೆ ನಾನು ಅಲ್ಲಿದ್ದೆ. ಆ ಕಾಲಕ್ಕೆ ನಮ್ಮ ಊರಲ್ಲಿ ತಮ್ಮ ತಮ್ಮೊಳಗೆ ಬಡಿದಾಟ ಎಲ್ಲಾ ಇದ್ದವು. ಆದರೆ ಈ ಜಾತಿ ಮತ್ತೊಂದು ಜಾತಿಯ ವಿರುದ್ಧ ಅಂತ ಇರ್ತಿರಲಿಲ್ಲ. ಆಮೇಲೆ ನಮ್ಮೂರಲ್ಲಿ ಎರಡು ಮೂರು ಪಿಂಜಾರ ಮನೆಗಳಿದ್ದವು. ಅಲ್ಲಿ ಒಂದು ಸಣ್ಣ ಮಸೀದಿ ಇತ್ತು. ನಾವು ಏನು ವರ್ಷಾ ಹಬ್ಬ ಮಾಡ್ತಿದ್ದೆವು, 'ಅಲೆಹಬ್ಬ' ಅಂತ, ಆ ಹಬ್ಬದ ದಿವಸ ನಮ್ಮ ಮನೇಲಿ ಚವಂಗೆ ಮಾಡ್ತಾ ಇದ್ದೆವು. ಯಾವ ಕಾಸ್ಟು ಅಂತಿರಲಿಲ್ಲ. ಪ್ರತಿಯೊಂದು ಮನೆಯಲ್ಲೂ ಮಾಡ್ತಾ ಇದ್ದರು. ಆಮೇಲೆ ಮೂರು ಮೈಲಿ ದೂರದ ಶಿರಹಟ್ಟಿ ಫಕೀರ್‌ಸ್ವಾಮಿಗಳ ಜಾತ್ರೆಗೆ ಪ್ರತಿ ವರುಷ ಹೋಗ್ತಿದ್ದೆವು. ಅದು ನನ್ನ ಮೇಲೆ ಬಹಳ ಪರಿಣಾಮ ಬೀರಿತು. ಹೋದವರೆಲ್ಲ ಕಾಯಿ ಒಡಿಸ್ತಾ ಇದ್ದೆವು ಮಠಕ್ಕೆ ಹೋಗಿ. ನಗಾರಖಾನೆಗೆ ಹೋಗಿ ಸಕ್ಕರೆ ಓದಿಸೋದು ಯಾರೂ ತಪ್ಪಿಸ್ತಾ ಇರ್ಲಿಲ್ಲ. ಬಹಳ ದೊಡ್ಡ ಪ್ರಮಾಣದಲ್ಲಿ ನಡೀತಿತ್ತು ಆ ಜಾತ್ರೆ.

ಸಂ: ಸಾರ್, ನೀವು ಒಂದು ಸಾವಯವ ಸಾಮರಸ್ಯದ ಹಳ್ಳಿಗಳ ಚಿತ್ರವನ್ನು ಕೊಡ್ತಾ ಇದ್ದೀರಿ. ಆದರೆ ಈ ಚಿತ್ರ ಕ್ರಿಟಿಕಲ್ಲಾಗಿಲ್ಲ ಅದು. ಇದಕ್ಕೆ ನೀವು ಕವಿಗಳಾಗಿರುವುದೂ ಒಂದು ಕಾರಣವಿರಬೇಕು. ಗದ್ಯದ ಬರವಣಿಗೆ ಸಮಾಜವನ್ನು ವೈಚಾರಿಕವಾಗಿ ಗ್ರಹಿಸಲು ಹೆಚ್ಚು ಆಸ್ಪದ ಕೊಡುವಂಥಾ ಒಂದು ಪ್ರಕಾರ. ನಮ್ಮ ಗ್ರಾಮೀಣ ಲೋಕವನ್ನು ತುಂಬ ಕ್ರಿಟಿಕಲ್ಲಾಗಿ ಕನ್ನಡದ ಕಾದಂಬರಿ ಕತೆಗಳು ಚಿತ್ರಿಸಿವೆ. ಕವಿತೆ ಹೆಚ್ಚು ವೈಯಕ್ತಿಕವಾದ ಹಾಗೂ ಭಾವಾನಾತ್ಮಕವಾದ ಜಿಗಿತಗಳನ್ನು ಮಾಡೋವ ರಿಂದ, ಈ ಬಗೆಯ ವಿಮರ್ಶಾತ್ಮಕ ನೋಟವನ್ನು ಕೊಡಲಿಕ್ಕೆ ಕಾವ್ಯ ಪ್ರಕಾರವೂ ಒಂದು ತೊಡಕಾಗಿರಬಹುದು....

ಕಣವಿ: ಅಂದರೆ ಕತೆಯಾಗಲೀ ಕಾದಂಬರಿಯಾಗಲೀ ಬರೆಯುವಾಗ, ಬಹಳ ವಾಸ್ತವ ಪ್ರಪಂಚವನ್ನು ಚಿತ್ರಸಬೇಕಾಗುತ್ತೆ. ಇಲ್ಲಿ ಕವಿತೆಯಲ್ಲಿ ವಾಸ್ತವ ಮತ್ತು ಕಲ್ಪನೆ ಎರಡೂ ಕೂಡಿರ್ತವೆ. ನನ್ನ ಪದ್ಯದಲ್ಲಿ ಬರ್ತದೆ, "ಕೆರವ ಹೊಲಿಯುವ ಮಾದರ ದುರುಗಾ, ಮುಟ್ಟ ಬೇಡಿರಿ ತಂದೆ ಎಂಬ ನುಡಿ, ನನ್ನೆದೆಯ ಕಸಿವಿಸಿಯ ಹೇಳತೀರದು ಆಗ, ಬಾಲಕರಿಗೆಲ್ಲಿಯದು ಮಡಿ ಮೈಲಿಗೆ" ಅಂತ. ನಮ್ಮ ಶಾಲೆಯ ಎದುರಿಗೆ ನೀರು ಸೇದೋ ಬಾವಿ ಇತ್ತು. ಅದರ ಸುತ್ತಲೂ ಅವರು ಗಡಿಗೆಗಳನ್ನ ಇಟ್ಟುಕೊಂಡು ಪ್ರತಿಯೊಬ್ಬರಿಗೂ "ನೀರು ಹಾಕ್ರಿ ನೀರು ಹಾಕ್ರಿ" ಅಂತ ಕೇಳೋರು. ಇವರು ತಿಳಿದಾಗ ಒಂದೊಂದು ಕೊಡ ನೀರು ಸುರುವಿ ಹೋಗೋರು. ಇದು ನನ್ನ ಮನಸಿಗೆ ಬಹಳಾ ಡಿಸ್ಟರ್ಬ್ ಆಗ್ತಾ ಇತ್ತು.

ಸಂ: ಆ ಹೊತ್ತಿನ ಸ್ವಾತಂತ್ರ್ಯ ಚಳುವಳಿ ನಿಮಗೆ ಹೇಗೆ ಕಾಣಿಸತಾ ಇತ್ತು.

ಕಣವಿ: ನಾನು ಊರು ಬಿಟ್ಟ ಮೇಲೆ ನಾನು ಕಲ್ತಿದ್ದು ಇಲ್ಲೇ ಧಾರವಾಡದ ಇನ್ನೊಂದು ಹಳ್ಳೀಲಿ ಗರಗ ಅಂತ. ಆ ಹಳ್ಳೀಲಿ ಆ ಹೊತ್ತಿಗಾಗಲೇ ಸ್ವಾತಂತ್ರ್ಯದ ಚಳುವಳಿ ಪ್ರಾರಂಭವಾಗಿತ್ತು. ೩೮-೩೯ನೇ ಇಸವಿ. ಆ ಊರಿನ ಭಾಳ ಜನ ಖಾದಿ ತೊಡ್ತಾ ಇದ್ದರು. ನನ್ನ ಜೊತಿಗೆ ಸಾಲಿಗೆ ಬರೋವಂಥ ಹುಡುಗರೂ ಖಾದಿ ತೊಡ್ತಾ ಇದ್ದರು. ಮತ್ತೆ ಈ ಧಾರವಾಡಕ್ಕೆ ಯಾರ‍್ಯಾರು ಬರ‍್ತಾ ಇದ್ರಲ್ಲ ಕಾಂಗ್ರೆಸ್ ನಾಯಕರು, ಅವರೆಲ್ಲರೂ ಈ ಹಳ್ಳಿಗೆ ಬಂದು ಈ ಕಾರ್ಯಕ್ರಮ ನಡೆಸಿಕೊಡೋರು. ಪ್ರಭಾತ್‌ಪೇರಿ ಹೊತ್ನಲ್ಲಿ ನಾನೇ ಹಾಡ್ತಿದ್ದೆ. "ಎಂಥಾ ಶ್ಯಾಣ ಮಹಾತ್ಮ ಗಾಂಧಿ, ಹಿಂದೂಸ್ತಾನಕ ಅವನಾ ತಂದಿ" ಆಗಲೇ ಪ್ರಸಿದ್ಧ ಆಗಿರುವಂಥಾ ಹಾಡು. ಆಮೇಲೆ ಅಲ್ಲಿ ಒಳ್ಳೇ ಕಾರ್ಯಕರ್ತರು ಇದ್ದರು. ಅಲ್ಲೆ ಗರಗದಲ್ಲಿ ಡೋರರ ಕೇರಿ ಇತ್ತು. ಅಲ್ಲಿ ಮಾಂಸದ ಮಾರಾಟ ಇತ್ತು. ಅದು ನನಗೆ ಸ್ವಲ್ಪ ನೋಡ್ಲಿಕ್ಕೆ ಆಗ್ತಿದ್ದಿಲ್ಲ. ಅದರೆ ಈ ನಾಯಕರು ಅಲ್ಲಿ ಹೋಗಿ ಅ ಸಣ್ಸಣ್ಣ ಮಕ್ಕಳಿಗೆಲ್ಲಾ ಸ್ನಾನ ಮಾಡಿಸೋದು, ಬಟ್ಟೆ ಹಾಕಿಸೋದು ಈ ಕೆಲಸವನ್ನ ಕೂಡ ಮಾಡ್ತಾ ಇದ್ದರು.

ಸಂ: ನಿಮಗೆ ಕವಿತೆ ಬರೆಯಲು ಆಗಿನ ಧಾರವಾಡದ ಪರಿಸರ ಯಾವ ರೀತಿ ಪೂರಕವಾಗಿತ್ತು ಅಂತ ತಿಳಿಯೋ ಕುತೂಹಲ ಇದೆ.

ಕಣವಿ: ನಾನು ಹೈಸ್ಕೂಲ್‌ನಲ್ಲಿ ಇದ್ದಾಗ ಧಾರವಾಡದ ಮುರುಘಾಮಠದ ಪ್ರಸಾದ ನಿಲಯದಲ್ಲಿ ಇದ್ದೆ. ನನ್ನ ಮನಸ್ಸಿನ ಮೇಲೆ ತುಂಬಾ ದೊಡ್ಡ ಪರಿಣಾಮ ಬೀರಿದ್ದು ಮೃತ್ಯುಂಜಯಸ್ವಾಮಿಗಳ ವಿರಕ್ತ ಜೀವನ. ಆಮೇಲೆ ಹೈಸ್ಕೂಲ್‌ನಲ್ಲಿದ್ದಾಗ ನಮ್ಮದು ಸಣ್ಣದೊಂದು ಲೈಬ್ರರಿ ಇತ್ತು. ಶಂಕರಭಟ್ಟರ 'ನಲ್ಮೆ' ಈ ಪುಸ್ತಕಗಳು ಅಲ್ಲಿದ್ದವು. ಇವನ್ನೆಲ್ಲ ಓದುವಾಗ ನನಗೆ ಮಧುರಚೆನ್ನರ 'ನನ್ನನಲ್ಲ' ಬಹಳ ಹಿಡಿಸಿಬಿಟ್ಟಿತು ಅದು ಎಷ್ಟೋ ಭಾಗ ನನಗೆ ಬಾಯಿಪಾಠ ಆಗಿಬಿಟ್ಟಿತ್ತು. ಬೇಂದ್ರೆಯವರನ್ನ ಧಾರವಾಡದಲ್ಲಿ ನೋಡ್ತಾ ಇದ್ದೆ, ಅವರ ಕಾವ್ಯವಾಚನ ಕೇಳ್ತಾ ಇದ್ದೆ. ಅಷ್ಟೊತ್ತಿಗೆ ಅವರು ಸೊಲ್ಲಾಪುರಕ್ಕೆ ಕನ್ನಡ ಅಧ್ಯಾಪಕರಾಗಿ ಹೋದರು. ಹಿರೇಮಲ್ಲೂರ ಈಶ್ವರನ್ ಅವರು ನನ್ನ 'ಕಾವ್ಯಾಕ್ಷಿ' ಪುಸ್ತಕವನ್ನು ಹಾಕಿದರು. ಅದಕ್ಕೆ ಬೇಂದ್ರೆಯವರು ಮುನ್ನುಡಿ ಬರೆದರು. ನಾನು ಅವರಿಗೆ ಪತ್ರಬರದಾಗ, ಅವರು ೧೦-೧೨ ದಿವಸದಲ್ಲಿ ಮುನ್ನುಡಿ ಬರೆದು ಕಳಿಸಿಬಿಟ್ಟರು. ಬಹಳ ಆಶ್ಚರ್ಯ ಆಯಿತು. ನನಗೆ ಪರಿಚಯ ಇಲ್ಲೇ ಇಲ್ಲ. ಮುಂದೆ ನಮ್ಮ ರೂಮಿನಲ್ಲಿ ನಮ್ಮ ಕೀರ್ತಿನಾಥ ಕುರ್ತಕೋಟಿ, ಶಂಕರ ಮೊಕಾಶಿ ಪುಣೇಕರ, ಶಿವೇಶ್ವರ ದೊಡ್ಡಮನಿ, ವಸಂತ ಕವಲಿ ಈ ಸ್ನೇಹಿತರೆಲ್ಲಾ ಕೂಡ್ಕೊಂಡು 'ಕಾವ್ಯಾನುಭವಮಂಟಪ' ಅಂತ ಮಾಡಿ ಕೊಂಡಿವಿ. ವಾರಕ್ಕೊಮ್ಮೆ ಕೂಡಿಕೊಂಡು, ಕವಿತೆ ಓದೋದು, ವಿಮರ್ಶೆ ಮಾಡೋದು, ಚಹಾ ಕುಡಿಯೋದು ಇಂಥದೆಲ್ಲ ಇತ್ತು. ಗೋಕಾಕ್ ಇವರು

ಕೊಲ್ಹಾಪುರದ ರಾಜಾರಾಮ್ ಕಾಲೇಜಲ್ಲಿ ಪ್ರಿನ್ಸಿಪಾಲರಾಗಿದ್ದರು. ನಾವು ಅವರನ್ನ ನಮ್ಮ ಕಾವ್ಯಮಂಟಪಕ್ಕೆ ಕರಿಸಿದಿವಿ. ಅದೇ ಮೊದಲನೇ ಪರಿಚಯ ಬೇಂದ್ರೆಯವರ ಜೊತೆಗೆ ಆದದ್ದು. ಅವರೂ ಕವಿತೆ ಓದಿದರು. ಮುಂದೆ ನಾನು ಬಿಎ ಫೈನಲ್ ನಲ್ಲಿದ್ದಾಗ ನನ್ನ 'ಭಾವಜೀವಿ'ಗೆ ಗೋಕಾಕರು ಮುನ್ನುಡಿ ಬರೆದರು.

ಸಂ: 'ಭಾವಜೀವಿ' ಯನ್ನ ಮಧುರಚೆನ್ನರಿಗೆ ಅರ್ಪಣೆ ಮಾಡಿದ್ದೀರಿ....

ಕಣವಿ: (ನಗುತ್ತಾ) ಆವಾಗ ನನಗೆ ಅರ್ಪಣೆ ಮಾಡಬೇಕೆಂದರೆ ಕೇಳಬೇಕು ಅಂತ ಗೊತ್ತಿರಲಿಲ್ಲ. 'ಹಲಸಂಗಿಯ ಕಾವ್ಯರ್ಷಿ ಮಧುರಚೆನ್ನರಿಗೆ' ಅಂತ ಬರೆದಿದ್ದೆ. ಅದು ಮುಟ್ಟಿದಾಗ ಮಧುರಚೆನ್ನರು ನೋಡಿ 'ಎಲ್ಲಾ ಚೆನ್ನಾಗಿದೆ. ಆದರೆ ಈ ಕಾವ್ಯಷಿ ಅನ್ನೋ ಪದಾನ ಬಿಡಬೇಕಾಗಿತ್ತು' ಅಂತ ಅಂದರಂತೆ. ಅಲ್ಲಿದ್ದ ಗುರುಲಿಂಗ ಕಾಪಸೆ ಅವರು ಹೇಳಿದ್ದು ಇದು.

ಸಂ: ಮಧುರಚೆನ್ನರ ಮೇಲಿನ ನಿಮ್ಮ ಆಕರ್ಷಣೆಗೂ ನಿಮ್ಮ ಕಾವ್ಯದಲ್ಲಿ ಗ್ರಾಮೀಣ ಲೋಕವನ್ನು ಮಧುರವಾಗಿ ಹಿಡಿದುಕೊಡುವ ಗುಣಕ್ಕೂ ಸಂಬಂಧವಿರಬಹುದು. ನಿಮಗೆ ಮಧುರಚೆನ್ನರ ಭೇಟಿ ಯಾವಾಗ ಆಯಿತು?

ಕಣವಿ: ಸಿದ್ಧಬಸಪ್ಪ ಗಿಡ್ನವರ್ ಅಂತ ನಮ್ಮ ಮಾವನವರು ಬಿಜಾಪುರಕ್ಕೆ ಇದ್ದರು. ಮಧುರಚೆನ್ನರಿಗೂ ನಮ್ಮ ಮಾವನವರಿಗೂ ಬಹಳ ಸಂಬಂಧವಿತ್ತು. ಮಧುರ ಚೆನ್ನರನ್ನ ನನ್ನ ಲಗ್ನದ ನಿಶ್ಚಯ ಕಾಲಕ್ಕೇನೆ ನಾನು ಮೊಟ್ಟ ಮೊದಲು ನೋಡಿದ್ದು. ತೆಳ್ಳಗೆ ಇದ್ದರು. ವಿನಯದ ವ್ಯಕ್ತಿ ಅವರು. ಎಷ್ಟು ಎಂದರೆ, ನಾವು ನಮಸ್ಕಾರ ಮಾಡಿದ್ರೆಂದರೆ ತಾವೂ ಕೈಮುಗಿದು ಆಕಾಶಕೆತ್ತಿ ಹೀಗೆ ಮಾಡೋರು. ಅಂದರೆ ತಾಯಿಗೆ ಅರ್ಪಣೆ ಮಾಡೋರು.

ಸಂ: ಆದರೆ ಮಧುರಚೆನ್ನರನ್ನು ಆವರಿಸಿಕೊಂಡಿದ್ದ ಅರವಿಂದ ದರ್ಶನ ನಿಮ್ಮ ಕಾವ್ಯದ ಮೇಲೆ ಹೆಚ್ಚು ಕವಿಯಲಿಲ್ಲ......

ಕಣವಿ: ಇಲ್ಲ, ಅರವಿಂದ ಆಶ್ರಮಕ್ಕೆ ಒಮ್ಮೆ ಹೋಗಿ ಬಂದಿದೀನಿ, ಮದರ್ ಇದ್ದಾಗ. ಯಾಕೋ ನನಗೆ ಅವರ ತಾತ್ವಿಕವಾದಂಥ ಜಿಜ್ಞಾಸೆ ಅಷ್ಟು ಪ್ರವೇಶ ಕೊಡಲಿಲ್ಲ. ಬಹುಶಃ ಇನ್ನೊಂದು ಕಾರಣ ನಮ್ಮ ಶಿವಶರಣ ಅನುಭಾವದ ಮಾರ್ಗ, ಅದರ ಒಂದು ಸರಳತೆ, ರೀತಿ, ಭಾಷೆ ಅದು ನನಗೆ ಮನಸ್ಸಿಗೆ ಹೆಚ್ಚು ಹಿಡಿಸಿತ್ತು. ಇದಕ್ಕಿಂತ ಹೆಚ್ಚಿನದನ್ನು ನಾನು ಹುಡುಕಾಡತಾ ಇರ್ತಿದ್ದೆ. ಅದು ನನಗೆ ಕಂಡುಬರ್ತಿರಲಿಲ್ಲ. ಸ್ವಲ್ಪ ಅರ್ಥ ಮಾಡಿಕೊಳ್ಳೋಕೆ ಪ್ರಯತ್ನ ಪಡ್ತಿದ್ದೆ. ಮುಂದೆ ಮಧುರಚೆನ್ನರ ಜೊತೆ ಹೆಚ್ಚು ಮಾತಾಡಬೇಕು ಅಂತ ಆಸೆ ಇಟ್ಕೊಂಡಿದ್ದೆ. ಆದರೆ ಅವರು ಬೇಗ ತೀರ್ಕೊಂಡು ಬಿಟ್ರು.

ಸಂ: ಮಧುರಚೆನ್ನರು ಕೂಡ ತಮ್ಮ ಮೊದಲ ಘಟ್ಟದಲ್ಲಿ ವಚನಕಾರರ ಬಗ್ಗೆ ಆಕರ್ಷಿತರಾಗಿದ್ದವರು. ಅರವಿಂದಾಶ್ರಮ ಸಂಪರ್ಕ ಬಂದ ಬಳಿಕ ಆ ಪ್ರಭಾವ

ಬಿಟ್ಟು ಕೊಡ್ತಾ ಹೋದರು. ಇದೊಂದು ಮಾರ್ಮಿಕ ವಿಚಾರ. ಸಮಾಜದ ಬದಲಾವಣೆಯನ್ನು ಸಂಘರ್ಷ ರೂಪದಲ್ಲಿ ಗ್ರಹಿಸುವ ಲೇಖಕರಿಗೆ ವಚನಕಾರರ ಪ್ರಭಾವ ಹಾಗೆ ಕಳಚಿ ಹೋಗೋದಿಲ್ಲ.

ಕಣವಿ: ಅರವಿಂದರಿಗೆ ಹೋಗಿ ಬಂದ ಮೇಲೂ ಮಧುರಚೆನ್ನರು ವಚನಕಾರರ ಪ್ರಭಾವ ಇಟ್ಕೊಂಡಿದ್ದರು. 'ನನ್ನ ನಲ್ಲ' ಆರಂಭ ಮಾಡುವಾಗಲೂನೂ ಅವರು ವಚನ ಕೋಟ್ ಮಾಡ್ತಾರ. "ಎಲ್ಲರ ಪರಿಯಂತಲ್ಲ ನೋಡವ್ವ ನನ್ನ ಗಂಡ, ಸುಳಿಯಲಿಲ್ಲ ಸುಳಿದು ಸಿಂಗಾರವ ಮಾಡಲಿಲ್ಲ" ಅಂತ. ಅವರು ಅರವಿಂದರಲ್ಲಿ ಮತ್ತು ಮಾತೆಯರಲ್ಲಿ ಯಾವುದೋ ಒಂದು ವಿಶೇಷತೆ ಕಂಡಿರಬೇಕು. ಆದರೆ ಅವರು ಶರಣರನ್ನ ಬಿಡ್ಲಿಲ್ಲ. ಈಗ ಅವರ ಆತ್ಮಕಥೆಯನ್ನು ನೋಡುವಾಗ ಅಲ್ಲಿ ಹಲಸಂಗಿಯಲ್ಲಿ ಯಾವುದೋ ಮಲ್ಲಿಕಾರ್ಜುನನ ಗುಡಿ ಇತ್ತು. ಅದು ಅವರ ಮನೆ ದೇವತೆ. ಆಮೇಲೆ ಮನೆಯವರೆಲ್ಲ ಹೋಗಿ ಬೇಡ್ಕೋತ್ತಿದ್ದಾಗ ಇವರು ಅದರಲ್ಲಿ ಭಾಗಾನೇ ವಹಿಸ್ತಿದ್ದಿಲ್ಲವಂತೆ, ಹೀಗೆಲ್ಲ ಬರ್‍ತದೆ ಅಲ್ಲಿ. ಅಂದರೆ ಅನುಭಾವದ ದೃಷ್ಟಿಯಿಂದ ಶರಣರನ್ನ ಮೈಗೂಡಿಸಿಕೊಂಡಿದ್ದರು. ಅರವಿಂದ ದರ್ಶನ ಹಾಗೂ ಶರಣರ ಅನುಭಾವ ಹ್ಯಾಗೆ ಎರಡೂ ಒಂದೆ ಇದೆ ಅಂತ ಲೇಖನವನ್ನೂ ಬರೆದರು. ಈ ರೀತಿ ಹೊಂದಿಸಲಿಕ್ಕೆ ಪ್ರಯತ್ನ ಅವರು ಪಡತಾ ಇದ್ದರು.

ಸು: ಅರವಿಂದ ದರ್ಶನ ಹೆಚ್ಚು ಆದರ್ಶವಾದಿ ಮಾನವತೆಯ ಕಡೆಗೆ ಹೋಗ್ತದೆ. ವರ್ತಮಾನವನ್ನು ಮುಖಾಮುಖಿ ಮಾಡೋಕೆ ವಚನಕಾರರು ಹೆಚ್ಚು ರೆಲವಂಟ್.

ಕಣವಿ: ಭಾಷೆ ದೃಷ್ಟಿಯಿಂದಾತು. ತತ್ವ, ಅನುಭಾವ ದೃಷ್ಟಿಯಿಂದಾತು. ನಡೆ ನುಡಿಯಿಂದ, ಜನಸಮುದಾಯವನ್ನು ಕಟ್ಟಿಕೊಂಡು ಹೋಗೋ ದೃಷ್ಟಿ ಯಿಂದಾತು. ಎಲ್ಲಾ ದೃಷ್ಟಿಯಿಂದ ನೋಡಿದಾಗ ವಚನಕಾರರು ಹೆಚ್ಚು ನಮಗೆ ಹತ್ತಿರದವರು ಅನ್ನಿಸ್ತದೆ.

ಸು: ವಚನ ಸಾಹಿತ್ಯ ಕವಿಯಾಗಿ ನಿಮಗೆ ಹೆಚ್ಚು ಪ್ರೇರಣೆ ನೀಡಿದೆ. ಆದರೆ ವಚನಕಾರರಲ್ಲಿ ಬಸವಣ್ಣನವರನ್ನು ಮಾತ್ರ ನೀವು ಸ್ವೀಕರಿಸಿದಂತಿದೆ. ಏನು ಕಾರಣ?

ಕಣವಿ: ಇಡೀ ಶರಣರ ಸಮೂಹದಲ್ಲಿ ಬಸವಣ್ಣನವರ ವ್ಯಕ್ತಿತ್ವ ಎಲ್ಲಾ ದೃಷ್ಟಿಯಿಂದಲೂ ದೊಡ್ಡದು. ಅವರು ಸಂಸಾರಿಯಾಗಿದ್ದರು. ಅವರ ನಡೆ ನುಡಿ, ಅನುಭವಮಂಟಪದಲ್ಲಿ ಅವರು ಇರತಕ್ಕಂಥಾ ರೀತಿ, ಅಲ್ಲಮಪ್ರಭುವಿನ ಜೊತೆಗೆ ನಡ್ಕೊಳ್ತಕ್ಕಂಥಾ ರೀತಿ, ಆ ಬಿಜ್ಜಳನ ಜೊತೆಗೆ ಇರುವಂಥಾ ರೀತಿ, ಅವರ ವಿನಯ, ಆ ಭಕ್ತಿ, ಭಕ್ತಿ ಅಂದರೆ ವೀಕನೆಸ್ ಅಂತ ಅಲ್ಲ. ಒಂದು ವಚನದಲ್ಲಿ ಬರ್ತದೆ- "ಬೀಗಿ ಬೆಳೆದ ಗೊನೆಬಾಳೆಯಂತೆ ಬಾಗಿಕೊಂಡಿಪ್ಪ ನಮ್ಮ ಶರಣ". ಅಂದರೆ ಬೆಳೀಬೇಕು ಮೊದಲು. ಅದು ಗೊನೆ ಆದಾಗ ಬಾಗುತ್ತೆ ತಾನಾಗಿ. ಇದು ಸಹಜವಾದ ವಿನಯ.

ಸು: ಬಸವಣ್ಣನವರ ಭಕ್ತಿ, ವಿನಯ ನಿಮ್ಮಲ್ಲೂ ಇದೆ. ಅವರೂ ಅಧಿಕಾರಸ್ಥ ಫಿಲಾಸಫಿಗಳ [illegible] ಅವರ [illegible] ಇದೆಯಲ್ಲ. ಅದು ನಿಮ್ಮ ಕಾವ್ಯದಲ್ಲಿ ಹೆಚ್ಚು [illegible] ಹಾಗೆ ಇಲ್ಲ.

ಕಣವಿ: ಬಹುಶಃ ವ್ಯಕ್ತಿಯಲ್ಲಿ ನೋಡಿದಾಗ ಅಲ್ಲಿರುವಂಥ ಒಳ್ಳೆ ಗುಣ ಕಾಣಿಸ್ತದೆ. ಅದು ನಾನು ಸ್ವೀಕಾರ ಮಾಡ್ಕೋಬೇಕು ಅನ್ನುವಂಥದ್ದು. ಆದರೆ ಯಾವುದೇ ವ್ಯಕ್ತಿಯಲ್ಲಿ ಸಂಪೂರ್ಣ ಒಳ್ಳೆಯದು ಇರುವುದಿಲ್ಲ. ಅಂದಾಗ ಯಾವುದೋ ಒಂದು ಕೆಟ್ಟ ಅಂಶದ ಸಲುವಾಗಿ ಆ ಇಡೀ ವ್ಯಕ್ತಿನ ದೂಷಿಸುವದು ಒಳ್ಳೆಯದಲ್ಲ. ಹೀಗಾಗಿ ನನಗೆ ಪೋಷಕವಾಗೋ ರೀತಿಯಲ್ಲಿ ಆ ಒಳ್ಳೇದನ್ನು ಸ್ವೀಕಾರ ಮಾಡ್ತಿದ್ದೆ. ಅಂದರೆ ಕೆಟ್ಟದ್ದನ್ನು ನಾನು ಗಮನಿಸುವದೇ ಇಲ್ಲ ಅಂತ ಅಲ್ಲ. ಜಗತ್ತಲ್ಲಿ ಒಳ್ಳೇದು ಹಾಗೂ ಒಳ್ಳೆದಲ್ಲದ್ದು ಅಂತ ಎರಡೇ ಇರೋದು ಅಂತ ಹೇಳ್ತಾರೆ. (ನಗು)

ಸಂ: ೨೦ನೇ ಶತಮಾನದ ಕನ್ನಡ ಸಾಹಿತ್ಯದಲ್ಲಿ ನೀವು ಹಾಗೂ ಮಾಸ್ತಿಯರು ಒಂದು ವಿಷಯದಲ್ಲಿ ಸಮಾನ ಮನೋಭಾವದವರು. ಅದೆಂದರೆ ಬದುಕಿನ ಕರಾಳಮುಖ ಗಳನ್ನ ಇಣುಕಿ ನೋಡೋಕೆ ಒಂದು ಬಗೆಯ ಹಿಂಜರಿಕೆ ತೋರುವವರು. ಭೀಭತ್ಸ ವನ್ನ ಗ್ರಹಿಸೋಕೆ ಹಿಂಜರಿಕೆ ತೋರುವ ಈ ಗುಣ, ಅದನ್ನು ಮುಖಾಮುಖಿಗೆ ಕೂಡ ಪ್ರೇರಿಸದೆ ಹೋಗಬಹುದು. ಇದು ಬರವಣಿಗೆಗೇನೆ ಒಂದು ಮಿತಿಯನ್ನು ತಂದು ಕೊಡಬಹುದು.

ಕಣವಿ: ಇರಬಹುದು. ಬಹುಶಃ ವಿಮರ್ಶಕರಾದ ನೀವೇ ಹೇಳಬೇಕು ಅದನ್ನ. ನನ್ನ ದೃಷ್ಟಿ ಏನು ಅನ್ನೋದನ್ನ ಹೇಳಿದೆನಲ್ಲ. ಮಾಸ್ತಿಯವರ ಸಣ್ಣಕತೆಗಳನ್ನ ನಾನು ಹೈಸ್ಕೂಲ್ ನಲ್ಲಿದ್ದಾಗ ಓದಿದೆ. 'ಕರ್ನಾಟಕದ ಜನತೆಯ ಸಂಸ್ಕೃತಿ' ಓದಿದೆ. ಆಗ ಮಾಸ್ತಿ ನನಗೆ ಹೆಚ್ಚು ಸಮೀಪ ಅನಿಸ್ತಿತ್ತು. 'ಕರ್ನಾಟಕದ ಜನತೆಯ ಸಂಸ್ಕೃತಿ'ಯಲ್ಲಿ ಒಂದು ಘಟನೆಯನ್ನ ನಿರೂಪಣೆ ಮಾಡ್ತಾರೆ ಮಾಸ್ತಿಯವರು. ಅವರು ಕಮೀಶ್ ನರಿದ್ದಾಗ ಒಂದು ಹಳ್ಳಿಗೆ ಹೋಗ್ತಾರೆ-ಚೆನ್ನೇಗೌಡರು ಅಂತ ಅವರನ್ನ ನೋಡೋಕೆ. ಮನೆಗೆ ಹೋದಾಗ, ಆ ಮನೆಯ ಹೆಣ್ಮಗಳು ಹೊರಗೆ ಬಂದು "ಚೆನ್ನೇಗೌಡರು ಇದಾರಾ" ಅಂತ ಕೇಳಿದರೆ "ಶಿವಪುರಿಗೆ ಹೋಗಿದಾರೆ" ಅಂತಾಳೆ. ಇವರು ಆ 'ಶಿವಪುರಿ ಸಮೀಪ ಇದೆಯೋ, ದೂರಿದೆಯೋ' ಅಂತ ಕೇಳದಾಗ, ಹತ್ರ ಇದ್ದೋರು "ಇಲ್ಲ ಅವರು ತೀರ್ಕೊಂಡಿದ್ದಾರೆ" ಅಂತ ಹೇಳತಾರೆ. ನಾನು ಅಂಥಾ ಜನಾನ ಬಾಲ್ಯದಲ್ಲಿ ನೋಡಿದ್ದೆ ನನ್ನ ಹಳ್ಳಿಯಲ್ಲಿ.

ಸಂ: ವಚನಕಾರರ ಸಾಮಾಜಿಕ ಸಂಘರ್ಷದ ಗುಣದ ಆವಾಹನೆ ಮಾಡಿಕೊಳ್ಳೋ ಪ್ರಶ್ನೆ....

ಕಣವಿ: ಇಲ್ಲ, ನಾನು ವಿಡಂಬನೆ ರೀತಿಯಲ್ಲಿ ಅದನ್ನ ಮಾಡಿದ್ದೇನೆ. ಹಂಗ ನೋಡಿದರೆ ವಿಡಂಬನೆಯ ಅಂಶಗಳನ್ನ ಸೂಕ್ಷ್ಮವಾದಂಥ ವ್ಯಂಗ್ಯ ರೀತಿಯಲ್ಲಿ ನಾನು ಉಪ ಯೋಗ ಮಾಡಿಕೊಂಡಿದ್ದೇನೆ. ಈಗ ಅಂಥಾ ಒಂದು ಹಿಂಸೆಯನ್ನು ಪ್ರತಿಭಟನೆ ಮಾಡುವಂಥಿದ್ದರೂ ಸಹಿತ ಬಸವಣ್ಣನೋರು "ವೇದವನ್ನೋದಿದವರ ಮುಂದೆ ಅಳು ಕಂಡ್ಯಾ ಎಲೆ ಹೋತೆ, ಶಾಸ್ತ್ರಗಳನ್ನೋದಿದವರ ಮುಂದೆ ಅಳು ಕಂಡ್ಯಾ ಎಲೆ ಹೋತೆ, ನೀನು ಅತ್ತುದಕ್ಕೆ ತಕ್ಕುದ ಮಾಡುವ ನಮ್ಮ ಕೂಡಲ ಸಂಗಮದೇವಾ"

ಈ ಹೇಳೋ ರೀತಿಯಿದೆಯಲ್ಲ, ಇದು ನನಗೆ ಪ್ರಿಯ. ಬಸವಣ್ಣನವರೋದು ಹಿಂಸೆಯ ವಿರುದ್ಧದ ಪ್ರತಿಭಟನೆ ಎಷ್ಟು ಅಹಿಂಸಾತ್ಮಕವಾದ ರೀತಿ ಇತ್ತು. ಅದು ನನಗೆ ಭಾಳ ಪ್ರಿಯವಾದದ್ದು. ಭಾಷೆ ತತ್ತ್ವ ಶೈಲಿ ಎಲ್ಲಾ ಕೂಡಿಕೊಂಡು ಸಮರಸವಾಗಿ ಬರುವಂತಹ ರೀತಿಯದು. ಅಷ್ಟು ಉಳಿದವರಲ್ಲಿ ಇದೆ ಅನಿಸೋದಿಲ್ಲ. ಈಗ 'ಮನೆಯೊಳಗೆ ಮನೆಯೊಡೆಯ ಇದ್ದಾನೋ, ಇಲ್ಲವೋ' ಅನ್ನುವ ಸರಳವಾದ ಒಂದು ಮಾತಾತು. ಆಮೇಲೆ ಇನ್ನೊಂದು ಕಡೆ ಬರ್ತದೆ. "ಕರುವನಗಲಿಸಿ ತಾಯ ಮರುಗಿಸಿ ಮೊಲೆವಾಲ ಕರೆದುಣ ಬೇಡವೋ" ಏನು ಆರ್ತತೆ ಕರುಣೆಯಿದೆ ನೋಡಿ. ಈ ಇಡೀ ವಾಕ್ಯದಲ್ಲಿ ಒಂದು ಒತ್ತಕ್ಷರಾನೂ ಇಲ್ಲ. ಅಂದರೆ ಭಾಷೆ ಯಲ್ಲೂ ಕೂಡಾ ಎಷ್ಟು ಅಹಿಂಸಾತ್ಮಕ ಇದೆ ಅಂದರೆ, ನಮ್ಮ ಮನಸ್ಸಿನಲ್ಲಿ ಫೀಲಿಂಗು ಯಾವ ಭಾಷೆನಾ ಹ್ಯಾಗೆ ಆರಿಸ್ಕೊಳ್ತದೆ ಅನ್ನೋದು ಬಸವಣ್ಣನವರ ವಚನದಲ್ಲಿ ನನಗೆ ಯಾವತ್ತೂ ಸೋಜಿಗ.

ಸಂ: ಕುತೂಹಲದ ಸಂಗತಿ ಅಂದರೆ, ಧಾರವಾಡ ಭಾಗದಿಂದ ಬರುವ ಲೇಖಕರಾದ ನಿಮಗೆ ಮತ್ತು ಬಸವರಾಜ ಕಟ್ಟೀಮನಿಯವರಿಗೆ ಬೇಂದ್ರೆಯವರಿಗಿಂತ ಕುವೆಂಪು ಅವರ ಕಡೆ ಸೆಳೆತ ಹೆಚ್ಚು. ಕಾದಂಬರಿಕಾರರಾಗಿ ಕಟ್ಟಿಮನಿಯವರಿಗೆ ಕುವೆಂಪು ಸೆಳೆತವಾಗಿದ್ದು ಸಹಜ. ಕವಿಯಾಗಿ ನಿಮಗೂ ಕುವೆಂಪು ಸೆಳೆತ. ಇದಕ್ಕೆ ಕಾರಣ ಏನಿರಬಹುದು.

ಕಣವಿ: ಧಾರವಾಡದಲ್ಲಿ ನನಗ ಬೇಂದ್ರೆಯವರು ಬಹಳ ಸಮೀಪ ಇದ್ದರು. ಆದರೆ ನಾನು ಧಾರವಾಡದಲ್ಲಿದ್ದುಕೊಂಡು ಕೂಡ ಮೊದಲು ಓದಿದ್ದು ಕುವೆಂಪುರವನ್ನು. ಕಾವ್ಯ ಅಂದ್ಕೊಡ್ಲೆ ಒಂದು ಮೆಜೆಸ್ಟಿಕ್ ಸ್ಟೈಲ್ ಇರಬೇಕು, ಒಂದು ಗಂಭೀರವಾದದ್ದಿರ ಬೇಕು, ಭಾಷೆ ಒಳ್ಳೇದಿರಬೇಕು ಅನ್ನೋದು ಸಾಮಾನ್ಯವಾಗಿ ಇರೊವಂಥದ್ದು. ಹೀಗಾಗಿ ಅವರ ಕವಿತೆಗಳನ್ನು ಓದಿದಾಗ ಬರ್‍ತಕ್ಕಂಥಾ ಭಾಷೆ ಶೈಲಿ ರೀತಿ ಇದೆಲ್ಲ ಇದೆ ಅನಿಸಿತು. ಮತ್ತೆ ನನ್ನ ಸುತ್ತಮುತ್ತಲ ಜನ ಧಾರವಾಡದಲ್ಲಿದ್ದುಕೊಂಡೇನೇ ಆಡಿಕೊಳ್ತಿದ್ದು ಕೇಳಿಸ್ತಿತ್ತು. "ಏನು ಬೇಂದ್ರೇನಾ? ಲಾವಣಿ ಬರೀತಾನೆ ಆ ಕವಿ ಹೌದಿಲ್ಲೊ?" ಅಂತಿದ್ದರು. ಅದು ಸ್ವಲ್ಪ ಮನಸ್ಸಿಗೆ ಪರಿಣಾಮ ಬೀರಿರಬೇಕು.

ಸಂ: ಬೇಂದ್ರೆಯವರು ಬೀದಿಯ ಭಾಷೆಯನ್ನ ಜನಪದ ಲೋಕವನ್ನ ಇಟ್ಟುಕೊಂಡು ಮಾಡ್ತಾ ಇದ್ದ ಪ್ರಯೋಗಗಳು ಮಹತ್ವದವು ಅಂತ ಜನರಿಗೆ ಅನಿಸ್ತಿರಲಿಲ್ಲವಾ?

ಕಣವಿ: ಇಲ್ಲಿನ ಜನಕ್ಕೆ ಅನಿಸಿರಲಿಲ್ಲ ಆ ಹೊತ್ತಿಗೆ. ಏನು ನಮ್ಮ ಲಾಂಗವೇಜನ್ನೇ ಹಾಕ್ತಾ ಇದಾನೆ ಅನಿಸ್ತಿತ್ತು. 'ಹಕ್ಕಿ ಹಾರುತಿದೆ ನೋಡಿದಿರಾ?' ಅಂದರೆ ಏನು. ಗುಬ್ಬಿ ಹಾರುತ್ತಿದೆ ನೋಡಿದಿರಾ ಅಂದ್ರೆ ಏನು. ಇದರಲ್ಲಿ ಕಾವ್ಯ ಏನು ಬಂತು? ಆದರೆ ಅದೇ ಕುವೆಂಪುರವರಲ್ಲಿ "ನಾಡಿನ ಪುಣ್ಯದ ಪೂರ್ವ ದಿಗಂತದಿ ನವ ಅರುಣೋದಯ ಹೊಮ್ಮುತ್ತಿದೆ" ಅನ್ನುವಂಥಾ ಸಾಲುಗಳು ಕಾವ್ಯದ ಬಗ್ಗೆ ಭಿನ್ನವಾದ ಭಾವನೆ ಹುಟ್ಟಿಸ್ತಾ ಇದ್ದವು. ಕಟ್ಟಿಮನಿ ಇವನ್ನೆಲ್ಲ ಭಾಳ ಚೆನ್ನಾಗಿ ಓದ್ತಿದ್ದರು.

ಸಂ: ಕುವೆಂಪುರವರ ಕಾವ್ಯಭಾಷೆಗೆ ಕವಿತೆ ಪ್ರಾಕ್ಟೀಸ್ ಮಾಡ್ತಿದ್ದ ನೀವು ಸಹಜ ಆಕರ್ಷಿತರಾದಿರಿ. ಅದರ ಸಂಸ್ಕೃತ ಭೂಯಿಷ್ಠತೆ ಎಂದಾದರೂ ತೊಡಕು ಅನಿಸಿತಾ?

ಕಣವಿ: ಕುವೆಂಪುರವರದು ಪೂರ್ತಿ ಸಂಸ್ಕೃತ ಅನಿಸೋಲ್ಲ. ಸಂಸ್ಕೃತ-ಕನ್ನಡ ಎರಡರ ಲಲಿತ ಮಿಶ್ರಣ ಅವರು ತರ್ತಾರೆ. ಅನೇಕ ಕವಿತೆಗಳಲ್ಲಿ ಅರ್ಧಭಾಗ ಸಂಸ್ಕೃತದ್ದು ಇದ್ರೆ, ಮುಂದಿನ ಭಾಗ ಕನ್ನಡದ್ದು ಬಂದ್‌ಬಿಡ್ತದೆ. "ಆಕ್ರಮಿಸು ಬಂದೆನ್ನ ಅಲ್ಪತ್ವಮಂ ಓ ಅನಂತ' ಎಂಬೊ ಕವಿತೆ ಇದೆ. ಆಮೇಲೆ ಎರಡನೇ ಸಾಲ್ನಲ್ಲಿ ಶಿವನ ವರ್ಣನೆ ಮಾಡ್ತಾರೆ. ಅವೆಲ್ಲವಕ್ಕೂ ಕನ್ನಡದ ಹೆಸರು ಕೊಟ್ಟುಬಿಡ್ತಾರೆ. 'ಪಾವುಡುಗೆ, ಬೆಂಕಿಗಣ್, ಗಂಗೆಮುಡಿ, ಓಬಾರ ವ್ಯೋಮಕೇಶ'. ನೋಡಿ, ಫಾಲನೇತ್ರಕ್ಕೆ ಬದಲಾಗಿ ಬೆಂಕಿಗಣ್ಣು. ನಾಗಭೂಷಣಕ್ಕೆ ಬದಲಾಗಿ ಪಾವುಡುಗೆ.

ಸಂ: ಬೇಂದ್ರೆ.....

ಕಣವಿ: ಆಮೇಲೆ ಬೇಂದ್ರೇನ ಓದಿದೆ. ಅವರೂ ಬಹಳ ಸೆಳೆದರು ನನ್ನ. ಆದರೆ ಪೂರ್ತಿ ಜಾನಪದ ಇರದೇನೆ ಪೂರ್ತಿ ಗ್ರಾಂಥಿಕವಾಗಿ ಇರದೇನೇ, ಇವೆರಡರ ನಡುವಿನ ಭಾಷೆಯನ್ನು ನಾನು ಕಲೀಲಿಕ್ಕೆ ಆರಂಭಮಾಡಿದೆ ಅನಿಸುತ್ತೆ. ಆದರೆ ಕವಿತೆ ಮಾತಾಡಿದ ಹಾಗಿರಬೇಕು. "ಏನು ಬಾನು ಎನಿತು ದೂರವಿದ್ದಂತಿಹುದು, ನಮಗೂ ಅದಕ್ಕೂ ಮಾತುಕತೆಯೇ ಇಲ್ಲ" ಅಂತ 'ನಿಯಮೋಲ್ಲಂಘನ' ಪದ್ಯದಲ್ಲಿ ಬರ್ತದೆ.

ಸಂ: ಬೇಂದ್ರೆಯವರ ಭಾಷೆ ಕುವೆಂಪು ಅವರ ಭಾಷೆಯಂತೆ ನಿಮಗೆ ಪ್ರಭಾವ ಬೀರದೆ ಇರೋಕೆ, ಅದು ತುಂಬಾ ಪರಿಚಿತವಾದದ್ದು ಅನ್ನೋದು ಸರಳ ಕಾರಣ ಅನಿಸ್ತಾ ಇದೆ. ಇನ್ನೂ ಬೇರೆ ಆಳವಾದ ಕಾರಣಗಳು ಇರಬಹುದು..

ಕಣವಿ: ಅಂದರೆ ಅವರ ಮೊದಲಿನ ಪದ್ಯಗಳು ಅಥವಾ ಈ ಪ್ರೀತಿಯ ಬಗ್ಗೆ ಬರಿಯೋವಂಥ ಪದ್ಯಗಳು, ನಿಸರ್ಗದ ಪದ್ಯಗಳು ಶ್ರಾವಣದ ಪದ್ಯಗಳು, ಇವನ್ನೆಲ್ಲಾ ನೋಡ್ತಿದ್ದಾಗ ನಾನೂ ಧಾರವಾಡದಲ್ಲಿ ಇದ್ದುದರಿಂದ, ಧಾರವಾಡದ ಯಾವ್ಯಾವ ಪ್ರೇರಣೆಗಳು ಅವರಿಗಿದ್ದವು, ಅವೆಲ್ಲವನ್ನ ನನ್ನ ಕಣ್ಣೆದುರಿಗೇ ಕಾಣ್ತಾ ಇದ್ದೆ. ಅದೇ ಶ್ರಾವಣ, ಅದೇ ಮಳೆಯ ವೈಭವ ಇದೆಲ್ಲ. ಅವರು ಮುಂದೆ ನನ್ನ 'ನೆಲಮುಗಿಲು' ಕವನ ಸಂಕಲನಕ್ಕೆ ಮುನ್ನುಡಿ ಬರೆಯೋವಾಗ ಆ ಮಾತನ್ನ ಹೇಳ್ತಾರೆ. "ನನಗೆ ಯಾವ ಯಾವ ಪ್ರೇರಣೆಗಳು ಧಾರವಾಡದಲ್ಲಿ ಇದ್ದವೋ, ಅವೇ ಪ್ರೇರಣೆಗಳು ಚೆನ್ನ ವೀರನಿಗೂ ಇವೆ" ಅಂತ. ಬಹಳ ಅದ್ಭುತವಾದಂಥ ಮುನ್ನುಡಿ ಅದು. ಇದನ್ನು ಬರೆದಾಗ, ಬಹಳ ಜನ "ಏನು ಬೇಂದ್ರೆಯವರು ಎಷ್ಟು ಮುಕ್ತವಾಗಿ ಬರ್ದಿದಾರೆ. ಅವರು ಯಾರಿಗೂ ಹಿಂಗ ಬರಿದಿಲ್ಲ" ಅನ್ನೋವಂಥ ಒಂದು ಮಾತು ಹೇಳಿದರು. ಆದರೆ ನಾನು ಕುವೆಂಪು ಅವರು ಕಾಣೋ ನಿಸರ್ಗ ಆಗಲೀ, ಬೇಂದ್ರೆಯವರು ಕಾಣೋವಂಥ ನಿಸರ್ಗ ಆಗಲೀ ಇವರಕ್ಕಿಂತ ಭಿನ್ನವಾಗಿ ಕಂಡೆ ಅಂತ ಅನ್ಸುತ್ತೆ. ನಿಸರ್ಗ ಆರಾಧನೆಯ ವಸ್ತುವಲ್ಲ, ಅದು ನನ್ನ ಜೀವನದ ಭಾಗ ಅಂತ ಅನ್ಸುತ್ತೆ.

ಸಂ: ಟಾಗೂರ್ ಕಾವ್ಯ ಅನುವಾದ ಮಾಡಿದಿರಿ. ಆದರ್ಶವಾದದ ಕಾರಣದಿಂದ ನಿಮಗೆ ಅದು ಆಪ್ತವೆನಿಸಿತು?

ಕಣವಿ: ಇಲ್ಲ. ಟ್ಯಾಗೂರ್ ನಾನು ಓದಿದ್ದೆ. ಅವರ 'ಗೀತಾಂಜಲಿ' ಪ್ರಸಿದ್ಧವಾಗಿತ್ತಲ್ಲ ಆ ಕಾಲಕ್ಕೆ. ಅವರ ಪ್ರಭಾವ ನನಗೆ ಸ್ವಲ್ಪ ಮಟ್ಟಿಗಿತ್ತು. ಆದರೂ ಅವರ ಆದರ್ಶವಾದ ಅಷ್ಟು ಮುಖ್ಯ ಅನಿಸಲಿಲ್ಲ. ಅವರಲ್ಲಿ ಮಿಸ್ಟಿಕ್ ಎಲಿಮೆಂಟ್ ಇರ್ತಿತ್ತು. ಈ ಭಾವನೆ ಅದು ನನಗೆ ಶರಣರ ಅಥವಾ ಅನುಭಾವಿಗಳ ಸಮಿಸಮೀಪ ಅನಿಸಿಬಿಡ್ತಿತ್ತು. ಈ ಜಾನಪದ ಕಾವ್ಯ ಏನಿತ್ತು, ಅದು ನಾನು ಹಳ್ಳಿಯಲ್ಲಿದ್ದಾಗಲೇ ಕೇಳ್ತಿದ್ದೆ. ಇವೆಲ್ಲ ಹಾಡು ಕಿವಿ ತುಂಬಿ ಬರ್ತಿತ್ತು. ಅದಕ್ಕಾಗೇ ನನಗೆ ನರಸಿಹಂಸ್ವಾಮಿ ಪದ್ಯಗಳು ಸೆಳೀತಿದ್ದವು. ಹೈಸ್ಕೂಲ್ ನಲ್ಲಿದ್ದಾಗ ಯಾವುದೇ ಒಂದು ಕಾರ್ಯಕ್ರಮ ಮಾಡಲಿ, ಅವರ ಭಾವಗೀತೆಗಳನ್ನ ಹಾಡ್ತಿದ್ದರು. ಆವಾಗ ನಮ್ಮ ಕುವೆಂಪುರವರ 'ತೇನೆಹಕ್ಕಿ' ಬಹಳ ಚೆನ್ನಾಗಿ ಹಾಡ್ತಾ ಇದ್ದರು. "ಜ್ಯೋತ್ಸ್ನೆ ತುಂಬಿತುಳುಕಿ ಹರಿಯೆ ಸ್ನಿಗ್ಧ ಶರತ್ಕಾಲದಿ" ಅದರ ಒಂದು ವಾತಾವರಣಾನೇ ನನಗೆ ರೋಮಾಂಚನ ಮಾಡ್ತಿತ್ತು.

ಸಂ: ನಿಮ್ಮ ಕವಿತೆಯಲ್ಲಿ ಜಾನಪದ ಲೋಕ ನೆನಪಿನ ಚಿತ್ರಗಳಾಗಿ ಬರ್ತದೆ. ಅದು ಕಾವ್ಯ ಭಾಷೆಯಲ್ಲಿ ಅಂತರ್ಗತವಾಗಿ ಬ್ಲೆಂಡ್ ಆಗೋದಿಲ್ಲ.

ಕಣವಿ: ಯಾಕೆಂದರೆ ಜನಪದರು ಆಡೋ ಮಾತನ್ನ ಬೇಂದ್ರೆಯವರು ಬಳಸಿದ ರೀತಿಯಲ್ಲಿ ನಾನು ಬಳಸಲೇ ಇಲ್ಲ. ಹಂಗ ಮಾಡಿದ್ದರೆ ಬೇಂದ್ರೆಯವರ ಅನುಕರಣೆ ಅಂತಾಗಿ ಬಿಡ್ತಿತ್ತು. ಧಾರಡಾಡದ ಗೆಳೆಯರ ಗುಂಪಿನ ಬಹಳ ಜನ ಕವಿಗಳು ಯಾಕೆ ಹೆಸರು ಮಾಡ್ಲಿಲ್ಲ ಮುಂದೆ ಬರ್ಲಿಲ್ಲ ಅಂತಂದರೆ, ಅವರೆಲ್ಲ ಅದೇ ರೀತಿ ಬರೀಲಿಕ್ಕೆ ಹೋಗ್ತಿದ್ದರು. ದೇಸಾಯಿ ದತ್ತಮೂರ್ತಿ, ನರೇಗಲ್ಲ ಪ್ರಹ್ಲಾದರಾಯರು. ಇಂಥದೆಲ್ಲ ನೋಡಿದಾಗ ಏನು ಬೇಂದ್ರೇನೆ ಇದ್ದಾರಲ್ಲ, ಇವಾರ್ಯಾಕೆ ಅನಿಸ್ತಿತ್ತು.

ಸಂ: ಒಬ್ಬ ಪ್ರಭಾಶಾಲಿ ಕವಿಯ ಜತೆಯಲ್ಲಿರುವುದು ಒಂದು ವರವೂ ಹೌದು, ಪ್ರಭಾವ ದಿಂದ ತಪ್ಪಿಸಿಕೊಂಡು ಬರೆಯೋದು ಸವಾಲೂ ಹೌದು.

ಕಣವಿ: ನನ್ನ ದೃಷ್ಟಿಯಿಂದ ಪ್ರಭಾವ ಬೇರೆ ಪ್ರೇರಣೆ ಬೇರೆ. ಪ್ರಭಾವಕ್ಕೆ ಒಳಗಾಗಿದ್ದಾರೆ ಅಂದರೆ, ಕೆಲವು ಅಂಶಗಳು ಶಬ್ದರೂಪದಲ್ಲೊ ಶೈಲಿ ರೂಪದಲ್ಲೊ ರೂಪಕದಲ್ಲೊ ಬಂದು ಸೇರಿಬಿಡ್ತದೆ. ಪ್ರೇರಣೆ ಅಂತಂದರೆ ಓ ಇಂಥಾದ್ದು ಬರೆದರಲ್ಲ ಅವರು, ನನಗೆ ಮತ್ತೊಂದು ಅಂಥಾ ಪದ್ಯ ಬರೀಲಿಕ್ಕೆ ಸ್ಫೂರ್ತಿ ಕೊಡೋವಂಥಾದ್ದು. ಈಗೊಂದು ಉದಾಹರಣೆ ಕೊಡ್ತೇನೆ. ಬೇಂದ್ರೆಯವರು 'ಪಾತರಗಿತ್ತಿ ಪಕ್ಕ, ನೋಡಿದೇನೆ ಅಕ್ಕ' ಅಂತ ಬರೆದರು. ಅವು ಎರಡೂ ಸಾಲು ಅವರವಲ್ಲ. ನಾನು ಸಣ್ಣ ಹುಡುಗನಿದ್ದಾಗ ಕೇಳಿದ್ದವು. ಹಳ್ಳಿಯಲ್ಲಿ ಹುಡುಗರು ಎಲ್ಲರೂ ಇದನ್ನ ಅಂತಿದ್ದರು. ಆ ಎರಡು ಸಾಲನ್ನ ಎತ್ತಿಕೊಂಡು ಬಹಳ ಅದ್ಭುತವಾದಂತಹ ಪದ್ಯವನ್ನ ಅವರು ಬರೆದರು. ಆಮೇಲೆ ನಾನು "ಗಿರಿಗಿರಿ ಗಿಂಡಿ ಈಬತ್ತಿ ಉಂಡಿ" ಅಂತ

ಪದ್ಯ ಬರದೆ. ಅದನ್ನ ಬರೀಲಿಕ್ಕೆ, ಬಹುಶಃ ಧೈರ್ಯ ಪ್ರೇರಣೆ ಒದಗಿದ್ದು ಪಾತರಗಿತ್ತಿ ಪಕ್ಕದಿಂದ. ಇದು ಪ್ರಭಾವ ಅಲ್ಲ, ಪ್ರೇರಣೆ. ಅದರ ಭಾವ ರೀತಿ, ಲಯಾನೇ ಬೇರೆ. ಇದೇ ಬೇರೆ.

ಸಂ: 'ರಾಮಾಯಣದರ್ಶನಂ' ಓದಿ ಮೆಚ್ಚಿ ಒಂದು ಪದ್ಯ ಬರಿದಿರಿ. ಅದರೆ ಕವಿಯಾಗಿ ನಿಮಗೆ ಮಹಾಕಾವ್ಯ ರಚನೆ ಮಾಡಬೇಕು ಅನಿಸಲಿಲ್ಲ ...

ಕಣವಿ: ಅದೂ....(ಯೋಚಿಸುತ್ತ) ಒಂದು ದೃಷ್ಟಿಯಿಂದ ಈ ಕಥನದ್ದು ಕಡಿಮೆ ನನ್ನಲ್ಲಿ. ಎರಡು ಮೂರು ಪದ್ಯಗಳನ್ನ ರೇರಾಗಿ ಬರೆದಿರಬಹುದು. ಆ ರೀತಿ ಬರೀಲಿಕ್ಕೆ ಸ್ವಲ್ಪ ನೆರೇಟೀವ್ ಶಕ್ತಿ ಬೇಕು ನೋಡಿ. ಭಾವಪ್ರಧಾನ ಕಾವ್ಯದಲ್ಲೆ ನನ್ನ ಮನಸ್ಸು.

ಸಂ: ಸಾರ್, ನಿಮ್ಮ ಇಡೀ ಕವಿತೆಯಲ್ಲಿ ಆಕಾಶ ಬಹಳ ಮುಖ್ಯವಾದ ವಸ್ತು, ಯಾಕೆ ಅದು ಅಷ್ಟು ಕಾಡ್ತದೆ?

ಕಣವಿ: ಹಳ್ಳಿಗಳಲ್ಲಿ ಮಣ್ಣಿನ ಮನೆಗಳು. ಹೊರಗೆ ಕಟ್ಟೆ ಇರ್‍ತಿತ್ತು. ನಾವು ಸಾಧಾರಣ ಮಾಳಿಗೆ ಮೇಲೆ ಮಲಗ್ತಾ ಇದ್ದಿವಿ. ಸೆಖೆ ಇರ್‍ತಿತ್ತಲ್ಲ. ಬೇಸಗೆ ಬಂದಾಗ ಹೆಚ್ಚಾಗಿ ಮಾಳಿಗೆ ಉಪಯೋಗ ಮಾಡ್ತಿದ್ದೆವು. ಸಾಲಿಂದ ಬಂದ ಕೂಡ್ಲೆ ರೊಟ್ಟಿ ಹಚ್ಚಿಕೊಂಡು ಮಾಳಿಗೆ ಮೇಲೆ ಹೋಗಿ ತಿನ್ನೋದು. ರಾತ್ರೀನೂ ಅಲ್ಲೆ ಮಲಕ್ಕೊಳ್ಳೋದು. ಮಲ್ಕೊಂಡಾಗ ಆ ಇಡೀ ಆಕಾಶ ಎದುರಿಗೆ ಕಟ್ಟಿದಂಗಾ ಗೋದು. ಆ ಚುಕ್ಕಿಗಳು, ಚಂದ್ರ. ಯಾವುದೋ ಒಂದು ನಿಗೂಢವಾದಂಥ ಶಕ್ತಿ, ಅದಕ್ಕೂ ನಮಗೇನಪಾ ಭಾಳ ಸಂಬಂಧ ಅದೆ. ಈಗ ಮಳೆ. ಆಕಾಶಕ್ಕೂ ಭೂಮಿಗೂ ಜೋಡಿಸುವಂತಹ ಒಂದೇ ಒಂದು ಸೇತುವೆ ಮಳೆ. ಇದು ಕಣ್ಣೆದುರಿಗೆ ನೇದು ಕೂಡಿಸ್ತದಲ್ಲ? ಮಳೆ ಬಗ್ಗೂ ಬಹಳ ಆಕರ್ಷಣೆ ನನಗೆ. ಒಟ್ಟು ಆಕಾಶದಲ್ಲಿ ಏನು ವಿದ್ಯಮಾನಗಳು ನಡೀತವೆ, ಅವೆಲ್ಲವೂ ನನ್ನ ಮನಸಿಗೆ ತುಂಬ್ಕೊಳ್ಳೋವು. ಗುಡುಗು ಮಿಂಚು ಮೋಡ. ಮೋಡಗಳ ಬಗ್ಗೆಯಂತೂ ಸುಮ್ನೆ ನೋಡ್ಕಾತಾ ಇದ್ದು ಬಿಡತಿದ್ದೆ. 'ಮೇಘೋಪಾಸನೆ' ಅಂತ ನನ್ನ ಪದ್ಯ ಇದೆಯಲ್ಲ 'ಕಾವ್ಯಾಕ್ಷಿ'ಯಲ್ಲಿ. ನೋಡು ನೋಡುತಿರೆ.....

ಸಂ: ಕಾವ್ಯದೊಳಗಿನ ಆದರ್ಶವಾದದ ಸೆಳೆತಕ್ಕೂ ಮುಗಿಲಿನ ಸೆಳೆತಕ್ಕೂ ಏನೋ ಸಂಬಂಧ ಇದ್ದಂಗೆ ಕಾಣ್ತದೆ.

ಕಣವಿ: ಇರಬಹುದು. ಈಗ ಮೋಡ ಅಂತಂದಾಗಲೂ ಕೂಡಾ, ಅಲ್ಲೆ ಒಮ್ಮೆಲೆ ಹುಟ್ಟಿದ್ದು ಅಂತ ಅನಿಸಬಹುದು. ಆದರೆ ಅದೂ ಭೂಮಿ ಮೇಲಿನ ನೀರು ಆವಿಯಾಗಿ ಹೋಗಿ ಆ ಆಕಾರವನ್ನು ಪಡೆದಿರುವಂಥದ್ದು. ಅದು ತನ್ನಲ್ಲಿನ ಸತ್ವವನ್ನು ಭೂಮಿಗೆ ಕೊಡುಗೆ ಯಾಗಿ ಕೊಡ್ತು. ಆಕಾರ ಇತ್ತು ಅದಕ್ಕೆ ಮೊದಲು. ಆದರೆ ನಿರಾಕಾರ ಆಗಿ ಬಿಡ್ತು. ಆಕಾರ ತಳಿಯೋದು ಮತ್ತೆ ನಿರಾಕಾರವಾಗಿ ಬಿಡೋದು, ಈವೆರಡೂ ನನಗೆ ಯಾವತ್ತೂ ಸೋಜಿಗ.

ಸಂ: ನಿಮ್ಮ ಕವಿತೆಯ ಎರಡನೆಯ ಬಹಳ ಮುಖ್ಯ ವಸ್ತು ಕಾಲ ಅಥವಾ ಸಾವು. ಇವು ನಿಮ್ಮ ಕಾವ್ಯ ಜೀವನ ದರ್ಶನ ರೂಪಿಸುವಂತೆ ಹಿನ್ನೆಲೆಯಾಗಿ ಬರ್ತವೆ.

ಕಣವಿ: ನಾನು ಸಣ್ಣವನ್ನಿದ್ದಾಗಿನಿಂದಲೂ ಬಹಳ ಸಾವುಗಳನ್ನ ನೋಡಿದೇನೆ. ಪ್ರಾಥಮಿಕ ಶಾಲೆಯಲ್ಲಿದ್ದಾಗ ಎರಡು ಸಲ ದೊಡ್ಡ ಪ್ರಮಾಣದಿಂದ ನಮ್ಮೂರಿಗೆ ಪ್ಲೇಗು ಬಂತು. ಪಟಪಟಪಟ ಇವತ್ತು ಇದ್ದೋರು ನಾಳೆಗೆ ಇರ್ತಿರ್ಲಿಲ್ಲ. ಆ ಸಾವು ಒಂದು ರೀತಿಯಲ್ಲಿ ಮನಸ್ಸಿಗೆ ಘಾಸಿಮಾಡಿತು. ಆಮೇಲೆ ಕೆಲವು ನಮ್ಮ ಮನೆಯಲ್ಲೇನೆ ಆದಂತಹ ಸಾವು. ಸಣ್ಣ ವಯಸ್ಸಿನಲ್ಲಿಯೇ ನಮ್ಮಕ್ಕ ಯಾವುದೋ ಒಂದು ಜಡ್ಡಿನಿಂದ ತೀರ್ಕೊಂಡ ರೀತಿ .ಇದನ್ನ ನೋಡ್ತಿದ್ದಾಗ ಏನಿದು ಮೃತ್ಯು? ಯಾಕೆ ಹೀಗೆ ಅಕಾಲಿಕವಾಗಿ ಬರ್ತಿದೆ....ಆಮೇಲೆ ನಮ್ಮ ತಂದೆಯವರು ಪ್ರತಿವರ್ಷ ಮುಳಗುಂದಕ್ಕೆ ಹೋಗಿ, ಅವರ ಗುರುಗಳ ಮನೇಲಿ ಒಂದು ದಿವಸ ಇದ್ದು ಬರೋವಂಥ ಒಂದು ಪದ್ಧತಿಯಿತ್ತು. ಅವರ ಗುರುಗಳ ಹೆಸರು ಚೆನ್ನವೀರಯ್ಯನವರು ಅಂತ, ನನಗೆ ಅವರ ಹೆಸರನ್ನೇ ಇಟ್ಟಿದ್ದಾರೆ. ಒಂದ್ಸಲ ಹೋದಾಗ ಇಳಿಸಿ ಕೈಹಿಡಿದು ಕೊಂಡು ಹೋಗ್ತಾ ಇದ್ದೆ. ಹೊಸ್ತಲಲ್ಲೆ ನಿತ್ಕೊಂಡು ಕಣ್ಣುಮುಚ್ಚಿ ಗುರುವೇ ಗುರುವೇ ಅಂತ ಧ್ಯಾನ ಮಾಡಿದರು. ಆಮೇಲೆ ಹಂಗೇ ನಿಂತಬಿಟ್ರು. ನಿಲ್ಲೋಣ ಆಯಾಸ ಆಗಿರಬೇಕು ಅಂತಿಳಕೊಂಡು, ಅಲ್ಲೇ ಕಟ್ಟೆ ಇತ್ತು, ಸ್ವಲ್ಪಹೊತ್ತ ಕೂಡ್ರೋಣ ಅಂತ ಹಿಡಕೊಂಡೆ. ಅಲ್ಲೇ ತೀರ್ಕೊಂಡುಬಿಟ್ಟರು.

ಸಂ: ನಿಮ್ಮ ಕವಿತೆಯಲ್ಲಿ ಜೀವನವನ್ನು ಅರ್ಥಪೂರ್ಣವಾಗಿ ಬದುಕುವ ಒತ್ತಾಯಗಳನ್ನು ಸಾವಿನ ಸಾನಿಧ್ಯದಲ್ಲೇ ಹುಟ್ಟಿಸುವ ಆಶಯಗಳಿವೆ.

ಕಣವಿ: ಸಾವಿನ ಸಾನಿಧ್ಯದಿಂದ ಜೀವನದ ಘನತೆ ಕೂಡ ಗೊತ್ತಾಗುತ್ತೆ. ಜೀವನ ಬೆಲೆಯುಳ್ಳದ್ದು ಅನ್ನೋ ಕಲ್ಪನೆ ಉಂಟಾಗ್ತದೆ. ಆಮೇಲೆ ಹಿರಿಯರು ಮನೇಒಳಗೆ ಅದಾರ ಅಂತಂದ್ರೆ ಮನೆ, ತುಂಬ್ಕೊಂಡಿರ್ತದೆ. ಸಣ್ಣ ಒಂದು ಕೋಣೆಯಲ್ಲಿದ್ದು ಕೊಂಡೂ ಕೂಡ ಸಣ್ಣ ತಮ್ಮ ಕಣ್ಣಿಂದಾನೇ ಇಡೀ ಮನೆಗೆಲ್ಲ ಒಂದು ಬೆಳಕು ಕೊಡೋಹಾಗೆ, ಎಲ್ಲಾನೂ ಅಬ್ಸರ್ವ ಮಾಡ್ತಿದ್ದಾರೆ ಅನಿಸೋ ಹಾಗೆ ಇರ್ತದೆ.

ಸಂ: ನಿಮ್ಮ ಕಾವ್ಯದಲ್ಲಿ ಶಿಶುಮುಗ್ಧತೆಯ ಅಂಶ ಹೆಚ್ಚು. ನಿಸರ್ಗದ ಮುಂದೆ ಸೋಜಿಗ ಪಡುವಾಗ ನೀವು ಇನ್ನೂ ದೊಡ್ಡವರೇ ಆಗಿಲ್ಲ ಅನಿಸುವಂತಹ ಸರಳ ಅನ್ನೋದಿದೆ..

ಕಣವಿ: ನೀವು ಭಾಳ ಒಳ್ಳೇದು ಕಂಡು ಹಿಡಿದಿರಿ. ಈಗ್ಲೂಕೂಡ ನನಗೆ ನಾನು ದೊಡ್ಡಂವ ಆಗಿದೀನಿ ಅಂತ ಅನಿಸೋದೆ ಇಲ್ಲ. ನನ್ನ ಕವಿತೆ ಓದಿ ಮೆಚ್ಕೊಂಡವರು ಬರ್ತಾರಲ್ಲ, ಅವರು ಹಿಂಗ ಬಗ್ಗಿ ನಮಸ್ಕಾರ ಮಾಡ್ಲಿಕ್ಕೆ ಬರ್ತಾರೆ. ಬಹಳ ಮುಜುಗರ ಆಗಿಬಿಡ್ತದೆ. ಅಯ್ಯೋ ನಾನು ಸಣ್ಣವನು, ಮಾವಿನ ಕಾಯೊಳು ಎಕ್ಕೆಯಕಾಯಿ ನಾನು, ಯಾಕೆ ಹಿಂಗೆ ಮಾಡ್ತಾ ರಲ್ಲಪ್ಪಾ ಅನಿಸಬಿಡ್ತದೆ.

ಸಂ: ನಿಮ್ಮ ಕವಿತೆಗಳಲ್ಲಿ ಸಾನೆಟ್ಟಿನದು ಒಂದು ಮುಖ್ಯ ಪ್ರಯೋಗ. ಅದರ ವಸ್ತು

ಸಾಮಾನ್ಯವಾಗಿ ಹಿರೀಕರನ್ನು ಕುರಿತದ್ದು. ಹಿರಿಯ ತಲೆಮಾರಿಗೆ ಕಿರಿಯ ತಲೆಮಾರಿನವರು ಆರಾಧನೆ ಮಾಡುವಂಥ ನಿಲುವು ನಿಮ್ಮಲ್ಲಿ ತುಂಬಾ ಆಳವಾಗಿದೆ. ಆ ಕಾರಣಕ್ಕಾಗಿಯೇ ಎರಡು ಕೊರತೆಗಳು ಕೂಡ ಕಂಡು ಬರ್ತವೆ. ಹಿರೀಕರನ್ನು ಪರಂಪರೆ ಅಥವಾ ಚರಿತ್ರೆಯ ಆವಾಹನೆ ಅನ್ನೋದಾದರೆ, ಅದರ ಜೊತೆಗೆ ನೀವು ವಿಮರ್ಶಾತ್ಮಕವಾಗಿ ಒಡ ನಾಡೋದಕ್ಕೆ ಅಷ್ಟು ಸಾಧ್ಯವಾಗಿಲ್ಲಿಲ್ಲವೇನೋ ಅಂತ ಅನ್ಸುತ್ತೆ. ಅಂದರೆ ಪರಂಪರೆ ಜತೆ ವರ್ತಮಾನದ ಜತೆ ವಿಮರ್ಶಾತ್ಮಕವಾದ ಗುದ್ದಾಟಗಳಿಗೆ ನಿಮ್ಮ ಈ ಮುಗುಮುಗ್ಧತೆಯೆ ಬಿಡಲಿಲ್ಲವಾ?

ಕಣವಿ: ಇಲ್ಲ, ಅದನ್ನ ಪೂರ್ಣ ನಾನು ಒಪ್ಪೋದಿಲ್ಲ. ವ್ಯಕ್ತಿಗಳ ಬಗ್ಗೆ ಬರೆದ ಬಹಳಷ್ಟು ಸುನೀತಗಳನ್ನು ನೋಡ್‌ದಾಗ, ಅವರ ವ್ಯಕ್ತಿತ್ವ ಕೊಡುಗೆ ಜೀವನ ಎಲ್ಲಾ ಕಣ್ಮುಂದೆ ತುಂಬಿ ಬರೋಹಂಗೆ ನಾಲ್ಕು ಸಾಲಲ್ಲಿ ಕೊಡೋದು. ಸಾನೆಟ್ ಬರೀವಾಗ ನಾನು ಬಹಳ ಕಷ್ಟಪಡ್ತೀನಿ. ನನ್ನ ಮನಸಿಗೆ ಸಂಪೂರ್ಣ ತೃಪ್ತಿಯಾಗೋ ಹಂಗೆ, ಯಾವುದೋ ಒಂದು ಶಬ್ದ ಕೂಡ ಸರಿಯಾದ ರೀತಿ ಬರಬೇಕು, ಅರ್ಥಪೂರ್ಣವಾಗಿರಬೇಕು, ಅನ್ನೋಹಂಗೆ ಬರೀಲಿಕ್ಕೆ ಪ್ರಯತ್ನಪಡ್ತೀನಿ. ಹಾಗೆ ಬರೀವಾಗ ನನಗೆ ಗೊತ್ತಿಲ್ಲದ ಹಾಗೇನೆ, ಜೀವನದಲ್ಲಿ ನಾನು ಯಾವ ಮೌಲ್ಯಗಳಿಗೆ ಮಹತ್ವ ಕೊಡ್ತೀನಿ, ಅ ಮೌಲ್ಯಗಳನ್ನ ಅಲ್ಲಿ ಗುರ್ತಿಸ್ತೀನಿ. ಅದಕಾಗಿ ನನಗೆ ಆ ವ್ಯಕ್ತಿ ಹೆಚ್ಚು ಮಹತ್ವದ್ದು ಅನಿಸ್ತದೆ. ಕರ್ಕಿಯವರ ಮೇಲೆ ಬರೆದಾಗ, ಬೇಂದ್ರೆಯವರ ಮೇಲೆ ಬರೆದಾಗ ಅಲ್ಲಿ ನಾನು ಮೆಚ್ಕೊಂಡ ಗುಣಗಳನ್ನ ಗುರ್ತಿಸ್ತೀನಿ. ಬೇಂದ್ರೆಯವರ ಬಗ್ಗೆ ಬರೀವಾಗ ಸೈತ ಅವರ ಮತ್ತೊಂದು ಸ್ವಭಾವ ತರ್ತೇನೆ. "ಹಣ್ಣಾದ ಕೇದಿಗೆಯ ಹೊಡೆ, ಚೂಪಾದ ಗರಿ, ಹುಷಾರಿ" ಅಂತನ್ನೊ ಮಾತು ಬರ್‍ತದೆ.

ಸಂ: ಹಂಗಲ್ಲ ಸಾರ್, ಅಡಿಗರು ಚರಿತ್ರೆ ವರ್ತಮಾನಗಳ ಜತೆ ಮಾಡೋ ಗುದ್ದಾಟ ನೋಡುವಾಗ, ನೀವು ಮಾಡೋ ಗುದ್ದಾಟದಲ್ಲಿ ಗುಣಗ್ರಾಹಿತನ ಹೆಚ್ಚು ಕೆಲಸ ಮಾಡ್ತದೆ. ಇದೇ ಒಂದು ಮಿತಿ ಕೂಡ ಆಗಿರಬಹುದು ಅಂತನ್ನೋದು ನನ್ನ ಅಭಿಪ್ರಾಯ. ಇನ್ನೊಂದು ಪ್ರಶ್ನೆ ಅಂದ್ರೆ, ನಿಮ್ಮಲ್ಲಿ ಸಾನೆಟ್ ಯಾಕೆ ವ್ಯಕ್ತಿಚಿತ್ರಕ್ಕೆ ಬಹಳ ಹೊಂದಿಕೊಳ್ಳೊ ಪ್ರಕಾರವಾಗಿದೆ..

ಕಣವಿ: ನಾನು ಬರೆದ ಸಾನೆಟ್‌ಗಳಲ್ಲಿ ಮೂರು ವಸ್ತುಗಳಿವೆ. ವ್ಯಕ್ತಿಚಿತ್ರಗಳು, ನಿಸರ್ಗ ಸ್ಪಂದನ, ಇನ್ನೊಂದು ಜಿಜ್ಞಾಸೆ. ಈಚೆಗಂತೂ ಹೆಚ್ಚಾಗಿ ಜಿಜ್ಞಾಸೆ ಬರ್‍ತಾ ಇದೆ. ಇದರ ಜತೆಗೇನೆ ಜಿ.ಎಸ್. ಶಿವರುದ್ರಪ್ಪನವರು ಅಂತ ಕಾಣತದೆ, "ಏನು ನೀವು ಸಾನೆಟ್ಟುಗಳ ಮೂಲಕ ಸಾಹಿತ್ಯ ಚರಿತ್ರೇನೆ ಕಟ್ಟಿಬಿಟ್ಟಿದ್ದೀರಾ" ಅಂತ ಹೇಳಿದರು. ನನಗೂ ಆಶ್ಚರ್ಯ ಅನಿಸಿತು. ಯಾಕಂದರೆ ನಾನು ಹಳಕಟ್ಟಿಯವರ ಬಗ್ಗೆ ಬರ್ದಿದೀನಿ, ಮುದ್ದಣ, ಆಲೂರು ವೆಂಕಟರಾಯರು, ಗೋಕಾಕರು, ಬೇಂದ್ರೆಯವರು. ಕರ್ಕಿಯವರು, ಈ ರೀತಿಯಾಗಿ.

ಸಂ: ಸಾನೆಟ್‌ಗಳ ಜತೆಗೇನೆ ನೀವು ಚೌಪದಿಗಳನ್ನು ಪ್ರಯೋಗಿಸಿದಿರಿ. ಅದರಲ್ಲೂ ಕಥನದಲ್ಲಿ. ಇದಕ್ಕೆ ನೀವು ಎಲ್ಲಿಂದ ಪ್ರೇರಣೆ ಪಡಕೊಂಡಿರಿ. ಇಂಗ್ಲಿಷ್ ಗೀತ ಗಳಿಂದ?

ಕಣವಿ: ಇಲ್ಲ, ಕನ್ನಡ ಛಂದಸ್ಸಿಗೆ ಚೌಪದಿ ಬಹಳ ಸ್ವಾಭಾವಿಕವಾದಂತಹ ರೀತಿಲಿ ಬರ್ತದೆ. ಅಮಾತ್ರ ಗಣ ಅಂತೂ ಅದರಿಂದ ಪಾರಾಗೋದಿಕ್ಕೇ ಅಗೋದಿಲ್ಲ. ಶ್ರೀ ಯವರ 'ಇಂಗ್ಲಿಷ್ ಗೀತೆಗಳು' ಕಾವ್ಯದ ಬಗ್ಗೆ ಆಸಕ್ತಿ ಮೂಡಿಸಲಿಕ್ಕೆ ಕಾರಣ ಆಯಿತು. ಆದರೆ ಅಷ್ಟು ಪ್ರಭಾವ ನನಗೆ ಆಗ್ಲಿಲ್ಲ. ನಿಜವಾಗಿಯೂ ಹೆಚ್ಚು ಪ್ರಭಾವಿಸಿದ್ದು ಶ್ರೀಯವರು ಸಂಪಾದನೆ ಮಾಡಿದ 'ಕನ್ನಡ ಬಾವುಟ'. ನಾನು ಹೈಸ್ಕೂಲ್‌ನಲ್ಲಿದ್ದಾಗ ನನಗದು ಬಹುಮಾನವಾಗಿ ಬಂತು. ನೋಡಿ, ನಮ್ಮ ಇಡೀ ಕನ್ನಡ ಕಾವ್ಯ ಪರಂಪರೆಯೆ, ಶಾಸನಗಳನ್ನು ಹಿಡಿದುಕೊಂಡು, ಹಿಂದಿನ ಕವಿಗಳ ಭಾಗಗಳನ್ನೊಳ ಗೊಂಡು ಹೊಸಗನ್ನಡದ ಕವಿತೆಯಲ್ಲಿ ಪ್ರಮುಖರಾದವರಲ್ಲಿ ಎಲ್ಲರದೂ ಇದೆ. ಕನ್ನಡ ಕಾವ್ಯದ ಬಗ್ಗೆ ಒಂದು ಇಡೀ ಕಲ್ಪನೆ ಕಣ್ಣೆದುರಿಗೆ ಬರ್ತದೆ. ಇದರಲ್ಲಿ ಹೊಸ ರೀತಿ ಇತ್ತು. ಆ ಹೊತ್ತಿಗೆ ಗೋವಿಂದ ಪೈ ಸಾನೆಟ್ ಬರೆದಿದ್ದರು. ಮಾಸ್ತಿ ಯವರ 'ಮಲಾರ' ಇತ್ತು. ಬೇಂದ್ರೆಯವರ 'ಉಯ್ಯಾಲೆ' ಬಂದಿತ್ತು. ಕುವೆಂಪು, ಗೋಕಾಕ್, ಪುತಿನ ಬರ್ದಿದ್ದರು. ಇಂಗ್ಲೀಷಿನಲ್ಲೂ ನಾನು ವರ್ಡ್ಸ್‌ವರ್ತನ ಸಾನೆಟ್ಟುಗಳನ್ನ ನೋಡಿದ್ದೆ. ಇದೆಲ್ಲಾ ನೋಡ್ಕ್ಯಾಂಡಾಗ ನನಗೆ ಕುವೆಂಪುರವರ 'ಕೃತ್ತಿಕೆ' ಬೇಂದ್ರೆಯವರ 'ಉಯ್ಯಾಲೆ' ಭಾಳ ಮನಸ್ಸಿಗೆ ಬಂದವು. 'ಕೃತ್ತಿಕೆ'ಯಲ್ಲಿ ಸಾನೆಟ್ಟಿನ ಕಟ್ಟುನಿಟ್ಟುಗಳು ಏನಿವೆಯಲ್ಲ, ಅವನ್ನೆಲ್ಲ ಕುವೆಂಪು ಬಹಳ ಪಾಲಿಸಿ ಕೊಂಡಿದಾರೆ. ಬೇಂದ್ರೆಯವರು ಸ್ವಾತಂತ್ರ್ಯವಹಿಸ್ತಾರೆ. ೮+೬ ಸಾಲುಗಳಿಟ್ಟು ಬೇಂದ್ರೆಯವರು ಅಷ್ಟಪಷ್ಟದಿ ಅಂದರು. ಮೊದಲಿನಿಂದಲೂ ನಾನು ಏನು ಪ್ರಯತ್ನ ಮಾಡ್ತಿದ್ದೆ ಅಂದ್ರೆ, ಈ ಭಾವಗೀತೆಗಳ ಭಾವೋದ್ವೇಗಕ್ಕೆ ಒಳಗಾಗ ಬಾರದು, ಕಂಟ್ರೋಲ್ ಮಾಡಬೇಕು ಅಂತ. ಯಾವಾಗ ಸಾನೆಟ್ ಬರೀಲಿಕ್ಕೆ ಪ್ರಾರಂಭ ಮಾಡಿದೆ, ಇದು ತಾನೇತಾನಾಗಿ ಕಂಟ್ರೋಲ್ ಮಾಡಲಿಕ್ಕೆ ಹತ್ತಿಬಿಟ್ಟಿತು. ಭಾವ ಮತ್ತು ಬುದ್ಧಿಯ ಒಂದು ಸಮನ್ವಯವಾಗಿ, ಹೇಳಬೇಕಾದ್ದನ್ನು ಸಂಕ್ಷಿಪ್ತವಾಗಿ ಸಾರವಾಗಿ ಸಮಗ್ರವಾಗಿ ಹೇಳಬೇಕು. ಈ ಕ್ರಾಫ್ಟ್‌ಮನ್‌ಶಿಪ್‌ಗೆ, ಕಾವ್ಯದ ಕಸಬುದಾರಿಕೆಗೆ, ಉಳಿದ ಯಾವುದೇ ಕವಿತೆಯ ಪ್ರಕಾರಕ್ಕಿಂತಲೂ ಸಾನೆಟ್‌ನಲ್ಲಿ ಹೆಚ್ಚು ಅವಕಾಶವಿದೆ.

ಸಂ: ಈ ಕಸುಬುದಾರಿಕೆಯ ಒತ್ತಡ ನವ್ಯರಿಂದ ಬಂತು?

ಕಣವಿ: ಇಲ್ಲ. ಸಾನೆಟ್ಟಂತೂ ನಾನು ಮೊದಲನೆ ಸಂಗ್ರಹದಿಂದಾನೇ ಶುರುಮಾಡಿದ್ದೆ. ಬಹುಶಃ ನವ್ಯದವರು ಏನು ಸಂಕ್ಷಿಪ್ತವಾಗಿ ಹೇಳಬೇಕು, ಭಟ್ಟಿ ಇಳಿಸಬೇಕು ಅನ್ನೋ ವಂಥ ಮಾತು ಬಳಸ್ತಿದ್ದರಲ್ಲಾ, ಅದು ನನಗೆ ಪೋಷಕವಾಗಿರಬೇಕು. ಅದು ಇನ್ನಷ್ಟು ರೂಪ ತೆಗೆದುಕೊಳ್ಳಲಿಕ್ಕೆ ಗಟ್ಟಿಯಾಗಲಿಕ್ಕೆ ಅದೂ ಅಂಶ ಕಾರಣವಾಗಿರಬೇಕು.

ಈಗಲೂ ಕೂಡ ನನಗೆ ಅದರ ಕಟ್ಟುನಿಟ್ಟು, ಪ್ರಾಸಗಳ ಬಂಧ ಅದನ್ನ ಮೀರಬೇಕು ಅಂತ ಅನಿಸೋದಿಲ್ಲ. ಸಾನೆಟ್ ಓದಿದಾಗ ಇವೆಲ್ಲ ಬಂಧನಾ ಅಂತನಿಸಿರಬಾರದು. ಸಹಜವಾಗಿ ಬಂದಿದೆ ಅಂತನಿಸಿರಬೇಕು.

ಸಂ: ನೀವು ನವೋದಯ ಪರಂಪರೆಯಲ್ಲಿ ಹುಟ್ಟಿ ಬೆಳೆದ ಕವಿ. ನಿಮಗೆ ನವ್ಯದ ಎರಡು ದಶಕಗಳು ಯಾವ ಬಗೆಯ ಒತ್ತಡ ತಂದವು? ಎಂಥ ಬದಲಾವಣೆಯನ್ನು ಉಂಟು ಮಾಡಿದವು. ಇದರ ಬಗ್ಗೆ ಕುತೂಹಲವಿದೆ.

ಕಣವಿ: ನಾನು ಬರೀತಿದ್ದಾಗಲೇ ಅಡಿಗರು ಪರಿಚಯವಾಗಿದ್ದರು, ಪತ್ರದ ಮೂಲಕ. ಆ ಹೊತ್ತಿಗೆ ಅಡಿಗರ 'ಭಾವತರಂಗ' ಬಂದಿತ್ತು. ಅವರಿಗೆ ನನ್ನ ಸಂಕಲನ 'ಭಾವಜೀವಿ' ಯನ್ನ ಕಳಿಸಿದ್ದೆ. ಅದಕ್ಕೆ ಅವರು ಮೆಚ್ಕೊಂಡು ಪತ್ರ ಬರೆದರು. ಆಗ ಕುಮಟಾ ಕಾಲೇಜಿನಲ್ಲಿ ಅವರು ಅಧ್ಯಾಪಕರಾಗಿದ್ದರು.

ಸಂ: ನನ್ನ ಪ್ರಶ್ನೆ ಉದ್ದೇಶ ಅಂದರೆ, ಅಡಿಗರು ರಮ್ಯಕಾವ್ಯ ಸಂಪ್ರದಾಯವನ್ನು ತೀವ್ರವಾಗಿ ವಿರೋಧಿಸ್ತಿದ್ದ ಕವಿ ಯಾಗಿದ್ದರು. ಅವರ ಜತೆ ನಿಮ್ಮ ಸಾಹಿತ್ಯಕ ಸಂಬಂಧ ಯಾವ ರೀತಿಯಲ್ಲಿ ಇತ್ತು?

ಕಣವಿ: ಅಡಿಗರು 'ಭಾವತರಂಗ' ಬರೆಯೋವಾಗ ನವ್ಯ ದವರೇನಾಗಿರಲಿಲ್ಲ. 'ನನ್ನ ನುಡಿಯೊಳೆ ಬಣ್ಣಿಸುವ ಪನ್ನತಿಕೆ ಬರುವ ತನಕ ನನ್ನ ಬಾಳಿದು ನರಕ, ಅಂತ ಹೇಳ್ಕೊಂಡಿದ್ದರಲ್ಲ. ಅಂದರೆ ನಮ್ಮ ಕಾವ್ಯದ ರೀತಿ ಬದಲಾಗಬೇಕು ಅನ್ನೋ ಅವರ ಈ ವಿಚಾರಧಾರೆಯನ್ನ ಫಾಲೋ ಮಾಡಿದೀನಿ ಅಷ್ಟೆ. ಅಷ್ಟರಾಗೆ ೧೯೫೦ರಲ್ಲಿ ಗೋಕಾಕರು ಕೊಲ್ಹಾಪುರದಿಂದ ಕರ್ನಾಟಕದ ಕಾಲೇಜಿಗೆ ಬಂದರು. ಆಗಾಗಲೇ ಗೋಕಾಕರು ಮುಂಬೈ ಸಾಹಿತ್ಯ ಸಮ್ಮೇಳನದೊಳಗೆ ಮೊಟ್ಟ ಮೊದಲಿಗೆ ನವ್ಯತೆ ಬಗ್ಗೆ ಮಾತನಾಡಿದ್ದರು, 'ಸಾಹಿತ್ಯದಲ್ಲಿ ನವ್ಯತೆ' ಅಂತ. ಆವಾಗೆಲ್ಲ ಹೊಸಹೊಸ ರೀತಿಯಲ್ಲಿ ಪ್ರಯೋಗಗಳು ನಡೀತಿದ್ದವು. ಮುಂದೆ ಈ ರೀತಿ ಹೊಸದಾಗಿ ಬರೀತಿರೋರದೆಲ್ಲ ಒಂದು ಸಂಗ್ರಹ ಮಾಡಬೇಕು ಅಂದಾಗ 'ಅಯಿತು' ಆಂದರು. ಹಾಗೆ ನೋಡಿದರೆ ಅಡಿಗರ 'ಭೂಮಿಗೀತ' ಪದ್ಯ ಮೊಟ್ಟ ಮೊದಲ ಬಂದಿದ್ದೆ ನಮ್ಮ 'ನವ್ಯಧ್ವನಿ' ಸಂಕಲನದಲ್ಲಿ. ಆದರೆ ಅಡಿಗರು ಯಾವುದನ್ನು ನವ್ಯ ಅಂತ ಅಂತಿದ್ದರೋ ಅದಕ್ಕೆ ಗೋಕಾರದು ಸ್ವಲ್ಪ ಭಿನ್ನವಾಗಿರುತ್ತಿತ್ತು. ಅದಕ್ಕಾಗಿ ಸಾಮಾನ್ಯವಾಗಿ ಯಾರ‍್ಯಾರು ಬೇರೆ ರೀತಿಯಿಂದ ಬರೀತಿದಾರೆ ಅಂತ ಗುರುತಿಸಿ ಕೊಂಡು 'ನವ್ಯಧ್ವನಿ' ಅಂತ ಒಂದು ಕವನ ಸಂಕಲನವನ್ನ ಮಾಡಿದಿವಿ. ಅದಕ್ಕೆ ಪ್ರಸ್ತಾವನೆ ಗೋಕಾಕರವರದು. ಆಮೇಲೆ ಅಡಿಗರು ನನಗೊಂದು ಪತ್ರ ಬರೆದರು. 'ಇಲ್ಲ ನೀನು ಕೇಳಿದೆ ಅಂತ ಕವಿತೆ ಕೊಟ್ಟೆ. ಆಯಿತು, ಆದರೆ ಈ ಸಂಕಲನ ನನಗೆ ಒಪ್ಪಿಗೆ ಇಲ್ಲ' ಅನ್ನೋ ಮಾತನ್ನ ಅದರಾಗೆ ತಿಳಿಸಿದರು. ಆಮೇಲೆ ತಮ್ಮ ನವ್ಯತೆಯ ರೀತಿ ಯಾವುದು ಅಂತ ಲೇಖನಾನೂ ಬರೆದರು. ಆ ರೀತಿಯಲ್ಲಿ ಅವರದ್ದೊಂದು

ಗ್ರೂಪ್ ಆಯಿತು. ಆದರೆ ಯಾವ ಕವಿಗಳ ಬಗ್ಗೆ ಅವರ, ಕಾವ್ಯದ ಬಗ್ಗೆ ನಮಗೆ ಗೌರವ ಇತ್ತೋ, ಕುವೆಂಪುರವರ ಬಗ್ಗೆ ಆಗಲೀ, ಬೆಂದ್ರೆಯವರ ಬಗ್ಗೆ ಆಗಲೀ, ಅಡಿಗರು ಬೇರೆ ರೀತಿ ಮಾತಾಡ್ತಾ ಇದ್ದರು. ಇದು ನಮ್ಮ ಮನಸಿಗೆ ಸ್ವಲ್ಪ ಕಿರಿಕಿರಿಯಾಗತ್ತಿತ್ತು. 'ನನ್ನ ಕಾವ್ಯ ಈ ರೀತಿ ಇರ್ತದೆ' ಅಂತ ಹೇಳೋದು ಬೇರೆ. ನವೋದಯ ಕಾವ್ಯ ಅಂತ ಬಂದಾಗಲೂ ಕೂಡ, ನಮ್ಮ ಹಿಂದಿನ ಕಾವ್ಯಕ್ಕೆ ಪ್ರತಿಭಟನೆ ಅಂತ ಮಾಡಿದ್ದಲ್ಲ. ನವೋದಯ ಕವಿಗಳೂ ಒಂದು ಕೈಯಲ್ಲಿ ಧ್ವಜ ಹಿಡಕೊಂಡೇ ಹೊರಟವರು. ಅವರು ಕೈಯಲ್ಲಿ ಹಿಡಿದ ಧ್ವಜ ಯಾವುದೂ ಅಂದರೆ 'ಕನ್ನಡದ ಬಾವುಟ'. ಇವರಿಗೆಲ್ಲ ಕನ್ನಡ ಬೆಳಸಬೇಕು ಅಂತನ್ನೋದು ಇತ್ತೇ ಹೊರತು ಒಮ್ಮೇಲೆ ಹಿಂದಿನ ಕಾವ್ಯ ವಿರೋಧಿಸಿ ಮಾಡಬೇಕು ಅಂತಿರಲಿಲ್ಲ.

ಸಂ: ಅಡಿಗರು ೬೦ರ ದಶಕದಲ್ಲಿ ನವೋದಯದ ಮೇಲೇ ಬಂಡಾಯ ಎದ್ದಾಗ, ಆ ಕಾವ್ಯ ಸಂಪ್ರದಾಯವು ಬೇಕಾದಷ್ಟು ಕ್ರೈಸಿಸ್‌ಗೆ ಒಳಗಾಗಿತ್ತಲ್ವ?

ಕಣವಿ: ಇತ್ತು, ಅದು ಸತ್ವ ತೀರತಾ ಬಂದಿತ್ತು. ಅನುಕರಣೆ ಭಾಳ ಬೆಳೀತಾ ಇತ್ತು. ಎಲ್ಲ ನಿಜಾನೆ. ಆದರೆ ಅವರು ಒಮ್ಮೆಲೆ 'ಹಿಮಗಿರಿಯ ಕಂದರ' ಬರೆದರು. ಅಡಿಗರ 'ಚಂಡಮದ್ದಳೆ' ಪ್ರಕಟವಾಗಿತ್ತು. ವಿಸೀಯವರ ಅಧ್ಯಕ್ಷತೆಯಲ್ಲಿ ಕುಮಟಾದಲ್ಲಿ ಸಾಹಿತ್ಯ ಸಮ್ಮೇಳನ ಆದಾಗ, ಬೇಂದ್ರೆಯವರ ಕವಿಗೋಷ್ಠಿಯ ಅಧ್ಯಕ್ಷ ಭಾಷಣದಲ್ಲಿ ಸ್ವಲ್ಪ ತಿಕ್ಕಾಟ ಆಯಿತು. ನನಗಿನ್ನೂ ನೆನನಪಿದೆ. ಅಂದರೆ 'ತಾನು ಹರೆಯಕ್ಕೆ ಬಂದಿದೀನಿ ಅಂತ ತಿಳ್ಕೋಬೇಕಾರೆ, ಹಗಲೆಲ್ಲ ಮೀಸಿ ತಿಕ್ಕೊಂಡು ತಿಕ್ಕೊಂಡು ನೋಡಬೇಕಾಗಿಲ್ಲ' ಅಂತ ಬೇಂದ್ರೆ ಕಾಮೆಂಟ್ ಮಾಡಿದರು. ಆದರೂ ಅಡಿಗರ ಆಡುಮಾತಿನ ಲಯ ನನಗೆ ಸೇರ್ತಿತ್ತು. ಯಾಕೆಂದರೆ ನಾವು ಆಗಲೇ ಅದನ್ನ ಉಪಯೋಗ ಮಾಡ್ತಿದ್ದೆವು. ಅಂದರೆ ಒಂದು ದೃಷ್ಟಿಯಿಂದ ಅಡಿಗರು ನನ್ನ ಕವಿತೆಗಳ ಮೇಲೆ ಕಾಮೆಂಟ್ ಮಾಡ್ತಾ ಇದ್ದರು. ಮಾಸ್ತಿಯವರ 'ಜೀವನ'ದಲ್ಲಿ ನನ್ನ ಪದ್ಯಗಳು ಬರ್‍ತಿದ್ದವು. 'ಪ್ರಾರ್ಥನೆ' ಅಂತ ಪದ್ಯ ಬಂದ ಮೇಲೆ ಅಡಿಗರು ನನಗೆ ಒಂದು ಪತ್ರ ಬರೆದರು "ನಿಮ್ಮ ಹೊಸ ಕವಿತೆಗಳನ್ನ ನೋಡ್ತಾ ಇದೀನಿ. ಆದರೆ ಈಗ 'ಜೀವನ'ದಲ್ಲಿ ನೋಡಿದ ಮೇಲೆ ಬಹಳ ನಿರಾಸೆಯಾಯಿತು" ಅಂತ.

ಸಂ: ಅಡಿಗರ ಈ ಬಗೆಯ ನೇರನುಡಿ, ಕಾಮೆಂಟ್ ಮಾಡುವ ಗುಣ, ಸಾಹಿತ್ಯಕ ಪರಿಸರದಲ್ಲಿ ಒಂದು ಬಗೆಯ ಕ್ರಿಟಿಕಲ್ ಆಟಿಟ್ಯೂಡ್ ಬೆಳೆಯಲು, ಹೊಸ ಕವಿಗಳಿಗೆ ಬೇಕಾದ ಉದ್ದೀಪನೆ ಮಾಡುವುದಕ್ಕೆ ಕಾರಣವಾಗ್ತಿತ್ತಲ್ಲಾ?

ಕಣವಿ: ಅಲ್ಲಾ, ಅದು ಉದ್ದೀಪನಕ್ಕಿಂತ ಬೇರೆ ಒಂದು ರೀತಿಯ ಬೆಳವಣಿಗೆಗೆ ಕಾರಣವಾಯಿತು ಅಂತ ಅನ್ಸುತ್ತೆ. ಉದ್ದೀಪನೆಗಿಂತ ಡಿಸ್ಟರ್ಬ್ ಮಾಡ್ತಿತ್ತು. ಯಾವುದೋ ಒಂದು ಸಂದರ್ಶದಲ್ಲಿ ಓದಿದ್ದೆ. ಅದು 'ಪ್ರಜಾವಾಣಿ'ಯಲ್ಲಿ ಬಂದಿತ್ತು. "ಕುವೆಂಪು ರವರು ಕವೀನೇ ಅಲ್ಲ" ಅಂತನ್ನೊ ಮಾತನ್ನ ಅಡಿಗರು ಅಡ್ಯಾರ. ದಾಖಲೆ ಆಗಿರಬೇಕು

ಅದು. ಒಮ್ಮೆಲೆ ನಮಗೆ ಶಾಕ್ ಆಯಿತು. ಆಮೇಲೆ ಗೋಕಾಕ್‌ರವರ ಬಗ್ಗೆ ಹೇಳ್ತಿರುವಾಗ "ಗೋಕಾಕರದು ನವ್ಯ ಕಾವ್ಯವಾದರೆ ನಂದಲ್ಲ. ನನ್ನದು ನವ್ಯಕಾವ್ಯ ಅಂತನ್ನೋದಾದರೆ ಗೋಕಾಕರದಲ್ಲ". ಈ ರೀತಿ ಕೆಲವು ಸ್ಟೇಟ್‌ಮೆಂಟ್ಸ್ ನಮಗೆ ಇಷ್ಟವಾಗಲಿಲ್ಲ. ಆದರೆ ಅಡಿಗರು ನಿಜವಾದ ನವ್ಯಕವಿ. ಅದನ್ನ ನಾನು ಒಪ್ಕೋತೀನಿ.

ಸಂ: ಪರಂಪರೆಯ ಜೊತೆಗೆ ಗುದ್ದಾಟ ಮಾಡುವ ಕವಿಗಳಲ್ಲಿ ಅಡಿಗರು ಒಂದು ತುದಿಯಾದರೆ, ಪರಂಪರೆಯಿಂದ ಶಕ್ತಿ ಚೈತನ್ಯ ಪಡೆಯುವಲ್ಲಿ ಬಹಳ ವಿನಯ ತೋರಿಸುವ ನೀವು ಇನ್ನೊಂದು ತುದಿ.

ಕಣವಿ: ಆದರೆ ಪರಂಪರೆಯನ್ನು ಅಡಿಗರು ಬಿಟ್ಟಿದ್ದರು ಅಂತ ಅನಿಸ್ತಿರಲಿಲ್ಲ. ಪರಂಪರೆಯ ಸಾರವನ್ನು ಅವರು ಚೆನ್ನಾಗಿ ಗ್ರಹಿಸಿದ್ದರು. ಅದನ್ನ ಹೀರಿಕೊಂಡೆ ಅವರು ಬೆಳೆದವರು. ಇಲ್ಲದಿದ್ದರೆ ಆ ರೀತಿಯಾಗಿ ಶಕ್ತಿ ಬರ್ತಿರ್ಲಿಲ್ಲ. ಧೋರಣೆ ರೀತಿ ಮಾತ್ರ ಬದಲಾಯಿತು. ಆದರೆ ಹಿರಿಯ ಲೇಖಕರ ಬಗ್ಗೆ ಅವರ ಟೀಕೆ ಪರ್ಸನಲ್ ಆಗಿರ್ತಿತ್ತು. ಆಮೇಲೆ ಸ್ವಲ್ಪ ಮೆಲು ಆದರು. ಅವರಿಗೂ ಅನಿಸಿರಬೇಕು. ನಾನು ಹಂಗ ಅನ್ನಬಾರದಾಗಿತ್ತು ಅಂತ. ಇದನ್ನ ಅವರು ಎಕ್ಸ್‌ಪ್ರೆಸ್ ಮಾಡಿದರು ಅಂತ ಕಾಣ್ಸುತ್ತೆ.

ಸಂ: ಸಾರ್, ನೀವು ನವ್ಯದಿಂದ ಬಹಳ ಕಲಿತೆ ಅಂತಂದಿರಿ. ಆದರೆ ನಿಮಗೆ 'ಸಮನ್ವಯ' ಕವಿ ಅಂತಂದರೆ ಬೇಸರ ಆಗ್ತದೆ?

ಕಣವಿ: 'ಸಮನ್ವಯ ಕವಿ' ಅನ್ನೊ ಶಬ್ದದ ಬಗ್ಗೆ ಅಲ್ಲ. ಆದರೆ ಅದರ ಹಿಂದಿನ ಧೋರಣೆಯ ಬಗ್ಗೆ. ನವ್ಯಕವಿಗಳು ಈ ಒಂದು ಬ್ರಾಂಡ್ ಮಾಡುವಾಗ ಆ ಮಾತಿನ ಹಿಂದೆ ಅವರ ಐಡಿಯಾ ಏನಿತ್ತು, ಅದು ಅಷ್ಟು ಸಮಂಜಸವಾದದ್ದಲ್ಲ. ಈಗ ಸಮನ್ವಯ ಮಾಡಿಕೊಳ್ಳದಿದ್ದರೆ ಕಾವ್ಯಾನೇ ಹೇಗಾಗುತ್ತೆ? ಈಗ ಪಂಪನ ಹಿಡಕೊಂಡು ಮಾರ್ಗ ದೇಶಿ ಸಮನ್ವಯ ಅಂತೀವಿ. ಪೂರ್ವ-ಪಶ್ಚಿಮದ ಸಮನ್ವಯ ಅಂತೀವಿ. ಬುದ್ಧಿ-ಭಾವದ ಸಮನ್ವಯ ಅಂತೀವಿ. ಇಡೀ ನಮ್ಮ ಕಾವ್ಯ ಪರಂಪರೆಯೇ ಆ ರೀತಿಯಾಗಿ ಬಂದದ್ದಲ್ಲವಾ? ಆದರೆ ನವ್ಯರು 'ಸಮನ್ವಯ' ಅನ್ನುವ ಹೊತ್ತಿನಲ್ಲಿ 'ಹೆಚ್ಚು ಗಣಿಸಬೇಕಾದಂಥ ಕವಿಗಳಲ್ಲ' ಅನ್ನೋ ಅರ್ಥ ಇತ್ತು. ಆದರೆ ಇವರನ್ನ ಬಿಟ್ಟು ಬಿಡ್ಲಿಕ್ಕೂ ಆಗೋಲ್ಲ. "ನರಸಿಂಹಸ್ವಾಮಿ, ಕಣವಿ, ಶಿವರುದ್ರಪ್ಪ ಮುಂತಾದ ಸಮನ್ವಯ ಕವಿಗಳು ಇದ್ದರು" ಅಂತ ಎರಡು ವಾಕ್ಯದಲ್ಲಿ ಮುಗಿಸಿಬಿಟ್ಟು, ಅವರ ವಿಮರ್ಶೆ ಬೇರೆಕಡೆ ಹೊರಳಿ ಬಿಡ್ತಿತ್ತು.

ಸಂ: ಸೃಜನಶೀಲ ಪ್ರಕ್ರಿಯೆಯಲ್ಲಿ ಈ ಸಮನ್ವಯ ಅನ್ನೋದು ಬಹಳ ಅರ್ಥಪೂರ್ಣ ಕ್ರಿಯೆ ಅಂತ ನೀವು ಪರಿಭಾವಿಸ್ತೀರಾ?

ಕಣವಿ: ಹೌದು, ಈಗ ನಿಮಗೆ ನಿಮ್ಮದೇ ಆದಂಥ ವೈಶಿಷ್ಟ್ಯ ಇರ್ತದೆ. ನನಗೆ ನನ್ನದೇ ಆದಂತಹ ಕಾವ್ಯದ ಸ್ವಂತಿಕೆ ಇರ್ತದೆ. ನಾನು ಬರವಣಿಗೆ ಮಾಡಬೇಕಾದರ ಇವಕ್ಕ ಪೋಷಕವಾಗುವಂಥ ಅಂಶಗಳನ್ನ, ಅವು ಎಲ್ಲಿಂದಲೇ ಇರ್ಲಿ, ಹೀರಿಕೊಂಡು ಬೆಳೀ

ಬೇಕು. ಈಗ ಅವರಿಗೆ ಎಲಿಯಟ್ ಇರಲಿಲ್ಲವೋ ಆ ರೀತಿಯಾಗಿ? ಪಂಪನಿಂದ ಬೇಂದ್ರೆಯವರಿಗೂ ಈ ಸಮನ್ವಯ ಕೆಲಸ ಮಾಡಿದೆ. ಈಗ ಬೇಂದ್ರೆಯವರನ್ನ ಒಬ್ಬರನ್ನೇ ಓದಿದರೆ, ನಮ್ಮ ಇಡೀ ಕಾವ್ಯದ ಪರಂಪರೆಯನ್ನು ನೋಡ್ತೀವಿ. ಪಂಪ ಕಾಣಿಸ್ತಾನ, ಕುಮಾರವ್ಯಾಸ ಕಾಣಿಸ್ತಾನ, ದಾಸರದಾರ, ವಚನಕಾರರಿದ್ದಾರ, ಅಲ್ಲಮ ಇದ್ದಾನ, ನಿಜಗುಣರು ಇದ್ದಾರ. ಎಲ್ಲ ಅಲ್ಲಿ ಇದ್ದಾರ. ಈ ಸಾವಿರಾರು ವರ್ಷದಿಂದ ಕನ್ನಡ ಕಾವ್ಯ ಭಾಷೆಗೆ ಈ ಶಕ್ತಿ ತೇಜಸ್ಸು ಸತ್ವ ತಂದುಕೊಟ್ಟವರೇ ಅವರಲ್ಲ? ಮತ್ತೆ ಆ ಪರಂಪರೆಯನ್ನು ನಾವು ತಿಳಿದುಕೊಳ್ಳದೇ ಇದ್ದರೆ ಹೆಂಗೆ ಬೆಳವಣಿಗೆ ಸಾಧ್ಯವಾಗ್ತದೆ? ಇವತ್ತಿನ ಸಮಕಾಲೀನತೆ ಅನ್ನೋವಂಥ ಅಂಶ ಇದ್ದರೂ ಕೂಡಾ, ನಮ್ಮ ಹಿಂದಿನ ಕವಿಗಳನ್ನೂ ನಾವು ಸಮಕಾಲೀನಗೊಳಿಸತಾನೇ ಹೋಗ ಬೇಕಾಗ್ತದೆ. ಪಂಪನನ್ನೂ ನಾವು ಇವತ್ತಿನ ಸಮಕಾಲೀನ ಕವಿಯನ್ನಾಗಿ ನೋಡ್ತಾ ಹೋಗ್ತಿದೀವಿ. ವಚನಕಾರರು ನಮಗಿಂತಲೂ ಎಷ್ಟೋ ಸಲ ಸಮಕಾಲೀನರಾಗಿ ಕಾಣ್ತಾರೆ.

ಸಂ: ಪರಂಪರೆ ಜೊತೆಗೆ ಅರ್ಥಪೂರ್ಣವಾದ ಗುದ್ದಾಟ ಮತ್ತು ಸ್ವೀಕಾರವನ್ನ ಸಮನ್ವಯ ಅನ್ನೋದಾದರೆ ಅದು ಕ್ರಿಯೆಟಿವ್ ಪ್ರಾಸೆಸ್‌ಗೆ ...

ಕಣವಿ: ಬಹಳ ಅಗತ್ಯ. ಆದರೆ ನವ್ಯರು ಈ ಪದವನ್ನ ನಮ್ಮನ್ನ ಒಂದು ಕಡೆ ಸರಿಸಿಡಲಿಕ್ಕೆ ಬಳಸಿದರು.

ಸಂ: ನಮ್ಮ ಹಿರಿಯ ಲೇಖಕರಲ್ಲಿ ಮಾಸ್ತಿ, ಕುವೆಂಪು, ಬೇಂದ್ರೆಯವರು ನಿಮಗೆ ಸವಾಲಾಗಿ ಪ್ರೇರಕರಾಗಿ ಪ್ರಭಾವಗಾರರಾಗಿ ಅಥವಾ ಪ್ರಭಾವ ತಪ್ಪಿಸಿಕೊಳ್ಳೋದಿಕ್ಕೆ ಕಾರಣ ರಾಗಿ, ಬೇರೆಬೇರೆ ಬಗೆಯಲ್ಲಿ ಮುಖ್ಯವಾಗಿದಾರೆ. ಆದರೆ ಕಾರಂತರ ಬಗ್ಗೆ ಎಲ್ಲೂ ಹೇಳಲೆ ಇಲ್ಲ. ಕಾರಂತರ ಮೇಲಿನ ನಿಮ್ಮ ರೀಡಿಂಗ್ ತಿಳಿಯೋ ಕುತೂಹಲವಿದೆ. ಕಾರಂತರು ನಮ್ಮ ಈ ಪರಂಪರೆ ಅನ್ನೋದರ ಜೊತೆಗೆ ಬಹಳ ಭಿನ್ನವಾದ ಗುದ್ದಾಟ ಮಾಡಿದೋರು. ಅವರ ನಾಸ್ತಿಕವಾದಿ ವೈಚಾರಿಕತೆ, ಆಮೇಲೆ ವೈಯಕ್ತಿಕವಾಗಿ ಸಂವಾದ ಮಾಡೋಕೆ ಆಗೋಲ್ಲ ಅನ್ನೋ ಅವರ ಸಿಡುಕುತನ ಎಲ್ಲ ನಿಮಗೆ ವಿಪರೀತ ಅನ್ನೋ ಸ್ವಭಾವ.

ಕಣವಿ: ಇಲ್ಲಿಲ್ಲ. ಆ ಮನುಷ್ಯನಲ್ಲಿ ಒಂದು ರೀತಿಯ ಪ್ರೀತಿಯಿತ್ತು. ನಿಮ್ಮೆದುರಿಗೆ ನಿಷ್ಠುರವಾಗಿ ಏನೋ ಮಾತಾಡಿಬಿಡಬಹುದು. ಆದರೆ ಒಳಗೆ ಕರುಳಿನ ಗುಣ ಭಾಳ ಇತ್ತು. ಅವರಿಗೆ ಪಂಪ ಪ್ರಶಸ್ತಿ ಬಂತಲ್ಲ, ಇನ್‌ಫ್ಯಾಕ್ಟ್ ಆ ವರ್ಷದ ಆಯ್ಕೆ ಸಮಿತಿಯಲ್ಲಿ ನಾನೂ ಇದ್ದೆ. ಅವರ 'ಮೈಮನಗಳ ಸುಳಿಯಲ್ಲಿ' ಕಾದಂಬರಿಗೆ ಪ್ರಶಸ್ತಿ ಬಂದಾಗ, ಅವರು ಎಲ್ಲೋ ಒಂದು ಸಭೆಯಲ್ಲಿ ಹೇಳಿದರಂತೆ. 'ನಾನು ಪಂಪನ್ನೇ ಓದಿಲ್ಲ. ನನಗೆ ಪಂಪ ಪ್ರಶಸ್ತಿ ಬಂದಿದೆ' ಅಂತ. ಕಾರಂತರು ಹಿಂಗೆ ಅಂದರಲ್ಲ ಅಂತ ಯೋಚಿಸಿದೆ. ಅವರು ಪಂಪನನ್ನು ಓದಿಲ್ಲದೆ ಇದ್ದರೂ ಕೂಡ

ಪಂಪನ ಪ್ರಭಾವ ಅವರ ಮೇಲೆ ಇದೆ ಅಂತ ನಾನು ಹೇಳಿದೆ. ಪಂಪನಂಥ ಕವಿಗಳು ಏನು ಇದಾರಲ್ಲ, ಅವರನ್ನು ಓದಿಯೇ ನಮ್ಮ ಪ್ರಭಾವ ಆಗಬೇಕಾಗಿಲ್ಲ. ಒಬ್ಬ ದೊಡ್ಡ ವ್ಯಕ್ತಿಯ ವಿಚಾರಗಳು ಅವರ ಕಾವ್ಯಗಳು ಸ್ವತಃ ಓದದೇ ಇದ್ದರೂ, ಉಳಿದವರನ್ನ ಓದುವಾಗವಾಗಲೀ ಮಾತಾಡುವಾಗ ಆಗಲೀ ನಮ್ಮ ಕಿವಿ ಮೇಲೆ ಬೀಳ್ತಿರ್ತವೆ. ಈಗನೂ ಕೂಡಾ ವೈಜ್ಞಾನಿಕವಾಗಿ ನೋಡಿದಾಗ ಒಂದು ಸಭೆಯಲ್ಲಿ ಮಾತನಾಡಿದೀವಿ ಅಂದರೆ, ನಮ್ಮ ಮಾತುಗಳು, ವಿಚಾರ ತರಂಗಗಳು ಅವು ಸಭಿಕರಿಗಷ್ಟೇ ಅಲ್ಲ, ಇನ್ನೂ ದೂರ ಹೋಗ್ತವೆ. ಹಾಗಿದ್ದಾಗ ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಅನ್ನೋ ಮಾತು ಕಾರಂತರ ಜೀವನದೃಷ್ಟಿಗೆ ಒಪ್ತದೆಯೋ ಇಲ್ಲವೋ?

ಸಂ: ಕನ್ನಡದಲ್ಲಿ ಈಗ ಬರೀತಿರೊ ಅನೇಕ ಕವಿಗಳಲ್ಲಿ ಒಂದು ಬಗೆಯ ಚಡಪಡಿಕೆ ಕಾಣ್ತದೆ. ಕಾವ್ಯಕ್ಕೆ ಓದುಗರಿಲ್ಲ, ಓದುಗರ ಬರ ಇದೆ ಅಂತನ್ನೋ ಆತಂಕ ಕೇಳ್ತಾ ಇದೆ. ಈ ಬಿಕ್ಕಟ್ಟು ನಿಜವಾ? ನಿಜವೇ ಆಗಿದ್ದರೆ ಇದಕ್ಕೆ ಏನು ಕಾರಣ?

ಕಣವಿ: ಕವಿತೆಗೆ ಓದುಗರು ಈಗೇ ಇಲ್ಲ ಅಂತಲ್ಲ, ಮೊದಲಿನಿಂದಲೂ ಅಷ್ಟೆ. ಮೊದಲಿಗೆ ಓದುಗರು ಅನ್ನೋದಕ್ಕಿಂತ ಕೇಳುಗರು ಇದ್ದರು. ಗಮಕದಲ್ಲಿ ಕೂತುಕೊಂಡು ಕೇಳ್ತಾ ಇದ್ದರು. ಈ ಓದೋದು ಅನ್ನುವಂತಹದ್ದಾದ್ದು ಇದೆಯಲ್ಲ, ತಮಗೆ ಮೆಚ್ಚಿದ ಕವಿಗಳನ್ನು ಓದುವಂಥವರು ಇದ್ದೇ ಇರ್ತಾರೆ. ಅದರ ಬಗ್ಗೆ ಪ್ರೀತಿ ಇರ್ತದೆ. ಉಳಿದ ಯಾವ ಸಾಹಿತ್ಯ ಪ್ರಕಾರದಲ್ಲಿಯೂ ದೊರೆಯದೇ ಇರತಕ್ಕಂಥ ಯಾವುದೋ ಒಂದು ವಿಶೇಷ ಗುಣ ಕವಿತೆಯಲ್ಲಿ ಕಾಣಿಸ್ತದೆ. ಅವರು ಇಡೀ ಬೇಂದ್ರೇನ ಓದ್ದೇ ಇರ ಬಹುದು. ಯಾವುದೋ ಒಂದೆರಡು ಭಾವಗೀತೇನ ಕೇಳೀನೆ, ಅದರ ಸತ್ವ, ಮೇಲ್ಮೆ ವಿಶೇಷವಾದಂತಹ ಗುಣವನ್ನು ಮೆಚ್ಕೊಂಡಿರ್ತಾರೆ. ಈಗಂತೂ ವೇಗದ ಯುಗ. ಕೂತ್ಕೊಂಡು ಅಭ್ಯಾಸ ಮಾಡೋವಂಥ ರೀತಿ ಬಹಳ ಕಡಿಮೆ. ವಿದ್ಯಾರ್ಥಿಗಳಲ್ಲೇ ಕಡಿಮೆಯಾಗಿದೆ. ಬರಹಗಾರರಲ್ಲೂ ಕಡಿಮೆ ಆಗಿದೆ. ಈಗ ಉದಯೋನ್ಮುಖ ಕವಿಗಳು ಅಂತ ತೆಗೆದುಕೊಂಡಾಗ, ಅನೇಕ ಜನ ಕವಿತೆ ತೋರಿಸಲಿಕ್ಕೆ ಬರ್ತಿರ್ತಾರ. ಮುನ್ನುಡಿ ಬರೀರಿ ಅಂತ ಬರ್ತಾರ. ಅವರಲ್ಲಿ ಕಂಡುಕೊಂಡ ಒಂದು ಸಂಗತಿ ಅಂದರೆ, ಅಭ್ಯಾಸದ ಪ್ರವೃತ್ತೀನೇ ಇಲ್ಲ. ನಾವೇನ್ಮಾಡ್ತಾ ಇದ್ದಿವಿ, ಬೇಂದ್ರೆಯವರ ಅಥವಾ ಕುವೆಂಪು ಅವರ ಪುಸ್ತಕಗಳನ್ನ ಓದ್ತಿದ್ದಿವಿ. ಮೇಲೆ ಮೇಲೆ ಓದೋದು. ಈಗ ಇಲ್ಲವೇ ಇಲ್ಲ. ಬೇಂದ್ರೆನಾ ಓದಿದಿರಾ ಅಥವಾ ಯಾವುದಾದರೂ ಒಳ್ಳೇ ಪುಸ್ತಕಾನ ಓದಿದೀರಾ ಕೇಳಿದರೆ, ಪುಸ್ತಕ ಓದಿರೋದಿಲ್ಲ. ಯಾವುದೋ ಪತ್ರಿಕೆಯಲ್ಲಿ ಬಂದ ಕವಿತೆ ಓದಿದೀವಿ ಅಂತಾರೆ. ಬೇಂದ್ರೆಯವರ 'ಗರಿ' ಕುವೆಂಪುರವರ 'ನವಿಲು' ಹೀಗೆ ಒಬ್ಬೊಬ್ಬ ಕವಿಯ ಒಂದೊಂದು ಸಂಕಲನವನ್ನೆ ಸರಿಯಾಗಿ ಓದಿದರೂ ಸಾಕು, ಆ ಕವಿಯ ಭಾಷೆ, ಲಯ, ಅವನ ಆಶಯ, ಆ ಧಾಟಿ ಧೋರಣೆ ಇವೆಲ್ಲವನ್ನ ಗಮನದಲ್ಲಿ ಇಟ್ಟುಕೊಂಡು ಅಭ್ಯಾಸ ಮಾಡುವ ಪ್ರವೃತ್ತಿ ಇಲ್ಲವೇ ಇಲ್ಲ.

ಸಂ: ಈಗ ಬರೀತಿರೋರಲ್ಲಿ ನಿಮಗೆ ಯಾರು ಪ್ರಾಮಿಸಿಂಗ್ ಕವಿ ಅಂತ ಅನಿಸ್ತದೆ.

ಕಣವಿ: ಅಲ್ಲಲ್ಲಿ ಇದ್ದಾರೆ. ಕೆಲವರಾಗಲೇ ಹಿರಿಯ ಕವಿಗಳ ಲೈನಲ್ಲೇ ಬರ್‍ತಾರೆ. ಎಚ್ ಎಸ್ ಶಿವಪ್ರಕಾಶ್ ಇದ್ದಾರೆ. ಎಸ್ ಜಿ ಸಿದ್ಧರಾಮಯ್ಯ ಇದ್ದಾರೆ. ಆನಂದ ಝುಂಜರವಾಡ ಇದ್ದಾರೆ. ಎಸ್. ಮಂಜುನಾಥ, ಲಕ್ಷ್ಮೀಪತಿ ಕೋಲಾರ ಇದ್ದಾರೆ. ನಿರಾಸೆ ಆಗುವಂಥ ಸ್ಥಿತಿ ಇಲ್ಲ. ಆದರೆ ಅದಕ್ಕೊಂದು ಪ್ರವಾಹದ ಗತಿ 'ಸಮಷ್ಟಿಯ ಗತಿ' ಇಲ್ಲ. ನವೋದಯ ಕಾವ್ಯ, ನವ್ಯಕಾವ್ಯ ಅಂದರೆ ಹೆಂಗೆ ಒಂದು ಪ್ರವಾಹದ ಗತಿ ಕಾಣ್ತೀವಲ್ಲ, ಹಂಗೆ ಈಗ ಎಲ್ಲ ಕೂಡಿಸಿ ಯಾವುದನ್ನ ಗುರುತಿಸಲಿಕ್ಕೆ ಆಗ್ತಾ ಇಲ್ಲ. ಆದರೆ ಎಲ್ಲೆಲ್ಲಿ ಈ ಹೊಸತನ ಕಂಡುಬರ್‍ತಾ ಇದೆ, ಅದನ್ನ ಅವಶ್ಯಕವಾಗಿ ಗುರುತಿಸಬೇಕು. ನಿಜವಾಗಿಯೂ ಒಳ್ಳೇ ಕವಿಗಳು ಬರೀತಾ ಇದಾರೆ. ಆದರೆ ಯಾಕೋ ವಿಮರ್ಶಕರ ಲಕ್ಷ್ಯ ಇನ್ನೂ ಹೊರಳಿಲ್ಲ. ಈಗ ಶತಮಾನ ಬ್ಯಾರೆ ಮುಗದ ಬಿಟ್ಟದೆಯಲ್ಲ, ಅವರೆಲ್ಲಾ ಈಗ ಶತಮಾನ ಸಮೀಕ್ಷೆಯಲ್ಲಿ ತೊಡಗಿ ಬಿಟ್ಟಾರ. (ನಗು)...

ಸಂ: ಬಹುಶಃ ಈಗಿನ ವಿಮರ್ಶೆ ಒಂದು ಕವಿತೆ ಮೇಲೆ ಅಥವಾ ಒಬ್ಬ ಕವಿಯ ಮೇಲೆ ಫೋಕಸ್ ಮಾಡ್ತಾ ಇಲ್ಲ. ಅದು ಹೋಗಿ, ಒಂದು ದೊಡ್ಡ ಕ್ಯಾನ್ವಾಸ್‌ನಲ್ಲಿ ಸಂಸ್ಕೃತಿ ವಿಮರ್ಶೆ ಅಂತಾಗಿ, ಸಾಹಿತ್ಯದ ಮೇಲೇಯೇ ಹೆಚ್ಚು ಗಮನ ಹರಿಸೋದು ಕಡಿಮೆಯಾಗಿದೆ. ಸಂಸ್ಕೃತಿ ಚಿಂತನೆಗೆ ಸಾಹಿತ್ಯವೂ ಒಂದು ಸಣ್ಣ ಅಂಶವಾದಂತಿದೆ.

ಕಣವಿ: ಈಗ ಅಪ್ರಿಸಿಯೇಶನ್ ರಸವಿಮರ್ಶೆ ಅಂತ ಏನು ಕರೀತಿವಿ, ಬರಬರತಾ ಅದಕ್ಕೆ ವ್ಯಾಲ್ಯೂ ಕಡಿಮೆ ಅಂತನ್ನೋ ರೀತಿಯಲ್ಲಿ ಆಗಿದೆ. ಆದರೆ ಈಗದು ಮತ್ತೆ ಬೇಕು ಅಂತ ಅನಿಸ್ತಾ ಇದೆ. ಕಾವ್ಯದ ಅಭಿರುಚಿಯನ್ನ ಓದುಗರಿಗೆ ಹುಟ್ಟಿಸಬೇಕು ಅಂತುಂದರೆ, ಆ ಕಾವ್ಯದ ಬಗ್ಗೆ ರಸವಿಮರ್ಶೆಬೇಕು. ಈ ಸಾಂಸ್ಕೃತಿಕ ವಿಮರ್ಶೆನೂ ಇರ್ಲಿ. ಅದೂ ಬೇಕು. ಆದರೆ ಮೊದಲು ಓದುಗನಲ್ಲಿ ಕವಿತೆಯಲ್ಲಿ ಆಸ್ಥೇನ ತನ್ಮಯತೆ ಯನ್ನ ಹುಟ್ಟಿಸಬೇಕು. ಆಮೇಲೆ ಕೈಹಿಡಿದು ಕರೆದುಕೊಂಡು ಹೋಗಿ, ವಿಶಾಲ ಜಗತ್ತನ್ನು ತೋರಿಸ್ಕೊಡೋವಂಥದ್ದು ಮಾಡಿ. ಆದರೆ ನೀವು ಒಮ್ಮೆಲೇನೇ ತೂರಿ ಆಕಾಶಕ್ಕೆ ಕರಕೊಂಡು ಹೋಗಿಬಿಟ್ಟರೆ ಹೇಗೆ?

ಸಂ: ವಿಮರ್ಶೆ ಸಂಸ್ಕೃತಿ ಚಿಂತನೆಯಾಗಿ ಬದಲಾಗಲಿಕ್ಕೆ, ಲಿಟರೇಚರ್ ಮೇಲೆ ಅಭಿರುಚಿ ಹುಟ್ಟಿಸುವ ಕೆಲಸಕ್ಕಿಂತ ಹೆಚ್ಚಾಗಿ ಲೋಕವನ್ನು ಕುರಿತು ಮಾತಾಡ್ತಾ ಇರೋದಕ್ಕೆ, ಕಾರಣ ಏನಿರಬಹುದು?ಜಾಗತೀಕರಣ ಮುಂತಾದ ಜಗತ್ತಿನ ಬಹಳ ಮುಖ್ಯವಾದ ವಿದ್ಯಮಾನಗಳು ಕ್ರೈಸಿಸ್‌ಗಳು ಹುಟ್ಟೋದಕ್ಕೂ ಸಾಹಿತ್ಯ ವಿಮರ್ಶೆಯ ಈ ರೂಪಾಂತರಕ್ಕೂ ಸಂಬಂಧ ಇರಬಹುದೋ ಏನೋ...

ಕಣವಿ: ಇದಕ್ಕೂ ಮೊದಲೇನೇ ಆಗಿದೆ. ಗ್ಲೋಬಲೈಜೆಶನ್ ಇವುಗಳ ಅಬ್ಬರ ಇನ್ನೂ ಹೆಚ್ಚು ಕೇಳದೇ ಇರುವಾಗಲೇನೇ ನಮ್ಮ ಜೀವನದ ಸಂಸ್ಕೃತಿ ಬಗ್ಗೆ ಚಿಂತನೆ

ಶುರುವಾಗಿತ್ತು. ಈಗ ನೋಡಿ, ಸಂಸ್ಕೃತಿ ಬಗ್ಗೇನೇ ಎಷ್ಟು ವಿವೇಚನೆ ನಡೀತು? ಸಂಸ್ಕೃತಿ ಅಂತಾತು. ಉಪಸಂಸ್ಕೃತಿ ಅಂತಾತು. ಪ್ರತಿಸಂಸ್ಕೃತಿ ಅಂತಾತು. ಬುಡಕಟ್ಟಿನ ಬಗ್ಗೆ ಅಭ್ಯಾಸ ನಡೀತಿರುವಂಥಾದು.... ಹೀಗೆ ಸಂಸ್ಕೃತಿಯ ವ್ಯಾಪ್ತಿ ವಿಸ್ತಾರವಾಗಿ ಬರ್ತಾ ಇದೆ. ನಮ್ಮ ಮೊದಲಿನ ಭಾವನೆ ಏನಿದ್ದವು, ಭಾರತೀಯ ಸಂಸ್ಕೃತಿ ಇದೆಲ್ಲಾ ಒಂದು ಅಂತ, ಅದು ಬದಲಾಗ್ತಾ ಇದೆ. ಇದೆಲ್ಲ ಸಾಹಿತ್ಯ ಕೃತಿಯ ಸಾಂಸ್ಕೃತಿಕ ವಿಶ್ಲೇಷಣೆಗೆ ಹೊಸ ದೃಷ್ಟಿಯನ್ನು ತಂದು ಕೊಡ್ತಾ ಇದೆ. ಆದರೆ ಇದು ಅತೀ ಆಗಿಬಿಡ್ತು ಅಂದರೆ, ಹೊಸದಾಗಿ ಅಭಿರುಚಿ ಹುಟ್ಟಬೇಕಾದಂತಹವರಿಗೆ, ಅದು ಒಮ್ಮೇಲೆ ನಿಲುಕದಾಗಬಹುದು ಅಥವಾ ಗೊಂದಲವನ್ನ ಉಂಟು ಮಾಡಬಹುದು.

ಸಂ: ಗ್ಲೋಬಲೈಜೇಶನ್ ಅಬ್ಬರ ಅಂದಿರಿ. ಈ ಅರ್ಥಿಕ ರಾಜಕಾರಣದ ವಿದ್ಯಮಾನವನ್ನು ಕವಿಯಾಗಿ ನೀವು ಹೆಂಗೆ ಗ್ರಹಿಸಿದೀರಿ?

ಕಣವಿ: ಇದು ಬಲಿಷ್ಠವಾದ ರಾಷ್ಟ್ರಗಳ ದೃಷ್ಟಿಯಿಂದ ರಾಜಕೀಯವಾಗಿ ಬಹಳಾ ಪ್ರಭಾವ ಬೀರತಾ ಇದೆ. ಈಗ ನಮ್ಮನ್ನು ನಾವು ಉಳಸ್ಕೋಬೇಕು ಅಂತಂದರೆ, ಸಾಂಸ್ಕೃತಿಕವಾಗಿ ಗಟ್ಟಿಯಾದ ನಿಲುವನ್ನು ತಳೀಬೇಕಾಗ್ತದೆ. ವಿಶ್ವವೇ ಒಂದು ಹಳ್ಳಿ ಅನ್ನುವಾಗ, ಮೊದಲು ನನಗೆ ನನ್ನ ಹಳ್ಳಿ ನನ್ನದಾಗಬೇಕಲ್ಲ. ನನ್ನ ಜನ, ನನ್ನ ನಾಡು, ನಮ್ಮ ಸಂಸ್ಕೃತಿ ಇದು ನನ್ನದಾಗಬೇಕು. ಗ್ಲೋಬಲೈಜೇಶನ್ ಯಾವುದೋ ಒಂದು ಹದ್ದು ಎರಗಿದಂಗಾಗಬಾರದು. ತಾಯಿ ಮಗುವನ್ನೆತ್ಕೊಂಡು ಪೋಷಣೆ ಮಾಡೋದು ಬೇರೆ. ಹದ್ದು ಬಂದು ಕಚ್ಕೊಂಡು ಹೋಗೋದು ಬ್ಯಾರೆ.

ಸಂ: ಕೆಲವು ವಿಮರ್ಶಕರು ನಿಮ್ಮ ಕಾವ್ಯದ ಬಗ್ಗೆ ತುಂಬಾ ಕ್ರಿಟಿಕಲ್ ಆಗಿ ಬರೆದಿದ್ದಾರೆ. ಹೀಗೆ ನಿಷ್ಠುರವಾದ ಪ್ರತಿಕ್ರಿಯೆ ಬಂದಾಗ ಕವಿಯಾಗಿ ಹೆಂಗೆ ಸ್ವೀಕರಿಸ್ತೀರಿ?

ಕಣವಿ: ಕೆಲವು ಅದರಲ್ಲಿ ಸರಿಯಾದ ಅಂಶಗಳು ಇರಬಹುದು. ಆದರೆ ಕೆಲವು ತಪ್ಪು ಗ್ರಹಿಕೆಗಳಿಂದಾದವು ಅಂತ ಅನಿಸ್ತದೆ. ನಾನು ಅದರ ಬಗ್ಗೆ ಮೌನವಾಗಿ ಬಿಡ್ತೇನೆ. ಅವರು ಬಹುಶಃ ನನ್ನ ಕಾವ್ಯದ ಕೆಲವು ಶಬ್ದಗಳ ಬಗ್ಗೆ, ಅದಕ್ಕೆ ಇರತಕ್ಕಂಥ ಹಿನ್ನೆಲೆ, ಅದು ಕಟ್ಟಿಕೊಡೋವಂಥ ಪ್ರತಿಮೆ, ನಾವು ಯಾವ ರೀತಿಯಿಂದ ಭಾವಿಸಿ ಅಲ್ಲಿನ ಸನ್ನಿವೇಶಕ್ಕೆ ತಂದಿರ್ತೀನಿ, ಅದನ್ನ ವಿಮರ್ಶೆ ತಿಳ್ಕೊಳ್ಳದಿದ್ದರೆ ಏನ್ಮಾಡೋದು. ಈಗ ಮಧುರಚೆನ್ನರ ಬಗ್ಗೆ ಬರೆದ ಪದ್ಯದಲ್ಲಿ ಇದಿದೆ. 'ನಿಮ್ಮ ತನುವು ನಿಸದಿಗೆಗಲ್ಲು, ಮನವು ಮಾಸತಿ ಕಲ್ಲು, ನಿಮ್ಮ ಸಾಧನೆಯೊಂದು ವೀರಗಲ್ಲು'. ಕವಿತೆಗೆ ಅರ್ಥ ಕೊಡೋವಂತಹ ಇದರ ಹಿಂದಿನ ಭಾವಕೋಶ ಏನಿದೆ, ಆ ದೃಷ್ಟಿಯಿಂದ ನೋಡಬೇಕು. 'ಮಾಸತಿಕಲ್ಲು' ಅಂತಕ್ಷಣ ಮಾಸ್ತಿ ಹೋಗೋದಕ್ಕೆ ನಾನು ಫಾರ್ ಅದೀನಿ ಅಂತನ್ನೋ ರೀತಿ ಅಲ್ಲ.

ಸಂ: ಅಂದರೆ ಮಹಾಸತಿ ಅಂದಾಗ ಅದರ ಭಾವಕೋಶದಲ್ಲಿ ಹೆಣ್ಣು ಜೀವಂತವಾಗಿ ಸುಟ್ಟುಹೋದ ದುಸ್ವಪ್ನದ ನೆನಪುಗಳು ಕಳಚಿ ಹೋಗ್ತವೆಯೆ?

ಕಣವಿ: ಇರಬಹುದು. ಆದರೆ ಜನ ನೋಡುವ ರೀತಿ ಅಂದಾಗ, ಅಷ್ಟರಮಟ್ಟಿಗೆ ತೀವ್ರತೆ ಅಂತ. 'ಸಾಧನೆಯೊಂದು ವೀರಗಲ್ಲು' ಅಂದಾಗ ಅದರ ಅಸೋಸಿಯೇಶನ್ ಸರಿಯಾದ ರೀತಿಯಲ್ಲಿ ಅವರು ಭಾವಿಸ್ಕೊಂಡಿಲ್ಲ ಅಂತ. ಮತ್ತೆ ಅದನ್ನೆ ಮುಖ್ಯ ಮಾಡ್ಕೊಂಡು ಇಡೀ ನನ್ನ ಕಾವ್ಯದ ಬಗ್ಗೆ ಒಂದು ಶರಾ ಬರೀವಂಥಾದ್ದು ಇದೆ ಯಲ್ಲ, ಅದು ತಪ್ಪಾಗಬಹುದು. ಅಂಥವು ಬಂದಾಗ ನನ್ನಷ್ಟಕ್ಕೆ ನಾನು ಮೌನವಾಗಿ ಬಿಡ್ತೇನೆ.

ಸಂ: ಸಾರ್, ನೀವು ಅನುವಾದ ಮಾಡಿದೀರಿ. ಸಾತ್ವಿಕ ಸ್ವಭಾವದವರಾದ ನೀವು ಅನುವಾದದಲ್ಲಿ ಮಾತ್ರ ಪೊಲಿಟಿಕಲ್ಲಾಗಿ ರ್‍ಯಾಡಿಕಲ್ ಕವಿಗಳನ್ನ ಆರಿಸಿಕೊಂಡಿದೀರಿ.

ಕಣವಿ: ದೇಶದ ದೃಷ್ಟಿಯಿಂದ ಈಗ ಆ ಕವಿಗಳನ್ನು ಓದೋದು ಅಗತ್ಯವಿದೆ. ಬಹುಶಃ ಕನ್ನಡದ ಕವಿಯಾಗಿ ಯಾವುದನ್ನ ನನಗ ಮಾಡೋದಿಕ್ಕೆ ಸಾಧ್ಯವಾಗಲಿಲ್ಲ, ಯಾವ ವಿಚಾರವನ್ನ ತರಲಿಕ್ಕೆ ಸಾಧ್ಯವಾಗಲಿಲ್ಲ, ಈ ಮೂಲಕವಾಗಿಯಾದರೂ ತಂದಿರ ಬಹುದು. ತಮಿಳಿನಿಂದ, ತೆಲುಗಿನಿಂದ ಹೆಚ್ಚು ಪೊಲಿಟಿಕಲ್ ಇರೋವಂಥಾ ಪದ್ಯಗಳನ್ನು ಅನುವಾದ ಮಾಡಿದೀನಿ. ಯಾವುದು ನಮ್ಮಲ್ಲಿ ಕೊರತೆ ಇದೆ ಅದನ್ನು ತುಂಬಿಕೊಳ್ಳಬೇಕಾಗಿದೆ. ಇಲ್ಲಿ ಇಚ್ಛಿಸಿದ್ದು ಅಲ್ಲಿ ಅಭಿವ್ಯಕ್ತಿ ಪಡೀತದೆ. ಅದು ನಮ್ಮದೇ. ನಮ್ಮದನ್ನು ಮಾಡ್ಕೊಳ್ಳಬಹುದು. ಬಹುಶಃ ಸುಪ್ತ ಮನಸ್ಸಿನಲ್ಲಿ ಇದು ಇದ್ರೂ ಇರಬೇಕು. ಸ್ಪಷ್ಟವಾಗಿ ಹೇಳಲಾರೆ ಅದನ್ನ.

(ಬರಹರೂಪ : ಪಾರ್ವತಮ್ಮ)

ಪ್ರತಿಕ್ರಿಯೆ

ಮಾನ್ಯ ಸಂಪಾದಕರಿಗೆ,

‘ಕನ್ನಡ ಅಧ್ಯಯನ’ ಮಳೆಸಂಚಿಕೆ ಅಮೂಲ್ಯ ಚಿಂತನಶೀಲ ಲೇಖನಗಳಿಂದ ಸಮೃದ್ಧವಾಗಿದೆ. ‘ಕನ್ನಡ ಅಧ್ಯಯನ’ ಪತ್ರಿಕೆಯಲ್ಲಿ ‘ಇಂಗ್ಲಿಷಿನಿಂದ ಕನ್ನಡಕ್ಕೆ ಬಂದ ಕಥಾ ಮತ್ತು ಸಂಕೀರ್ಣ ಸಾಹಿತ್ಯ’ ವಿಭಾಗ ಪ್ರಕಟಿಸುತ್ತಿರುವುದು ಸ್ತುತ್ಯರ್ಹ ಉಪಯುಕ್ತ ಕಾರ್ಯ. ‘ರುಡ್‌ಯಾರ್ಡ್ ಕಿಪ್ಲಿಂಗ್‌ನ(?) ‘ಚಿನ್ನದ ನದಿಯ ದೊರೆ’- ಈ ಕೃತಿಗಳ ಆಂಗ್ಲ ಲೇಖಕರ ಹೆಸರು ಮರೆತು ಹೋಗಿದೆ. ಪುಸ್ತಕಗಳು ಪ್ರಕಟವಾಗಿರುವುದಂತೂ ನಿಜ. ಒಂದು ವೇಳೆ ಅವುಗಳ ಲೇಖಕರ ಬಗ್ಗೆ ತಮಗೆ ಮಾಹಿತಿ ಇದ್ದರೆ ಪ್ರಕಟಿಸಿ.

ನಾನು ಈವರೆಗೆ ಇಂಗ್ಲಿಷಿನಿಂದ ಕನ್ನಡಕ್ಕೆ ೧೨ ಕೃತಿಗಳನ್ನು ಭಾಷಾಂತರಿಸಿ ಪ್ರಕಟಿಸಿದ್ದೇನೆ. ಇವುಗಳಲ್ಲಿ ೧೧ ಕಾದಂಬರಿಗಳು. 'ಗುಗ್ಲಿಯಲ್ಮೊ ಮಾರ್ಕೊನಿ' ಮಾತ್ರ ಜೀವನ ಚರಿತ್ರೆ. (ಸಂಕೀರ್ಣ) ಈ ೧೨ರ ಪಟ್ಟಿಯನ್ನು ಈ ಪತ್ರದೊಂದಿಗೆ ಕಳಿಸಿರುತ್ತೇನೆ. ಇವುಗಳಲ್ಲಿ 'ಗುಗ್ಲಿಯಲ್ಮೊ ಮಾರ್ಕೊನಿ', ‘ಅರೇಬಿಯನ್ ನೈಟ್ಸ್ ಕಥೆಗಳು’,

ಇಂಗ್ಲಿಷಿನಿಂದ ಕನ್ನಡಕ್ಕೆ ಬಂದ ಕಾದಂಬರಿ ಸಾಹಿತ್ಯ

೧. ಒಂದು ಕಪ್ಪು ಕುದುರೆಯ ಆತ್ಮಕಥೆ (ಅನ್ನಾಸ್ಯೂಯೆಲ್-ಬ್ಲ್ಯಾಕ್ ಬ್ಯೂಟಿ) ಆರ್. ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮.

೨. ಅಪಹೃತ ಬಾಲಕನ ಸಾಹಸಗಳು (ರಾಬರ್ಟ್‌ಲೂಯಿ ಸ್ಟೀವನ್‌ಸನ್-ದಿ ಕಿಡ್ನಾಪ್ಡ್) ಆರ್.ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮.

೩. ರಾಬಿನ್‌ಹುಡ್ ಸಾಹಸಗಳು (ಹೊವಾರ್ಡ್ ಪೈಲ್-ಮೆರ್ರಿ ಅಡ್ವೆಂಚರ್ಸ್ ಆಫ್ ರಾಬಿನ್‌ಹುಡ್) ಆರ್.ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮.

೪. ಯುವರಾಜ ಮತ್ತು ಭಿಕ್ಷುಕ (ಮಾರ್ಕ್‌ಟ್ವೈನ್-ಪ್ರಿನ್ಸ್ ಅಂಡ್ ದಿ ಪಾಪರ್) ಆರ್. ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮.

೫. **ಬೆನ್‌ಹರ್** (ಲೂಯಿ ವ್ಯಾಲೆಸ್-ಬೆನ್‌ಹರ್) ಆರ್.ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮ .

೬. **ರಾಬಿನ್ ಕ್ರೂಸೋನ ಸಾಹಸಗಳು** (ಡೇನಿಯಲ್ ಡೀಫೊ-ರಾಬಿನ್‌ಸನ್ ಕ್ರೂಸೊ) ಆರ್. ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನ ಹಳ್ಳಿ, ೧೯೯೮.

೭. **ಮೂವರು ಬಂಧೂಕುಧಾರಿಗಳು** (ಅಲೆಗ್ಸಾಂಡರ್ ಡೂಮಾ-ದಿ ತ್ರೀ ಮಸ್ಕೆಟಿಯರ್ಸ್) ಆರ್.ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮.

೮. **ಗುಗ್ಲಿಯಲ್ಮೊ ಮಾರ್ಕೋನಿ** (ಜೀವನ ಚರಿತ್ರೆ) ಆರ್.ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೯.

೯. **ಅರೇಬಿಯನ್ ನೈಟ್ಸ್ ಕಥೆಗಳು**-ಆರ್. ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ-೧೯೯೮.

೧೦. **ಡೇವಿಡ್ ಕಾಪರ್ ಫೀಲ್ಡ್** (ಚಾರ್ಲ್ಸ್ ಡಿಕನ್ಸ್-ಡೇವಿಡ್ ಕಾಪರ್ ಫೀಲ್ಡ್) ಆರ್. ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮.

೧೧. **ಹಕ್ಲ್‌ಬರಿಫಿನ್ನನ ಸಾಹಸಗಳು** (ಮಾರ್ಕ್‌ಟ್ವೈನ್-ಹಕ್ಲ್‌ಬರಿಫಿನ್) ಆರ್. ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮ .

೧೨ **.ಚಿನ್ನದ ನದಿಯ ದೊರೆ** (ದಿ ಕಿಂಗ್ ಆಫ್ ದಿ ಗೋಲ್ಡನ್ ರಿವರ್) ಆರ್. ಬಸವರಾಜ್, ಶೃಂಗಾರ ಪ್ರಕಾಶನ, ಚಿಕ್ಕನಾಯಕನಹಳ್ಳಿ, ೧೯೯೮.

•ಆರ್. ಬಸವರಾಜ್

ಪ್ರಿಯರೇ,

'ಕನ್ನಡ ಅಧ್ಯಯನ' ಮಳೆಸಂಚಿಕೆ ಓದಿದೆ. ಜಾಗತೀಕರಣ, ಅದರ ಪರಿಣಾಮ ಮತ್ತು ಆ ಕುರಿತ ವಿವಿಧ ನಿಲುವುಗಳನ್ನು ಸಾಮಾನ್ಯನಿಗೂ ಸುಲಭವಾಗಿ ಅರ್ಥವಾಗುವಂತೆ ತೆರೆದಿಟ್ಟಿದ್ದೀರಿ. 'ಹೊಸ ತಲೆಮಾರಿನ ಲೇಖಕರ ಹಂಬಗಳು' ಸಂವಾದದಲ್ಲಿ ಇಪ್ಪತ್ತೈದು ಯುವ ಬರಹಗಾರರ ಬರಹಗಳು ಇದ್ದರೂ, ಅವು ಕರ್ನಾಟಕದ ಎಲ್ಲ ಯುವ ಬರಹಗಾರರ ಅನಿಸಿಕೆಯನ್ನು ಪ್ರತಿನಿಧಿಸಿರುವಂತಿದೆ. ಅಂತಹ ಒಂದು ಚರ್ಚೆಗೆ ವೇದಿಕೆ ನೀಡಿದುದು ಸ್ವಾಗತಾರ್ಹ. 'ಕನ್ನಡ ಅಧ್ಯಯನ'ವೆಂಬ ಪತ್ರಿಕೆಯೊಂದು ಪ್ರಕಟವಾಗುತ್ತಿರುವುದು ನನಗೆ ಈ ಮೊದಲು ತಿಳಿದೂ ಇರಲಿಲ್ಲವಾಗಿ, ಪತ್ರಿಕೆಯ ಚರ್ಚೆ, ಲೇಖನಗಳು, ಬರೆಯಲು ಅಷ್ಟೇ ಪ್ರಯತ್ನಿಸುತ್ತಿರುವ ನನ್ನಂತಹವರಿಗೆ ಮಾರ್ಗದರ್ಶನ ನೀಡುತ್ತದೆ.

ಸಾಹಿತ್ಯದ ಬಗ್ಗೆ ಮಾತನಾಡುವಷ್ಟು ದೊಡ್ಡ ವ್ಯಕ್ತಿ ನಾನಲ್ಲವಾದರೂ, ಬರಹಗಾರ ಕೇವಲ ಚರ್ಚೆ, ಗೋಷ್ಠಿ ಭಾಷಣಗಳ ನಡುವೆ ಕರಗಿ ಹೋಗದೆ ವಾಸ್ತವ ಬದುಕಿನಲ್ಲಿ ನಿಂತು ಚಿಂತಿಸಿದರೆ ಹೆಚ್ಚು ಪರಿಣಾಮಕಾರಿಯಾಗಿ ಬರೆಯಲು ಸಾಧ್ಯವಾಗಬಹುದೆಂದು ಅನಿಸುತ್ತದೆ.

•ಗಣೇಶ್ ಹೊಸ್ಮನೆ

●

ಈ ಸಂಚಿಕೆ ಲೇಖಕರು

೧. ಡಾ.ಬಿ.ಎಸ್. ತಲ್ವಾಡಿ, ಬಿ-೬೧, ೧ನೇ ಮೇನ್, ೭ನೇ ಕ್ರಾಸ್, ಗಂಗೊಂಡನಹಳ್ಳಿ, ಬೆಂಗಳೂರು-೫೬೦೦೦೩೯

೨. ವಿಜಯಕುಮಾರ್ ಎಂ. ಬೋರಟ್ಟಿ, Centre for Comparative Studies, University of Hyderabad, HYDERABAD-500046

೩. ಡಾ. ಉಷಾ, ಅಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಡಾ. ಮೋಹನ್ ಕುಂಟಾರ್, ರೀಡರ್ ಭಾಷಾಂತರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಶ್ರೀ ಎಸ್.ಡಿ. ಹೆಗ್ಗಡೆ, ಕನ್ನಡ ಪ್ರಾಧ್ಯಾಪಕರು, ಫಾರೆಸ್ಟ್‌ಕಾಲನಿ, ಪ್ರಭಾತ ನಗರ, ಹೊನ್ನಾವರ. (ಉ.ಕ)

೬. ಚಂದ್ರಕಾಂತ ಪೋಕಳೆ, ಪದವಿಪೂರ್ವ ಕಾಲೇಜು, ಬೇಡಕಿಹಾಳ-೫೯೧೨೧೪

೭. ಅರವಿಂದ ಚೊಕ್ಕಾಡಿ, 'ಕಮಲದೀಪ' ತೆಳ್ಳಾರು ಕ್ರಾಸ್ ರಸ್ತೆ, ಕಾರ್ಕಳ-೫೭೪೧೦೪

೮. ಆನಂದನಾಥ್, "ಅನುಗ್ರಹ" ೪/೩೯೮, ಕದ್ರಿಕಂಬಳ ರಸ್ತೆ, ಮಂಗಳೂರು-೫೭೫೦೦೪

೯. ಡಾ. ರಾಜೇಂದ್ರಚೆನ್ನಿ, ಇಂಗ್ಲಿಷ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ-೫೭೭೪೫೧

೧೦. ಗಂಗಾಧರ ಬೀಚನಹಳ್ಳಿ, ಸೂಪರ್‌ವೈಜರ್ (ಎಚ್.ಎಂ.ಟಿ), 'ಪ್ರಿಯದರ್ಶಿನಿ' ೮ನೇ ಮುಖ್ಯರಸ್ತೆ, ಗೋಕುಲ ಬಡಾವಣೆ, ತುಮಕೂರು

೧೧. ಸುರೇಶ್ ಕಂಜರ್ಪಣೆ ಕಂಜರ್ಪಣೆ, ಮನೆ, ಕುಕ್ಕುಜಡ್ಕ-೫೭೪೨೩೯ (ದ.ಕ)

೧೨. ಎಸ್.ಬಿ. ಜೋಗುರ, ಸಮಾಜಶಾಸ್ತ್ರ ಅಧ್ಯಾಪಕ, ಪಿ ಎಂ ಪದವಿ ಪೂರ್ವ ಕಾಲೇಜು, ಅಂಕೋಲಾ (ಉ.ಕ.)

೧೩. ಸಿ. ಸೋಮಶೇಖರಯ್ಯ, ವ್ಯಾಪಾರಿಗಳು, ಸೊಸಾಯಿಟಿ ಹಿಂಭಾಗ, ಚಿತ್ರದುರ್ಗ-೫೭೭೫೦೧

೧೪. ವನಮಾಲಾ ಕಟ್ಟೇಗೌಡರ, ಮಾತೃಕುಟೀರ, ಪುತ್ತೂರು ಆಸ್ಪತ್ರೆಬಳಿ, ಗಾಂಧಿ ಕಾಲೋನಿ, ಹೊಸಪೇಟೆ - ೫೮೩೨೦೧

೧೫. ವಿ. ರಮೇಶ ಕಾರಂತ, ಉಳವಿ, ಸೊರಬ - ೫೭೭೪೩೪ (ಶಿವಮೊಗ್ಗ ಜಿಲ್ಲೆ)

೧೬. ಗಿರೀಶ್ ವಿ. ವಾಘ್, ೯೨೩, ೭ನೇ ಕ್ರಾಸ್, ಕೆಂಗೇರಿ, ಉಪನಗರ, ಬೆಂಗಳೂರು-೫೬೦೦೬೦

೧೭. ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ- ೫೮೩೨೧೨ (ಹಗರಿಬೊಮ್ಮನಹಳ್ಳಿ)

೧೮. ಅನಂತಕೃಷ್ಣ ಪಿ. ಅಭಿವೃದ್ಧಿ ಅಧಿಕಾರಿ, ಭಾರತೀಯ ಜೀವವಿಮಾ ನಿಗಮ, ಚಿತ್ರದುರ್ಗ

೧೯. ಡಾ. ಮಿರ್ಜಾಬಷೀರ್, ಸಹಾಯಕ ನಿರ್ದೇಶಕರು, ಜಿಲ್ಲಾ ಪಶು ಆಸ್ಪತ್ರೆ ಆವರಣ, ಚಿತ್ರದುರ್ಗ-೫೭೭೫೦೧

೨೦. ಸಿ.ಬಿ. ಶೈಲಾ ಜಯಕುಮಾರ್, 'ಅಪರ್ಣ' ಮುನಿಸಿಪಲ್ ಕಾಲೋನಿ, ಕೆಳಗೋಟೆ, ಚಿತ್ರದುರ್ಗ-೫೭೭೫೦೧

೨೧. ಬಿ.ಕೆ. ಪಾಂಡುರಂಗ, ವಾಹನಚಾಲಕರು, ರಾಜ್ಯ ಯುವಕ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೨

೨೨. ಹೇಮಾರೆಡ್ಡಿ, ನಂ.೪೪೯, ಹಳೆಯ ಹಂಚಿನ ಕಾರ್ಖಾನೆ ಆವರಣ, ರೈಲು ನಿಲ್ದಾಣ ರಸ್ತೆ, ಕೋಲಾರ-೫೬೩೧೦೧

೨೩. ಟಿ. ಬಸವರಾಜ್ ತೂಲಹಳ್ಳಿ, ಇಂಗ್ಲಿಷ್ ಅಧ್ಯಾಪಕರು, ಸರಕಾರಿ ಪದವಿ ಪೂರ್ವ ಕಾಲೇಜು, ಯಲಬುರ್ಗಾ

೨೪. ಜಿ.ಎನ್. ಅಶೋಕವರ್ಧನ , ಅತ್ರಿ ಬುಕ್ ಸೆಂಟರ್,ನಂ.೪, ಬಲ್ಮಠ, ಮಂಗಳೂರು-೫೭೫೧೦೧

೨೫. ಪೃಥ್ವಿರಾಜ ಕವತ್ತಾರು, ಕವತ್ತಾರು (ವಯಾಮೂಲ್ಕಿ)-೫೭೪೧೫೪ (ದಕ)

೨೬. ಯಂ. ಉಮಾಮಹೇಶ್ವರ, ನಿರ್ವಾಹಕರು (ಕ ರ ಸಾ ಸಂಸ್ಥೆ) ನಂ. ೨೨/೬೬೩, ಆಜಾದ್ ನಗರ, ಹೊಸಪೇಟೆ-೫೮೩೨೦೧

೨೭. ಡಾ. ಚಿನ್ನಸ್ವಾಮಿ ಸೋಸಲೆ, ಅಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ಶ್ರೀ ಚೆನ್ನವೀರಕಣವಿ, 'ಚೆಂಬೆಳಕು' ೯ನೇ ಕ್ರಾಸ್, ಕಲ್ಯಾಣನಗರ, ಧಾರವಾಡ-೫೮೦೦೦೭

೨೯. ಆರ್. ಬಸವರಾಜ್, ಶಿವ ಟ್ರೇಡರ್ಸ್, ಚಿಕ್ಕನಾಯಕನಹಳ್ಳಿ-೫೭೨೨೧೪

೩೦. ಗಣೇಶ್ ಹೊಸ್ಮನೆ, ಜಾನ್ಮನೆ-೫೮೧೩೧೫ (ಶಿರಸಿ)

❑

ಕನ್ನಡ ವಿಶ್ವವಿದ್ಯಾಲಯದ ನಿಯತಕಾಲಿಕೆಗಳು

೧. **ಕನ್ನಡ ಅಧ್ಯಯನ (ತ್ರೈಮಾಸಿಕ)**
ಬಿಡಿ ಪ್ರತಿ ೨೫.೦೦
ವಾರ್ಷಿಕ ಚಂದಾ ೧೦೦.೦೦
ಐದು ವರ್ಷದ ಚಂದಾ ೪೦೦.೦೦

೨. **ಮಹಿಳಾ ಅಧ್ಯಯನ (ಅರ್ಧವಾರ್ಷಿಕ)**
ಬಿಡಿ ಪ್ರತಿ ೨೫.೦೦
ವಾರ್ಷಿಕ ಚಂದಾ ೫೦.೦೦
ಐದು ವರ್ಷದ ಚಂದಾ ೨೦೦.೦೦

೩. **ವಿಜ್ಞಾನ ಸಂಗಾತಿ**
ಬಿಡಿ ಪ್ರತಿ ೧೦.೦೦
ವಾರ್ಷಿಕ ಚಂದಾ ೧೨೦.೦೦
ಶಾಲಾ, ಕಾಲೇಜು, ಸಂಘ ಸಂಸ್ಥೆಗಳಿಗೆ ವಾರ್ಷಿಕ ಚಂದಾ ೨೦೦.೦೦

೪. **ಜಾನಪದ ಕರ್ನಾಟಕ (ಅರ್ಧವಾರ್ಷಿಕ)**
ಬಿಡಿ ಪ್ರತಿ ೨೫.೦೦
ವಾರ್ಷಿಕ ಚಂದಾ ೫೦.೦೦
ಐದು ವರ್ಷದ ಚಂದಾ ೨೦೦.೦೦

೫. **ಅಭಿವೃದ್ಧಿ ಅಧ್ಯಯನ (ಅರ್ಧವಾರ್ಷಿಕ)**
ಬಿಡಿ ಪ್ರತಿ ೩೦.೦೦
ವಾರ್ಷಿಕ ಚಂದಾ ೬೦.೦೦
ಐದು ವರ್ಷದ ಚಂದಾ ೨೫೦.೦೦

೬. **ದ್ರಾವಿಡ ಅಧ್ಯಯನ (ಅರ್ಧವಾರ್ಷಿಕ)**
ಬಿಡಿ ಪ್ರತಿ ೩೦.೦೦
ವಾರ್ಷಿಕ ಚಂದಾ ೬೦.೦೦
ಐದು ವರ್ಷದ ಚಂದಾ ೨೫೦.೦೦

೭. **ಪುಸ್ತಕ ಮಾಹಿತಿ (ಮಾಸಿಕ)**
ವಾರ್ಷಿಕ ಚಂದಾ ೫೦.೦೦
ಐದು ವರ್ಷದ ಚಂದಾ ೨೦೦.೦೦

೮. **ಚೆಲುವ ಕನ್ನಡ (ದ್ವೈಮಾಸಿಕ)**
ವಾರ್ಷಿಕ ಚಂದಾ ೧೦.೦೦

ಕನ್ನಡ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯವು, ತಾನೊಂದು ಸಂಶೋಧನೆ ಸಂಸ್ಥೆಯಾಗಿ ಪ್ರಕಟಿಸುತ್ತಿರುವ ಹಲವು ನಿಯತಕಾಲಿಕೆಗಳಲ್ಲಿ, 'ಕನ್ನಡ ಅಧ್ಯಯನ'ವೂ ಒಂದು. ಇದು ಕರ್ನಾಟಕ ಅಧ್ಯಯನಗಳಿಗೆ ಮೀಸಲಾದ ವಿದ್ವತ್ ಪತ್ರಿಕೆ. ಕರ್ನಾಟಕದ ಜನ, ಸಮಾಜ, ಭಾಷೆ, ಸಾಹಿತ್ಯ, ಚರಿತ್ರೆ, ಧರ್ಮ, ರಾಜಕಾರಣ, ಪರಿಸರ, ಕಲೆ-ಮುಂತಾದ ಕ್ಷೇತ್ರಗಳಲ್ಲಿ ನಡೆಯುವ ಚರ್ಚೆ-ಶೋಧಗಳು ಇಲ್ಲಿ ಪ್ರಕಟವಾಗುತ್ತವೆ. 'ಕನ್ನಡ ಅಧ್ಯಯನ'ವು ಏಕಕಾಲಕ್ಕೆ ನಾಡಿನ ಗತದ ತಡಕಾಟವನ್ನು, ವರ್ತಮಾನದ ಮುಖಾಮುಖಿಯನ್ನು ಹಾಗೂ ಭವಿಷ್ಯದ ಕನಸು ಕಟ್ಟುವಿಕೆಯನ್ನು ಮಾಡ ಬಯಸುತ್ತದೆ. ವಿದ್ವಾಂಸರಿಗೆ ಸಾಂಸ್ಕೃತಿಕ ವೇದಿಕೆಯಂತೆಯೂ, ಓದುಗರಿಗೆ ಬೌದ್ಧಿಕ ಸಂಗಾತಿಯಂತೆಯೂ ಕೆಲಸ ಮಾಡಬೇಕೆಂಬುದು ಇದರ ಹಂಬಲ.

'ಕನ್ನಡ ಅಧ್ಯಯನ'ವು ಸೊಲ್ಲು, ಲೇಖನ, ಹಿಂದಣ ಹೆಜ್ಜೆ, ಕನ್ನಡಿ, ಎಲೆಮರೆ, ಮುಖಾಮುಖಿ, ಹೊಳಹು, ಪುಸ್ತಕ ಪರಿಚಯ, ಸಂವಾದ, ಆಕರಸೂಚಿ-ಮುಂತಾದ ವಿಭಾಗಗಳಲ್ಲಿ ಬರಹಗಳನ್ನು ಒಳಗೊಂಡಿರುತ್ತದೆ. ಪ್ರತಿ ಸಂಪುಟದಲ್ಲಿ ಮಳೆ, ಚಳಿ, ಗಾಳಿ, ಬಿಸಿಲು ಎಂಬ ಹೆಸರಿನ ನಾಲ್ಕು ಸಂಚಿಕೆಗಳು ಇರುತ್ತವೆ.

Reg.No. 05999/23/AL/93/TL